ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯದಲ್ಲಿ ಸಂಘರ್ಷಗಳ ವಿನ್ಯಾಸ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧಕರು
ಸೌಮ್ಯ ಎ.ಆರ್.

ಸಂಶೋಧನಾ ಮಾರ್ಗದರ್ಶಕರು
ಡಾ. ಕರೀಗೌಡ ಬೀಚನಹಳ್ಳಿ
ಕನ್ನಡ ಪ್ರಾಧ್ಯಾಪಕರು (ವಿಶ್ರಾಂತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಕುಪ್ಪಳಿ, ವಿಸ್ತರಣಾ ಕೇಂದ್ರ
(ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ)
ಹಿರೇಕೊಡಿಗೆ ಅಂಚೆ - ೫೭೭ ೧೨೬
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯದಲ್ಲಿ ಸಂಘರ್ಷಗಳ ವಿನ್ಯಾಸ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧಕರು
ಸೌಮ್ಯ ಎ.ಆರ್.
ನೋ.ಸಂ. ೧೧೧೬/೨೪-೦೯-೨೦೧೨

ಸಂಶೋಧನಾ ಮಾರ್ಗದರ್ಶಕರು
ಡಾ. ಕರೀಗೌಡ ಬೀಚನಹಳ್ಳಿ
ಕನ್ನಡ ಪ್ರಾಧ್ಯಾಪಕರು (ವಿಶ್ರಾಂತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ವಿಸ್ತರಣಾ ಕೇಂದ್ರ
(ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ)
ಹಿರೇಕೊಡಿಗೆ ಅಂಚೆ - ೫೭೭ ೧೨೬
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ಸೌಮ್ಯ ಎ.ಆರ್. ಅವರು **'ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯದಲ್ಲಿ ಸಂಘರ್ಷಗಳ ವಿನ್ಯಾಸ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ವಿಸ್ತರಣಾ ಕೇಂದ್ರವಾದ ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ – ಇಲ್ಲಿಗೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಾಗಿ ಇವರು ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ. ಕರೀಗೌಡ ಬೀಚನಹಳ್ಳಿ)
ಕನ್ನಡ ಪ್ರಾಧ್ಯಾಪಕರು (ವಿಶ್ರಾಂತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ಬೆಂಗಳೂರು
ದಿನಾಂಕ : 17. 2.19

ಸಂಶೋಧಕರ ಪ್ರಮಾಣ ಪತ್ರ

'ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯದಲ್ಲಿ ಸಂಘರ್ಷಗಳ ವಿನ್ಯಾಸ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಕರೀಗೌಡ ಬೀಚನಹಳ್ಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ವಿಸ್ತರಣಾ ಕೇಂದ್ರವಾದ ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ – ಇಲ್ಲಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಸೌಮ್ಯ ಎ.ಆರ್.)
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
(ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಸ್ಥಳ : ಕುಪ್ಪಳಿ
ದಿನಾಂಕ : 17.2.19

ಕೃತಜ್ಞತೆಗಳು

'ಶಾಂತಿನಾಥ ದೇಸಾಯಿ ಅವರ ಕಥನ ಸಾಹಿತ್ಯದಲ್ಲಿ ಸಂಘರ್ಷಗಳ ವಿನ್ಯಾಸ' ಎಂಬ ವಿಷಯದ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ನನಗೆ ತುಂಬಾ ಸಂತೋಷವೆನಿಸುತ್ತಿದೆ. ನನ್ನ ಈ ಅಧ್ಯಯನಕ್ಕೆ ನೆರವಾದ ವಿದ್ವಾಂಸರನ್ನು, ಹಿತೈಷಿಗಳನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದೇನೆ.

ನನ್ನ ಈ ಸಂಶೋಧನೆಗೆ ಸೂಕ್ತ ವಿಷಯವನ್ನು ಸೂಚಿಸಿ ಇದರ ವಿಷಯದಲ್ಲಿ ಸೂಕ್ತ ಸಲಹೆ ನೀಡಿ ಚರ್ಚಿಸಿ ನನ್ನ ಬರವಣಿಗೆಯ ಓರೆಕೋರೆಗಳನ್ನು ತಾಳ್ಮೆಯಿಂದ ತಿದ್ದಿ ಮಾರ್ಗದರ್ಶನ ಮಾಡಿದ ನನ್ನ ಮಾರ್ಗದರ್ಶಕರೂ, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರೂ, ಕನ್ನಡದ ಖ್ಯಾತ ಕಥೆಗಾರರೂ ಆದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ನನ್ನ ಈ ಅಧ್ಯಯನಕ್ಕೆ ಪ್ರೋತ್ಸಾಹ ಹಾಗೂ ಶೈಕ್ಷಣಿಕ ನೆರವನ್ನು ನೀಡಿದ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಹಿ.ಚಿ. ಬೋರಲಿಂಗಯ್ಯ, ಡಾ. ಎ. ಸುಬ್ಬಣ್ಣ ರೈ., ಡಾ. ಬಿ.ಎಂ. ಪುಟ್ಟಯ್ಯ, ಡಾ. ರಹಮತ್ ತರೀಕೆರೆ, ಡಾ. ವೆಂಕಟಗಿರಿ ದಳವಾಯಿ, ಡಾ. ಅಮರೇಶ ನುಗಡೋಣಿ, ಡಾ. ಮೋಹನಕುಂಟಾರ್, ಡಾ. ಸ.ಚಿ. ರಮೇಶ್, ಡಾ. ಪಾಂಡುರಂಗಬಾಬು, ಡಾ. ಅಶೋಕ ರಂಜೇರೆ, ಡಾ. ಕೆ. ರವೀಂದ್ರನಾಥ್, ಡಾ. ಶಿವಾನಂದ ಎಸ್. ವಿರಕ್ತಮಠ, ಡಾ. ಕೆ.ಸಿ. ಶಿವಾರೆಡ್ಡಿ, ಡಾ. ಎಸ್.ವೈ. ಸೋಮಶೇಖರ್ ಹಾಗೂ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕಾಳೇಗೌಡ ನಾಗವಾರ, ಹಾಲಿ ಪ್ರಾಧ್ಯಾಪಕರಾದ ಡಾ. ಎಂ.ಜಿ. ಮಂಜುನಾಥ್ ಇವರಿಗೆಲ್ಲಾ ನನ್ನ ಕೃತಜ್ಞತೆಗಳು.

ನನ್ನ ಈ ಅಧ್ಯಯನಕ್ಕೆ ಅನುಮತಿಯನ್ನು ನೀಡುವ ಮೂಲಕ ನನಗೆ ಪ್ರೋತ್ಸಾಹ, ಸಹಕಾರ ನೀಡಿದ ನಮ್ಮ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಹೆಚ್.ಯು. ತಳವಾರರವರಿಗೆ, ನಮ್ಮ ಶಾಲೆಯ ಪ್ರಾಂಶುಪಾಲರಾದ ಶ್ರೀ ಕೆ.ಹೆಚ್. ಗೋವಿಂದರಾಜು ಅವರಿಗೆ ಹಾಗೂ ತಮ್ಮ ಬೆಂಬಲವನ್ನು ತೋರಿದ ನನ್ನ ಎಲ್ಲಾ ಸಹೋದ್ಯೋಗಿಗಳಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ.

ಈ ನನ್ನ ಅಧ್ಯಯನಕ್ಕೆ ಪ್ರೀತಿಯಿಂದ ಸಹಕಾರ ನೀಡಿದ ಡಾ. ಎಸ್. ಮೋಹನ್, ಡಾ. ಷಣ್ಮುಖಾನಂದ, ಡಾ. ಲಕ್ಷ್ಮೀಕಾಂತ್ ಎಸ್.ಬಿ., ಶ್ರೀ ಮಹಾಲಿಂಗಯ್ಯ ನಾಗವಾರ, ಎನ್. ಕುಮಾರಿ, ಕೆ.ಆರ್. ಮಲ್ಲಿಕಾ, ಜಿ.ವಿ. ಧನಂಜಯ ಇವರಿಗೆ ನನ್ನ ಕೃತಜ್ಞತೆಗಳು.

ನನ್ನ ಈ ಸಂಶೋಧನೆಯ ಹಾದಿಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾದ ಮನಸ್ಸುಗಳು ಅನೇಕ ; ಸದಾಕಾಲ ನನ್ನೊಂದಿಗಿದ್ದು ನನಗೆ ಸ್ಫೂರ್ತಿಯನ್ನೂ, ಮಾನಸಿಕ ಸ್ಥೈರ್ಯವನ್ನೂ ತುಂಬಿ ಎಲ್ಲಾ ರೀತಿಯಿಂದಲೂ ಸಹಕರಿಸಿದ ನನ್ನ ಕುಟುಂಬವರ್ಗಕ್ಕೂ, ಬಂಧುಬಳಗದವರಿಗೂ, ಹಿತೈಷಿಗಳಿಗೂ ಹಾಗೂ ಆತ್ಮೀಯ ಸ್ನೇಹಿತರಿಗೂ ನನ್ನ ಕೃತಜ್ಞತೆಗಳು.

– ಸೌಮ್ಯ ಎ.ಆರ್.

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಉದ್ದೇಶ

೧.೨. ವ್ಯಾಪ್ತಿ

೧.೩. ಅಧ್ಯಯನದ ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಇಪ್ಪತ್ತನೆಯ ಶತಮಾನದ ಐವತ್ತು ಮತ್ತು ಅರವತ್ತರ ಎರಡು ದಶಕಗಳು ಕನ್ನಡ ಸಾಹಿತ್ಯದಲ್ಲಿ ನವ್ಯ ಸಾಹಿತ್ಯದ ಉಚ್ಛ್ರಾಯ ಕಾಲ. ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟ ನವೋದಯ, ಪ್ರಗತಿಶೀಲ ಸಾಹಿತ್ಯದ ಸೃಷ್ಟಿಯ ಕಾಲದ ಪ್ರಾರಂಭ. ಈ ಸ್ವಾತಂತ್ರ್ಯೋತ್ತರ ಕಾಲಘಟ್ಟದ ಐವತ್ತು ಮತ್ತು ಅರವತ್ತರ ದಶಕಗಳ ಕಾಲಾವಧಿಯಲ್ಲಿ ಸೃಷ್ಟಿಯಾದ ನವ್ಯ ಸಾಹಿತ್ಯ ತನ್ನದೇ ಆದ ವ್ಯಕ್ತಿ ವಿಶಿಷ್ಟತೆ, ಸಾಮಾಜಿಕತೆ, ಚಾರಿತ್ರಿಕತೆ ಹಾಗೂ ಸಾಂಸ್ಕೃತಿಕ ಅನನ್ಯತೆಯಿಂದ ಕೂಡಿದ್ದಾಗಿದೆ. ಈ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಅನೇಕ ನವ್ಯ ಲೇಖಕರಲ್ಲಿ ಶಾಂತಿನಾಥ ದೇಸಾಯಿ ಅವರೂ ಪ್ರಮುಖರಾಗಿದ್ದಾರೆ.

ಶಾಂತಿನಾಥ ದೇಸಾಯಿ (೧೯೨೭–೧೯೯೮) ಅವರು ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಪ್ರಮುಖ ಕನ್ನಡದ ಲೇಖಕರಷ್ಟೇ ಅಲ್ಲ ಒಬ್ಬ ಪ್ರಮುಖ ಭಾರತೀಯ ಲೇಖಕರಾಗಿಯೂ ಗುರುತಿಸಲ್ಪಟ್ಟಿದ್ದಾರೆ. ನವ್ಯ ಪ್ರಜ್ಞೆಯು ಮೊದಲು ಆವಿಷ್ಕಾರಗೊಂಡಿರುವುದು ದೇಸಾಯಿ ಅವರ ಈ ಕಾಲಘಟ್ಟದ ಸೃಷ್ಟಿಯ ಸಾಹಿತ್ಯದಲ್ಲಿ; ಅವರ 'ಮುಕ್ತಿ' ಕಾದಂಬರಿಯು ನವ್ಯ ಪ್ರಜ್ಞೆಯ ಕನ್ನಡದ ಮೊಟ್ಟ ಮೊದಲ ಕಾದಂಬರಿ ಎಂದು ಈಗಾಗಲೇ ಚಾರಿತ್ರಿಕವಾಗಿ ವಿದ್ವಾಂಸರಿಂದ ಪರಿಗಣಿತವಾಗಿದೆ. ಇವರ ಹೆಸರನ್ನು ವಿ.ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗ, ರಾಮಚಂದ್ರ ಶರ್ಮಾ, ಯು.ಆರ್. ಅನಂತಮೂರ್ತಿ, ಯಶವಂತ ಚಿತ್ತಾಲ, ಪಿ. ಲಂಕೇಶ್, ಗಿರೀಶ್ ಕಾರ್ನಾಡ್, ಪೂರ್ಣಚಂದ್ರ ತೇಜಸ್ವಿ, ವೀಣಾ ಶಾಂತೇಶ್ವರ ಮುಂತಾದ ನವ್ಯ ಲೇಖಕರೊಡನೆ ಹೋಲಿಸಿ ಅಧ್ಯಯನ ಮಾಡಬೇಕಾದ ಚಾರಿತ್ರಿಕ ಅನಿವಾರ್ಯತೆಯೂ ಇದೆ.

ದೇಸಾಯಿ ಅವರು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಸಮೀಪದ ಹಾವಗಿ ಎಂಬ ಹಳ್ಳಿಯಲ್ಲಿ ಜುಲೈ ೨೨,೧೯೨೭ ರಂದು ಜನಿಸಿದರು. ಇವರ ತಂದೆ ಅಪ್ಪಾಜಿ ಪಾಲಪ್ಪ ದೇಸಾಯಿ, ತಾಯಿ ಚಂಪಾಬಾಯಿ. ಇವರದು ಶ್ರೀಮಂತ ಜಮಿನ್ದಾರಿ ಮನೆತನ. ಆದರೆ ಶಾಂತಿನಾಥ ದೇಸಾಯಿ ಅವರು ಬಾಲ್ಯದಲ್ಲೇ ತಮ್ಮ ಹತ್ತಿರದ ನೆಂಟರಾದ ಅಮ್ಮಿನಭಾವಿಯ ದೇಸಾಯಿ ಮನೆತನಕ್ಕೆ ದತ್ತು ಪುತ್ರರಾಗಿ ಹೋದವರು. ಇವರ ದತ್ತಕ ತಂದೆಯ ಹೆಸರು ಕುಬೇರಪ್ಪ, ದತ್ತಕ ತಾಯಿ ಸಾವಿತ್ರಿ. ದೇಸಾಯಿ ಅವರು ದತ್ತು ಹೋದರೂ ಕೂಡ ತಮ್ಮ ಹೆತ್ತ ತಂದೆ–ತಾಯಿ ಅವರ ಮನೆಯಾದ ಹಾವಗಿಯಲ್ಲಿಯೇ ಬಾಲ್ಯವನ್ನು ಕಳೆದವರು. ಈ ಬಾಲ್ಯದ ಅನುಭವಗಳೂ ಇವರ ಕಥನ ಸಾಹಿತ್ಯದಲ್ಲಿ ದಟ್ಟವಾಗಿ ಕಾಣಿಸಿಕೊಳ್ಳುವುದನ್ನು ಗುರುತಿಸಬಹುದಾಗಿದೆ.

೧.೧ ಉದ್ದೇಶ

೧೯೪೫ರಿಂದ ೧೯೫೬ರವರೆಗಿನ ಅವಧಿಯಲ್ಲಿ ತಮ್ಮ ಬದುಕಿನಲ್ಲಿ ಸಾಕಷ್ಟು ಸಾಹಿತ್ಯಕ ಬದಲಾವಣೆ ಆಯಿತೆಂದು ಶಾಂತಿನಾಥ ದೇಸಾಯಿ ಅವರೇ ಸ್ವತಃ ಬರೆದಿದ್ದಾರೆ. ತಾವು ಕಥೆ ಬರೆಯಲು ಪ್ರಾರಂಭಿಸಿದ್ದು ತಮ್ಮ ಇಪ್ಪತ್ತೊಂದನೇ ವಯಸ್ಸಿನ ನಂತರ ಎಂದು ಹೇಳಿಕೊಂಡಿದ್ದಾರೆ. ಮುಂಬೈನ ಲೌಕಿಕ ಮತ್ತು ಬೌದ್ಧಿಕ ವಾತಾವರಣವು ದೇಸಾಯಿ ಅವರ ಸಾಹಿತ್ಯಕ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿರುವುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಸಾಹಿತ್ಯದಲ್ಲಿ ಕಂಡು ಬರುವ ಆಧುನಿಕತೆ ಮತ್ತು ಸಂಪ್ರದಾಯದ ಸಂಘರ್ಷವನ್ನು ವಿಶ್ಲೇಷಣೆಗೆ ಒಳಗು ಮಾಡಬೇಕಾಗಿದೆ. ಸಂಪ್ರದಾಯವನ್ನು ಮೀರಿ ಆಧುನಿಕತೆಯ ಪರವಾಗಿ ನಿಲ್ಲುವ ಅವರ ದೃಷ್ಟಿಕೋನವನ್ನು ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ನವ್ಯ ಲೇಖಕರಲ್ಲಿಯೇ ಭಿನ್ನವಾದ ಮನೋಧರ್ಮವನ್ನು, ನಿಲುವನ್ನು ಹೊಂದಿದ್ದ ದೇಸಾಯಿ ಅವರು ಆಧುನಿಕತೆ ಮತ್ತು ವೈಚಾರಿಕತೆಯನ್ನು ತಮ್ಮ ಕೃತಿಗಳಲ್ಲಿ ಅತಿ ಎತ್ತರಕ್ಕೆ ಏರಿಸಿದ ಮುಖ್ಯ ಚಿಂತಕರಾಗಿದ್ದಾರೆ. ಮೊದಲನೆಯದಾಗಿ ಅವರ ಪ್ರಾದೇಶಿಕ ಹಿನ್ನೆಲೆಯ ಹಳಿಯಾಳವು ದ್ವಿಭಾಷಿಕ ಪ್ರದೇಶವಾಗಿದ್ದರಿಂದ ಅವರು ಮರಾಠಿ ಪ್ರಭಾವಕ್ಕೆ ಆರಂಭದಲ್ಲೇ ಒಳಗಾಗಿದ್ದಾರೆ. ಎರಡನೆಯದಾಗಿ ಜಮೀನ್ದಾರರ ಮನೆತನದಲ್ಲಿ ಹುಟ್ಟಿದ್ದರಿಂದ ಅವರ ಕೃತಿಗಳಲ್ಲಿ ಫ್ಯೂಡಲ್ ಅಂಶಗಳು ಬಲವಾಗಿ ಕಾಡುತ್ತವೆ. ಮೂರನೆಯದಾಗಿ ಅವರ ಮನೆತನದವರು ವೈದಿಕ ನಂಬಿಕೆಗಳಿಂದ ದೂರವಾಗಿದ್ದು ಜೈನ ಧರ್ಮೀಯರಾಗಿದ್ದರಿಂದ ಅವರ ಕೃತಿಗಳಲ್ಲಿ ಜೈನ ಧರ್ಮದ ಬಗೆಗಿನ ಶೋಧನೆಗಳು ಕಾಣಿಸಿಕೊಳ್ಳುತ್ತವೆ. ಈ ಧರ್ಮೀಯ ವಿಚಾರಗಳನ್ನು ಕೂಡ ಅಧ್ಯಯನದಲ್ಲಿ ಪರಿಶೀಲಿಸಲಾಗುವುದು. ನಾಲ್ಕನೆಯದಾಗಿ ದೇಸಾಯಿ ಅವರು ತಮ್ಮ ಬಹುಪಾಲು ಜೀವನವನ್ನು ಹೊರಗೆ ಕಳೆದುದರಿಂದ ಇವರಿಗೆ ಕನ್ನಡದ ನೆಲೆಯಲ್ಲಿ ಗಟ್ಟಿಯಾದ ಬೇರುಗಳು ಇಲ್ಲದಿರುವುದನ್ನು ಗುರುತಿಸಬೇಕಾಗಿದೆ. ಕೊನೆಯದಾಗಿ ಅವರು ಹುಟ್ಟಿದ್ದು ಸಣ್ಣ ಹಳ್ಳಿಯಲ್ಲಾದರೂ ಬೆಳೆದುದು, ವೃತ್ತಿ ಮಾಡಿದುದು ಭಾರತದ ದೊಡ್ಡ ದೊಡ್ಡ ನಗರಗಳಿಂದ ಹಿಡಿದು ಹೊರ ದೇಶದ ನಗರಗಳವರೆಗೆ ಇರುವುದರಿಂದ ಅವರ ಸಂವೇದನೆಯಲ್ಲಿ ಪ್ರಬಲವಾಗಿ ಕಾಣಿಸಿಕೊಳ್ಳುವ ನಾಗರೀಕ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಾಗುವುದು. ಈ ಎಲ್ಲಾ ಅಂಶಗಳ ಶೋಧನೆಗೆ ಅವರ ಕಥೆಗಳು ಮತ್ತು ಕಾದಂಬರಿಗಳನ್ನೇ ಮೂಲ ಆಕರಗಳನ್ನಾಗಿ ಪ್ರಸ್ತುತ ಅಧ್ಯಯನ ತನ್ನ ಉದ್ದೇಶದಲ್ಲಿಟ್ಟುಕೊಂಡಿದೆ.

೧.೨ ವ್ಯಾಪ್ತಿ

ಶಾಂತಿನಾಥ ದೇಸಾಯಿ ಅವರ ಮೊಟ್ಟಮೊದಲ ಕಥಾಸಂಗ್ರಹ "ಮಂಜುಗಡ್ಡೆ" ನವ್ಯ ಕಥೆಗಳ ಪ್ರಾರಂಭದ ಸಂಕಲನ. ಮೊದಲೇ ಹೇಳಿದ ಹಾಗೆ ಅವರ ಮೊದಲ ಕಾದಂಬರಿ "ಮುಕ್ತಿ" ಪ್ರಪ್ರಥಮ ನವ್ಯ ಕಾದಂಬರಿ ಎಂದೇ ಹೆಸರಾಗಿದೆ. ಅವರ ಅಪರೂಪದ ವಿಮರ್ಶಾ ಲೇಖನಗಳ ಸಂಗ್ರಹದ ಶೀರ್ಷಿಕೆ "ನವ್ಯ ಸಾಹಿತ್ಯ ದರ್ಶನ". ಅವರು ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ್ದು ಕವಿಯಾಗಿ; ಆದರೆ ಅವರ ಮುಖ್ಯ ಸಾಧನೆ ಪ್ರಕಟವಾದದ್ದು ಅವರ ಕಥೆಗಳು ಹಾಗೂ ಕಾದಂಬರಿಗಳ ಮೂಲಕ ನಾಲ್ಕು ದಶಕಗಳ ಕಾಲಾವಧಿಯಲ್ಲಿ ಆರು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ಅನಂತರ ಏಳು ಕಥೆಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವರ ಕಾದಂಬರಿಗಳು ಏಳು. ಇವುಗಳ ಜೊತೆಗೆ ಭಾಷೆ, ಶೈಲಿ, ಆಧುನಿಕತೆ, ಸಂಪ್ರದಾಯ, ನವ್ಯ ಸಾಹಿತ್ಯ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಮೂರು ವಿಮರ್ಶೆ, ವೈಚಾರಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಸ್ತ್ರೀ–ಪುರುಷರ ನಡುವಿನ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳು ಮತ್ತು ಸಂಘರ್ಷಗಳ ವಿನ್ಯಾಸಗಳು ಅವರ ಕಥನದಲ್ಲಿ ಅತ್ಯಂತ ಆಧುನಿಕವಾಗಿ ಪ್ರಕಟವಾಗಿವೆ. ದೇಸಾಯಿ ಅವರು ಅಸ್ತಿತ್ವವಾದಕ್ಕೂ ತಮ್ಮ ಕಥನಕ್ಕೂ ಇರುವ ಸಂಬಂಧದ ಗಾಢತೆಯನ್ನು ಕುರಿತು ತಮ್ಮ "ಅಸ್ತಿತ್ವವಾದ ಮತ್ತು ಕನ್ನಡ ಸಾಹಿತ್ಯ" ಎಂಬ ಲೇಖನದಲ್ಲಿ ವಿವರವಾಗಿ ವಿವರಿಸಿದ್ದಾರೆ. ಮನೋವಿಜ್ಞಾನ ಮತ್ತು ಅಸ್ತಿತ್ವವಾದ ಇವೆರಡೂ ಅವರ ಒಟ್ಟು ಕಥನದ ಹಿನ್ನೆಲೆಗಿದೆ. ಐವತ್ತು–ಅರವತ್ತರ ದಶಕಗಳಲ್ಲಿ ಬರೆದ ಅವರ ರಚನೆಗಳ ಮೇಲೆ ಯೂರೋಪಿನ ಸಾರ್ತ್ರೆ, ಕಾಮು ಮುಂತಾದ ಅಸ್ತಿತ್ವವಾದಿ ಲೇಖಕರ ಪ್ರಭಾವ ಗಾಢವಾಗಿದೆ. ಈ ಅಂಶಗಳು ಅವರ ಮುಕ್ತಿ, ವಿಕ್ಷೇಪ, ಸಂಬಂಧ, ಅಂತರಾಳ ಕಾದಂಬರಿಗಳಲ್ಲಿ ಮತ್ತು ಮಂಜುಗಡ್ಡೆ, ಕ್ಷಿತಿಜ, ರಾಕ್ಷಸ, ಬೇಸರ, ಗಂಡ ಸತ್ತ ಮೇಲೆ, ದಂಡೆ, ಶೋಭನೆಯ ಹಾದಿ, ಮಳೆ ಮುಂತಾದ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಅಸ್ತಿತ್ವವಾದಿ ದೃಷ್ಟಿಕೋನದಿಂದ ವ್ಯಕ್ತಿಗಳ ಒಳಮನಸ್ಸಿನ ಭಾವಗಳನ್ನು, ತುಡಿತಗಳನ್ನು ಅನ್ವೇಷಿಸುವ ವಿಧಾನ ದೇಸಾಯಿ ಅವರ ಬರಹಗಳಲ್ಲಿ ವಿಶಿಷ್ಟವಾಗಿ ಕಾಣಿಸಿಕೊಳ್ಳುವುದನ್ನು ಗುರುತಿಸಬಹುದಾಗಿದೆ. ಈ ಅಸ್ತಿತ್ವವಾದದ ಪ್ರಭಾವ ಲಂಕೇಶರ ಬಿರುಕು, ತೆರೆಗಳು ಮತ್ತು ತೇಜಸ್ವಿ ಅವರ ಸ್ವರೂಪ, ಯಮಳಪ್ರಶ್ನೆ, ಅನಂತಮೂರ್ತಿ ಅವರ ಸಂಸ್ಕಾರ, ಕ್ಲಿಪ್‌ಜಾಯಿಂಟ್, ಕಾರ್ನಾಡರ ತುಘಲಕ್ ಮುಂತಾದ ಲೇಖಕರ ಕೃತಿಗಳ ಮೇಲೆ ದಟ್ಟವಾಗಿಯೇ ಇದೆ.

ದೇಸಾಯಿಯವರ ಸಾಹಿತ್ಯವನ್ನು ಕುರಿತಂತೆ ಹಲವಾರು ಲೇಖನಗಳು, ಕೆಲವು ಕೃತಿಗಳು ಪ್ರಕಟವಾಗಿವೆ. ಆದರೆ ಅವರ ಸಾಹಿತ್ಯವನ್ನು ಸಮಗ್ರವಾಗಿ ವಿಶ್ಲೇಷಣೆಗೆ ಒಳಗು ಮಾಡಿರುವ ಕೃತಿಗಳು ಅತ್ಯಂತ ಕಡಿಮೆಯೇ ಎಂದು ಹೇಳಬಹುದಾಗಿದೆ. ಆದರೆ ದೇಸಾಯಿ ಅವರು ಅಸ್ತಿತ್ವವಾದ, ಮಾರ್ಕ್ಸ್‌ವಾದ ಮತ್ತು ಆಧುನಿಕವಾದಗಳ ಪ್ರಭಾವಕ್ಕೆ ಒಳಗಾದವರು. ಅವರ ಕಥನ ಸಾಹಿತ್ಯದಲ್ಲಿ ಇವುಗಳ ದಟ್ಟ ಪ್ರಭಾವಗಳನ್ನು ಗುರುತಿಸಲಾಗುವುದು. ಈ ಅಧ್ಯಯನದ ಪರಿಕಲ್ಪನೆಯಲ್ಲಿ ಈ ಪರಿಭಾಷೆಗಳನ್ನು ಇಲ್ಲಿ ವಿವರಿಸಿಕೊಳ್ಳುವುದು ಅವಶ್ಯಕವಾಗಿದೆ.

೧.೨.೧ ಅಸ್ತಿತ್ವವಾದ (Existentialism)

ಯಾವುದೇ ಒಂದು ದೇಶ, ಜನಾಂಗ ಅಥವಾ ಸಂಸ್ಕೃತಿ ತನ್ನ ಇಳಿಗಾಲದ ಅವಸ್ಥೆಯ ಸಂದರ್ಭದಲ್ಲಿ ತನ್ನ ಅಂತಃಸತ್ವದಲ್ಲಿ ಪುನರುಜ್ಜೀವನಗೊಳ್ಳುವಾಗ ಅನ್ಯದೇಶದ ಸಾಹಿತ್ಯ, ಸಂಸ್ಕೃತಿ, ಕಲೆಗಳಿಂದ ಹಲವಾರು ಸಂಗತಿಗಳನ್ನು ಮೌಲ್ಯಗಳನ್ನು ಸ್ವೀಕರಿಸುವುದು ಚರಿತ್ರೆಯಲ್ಲಿ ನಡೆದಿರುವುದು ಒಂದು ಐತಿಹಾಸಿಕ ಸತ್ಯ. ಇದಕ್ಕೆ ಉದಾಹರಣೆಯಾಗಿ ಇಂಗ್ಲೆಂಡಿನ ರೆನೇಸಾನ್ಸ್, ರಷ್ಯನ್ ಕ್ರಾಂತಿ, ಜಪಾನ್ ಆಧುನೀಕರಣ, ಚೀನದ ರಾಜ್ಯಕ್ರಾಂತಿ ಮುಂತಾದ ಚಾರಿತ್ರಿಕ ಸಂದರ್ಭಗಳೇ ಸಾಕ್ಷಿಯಾಗಿವೆ. ಆದರೆ ಇಂತಹ ಐತಿಹಾಸಿಕ ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ರಾಷ್ಟ್ರ ಹೆಚ್ಚು ತನ್ನ

ಸ್ವಂತಿಕೆಯನ್ನು, ಅನನ್ಯತೆಯನ್ನು ಉಳಿಸಿಕೊಳ್ಳುವುದು, ಶೋಧಿಸಿಕೊಳ್ಳುವುದು ಅನಿವಾರ್ಯ. ಇಂತಹ ಕ್ರಿಯೆ, ಪ್ರಕ್ರಿಯೆಗಳು ೧೯ನೆಯ ಮತ್ತು ೨೦ನೆಯ ಶತಮಾನದ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿಯೂ ಸ್ಪಷ್ಟವಾಗಿ ಗೋಚರಿಸುತ್ತವೆ. ಭಾರತದ ಸಾಹಿತ್ಯ, ಸಂಸ್ಕೃತಿ, ಶಿಕ್ಷಣದ ಮೇಲೆ ವಸಾಹತು ಕಾಲದಲ್ಲಿ ಇಂಗ್ಲಿಷ್ ಸಾಹಿತ್ಯ, ಇಂಗ್ಲಿಷ್ ಸಂಸ್ಕೃತಿಗಳ ಪ್ರಭಾವ ಪ್ರೇರಣೆ ಪಡೆದರೂ ಅದನ್ನು ಬರೀ ಯಾಂತ್ರಿಕವಾಗಿ ಸ್ವೀಕರಿಸದೆ ಭಾರತೀಯ ಸಂಸ್ಕೃತಿ ಪ್ರತಿರೋಧವನ್ನು ಮಾಡುತ್ತಲೇ ತನ್ನ ಸ್ವಂತಿಕೆಯನ್ನು ರೂಪಿಸುತ್ತ ಬಂದಿದೆ. ಇದು ಭಾರತೀಯ ಸಾಹಿತ್ಯದಲ್ಲಿಯೂ ನಿಜ. ನಮ್ಮ ಕನ್ನಡ ಸಾಹಿತ್ಯದ ಪ್ರಭಾವವನ್ನು ಸ್ವೀಕರಿಸುತ್ತಿರುವಾಗಲೇ, ನಮ್ಮ ಪ್ರಾಚೀನ ಸಾಂಸ್ಕೃತಿಕ ಸಾಹಿತ್ಯದ ಅರಿವೂ, ನಮ್ಮ ಪ್ರಾದೇಶಿಕ ಮೌಖಿಕ ಸಾಹಿತ್ಯದ ಅರಿವೂ ನಮ್ಮ ಸಾಹಿತ್ಯ, ಸಂಸ್ಕೃತಿಯ ಸ್ವಂತಿಕೆಯನ್ನು ಬಿಟ್ಟುಕೊಟ್ಟಿಲ್ಲ.

ಪಾಶ್ಚಾತ್ಯ ಸಂಸ್ಕೃತಿಯಿಂದ ಕನ್ನಡದ ಲೇಖಕರು ಸ್ವೀಕರಿಸಿದ ತತ್ವಮೀಮಾಂಸೆಗಳಲ್ಲಿ 'ಅಸ್ತಿತ್ವವಾದ' ಸಿದ್ಧಾಂತವೂ ಒಂದು. ಆದರೆ ಇದು ಹೆಚ್ಚಾಗಿ ಆದದ್ದು ಕನ್ನಡದ ನವ್ಯ ಸಾಹಿತ್ಯದ ಸಂದರ್ಭದಲ್ಲಿ; ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಯೂರೋಪಿನಲ್ಲಿ ಅಸ್ತಿತ್ವವಾದ ಒಂದು ಮುಖ್ಯ ಸಿದ್ಧಾಂತವಾಗಿತ್ತು. ಇದು ವ್ಯಕ್ತಿಯ ಅಸ್ತಿತ್ವಕ್ಕೆ ಒತ್ತು ಕೊಡುತ್ತದೆ. ಅದು ಅವನ ಬೆಳವಣಿಗೆಯಲ್ಲಿ ಒಂದು ಮುಖ್ಯ ಮಧ್ಯವರ್ತಿಯಂತೆ ಕೆಲಸ ಮಾಡುತ್ತದೆ. ಮುಖ್ಯವಾಗಿ ಅದರ ಪರಿಕಲ್ಪನೆಯೆಂದರೆ, ವ್ಯಕ್ತಿಯ ಅಸ್ತಿತ್ವ, ಸ್ವಾತಂತ್ರ್ಯ ಮತ್ತು ಅವನ ಆಯ್ಕೆಯ ಸಾರವನ್ನು ಒಳಗೊಂಡಿರುವಂತಹದು. ವ್ಯಕ್ತಿಯ ಸ್ವಂತಿಕೆ ಮತ್ತು ಅವನ ಸ್ವಆಲೋಚನೆಗಳಿಗೆ ಆದ್ಯತೆ ನೀಡುತ್ತದೆ. ಯುರೋಪಿನಲ್ಲಿ ಅಸ್ತಿತ್ವವಾದ ಚಿಂತಕರಲ್ಲಿ ಮುಖ್ಯರೆಂದರೆ ಸಾರ್ತ್ರೆ, ಕಾಮೂ, ಕಾಫ್ಕ, ಕಿರ್ಕೆಗಾರ್ಡ್, ಹೈಡೆಗಾರ್, ನೀಟ್ಸೆ ಮುಂತಾದವರು. ಸಾರ್ತ್ರೆ, ಅಸ್ತಿತ್ವವಾದವು ಮೂಲಭೂತವಾಗಿ ವ್ಯಕ್ತಿಯ ವ್ಯಕ್ತಿತ್ವಕ್ಕೆ ಸೇರಿದ್ದು. ಹಾಗಾಗಿ ಅಸ್ತಿತ್ವವಾದವೆಂದರೆ ಅದು ಮಾನವತಾವಾದಿ ಎಂಬುದು ಅವನ ವಾದ. ಇತರೆ ಅಸ್ತಿತ್ವವಾದಿಗಳಿಗಿಂತ ಭಿನ್ನವಾದ ಅವನ ಈ ನಿಲುವು ಅನಂತಮೂರ್ತಿ ಹಾಗೂ ದೇಸಾಯಿ ಅವರನ್ನು ಹೆಚ್ಚು ಪ್ರಭಾವಿಸಿದೆ. ದೇವರ ಇರುವಿಕೆಯ ಅಸ್ತಿತ್ವದ ಬಗ್ಗೆ ನೀಟ್ಸೆ ಅಂತಹ ಅಸ್ತಿತ್ವವಾದಿಗಳು ದೇವರು ಇಲ್ಲ ಅಥವಾ ಅದೊಂದು ಗತದ ವಿಷಯ ಎಂಬ ನಿಲುವಿಗೆ ಬದ್ಧರಾದವರು. ಆದರೆ ಕಿರ್ಕೆಗಾರ್ಡ್ ಅವರು ಅದನ್ನು ವ್ಯಾಖ್ಯಾನಿಸಲು ಸಾಧ್ಯವಾಗುವುದಿಲ್ಲ ಎನ್ನುತ್ತಾನೆ. ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಆಯ್ಕೆ ಇದೆ ಅಂದರೆ ಇದೆ, ಇಲ್ಲ ಅಂದರೆ ಇಲ್ಲ ಎಂದು ಹೇಳುತ್ತಾನೆ. ಈ ತತ್ವ ದೇಸಾಯಿ ಅವರ 'ಓಂ ಣಮೋ' ಕಾದಂಬರಿಯಲ್ಲಿ ಜೈನ ಧರ್ಮದ 'ಅನೇಕಾಂತವಾದ' ಮತ್ತು ಅದರ ಭಾಗವಾದ 'ಸ್ಯಾದ್‌ವಾದ'ದ ತತ್ವಕ್ಕೆ ಸಮೀಪವಾದುದು. ಇವರ 'ಮುಕ್ತಿ' ಕಾದಂಬರಿ ಹಾಗೂ ಹಲವಾರು ಕಥೆಗಳ ಮೇಲೆ ಸಾರ್ತ್ರೆಯ ಅಸ್ತಿತ್ವವಾದದ ಪ್ರಭಾವವನ್ನು ಗುರುತಿಸಬಹುದಾಗಿದೆ. ಆಧುನಿಕ ಕನ್ನಡ ನವ್ಯ ಸಾಹಿತ್ಯದ ಮೇಲೆ ಈ ಅಸ್ತಿತ್ವವಾದದ ಪ್ರಭಾವ ಗಾಢವಾಗಿದೆ. ಇದರ ಪ್ರಭಾವದಿಂದ ನವ್ಯ ಸಾಹಿತ್ಯದಲ್ಲಿ ಒಂದು ಹೊಸ ಬಗೆಯ ಚಿಂತನೆ ಕಾಣಿಸಿಕೊಂಡಿದೆ. ನವ್ಯ ಸಾಹಿತ್ಯದ ಮೇಲೆ ಇದು ನಿಜವಾಗಿಯೂ ಯಾಂತ್ರಿಕವಾದ ಪ್ರಭಾವವಾಗದೆ, ಸೃಜನಾತ್ಮಕವಾದ ಒಂದು ಪ್ರಭಾವವಾಗಿದೆ.

ಈ ಅಸ್ತಿತ್ವವಾದದ ಪ್ರಭಾವಕ್ಕೆ ಒಳಗಾದವರಲ್ಲಿ ಮುಖ್ಯವಾಗಿ, ಅನಂತಮೂರ್ತಿಯವರ ಮೇಲೆ ಸಾರ್ತ್ರೆನ ಪ್ರಭಾವ, ಯಶವಂತ ಚಿತ್ತಾಲರ ಮೇಲೆ ಕಾಫ್ಕನ ಪ್ರಭಾವ, ತೇಜಸ್ವಿ ಮತ್ತು ಗಿರೀಶ್ ಕಾರ್ನಾಡರ ಮೇಲೆ ಕಾಮೂನ ಪ್ರಭಾವ, ಲಂಕೇಶರ ಮೇಲೆ ಸ್ಯಾಲಿಂಜರ್‌ನ ಪ್ರಭಾವ ಹಾಗೂ ಶಾಂತಿನಾಥ ದೇಸಾಯಿ ಅವರ ಮೇಲೆ ಸಾರ್ತ್ರೆ, ಕಿರ್ಕೆಗಾರ್ಡ್‌ನ ಪ್ರಭಾವಗಳನ್ನು ಕನ್ನಡ ವಿಮರ್ಶೆ ಈಗಾಗಲೇ ಗುರುತಿಸಿದೆ. ಈ ನವ್ಯ ಲೇಖಕರೆಲ್ಲಾ ಈ ಸಿದ್ಧಾಂತವನ್ನು ತಮ್ಮ ಸ್ವಂತಿಕೆಯ ಸಂದರ್ಭದಲ್ಲಿ ತಮ್ಮತನವನ್ನು ಶೋಧಿಸಲು, ರೂಪಿಸಲು ಬಳಸಿಕೊಂಡವರೇ ಆಗಿದ್ದಾರೆ.

೧.೨.೨ ಮಾರ್ಕ್ಸ್‌ವಾದ (Markism)

ಮಾರ್ಕ್ಸ್‌ವಾದ ಆರ್ಥಿಕವಾದ ಮತ್ತು ರಾಜಕೀಯವಾದ ಒಂದು ವ್ಯವಸ್ಥೆ; ಆದರೆ ಸಮಾಜವಾದ ಒಂದು ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯಾಗಿರುತ್ತದೆ. ಸಮಾಜವಾದದಲ್ಲಿ ವ್ಯಕ್ತಿ ಸ್ವಂತವಾಗಿ ಖಾಸಗಿ ಆಸ್ತಿಯನ್ನು ಹೊಂದಬಹುದು. ಆದರೆ ಮಾರ್ಕ್ಸ್‌ವಾದದಲ್ಲಿ ಅದಕ್ಕೆ ಅವಕಾಶವಿಲ್ಲ. ೧೯ ಮತ್ತು ೨೦ನೆಯ ಶತಮಾನದಲ್ಲಿ ಕಾಣಿಸಿಕೊಂಡ ಬಹುಮುಖ್ಯ ತತ್ವಮೀಮಾಂಸೆಗಳು ಇವು. ಕಾರ್ಲ್‌ಮಾರ್ಕ್ಸ್ (೧೮೧೮–೧೮೮೩) ಜರ್ಮನ್‌ನಲ್ಲಿ ಕಾಣಿಸಿಕೊಂಡ ಮಾರ್ಕ್ಸ್‌ವಾದದ ಪಿತಾಮಹ. ಇವನೊಬ್ಬ ಜರ್ಮನ್ ಫಿಲಾಸಫರ್, ಅರ್ಥಶಾಸ್ತ್ರಜ್ಞ, ಇತಿಹಾಸಕಾರ, ಸಮಾಜ ವಿಜ್ಞಾನಿ, ರಾಜಕೀಯ ಸಿದ್ಧಾಂತವಾದಿ, ಪತ್ರಕರ್ತ, ಸಮಾಜವಾದಿ ಕ್ರಾಂತಿಕಾರಿ, ಕಾನೂನು ತಜ್ಞ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಬಹುಶ್ರುತ ವಿದ್ವಾಂಸ. ಜರ್ಮನ್ನಿನ ಜ್ಯೂಯಿಷ್ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಈತನ 'ವರ್ಗಸಿದ್ಧಾಂತ'ವು ಪ್ರಪಂಚದಾದ್ಯಂತ ಗಮನ ಸೆಳೆಯಿತು.

ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪ್ರಸ್ತಾಪಗಳು ಮತ್ತು ಸೇವೆಗಳನ್ನು ಮಾರ್ಕ್ಸ್ ಸಮರ್ಥಿಸಿದ್ದಾರೆ. ಅದರಲ್ಲೂ ವಿಶೇಷವಾಗಿ, ಕಾರ್ಮಿಕ ಸಿದ್ಧಾಂತ ಸೇರಿದಂತೆ ಸಮಾಜವಾದದ ಸಿದ್ಧಾಂತ ಮತ್ತು ಅಭ್ಯಾಸ ಅದರ ಮುಖ್ಯ ಮೌಲ್ಯವಾಗಿದೆ. ಇದು ಸಮಾಜದಲ್ಲಿ ವರ್ಗವಿಲ್ಲದ ಸಮಾಜದ ಸ್ಥಾಪನೆಗಾಗಿ ನಡೆಯುವ ವರ್ಗೀಯ ಹೋರಾಟ. ಮುಖ್ಯವಾಗಿ ಇದು ಕಾರ್ಮಿಕ ವರ್ಗದ ಸರ್ವಾಧಿಕಾರತ್ವದ ಸಂವಾದಾತ್ಮಕ ಭೌತವಾದ. ಆದರೆ ಭಾರತ ಜಾತಿನಿಷ್ಠ ಸಮಾಜ. ಹಾಗಾಗಿ ಇದು ಜಾತಿ ಹೋರಾಟ ಸಮಾಜ. ಪಾಶ್ಚಾತ್ಯದ ಕಾರ್ಮಿಕರ ವರ್ಗ ಹೋರಾಟಕ್ಕಿಂತ ಭಾರತದಲ್ಲಿ ರೈತ ಕಾರ್ಮಿಕರ ಹೋರಾಟ ಮುಖ್ಯವಾಗುತ್ತದೆ.

೧೯೭೦ರ ದಶಕದಲ್ಲಿ ಅಸ್ತಿತ್ವವಾದದ ಪ್ರಭಾವ ದಟ್ಟವಾಗಿ ಬಿದ್ದು, ಕನ್ನಡ ಸಾಹಿತ್ಯವನ್ನು 'ಕ್ರಿಯಾಶೀಲ ಘಟಕ' ಎಂಬ ಮಾತನ್ನು ಒತ್ತಿ ಹೇಳುವಂಥ ಮಾರ್ಕ್ಸ್‌ವಾದದ ಪ್ರಭಾವ ಪ್ರಬಲವಾಗುತ್ತಿರುವುದನ್ನು ಕಾಣುತ್ತೇವೆ. ಸ್ವಾತಂತ್ರ್ಯದ ಪೂರ್ವಕಾಲದಲ್ಲಿ ಅಂದರೆ ನವೋದಯ ಸಾಹಿತ್ಯದ ಕಾಲಘಟ್ಟದಲ್ಲಿ ಸ್ವತಂತ್ರರಾಗಲು ರಾಜಕೀಯವಾಗಿ ಹೆಣಗಾಡುವಾಗ ರೊಮ್ಯಾಂಟಿಸಿಜಮ್ಮದ (ನವೋದಯ) ಆದರ್ಶವಾದ, ಗಾಂಧಿವಾದ ಅವಶ್ಯವಾಗಿತ್ತು. ಅದಕ್ಕಾಗಿ ವ್ಯಕ್ತಿ–ಸಮಾಜ–ಪ್ರವೃತ್ತಿಯ ನಡುವೆ ಸಂಘರ್ಷವಿತ್ತು. ನಂತರ ಪ್ರಗತಿಶೀಲ ಸಾಹಿತ್ಯದ ನಲ್ವತ್ತರ ದಶಕದ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ರಷ್ಯನ್ ಸಮಾಜವಾದಿ ಲೇಖಕರ ಸಾಹಿತ್ಯದಿಂದ ಪ್ರಭಾವಿತವಾಯಿತು. ಅದರಿಂದಾಗಿ ಪ್ರಗತಿಶೀಲ ಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯ ಪ್ರತಿಪಾದನೆಯೇ ಪ್ರಧಾನ ಧೋರಣೆಯಾಯಿತು.

ಆಗ ಪ್ರಗತಿಶೀಲ ಸಾಹಿತ್ಯದಲ್ಲಿ ಶ್ರೀಮಂತಿಕೆ ಮತ್ತು ಬಡತನದ ನಡುವೆ ಸಂಘರ್ಷ ಪ್ರಧಾನವಾದ ಪಾತ್ರಗಳು ಕಷ್ಟವಾದವು. ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಹಲವಾರು ಅನಪೇಕ್ಷಿತ ಅನಿಷ್ಟ ಶಕ್ತಿಗಳು ರಾಷ್ಟ್ರದಲ್ಲಿ ತಲೆ ಎತ್ತಿದ್ದರಿಂದ ವಿಚಾರವಂತರು, ಲೇಖಕರು, ಬುದ್ಧಿಜೀವಿಗಳು ಸಮಾಜದ ಕೇಂದ್ರಸ್ಥಾನದಿಂದ ಸಮಾಜದ ಅಂಚಿಗೆ ಸರಿಯಲ್ಪಟ್ಟರು. ಆದ್ದರಿಂದ ಅಸ್ತಿತ್ವವಾದದಂಥ ಆತ್ಮ ಕೇಂದ್ರಿತ ತತ್ವಗಳು ಹೆಚ್ಚು ಹತ್ತಿರವಾಗತೊಡಗಿದವು. ನಂತರ ಲೇಖಕರು ಸಾಮಾಜಿಕ ಬದ್ಧತೆಯ ಬಗ್ಗೆ ಪ್ರತಿಪಾದಿಸತೊಡಗಿದರು. ಆ ಸಂದರ್ಭದಲ್ಲಿ ಸಮಾಜ ವ್ಯಕ್ತಿಗಳ ಅನ್ಯೋನ್ಯ ಸಂಬಂಧವನ್ನು ಪ್ರತಿಪಾದಿಸಿದ್ದ, ಸಮಾಜದ ಸಾಮಾಜಿಕ ವ್ಯವಸ್ಥೆಯ ಮಹತ್ವವನ್ನು ಒತ್ತಿ ಒತ್ತಿ ಹೇಳಿದ್ದ 'ಮಾರ್ಕ್ಸ್‌ನ ಚಿಂತನೆಗಳು' ಲೇಖಕರಿಗೆ ಹೆಚ್ಚು ಹೆಚ್ಚು ಮಹತ್ವವೆನ್ನಿಸತೊಡಗಿದವು. ಕನ್ನಡದ ನವೋದಯಶಾಹಿಗಳ ಮೇಲೆ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ, ಸಂಸ್ಕೃತ ಸಾಹಿತ್ಯ ಹಾಗೂ ಕನ್ನಡದ ಹಳಗನ್ನಡ ಸಾಹಿತ್ಯದ ಪ್ರಭಾವ, ಆಕರ್ಷಣೆ ಮುಖ್ಯವಾಗಿತ್ತು. ನವ್ಯಸಾಹಿತ್ಯದ ಮೇಲೆ ಇಂಗ್ಲಿಷ್ ನವ್ಯಸಾಹಿತ್ಯದ ಪ್ರಭಾವವಿತ್ತು. ವ್ಯಕ್ತಿಯ ಆಂತರಿಕ ಸಂಘರ್ಷವು ವ್ಯಕ್ತಿ ಹಾಗೂ ಸಮಾಜಗಳ ಧರ್ಮದೊಡನೆಯ ಸಂಘರ್ಷವಾಗಿತ್ತು. ದಲಿತ – ಬಂಡಾಯ ಸಾಹಿತ್ಯದಲ್ಲಿ ಕಾರ್ಯ ಕಾರಣಗಳ ಸಂಬಂಧ, ಪ್ರತಿಭಟನೆ, ಸಂಘರ್ಷವೇ ಪ್ರಭಾವವಾಯಿತು. ಆದರೆ ನವ್ಯ ಸಾಹಿತ್ಯದ ಸಂದರ್ಭದಲ್ಲಿ ದೇಸಾಯಿ ಅವರು ಈ ಯೂರೋಪಿನ ಸಾರ್ತ್ರೆ, ಕಿರ್ಕೆಗಾರ್ಡ್ ಮಾದರಿಯ ಅಸ್ತಿತ್ವವನ್ನು ಒಪ್ಪಿಕೊಂಡರೂ, ಮಾರ್ಕ್ಸ್‌ವಾದದ ತತ್ವಮೀಮಾಂಸೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರು.

ಎಂ.ಎನ್. ರಾಯ್ (೧೮೮೭–೧೯೫೪) ೨೦ನೆಯ ಶತಮಾನದ ಭಾರತದ ಒಬ್ಬ ತತ್ವಜ್ಞಾನಿ. ಬಂಗಾಳದಲ್ಲಿ ಜನಿಸಿದ ಇವರು ಉಗ್ರವಾದಿ ರಾಜಕೀಯ ಕಾರ್ಯಕರ್ತರಾಗಿದ್ದವನು. (Miltant Political Activist) 'ನವ ಮಾನವತಾವಾದ' ಎಂಬ ಹೊಸ ತತ್ವವನ್ನು ಹುಟ್ಟು ಹಾಕಿದ ಮೀಮಾಂಸಕ. ನೈತಿಕತೆ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದವನು. ಈ ದೃಷ್ಟಿಯಿಂದ ಈತ ಆಧುನಿಕ ವ್ಯಕ್ತಿ. ಆರಂಭದಲ್ಲಿ ಮಾರ್ಕ್ಸ್‌ವಾದಿಯಾಗಿದ್ದು ನಂತರ ಮಾರ್ಕ್ಸ್‌ವಾದವನ್ನು ನಿರಾಕರಿಸಿ, ಸಮಾಜದಲ್ಲಿ ಸಾಮಾಜಿಕ ತತ್ವಶಾಸ್ತ್ರ ಮತ್ತು ಮಾನವತಾವಾದವನ್ನು ವಿಲೀನಗೊಳಿಸಿ ವಿಕಸನಗೊಳಿಸಿದ್ದು ಇವನ ನವಮಾನವತಾವಾದ ಮುಖ್ಯ ತಿರುಳು. ಇದು ಆಧುನಿಕ ಸಮಾಜ ಹಾಗೂ ನಾಗರೀಕತೆಯ ಬಿಕ್ಕಟ್ಟಿನ ಪರಿಹಾರ ಎಂದು ನಂಬಿದ್ದವನು. ಕಾರಣ ಕಾರ್ಲ್‌ಮಾರ್ಕ್ಸ್‌ಗಿಂತ ಭಿನ್ನವಾಗಿ ಮತ್ತು ನೀತಿಶಾಸ್ತ್ರ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯ ಇವುಗಳ ಸಂಬಂಧವನ್ನು ಸ್ವೀಕರಿಸಿದವನು. ರಾಯ್‌ನ ಈ 'ರ್‍ಯಾಡಿಕಲ್ ಹ್ಯೂಮನಿಸಂ'ನ ತತ್ವಗಳಿಂದ ಶಾಂತಿನಾಥ ದೇಸಾಯಿ ಅವರು ಹೆಚ್ಚು ಪ್ರಭಾವಿತರಾದರು. ಇದು ದೇಸಾಯಿ ಅವರ ಕಥೆಗಳಲ್ಲಿ, ಕಾದಂಬರಿಯ ಪಾತ್ರಗಳಲ್ಲಿ ನಿಚ್ಚಳವಾಗಿ ಕಾಣಿಸಿಕೊಳ್ಳುವುದನ್ನು ಗುರುತಿಸಬಹುದಾಗಿದೆ.

ಆಧುನಿಕವಾದ ಮತ್ತು ಸಂಘರ್ಷ (Modernism and Conflict)

ಆಧುನಿಕವಾದವು ಸಾಂಸ್ಕೃತಿಕ ಪ್ರವೃತ್ತಿಗಳ ಮತ್ತು ಬದಲಾವಣೆಗಳ ಒಂದು ತಾತ್ವಿಕ ಚಳುವಳಿಯಾಗಿದೆ. ಇದು ೧೯ನೆಯ ಶತಮಾನದ ಉತ್ತರಾರ್ಧ ಮತ್ತು ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಪಾಶ್ಚಾತ್ಯ ಸಮಾಜದಲ್ಲಿ ವ್ಯಾಪಕ ಪ್ರಮಾಣದಲ್ಲಿ ರೂಪಾಂತರ ಪಡೆಯಿತು.

ಅದು ಈಗ ಸಂಪೂರ್ಣವಾಗಿ ಹಿಂದಿನ ಸಂಸ್ಕೃತಿಯನ್ನು ಭಿನ್ನ ರೀತಿಯಲ್ಲಿ ನೋಡುವ ಒಂದು ಮನೋಧರ್ಮವಾಗಿದೆ.

ಆಧುನಿಕವಾದದ ಮುಖ್ಯ ಆಶಯ ಚಿಂತನೆಯ ಗುಣಮಟ್ಟ, ಅಭಿವ್ಯಕ್ತಿಯ ಗುಣಮಟ್ಟ ಮತ್ತು ತಂತ್ರದ ಗುಣಮಟ್ಟವನ್ನು ಒಳಗೊಂಡಿರುತ್ತದೆ. ಕಲೆ ಹಾಗೂ ಸಾಹಿತ್ಯ ಚಳುವಳಿಗಳಲ್ಲಿ ಒಂದು ಮುಖ್ಯ ಶೈಲಿ. ಇದು ಶಾಸ್ತ್ರೀಯ ಮತ್ತು ಸಾಂಪ್ರದಾಯಕ ರೂಪಗಳ ಪ್ರಾಮುಖ್ಯತೆಯನ್ನು ನಿರಾಕರಿಸುವುದನ್ನೇ ತನ್ನ ಮುಖ್ಯ ಗುರಿಯನ್ನಾಗಿ ಹೊಂದಿರುತ್ತದೆ. ಇದು ಸಾಂಪ್ರದಾಯಕ ನಡವಳಿಕೆಗಳನ್ನು ಆಧುನಿಕ ಚಿಂತನೆಗಳಿಗೆ ಮಾರ್ಪಡಿಸುವ ಚಳುವಳಿಯ ರೂಪದಲ್ಲಿ ೧೯ ಶತಮಾನದ ಉತ್ತರಾರ್ಧ ಮತ್ತು ೨೦ನೆ ಶತಮಾನದ ಪೂರ್ವಾರ್ಧದಲ್ಲಿ ಪಾಶ್ಚಾತ್ಯ ಸಮಾಜದ ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಕಾಣಿಸಿಕೊಂಡಿತು. ಈ ಅವಧಿಯಲ್ಲಿ ಆಧುನಿಕವಾದವು ಬೆಳವಣಿಗೆ ಹೊಂದಿದ ಉದಾರವಾದಿ ತಾತ್ವಿಕ ಚಿಂತನೆಗಳ ಸಡಿಲವಾದ ಒಂದು ಸಿದ್ಧಾಂತ ಎಂದು ಅಭಿಪ್ರಾಯವಾಗಿತ್ತು.

ಸಾಹಿತ್ಯದ ಆಧುನಿಕವಾದ ಅಥವಾ ಆಧುನಿಕತಾವಾದಿ ಸಾಹಿತ್ಯದ ಚಿಂತನೆ, ಅಭಿವ್ಯಕ್ತಿ ಕೂಡ ೧೯ನೆಯ ಶತಮಾನದ ಉತ್ತರಾರ್ಧ ಮತ್ತು ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಪ್ರಧಾನವಾಗಿ ಯೂರೋಪ್ ಮತ್ತು ಉತ್ತರ ಅಮೆರಿಕಾದ ಸಾಹಿತ್ಯ ಕ್ಷೇತ್ರಕ್ಕೂ ಹುಟ್ಟಿಕೊಂಡಿತು. ಈ ಸಾಂಪ್ರದಾಯಿಕವಾದ ಕಾವ್ಯ, ಕಥನ, ಪಾತ್ರ, ಚಿಂತನೆ, ನಂಬಿಕೆಗಳು ಹಾಗೂ ಗುಣಲಕ್ಷಣಗಳನ್ನೆಲ್ಲಾ ಲೇಖಕರು ಪ್ರಜ್ಞಾಪೂರ್ವಕವಾಗಿಯೇ ಮುರಿದರು. ಈ ಆಧುನಿಕತೆಯ ಗುಣಲಕ್ಷಣಗಳು ಈ ಸಾಂಪ್ರದಾಯಕ ಪದ್ಧತಿಗಳನ್ನು ಮುರಿದು ಮುಂದೆ ಸಾಹಿತ್ಯದಲ್ಲಿ ಹೊಸ ಕಾಳಜಿಗಳು ತುಂಬಾ ಶಕ್ತಿಯುತವಾಗಿ ಕಾಣಿಸಿಕೊಂಡವು. ಈ ಮುರಿಯುವಿಕೆಯು ಸಾಂಸ್ಥಿಕ ಧರ್ಮಗಳ ವಿರುದ್ಧವೂ ತೀವ್ರವಾಗಿ ಪ್ರಕಟವಾದವು. ಇದರಿಂದ ಸಾಹಿತ್ಯದಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ದೃಷ್ಟಿಕೋನಗಳೂ ಬದಲಾದವು. ಆದರೆ ಈ ಪ್ರಪಂಚದ ಕ್ರಿಯೆಯು ಸೃಷ್ಟಿಕರ್ತನಿಂದ ಸೃಷ್ಟಿಯಾಗಿದೆಯೆಂದೋ ಅಥವಾ ಸೃಷ್ಟಿಕರ್ತನಿಂದಲೇ ಪ್ರಪಂಚದ ಕ್ರಿಯೆಗಳೆಲ್ಲಾ ನಡೆಯುತ್ತಿವೆಯೆಂದೋ ನಂಬಲಾಗಿತ್ತು. ಆಗ ಈ ನಂಬಿಕೆಯನ್ನು ಹೀಗೆ ವಿಶ್ಲೇಷಿಸುತ್ತಾ ಮನುಷ್ಯನ ಬದುಕಿನಲ್ಲಿ ಹೊಸ ಶಖೆಯನ್ನು ಆರಂಭಿಸಿತು. ಈ ಬಗೆಯ ಆಧುನಿಕತೆಯ ಲಕ್ಷಣಗಳನ್ನು ದೇಸಾಯಿ ಅವರ ಕಥನ ಸಾಹಿತ್ಯದ ವಸ್ತು, ಪಾತ್ರ, ಚಿಂತನೆಗಳಲ್ಲಿ ಗುರುತಿಸಬಹುದು.

೨೦ನೆಯ ಶತಮಾನದ ವೈಶಿಷ್ಟ್ಯವೆಂದರೆ ಜಗತ್ತು ಹಲವಾರು ವೈಜ್ಞಾನಿಕ, ವೈಚಾರಿಕ ಸಾಧನೆಗಳ, ಸಂಘರ್ಷಗಳ ಮೂಲಕ ತೀರ ಚಿಕ್ಕದಾಗಿದೆ. ಜಗತ್ತಿನಲ್ಲಿ ಯಾವ ಮೂಲೆಯಲ್ಲಿ ಏನೇ ಘಟನೆ ನಡೆದರೂ ತಕ್ಷಣ ಅದು ಎಲ್ಲರಿಗೂ ಗೊತ್ತಾಗುತ್ತದೆ. ಹಾಗಾಗಿ ಜಗತ್ತಿನಲ್ಲಿಯ ಎಲ್ಲ ಒಲವು–ನಿಲುವುಗಳಿಗೆ, ಆಚಾರ–ವಿಚಾರಗಳಿಗೆ, ವಿಚಾರ ಪ್ರಣಾಳಿಕೆಗಳಿಗೆ, ಚಳುವಳಿ ಸಂಘಟನೆ ಸಂಘರ್ಷಗಳಿಗೆ ಎಲ್ಲರೂ ತೆರೆದುಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ಲೇಖಕ ತನ್ನ ಸ್ವಂತಿಕೆ ಹಾಗೂ ತನ್ನ 'ಸಂಸ್ಕೃತಿಯ ಅನನ್ಯತೆ'ಯನ್ನು ಗಟ್ಟಿಯಾಗಿ ಪ್ರಕಟಿಸುವ ಅವಶ್ಯಕತೆ ಎದುರಾಗುತ್ತದೆ. ಇಂತಹ ಸಂಘರ್ಷದಲ್ಲಿ, ಕರ್ಷಣೆಯಲ್ಲಿ ಸಂಸ್ಕೃತಿ, ಸಾಹಿತ್ಯ ಸಿಕ್ಕಿಹಾಕಿಕೊಳ್ಳುವುದರಿಂದ ಪ್ರಜ್ಞಾವಂತರಾದ ಲೇಖಕರು ಸಂಸ್ಕೃತಿಯ ಕ್ರಿಯಾಶೀಲತೆಯನ್ನು ರಕ್ಷಿಸಿಕೊಳ್ಳಲು ಹೋರಾಟ

ಮಾಡಬೇಕಾಗಿ ಬರುತ್ತದೆ. ಇಂತಹ ಸಂಕ್ರಮಣ ಸಂದರ್ಭದಲ್ಲಿ ತನ್ನ ಅಸ್ತಿತ್ವದ ವಿರುದ್ಧ ಹೋರಾಡುವ ಲೇಖಕ ಘರ್ಷಣೆ, ಸಂಘರ್ಷದ ಮುಕ್ತಿಯಲ್ಲಿಯೇ ತನ್ನತನವನ್ನು ಕಾಣಲು ಯತ್ನಿಸುತ್ತಾನೆ. ಅದು ಹೊರಗಿನ ಪ್ರಭಾವ ಇರಲಿ, ಅದು ಒಳಗಿನ ಪ್ರಭಾವ ಇರಲಿ, ಆಗ ಆಗುವ ಜೀವಂತ ಘರ್ಷಣೆಯಿಂದ ಲೇಖಕ ವೈಚಾರಿಕ ಕ್ರಿಯಾಶೀಲತೆಗೆ ತೀಕ್ಷ್ಣತೆ ತಂದುಕೊಳ್ಳುತ್ತಾನೆ. ನವ್ಯಸಾಹಿತ್ಯದಲ್ಲಿ ಆದದ್ದೂ ಈ ಬಗೆಯ ಕರ್ಷಣೆಯೇ. ದೇಸಾಯಿ ಅವರಿಗೆ "ವೈಚಾರಿಕತೆ ಅಲ್ಲದ ಕೃತಿ, ಕೃತಿಯಿಲ್ಲದ ವೈಚಾರಿಕತೆಗಿಂತ ಹೆಚ್ಚು ಅಪಾಯಕಾರಿ" ಎಂಬ ನಂಬಿಕೆ ಇದೆ. ಹಾಗಾಗಿ ಯಾವುದೇ ಹೊರಗಿನ ಅಥವಾ ಒಳಗಿನ ಯಾವುದೇ ಪ್ರಭಾವ, ಪ್ರೇರಣೆಗಳಿದ್ದರೂ ಅವುಗಳನ್ನು ದೀರ್ಘವಾಗಿ, ಆಳವಾಗಿ ಅಭ್ಯಾಸ ಮಾಡಬೇಕೆಂಬುದು ದೇಸಾಯಿ ಅವರ ಅಭಿಪ್ರಾಯ. "ಈ ಅಭ್ಯಾಸ, ಘರ್ಷಣಾತ್ಮಕ, ಚರ್ಚಾತ್ಮಕ ವಾದಗಳಿಂದಲೇ ವೈಚಾರಿಕತೆ ಬೆಳೆಯುತ್ತದೆ. ವೈಚಾರಿಕತೆ ಬೆಳೆದರೇನೇ ಕೃತಿಗೆ ಕಣ್ಣು ಮೂಡುತ್ತದೆ. ಕೃತಿಗೆ ದಿಕ್ಕೂ ಕಾಣುತ್ತದೆ" ಎಂಬ ಗಾಢ ನಂಬಿಕೆ ದೇಸಾಯಿ ಅವರಿಗೆ ಇದೆ. ಅವರ ಈ ಅಭಿಪ್ರಾಯವನ್ನು ಮುಂದೆ ಅವರ ಕೃತಿಗಳಿಂದಲೇ ಪರಿಶೀಲಿಸಲಾಗುವುದು.

ನವೋದಯದ ಸಂದರ್ಭದಲ್ಲಿ ಕುವೆಂಪುಗೆ ವೈಜ್ಞಾನಿಕ, ವೈಚಾರಿಕ ಹಾಗೂ ಆಧ್ಯಾತ್ಮಿಕ ಶ್ರದ್ಧೆ ಮುಖ್ಯವಾದರೆ, ಮಾಸ್ತಿಗೆ ಧಾರ್ಮಿಕ ಶ್ರದ್ಧೆ ಮುಖ್ಯವಾಗುತ್ತದೆ; ಪುತಿನಗೆ ಭಾಗವತ ಪರಂಪರೆ ಮುಖ್ಯವಾದರೆ, ಬೇಂದ್ರೆಗೆ ಜಾನಪದ ಪರಂಪರೆ ಅಥವಾ ಮೌಖಿಕ ಪರಂಪರೆ ಮುಖ್ಯವಾಗುತ್ತದೆ. ಇವರ ನಡುವೆ ಶ್ರೀರಂಗ, ಕೈಲಾಸಂ, ಕಾರಂತ ಅಂತಹ ಲೇಖಕರಿಗೆ ಇವುಗಳಿಗಿಂತ ಭಿನ್ನವಾದ ವೈಚಾರಿಕವಾದ ಸಂಘರ್ಷ ಮುಖ್ಯವಾಗುತ್ತದೆ. ಆದರೆ ನವೋದಯದ ಎಲ್ಲಾ ಲೇಖಕರಿಗೂ ತಮ್ಮ ಸಾಹಿತ್ಯದಲ್ಲಿ ಗಾಂಧೀಜಿಯವರ ಅನುಕಂಪವಾದ, ಸಹಾನುಭೂತಿ ಮನೋಧರ್ಮ ಹಾಗೂ ಬೇರೆ ಬೇರೆ ಸಾಹಿತ್ಯದ ಪ್ರೇರಣೆ – ಪ್ರಭಾವಗಳಿಂದ ಪಡೆದಂತಹ ಮಾನವತಾವಾದ ಮುಖ್ಯವಾಗುತ್ತದೆ. ಅದಕ್ಕೆ ಅನುಗುಣವಾಗಿ ಅವರು ಸೃಷ್ಟಿಸುವ ಕಥನದಲ್ಲಿ ಅನಾವರಣಗೊಳ್ಳುವ ವಸ್ತುವಿನಲ್ಲಿ ಹಾಗೂ ಪಾತ್ರಗಳಲ್ಲಿ ಇದು ಕಾಣಿಸಿಕೊಳ್ಳುತ್ತವೆ. ಜೊತೆಗೆ ನವೋದಯದ ಲೇಖಕರಲ್ಲಿ ವಸಾಹತುಶಾಹಿ, ಜಾತಿಪದ್ಧತಿ ಮತ್ತು ಹೆಣ್ಣು–ಗಂಡಿನ ನಡುವಿನ ವಾಸ್ತವತೆಯ ಸಂಘರ್ಷ ಢಾಳಾಗಿಯೇ ಪ್ರಕಟವಾಗಿದೆ ಹಾಗೂ ನವೋದಯ ಕಥನ ಸಾಹಿತ್ಯದಲ್ಲಿ ರಾಷ್ಟ್ರೀಯ ಪ್ರಜ್ಞೆ, ಆದರ್ಶ ಪಾತ್ರಗಳ ನಿರ್ಮಾಣ ಪ್ರಧಾನವಾಗಿ ಕಾಣಿಸಿಕೊಂಡರೆ, ಪ್ರಗತಿಶೀಲ ಕಥನ ಸಾಹಿತ್ಯದಲ್ಲಿ ಶೋಷಣೆ, ವೇಶ್ಯಾಸಮಸ್ಯೆ, ವಂಚನೆ, ಅನ್ಯಾಯ, ಜೀತ ಹಾಗೂ ಸಾಮಾಜಿಕ ನ್ಯಾಯ ಪ್ರತಿಪಾದನೆ ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ. ಆದರೆ, ನವ್ಯಸಾಹಿತ್ಯದಲ್ಲಿ ಇವುಗಳಿಗೆ ಭಿನ್ನವಾದ ವಸ್ತು, ಭಾಷೆ ಮತ್ತು ಅಭಿವ್ಯಕ್ತಿ ವಿಧಾನದಲ್ಲಿ ಸಾವಯವತೆ ಕಾಣಿಸಿಕೊಂಡು ವ್ಯಕ್ತಿಯ ಅಂತರಂಗದ ಅಭಿವ್ಯಕ್ತಿಗೆ ಒತ್ತು ಬೀಳುತ್ತದೆ. ವ್ಯಕ್ತಿಯ ಮಾನಸಿಕ ಮತ್ತು ಸಾಮಾಜಿಕ ಸಂಘರ್ಷಗಳು ಇಲ್ಲಿ ಪ್ರಧಾನವಾಗುತ್ತವೆ. ಅನಂತರ ನವ್ಯೋತ್ತರ ಕಥನ ಸಾಹಿತ್ಯದಲ್ಲಿ ಅಂದರೆ, ದಲಿತ–ಬಂಡಾಯ ಕಥನ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವತೆ, ಶೋಷಣೆ ಹಾಗೂ ಪ್ರತಿಭಟನೆಯ ಅಂಶಗಳು ಪ್ರಧಾನವಾಗುತ್ತವೆ. ಹೀಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಭಿನ್ನ ರೀತಿಯಲ್ಲಿ ಸಂಘರ್ಷಗಳು ನಡೆದಿರುವುದನ್ನು ಕಾಣುತ್ತೇವೆ.

೧.೩ ಅಧ್ಯಯನದ ವೈಧಾನಿಕತೆ

ಶಾಂತಿನಾಥ ದೇಸಾಯಿ ಅವರು ಅಸ್ತಿತ್ವವಾದವನ್ನು ಒಪ್ಪಿಕೊಳ್ಳುವುದರ ಜೊತೆಗೆ ಮಾರ್ಕ್ಸ್‌ವಾದವನ್ನೂ ಒಳಗೊಳ್ಳುವುದು ತಮಗೆ ಇಷ್ಟ ಎಂದು ಹೇಳಿಕೊಂಡಿದ್ದಾರೆ. ದೇಸಾಯಿ ಅವರು ಮಾರ್ಕ್ಸ್‌ವಾದದಿಂದ ಪ್ರೇರಿತರಾದರೂ ಸಮಾಜವನ್ನು ಮಾನವೀಯ ನೆಲೆಯಿಂದ ನೋಡಿದಂತಹ ಮಾರ್ಕ್ಸ್‌ವಾದಿ ಮಾನವತಾವಾದದ ಲೇಖಕರಾಗಿದ್ದಾರೆ. ಅವರು ಸಮಾಜದ ಎಲ್ಲಾ ಸ್ತರದ ಮಹಿಳೆಯರನ್ನು ತಮ್ಮ ಕಥನ ಸಾಹಿತ್ಯದಲ್ಲಿ ತಂದಿದ್ದಾರೆ. ದೇಸಾಯಿ ಅವರ ಕಥೆಗಳಲ್ಲಿ ಸ್ತ್ರೀ ಕೇಂದ್ರದಲ್ಲಿಯೇ ಉಳಿಯುತ್ತಾಳೆ. ಹೆಣ್ಣಿನ ವ್ಯಕ್ತಿ ಸ್ವಾತಂತ್ರ್ಯಕ್ಕೆ ದೇಸಾಯಿ ಅವರು ಗೌರವವನ್ನು ಕೊಡುತ್ತಾರೆ.

ದೇಸಾಯಿ ಅವರಿಗೆ ಪರಂಪರೆಯ ಅರಿವಿನ ಜೊತೆ ಹೊಸ ಪ್ರಭಾವಗಳನ್ನು ಸ್ವೀಕರಿಸುವುದು ಅನಿವಾರ್ಯವಾಗಿತ್ತು. ಅನೇಕ ಸಂದರ್ಭಗಳಲ್ಲಿ ಅವರ ಸ್ತ್ರೀ ಪಾತ್ರಗಳು ಪರಂಪರೆಗೆ ಪ್ರತಿರೋಧ ವ್ಯಕ್ತಪಡಿಸಿ ಆಕ್ರಮಣಕಾರಿ ಸ್ವಭಾವದಿಂದ ವರ್ತಿಸುವುದನ್ನು ಮತ್ತು ಸ್ಥಾಪಿತ ವ್ಯವಸ್ಥೆಯ ವಿರುದ್ಧ ಪುರುಷರು ಸಿಡಿದೇಳುವಂತೆ ಹೆಣ್ಣು ಕೂಡ ಸಿಡಿದೇಳುವ ಪ್ರವೃತ್ತಿಯನ್ನು ಹೊಂದಿರುವುದು ಇವರ ಒಟ್ಟಾರೆ ಕಥನ ಸಾಹಿತ್ಯದಲ್ಲಿ ಕಂಡು ಬರುವುದನ್ನು ಅಧ್ಯಯನ ಮಾಡಲಾಗುವುದು.

ಈ ಹಿನ್ನೆಲೆಯಲ್ಲಿ ಶಾಂತಿನಾಥ ದೇಸಾಯಿ ಅವರ ಒಟ್ಟು ಕಥೆ-ಕಾದಂಬರಿಗಳನ್ನು ಒಳಗೊಂಡಂತೆ ಕುರಿತು "ಕಥನ" ಎಂಬ ಪರಿಭಾಷೆಯ ಚೌಕಟ್ಟಿನೊಳಗೆ ತಂದುಕೊಂಡು ವಿಶ್ಲೇಷಿಸಲಾಗುವುದು. ಹೊರಗಿನ ಪ್ರೇರಣೆಗಳನ್ನು ಜೀರ್ಣಿಸಿಕೊಂಡು ತಮ್ಮ ಸ್ವತಂತ್ರ ಪ್ರತಿಭೆಗೆ ಹೊಸ ಅಭಿವ್ಯಕ್ತಿಗಳನ್ನು ಆವಿಷ್ಕಾರ ಮಾಡಿಕೊಳ್ಳುವ ದೇಸಾಯಿ ಅವರ ಚಿಂತನಾ ಕ್ರಮವನ್ನು ಇಲ್ಲಿ ಅಧ್ಯಯನಕ್ಕೆ ಗುರಿಪಡಿಸಲಾಗುವುದು.

ದೇಸಾಯಿ ಅವರ ಒಟ್ಟು ಕಥಾಸಾಹಿತ್ಯವನ್ನು ಆಸ್ವಾದನೆ, ವ್ಯಾಖ್ಯಾನ, ವಿಶ್ಲೇಷಣೆ ಮತ್ತು ಕೆಲವು ಸಂದರ್ಭಗಳಲ್ಲಿ ಅದರ ಮೌಲ್ಯ ನಿರ್ಧಾರ – ಹೀಗೆ ವಿವರಣೆ ಮತ್ತು ವಿಶ್ಲೇಷಣೆಗಳೆರಡನ್ನೂ ಒಟ್ಟೊಟ್ಟಿಗೆ ನಿರ್ವಚನ ಮಾಡಿಕೊಂಡು ಬರೆಯುವ ವೈಧಾನಿಕತೆಯನ್ನು ಪ್ರಸ್ತುತ ಮಹಾಪ್ರಬಂಧದ ಉದ್ದೇಶವಾಗಿದೆ.

ಅಧ್ಯಾಯ : ಎರಡು

ಕನ್ನಡ ಸಾಹಿತ್ಯದಲ್ಲಿ ಸಂಘರ್ಷದ ಸ್ವರೂಪ ಮತ್ತು ಬೆಳವಣಿಗೆ

೨.೧. ಪ್ರಾಚೀನ ಕನ್ನಡ ಸಾಹಿತ್ಯ

೨.೨. ಆಧುನಿಕ ಕನ್ನಡ ಸಾಹಿತ್ಯ

ಅಧ್ಯಾಯ : ಎರಡು

ಕನ್ನಡ ಸಾಹಿತ್ಯದಲ್ಲಿ ಸಂಘರ್ಷದ ಸ್ವರೂಪ ಮತ್ತು ಬೆಳವಣಿಗೆ

೨.೧ ಪ್ರಾಚೀನ ಕನ್ನಡ ಸಾಹಿತ್ಯ

ಕನ್ನಡ ಭಾಷೆ ಮತ್ತು ಸಾಹಿತ್ಯ ಬಹಳ ಪ್ರಾಚೀನತೆಯನ್ನು ಹೊಂದಿದೆ. ಸಾಹಿತ್ಯ ಚರಿತ್ರೆಯಲ್ಲಿ ಜನಪದ ಸಾಹಿತ್ಯ ಪ್ರಾಚೀನ, ವಿಪುಲ ಹಾಗೂ ವಿವಿಧತೆಯನ್ನು ಹೊಂದಿದೆ. ಅಂತೆಯೇ ಗ್ರಂಥಸ್ಥ ಸಾಹಿತ್ಯವೂ ಕೂಡ. ಕನ್ನಡ ಸಾಹಿತ್ಯದ ಉಗಮ ಯಾವಾಗ ಆಯಿತು ಎಂಬುದನ್ನು ಖಚಿತವಾಗಿ ಹೇಳಲು ಯಾವುದೇ ಆಧಾರಗಳು ಇಲ್ಲ. ಆದರೆ 'ಒಂಭತ್ತನೆಯ ಶತಮಾನದಲ್ಲಿ ರಚಿತವಾಗಿರುವ 'ಕವಿರಾಜಮಾರ್ಗ' ಕನ್ನಡದಲ್ಲಿ ಉಪಲಬ್ಧವಾಗಿರುವ ಪ್ರಥಮ ಗ್ರಂಥವಾಗಿದೆ'. (ಮುಗಳಿ.ರಂ.ಶ್ರೀ., ಪು. ೧೯) ಮುಂದೆ ರಚನೆಯಾದ ವಡ್ಡಾರಾಧನೆ ಜೈನ ಧಾರ್ಮಿಕ ಕಥೆಗಳ ಸಂಗ್ರಹವಾಗಿದೆ. ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಲೌಕಿಕ ಮತ್ತು ಆಗಮಿಕ ಕಾವ್ಯಗಳ ರಚನೆಯಾಯಿತು. ಲೌಕಿಕ ಕಾವ್ಯಗಳು ಸರ್ವೇ ಸಾಮಾನ್ಯವಾಗಿ ಆಶ್ರಯದಾತರ ಚರಿತ್ರೆ, ತತ್ಕಾಲೀನ ರಾಜಕೀಯ, ಸಾಮಾಜಿಕ ವಿಷಯಗಳನ್ನು ಒಳಗೊಂಡ ಚಾರಿತ್ರಿಕ ಕಾವ್ಯಗಳಾಗಿವೆ. ರಾಮಾಯಣ–ಮಹಾಭಾರತ ಪುರಾಣಗಳ ಕಥಾ ವಸ್ತುವನ್ನು ಒಳಗೊಂಡಿವೆ. ಆಗಮಿಕ ಕಾವ್ಯಗಳು ಜೈನ ಧಾರ್ಮಿಕ ಕಾವ್ಯಗಳಾಗಿವೆ. ಈ ಪರಂಪರೆ ಬಹುತೇಕ ಹನ್ನೆರಡನೇ ಶತಮಾನದ ಮಧ್ಯದವರೆಗೆ ಮುಂದುವರೆದು ಪ್ರೌಢ ಚಂಪೂ ಕಾವ್ಯ ಕೃತಿಗಳು ರಚನೆಗೊಂಡವು.

ಹನ್ನೆರಡನೇ ಶತಮಾನದ ಮಧ್ಯದಿಂದ ಹದಿನೈದನೇ ಶತಮಾನದವರೆಗಿನ ಅವಧಿಯು ಕನ್ನಡ ಸಾಹಿತ್ಯದಲ್ಲಿ ಅನೇಕ ದೃಷ್ಟಿಯಿಂದ ವೈವಿಧ್ಯತೆಯನ್ನು, ವೈಶಿಷ್ಟ್ಯವನ್ನು ಹೊಂದಿದೆ. ಇದುವರೆವಿಗೂ ಸಾಹಿತ್ಯವು ಹೆಚ್ಚಾಗಿ ಪರಂಪರಾಗತವಾಗಿತ್ತು. ಈ ಯುಗದಲ್ಲಿ ತಲೆದೋರಿದ ಧಾರ್ಮಿಕ ಸಾಮಾಜಿಕ ಜೀವನದಲ್ಲಿ ಮೂಲಭೂತವಾದ ವ್ಯತ್ಯಾಸಗಳು, ಅದಕ್ಕೆ ವಿರೋಧಕವಾದ ಪ್ರತಿಕ್ರಿಯೆಗಳು, ಸಂಘರ್ಷ, ಸಾಮರಸ್ಯಗಳು ಕನ್ನಡ ಸಾಹಿತ್ಯದ ಮೇಲೆ ತಮ್ಮ ಆಳವಾದ ಪ್ರಭಾವವನ್ನು ಬೀರಿದವು. ಹೊಸ ಬಗೆಯ ಪ್ರಯೋಗಗಳು ಕಂಡು ಬಂದವು. ಪಂಡಿತ ಕವಿಗಳ ಜೊತೆಗೆ ಆಧ್ಯಾತ್ಮಿಕ ಅನುಭಾವಿಗಳೂ ಕೂಡ ಸಾಹಿತ್ಯದ ನಿರ್ಮಾತೃಗಳಾದರು (ಮುಗಳಿ.ರಂ.ಶ್ರೀ., ಪು. ೧೩೩). ಈ ಯುಗದಲ್ಲಿ ರಾಜ್ಯ–ಸಾಮ್ರಾಜ್ಯಗಳ ಉದಯ–ಅಸ್ತಮಾನಗಳು, ಯುದ್ಧ ಕೋಲಾಹಲಗಳು ಮಾತ್ರವಲ್ಲದೆ ಜನಜೀವನವನ್ನೇ ಅಲ್ಲಾಡಿಸಿ ಹೊಸ ಪಲ್ಲಟಗಳನ್ನು ಉಂಟು ಮಾಡಿದ ರಾಜಕೀಯ–ಧಾರ್ಮಿಕ ಸ್ಥಿತ್ಯಂತರಗಳು ತಲೆದೋರಿದವು. ವಚನ ಸಾಹಿತ್ಯದ ಉದಯವಾಯಿತು. ರಗಳೆ,

ತ್ರಿಪದಿ, ಷಟ್ಪದಿ ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳು ರಚನೆಗೊಂಡವು. ಶತಕ ಸಾಹಿತ್ಯದ ಉಗಮವಾಯಿತು.

ಹದಿನೈದನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನದ ಕೊನೆಯವರೆಗಿನ ಐದು ಶತಮಾನಗಳ ಅವಧಿಯು ವಿವಿಧ ಘಟನೆಗಳಿಂದಾಗಿ ಜಟಿಲವಾಗಿದೆ. ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಉನ್ನತಿಯ ಶಿಖರವನ್ನೇರಿ ಅವನತಿಯ ಹಾದಿಯನ್ನು ತಲುಪಿತು. ರಾಜಕೀಯವಾಗಿ ವಿಘಾತಶಕ್ತಿಗಳನ್ನೂ ಅಂತಃಕಲಹದ ಪ್ರಬಲ ಪ್ರವೃತ್ತಿಗಳನ್ನೂ ತಡೆಗಟ್ಟಿದ ಸಾಮ್ರಾಜ್ಯಶಕ್ತಿ ನಾಶವಾಗಿ ನಿರಂಕುಶತ್ವ ತಲೆದೋರಿತು. ಸಂಯೋಜಕವೂ, ಸಂರಕ್ಷಕವೂ ಆದ ಏಕಪ್ರಭುತ್ವದ ಸ್ಥಾನದಲ್ಲಿ ದಕ್ಷಿಣ ಭಾರತದಲ್ಲೆಲ್ಲಾ ವಿಘಟನಕಾರಿಯಾದ ಸಂಕುಚಿತ ಸ್ವಾರ್ಥಪರವಾದ ಶಕ್ತಿಗಳು ತಲೆದೋರಿದವು. ೧೮೦೦ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಭಾರತಕ್ಕೆ ಬಂದ ಬ್ರಿಟೀಷರ ಕುತಂತ್ರಕ್ಕೆ ಒಳಗಾದ ಕರ್ನಾಟಕದ ದೊರೆಗಳು ತಮ್ಮ ತಮ್ಮ ಸತ್ವವನ್ನು ಕಳೆದುಕೊಂಡರು. 'ನಾಡಿನ ಬಹುಭಾಗ ಪರಕೀಯರ ಆಧಿಪತ್ಯಕ್ಕೆ ಒಳಗಾಯಿತು. ಆದರೆ ಮೈಸೂರು ರಾಜ್ಯವು ವಿಜಯನಗರದ ರತ್ನ ಸಿಂಹಾಸನವನ್ನೂ ಕನ್ನಡ ಸಂಸ್ಕೃತಿ, ಪರಂಪರೆಯನ್ನು ಕಾಯ್ದುಕೊಂಡು ಬಂದಿತು. ಮೈಸೂರು ಅರಸರು ದಕ್ಷಿಣ ಕರ್ನಾಟಕವನ್ನು ತಮ್ಮ ಅಂಕೆಯಲ್ಲಿ ಇಟ್ಟುಕೊಂಡು ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಪೋಷಿಸಿದರು. ಹತ್ತೊಂಭತ್ತನೇ ಶತಮಾನದ ಕೊನೆಯ ವೇಳೆಗಾಗಲೇ ಮೈಸೂರು ರಾಜ್ಯವನ್ನು ಬಿಟ್ಟು ಉಳಿದರ್ಧ ಕರ್ನಾಟಕ ಹೆಚ್ಚಾಗಿ ಬ್ರಿಟೀಷರ ವಶವಾಗಿತ್ತು. ಇನ್ನು ಉಳಿದ ಭಾಗವು ಹಲವಾರು ತುಂಡುಗಳಾಗಿ ಸಣ್ಣ ಪುಟ್ಟ ಸಂಸ್ಥಾನಗಳಲ್ಲಿ ಹಾಗೂ ನಿಜಾಮ ರಾಜ್ಯದಲ್ಲಿ ಹರಿದು ಹಂಚಿಹೋಗಿತ್ತು'. (ಮುಗಳಿ.ರಂ.ಶ್ರೀ., ಪು. ೨೧೮). ಈ ಎಲ್ಲಾ ಅಂಶಗಳು ಅಂದಿನ ಸಾಹಿತ್ಯದಲ್ಲಿ ಮೂಡಿ ಬಂದವು.

ಸಾಹಿತ್ಯವು ರಾಜಾಶ್ರಯದಲ್ಲಿ ಬೆಳೆದು ಬಂದಿತು. ಈ ಯುಗದಲ್ಲಿ ದಾಸ ಸಾಹಿತ್ಯವು ಸಮೃದ್ಧವಾಗಿ ಬೆಳೆಯಿತು. ಈ ಯುಗದಲ್ಲಿ ಪದ್ಯವೇ ಹೆಚ್ಚಾಗಿದ್ದರೂ ಕೂಡ ಗದ್ಯದ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಈ ಎಲ್ಲಾ ಅಂಶಗಳು ಇಪ್ಪತ್ತನೆಯ ಶತಮಾನದಲ್ಲಿ ಉದಯವಾದ ಸಾಹಿತ್ಯಕ್ಕೆ ಹಿನ್ನೆಲೆಯನ್ನು ಕಲ್ಪಿಸಿಕೊಟ್ಟವು.

ಹೊಸಗನ್ನಡ ಸಾಹಿತ್ಯದ ಆರಂಭಕಾಲ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ. ಈ ಕಾಲಘಟ್ಟ ಹಾಗೂ ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳು ಪರಿವರ್ತನೆಯ ಘಟ್ಟವಾಗಿದೆ. ಇದಕ್ಕೆ ಬಹು ಮುಖ್ಯವಾದ ಕಾರಣವೆಂದರೆ ದೇಶದಲ್ಲಿ ಆಗುತ್ತಿದ್ದ ಬಹುಮುಖವಾದ ಕ್ರಾಂತಿ. ಭಾರತಕ್ಕೆ ಬ್ರಿಟೀಷರ ಆಗಮನದ ನಂತರ ನಡೆದ ವ್ಯಾಪಕ ಮುಖಾಮುಖಿಯ ಪರಿಣಾಮಗಳು ಭಾರತೀಯ ಸಂಸ್ಕೃತಿಯಲ್ಲಿ ಕ್ರಾಂತಿಕಾರಕ ಪರಿವರ್ತನೆಯನ್ನು ಉಂಟು ಮಾಡಿದವು. ಈ ಮುಖಾಮುಖಿಯ ಸ್ವರೂಪವೇ ದ್ವಂದ್ವದಿಂದ ಕೂಡಿತ್ತು. ಆಧುನಿಕ ವಿದ್ಯಾಭ್ಯಾಸ, ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆ, ಮನಶ್ಶಾಸ್ತ್ರೀಯ ಅಧ್ಯಯನಗಳು, ಕೈಗಾರಿಕೀಕರಣದಿಂದಾಗಿ ಉಂಟಾದ ನಿರುದ್ಯೋಗ ಸಮಸ್ಯೆಯ ಪರಿಣಾಮಗಳು ಭಾರತೀಯ ಜನ ಜೀವನದ ಮೇಲೆ ಪ್ರಭಾವ ಬೀರಿ ಜನರಲ್ಲಿ ಗೊಂದಲಗಳು ಮೂಡಿದರೂ ಕೂಡ ವಿಭಿನ್ನವಾಗಿ ಆಲೋಚಿಸುವ ಮನೋಭಾವ

ಮೂಡತೊಡಗಿತು. ಇದರಿಂದಾಗಿ ಭಾರತೀಯರು ತಮ್ಮ ಸಂಸ್ಕೃತಿಯನ್ನು 'ಅನ್ಯ ಸಂಸ್ಕೃತಿಯ ಮೌಲ್ಯಗಳ ಬೆಳಕಿನಲ್ಲಿ' ಪರೀಕ್ಷಿಸತೊಡಗಿದರು. ಭಾರತೀಯರ ಜೀವನ ಕ್ರಮ, ಉಡುಗೆ, ತೊಡುಗೆ, ಸಂಸ್ಕೃತಿಗಳಲ್ಲಿ ಬದಲಾವಣೆಗಳಾಗತೊಡಗಿದವು. ಇಂತಹ ಬದಲಾವಣೆ ಸಾಹಿತ್ಯ ಕ್ಷೇತ್ರದಲ್ಲಿಯೂ ಪ್ರವೇಶ ಪಡೆದು ಸಹಜವಾಗಿಯೇ ಸಾಹಿತ್ಯದ ವಸ್ತು, ರೂಪ ತಂತ್ರಗಳಲ್ಲಿ ಭಿನ್ನತೆ ಕಾಣಿಸಿಕೊಂಡಿತು.

ಯೂರೋಪಿನಲ್ಲಿ ಪ್ರಾರಂಭವಾದ ರೋಮ್ಯಾಂಟಿಕ್ ಸಾಹಿತ್ಯ ಪರಂಪರೆಯ ಪ್ರಭಾವಕ್ಕೆ ಒಳಗಾದ ಕವಿಗಳಿಗೆ ನಿಸರ್ಗ ಚೆಲುವಿನ ತವರು ಮಾತ್ರವಲ್ಲ. ಜೀವದಿಂದ ಭಾವದಿಂದ ಸ್ಪಂದಿಸುವ ವಿಶಿಷ್ಟ ಸೃಷ್ಟಿ. ವರ್ಡ್ಸ್‌ವರ್ತ್, ಶೆಲ್ಲಿ, ಬೈರನ್ ಮುಂತಾದ ಪ್ರಗತಿಪರರ ಧೋರಣೆಯಿಂದ ರೋಮ್ಯಾಂಟಿಕ್ ಸಾಹಿತ್ಯ ಪರಂಪರೆ ಹೊಸ ಆಯಾಮವನ್ನು ಪಡೆಯಿತು. ಷೇಕ್ಸ್‌ಪಿಯರ್‌ನಿಂದ ಟೆನಿಸನ್‌ವರೆಗೆ ಇಂಗ್ಲೀಷ್ ಕವಿಗಳು ನಿಸರ್ಗದ ಚೆಲುವನ್ನು ಸೂಕ್ಷ್ಮವಾಗಿ ಗಮನಿಸಿ ಸವಿವರವಾಗಿ ಗುರುತಿಸಿ ತಮ್ಮ ವರ್ಣನೆಯಲ್ಲಿ ಪ್ರತಿಸೃಷ್ಟಿಯನ್ನೆ ಸಾಧಿಸಿದ್ದಾರೆ. ಪಾಶ್ಚಾತ್ಯ ಕಾವ್ಯದಲ್ಲಿ ನಿಸರ್ಗ ಒಂದು ಜೀವಂತ ಶಕ್ತಿ, ಚೆಲುವಿನ ತವರು, ಮಿತ್ರ, ಗುರು ಎಲ್ಲವೂ ಆಗಿದೆ. ನಿಸರ್ಗದೊಡಗಿನ ಈ ಒಡನಾಟ ನಿಸರ್ಗದ ಸ್ವರೂಪ ಎಲ್ಲವನ್ನೂ ಒಳಗೊಂಡ ಆಂಗ್ಲ ನವೋದಯ ಸಾಹಿತ್ಯ ಭಾರತೀಯರ ಲೇಖಕರಿಗೆ ಹೊಸದಾದ ಪ್ರಭಾವವನ್ನು ಬೀರಿತು.

ಕನ್ನಡದಲ್ಲಿ ಹೊಸ ಬಗೆಯ ಸಾಹಿತ್ಯ ಸೃಷ್ಟಿಗೆ ಪ್ರೇರಣೆ ಇಂಗ್ಲೀಷ್ ವಿದ್ಯಾಭ್ಯಾಸ. ಇಂಗ್ಲೀಷ್ ವಿದ್ಯಾಭ್ಯಾಸದಿಂದ ಹೊಸ ಜೀವನ ಮನೋಧರ್ಮದ ದರ್ಶನದೊಂದಿಗೆ, ಹೊಸದೊಂದು ಸಾಹಿತ್ಯ ಜಗತ್ತು ಲಭಿಸಿತು. 'ಇಂಗ್ಲೀಷ್ ಭಾಷೆ ಯೂರೋಪಿನ ಚಿಂತನೆ ಹಾಗೂ ಸಾಹಿತ್ಯ ಭಂಡಾರವನ್ನು ತೆರೆಯುವ ಬೀಗದ ಕೈಯಾಯಿತು' (ಶೇಷಗಿರಿರಾವ್ ಎಲ್.ಎಸ್., ಪು. ೧೬.) ಸುಮಾರು ಐದು ಶತಮಾನಗಳಿಗೂ ಹೆಚ್ಚಿನ ಕಾಲದ ಇಂಗ್ಲೀಷ್ ಸಾಹಿತ್ಯವು ವಿದ್ಯಾರ್ಥಿಗಳಿಗೆ ಒಮ್ಮೆಲೆ ಲಭ್ಯವಾಯಿತು. ಇಂಗ್ಲೀಷ್ ಸಾಹಿತ್ಯ, ಚರಿತ್ರೆಗಳ ಅಧ್ಯಯನದಿಂದ ಎಲ್ಲವನ್ನೂ ಪ್ರಶ್ನಿಸುವ, ವಿಶ್ಲೇಷಿಸುವ ಮನೋಧರ್ಮ ಬೆಳೆಯತೊಡಗಿತು. ರಾಜನು ದೇವರ ಪ್ರತಿನಿಧಿ ಎಂಬ ನಂಬಿಕೆಯನ್ನು ಹೊಂದಿದ್ದ ಜನತೆಯೂ ಕೂಡ ರಾಜನ ಅಧಿಕಾರವನ್ನು ಪ್ರಶ್ನಿಸುತ್ತಾ ಪ್ರಜೆಗಳ ಸ್ವಾತಂತ್ರ್ಯಕ್ಕೆ ಹೋರಾಟ ನಡೆಸಿದ ರೀತಿ, ಅವುಗಳ ಹಿಂದಿದ್ದ ಜೀವನ ಮನೋಧರ್ಮ ಇವುಗಳ ದರ್ಶನವಾಯಿತು. ಜೊತೆಗೆ ಸಾಹಿತ್ಯ- ಜೀವನಗಳ ದರ್ಶನ ಎಷ್ಟು ವ್ಯಾಪಕವಾದುದು, ನಿಕಟವಾದುದು, ಸಾಹಿತ್ಯ ಸಮಾಜದ ಮತ್ತು ವ್ಯಕ್ತಿಯ ಜೀವನದ ಎಲ್ಲ ಸಂವೇದನೆಗಳಿಗೆ ಹೇಗೆ ಸ್ಪಂದಿಸುತ್ತದೆ ಎಂಬುದರ ಕುರಿತು ಜನತೆಯಲ್ಲಿ ಹೊಸ ತಿಳುವಳಿಕೆ ಮೂಡತೊಡಗಿತು. ಕೇವಲ ಭಾರತೀಯ ಸಾಹಿತ್ಯವನ್ನಷ್ಟೆ ಓದಿದ್ದವರಿಗೆ ಇವೆಲ್ಲವೂ ಹೊಸ ಅನುಭವಗಳನ್ನು ನೀಡತೊಡಗಿದವು. 'ಸಾಹಿತ್ಯ-ಜೀವನಗಳ ಸಂಬಂಧದ ವಿಶ್ವರೂಪದರ್ಶನ ದೊರಕಿದಂತೆಯೇ ಅಂದಿನ ವಿದ್ಯಾರ್ಥಿಗಳಿಗೆ ವಿಫುಲವಾದ ಶ್ರೀಮಂತವಾದ, ವೈವಿಧ್ಯಮಯವಾದ ಸಾಹಿತ್ಯದ ದರ್ಶನವೂ ದೊರೆಯಿತು. ಮಹಾಕಾವ್ಯ ಪ್ರಕಾರ ಭಾರತೀಯರಿಗೆ ಹೊಸತಾಗಿರಲಿಲ್ಲವಾದರೂ 'ಇಲಿಯಡ್', 'ಒಡೆಸಿ', 'ಪ್ಯಾರಾಡೈಸ್ ಲಾಸ್ಟ್' ನಂತಹ ಕೃತಿಗಳಲ್ಲಿ ಮಹಾಕಾವ್ಯದ ಹೊಸದೊಂದು ಸಂಪ್ರದಾಯದ ಪರಿಚಯವಾಯಿತು. ಇಷ್ಟರಲ್ಲಾಗಲೇ ಕನ್ನಡದ ವಚನಗಳು, ದಾಸ ಸಾಹಿತ್ಯದಲ್ಲಿ ಭಾವಗೀತೆಯ ಅಂಶಗಳು ಪ್ರಕಟವಾಗಿದ್ದವು. ಆದರೆ ಮನುಷ್ಯನ ಅತಿಸೂಕ್ಷ್ಮ ಭಾವನೆಗಳು, ಕನಸುಗಳು, ನೋವು ನಿರಾಸೆಗಳು ಎಲ್ಲ ಉತ್ಕೃಷ್ಟ

ಕಾವ್ಯದಲ್ಲಿ ಅಭಿವ್ಯಕ್ತಿಗೊಂಡ ಆ ಕಾವ್ಯಗಳ ಅಭ್ಯಾಸ ಕನ್ನಡಿಗರ ಪಾಲಿಗೆ ವಿಶಿಷ್ಟ ಅನುಭವವನ್ನು ನೀಡಿತು. ಸಂಸ್ಕೃತದಲ್ಲಿ ನಾಟಕ ಪರಂಪರೆ ಇದ್ದರೂ ಕೂಡ ಪಾಶ್ಚಾತ್ಯ ಸಾಹಿತ್ಯದ ಮೂಲಕ ಗಂಭೀರ ನಾಟಕದ ಪರಿಚಯವಾಯಿತು. ಇಂಗ್ಲೆಂಡ್ ಮತ್ತು ಯೂರೋಪಿಯನ್ ನಾಟಕ ಸಾಹಿತ್ಯದ ಮೂಲಕ ನಾಟಕದ ಹಲವು ಪ್ರಕಾರಗಳು ಕನ್ನಡಿಗರಿಗೆ ದೊರೆತವು (ಶೇಷಗಿರಿರಾವ್ ಎಲ್.ಎಸ್., ಪು. ೧೭). ಕಾದಂಬರಿ, ಸಣ್ಣಕಥೆಗಳು ಅಪರಿಚಿತವಾಗಿರಲಿಲ್ಲವಾದರೂ ಕೂಡ, ಅವುಗಳನ್ನು ವಿಶಿಷ್ಟ ಸಾಹಿತ್ಯ ಪ್ರಕಾರಗಳಾಗಿ ಕನ್ನಡ ಓದುಗರು ಪಡೆದದ್ದು ಇಂಗ್ಲೀಷ್ ಸಾಹಿತ್ಯದಲ್ಲಿ. ಲಲಿತ ಪ್ರಬಂಧ ಮತ್ತು ಜೀವನ ಚರಿತ್ರೆಯ ಪ್ರಕಾರಗಳು ಹೊಚ್ಚ ಹೊಸ ರೂಪಗಳಾಗಿದ್ದವು. ಒಬ್ಬ ಬರಹಗಾರನನ್ನು ಮತ್ತೊಬ್ಬ ಬರಹಗಾರನೊಡನೆ ಹೋಲಿಸಿ, ಸಾದೃಶ್ಯ ವೈದೃಶ್ಯಗಳನ್ನು ಗುರುತಿಸುವಂತಹ ತೌಲನಿಕ ವಿಮರ್ಶೆ ಭಾರತೀಯ ಸಾಹಿತ್ಯ ವಿಮರ್ಶೆಗೆ ಹೊಸದಾಗಿತ್ತು. ಹೀಗೆ ಇಂಗ್ಲೀಷ್ ಸಾಹಿತ್ಯದ ಅಭ್ಯಾಸ ಅದರ ವಿವಿಧ ಪ್ರಕಾರಗಳನ್ನು ಪರಿಚಯಿಸಿತು. ಈ ಮೂಲಕ ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆ ಹೊಸ ಸಾಹಿತ್ಯ ಸೃಷ್ಟಿಗೆ ಕಾರಣವಾದದ್ದು ಮಾತ್ರವಲ್ಲದೇ ಸಾಹಿತ್ಯದ ಮನೋಧರ್ಮ ಮತ್ತು ಸ್ವರೂಪಗಳನ್ನು ಪ್ರಭಾವಿಸಿತು.

ಅಂದ ಮಾತ್ರಕ್ಕೆ ಈ ಕಾಲದ ಪ್ರೇರಣೆ, ಪ್ರೋತ್ಸಾಹಗಳೆಲ್ಲ ಕೇವಲ ಪಾಶ್ಚಾತ್ಯ ಮೂಲದಿಂದ ಮಾತ್ರ ಬಂದವುಗಳಲ್ಲ. ಕರ್ನಾಟಕ ಭಾರತದ ಅದರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ಪಾಲು ಪಡೆಯಿತು. ಭಾರತದ ಸ್ವಾತಂತ್ರ್ಯ ಹೋರಾಟ ಎಲ್ಲರಲ್ಲಿಯೂ ನಾಡು,ನುಡಿ ಸಂಸ್ಕೃತಿಗಳ ಬಗ್ಗೆ ಅಭಿಮಾನವನ್ನು ಮೂಡಿಸಿತು. ಇದು ಸಹಜವಾಗಿಯೇ ಸಾಹಿತ್ಯದ ಮೇಲೂ ತನ್ನ ಪರಿಣಾಮವನ್ನು ಬೀರಿತು. ಸ್ವಾತಂತ್ರ್ಯ ಸಮರ ಪತ್ರಿಕೆಗಳಿಗೆ ವಿಶಿಷ್ಟ ಹೊಣೆಯನ್ನು ವಹಿಸಿದಂತೆಯೇ ವಿಶಿಷ್ಟ ಸ್ಥಾನವನ್ನು ತಂದುಕೊಟ್ಟಿತು. ಪ್ರಾರಂಭದಲ್ಲಿ ಪತ್ರಿಕೆಗಳು ಕ್ರೈಸ್ತ ಮಿಶನರಿಗಳ ಸ್ವತ್ತಾಗಿದ್ದವು. ಆದರೂ ಕೂಡ ಕೆಲವು ಪತ್ರಿಕೆಗಳು ಜನರ ಕುಂದುಕೊರತೆಗಳ ಬಗ್ಗೆ ಕನ್ನಡಿ ಹಿಡಿಯುವ ಪ್ರಯತ್ನವನ್ನು ನಡೆಸಿದವು. ಜನರಲ್ಲಿ ಜಾಗೃತಿಯನ್ನು ಮೂಡಿಸುವ ಸಲುವಾಗಿ ವಿದ್ಯಾವಂತ ನಾಯಕರು ಜನರು ಬಳಸುತ್ತಿದ್ದ ಭಾಷೆಯನ್ನು ಬಳಸಬೇಕಾಯಿತು.

ನವೋದಯ ಸಾಹಿತ್ಯವು ಹುಲುಸಾಗಿ ಬೆಳೆಯಲು ಹಲವಾರು ಅಂಶಗಳು ಪೂರಕ ಶಕ್ತಿಗಳಾಗಿ ಕಂಡುಬಂದವು. ಪತ್ರಿಕೋದ್ಯಮ, ಹೊಸದಾಗಿ ಬಂದ ಮುದ್ರಣ ವ್ಯವಸ್ಥೆ, ಹೊಸ ಶಿಕ್ಷಣ ಪದ್ಧತಿ, ಅನುವಾದ – ಇವೇ ಮುಂತಾದವುಗಳಿಂದ ಪ್ರೇರೇಪಿತವಾದ ಕನ್ನಡ ನವೋದಯ ಸಾಹಿತ್ಯವು, ಸಾಮಾನ್ಯ ಜನರ ಬದುಕಿನ ಆಶಯಗಳನ್ನು ಒಳಗೊಂಡಿತು. ಪುರಾಣ, ಇತಿಹಾಸಗಳಿಂದ ಹೊರಬಂದ ಕಾವ್ಯದ ವಸ್ತುವು ಮಾನವನ ದೈನಂದಿನ ಸರಳ, ಸಾಧಾರಣ ಸಂಗತಿಗಳ ಕಡೆಗೆ ಹೊರಳಿತು. ನಿಸರ್ಗ ಪ್ರೇಮ, ಪ್ರೀತಿ ಪ್ರಣಯ, ಆದರ್ಶ ರಾಷ್ಟ್ರೀಯತೆ ಮುಂತಾದ ಅಂಶಗಳನ್ನು ಒಳಗೊಂಡಿತು. ಸ್ವಾತಂತ್ರ್ಯ ಹೋರಾಟವು ಜನರಲ್ಲಿ ದೇಶಪ್ರೇಮ, ರಾಷ್ಟ್ರೀಯತೆಯ ಅರಿವನ್ನು ಮೂಡಿಸುವುದರ ಜೊತೆಗೆ ದೇಶಭಕ್ತಿ ಗೀತೆಗಳ ರಚನೆಗೆ ಪ್ರೋತ್ಸಾಹ ನೀಡಿತು. ಮುಂದೆ ಇದು ಗದ್ಯದ ಬೆಳವಣಿಗೆಗೆ ಪ್ರೇರಣೆಯಾಯಿತು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ವಿನೋಬಾಭಾವೆ ಮುಂತಾದ ದಾರ್ಶನಿಕರ ಪ್ರಭಾವದಿಂದಾಗಿ ಆಧ್ಯಾತ್ಮಿಕ ಸಾಹಿತ್ಯದ ರಚನೆಯಾಗತೊಡಗಿತು.

ಬಂಗಾಳಿ ಸಾಹಿತ್ಯದಿಂದಲೂ ಕೂಡ ಕನ್ನಡ ಸಾಹಿತ್ಯ ಪ್ರಭಾವಿತಗೊಂಡಿತು. ಸಾಮಾಜಿಕ ಸುಧಾರಣೆಯ ಒಲವು, ಭಾರತದ ಸತ್ವ ಸಂಸ್ಕೃತಿಗಳ ಅಧ್ಯಯನದ ಒಲವು ಮೊದಲು ಬಲಗೊಂಡದ್ದು ಬಂಗಾಳದಲ್ಲಿ. ಭಾರತೀಯ ಭಾಷೆಯಲ್ಲಿ ಆಧುನಿಕ ಎನ್ನಬಹುದಾದ ಸಾಹಿತ್ಯ ಮೊದಲು ಸೃಷ್ಟಿಯಾದದ್ದು ಬಂಗಾಳಿ ಭಾಷೆಯಲ್ಲಿ. ರಾಜರಾಮ ಮೋಹನರಾಯ್‌ರವರು ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಪ್ರಭಾವಿತರಾಗಿದ್ದು, ಇಂಗ್ಲೀಷ್ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿದರು. ೧೮೬೫ರಲ್ಲಿ ಬಂಕಿಮ ಚಂದ್ರ ಚಟರ್ಜಿ ಅವರ 'ದುರ್ಗೇಶ ನಂದಿನಿ' ಪ್ರಕಟವಾಯಿತು. ೧೮೮೨ರಲ್ಲಿ ಅವರ ಪ್ರಸಿದ್ಧ ಕಾದಂಬರಿ 'ಆನಂದಮಠ' ಪ್ರಕಟವಾಯಿತು. ಬಂಕಿಮಚಂದ್ರ ಚಟರ್ಜಿ ಅವರು ತಮ್ಮ ಮೊದಲ ಕಾದಂಬರಿಯಿಂದಲೇ ಜನಪ್ರಿಯವಾದರು. ಬಿ. ವೆಂಕಟಾಚಾರ್ಯರು 'ದುರ್ಗೇಶ ನಂದಿನಿ' ಯನ್ನು ೧೮೮೫ ರಲ್ಲಿ ಕನ್ನಡಕ್ಕೆ ಅನುವಾದಿಸಿದರು. ಈ ಮೂಲಕ ಕನ್ನಡಕ್ಕೆ ಕಾದಂಬರಿಯ ಪ್ರವೇಶವಾಯಿತು. ಬಂಕಿಮರ ಕಾದಂಬರಿಗಳಲ್ಲಿ ಐತಿಹಾಸಿಕ ಎಂದು ಕರೆಯುವ ಕೃತಿಗಳಲ್ಲಿಯೂ ಐತಿಹಾಸಿಕ ಅಂಶ ಕಡಿಮೆಯೇ. ಆದರೆ ಐತಿಹಾಸಿಕ ಸಂಗತಿಗಳನ್ನೂ ಸಂದರ್ಭಗಳನ್ನೂ ಬಳಸಿ ಕಾದಂಬರಿಗಳನ್ನು ರಚಿಸುವ ಮಾದರಿ ಇವರಿಂದ ಕನ್ನಡಕ್ಕೆ ದೊರಕಿದಂತಾಯಿತು. ಬಂಕಿಮರ ನಂತರ ರವೀಂದ್ರನಾಥ ಟಾಗೂರರ ಯುಗದ ಉದಯವಾಯಿತು. ೧೯೧೩ ರಲ್ಲಿ ರವೀಂದ್ರರಿಗೆ ನೊಬೆಲ್ ಬಹುಮಾನ ಬಂದ ನಂತರ ಅವರ 'ಗೀತಾಂಜಲಿ' ಭಾರತದ ಎಲ್ಲಾ ಭಾಷೆಗಳಿಗೆ ಅನುವಾದವಾಯಿತು. ರವೀಂದ್ರರ ಕಿರುಗತೆಗಳು, ಕಾದಂಬರಿಗಳಲ್ಲೂ ಆಸಕ್ತಿ ಮೂಡಿತು.ಇದರಿಂದ ದೇಶೀಯ ಭಾಷೆಯಲ್ಲಿ ಸಾಹಿತ್ಯ ರಚನೆಗೆ ಹೊಸ ಪುಷ್ಟಿ ದೊರಕಿದಂತಾಯಿತು (ಶೇಷಗಿರಿರಾವ್ ಎಲ್.ಎಸ್., ಪು. ೨೨).

ಇಷ್ಟೆಲ್ಲಾ ಪ್ರಭಾವ ಪ್ರೇರಣೆಗಳು ಕನ್ನಡ ಸಾಹಿತ್ಯಕ್ಕೆ ದೊರೆತರೂ ಕೂಡ ಈ ಕಾಲದಲ್ಲಿ ಹೊಸ ಸಾಹಿತ್ಯವನ್ನು ನಿರ್ಮಿಸ ಹೊರಟವರಿಗೆ ಹಲವಾರು ಸಮಸ್ಯೆಗಳು ಎದುರಾದವು. ಒಂದು ಸಮಸ್ಯೆ ಹೊರಗಿನ ಪ್ರಭಾವವನ್ನು ಅರಗಿಸಿಕೊಳ್ಳುವುದು. ಕಣ್ಣು ಕೋರೈಸುವ ಯಾವ ಒಂದು ಪ್ರಭಾವಕ್ಕೆ ಸಿಲುಕಿದಾಗಲೂ ತನ್ನತನವನ್ನು ಕಾಯ್ದುಕೊಳ್ಳುವುದು ಕಷ್ಟವಾಗುವ ರೀತಿಯಲ್ಲಿಯೇ ಇಂಗ್ಲೀಷ್ ಸಾಹಿತ್ಯದ ಪ್ರಭಾವವೂ ಕೂಡ. ಪಾಶ್ಚಾತ್ಯ ಸಾಹಿತ್ಯದ ಸೃಷ್ಟಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭವೇ ಬೇರೆ. ಕನ್ನಡ ಸಾಹಿತ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳೇ ಬೇರೆ. ಎರಡೂ ದೇಶಗಳ ಚಾರಿತ್ರಿಕ ಮತ್ತು ಭೌಗೋಳಿಕ ನೆಲೆಗಳು ಬೇರೆ, ಸಮಾಜದ ವ್ಯವಸ್ಥೆಗಳು ಬೇರೆ. ವ್ಯಕ್ತಿ-ಸಮಾಜದ ಸಂಬಂಧ, ಗಂಡು-ಹೆಣ್ಣಿನ ಸಂಬಂಧ ಇವನ್ನು ಕುರಿತ ಕಲ್ಪನೆಗಳು ಬೇರೆ. ಪಾಶ್ಚಾತ್ಯ ಜಗತ್ತಿನಲ್ಲಿ ವಿಗ್ರಹಾರಾಧನೆ ಇಲ್ಲ. ರಾಜ ಪ್ರಭುತ್ವವನ್ನು ಒಪ್ಪಿಯೂ ರಾಜರ ಅಧಿಕಾರವನ್ನು ಸ್ಪಷ್ಟವಾಗಿ ಮಿತಗೊಳಿಸಿದ್ದು. ಇಂತಹ ಸಾಂಸ್ಕೃತಿಕ ಮತ್ತು ಸಾಮಾಜಿಕ ವಾತಾವರಣದಲ್ಲಿ ಸೃಷ್ಟಿಯಾದ ಸಾಹಿತ್ಯದ ಪ್ರಭಾವವನ್ನು ತೀರಾ ಭಿನ್ನವಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಆವರಣದಲ್ಲಿ ಅರಗಿಸಿಕೊಳ್ಳುವುದು ಸರಳವಲ್ಲ. ತೀರ ಭಿನ್ನವಾದ ಸಾಹಿತ್ಯದ ಪ್ರಭಾವವನ್ನು ಅರಗಿಸಿಕೊಳ್ಳುವುದು ಒಂದು ಸಮಸ್ಯೆಯಾದರೆ ಮತ್ತೊಂದು ಸಮಸ್ಯೆ ಭಾಷೆಯದ್ದು, ಒಂದು ಸಂಪ್ರದಾಯ ಬೆಳೆದಂತೆ ಸಂಪ್ರದಾಯಕ್ಕೂ ಭಾಷೆಗೂ ನಂಟು ಗಾಢವಾಗುತ್ತದೆ.

ಸಂಪ್ರದಾಯದ ಮೌಲ್ಯಗಳು ಭಾಷೆಯಲ್ಲಿ ಬೆರೆತುಕೊಂಡು ಬಿಡುತ್ತವೆ. ಸಾಹಿತ್ಯದಲ್ಲಿ ಭಾಷೆ ಹೆಚ್ಚೆಚ್ಚು ಮಾರ್ಪಾಡಾಗಬೇಕಾಗುತ್ತದೆ. ಸಂಸ್ಕೃತ–ಕನ್ನಡಗಳ ಸಂಬಂಧ ನಿಕಟವಾಗಿದ್ದರೂ ಕೂಡ, ವಿಸ್ತಾರವಾಗಿ, ಜನಸಾಮಾನ್ಯರಿಗೆ ಸಮೀಪವಾಗಿ ಬಾಳಿನ ಭಾವನೆಗಳಿಗೆ ರೂಪಕೊಡಲು ಭಾಷೆ ಬೆಳೆಯಬೇಕಾಗುತ್ತದೆ. ವರ್ಣನೆ, ವೃತ್ತಾಂತ, ವಿಶ್ಲೇಷಣೆ, ವಿವರಣೆಗಳ ಎಲ್ಲಾ ಅಗತ್ಯಗಳನ್ನು ಗದ್ಯ ಪೂರೈಸಬೇಕಾಯಿತು. ಇಂತಹ ಸಮಯದಲ್ಲಿ ಕವಿಗಳು, ಲೇಖಕರು ತಮ್ಮ ಹೊಸ ಅನಿಸಿಕೆಗಳಿಗೆ, ಅಗತ್ಯಗಳಿಗೆ ಹೊಂದಿಕೊಳ್ಳಬಲ್ಲ ಭಾಷೆಯನ್ನು ರೂಪಿಸಿಕೊಳ್ಳಬೇಕಾಯಿತು. ಪ್ರಾರಂಭದ ಹಂತದಲ್ಲಿ ಕವನಗಳನ್ನು ರೂಪಾಂತರ ಮಾಡುವಲ್ಲಿ ಕೆಲವು ಕವಿಗಳಿಗೆ ಭಾಷೆಯ ತೊಡಕು ಉಂಟಾಯಿತು. ಆದರೆ ಮತ್ತೆ ಕೆಲವರು ಅದರಲ್ಲಿ ಯಶಸ್ಸನ್ನು ಸಾಧಿಸಿದರು. ಈ ಕಾಲದಲ್ಲಿ ಕನ್ನಡ ಕಾವ್ಯದಲ್ಲಿ ಆದ ಪ್ರಮುಖ ಬದಲಾವಣೆ ಎಂದರೆ ಪ್ರಾಸವನ್ನು ಬಿಟ್ಟದ್ದು. ಕನ್ನಡದಲ್ಲಿ ಮೊದಲಿನಿಂದಲೂ ಆದಿಪ್ರಾಸ ಬಳಕೆಯಲ್ಲಿದೆ. ಅನೇಕ ಕವಿಗಳು ಇಂಗ್ಲೀಷಿನಿಂದ ಕವನಗಳನ್ನು ಅನುವಾದ ಮಾಡಿದಾಗಲೂ ಕೂಡ ಇಂಗ್ಲೀಷಿನ ಅಂತ್ಯ ಪ್ರಾಸವನ್ನು ಬಿಟ್ಟು ಆದಿ ಪ್ರಾಸವನ್ನೇ ಉಳಿಸಿಕೊಂಡರು. ಆದರೆ ಪ್ರಾಸವನ್ನೇ ಬಿಟ್ಟು ಬಿಡುವ ಧೈರ್ಯವನ್ನು ಯಾರೂ ಮಾಡಲಿಲ್ಲ. ಆದರೆ ಗೋವಿಂದ ಪೈ ಅವರು ಪ್ರಥಮ ಬಾರಿಗೆ ಪ್ರಾಸವನ್ನು ಬಿಟ್ಟು ಕವನ ರಚಿಸಿದರು (ಶೇಷಗಿರಿರಾವ್ ಎಲ್.ಎಸ್., ಪು. ೩೧). ಶಾಂತ ಕವಿಗಳು ತಮ್ಮ ಕವನಗಳಲ್ಲಿ ನಿತ್ಯ ಬಳಕೆಯ ಭಾಷೆಯನ್ನೇ ಬಳಸಿದ್ದು ಇತರ ಕವಿಗಳ ಮೇಲೆ ಪ್ರಭಾವ ಬೀರಿತು. ಶಾಂತ ಕವಿಗಳು ಜಾನಪದ ಮಟ್ಟುಗಳನ್ನು ಬಳಸಿ ಕವನ ರಚಿಸಿದ್ದು ಒಂದು ಮುಖ್ಯವಾದ ಸಂಗತಿಯಾಗಿದೆ.

ನಾಟಕಗಳ ಅನುವಾದದಲ್ಲಿಯೂ ಕೂಡ ಗಮನಾರ್ಹವಾದ ಕೆಲಸಗಳು ಈ ಕಾಲದಲ್ಲಿ ನಡೆದಿವೆ.. ಸಂಸ್ಕೃತದಿಂದ ಮತ್ತು ಇಂಗ್ಲೀಷಿನಿಂದ ನಾಟಕಗಳ ಅನುವಾದಗಳಾಗಿವೆ. ಬಸವಪ್ಪ ಶಾಸ್ತ್ರಿಗಳು ಷೇಕ್ಸ್‌ಪಿಯರ್‌ನ ಒಥೆಲೊ ನಾಟಕವನ್ನು 'ಶೂರಸೇನ ಚರಿತ್ರೆ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಅಲ್ಲದೇ ಸಂಸ್ಕೃತದಿಂದ 'ಶಾಕುಂತಳ' ನಾಟಕವನ್ನು ಅನುವಾದಿಸಿದ್ದಾರೆ. ಸಂಸ್ಕೃತ ನಾಟಕಗಳ ಅನುವಾದವು ಸಂಸ್ಕೃತ ನಾಟಕದ ಪರಂಪರೆ ಕನ್ನಡ ನಾಟಕದಲ್ಲಿ ಉಳಿದುಕೊಳ್ಳಲು ಸಹಾಯಕವಾಯಿತು. ವೃತ್ತಿ ಕಂಪನಿಗಳವರು ಈ ಪರಂಪರೆಯನ್ನು ಬೆಳೆಸಿದರು. ನಾಟಕಗಳು ಸಾಮಾನ್ಯವಾಗಿ ಪೌರಾಣಿಕ ವಸ್ತುವನ್ನು ಬಳಸಿಕೊಂಡವು. ಆದರೆ ಕನ್ನಡದಲ್ಲಿ ನಾಟಕಗಳನ್ನು ರಚಿಸಿದವರು ಸಂಸ್ಕೃತದವರಂತೆ ದಿಟ್ಟತನವನ್ನು ತೋರದೆ ತಾವು ಆರಿಸಿದ ಕಥಾವಸ್ತುವನ್ನು ಸ್ಫುಟಗೊಳಿಸಿದರು. ಕೆಲವು ಪಾತ್ರಗಳು ಆದರ್ಶವಾಗುವಂತೆ ಅವನ್ನು ಉದಾತ್ತಗೊಳಿಸಿದರು.

ನವೋದಯ ಪೂರ್ವ ಅಥವಾ ನವೋದಯದ ಪ್ರಥಮ ಘಟ್ಟದಲ್ಲಿಯೇ ಸಣ್ಣ ಕಥೆ ಮತ್ತು ಕಾದಂಬರಿ ಕನ್ನಡದಲ್ಲಿ ಮೊಳಕೆಯಿಟ್ಟವು. ಪಂಚತಂತ್ರ, ಉಪನಿಷತ್ತು ಹಾಗೂ ಜಾತಕದ ಕಥೆಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದ ಭಾರತಕ್ಕಾಗಲೀ ಅಥವಾ ಕನ್ನಡ ನಾಡಿಗಾಗಲೀ ಸಣ್ಣ ಕಥೆಯ ಪ್ರಕಾರ ಹೊಸತಲ್ಲವಾದರೂ ಕೂಡ ಸಣ್ಣ ಕಥೆಯು ಸಾಹಿತ್ಯದ ಒಂದು ವಿಶಿಷ್ಟ ರೂಪದಲ್ಲಿ ಅರಳಿದ್ದು ಪಾಶ್ಚಾತ್ಯರಲ್ಲಿ. ಕನ್ನಡದಲ್ಲಿ ಪಂಜೆ ಮಂಗೇಶರಾಯರು, ಮಾಸ್ತಿ ವೆಂಕಟೇಶ ಅಯ್ಯಂಗಾರರು,

ಎಂ.ಎನ್. ಕಾಮತರು, ವಾಸುದೇವಾಚಾರ್ಯರು ಸಣ್ಣಕಥೆಗಳನ್ನು ಪ್ರಾರಂಭಿಸಿದರು (ಶೇಷಗಿರಿರಾವ್ ಎಲ್.ಎಸ್., ಪು. ೩೩).

ಬಂಗಾಳಿಯ ಮೂಲಕ ಕಾದಂಬರಿ ಪ್ರಕಾರ ಕನ್ನಡಕ್ಕೆ ಪ್ರವೇಶ ಮಾಡಿತು. ಬಂಕಿಮಚಂದ್ರ ಚಟರ್ಜಿ ಅವರ 'ದುರ್ಗೇಶ ನಂದಿನಿ'ಯನ್ನು ೧೮೮೫ರಲ್ಲಿ ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದ್ದಾರೆ. ೧೮೯೬ ರಲ್ಲಿ ಗುಬ್ಬಿ ಮುರುಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ', ೧೮೯೯ ರಲ್ಲಿ ಗುಲ್ವಾಡಿ ವೆಂಕಟರಾಯರ 'ಇಂದಿರಾ' ಪ್ರಕಟಗೊಂಡವು. 'ಇಂದಿರಾ' ಕನ್ನಡದ ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿಯಾಗಿದೆ. ೧೯೦೫ರಲ್ಲಿ ಪ್ರಕಟವಾಗ ಬಾಬುರಾಯರ 'ವಾಗ್ದೇವಿ' ಕಾದಂಬರಿಯ ಮೂಲಕ ಹಾಸ್ಯವು ಕಾದಂಬರಿ ಕ್ಷೇತ್ರದಲ್ಲಿ ಕಾಲಿಟ್ಟಿದ್ದನ್ನು ಗುರುತಿಸಬಹುದಾಗಿದೆ. ೧೯೧೫ ರಲ್ಲಿ ಪ್ರಕಟವಾದ ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯು ಆಧುನಿಕ ಕನ್ನಡ ಸಾಹಿತ್ಯದ ಒಂದು ಮೈಲಿಗಲ್ಲಾಗಿದೆ. ಈ ಕೃತಿಯು ತನ್ನ ಜೀವನ ಶ್ರದ್ಧೆ, ಮನುಷ್ಯ ಸ್ವಭಾವದಲ್ಲಿನ ನೈಜವಾದ ಆಸಕ್ತಿ, ಮನಸ್ಸಿನ ವ್ಯಾಪಾರವನ್ನು ಚಿತ್ರಿಸುವ ಪ್ರಯತ್ನ, ಪಾತ್ರ- ಪಾತ್ರಗಳ ಘರ್ಷಣೆಯ ಮೂಲಕ ಕಥಾ ವಸ್ತುವನ್ನು ಮುಂದುವರಿಸುವ ತಂತ್ರ ಇವುಗಳಿಂದ ನಿಜವಾದ ಕಾದಂಬರಿಯಾಯಿತು. ಜೀವನದಲ್ಲಿ ಒಳಿತು-ಕೆಡುಕುಗಳ ಘರ್ಷಣೆಯನ್ನು ಗಂಭೀರವಾಗಿ ವಿಶ್ಲೇಷಿಸುವ ಕೃತಿ ಇದಾಗಿದೆ.

ಮುದ್ದಣ್ಣನ 'ರಾಮಾಶ್ವಮೇಧ' ಕೃತಿಯು ಈ ಕಾಲಘಟ್ಟದ ಒಂದು ಪ್ರಮುಖ ಕೃತಿಯಾಗಿದ್ದು ಜೀವನದ ಎಲ್ಲಾ ಸನ್ನಿವೇಶಗಳೂ ಕೂಡ 'ರಾಮಾಶ್ವಮೇಧ'ದಲ್ಲಿ ಸಹಜವಾಗಿ ಬಂದಿವೆ. ಮುದ್ದಣ್ಣನು ರಚಿಸಿರುವ ಇತರ ಕೃತಿಗಳೂ ಕೂಡ ಶ್ರೀರಾಮನನ್ನು ಕುರಿತವುಗಳೇ. 'ರತ್ನಾವಳಿ' ಎಂಬ ಯಕ್ಷಗಾನ ಕೃತಿಯನ್ನೂ ರಚಿಸಿದ್ದಾನೆ. ಈ ಕಾಲದ ಮತ್ತೊಬ್ಬ ಮುಖ್ಯ ಲೇಖಕರು ಪಂಜೆ ಮಂಗೇಶರಾಯರು. ಪಂಜೆ ಮಂಗೇಶರಾಯರು ಶಿಶು ಸಾಹಿತ್ಯ ಕಥನ ಕವನಗಳನ್ನು ರಚಿಸಿದ್ದಾರೆ. ಇದಲ್ಲದೆ ನವೋದಯ ಕಾಲದ ಪ್ರಾರಂಭದಲ್ಲಿಯ ಕಥೆಗಳನ್ನು, ಲಲಿತ ಪ್ರಬಂಧಗಳನ್ನು ರಚಿಸಿದ ಕೀರ್ತಿಗೆ ಪಂಜೆ ಮಂಗೇಶರಾಯರು ಭಾಜನರಾಗಿದ್ದಾರೆ.

ಈ ಕಾಲದಲ್ಲಿ ಪ್ರಾರಂಭವಾದ ಪತ್ರಿಕೆಗಳು ಸಾಹಿತಿಗಳು/ಕವಿಗಳು ಮತ್ತು ಓದುಗರ ನಡುವೆ ನೇರ ಸಂಬಂಧವನ್ನು ಕಲ್ಪಿಸಿ ಸಾಹಿತ್ಯ ಜಗತ್ತಿನಲ್ಲಿ ಕ್ರಾಂತಿಯನ್ನು ಉಂಟು ಮಾಡಿದವು. ಪತ್ರಿಕೆಗಳು ಪ್ರಾರಂಭವಾಗುವವರೆಗೆ ಕವಿಗಳು ರಾಜರ ಆಶ್ರಯದಲ್ಲಿದ್ದು, ಅವರುಗಳ ಅಭಿರುಚಿಗೆ ತಲೆಬಾಗಬೇಕಾಗಿತ್ತು. ಇಂತಹ ಆಶ್ರಯ ಸ್ಥಾನಗಳು ಪಂಡಿತ ವರ್ಗದ ಆಶ್ರಯಸ್ಥಾನಗಳೂ ಆಗಿದ್ದವು. ಆದರೆ ವಚನಕಾರರು, ಸರ್ವಜ್ಞ, ದಾಸರು ರಾಜರ ಆಶ್ರಯವನ್ನು ಅವಲಂಬಿಸದೆ ಹೊಸ ಹಾದಿಯನ್ನು ತುಳಿದಿದ್ದರು ಎಂಬುದನ್ನು ಗಮನಿಸಬೇಕಾಗುತ್ತದೆ. ಪತ್ರಿಕೆಗಳು ಸಾಹಿತಿಗಳು ಹಾಗೂ ಸಾಮಾನ್ಯ ಓದುಗರ ನಡುವೆ ನೇರವಾದ ಸಂಬಂಧವನ್ನು ಕಲ್ಪಿಸಿದವು. ಓದುಗರ ಅಭಿರುಚಿ ಸಾಹಿತ್ಯದ ಸೃಷ್ಟಿಗೆ ಒಂದು ಮಿತಿಯನ್ನು ಕಲ್ಪಿಸಿದರೂ ಕೂಡ ರಾಜಾಶ್ರಯದಲ್ಲಿದ್ದ ಪಂಡಿತರು/ಕವಿಗಳಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಸಾಹಿತಿಗಳು ಇಲ್ಲಿ ಗಳಿಸಿಕೊಂಡರು. ಕರ್ನಾಟಕ ಗ್ರಂಥಮಾಲೆ, ವಾಗ್ಭೂಷಣ, ಸುವಾಸಿನಿ, ಸುಬೋಧಿನಿ ಮೊದಲಾದ ಪತ್ರಿಕೆಗಳು ತಮ್ಮ ಗಣನೀಯ

ಸೇವೆಯನ್ನು ಸಲ್ಲಿಸಿದವು. ಹಲವಾರು ಲೇಖಕರ, ಕವಿಗಳ ಕಥೆ, ಕಾದಂಬರಿ ಹಾಗೂ ಕವನಗಳನ್ನು ಪತ್ರಿಕೆಗಳು ಪ್ರಕಟಿಸುವ ಮೂಲಕ ಸಾಮಾನ್ಯರಲ್ಲಿಯೂ ಕೂಡ ಸಾಹಿತ್ಯದ ಜ್ಞಾನವನ್ನು ವೃದ್ಧಿಸುವಲ್ಲಿ ಸಹಾಯಕವಾದವು.

ಒಟ್ಟಾರೆಯಾಗಿ ೧೮೭೦ ರಿಂದ ೧೯೨೦ ರವರೆಗಿನ ಅವಧಿಯಲ್ಲಿ ಇಂಗ್ಲೀಷಿನಿಂದ ಅನುವಾದವಾದ ಕವನಗಳು, ಪಂಜೆ, ಕಾಮತ, ವಾಸುದೇವಾಚಾರ್ಯರ ಕಥೆಗಳು, ಅನುವಾದಿತ ಕಾದಂಬರಿಗಳು, ಪುಟ್ಟಣ್ಣನವರ ಕಾದಂಬರಿಗಳು, ಭಾಷಾಂತರ ಹಾಗೂ ರೂಪಾಂತರವಾದ ನಾಟಕಗಳು, ಪ್ರಹಸನಗಳು ಎಲ್ಲವೂ ಸಾಹಿತ್ಯವನ್ನು ಜನಸಾಮಾನ್ಯರ ಜೀವನಕ್ಕೆ ಹತ್ತಿರ ತಂದವು. ಈ ಕಾಲದಲ್ಲಿ ಸಾಹಿತ್ಯದ ಲಕ್ಷಣದ ಕಲ್ಪನೆಯೇ ಬದಲಾಗತೊಡಗಿತು. ಉಪದೇಶ ಮಾಡಬೇಕೆಂಬ ಭಾವನೆ ಹೋಗಿ ಅನುಭವಕ್ಕೆ ತಕ್ಕ ಭಾಷೆಯ ಶರೀರ ಕೊಡುವುದಕ್ಕೆ ಪ್ರಾಧಾನ್ಯ ದೊರೆಯಿತು (ಶೇಷಗಿರಿರಾವ್ ಎಲ್.ಎಸ್., ಪು. ೩೮). ಭಾಷೆಯ ಬಳಕೆಯತ್ತ ಕವಿಗಳ ಚಿತ್ತ ಹರಿಯಿತು. ಈ ಕಾಲದ ಬರಹಗಾರರು ತಮ್ಮ ಮಾಧ್ಯಮವನ್ನು ಬಳಸುವಲ್ಲಿ ಸ್ಫೂರ್ತಿಗೆ ವಶವಾಗದೆ ಪ್ರಯೋಗಗಳನ್ನು ಮಾಡುವುದರಲ್ಲಿಯೂ ಕೂಡ ಆಸಕ್ತಿಯನ್ನು ಹೊಂದಿದ್ದರು. ರಾಷ್ಟ್ರದ ಸ್ವಾತಂತ್ರ್ಯ ಹೋರಾಟ ಜನರಲ್ಲಿ ಹೊಸ ಜಾಗೃತಿಯನ್ನು ಮೂಡಿಸಿ ಜನ ಸಾಮಾನ್ಯರನ್ನು ರಾಷ್ಟ್ರೀಯ ಚಳುವಳಿಯಲ್ಲಿ ತೊಡಗಿಸಿತ್ತು. ರಾಜಕೀಯ ನಾಯಕರು ಹಾಗೂ ಜನ ಸಾಮಾನ್ಯರ ನಡುವೆ, ಅನಕ್ಷರಸ್ಥರು, ಅವಿದ್ಯಾವಂತರ ನಡುವೆ ಸಂಪರ್ಕ ಬೆಳೆಸಲು ಭಾಷೆಯ ಬಳಕೆ ಅನಿವಾರ್ಯವಾಗಿ ಬಳಕೆಯಾಗಿತ್ತು. ಈ ವಾತಾವರಣದಲ್ಲಿ ಸಾಹಿತ್ಯ ಹಿಂದಿನ ಜಾಡಿನಲ್ಲಿ ಸಾಗುವುದು ಸಾಧ್ಯವೇ ಇರಲಿಲ್ಲ. ಹೀಗಾಗಿ ಬದಲಾವಣೆ ಎಂಬುದು ಅನಿವಾರ್ಯವಾಯಿತು.

೨.೨ ಆಧುನಿಕ ಕನ್ನಡ ಸಾಹಿತ್ಯ

ಆಧುನಿಕ ಎಂದರೆ ಸ್ಥೂಲವಾಗಿ 'ಹೊಸತು' ಎಂದರ್ಥ. ಹೊಸತೆಂದರೆ ಹಳೆಯದನ್ನು ಹೂಳಿ ಹೊಸ ಸೃಷ್ಟಿಗೆ ಕೈ ಹಾಕುವುದು ಎಂದರ್ಥವಲ್ಲ. ಹೊಸತು ಹಳೆಯದರ ಮರುಹುಟ್ಟೇ ಆಗಿದೆ (ಶಾಮರಾಯ ತ.ಸು., ಪು. ೧೯೩). ನಮ್ಮ ಹಳೆಯ ಸಾಹಿತ್ಯದಲ್ಲಿರುವ ಸತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡುದೇ ಆಧುನಿಕ ಸಾಹಿತ್ಯವೆನ್ನಬಹುದು. ಆಧುನಿಕತೆ ಎಂದರೆ ಪರಂಪರೆಯನ್ನು ಹಿಂದೆ ಬಿಟ್ಟು ಹೋಗುವುದು ಎಂದರ್ಥವಲ್ಲ. ಆಧುನಿಕತೆ ಮತ್ತು ಪರಂಪರೆ ಬೇರೆ ಬೇರೆಯಾಗಿ ನಿಲ್ಲುವ ವೈರುಧ್ಯಗಳೇನೂ ಅಲ್ಲ. ಪರಂಪರೆಯನ್ನು ಹೊಸ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಿಂದ ಅರ್ಥೈಸುತ್ತಲೇ ಅದನ್ನು ಮುಂದುವರೆಸುವ ಕೆಲಸವನ್ನು ಕೂಡ ಆಧುನಿಕತೆ ಮಾಡುತ್ತಿರುತ್ತದೆ. ತನ್ನ ಕಾಲದ ಎಲ್ಲಾ ಸೂಕ್ಷ್ಮ ಸಂವೇದನೆಗಳಿಗೂ ಸದಾ ಎಚ್ಚರವಾಗಿರುವ ಸಾಹಿತ್ಯವು ಕಾಲ ಕಾಲಕ್ಕೆ ಪಲ್ಲಟಗೊಳ್ಳುತ್ತಿರುವ ಸಾಮಾಜಿಕ ಮೌಲ್ಯಗಳನ್ನು ಧ್ವನಿಸುತ್ತಿರುತ್ತದೆ. ಸಾಹಿತ್ಯದ ಮೂಲ ಪರಿಕರವಾದ ಭಾಷೆ ಪರಂಪರೆ ಮತ್ತು ಆಧುನಿಕತೆಗಳನ್ನು ಬೆಸೆಯುವ ಕೊಂಡಿಯಾಗಿ ಕೆಲಸ ಮಾಡುತ್ತಿರುತ್ತದೆ. ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಕನ್ನಡ ಸಾಹಿತ್ಯದ ಮೇಲೆ ಆಗಿರುವ ಪರಿಣಾಮ ಪ್ರಭಾವಗಳನ್ನು ಅದರ ಅಂತರಂಗ ಬಹಿರಂಗಗಳೆರಡರಲ್ಲಿಯೂ ನಾವು ಕಾಣಬಹುದಾಗಿದೆ. ಪಾಶ್ಚಾತ್ಯ ವಿದ್ಯಾಭ್ಯಾಸದ

ಫಲವಾಗಿ ಇಪ್ಪತ್ತನೆಯ ಶತಮಾನದ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ನೂತನ ಯುಗವೊಂದು ಕಾಲಿಟ್ಟಿತು.ಮೊದ ಮೊದಲು ಅಲ್ಲಿದ್ದುದನ್ನೇ ಯಥಾವತ್ತಾಗಿ ಇಲ್ಲಿಗೆ ತಂದುಕೊಳ್ಳುವ ಪ್ರಯತ್ನ ನಡೆಯಿತು. ಆದರೆ ಕಾಲಕ್ರಮೇಣ ನಮ್ಮ ಸಾಹಿತ್ಯದೊಡನೆ ಅದನ್ನು ಸಮನ್ವಯಗೊಳಿಸಿಕೊಳ್ಳುವ ಶಕ್ತಿ ಪರಿಣತಿಗೊಂಡು ಈಗ ಚಿರಕಾವ್ಯಗಳು ಜನಿಸಿವೆ.

ಆಧುನಿಕ ಸಾಹಿತ್ಯ ಪ್ರಕಾರದಲ್ಲಿ ಬಹುಮಟ್ಟಿಗೆ ಭಾವಗೀತೆ ಪ್ರಧಾನವಾಯಿತು. ಖಂಡಕಾವ್ಯಗಳು, ಕಥನ ಕವನಗಳು, ಗೀತ ನಾಟಕಗಳು ಇತ್ಯಾದಿ ಪ್ರಕಾರಗಳಿದ್ದರೂ ಅವುಗಳ ಸಂಖ್ಯೆ ಕಡಿಮೆಯೇ. ಹಿಂದಿನ ಕಾವ್ಯಗಳು ಅನುಸರಿಸುತ್ತಿದ್ದ ಕಠಿಣ ನಿಯಮಗಳ ಶೃಂಖಲೆಯನ್ನು ವಸ್ತು, ರೀತಿಗಳಲ್ಲಿ ಈ ಸಾಹಿತ್ಯ ಪ್ರಕಾರ ಸಡಿಲಗೊಳಿಸಿತು. ಚ. ವಾಸುದೇವಯ್ಯ, ಶ್ರೀನಿವಾಸರಾವ್, ಎಸ್.ಜಿ. ನರಸಿಂಹಾಚಾರ್, ಪಂಜೆ ಮಂಗೇಶರಾಯ ಮೊದಲಾದ ಕವಿಗಳು ಈ ಶತಮಾನದ ಆರಂಭ ಕಾಲದಲ್ಲಿಯೇ ಈ ಪ್ರಕಾರಕ್ಕೆ ಕೈ ಹಾಕಿದ್ದರೂ ಇವುಗಳ ಪ್ರಭಾವವನ್ನು ಜನರ ಮೇಲೆ ಅಚ್ಚೊತ್ತಿ ಹೊಸ ಹೆದ್ದಾರಿಯನ್ನು ನಿರ್ಮಿಸಿದ ಕೀರ್ತಿ ಬಿ.ಎಂ.ಶ್ರೀ ಅವರಿಗೆ ಸಲ್ಲುತ್ತದೆ (ಶಾಮರಾಯ ತ.ಸು., ಪು. ೧೯೮). ಬಿ.ಎಂ.ಶ್ರೀ. ಅವರು ೧೯೨೧ ರಲ್ಲಿ ತಮ್ಮ 'ಇಂಗ್ಲೀಷ್ ಗೀತಗಳು' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ಇಂಗ್ಲೀಷ್ ರೋಮ್ಯಾಂಟಿಕ್ ಕವಿಗಳ ಕವನಗಳ ಭಾಷಾಂತರಗಳನ್ನು ಒಳಗೊಂಡ ಕವನ ಸಂಕಲನ ಇದಾಗಿದೆ. ತಮಗೆ ಪ್ರಿಯವಾದ ಮತ್ತು ಶಕ್ತಿಗೆ ಎಟುಕುವಂತಹ ಕವನಗಳನ್ನು ಆರಿಸಿಕೊಂಡಿದ್ದಾರೆ. ಶ್ರೀ ಅವರು ಇಂಗ್ಲೀಷ್ ಕೃತಿಗಳ ಅಕ್ಷರಶಃ ಅನುವಾದವನ್ನು ಪ್ರಯತ್ನಿಸದೆ ಭಾವಾನುವಾದವನ್ನು ಪ್ರಯತ್ನಿಸಿದರು (ಶೇಷಗಿರಿರಾವ್ ಎಲ್.ಎಸ್., ಪು. ೪೨). ಇಂಗ್ಲೀಷ್ ಗೀತೆಗಳು ಅಂದಿನ ಕನ್ನಡ ಓದುಗರಿಗೆ ಹೊಸದೊಂದು ಜಗತ್ತಿನ ಬಾಗಿಲನ್ನೇ ತೆರೆಯಿತು. ಎಲ್ಲಕ್ಕಿಂತ ಮುಖ್ಯವಾದ ಸಂಗತಿ ಎಂದರೆ ಸಾಮಾನ್ಯ ಮನುಷ್ಯನ ಭಾವನೆಗಳಿಗೆ, ಸುಖ ದುಃಖಗಳಿಗೆ, ಬೇಸರ ಹಂಬಲಗಳಿಗೆ ಅಭಿವ್ಯಕ್ತಿ ದೊರೆಯಿತು. ಸಾಮಾನ್ಯ ಮನುಷ್ಯನ ಪ್ರಣಯವೂ ಕೂಡ ಕಾವ್ಯದಲ್ಲಿ ಹರಿಯಿತು. 'ಇಂಗ್ಲೀಷ್ ಗೀತ'ಗಳಿಂದ ವಸ್ತು ವೈವಿಧ್ಯ ಮಾತ್ರವಲ್ಲ. ಪ್ರಯೋಗಗಳ ಗಣಿಯೇ ಕನ್ನಡ ಕವಿಗಳ ಮುಂದೆ ತೆರೆಯಿತು. ಕಾವ್ಯ ಅತಿ ಗಾಂಭೀರ್ಯದಿಂದ ಮುಕ್ತವಾಯಿತು. ಕವನದ ಮನೋಧರ್ಮಕ್ಕೆ ತಕ್ಕಂತೆ ಪ್ರಾಸವನ್ನು ಬಿಡುವ–ಬಳಸುವ, ಪಂಕ್ತಿಗಳ ಉದ್ದವನ್ನು ನಿರ್ಧರಿಸುವ, ಭಾಷೆಯ ಓಟವನ್ನು ನಿಯಂತ್ರಿಸುವ ಕವನಗಳು ತರುಣ ಕವಿಗಳನ್ನು ಸ್ವಾಗತಿಸಿದವು. ಶ್ರೀ ಅವರ ಇಂಗ್ಲೀಷ್ ಗೀತಗಳಿಂದ ಸಾಮಾನ್ಯವಾಗಿ ರೋಮ್ಯಾಂಟಿಕ್ ಎಂದು ಕರೆಯುವ ನವೋದಯ ಯುಗ ಪ್ರಾರಂಭವಾಯಿತು. ಕುವೆಂಪು, ಬೇಂದ್ರೆ ನವೋದಯ ಕಾಲದ ಪ್ರಮುಖ ಕವಿಗಳಾಗಿದ್ದಾರೆ.

ನವೋದಯ ಸಾಹಿತ್ಯ ಯೂರೋಪಿನಲ್ಲಿ ರೊಮ್ಯಾಂಟಿಕ್ ಎಂದು ಕರೆಯುವ ಸಾಹಿತ್ಯಕ್ಕೆ ಹಲವು ರೀತಿಯಲ್ಲಿ ಸಮೀಪವಾಗಿದೆ. ಈ ಎರಡೂ ಸಾಹಿತ್ಯಗಳಲ್ಲಿಯೂ ಮಾನವ ಆಸಕ್ತಿಯ ಕೇಂದ್ರ, ಈ ಸಾಹಿತ್ಯವು ಮಾನವನ ಆಸೆ, ಕನಸು, ಆತಂಕ, ಹಂಬಲಗಳಿಗೆ ಭಾಷೆಯ ರೂಪವನ್ನು ಕೊಡುತ್ತದೆ. ಇಂಗ್ಲೀಷ್ ಭಾಷೆಯ ರೊಮ್ಯಾಂಟಿಕ್ ಸಾಹಿತ್ಯದ ಕವಿಗಳು 'ಮನುಷ್ಯನಿಗೆ ಎಲ್ಲಾ ತಿಳುವಳಿಕೆ ಬೌದ್ಧಿಕವಾಗಿಯೇ ಲಭಿಸುತ್ತದೆ' ಎಂಬ ನಿಯೋಕ್ಲಾಸಿಕ್ ಸಾಹಿತ್ಯದ ಮನೋಧರ್ಮಕ್ಕೆ

ವಿರೋಧವಾಗಿ ಇಂದ್ರಿಯಗಳ ಅನುಭವ–ಕಲ್ಪನೆಯ ಪ್ರಾಧಾನ್ಯ ಇವನ್ನು ಸಮರ್ಥಿಸಿದರು. ನವೋದಯ ಕನ್ನಡ ಸಾಹಿತ್ಯಕ್ಕೆ ಈ ಹಿನ್ನೆಲೆ ಇರದಿದ್ದರೂ ಕೂಡ ರೋಮ್ಯಾಂಟಿಕ್ ಸಾಹಿತ್ಯದ ಭಾಗವಾಗಿ ಕನ್ನಡ ನವೋದಯದ ಸಾಹಿತಿಗಳಿಗೆ ಈ ದೃಷ್ಟಿ ಬಂದಿತು. ನವೋದಯ ಸಾಹಿತ್ಯ ಇಂದ್ರಿಯ ಅನುಭವಗಳಿಗೆ, ಮಾನವನ ಅಂತಃಕರಣಕ್ಕೆ, ಹಾಗೆಯೇ ಅತೀಂದ್ರಿಯದ ಅನುಭವಗಳಿಗೆ, ಸ್ವಪ್ನ–ದರ್ಶನಗಳಿಗೆ ಬೆಲೆ ಕೊಡುತ್ತದೆ. ಇವೆಲ್ಲ ಸುತ್ತಲಿನ ಜಗತ್ತನ್ನು ನಮ್ಮ ಅನುಭವಕ್ಕೆ ತಂದುಕೊಡುವ ಹಲವು ವಿಧಾನಗಳು ಎಂದು ಅದನ್ನು ಸ್ವೀಕರಿಸುತ್ತದೆ (ಶೇಷಗಿರಿರಾವ್ ಎಲ್.ಎಸ್., ಪು. ೫೧). ಇದು ಮುಖ್ಯವಾಗಿ ಕಾವ್ಯದಲ್ಲಿ ಕಂಡು ಬರುತ್ತದೆ. ಕುವೆಂಪು, ಬೇಂದ್ರೆ, ಪು.ತಿ.ನ. ಅವರ ಕಾವ್ಯಗಳಲ್ಲಿ ಇವುಗಳನ್ನು ಗುರುತಿಸಬಹುದು. ಕುವೆಂಪು ಅವರ ಕವಿತೆಗಳಲ್ಲಿ ಸರ್ವತೋಮುಖವಾದ ಭಾವ ಕಂಡುಬರುವುದಾದರೂ ಪ್ರಕೃತಿ ಪ್ರೇಮ, ಆಧ್ಯಾತ್ಮ ಭಕ್ತಿ ಇವು ಸ್ಥಾಯಿ ಭಾವವನ್ನು ಪಡೆದಿವೆ. ದ.ರಾ.ಬೇಂದ್ರೆ ಅವರ ಕವನಗಳಲ್ಲಿ ವಿಷಯ ಮತ್ತು ಅದರ ನಿರೂಪಣೆಯಲ್ಲಿ ಕಂಡು ಬರುವ ವೈವಿಧ್ಯ, ಮಾತಿನ ಚಮತ್ಕಾರ, ಆಧ್ಯಾತ್ಮ ವಿಚಾರ ಲಹರಿ, ಜನಪದ ಧಾಟಿ, ನಾದ ಮಾಧುರ್ಯಗಳು ಮನಸ್ಸಿಗೆ ಮುದ ನೀಡುತ್ತವೆ. ಬೇಂದ್ರೆ ಅವರ ಕವನಗಳು ಇಂದ್ರಿಯಗಳ ಜಗತ್ತಿನಿಂದ ಅತೀಂದ್ರಿಯ ಜಗತ್ತಿಗೆ ಸಾಗುತ್ತವೆ. ಪು.ತಿ.ನ. ಅವರ ಕವನಗಳು ಪ್ರಕೃತಿ ವರ್ಣನೆಯಲ್ಲಿ, ಭಕ್ತಿ ಪಾರಮ್ಯದಲ್ಲಿ ಸಂಸ್ಕೃತಿಯ ದಿಗ್ದರ್ಶನ ಮಾಡಿಸುವಲ್ಲಿ ಸಫಲವಾಗಿವೆ.

ನವೋದಯ ಸಾಹಿತ್ಯದಲ್ಲಿ ಬಾಳು ಸ್ವೀಕಾರಾರ್ಹ ಎಂಬ ನಂಬಿಕೆ ಮತ್ತು ಕೆಲವು ಮೌಲ್ಯಗಳ ಸ್ವೀಕಾರ ಹಾಗೂ ಆಧ್ಯಾತ್ಮಿಕತೆಗಳು ಗಮನಾರ್ಹ ಲಕ್ಷಣಗಳಾಗಿವೆ. ನವೋದಯ ಸಾಹಿತ್ಯದಲ್ಲಿ ದಟ್ಟ ನಿರಾಸೆಯಾಗಲಿ, ಎಲ್ಲರಲ್ಲೂ ಎಲ್ಲದರಲ್ಲೂ ದೋಷವನ್ನೇ ಕಾಣುವ, ಎಲ್ಲವನ್ನು ಪರಿಹಾಸ್ಯ ಮಾಡುವ ಮನೋಭಾವಗಳಾಗಲಿ ಕಂಡು ಬರುವುದಿಲ್ಲ. ಬಾಳು ಅರ್ಥಪೂರ್ಣ ಎಂಬುದನ್ನು ಒಪ್ಪಿಕೊಂಡ ಈ ಸಾಹಿತ್ಯದಲ್ಲಿ ಬಾಳಿನ ದೋಷಗಳಿಗೆ, ಅನ್ಯಾಯಗಳಿಗೆ ಕಟು ಟೀಕೆ, ವಿಡಂಬನೆ, ಪ್ರತಿಭಟನೆ ಎಲ್ಲವೂ ಕೂಡ ಕಂಡು ಬರುತ್ತವೆ. ಕೇವಲ ಕಾವ್ಯಗಳಲ್ಲಿ ಮಾತ್ರವಲ್ಲ, ನವೋದಯ ಕಥೆ, ಕಾದಂಬರಿ, ನಾಟಕಗಳಲ್ಲೂ ಕೂಡ ಈ ಅಂಶಗಳನ್ನು ಗುರುತಿಸಬಹುದಾಗಿದೆ. ಮನುಷ್ಯ ಜೀವನವನ್ನು ಸಾರ್ಥಕ ಮಾಡಿಕೊಳ್ಳಬಹುದು ಎಂದು ನಂಬಿದ ಈ ಸಾಹಿತ್ಯ ಸಾರ್ಥಕ್ಯದ ಮಾರ್ಗವನ್ನು ಅನ್ವೇಷಿಸಿತು. ತಾಯ್ನಾಡು, ತಾಯಿ ದೇವರ ಸಮನಾದರೂ ಒಮ್ಮೊಮ್ಮೆ ದೇವರನ್ನೂ ಮೀರಿಸಿದವು. ಪ್ರೇಮ, ಸ್ನೇಹ ಇವು ಮಹತ್ವದ ಮೌಲ್ಯಗಳಾದವು. ಅನುಕಂಪ, ತ್ಯಾಗ, ಮಾನವ ಸೇವೆ ಇವು ಮನುಷ್ಯನನ್ನು ಉದ್ಧರಿಸುವ ಶಕ್ತಿಗಳಾದವು. ರಾಷ್ಟ್ರೀಯತೆಯ ಅಂಶವಾಗಿ ಪುಟಿದೆದ್ದ ಕನ್ನಡಾಭಿಮಾನ ಕಾವ್ಯಗಳಲ್ಲಿ ಕಂಡುಬಂದಿತು.

ಈ ಸಾಹಿತ್ಯದ ಮತ್ತೊಂದು ಲಕ್ಷಣ ಆಧ್ಯಾತ್ಮಿಕತೆ. ಈ ಕಾಲದ ಸಾಹಿತಿಗಳಲ್ಲಿ ಬಹುಮಂದಿ ದೇವರಲ್ಲಿ ನಂಬಿಕೆಯನ್ನು ಹೊಂದಿದವರು. ಜಗತ್ತನ್ನು ಆಳುವ ಶಕ್ತಿಯೊಂದು ಇದ್ದು, ಆ ಶಕ್ತಿಗೆ ಸರ್ವಾರ್ಪಣೆ ಮಾಡಿಕೊಂಡರೆ ಅದು ವ್ಯಕ್ತಿಯನ್ನು ಉದ್ಧರಿಸಬಹುದು ಎಂದು ನಂಬಿದ್ದರು. ಜಗತ್ತಿನ ಸೃಷ್ಟಿಯಾದಂದಿನಿಂದ ಒಳ್ಳೆಯ ಮತ್ತು ಕೆಟ್ಟ ಶಕ್ತಿಗಳ ಹೋರಾಟ ನಡೆದೇ ಇದೆ. ಮನುಷ್ಯನ ಬಾಳೂ ಒಂದು ಹೋರಾಟದ ರಂಗ, ಮನುಷ್ಯ ಒಳ್ಳೆಯ ಶಕ್ತಿಗಳ ಯೋಧನಾಗಬೇಕು.

ತನ್ನಲ್ಲಿರುವ ಕೆಟ್ಟದ್ದನ್ನು ದಮನ ಮಾಡಬೇಕು ಎಂಬ ಮನೋಭಾವನೆ ಈ ಕಾಲದ ಸಾಹಿತ್ಯದಲ್ಲಿ ಕಂಡು ಬರುತ್ತದೆ. ವ್ಯಕ್ತಿ ಒಳಿತನ್ನು ಸಾಧಿಸುವುದಕ್ಕೆ, ಒಳ್ಳೆಯವನಾಗುವುದಕ್ಕೆ ಒಂದು ಮಾರ್ಗ ಒಬ್ಬ ಸದ್ಗುರುವನ್ನು ಆರಿಸಿಕೊಂಡು ಅವನಿಗೆ ಬಾಳನ್ನು ಒಪ್ಪಿಸುವ ಸಮರ್ಪಣಾ ಭಾವವಿರಬೇಕು ಎಂಬುದು. ಆದರೆ 'ಈ ಕಾಲದ ಎಲ್ಲರಲ್ಲಿಯೂ ಆಧ್ಯಾತ್ಮಿಕ ದೃಷ್ಟಿ ಇದೆ ಎಂದು ಹೇಳಲು ಸಾಧ್ಯವಿಲ್ಲ. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಾರಂಭದಿಂದಲೆ ಆಸ್ತಿಕತೆ, ಆಧ್ಯಾತ್ಮಿಕತೆ ಕಂಡು ಬರುವುದಿಲ್ಲ' (ಶೇಷಗಿರಿರಾವ್ ಎಲ್.ಎಸ್., ಪು. ೫೯). ಕೈಲಾಸಂ ಅವರ ಸಾಹಿತ್ಯದಲ್ಲಿ ಸಂದಿಗ್ಧತೆ ಕಂಡುಬಂದರೆ ಶ್ರೀರಂಗರಲ್ಲಿ ಆಸ್ತಿಕತೆ, ಆಧ್ಯಾತ್ಮಿಕತೆ ಇಲ್ಲ. ಆದರೆ ಒಟ್ಟಿನಲ್ಲಿ ಇದು ಆಧ್ಯಾತ್ಮಿಕತೆಯ ಪರಿಸರದಲ್ಲಿ ಉಸಿರಾಡುವ ಸಾಹಿತ್ಯವಾಗಿದೆ.

ಸಂವೇದನೆ ಬದಲಾದಂತೆ ಸಾಹಿತ್ಯದ ಭಾಷೆಯೂ ಬದಲಾಗುವುದು ಅನಿವಾರ್ಯ. ಯಾವ ಅನುಭವಗಳು, ಅನುಭವದ ಯಾವ ಅಂಶಗಳು ಸಾಹಿತಿಗೆ ತೀವ್ರವಾಗುತ್ತವೆ, ಅವನು ಯಾವುದನ್ನು ತೀವ್ರವಾಗಿ ಹೇಳಲು ಬಯಸುತ್ತಾನೆ, ಅವನ ಓದುಗರು ಯಾರು, ಶಿಷ್ಟ ಭಾಷೆ-ಶ್ಲೀಲ-ಅಶ್ಲೀಲಗಳನ್ನು ಕುರಿತು ಅವನು ಸ್ವೀಕರಿಸಿದ ಅಭಿಪ್ರಾಯಗಳೇನು ಇವೆಲ್ಲ ಸಾಹಿತ್ಯದ ಭಾಷೆಯನ್ನು ಪ್ರಭಾವಿಸುತ್ತವೆ. ನವೋದಯ ಸಾಹಿತ್ಯವು ಭಾವ ತೀವ್ರತೆಯ, ಏಕಮುಖವಾದ ಹಾಗೂ ಪ್ರಯೋಗಶೀಲ ಸಾಹಿತ್ಯ. ಈ ಯುಗದ ಪ್ರಯೋಗಶೀಲತೆ ಮುಂದಿನ ಅಭ್ಯಾಸಕ್ಕೆ, ಸಾಧನೆಗೆ ದಾರಿ ಮಾಡಿಕೊಟ್ಟಿತು. ಸಾಹಿತ್ಯ ಕೃತಿಗಳನ್ನು ಓದುವವರ ವೃತ್ತ ಹಿಗ್ಗಿತು. ಈ ಅವಧಿಯಲ್ಲಿ ಹಲವಾರು ಪ್ರಯೋಗಗಳು ನಡೆದವು. ವೈವಿಧ್ಯತೆಯಿಂದ ಕೂಡಿದ ಭಾವಗೀತೆ ಕನ್ನಡಕ್ಕೆ ಪ್ರವೇಶಿಸಿತು. ಗಂಭೀರ ನಾಟಕಗಳು ರಚನೆಗೊಂಡವು. ಎಲ್ಲಾ ಪ್ರಕಾರದ ನಾಟಕಗಳ ಪ್ರಯೋಗವಾಯಿತು. ಪ್ರಾದೇಶಿಕ ಕಾದಂಬರಿ, ಐತಿಹಾಸಿಕ ಕಾದಂಬರಿ, ಕಿರು ಕಾದಂಬರಿ, ಸಣ್ಣ ಕಥೆಗಳ ಉಗಮವಾಯಿತು. ರಗಳೆಯ ವ್ಯಾಪ್ತಿ ಬೆಳೆದು ಕಥನ ಕವನಗಳಿಗೆ, ನಾಟಕಗಳಿಗೆ ರಗಳೆಯ ಬಳಕೆಯಾಯಿತು. ಹಲವು ತಂತ್ರಗಳು ಬಳಸಲ್ಪಟ್ಟವು.

೧೯೪೫ರ ನಂತರ ಬೇಂದ್ರೆ, ಕಾರಂತ, ಕುವೆಂಪು, ಪು.ತಿ.ನ., ವಿನಾಯಕ ಇವರುಗಳ ಪ್ರಮುಖ ಸಾಹಿತ್ಯ ಕೃತಿಗಳು ಪ್ರಕಟಗೊಂಡವು. ಕಡೆಂಗೋಡ್ಲು ಶಂಕರಭಟ್ಟ, ಗೋವಿಂದಪೈ., ವಿ.ಸೀ., ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಂ.ವಿ. ಸೀತಾರಾಮಯ್ಯ ಮೊದಲಾದವರ ಸಾಹಿತ್ಯ ರಚನೆ ೧೯೪೫ ರ ನಂತರವೂ ಸಾಗಿತು. ಆನಂದ, ಅಶ್ವತ್ಥ, ಪರ್ವತವಾಣಿ ಇವರಿಂದ ಪ್ರಾರಂಭವಾಗಿ ವ್ಯಾಸರಾಯ ಬಲ್ಲಾಳ, ರಂಗನಾಥ ಎಕ್ಕುಂಡಿವರೆಗೆ. ೧೯೪೫ ರ ನಂತರ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದವರೂ ಕೂಡ ನವೋದಯ ಸಂಪ್ರದಾಯವನ್ನೇ ಮುಂದುವರಿಸಿದರು. ಆದರೆ ಇವರುಗಳ ಸಾಹಿತ್ಯ ಪ್ರಯೋಗದಲ್ಲಿಯೇ ಭಿನ್ನತೆಗಳು ಕಾಣತೊಡಗಿದವು.

ನವೋದಯ ಸಾಹಿತ್ಯವು ಎರಡು ಸಂಸ್ಕೃತಿಗಳ ಮುಖಾಮುಖಿಯಾಗಿದ್ದರ ಪರಿಣಾಮಗಳು ಜನರಿಗೆ ಅನುಭವವಾಗುತ್ತಿದ್ದ ಕಾಲದಲ್ಲಿ ರೂಪ ತಾಳಿತು. ಬ್ರಿಟೀಷರು ನಮ್ಮ ಸ್ವಾತಂತ್ರ್ಯವನ್ನು ಕಿತ್ತುಕೊಂಡು ನಾವು ಗುಲಾಮರಾದುದರ ಪರಿಣಾಮಗಳು ಕಾಣಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ. ಕನ್ನಡಿಗರ ಮಟ್ಟಿಗೆ ಇವೆರಡನ್ನೂ ಸಾಹಿತ್ಯದಲ್ಲಿ ಸ್ವೀಕರಿಸಿ ಬದುಕಿನ ಸಂದರ್ಭದಲ್ಲಿಟ್ಟು ಕಂಡ

ಸಾಧನೆ ನವೋದಯ ಸಾಹಿತ್ಯದ್ದು. ಹೊಸ ಸಂಸ್ಕೃತಿಯನ್ನು ಮೆಚ್ಚಿಕೊಳ್ಳುವುದು, ಹೊಸ ಸಂಸ್ಕೃತಿಯ ಅನುಕರಣೆ, ತಮ್ಮ ಹಿಂದಿನ ನಾಗರೀಕತೆ, ಸಂಸ್ಕೃತಿಯತ್ತ ತಿರುಗುವುದು, ಹೊಸ ಸಂಸ್ಕೃತಿಯ ಹಲವು ಅಂಶಗಳು ದೇಶೀಯ ಸಂಸ್ಕೃತಿ ಮತ್ತು ಜೀವನ ವಿಧಾನಗಳಲ್ಲಿ ಸೇರಿಕೊಳ್ಳುವುದು, ವಿದೇಶಿ ಸಂಸ್ಕೃತಿಗೆ ವಿರೋಧ, ದೇಶೀಯ ಪದ್ಧತಿಗಳು ಮಾಯವಾಗುವುದು ಅಥವಾ ಮಾರ್ಪಾಡಾಗುವುದು ಮುಂತಾದವು ನವೋದಯ ಸಾಹಿತ್ಯ ಪ್ರಕ್ರಿಯೆಗಳ ವಿವಿಧ ಮುಖಗಳಾಗಿವೆ.

ನವೋದಯ ಸಾಹಿತ್ಯ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಸಮೃದ್ಧವಾಗಿ ಬೆಳೆದು ನಿಂತಿತು. ಅಂದಿನ ರಾಜಕೀಯ, ಸಾಮಾಜಿಕ ಅಂಶಗಳೂ ಕೂಡ ಇದಕ್ಕೆ ಪೂರಕವಾಗಿ ನಿಂತವು. ಸಾಮಾಜಿಕ ಜೀವನದಲ್ಲಿ ಬದಲಾವಣೆಗಳಾದಂತೆ ಸಾಹಿತ್ಯದಲ್ಲಿಯೂ ಕೂಡ ಪರಿವರ್ತನೆಗಳಾಗಬೇಕು. ಆದರೆ ಸ್ವಾತಂತ್ರೋತ್ತರ ಭಾರತೀಯ ಬದುಕಿನಲ್ಲಿ ಆದ ಹೊಸ ಪರಿವರ್ತನೆಗಳಿಗೆ ನವೋದಯ ಸಾಹಿತಿಗಳು ಅಷ್ಟಾಗಿ ಸ್ಪಂದಿಸುತ್ತಿಲ್ಲ. ಹೊಸ ಆಶಯಗಳಿಗೆ ರೂಪು ಕೊಡುತ್ತಿಲ್ಲ ಎಂಬ ದೂರನ್ನು ಪ್ರಗತಿಶೀಲ ಸಾಹಿತಿಗಳು ತಮ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಮಾಡತೊಡಗಿದರು. ನವೋದಯ ಸಾಹಿತ್ಯ ಕೇವಲ ಪ್ರೀತಿ, ಪ್ರೇಮ, ಪ್ರಣಯ, ಪ್ರಕೃತಿ ಪ್ರೇಮ, ಆಧ್ಯಾತ್ಮ, ಆದರ್ಶ, ರಾಷ್ಟ್ರೀಯವಾದಗಳಿಂದ ಕೂಡಿದ್ದು, ಸ್ವಾತಂತ್ರೋತ್ತರ ಸಾಮಾಜಿಕ ಜೀವನಕ್ಕಾಗಲೀ, ಜನಜೀವನದ ಸಮಸ್ಯೆಗಳಿಗಾಗಲೀ, ಸ್ಪಂದಿಸಲಿಲ್ಲ ಎಂಬುದು ಪ್ರಗತಿಶೀಲರ ಟೀಕೆಯಾಗಿದೆ.

ಪ್ರಗತಿಶೀಲರಿಗೆ ನವೋದಯದವರ ಪ್ರಕೃತಿಪ್ರೇಮ, ಆದರ್ಶವಾದ, ಕಾಲ್ಪನಿಕತೆ ಇವೇ ಮುಂತಾದ ಅಂಶಗಳು ಮೆಚ್ಚಿಗೆಯಾಗಲಿಲ್ಲ. ಏಕೆಂದರೆ ಪ್ರಗತಿಶೀಲರು ತಲೆ ಎತ್ತುತ್ತಿದ್ದ ಸಂದರ್ಭದಲ್ಲಿ ಮಹಿಳೆಯರಿಗೆ, ಕಾರ್ಮಿಕರಿಗೆ ಸಮಾಜದಲ್ಲಿ ಯಾವುದೇ ಸ್ಥಾನಮಾನಗಳು ಇರಲಿಲ್ಲ. ಕಾರ್ಮಿಕರ ಶೋಷಣೆ ನಿರಂತರವಾಗಿತ್ತು. ದೀನ–ದಲಿತರ ಜೀವನ ಚಿಂತಾಜನಕವಾಗಿತ್ತು. ಅರ್ಥಿಕ ಅಸಮಾನತೆ ಎಲ್ಲೆಡೆಯೂ ಕಂಡು ಬರುತ್ತಿತ್ತು. ಸಮಾಜದ ಈ ಎಲ್ಲಾ ಅನಿಷ್ಟ ಪದ್ಧತಿಗಳನ್ನು ಹೊಡೆದೋಡಿಸುವ, ಜನತೆಯ ಸಂಸ್ಕೃತಿ, ಆಸೆ, ಆಶಯ, ಸುಖ–ದುಃಖಗಳಿಗೆ ಕನ್ನಡಿ ಹಿಡಿಯುವ ಸಾಹಿತ್ಯವು ಪ್ರಗತಿಶೀಲರಿಂದ ರಚನೆಯಾಯಿತು. ಶೋಷಣೆಗೊಳಗಾದ ಜನ ವರ್ಗದ ಸಂಕಷ್ಟಗಳನ್ನು, ಸಮಸ್ಯೆಗಳನ್ನು ಅನುಕಂಪದಿಂದ ಕಂಡು ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕೆಂಬ ತುಡಿತ ಅವರದ್ದಾಗಿತ್ತು. "ಮೂಲಭೂತವಾಗಿ ಪ್ರಗತಿಶೀಲ ಸಾಹಿತ್ಯದ ಉದ್ದೇಶ ಜನರಲ್ಲಿ ಎಚ್ಚರವನ್ನುಂಟು ಮಾಡುವುದು, ಜನರಿಗೆ ಹತ್ತಿರವಾಗಿ ಅವರಿಗೆ ಅರ್ಥವಾಗುವ ಸರಳಭಾಷೆಯಲ್ಲಿ ತಾವು ಬಯಸಿದ, ನಂಬಿದ ವಿಚಾರಗಳನ್ನು ಪ್ರಚಾರಮಾಡುವುದು ಮುಖ್ಯವಾಗಿತ್ತು" (ಸಂ:ಶಿವರುದ್ರಪ್ಪ ಜಿ.ಎಸ್., ಪು. ೫೩)

ಝೋಲಾ, ಗಾರ್ಕಿಯಂತಹವರನ್ನು ಮಾದರಿಯನ್ನಾಗಿ ಹೊಂದಿದ್ದ ಪ್ರಗತಿಶೀಲರು ಭಿನ್ನವಾಗಿ ಸಾಹಿತ್ಯ ರಚನೆ ಮಾಡತೊಡಗಿದರು. ಸುತ್ತಲಿನ ಸಮಾಜದ ಕೊಳೆಯನ್ನು ತೊಡೆದು ಹಾಕುವ ಛಲದಿಂದ ಗೌರವಸ್ಥರು ಬಚ್ಚಿಡುವ ವಿಷಯಗಳನ್ನು ಆರಿಸಿ ಬರೆದರು. ಅಷಾಢಭೂತಿತನಗಳನ್ನು, ಮಠಗಳಲ್ಲಿ, ಮನೆಗಳಲ್ಲಿ ದೇವಾಲಯಗಳಲ್ಲಿ ನಡೆಯುವ ಮೋಸ, ದುಷ್ಟಾಚಾರಗಳನ್ನು ಬಯಲಿಗೆಳೆಯಲು ಬರೆದರು. ಲೈಂಗಿಕ ಜೀವನದಲ್ಲಿ ಮೋಸ ಹೆಚ್ಚಾಗಿ ನಡೆಯುವುದರಿಂದ

ಇದು ಅನೇಕ ಕೃತಿಗಳ ವಸ್ತುವಾಯಿತು. ಮಠಗಳಲ್ಲಿ, ಕಾರ್ಖಾನೆಗಳಲ್ಲಿ ನಡೆಯುವ ಶೋಷಣೆ ಹಲವು ಕೃತಿಗಳ ವಸ್ತುವಾಯಿತು. ಜೀವನದ ನಗ್ನ ಸತ್ಯವನ್ನು ನಿರೂಪಿಸುವುದು, ಸುತ್ತಲಿನ ಸಮಾಜದಲ್ಲಿದ್ದ ದೀನರ, ದಲಿತರ ಶೋಷಣೆಯನ್ನು ತೋರಿಸುವುದು ಇವರ ಉದ್ದೇಶವಾಗಿತ್ತು. ಹೀಗಾಗಿ ಇವರ ಬರವಣಿಗೆಗಳಲ್ಲಿ ರೋಷ ತುಂಬಿದ ಧಾಟಿಯನ್ನು ಗುರುತಿಸಬಹುದಾಗಿದೆ. ಅ.ನ.ಕೃ., ತ.ರಾ.ಸು., ಅರ್ಚಿಕ ವೆಂಕಟೇಶ, ಬಸವರಾಜ ಕಟ್ಟೀಮನಿ, ಅನಂತನಾರಾಯಣ, ತ್ರಿವೇಣಿ, ನಿರಂಜನ, ಚದುರಂಗ–ವ್ಯಾಸರಾಯ ಬಲ್ಲಾಳ ಮುಂತಾದವರು ಪ್ರಗತಿಶೀಲ ಸಾಹಿತ್ಯದ ಪ್ರಮುಖ ಲೇಖಕರಾಗಿದ್ದಾರೆ. ಇವರು ಹಸಿವು ಬಡತನ, ಪಟ್ಟಭದ್ರ ಹಿತಾಸಕ್ತಿ, ಮಹಿಳಾ ಸಮಸ್ಯೆ, ಕಾರ್ಮಿಕರ ಶೋಷಣೆ ಮುಂತಾದ ಅಂಶಗಳನ್ನು ಕುರಿತು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ.

ಹೀಗೆ ಹೊಸ ಹುರುಪಿನಿಂದ, ಹೊಸ ಉತ್ಸಾಹದಿಂದ ಮೂಡಿ ಬಂದ ಪ್ರಗತಿಶೀಲ ಸಾಹಿತ್ಯವೂ ಕೂಡ ತನ್ನದೇ ಆದ ನ್ಯೂನತೆಗಳನ್ನು ಹೊಂದಿತ್ತು. ಸರಳೀಕರಣ, ನಿರೂಪಣೆಯಲ್ಲಿ–ಭಾಷೆಯಲ್ಲಿ ಭಾವಾತಿರೇಕ, ಭಾಷೆಯ ಅಸಮರ್ಪಕ ಬಳಕೆ ಮುಖ್ಯವಾಗಿವೆ. ಪ್ರಗತಿಶೀಲ ಸಾಹಿತ್ಯ ಕೃತಿಯು ಸಮಸ್ಯೆಗಳನ್ನು ಚರ್ಚಿಸುವಲ್ಲಿ ಸಮಸ್ಯೆಗಳತ್ತ ನಮ್ಮ ಗಮನವನ್ನು ಸೆಳೆಯುವುದು ಮಾತ್ರವಲ್ಲ, ಮಾನವ ಸಮಾಜ, ಮಾನವ ಸ್ವಭಾವ ಇವುಗಳ ಸಂದರ್ಭದಲ್ಲಿ ಸಮಸ್ಯೆಯನ್ನಿಟ್ಟು ನೋಡುತ್ತದೆ. ಸಾಹಿತ್ಯದ ಜೀವಾಳ ಸೂಕ್ಷ್ಮತೆ. ಸಾಮಾನ್ಯೀಕರಣಗಳು ಜೀವನವನ್ನು ಸ್ಥೂಲಗೊಳಿಸುತ್ತವೆ.ಸಾಹಿತ್ಯದ ಕೃತಿ ಸಮಷ್ಟಿ ದರ್ಶನವನ್ನು ಕಳೆದುಕೊಳ್ಳುತ್ತದೆ. ಜೀವನದ ಸಂಕೀರ್ಣತೆಯನ್ನು ಮರೆಯದೆ, ಅನುಭವವನ್ನು ಛಿದ್ರಗೊಳಿಸದೆ ಸೂಕ್ಷ್ಮತೆಯನ್ನು ಸಾಧಿಸುತ್ತದೆ. ಆದರೆ ಪ್ರಗತಿಶೀಲ ಸಾಹಿತ್ಯ ಓದುಗರಿಗೆ ಸಮಸ್ಯೆಯ ಅನುಭವವನ್ನು ಮೂಡಿಸುವಲ್ಲಿ ವಿಫಲವಾಗಿ ಕೇವಲ ವಿವರಗಳ ವರ್ಣನೆಯಾಯಿತು. ಪ್ರಗತಿಶೀಲ ಸಾಹಿತ್ಯದಲ್ಲಿ ಭಾಷೆ ಅನುಭವದ ಅನಿವಾರ್ಯ ರೂಪವಾಗಿ ಬರಲಿಲ್ಲ. ಬದಲಾಗಿ ಸಾಹಿತಿಯ ಆವೇಶ ,ಆಕಾಂಕ್ಷೆಗಳ ಫಲವಾಗಿ ಬಂದಿತು. "ಆವೇಶ, ಭಾವಾತಿರೇಕ, ದಿಢೀರ್ ಪರಿಣಾಮವನ್ನು ಉಂಟು ಮಾಡುವ ತವಕ ಇವುಗಳಿಂದಾಗಿ ಪ್ರಗತಿಶೀಲ ಸಾಹಿತ್ಯದಲ್ಲಿ ಭಾಷೆ ಕೆಲವೊಮ್ಮೆ ಅಳ್ಳಕವಾಯಿತು. ಆವೇಶಪೂರಿತವಾಗಿ ತನ್ನ ಖಚಿತತೆಯನ್ನು ಕಳೆದುಕೊಂಡಿತು" (ಶೇಷಗಿರಿರಾವ್ ಎಲ್.ಎಸ್., ಪು. ೮೦). ಪ್ರಗತಿವಾದವು ಇಲ್ಲಿನ ಪರಿಸರಕ್ಕೆ ಹೊಂದಿಕೆಯಾಗಲಿಲ್ಲ. ಪ್ರಗತಿಶೀಲರು ತಮ್ಮ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಅದಕ್ಕೆ ಸೂಕ್ತವಾದ ತಾಂತ್ರಿಕ ಬೆಳವಣಿಗೆಯನ್ನು ಸಾಧಿಸಲಾರದೇ ಹೋದರು. ಹೀಗೆ ಸೂಕ್ತ ವಾತಾವರಣದ ಕೊರತೆಯಿಂದಾಗಿ ಪ್ರಗತಿಶೀಲ ಸಾಹಿತ್ಯ ನಂದಿತು.

ಜಗತ್ತಿನ ಎರಡನೆಯ ಮಹಾಯುದ್ಧ ಹಾಗೂ ೧೯೪೭ರ ಸ್ವಾತಂತ್ರ್ಯಾ ನಂತರ ಕನ್ನಡ ಸಾಹಿತ್ಯದಲ್ಲಿ ಹೊಸ ಪರಿವರ್ತನೆ ಮೂಡಲಾರಂಭಿಸಿತು. ಸ್ವಾತಂತ್ರ್ಯ ಬರುವವರೆಗೆ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದವರಿಗೆ ನಾಯಕರೆಲ್ಲಾ ತ್ಯಾಗಮೂರ್ತಿಗಳಂತೆ, ದೇವಮಾನವರಂತೆ ಕಾಣುತ್ತಿದ್ದರು. ಸ್ವಾತಂತ್ರ್ಯ ಬಂದ ನಂತರ ದೇಶದ ದಾರಿದ್ರ್ಯ, ಅಜ್ಞಾನ, ಕಷ್ಟಗಳೆಲ್ಲ ಕಣ್ಮರೆಯಗುತ್ತವೆ ಎಂಬ ವಿಶ್ವಾಸವನ್ನು ಎಲ್ಲರೂ ಹೊಂದಿದ್ದರು. ಆದರೆ ದೇಶಾಭಿಮಾನ, ತ್ಯಾಗಗಳ ಸಾಕಾರ ರೂಪಗಳಂತೆ ಕಾಣುತ್ತಿದ್ದವರ ಪ್ರತ್ಯೇಕ ವ್ಯಕ್ತಿತ್ವಗಳು ಸ್ವಾತಂತ್ರ್ಯಾನಂತರ ಪ್ರಕಟವಾಗುತ್ತಿದ್ದಂತೆ, ಹೋರಾಟದ

ಕಾಲದಲ್ಲಿದ್ದ ಮೌಲ್ಯಗಳು ದುರ್ಬಲವಾದಂತೆ ವಿದ್ಯಾವಂತರ ಮನಸ್ಸು ಪ್ರಕ್ಷುಬ್ಧಗೊಂಡಿತು. ವಿಡಂಬನೆಯ ಕಣ್ಣು ತೆರೆಯಿತು. ಹೊಸ ಮೌಲ್ಯಗಳಿಗಾಗಿ ಅನ್ವೇಷಣೆ ಅನಿವಾರ್ಯವಾಯಿತು. ಹೋರಾಟದ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಜನ ನಾಯಕರು, ಸಾಹಿತಿಗಳು ಬಳಸುತ್ತಿದ್ದ ಭಾಷೆ ಪ್ರಾಮಾಣಿಕವಾಗಿ ಕಾಣುತ್ತಿತ್ತು. ಸತ್ಯ, ಅಹಿಂಸೆ, ತ್ಯಾಗ, ಬಲಿದಾನ ಮೊದಲಾದ ಶಬ್ದಗಳು ಬಾಳನ್ನು ಅರ್ಥಪೂರ್ಣ ಮಾಡಬಲ್ಲ ಮೌಲ್ಯಗಳ ಪ್ರತಿನಿಧಿಗಳಾಗಿದ್ದವು. ಆದರೆ ಸ್ವಾತಂತ್ರ್ಯಾ ನಂತರ ಇವುಗಳು ಪರಿಹಾಸ್ಯದ ಲೇಪನವನ್ನು ಪಡೆದುಕೊಂಡವು.

ಎರಡನೇ ಮಹಾಯುದ್ಧದ ನಂತರ ಬೇರೆ ಬೇರೆ ದೇಶಗಳಿಂದ ಭಾರತಕ್ಕೆ ಸಾಹಿತ್ಯ ಹರಿದು ಬರಲಾರಂಭಿಸಿತು. ಪೆಂಗ್ವಿನ್-ಪೆಲಿಕನ್ ಮಾಲೆಯ ಸುಲಭ ಪುಸ್ತಕಗಳು, ಇಂಗ್ಲೀಷ್ ಓದುಗರಿಗೆ ವರದಾನವಾಗಿ ಪರಿಣಮಿಸಿದವು, ಯೂರೋಪಿನ ಹಲವು ಭಾಷೆಗಳಲ್ಲಿನ ಮುಖ್ಯ ಸಾಹಿತ್ಯ ಕೃತಿಗಳು ಇಂಗ್ಲೀಷ್ ಅನುವಾದದಲ್ಲಿ ಭಾರತದಲ್ಲಿ ಲಭ್ಯವಾದವು. ಸಾಹಿತ್ಯ ಕೃತಿಗಳ ಜೊತೆಗೆ ಮನೋವೈಜ್ಞಾನಿಕ ವಿಷಯಕ್ಕೆ ಸಂಬಂಧಿಸಿದ ಕೃತಿಗಳೂ ಲಭ್ಯವಾದವು. ಮನುಷ್ಯನ ಹೊರ ಜಗತ್ತು, ಒಳಜಗತ್ತು ಎರಡರ ವಿಷಯದಲ್ಲಿಯೂ ರಕ್ತಗತವಾಗಿದ್ದ ಕಲ್ಪನೆಗಳೆಲ್ಲ ತಲೆಕೆಳಗಾದವು. ಮೌಲ್ಯಗಳ ಕುಸಿತ ಮತ್ತು ಭ್ರಮೆ ನಿರಸನಗಳಿಂದ ಕೂಡಿದ ವಾತಾವರಣವೇರ್ಪಟ್ಟಿತು. ಬದಲಾವಣೆಗಾಗಿ ಹಾತೊರೆಯುತ್ತಿದ್ದ ಲೇಖಕರಿಗೆ ಈ ವಾತಾವರಣ ಸೂಕ್ತವಾಗಿ ಒದಗಿ ಬಂದಿತು. ನವ್ಯ ಸಾಹಿತ್ಯದ ಉಗಮವಾಯಿತು.

ಪ್ರಗತಿಶೀಲರಂತೆ ನವ್ಯರೂ ಹಿಂದಿನ ಸಾಹಿತ್ಯಕ್ಕೆ ಪ್ರತಿಭಟನೆಯ ಮನೋಭಾವವನ್ನೇ ತೋರಿದರು. ನವೋದಯ ಸಾಹಿತ್ಯ ತನ್ನ ಫಲವನ್ನು ಕೊಟ್ಟು ಮುಗಿಸಿದೆ. ಅದರ ಸತ್ವ ತೀರಿತು ಎಂದು ಪ್ರಗತಿಶೀಲರು ಘೋಷಿಸಿದಂತೆ, ನವೋದಯ ಪ್ರಗತಿಶೀಲ ಎರಡು ಸಾಹಿತ್ಯಗಳೂ ತಮ್ಮ ಪಾತ್ರವನ್ನು ಮುಗಿಸಿವೆ, ಅವುಗಳ ಸತ್ವ ತೀರಿತು ಎಂದು ನವ್ಯರು ಘೋಷಿಸಿದರು (ಶೇಷಗಿರಿರಾವ್ ಎಲ್.ಎಸ್., ಪು. ೮೩). ನವೋದಯ ಪ್ರಗತಿಶೀಲರು ಸಾಹಿತ್ಯವನ್ನು ಕಂಡ ರೀತಿಗಿಂತಲೂ ಭಿನ್ನವಾಗಿ ನವ್ಯರು ಕಂಡರು. ಖಚಿತವಾದ ಮೌಲ್ಯಗಳನ್ನು ನಂಬಿದ್ದ ಪ್ರಗತಿಶೀಲರು ವಾಸ್ತವತಾವಾದವನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಬಳಸಿಕೊಂಡರು. ಜೀವನದಲ್ಲಿ ತಾವು ಕಂಡ ಅರ್ಥ, ಸ್ವೀಕರಿಸಿದ ಮೌಲ್ಯಗಳನ್ನು ಓದುಗರಿಗೆ ತಿಳಿಸಿಕೊಡುವ ಸಾಧನವನ್ನಾಗಿ ಸಾಹಿತ್ಯವನ್ನು ಬಳಸಿದರು. ಇದಕ್ಕಾಗಿ ಜೀವನದ ಸಾಮಗ್ರಿಯನ್ನು ಆರಿಸಿಕೊಂಡು ತಮ್ಮ ಅರ್ಥ ಮೌಲ್ಯಗಳನ್ನು ಪ್ರಕಟಿಸುವ ವಿನ್ಯಾಸವನ್ನು ಸಾಧಿಸಲು ಪ್ರಯತ್ನಿಸಿದರು. ಇದರ ಪರಿಣಾಮ ಕೃತಿಯ ಅನುಭವ ಒಂದು ಸರಳವಾದ ಸಂದರ್ಭದ ಚೌಕಟ್ಟಿಗೆ ಸಿಕ್ಕುತ್ತಿತ್ತು, ಆದರೆ ಜೀವನವನ್ನು ನಿರ್ದಿಷ್ಟ ವಿನ್ಯಾಸದಲ್ಲಿ ರೂಪಿಸಬಹುದೆಂಬ ಪ್ರಗತಿಶೀಲರ ನಿಲುವನ್ನು ಪ್ರಶ್ನಿಸಿದ ನವ್ಯ ಬರಹಗಾರರು ಸಾಹಿತ್ಯವನ್ನು ಜೀವನದ ವಿಶ್ಲೇಷಣೆಯ ಮಾಧ್ಯಮವನ್ನಾಗಿ ಮಾಡಿಕೊಂಡು ಸೃಷ್ಟಿಸಿದ ಲೋಕ ಅಮೂರ್ತವಾದದ್ದು.

ಜೀವನದಲ್ಲಿ ಅರ್ಥವುಂಟು, ಜೀವನಕ್ಕೆ ಅರ್ಥವನ್ನು ಕೊಡುವ ಮೌಲ್ಯಗಳು ಇವು ಎಂಬ ತೀರ್ಮಾನಗಳನ್ನು ತರದೆ ತನ್ನ ಜೀವನಾನುಭವವನಷ್ಟೇ ನವ್ಯರು ತಮ್ಮ ಸಾಹಿತ್ಯದಲ್ಲಿ ತಂದರು. ಪ್ರಗತಿಶೀಲರ ಸಾಹಿತ್ಯದಲ್ಲಿ ಸಾಮಾಜಿಕ ಮನುಷ್ಯ ಆವರಿಸಿದ್ದ ಕೇಂದ್ರ ಸ್ಥಾನವನ್ನು ನವ್ಯರ ಕಾಲದಲ್ಲಿ

ಏಕಾಕಿಯಾದ, ಆಧುನಿಕ ಮನುಷ್ಯ ಆಕ್ರಮಿಸಿಕೊಂಡನು. ಮನುಷ್ಯನ ವೈಯಕ್ತಿಕ ಸಮಸ್ಯೆಗಳು, ಅಧಿಕೃತ ಅನುಭವಗಳು ತೀವ್ರ ಮತ್ತು ಪ್ರಾಮಾಣಿಕ ಸ್ವರೂಪದವುಗಳಾಗಿ ಸಾರ್ವತ್ರಿಕತೆಯನ್ನು ಪಡೆದುಕೊಳ್ಳುತ್ತವೆ ಎಂಬ ನಿಲುವನ್ನು ನವ್ಯರು ಹೊಂದಿದ್ದರು. ಮನಸ್ಸಿನ ಒಳಹೊಕ್ಕು, ಅದರ ಪರಿಯನ್ನೂ, ಪದರಗಳನ್ನೂ ಬಿಡಿಸಿ ನೋಡುವ ಕಾರ್ಯಕ್ಕೆ ಕೈ ಹಾಕಿದರು. "ಅಸ್ತಿತ್ವವಾದಿ ವರ್ತಮಾನದ ಆದ್ಯತೆ, ಮೌಲ್ಯಗಳ ಆತ್ಮ ನಿಷ್ಠತೆ ಹಾಗೂ ತೀಕ್ಷ್ಣ ಕಲಾ ಪ್ರಜ್ಞೆ ಇವು ನವ್ಯರನ್ನು ಅವರ ಹಿಂದಿನವರಿಂದ ಬೇರ್ಪಡಿಸುವ ಗುಣಗಳಾಗಿವೆ" (ಆಮೂರ ಜಿ.ಎಸ್., ಪು. ೧೪೧). ನವ್ಯದ ಭಾಷೆ, ತಂತ್ರಗಳು ಪರಿವರ್ತನೆಗೊಂಡು, ಸಣ್ಣ ಕಥೆ ಕಾವ್ಯಕ್ಕೆ ಸಮೀಪವಾಯಿತು. ಕಾಲಾನುಕ್ರಮದ ಕಥಾ ನಿರೂಪಣೆ ಮತ್ತು ತರ್ಕಬದ್ಧ ಬೆಳವಣಿಗೆಗಳು ಇಲ್ಲವಾದವು. ಅಸ್ತಿತ್ವವಾದ ಮತ್ತು ಮಾನವಶಾಸ್ತ್ರಗಳ ಪ್ರಭಾವವನ್ನೂ ನವ್ಯ ಕಥೆಗಳು ಮೈಗೂಡಿಸಿಕೊಂಡವು. ಪ್ರಜ್ಞಾ ಪ್ರವಾಹ ತಂತ್ರದ ಬಳಕೆ ಸಮರ್ಥವಾಗಿ ಆಯಿತು. "ನವ್ಯ ಕಾದಂಬರಿಗಳ ಹೊಸತನಕ್ಕೂ ಅವುಗಳ ಮೌಲ್ಯ ಪ್ರಜ್ಞೆಗೂ ನಿಕಟ ಸಂಬಂಧವಿದೆ. ಸಂಸ್ಕೃತಿ ಜನ್ಯ ಮೌಲ್ಯಗಳನ್ನು ಅವುಗಳು ಇದ್ದಂತೆಯೇ ಒಪ್ಪಿಕೊಳ್ಳದೇ ಇರುವುದು ಅವರ ಮನೋಧರ್ಮ ಮತ್ತು ತಾತ್ವಿಕ ದೃಷ್ಟಿ. ಹೊಸ ಮೌಲ್ಯಗಳನ್ನು ಶೋಧಿಸುವುದರ ಮೂಲಕ ಸಂಸ್ಕೃತಿಯ ಸ್ವರೂಪವನ್ನು ಬದಲಿಸಲು ನವ್ಯ ಕಾದಂಬರಿಕಾರ ಪ್ರಯತ್ನಿಸುತ್ತಾನೆ" (ಆಮೂರ ಜಿ.ಎಸ್., ಪು. ೨೫೭). ನವ್ಯ ಕಾವ್ಯ ಜೀವನದ ಸಂಕೀರ್ಣತೆಯನ್ನು ಸರಳಗೊಳಿಸದೆ ಅನುಭವಕ್ಕೆ ಭಾಷೆಯಲ್ಲಿ ಶರೀರ ಕೊಡುವ ಪ್ರಯತ್ನ ಮಾಡುತ್ತದೆ. ನವ್ಯವು ಅನುಭವವನ್ನು ಜೀವನದ ಸಂಕೀರ್ಣ ಸಂದರ್ಭದಲ್ಲಿಟ್ಟು ನೋಡುತ್ತದೆ. ಅನುಭವ ಅರ್ಥವನ್ನು ಬಿಚ್ಚಿಕೊಳ್ಳುವಂತೆ ಮಾಡುತ್ತದೆ.

ನವ್ಯರಿಗೆ ಸಮಾಜದ ಸಮಸ್ಯೆಗಳಿಗಿಂತ ವೈಯಕ್ತಿಕ ಸಮಸ್ಯೆಗಳೇ ಹೆಚ್ಚು ಅಧಿಕೃತ ಎನಿಸಿದವು. ಪ್ರಜ್ಞೆಯ ಸ್ಥಿತಿಗಳನ್ನು ಮಾತುಗಳಲ್ಲಿ ಹಿಡಿದಿಡುವುದು ಇವರ ಗುರಿಯಾಯಿತು. ವ್ಯಕ್ತಿಯ ಮನಸ್ಸಿನ ಒಳತೋಟಿಗಳನ್ನು, ರಹಸ್ಯಗಳನ್ನು ನಿಸ್ಸಂಕೋಚವಾಗಿ ಚಿತ್ರಿಸಿದರು. ಸಾಮಾಜಿಕ ಬದಲಾವಣೆಗಳನ್ನು ಅವು ವ್ಯಕ್ತಿಯ ಸಂವೇದನೆಯ ಮೇಲೆ ಉಂಟು ಮಾಡುವ ಪರಿಣಾಮಗಳ ಮೂಲಕ ಅರ್ಥ ಮಾಡಿಕೊಳ್ಳುವುದು ನವ್ಯರ ಉದ್ದೇಶವಾಯಿತು (ಶಾಮರಾಯ ತ.ಸು., ಪು. ೨೪೧). ಸಾಹಿತ್ಯವು ಸೌಂದರ್ಯದ ಸೃಷ್ಟಿ ಎಂಬ ಭಾವನೆಯನ್ನು ನವ್ಯ ಸಾಹಿತ್ಯ ತಿರಸ್ಕರಿಸುತ್ತದೆ. ಸಂವಹನಕ್ಕಿಂತ ಶೋಧನೆ ಮುಖ್ಯ ಎಂದಾಗ ಭಾಷೆಯ ಬಳಕೆಯ ವಿಷಯದಲ್ಲಿ ನವ್ಯರ ಮನೋಧರ್ಮ ಹಿಂದಿನವರ ಮನೋಧರ್ಮಕ್ಕಿಂತ ತೀರಾ ಭಿನ್ನವಾಯಿತು. ಭಾಷೆಯ ವಿಚಾರದಲ್ಲಿ ಇತರರ ಮೇಲೆ ಪರಿಣಾಮ ಬೀರಬೇಕೆಂದಾಗಲೀ ಅಥವಾ ಯಾವುದೇ ಸಂಪ್ರದಾಯವನ್ನಾಗಲೀ ನವ್ಯರು ಒಪ್ಪಿಕೊಳ್ಳುವುದಿಲ್ಲ. ನವ್ಯ ಸಾಹಿತ್ಯ ಸಾಹಿತ್ಯ ಕೃತಿಯ ಸಾವಯವ ಕಲ್ಪನೆಗೆ ಒತ್ತುಕೊಟ್ಟಿತು. ಅನುಭವಕ್ಕೆ ಸೃಜನ ಕಾರ್ಯವು ಸಮಗ್ರವಾಗಿ ಕೃತಿಯಲ್ಲಿ ಭಾಷೆಯ ಶರೀರ ಕೊಡುತ್ತದೆ ಎಂಬ ಪರಿಕಲ್ಪನೆ ಬೆಳೆಯಿತು. ಹೊಸ ವಿಮರ್ಶಾ ಪದ್ಧತಿಗಳೂ ಬೆಳೆದವು. ಸುಮಾರು ಇಪ್ಪತ್ತು ವರ್ಷಗಳ ಕಾಲ ನವ್ಯ ಸಾಹಿತ್ಯ ಪಂಥ ಬಹಳ ಪ್ರಬಲವಾಗಿತ್ತು. ಗೋಪಾಲಕೃಷ್ಣ ಅಡಿಗರು ನವ್ಯ ಮಾರ್ಗದ ಪ್ರವರ್ತಕರು, ನವ್ಯ ಸಾಹಿತ್ಯ ರಾಮಚಂದ್ರ ಶರ್ಮ, ನಿಸಾರ್ ಅಹಮದ್, ಎ.ಕೆ. ರಾಮಾನುಜನ್,

ಲಂಕೇಶ, ಯಶವಂತ ಚಿತ್ತಾಲ, ಶಾಂತಿನಾಥದೇಸಾಯಿ, ಯು.ಆರ್. ಅನಂತಮೂರ್ತಿ ಅವರಂತಹ ಪ್ರತಿಭಾವಂತ ಕವಿಗಳನ್ನು, ಕಥೆಗಾರರನ್ನು ಸೃಷ್ಟಿಸಿತು. ಶಾಂತಿನಾಥ ದೇಸಾಯಿ ಅವರು ಕೊನೆಯವರೆವಿಗೂ ನವ್ಯರಾಗಿಯೇ ಉಳಿದುಕೊಂಡರು.

ನವ್ಯ ಸಾಹಿತ್ಯ ಮೊಟ್ಟ ಮೊದಲ ಬಾರಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಹಿತಿ ಹಾಗೂ ಓದುಗರ ಮಧ್ಯೆ ಕಂದಕವನ್ನು ನಿರ್ಮಿಸಿತು. ಇವರ ಗುರಿಗಳು ಸೂಕ್ಷ್ಮ ಹಾಗೂ ಸಂಕೀರ್ಣಗೊಂಡ ಫಲವಾಗಿ ಇವರ ಬರವಣಿಗೆಯೂ ಸಂಕೀರ್ಣಗೊಂಡು ಕ್ಲಿಷ್ಟವೆನಿಸಿತು. ಹೆಚ್ಚು ಶ್ರಮವನ್ನೂ, ಸೂಕ್ಷ್ಮತೆಯನ್ನೂ ಓದುಗರಿಂದ ಬೇಡಿತು. ಸಾಮಾನ್ಯ ಓದುಗರು ಕಥೆಯಿಂದ ದೂರ ಸರಿಯತೊಡಗಿದರು. ಕೆಲವು ಕಾಲದ ನಂತರ ವಸ್ತುವಿನ ಆಯ್ಕೆಯಲ್ಲಿ ಪುನರಾವೃತ್ತಿ ಕಂಡು ಬಂದಿತಲ್ಲದೆ ಅಂತರ್ಮುಖತೆ ಒಂದು ಗೀಳಾಯಿತು. ನವ್ಯ ಸಾಹಿತ್ಯ ಸುಶಿಕ್ಷಿತ ಮಧ್ಯಮ ವರ್ಗದ ಸ್ವತ್ತಾಗಿದೆಯೆಂದೂ, ನವ್ಯ ಸಾಹಿತ್ಯದಲ್ಲಿ ಅಂತರ್ಮುಖತೆ ಮಿತಿಮೀರಿ ಬದುಕಿನ ಸ್ಪರ್ಶವೇ ನಷ್ಟವಾಗಿದೆ ಎಂಬ ಅಭಿಪ್ರಾಯಗಳು ಮೂಡತೊಡಗಿದವು. ಅದು ಬರಿಯ ಬೌದ್ಧಿಕ ಕಸರತ್ತು ಎಂಬಂಥ ಮಾತುಗಳೂ ಕೇಳಿಬಂದವು. ನವ್ಯ ಸಾಹಿತ್ಯವನ್ನೆಲ್ಲಾ ಓದಿದರೂ ಮಾನವ ಕೋಟಿಯಲ್ಲಿ ಯೇಸು, ವಿವೇಕಾನಂದ, ಸಾಕ್ರಟೀಸ್, ಬುದ್ಧ, ಭಗತ್‌ಸಿಂಗ್, ಗಾಂಧೀಜಿ, ಮದರ್ ಥೆರೆಸಾರಂತಹ ವ್ಯಕ್ತಿಗಳು ಇರುವುದು ಸಾಧ್ಯ ಎಂಬ ಕಲ್ಪನೆ ಬರುವುದಿಲ್ಲ. ಇಂಥವರು ಇರುವುದು ಸಾಧ್ಯ ಎಂಬ ಕಲ್ಪನೆಯೂ ಬಾರದಂತೆ ಮನಸ್ಸನ್ನು ವಿಶ್ಲೇಷಿಸುವ ಮನಸ್ಸಿನ ಪದರ ಪದರಗಳಲ್ಲಿ ಸುಡುವ ಕಾಮದ ಕೆಂಡವನ್ನೇ ತೋರಿಸುವ ಮಾನವನ ದೌರ್ಬಲ್ಯದ ಮೇಲೆಯೇ ಒತ್ತು ಹಾಕುವ ಸಾಹಿತ್ಯ ವಾಸ್ತವಿಕತೆಯನ್ನು ಕಡೆಗಣಿಸಿತು. ಮಾನವ ಸ್ವಭಾವವನ್ನು ಸಮಗ್ರವಾಗಿ ಚಿತ್ರಿಸಲಿಲ್ಲ. ನವ್ಯ ಸಾಹಿತ್ಯವು ಬಹುಮಟ್ಟಿಗೆ ನಗರದ ಜಾಣರ, ಸೊಫಿಸ್ಟಿಕೇಟೆಡ್ ವರ್ಗದ ಸಾಹಿತ್ಯವಾಯಿತು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ನವ್ಯದ ಪ್ರಭಾವ ಕಡಿಮೆಯಾಗಿ ಮತ್ತೊಂದು ವರ್ಗ ಮೂಡತೊಡಗಿತು.

ಸರಳ ಬರವಣಿಗೆಯ ಮೂಲಕ ಸಮಾಜದ ಶೋಷಿತ ವರ್ಗಗಳಲ್ಲಿ ಜಾಗೃತಿ ಮೂಡಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವಂತೆ ಮಾಡುವ ಉದ್ದೇಶದಿಂದ ಹೊಸ ಸಾಹಿತ್ಯ ಪಂಥವೊಂದು ಉಗಮವಾಯಿತು. ಅದುವೇ ದಲಿತ ಬಂಡಾಯ ಸಾಹಿತ್ಯ. ಕತೆಗಿಂತ ವಸ್ತುವಿಗೆ ಹೆಚ್ಚಿನ ಆದ್ಯತೆಯನ್ನು ನೀಡಬಯಸಿದ ಈ ಲೇಖಕರು ಸಾಮಾಜಿಕ ಅನ್ಯಾಯ, ಶೋಷಣೆ, ಬಡತನಗಳ ನಿವಾರಣೆಯ ಉದ್ದೇಶವನ್ನು ಹೊಂದಿದ್ದಾರೆ. ನಮ್ಮ ಜನತೆಯ ಬಹುಭಾಗವಾದ ಹಳ್ಳಿಯವರ, ಹಿಂದೆ ಬಿದ್ದವರ, ಕಷ್ಟ ಪಡುವವರ ಜೀವನ ಸಾಹಿತ್ಯಕ್ಕೆ ವಸ್ತುವಾಗಬೇಕು. ಓದುಗರಿಗೆ ಅರ್ಥವಾಗುವಂತೆ ಬರೆಯಬೇಕು ಎಂಬ ಆಶಯ ಇದರದ್ದಾಗಿದೆ. ದಲಿತ ಬಂಡಾಯವು ಮಾರ್ಕ್ಸ್‌ವಾದ, ಲೋಹಿಯಾವಾದ ಹಾಗೂ ಅಂಬೇಡ್ಕರ್ ವಾದಗಳಿಂದ ವಿಶೇಷವಾಗಿ ಪ್ರಭಾವಿತವಾಗಿದೆ. ಮರಾಠಿ ದಲಿತ ಸಾಹಿತ್ಯವೂ ಕೂಡ ಇದಕ್ಕೆ ಪ್ರಬಲ ಪ್ರೇರಣೆ ನೀಡಿದೆ. "ದಲಿತರೆಂದರೆ ಶೋಷಣೆಗೆ ಒಳಗಾದ ಎಲ್ಲ ಶ್ರಮಜೀವಿಗಳು ಹಾಗೂ ದಲಿತ ಸಾಹಿತ್ಯ ಎಂದರೆ ದಲಿತರು ದಲಿತರನ್ನು ಕುರಿತು ಸೃಷ್ಟಿಸಿದ ಪ್ರಕ್ಷೋಭಕ ಹಾಗೂ ವಿದ್ರೋಹಿ ಸಾಹಿತ್ಯ" ಎಂದು ಮರಾಠಿ ದಲಿತ ಸಾಹಿತ್ಯದ ಪ್ರವರ್ತಕರಲ್ಲಿ ಒಬ್ಬರಾದ ಡಾ.ಮ.ನ. ವಾನಖಡೆ ಅವರು ವ್ಯಾಖ್ಯಾನ

ನೀಡಿದ್ದಾರೆ. 'ಸಾಮಾಜಿಕ ತುಳಿತಕ್ಕೆ ಒಳಗಾದ ಕೆಳಜಾತಿಯ ಜನ ರಚಿಸಿದ ವಿಮೋಚನೆಯ ಸಾಹಿತ್ಯವೇ ದಲಿತರ ಸಾಹಿತ್ಯ' ಎಂದು ಹೇಳುವ ಸಿದ್ಧಲಿಂಗಯ್ಯನವರೂ ವಾನಖಡೆ ಅವರ ಮಾತುಗಳನ್ನು ಅನುಮೋದಿಸುವಂತಿದೆ (ಆಮೂರ ಜಿ.ಎಸ್., ಪು. ೩೬೦). ಕಳೆದ ಶತಮಾನದ ಎಪ್ಪತ್ತರ ದಶಕದ ಸುಮಾರಿಗೆ ಪ್ರಾರಂಭದ ಹಂತದಲ್ಲಿದ್ದ ದಲಿತ ಬಂಡಾಯ ಕಥಾಸಾಹಿತ್ಯ ಇಂದು ಪ್ರಬುದ್ಧವಾಗಿದೆ. ಸಾಹಿತ್ಯದ ಓದುಗರಲ್ಲಿ ಅಧಿಕ ಸಂಖ್ಯಾತರಾದ ಶಿಷ್ಟ ವರ್ಗಕ್ಕೆ ತಮ್ಮ ಸಮಾಜದ ಬದುಕಿನ ಒಂದು ಗಮನಾರ್ಹ ಭಾಗ, ಒಂದು ಜಗತ್ತು ತೆರೆದುಕೊಂಡಿರುವುದಷ್ಟೇ ಅಲ್ಲ, ಅವರ ಸಂವೇದನೆಗಳು ಮತ್ತಷ್ಟು ಸೂಕ್ಷ್ಮವಾಗುವುದು ಸಾಧ್ಯವಾಗಿದೆ. ಆಧುನಿಕ ಕನ್ನಡದ ಬಹುಮುಖ್ಯ ದಲಿತ ಲೇಖಕ ದೇವನೂರು ಮಹಾದೇವ ಅವರು ತಮ್ಮ ವಿಶಿಷ್ಟ ದಲಿತ ಗ್ರಹಿಕೆಯಿಂದ ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ಅನನ್ಯತೆಯನ್ನು ಕಾಣಿಸಿದ್ದಾರೆ. ಬಂಡಾಯ ಸಾಹಿತ್ಯವನ್ನು ಪ್ರತಿನಿಧಿಸುವ ಬರಗೂರು ರಾಮಚಂದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಕುಂ. ವೀರಭದ್ರಪ್ಪ, ಕಾಳೇಗೌಡ ನಾಗವಾರ, ಚಂದ್ರಶೇಖರ ಪಾಟೀಲ, ಚನ್ನಣ್ಣ ವಾಲೀಕಾರ ಮುಂತಾದ ಲೇಖಕರು ವಿಭಿನ್ನವಾದ ಸಾಮಾಜಿಕ ಕಳಕಳಿಯನ್ನು ತಮ್ಮ ಕಥಾಸಾಹಿತ್ಯದಲ್ಲಿ ಪ್ರಕಟಿಸಿದ್ದಾರೆ. ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯದಲ್ಲಿ ಪ್ರಧಾನವಾಗಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಘರ್ಷದ ಸ್ವರೂಪಗಳನ್ನು ಹಿಡಿದಿಟ್ಟಿದ್ದಾರೆ.

ಕಳೆದ ಶತಮಾನದ ಕೊನೆಯ ಮೂರು ದಶಕದ ಅವಧಿಯಲ್ಲಿ ಹೊಸ ಹೊಸ ಕಥೆಗಾರರು ಕಾಣಿಸಿಕೊಂಡು ಕನ್ನಡ ಕಥಾ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ. ಆ ಪರಂಪರೆ ಇಂದು ಕೂಡ ಮುಂದುವರೆದಿದೆ. ಎಸ್ ದಿವಾಕರ್, ಮೊಗಳ್ಳಿ ಗಣೇಶ್, ಕೇಶವ ಮಳಗಿ, ವಿವೇಕ ಶಾನುಭಾಗ್, ಜಯಂತ ಕಾಯ್ಕಿಣಿ, ಬೋಳುವಾರ ಮಹಮದ್ ಕುಂಞ, ಫಕೀರ ಮಹಮ್ಮದ್ ಕಟ್ಪಾಡಿ, ಸಾರಾ ಅಬೂಬ್ಕರ್, ವೈದೇಹಿ, ನೇಮಿಚಂದ್ರ, ವೀಣಾ ಶಾಂತೇಶ್ವರ, ಅಬ್ದುಲ್ ರಷೀದ್, ಕರೀಗೌಡ ಬೀಚನಹಳ್ಳಿ, ನಾಗತಿಹಳ್ಳಿ ಚಂದ್ರಶೇಖರ, ಕೃಷ್ಣ ಮಾಗಡಿ ಮುಂತಾದ ಕಥೆಗಾರರು ತಮ್ಮ ವಿಶಿಷ್ಟವಾದ ಕೊಡುಗೆಗಳನ್ನು ನೀಡಿದ್ದಾರೆ. ಕಳೆದ ಶತಮಾನ ಮತ್ತು ಈ ಶತಮಾನದ ಆರಂಭದ ದಶಕಗಳಲ್ಲಿ ಕನ್ನಡದ ಆಧುನಿಕ ಸಾಹಿತ್ಯವು ವಿವಿಧ ಬಗೆಯ ಸಂಘರ್ಷಗಳಿಗೆ, ಸ್ತ್ರೀ ಸಂವೇದನೆಗಳಿಗೆ ಹಾಗೂ ದಲಿತ ಸಂಸ್ಕೃತಿಯ ಅನನ್ಯತೆಗಳಿಗೆ ತೆರೆದುಕೊಂಡಿದೆ. ಲೇಖಕರು ಈ ಎಲ್ಲಾ ಬಗೆಯ ವಿಭಿನ್ನವಾದ ವಸ್ತುಗಳನ್ನು ನಿರ್ವಹಿಸುವಾಗ ಹಲವಾರು ಸಂಘರ್ಷಗಳನ್ನು, ದ್ವಂದ್ವಗಳನ್ನು ಎದುರಿಸಿದ್ದಾರೆ. ಹೀಗೆ ಆಯಾಯ ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ವ್ಯಕ್ತವಾದ ಬದಲಾವಣೆಯ ಹಿಂದೆ ಬೌದ್ಧಿಕ, ಸಾಮಾಜಿಕ, ರಾಜಕೀಯ ಸಂಘರ್ಷಗಳನ್ನು ಗುರುತಿಸಲಾಗಿದೆ.

ಪರಾಮರ್ಶನ ಗ್ರಂಥಗಳು :

೧. ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ: ಕಾದಂಬರಿ, ನಾಲ್ಕನೇ ಮುದ್ರಣ, ೨೦೧೬, ಸಪ್ನ ಬುಕ್ ಹೌಸ್, ಬೆಂಗಳೂರು-೦೯

೨. ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ , ದ್ವಿತೀಯ ಪರಿಷ್ಕೃತ ಮುದ್ರಣ, ೨೦೧೨, ಸ್ನೇಹಾ ಪ್ರಿಂಟರ್ಸ್, ಬೆಂಗಳೂರು-೪೦

೩. ಗಂಗಾನಾಯಕ್ ಕೆ.ಎನ್., ಡಾ.ಶಾಂತಿನಾಥ ದೇಸಾಯಿ ಅವರ ಸಾಹಿತ್ಯ : ಒಂದು ಅಧ್ಯಯನ ೨೦೦೧, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು-೦೧.

೪. ಮುಗಳಿ ರಂ.ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ಹನ್ನೆರಡನೆಯ ಸಂಸ್ಕರಣ, ೨೦೦೫, ಗೀತಾ ಬುಕ್‌ಹೌಸ್, ಮೈಸೂರು-೦೧.

೫. ಶಾಮರಾಯ ತ.ಸು., ಕನ್ನಡ ಸಾಹಿತ್ಯ ಚರಿತ್ರೆ, ಮರುಮುದ್ರಣ ೨೦೧೬, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು-೦೨.

೬ ಶೇಷಗಿರಿರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಒಂಬತ್ತನೇ ಮುದ್ರಣ, ೨೦೧೧, ಅಂಕಿತ ಪುಸ್ತಕ, ಬೆಂಗಳೂರು-೦೪.

ಅಧ್ಯಾಯ : ಮೂರು

ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಕುರಿತ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಮೂರು

ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಕುರಿತ ಅಧ್ಯಯನಗಳ ಸಮೀಕ್ಷೆ

ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ಬಂದಿರುವ ವಿಮರ್ಶೆಗಳ, ಅಧ್ಯಯನಗಳ ಸಮೀಕ್ಷೆಯನ್ನು ಮಾಡುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ. ೧೯೫೦ರ ಕಾಲಘಟ್ಟದಲ್ಲಿ ದೇಸಾಯಿಯವರು ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರು. ಕಥೆಗಳು, ಕಾದಂಬರಿಗಳು ಅವರ ಬರವಣಿಗೆಗಳಲ್ಲಿ ಕಾಣಿಸಿಕೊಂಡವು.

ನವೋದಯ ಸಾಹಿತ್ಯ ಚಳುವಳಿ ಹಿಂದೆ ಸರಿದು ನವ್ಯ ಚಳುವಳಿ ಸಾಹಿತ್ಯದ ಮುಖ್ಯ ಶೋಧವಾಗಿ ಬೆಳೆಯುತ್ತಿದ್ದ ಐವತ್ತು ಅರವತ್ತರ ದಶಕಗಳ ಸಂದರ್ಭದಲ್ಲಿ ದೇಸಾಯಿ ಅವರು ತಮ್ಮ ಸೃಜನಶೀಲ ಬರವಣಿಗೆಯನ್ನು ಪ್ರಾರಂಭಿಸಿದರು. ಆ ಕಾಲಕ್ಕೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವಗಳು, ಸ್ವಾತಂತ್ರ್ಯಾ ನಂತರದ ಭಾರತದ ಸ್ಥಿತಿಗತಿಗಳು ನವ್ಯ ಸಾಹಿತ್ಯಕ್ಕೆ ಪ್ರಭಾವ ಪ್ರೇರಣೆಗಳಾಗಿ ಒದಗಿ ಬಂದವು. ಗೋಪಾಲಕೃಷ್ಣ ಅಡಿಗ, ಎ.ಕೆ.ರಾಮಾನುಜನ್, ರಾಮಚಂದ್ರ ಶರ್ಮ ಮುಂತಾದ ಲೇಖಕರಿಂದ ನವ್ಯಕಾವ್ಯದ ಬೇರೆ ಬೇರೆ ಮಾದರಿಗಳು ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದ್ದ ಕಾಲವು ಅದಾಗಿತ್ತು. ಅಡಿಗರ ಪ್ರಭಾವದಿಂದ ಲಂಕೇಶ್, ದೇಸಾಯಿ, ಚಿತ್ತಾಲ, ತೇಜಸ್ವಿ, ಕೆ.ಸದಾಶಿವ, ಶರ್ಮ, ಆಲನಹಳ್ಳಿ, ಗಿರಿ – ಇವರೆಲ್ಲರ ಬರವಣಿಗೆಯೂ ಕೂಡ ಅದೇ ಕಾಲದಲ್ಲಿ ಪ್ರಾರಂಭವಾಯಿತು. ಹೊಸ ಸಾಹಿತ್ಯದ ಶೋಧದ ಜೊತೆ ಜೊತೆಯಲ್ಲಿಯೇ ಹೊಸ ವಿಮರ್ಶೆಯ ಶೋಧವೂ ನಡೆಯುತ್ತಿತ್ತು. ನವ್ಯ ಸಾಹಿತ್ಯದ ಬಹುಪಾಲು ಲೇಖಕರು, ಇಂಗ್ಲೀಷ್ ಅಧ್ಯಾಪಕರಾಗಿದ್ದುದರಿಂದ ಸಹಜವಾಗಿಯೇ ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೂ ಒಳಗಾಗಿದ್ದರು. ಪಾಶ್ಚಾತ್ಯ ಇಂಗ್ಲೀಷ್ ವಿಮರ್ಶಾ ಸಾಹಿತ್ಯವೂ ಕೂಡ ಕನ್ನಡ ನವ್ಯ ವಿಮರ್ಶ ಸಾಹಿತ್ಯಕ್ಕೆ ಪ್ರೇರಣೆಯಾಯಿತು.

ಎರಡನೇ ಮಹಾಯುದ್ಧ ಮತ್ತು ಸ್ವಾತಂತ್ರ್ಯದ ನಂತರದ ಬದುಕಿನ ಅಸಂಖ್ಯ ದ್ವಂದ್ವಗಳು ನವ್ಯ ಸಾಹಿತ್ಯದ ಮುಖ್ಯ ನೆಲೆಯಾದವು. ಅಲ್ಲದೇ ಅನಾಥ ಪ್ರಜ್ಞೆ ,ಗಂಡು–ಹೆಣ್ಣುಗಳ ನಡುವಿನ ಸಂಬಂಧ, ಮನುಷ್ಯನ ಅಸ್ತಿತ್ವ ಕೌಟುಂಬಿಕ ಸಂಘರ್ಷಗಳು, ಮತಾಂತರದ ಪ್ರಶ್ನೆಗಳು, ಗ್ರಾಮೀಣ ಮತ್ತು ನಗರ ಸಮಾಜದ ತೊಳಲಾಟಗಳು, ಸ್ವಾತಂತ್ರ್ಯ ನಂತರದ ಭ್ರಮನಿರಸನ, ಕನ್ನಡ ಸಾಹಿತ್ಯ ಪರಂಪರೆಯೊಂದಿಗಿನ ಸಂಘರ್ಷ, ರಾಜಕೀಯ ಬದಲಾವಣೆಗಳು, ಪ್ರಭಾವಗಳು, ಕನ್ನಡ ನವ್ಯ

ಸಾಹಿತ್ಯದ ಮುಖ್ಯ ನೆಲೆಗಳಾಗಿ ಅಭಿವ್ಯಕ್ತಗೊಂಡವು. ಹೀಗೆ ಭಿನ್ನವಾಗಿ ಅಭಿವ್ಯಕ್ತಗೊಂಡ ನವ್ಯ ಸಾಹಿತ್ಯವನ್ನು ಕುರಿತಂತೆ ಹೊಸ ನವ್ಯ ವಿಮರ್ಶೆ ಕ್ರಮಗಳೂ ಸೃಷ್ಟಿಗೊಳ್ಳಲು ಕಾರಣವಾಯಿತು.

ಇಂತಹ ಸಂದರ್ಭದಲ್ಲಿಯೇ ದೇಸಾಯಿಯವರ ಬರವಣಿಗೆಗಳು ಪ್ರಾರಂಭವಾದವು. ಟಿ.ಎಸ್. ಎಲಿಯೆಟ್, ಕಾಮು, ಕಾಫ್ಕ, ಲಾರೆನ್ಸ್, ಫ್ರಾಯ್ಡ್, ಕಿರ್ಕೆಗಾರ್ಡ್ ಮುಂತಾದವರ ವಿಚಾರಸರಣಿಗಳು ಹಾಗೂ ಸಾರ್ತ್ರೆಯ ಅಸ್ತಿತ್ವವಾದ ದೇಸಾಯಿಯವರ ಮೇಲೆ ಪ್ರಭಾವವನ್ನು ಬೀರಿದವು. ಈ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಪ್ರೇರಣೆಗಳಿಗೆ ಒಳಗಾಗಿ ಇಂಗ್ಲೀಷ್ ಅಧ್ಯಾಪಕರಾಗಿದ್ದ ದೇಸಾಯಿಯವರು ತಮ್ಮ ಸಾಹಿತ್ಯವನ್ನು ರಚಿಸತೊಡಗಿದರು. ಇವರ ಮೊದಲ ಕಾದಂಬರಿ 'ಮುಕ್ತಿ'ಯು ಪ್ರಕಟಗೊಂಡಾಗ ಆ ಕೃತಿಯನ್ನು ಕುರಿತಂತೆ ಕನ್ನಡ ವಿಮರ್ಶೆಗಳು ಬಂದವು. ಕನ್ನಡದ ವಿಮರ್ಶೆ ಈ ಕಾದಂಬರಿಯನ್ನು ಕನ್ನಡದ ಮೊದಲ ನವ್ಯ ಕಾದಂಬರಿ ಎಂದು ಗುರುತಿಸಿತು. ಆದರೂ ಕೂಡ ಇತರ ಸಮಕಾಲೀನ ಲೇಖಕರ ಸಾಹಿತ್ಯಕ್ಕೆ ಬಂದಿರುವ ವಿಮರ್ಶೆಗಳನ್ನು ಗಮನಿಸಿದರೆ ದೇಸಾಯಿ ಅವರ ಸಾಹಿತ್ಯವನ್ನು ಕುರಿತಂತೆ ನಡೆದಿರುವ ವಿಮರ್ಶೆಗಳು, ಅಧ್ಯಯನಗಳು ಕಡಿಮೆ ಎಂದೇ ಹೇಳಬಹುದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ದೇಸಾಯಿಯವರ ಕೃತಿಗಳನ್ನು ಕುರಿತು ಪ್ರಕಟವಾಗಿರುವ ಅಧ್ಯಯನಗಳನ್ನು ಸ್ಥೂಲವಾಗಿ ಮತ್ತು ಸೂಕ್ಷ್ಮವಾಗಿ ಸಮೀಕ್ಷಿಸುವ ಕೆಲಸವನ್ನು ಮಾಡಲಾಗಿದೆ.

೩.೧ ಸಮಕಾಲೀನ ಕಥೆ, ಕಾದಂಬರಿ : ಹೊಸ ಪ್ರಯೋಗಗಳು (೧೯೮೧) – ಜಿ.ಎಸ್. ಆಮೂರ

ದೇಸಾಯಿಯವರ 'ಮುಕ್ತಿ' ಕಾದಂಬರಿಯನ್ನು ಕುರಿತಂತೆ 'ಜಿ.ಎಸ್. ಆಮೂರರವರು ಕಾದಂಬರಿಯು ತನ್ನ ಮುಖ್ಯ ಪಾತ್ರಗಳ ಮೂಲಕ ವಸ್ತು ನಿಷ್ಠತೆಯನ್ನು ಸಾಧಿಸುತ್ತದೆ ಎಂದು ತಮ್ಮ 'ಮುಕ್ತಿಯಲ್ಲಿ ವೈಯಕ್ತಿಕ ದರ್ಶನ' ಎಂಬ ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು ಎಂಬ ಕೃತಿಯಲ್ಲಿನ 'ಮುಕ್ತಿಯಲ್ಲಿ ವೈಯಕ್ತಿಕ ದರ್ಶನ' ಎಂಬ ಲೇಖನದಲ್ಲಿ ಆಮೂರರವರು ಪ್ರಾರಂಭದ ಕನ್ನಡ ಕಾದಂಬರಿಗಳು ಐತಿಹಾಸಿಕ ಕಾದಂಬರಿಗಳಾಗಿದ್ದವು ಎಂದು ವಿಶ್ಲೇಷಿಸಿದ್ದಾರೆ. ಸಮಕಾಲೀನ ಲೇಖಕರನ್ನು ಹೆಸರಿಸುತ್ತಾ ಕಾದಂಬರಿಗಳ ವಿವರಣೆಯನ್ನು ನೀಡುತ್ತಾ, ಭಾರತೀಯ ಕಾದಂಬರಿ ಪರಂಪರೆಯಲ್ಲಿ ಬದಲಾವಣೆಯ ಹೊಸ ಸಂಪ್ರದಾಯದ ಉಗಮವನ್ನು ಗುರುತಿಸಿದ್ದಾರೆ. ನವ್ಯ ಕಾದಂಬರಿ ಪ್ರಕಾರದ ಉಗಮಕ್ಕೆ ಕಾರಣವಾದ ಅಂಶಗಳನ್ನು ಗುರುತಿಸುತ್ತಾ 'ಮುಕ್ತಿ' ಕಾದಂಬರಿಯನ್ನು ಪ್ರಕಟಿಸಲು ಇದ್ದ ಹಿಂಜರಿಕೆಗಳನ್ನು ವಿಶ್ಲೇಷಿಸಿದ್ದಾರೆ. ನವ್ಯ ಸಾಹಿತ್ಯ ಪರಂಪರೆಯ ಹೊಸ ಹಾದಿಯಲ್ಲಿ ಮೊದಲು ನಡೆದ ಶ್ರೇಯಸ್ಸನ್ನು ಶಾಂತಿನಾಥರಿಗೆ ಸಲ್ಲಿಸಿದ್ದಾರೆ.[೧]

ದೇಸಾಯಿಯವರು ಸಣ್ಣ ಕಥೆಯ ಮೂಲಕ ಸಾಹಿತ್ಯ ರಚನೆ ಮಾಡಿದರು. 'ಮಂಜುಗಡ್ಡೆ' ಕಥಾ ಸಂಕಲನದ ಕಥೆಗಳಲ್ಲಿ ಆಧುನಿಕತೆಯ, ಲೇಖಕರ ಸಂವೇದನೆ, ವ್ಯಕ್ತಿಯ ಆಂತರಿಕ, ಅವ್ಯಕ್ತ ರಹಸ್ಯವನ್ನು ಭೇದಿಸುವ ಕಡೆಗೆ ಕೇಂದ್ರೀಕೃತವಾಗಿರುವುದು ಮಹತ್ವದ ಅಂಶವಾಗಿದೆಂದು ಆಮೂರರು ವಿಶ್ಲೇಷಿಸಿದ್ದಾರೆ ಮತ್ತು 'ಕ್ಷಿತಿಜ' ಕಥಾ ಸಂಕಲನದಲ್ಲಿನ ಕಥೆಗಳಲ್ಲಿ ಸೃಷ್ಟಿಶೀಲ

ವೈಚಾರಿಕತೆಯನ್ನು ಗುರುತಿಸಿದ್ದಾರೆ. ಸಂಕೇತಗಳು, ಪ್ರಜ್ಞಾ ಪ್ರವಾಹ, ವರ್ಣನೆ, ಘಟನೆಗಳನ್ನು ಒಳಗೊಂಡಂತೆ ಲಭ್ಯವಿದ್ದ ಎಲ್ಲಾ ಸಾಧನಗಳ ಸಮರ್ಥ ಬಳಕೆಯಾಗಿದೆ ಎಂದು ವಿಶ್ಲೇಷಿಸಿದ್ದಾರೆ. 'ದಂಡೆ' ಕಥಾ ಸಂಕಲನದಲ್ಲಿನ ಕಥೆಗಳಲ್ಲಿ ಅನಾಸಕ್ತಿ, ಅಪರಿಚಿತತೆ, ನಿರ್ವಿಕಾರತೆ ಮುಂತಾದ ನವಮೌಲ್ಯಗಳು ಇಲ್ಲಿನ ಕಥೆಗಳ ವೈಚಾರಿಕ ಕೇಂದ್ರಗಳಾಗಿವೆ. ಇಲ್ಲಿನ ಕಥೆಗಳಲ್ಲಿ ನೈತಿಕ ಗೊಂದಲವನ್ನು ದಾಟಿ ಒಂದಿಲ್ಲೊಂದು ರೀತಿಯಲ್ಲಿ ಮುಕ್ತತೆಯನ್ನು ಪಡೆದ ಅಥವಾ ಪಡೆಯಲು ಯತ್ನಿಸುವ ಜೀವಿಗಳೇ ಕಂಡುಬರುವ ಅಂಶವನ್ನು ಗುರುತಿಸಿದ್ದಾರೆ. ಧ್ವನಿಯ ನಿರ್ಲಿಪ್ತತೆ ಇಲ್ಲಿನ ಕಥೆಗಳ ಮುಖ್ಯ ಸಾಧನೆ. 'ವಿಕ್ಷೇಪ' ಕಾದಂಬರಿಯನ್ನು ಕುರಿತಂತೆ ಕಾದಂಬರಿಯ ವಿಭಿನ್ನತೆಯನ್ನು ಆಮೂರರು ವಿವರಿಸಿದ್ದಾರೆ. ನೆಲೆಯನ್ನು ಕಳೆದುಕೊಂಡು ವೇಷದಿಂದ ವೇಷಕ್ಕೆ ಸನ್ನಿವೇಶದಿಂದ ಸನ್ನಿವೇಶಕ್ಕೆ ಹೊಯ್ದಾಡುವುದು 'ವಿಕ್ಷೇಪ'ದ ಲಕ್ಷಣವಾಗಿದೆ. ವಿಕ್ಷೇಪವು ಕಾಲಕ್ಕಿಂತ ಗುಣಾತ್ಮಕವಾದ ಮಾನವೀಯ ಸಂಬಂಧಗಳ ಸುತ್ತ ಘಟನೆಗಳನ್ನು ಕಲ್ಪಿಸುವುದರ ಮೂಲಕ ನಾಯಕನ ವಿಕ್ಷಿಪ್ತ ಮನಃಸ್ಥಿತಿಯನ್ನು ಚಿತ್ರಿಸುವ ತಂತ್ರವಾಗಿದೆ.

ದೇಸಾಯಿಯವರು ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದುದರಿಂದ ಇವರಿಗೆ ಪಶ್ಚಿಮದ ಪ್ರಭಾವ ಸಹಜವಾದುದಾಗಿತ್ತು. ಹೀಗಾಗಿ ಇವರು ಆಧುನಿಕತೆಯ ನವ್ಯದ ಪುರಸ್ಕೃತರಾಗಿಯೇ ಸಾಹಿತ್ಯ ಪ್ರವೇಶ ಮಾಡಿದರು. ಮೊದ ಮೊದಲು ಅವರ ಸಾಹಿತ್ಯಕ್ಕೆ ಮನೋವಿಜ್ಞಾನ ತಾಂತ್ರಿಕ ತಳಹದಿಯನ್ನು ಒದಗಿಸಿದರೆ ನಂತರ ಕೃತಿಗಳು ಕಾಮು, ಸಾತ್ರರ ವಿಚಾರಗಳಿಂದ ಸ್ಫೂರ್ತಿ ಪಡೆದವು. ಕನ್ನಡದ ಕಥೆ, ಕಾದಂಬರಿಗಳು ಹೊಸ ಆಕಾರ ಶೈಲಿಗಳನ್ನು ಧರಿಸುವುದಕ್ಕೆ ದೇಸಾಯಿಯವರು ಮೊದಲ ಕಾರಣಕರ್ತರು[೨] ಎಂದು ಜಿ.ಎಸ್.ಆಮೂರರವರು ಅಭಿಪ್ರಾಯಪಟ್ಟಿದ್ದಾರೆ.

೩.೨. ಕನ್ನಡ ಕಾದಂಬರಿಯ ಬೆಳವಣಿಗೆ (೧೯೮೩) – ಜಿ.ಎಸ್. ಆಮೂರ

'ಕನ್ನಡ ಕಾದಂಬರಿಯ ಬೆಳವಣಿಗೆ' ಕೃತಿಯಲ್ಲಿನ 'ಕಾದಂಬರಿಯಲ್ಲಿನ ಆಧುನಿಕತೆ ಮತ್ತು ನವ್ಯತೆ'ಎಂಬ ಲೇಖನದಲ್ಲಿ ಆಮೂರ ಅವರು ನವ್ಯ ಕಾದಂಬರಿಗಳ ಹೊಸತನಕ್ಕೂ ಅವುಗಳ ಮೌಲ್ಯಪ್ರಜ್ಞೆಗೂ ನಿಕಟವಾದ ಸಂಬಂಧವಿದೆ. ಆತ್ಮನಿಷ್ಠ ಅನುಭವವನ್ನೇ ಪ್ರಮಾಣವಾಗಿಟ್ಟುಕೊಳ್ಳುವ ನವ್ಯ ಕಾದಂಬರಿಯ ನಾಯಕರು ಸಂಸ್ಕೃತಿ ಜನ್ಯ ಮೌಲ್ಯಗಳನ್ನು ಇದ್ದಕ್ಕಿದ್ದ ಹಾಗೆಯೇ ಒಪ್ಪಿಕೊಳ್ಳುವುದಿಲ್ಲ ಎಂದಿದ್ದಾರೆ. ಆಧುನಿಕ ಮತ್ತು ನವ್ಯ ಕಾದಂಬರಿಯ ಕಾಲಪ್ರಜ್ಞೆ, ಇದಕ್ಕಿಂತಲೂ ಹೆಚ್ಚು ಸಂಕೀರ್ಣವಾದುದು. ಶಾಂತಿನಾಥ ದೇಸಾಯಿಯವರ ಮುಕ್ತಿ ಕಾದಂಬರಿಯ ಪ್ರಾರಂಭದಲ್ಲಿಯೇ ಕಥೆಯ ನಾಯಕ ಗೌರೀಶನ ಕಾಲಪ್ರಜ್ಞೆಯ ಅರಿವು ನಮಗಾಗುತ್ತದೆ. ವರ್ತಮಾನದ ಅರಿವಿನ ಜೊತೆಗೆ ಭವಿಷ್ಯಕ್ಕೆ ಸಂಬಂಧಿಸಿದ ಸೂಚನೆಯ ಜೊತೆಗೆ ಭೂತಕಾಲದ ಬಗ್ಗೆಯು ಮುಖ್ಯ ಕಾಳಜಿಯನ್ನು ವಹಿಸುತ್ತದೆ. ಗೌರೀಶ ಒಟ್ಟು ಕಾಲವನ್ನು ಒಂದು ನಿರ್ಣಾಯಕ ನಿಮಿಷದಲ್ಲಿ ಕೇಂದ್ರೀಕರಿಸುತ್ತಾನೆ. ಕಾಲದ ಈ ಸಂಕೀರ್ಣ ಕಲ್ಪನೆಯಿಂದ ಮುಕ್ತಿಯಂಥ ಕಾದಂಬರಿಗಳು ಕಾವ್ಯಗುಣವನ್ನು ಪಡೆಯುತ್ತವೆ[೩] ಎಂದು ಆಮೂರರವರು ಅಭಿಪ್ರಾಯಪಟ್ಟಿದ್ದಾರೆ.

೨.೩ ಸಾತತ್ಯ (೧೯೯೨) – ಗಿರಡ್ಡಿ ಗೋವಿಂದರಾಜ

'ಸಾತತ್ಯ' ಎಂಬ ತಮ್ಮ ಕೃತಿಯ 'ಕನ್ನಡ ಕಥಾ ಸಂಕಲನ' ಎಂಬ ಲೇಖನದಲ್ಲಿ ನವೋದಯ ಮತ್ತು ಪ್ರಗತಿಶೀಲ ಯುಗಗಳ ಆರಂಭ, ಬೆಳವಣಿಗೆಗಳ ಚಾರಿತ್ರಿಕ ಅಂಶಗಳನ್ನು ಉಲ್ಲೇಖಿಸುತ್ತ 'ನವ್ಯಯುಗ' ಐವತ್ತರ ದಶಕದಲ್ಲಿ ಪ್ರಾರಂಭವಾಯಿತೆಂಬ ಮಾಹಿತಿಯನ್ನು ನೀಡುತ್ತಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ತೀವ್ರವಾಗಿ ಕಾಣಿಸಿಕೊಂಡ ಸಾಮಾಜಿಕ ಬದಲಾವಣೆಗಳು, ವಿಶೇಷವಾಗಿ ಮೌಲ್ಯಗಳ ಪತನ ಮತ್ತು ಹುಸಿಯಾದ ನಿರೀಕ್ಷೆಗಳು, ಬದಲಾದ ಪರಿಸರ ನವ್ಯ ಸಾಹಿತ್ಯದ ಪ್ರೇರಣೆಯನ್ನು ನೀಡಿದವು ಎಂದು ವಿಶ್ಲೇಷಿಸಿದ್ದಾರೆ. ಪ್ರಾರಂಭದಲ್ಲಿ ನವ್ಯವು ಕಾವ್ಯ ಮತ್ತು ಸಣ್ಣಕತೆಗಳ ಮೂಲಕ ಕಾಣಿಸಿಕೊಂಡಿತು ಎಂದು ವಿಶ್ಲೇಷಿಸಿದ್ದಾರೆ.

ಸಣ್ಣಕಥೆಗಳಲ್ಲಿ ನವ್ಯದ ಉಗಮದ ಹಿನ್ನೆಲೆಗೆ ದೇಸಾಯಿ ಅವರ 'ಕ್ಷಿತಿಜ' ಕಥೆಯನ್ನು ಉದಾಹರಿಸಿದ್ದಾರೆ. ದೇಸಾಯಿ ಅವರು ತಮ್ಮ ಕಥೆಗಳಲ್ಲಿ ಸಾಂಪ್ರದಾಯಿಕ ನೈತಿಕ ಕ್ಷಿತಿಜವನ್ನು ವಿಸ್ತರಿಸುವ ಪ್ರಯತ್ನಕ್ಕಾಗಿ ಮುಖ್ಯವಾಗಿ ಗಂಡು ಹೆಣ್ಣಿನ ಸಂಬಂಧದ ಕ್ಷೇತ್ರವನ್ನು ಆರಿಸಿಕೊಂಡಿದ್ದಾರೆ. ಅವರ ಬಹಳಷ್ಟು ಕತೆಗಳ ಕೇಂದ್ರ ಕಾಳಜಿ ಕಾಮ, ಆದರೆ ಕಾಮ ಅವರಲ್ಲಿ ಕೇವಲ ದೈಹಿಕ ಸುಖದ ಉದ್ರೇಕವಲ್ಲ, ನೀತಿ ಬಾಹಿರ ಸಂಬಂಧದ ರೋಮಾಂಚನವೂ ಅಲ್ಲ. ಕಾಮ ಅವರಲ್ಲಿ ವ್ಯಕ್ತಿತ್ವವನ್ನು ಕುಬ್ಜಗೊಳಿಸುವ ವೈಯಕ್ತಿಕ, ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ ಸಂಕೋಚಗಳಿಂದ ಪಡೆಯುವ ವಿಮೋಚನೆಯ ಸಂಕೇತ, ಬದುಕಿನ ಅರ್ಥಪೂರ್ಣತೆಯ ಹುಡುಕಾಟ. ಈ ವಿಷಯದಲ್ಲಿ ದೇಸಾಯಿಯವರು ಯಾವಾಗಲೂ ಜೀವನ ಸಮ್ಮುಖವಾದ ನಿಲುವು ತಳೆಯುತ್ತಾರೆ ಎಂದು ಪ್ರತಿಪಾದಿಸಿದ್ದಾರೆ.[೪]

೩.೪ ಶಾಂತಿನಾಥ ದೇಸಾಯಿ (೨೦೦೦) – ಜಿ.ಎಸ್. ಆಮೂರ

ಈ ಕೃತಿಯಲ್ಲಿ ಆಮೂರರು ಅಸ್ತಿತ್ವವಾದದಂಥ ತತ್ವಜ್ಞಾನಗಳನ್ನು, ಪ್ರಾಯ್ಡ್‌ನ ಮನಃಶಾಸ್ತ್ರೀಯ ಸಿದ್ಧಾಂತಗಳನ್ನು ಅವರು ಬದುಕಿನತ್ತ ನೋಡುವ ದೃಷ್ಟಿಕೋನಗಳನ್ನಾಗಿ ಬಳಸಿಕೊಂಡಾಗಲೂ ಅವರು ಅದರಿಂದ ಉದ್ದೇಶಪೂರ್ವಕವಾಗಿ ದೂರ ಸಾಧಿಸುತ್ತಿದ್ದರು. ಬಹುಶಃ ದೇಸಾಯಿ ಅವರ ಎಲ್ಲಾ ಕೃತಿಗಳಲ್ಲಿ ಮುಕ್ತಿಯೊಂದೇ ಈ ಮಾತಿಗೆ ಅಪವಾದವಾಗಿದೆ. ದೇಸಾಯಿಯವರ ಕೃತಿಗಳಲ್ಲಿ ಸತತವಾಗಿ ನಡೆಯುವ ಸುಪ್ತ ಮನಸ್ಸಿನ ಅನಾವರಣದ ಹಿಂದೆ ಕೇವಲ ಕುತೂಹಲವಿರದೆ ವ್ಯಕ್ತಿತ್ವವನ್ನು ಅದರ ಸಂಪೂರ್ಣತೆಯಲ್ಲಿ ಗ್ರಹಿಸುವ ಸತ್ಯನಿಷ್ಠೆಯ ಆಕಾಂಕ್ಷೆ ಇರುತ್ತದೆ.[೫] ಇವರದು ಸಂಪೂರ್ಣವಾಗಿ ನಗರ ಸಂವೇದನೆಯಾಗಿದ್ದಿತು. ಸಂಬಂಧಗಳ ಅನ್ವೇಷಣೆಗೆ ಮಹಾನಗರಗಳೇ ಯೋಗ್ಯಕ್ಷೇತ್ರಗಳು ಎಂದು ನಂಬಿದ್ದರು. ಅವರ ಸ್ತ್ರೀ ಪಾತ್ರಗಳು ಸ್ತ್ರೀವಾದಿ ಆಗಿರದಿದ್ದರೂ ಬಲಿಪಶುಗಳಾಗಿಲ್ಲ ಎಂದು ಆಮೂರ ಜಿ.ಎಸ್.ರವರು ಅಭಿಪ್ರಾಯಪಟ್ಟಿದ್ದಾರೆ.

೩.೫ ನಡು ಹಗಲಿನಲ್ಲಿ ಕಂದೀಲುಗಳು : ರಾಜೇಂದ್ರ ಚೆನ್ನಿ

ರಾಜೇಂದ್ರ ಚೆನ್ನಿಯವರು 'ನಡುಹಗಲಿನಲ್ಲಿ ಕಂದೀಲುಗಳು' ಎಂಬ ವಿಮರ್ಶಾ ಕೃತಿಯಲ್ಲಿನ 'ದೇಸಾಯಿಯವರ ಕಾದಂಬರಿಗಳ ಮುಖ್ಯ ಕಾಳಜಿಗಳು' ಎಂಬ ಲೇಖನದಲ್ಲಿ ನವ್ಯ ಸಾಹಿತ್ಯ ಸಂಪ್ರದಾಯ ಪ್ರಭಾವಶಾಲಿಯಾಗಿದ್ದಾಗ ನಡೆದಿದ್ದ ಚರ್ಚೆಗಳು ಕೇವಲ ಆ ಪದಗಳ ಸಮರ್ಪಕತೆಯ

ಬಗ್ಗೆ, 'ನವ್ಯ'ದ ಬಗೆಗಿದ್ದ ಪೂರ್ವಾಗ್ರಹಗಳ ಬಗ್ಗೆ ಇದ್ದುದನ್ನೂ, ಚಾರಿತ್ರಿಕ ಪ್ರಕ್ರಿಯೆಯೊಂದರ ಬಗ್ಗೆ ಇರಲಿಲ್ಲವೆಂಬ ಅಂಶವನ್ನು ವಿಶ್ಲೇಷಿಸಿದ್ದಾರೆ. ಸೀಮಿತ ಗ್ರಹಿಕೆಯಿಂದ ನವ್ಯದ ಬಗೆಗಿನ ಚರ್ಚೆಗಳು ದಾರಿ ತಪ್ಪಿರುವುದನ್ನೂ ಅರ್ಥಹೀನವಾಗಿರುವುದನ್ನು ಗಮನಿಸಿದ್ದಾರೆ. ಬಂಡಾಯ ಚಳುವಳಿಯೂ ಕೂಡ ತನ್ನ ಸಂಪ್ರದಾಯವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡುವಲ್ಲಿ ವಿಫಲವಾಗಿರುವುದನ್ನು ಗುರುತಿಸಿದ್ದಾರೆ.

ಯೂರೋಪಿನ ನವ್ಯ ಪರಂಪರೆ ಕನ್ನಡ ನವ್ಯ ಪರಂಪರೆಯ ಮೇಲೆ ತನ್ನ ಪ್ರಭಾವ ಬೀರಿದ್ದನ್ನು ವಿವರಿಸುತ್ತಾ ನವ್ಯದ ಪ್ರಧಾನಕೃತಿಗಳು ಯೂರೋಪಿಯನ್ ಕೃತಿಗಳಿಗೆ ಸ್ಪಂದಿಸಲು ಕಾರಣವಾದ ಅಂಶವನ್ನು ಅರ್ಥಮಾಡಿಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಕಾಮು, ಸಾರ್ತ್ರ, ಜೇನ್, ಅನೂಯಿ, ಬೆಕೆಟ್ ಮತ್ತು ಕಾಫ್ಕಾ ನವ್ಯ ಬರಹಗಾರರಿಗೆ ಆತ್ಮೀಯರಾಗಿ ಕಂಡು ಬಂದುದನ್ನು ಗುರುತಿಸುತ್ತಾ ಇವರ ಕೃತಿಗಳು ನಮ್ಮ ನವ್ಯ ಲೇಖಕರ ಮೇಲೆ ಪ್ರಭಾವ ಬೀರಿದ ಬೀರಿದ ಬಗೆಯನ್ನು ವಿವರಿಸಿದ್ದಾರೆ. ದೇಸಾಯಿಯವರ ಕೃತಿಗಳನ್ನು ಕುರಿತು ವಿಮರ್ಶಿಸುತ್ತಾ ದೇಸಾಯಿಯವರ ಕಾದಂಬರಿಗಳು ಮನುಷ್ಯ ಅನುಭವವನ್ನು ಅಸ್ತಿತ್ವವಾದಿ ಹಿನ್ನೆಲೆಯಲ್ಲಿ ಮನೋವಿಜ್ಞಾನ ಗ್ರಹಿಕೆಗಳ ಮೂಲಕ ಶೋಧಿಸುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

'ಮುಕ್ತಿ' ಕಾದಂಬರಿಯಲ್ಲಿ ಲೈಂಗಿಕತೆಯ ಪ್ರವೃತ್ತಿಯನ್ನು ಮುಕ್ತವಾಗಿ ಎದುರಿಸುವ ರೀತಿಯಲ್ಲಿ ಕಾದಂಬರಿಯ ಬಂಡುಕೋರತನವಿರುವುದನ್ನು ಗುರುತಿಸಿದ್ದಾರೆ. ಅಲ್ಲದೇ ಈ ಕೃತಿಯು ಮನೋವಿಜ್ಞಾನದ ಒಳನೋಟಗಳನ್ನು ಒಪ್ಪಿಕೊಂಡು ಲೈಂಗಿಕತೆಯನ್ನು ಮನುಷ್ಯ ಸ್ವಭಾವದ ತಳಪಾಯವಾಗಿ ಗುರುತಿಸುತ್ತದೆ ಎಂದು ವಿಶ್ಲೇಷಿಸಿದ್ದಾರೆ. ಅಲ್ಲದೇ ಮುಕ್ತಿಯಲ್ಲಿ ಬರುವ ಗೌರೀಶ, ಕಾಮಿನಿ ಹಾಗೂ ಶ್ರೀಕಾಂತರನ್ನು ಮನೋವಿಜ್ಞಾನದ ಪರಿಭಾಷೆಯಲ್ಲಿ ವಿಶ್ಲೇಷಿಸಿದ್ದಾರೆ. 'ಓಂ ಣಮೋ' ಕಾದಂಬರಿಯ ಮೂಲಕ ದೇಸಾಯಿಯವರು ತಮ್ಮ ಅಸ್ತಿತ್ವವಾದಕ್ಕೆ ಜೈನ ಧರ್ಮವನ್ನು ಒಗ್ಗಿಸಿಕೊಳ್ಳುತ್ತಾರೆಯೇ ಹೊರತು ಜೈನ ಧರ್ಮದ ಕಡೆಗೆ ಹೊರಳುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ದೇಸಾಯಿ ಅವರ ಕಾದಂಬರಿಗಳಲ್ಲಿನ ಮುಖ್ಯ ಪಾತ್ರಗಳು ವೈಯಕ್ತಿಕ ಮಟ್ಟದಲ್ಲಿ ಸಂಪ್ರದಾಯವನ್ನು ಧಿಕ್ಕರಿಸಿ ಮುಕ್ತಿ ಪಡೆಯುವ ಪ್ರಕ್ರಿಯೆಯಲ್ಲಿರುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

೩.೬ ವಿಮರ್ಶಾ ವಿವೇಕ (೨೦೧೦) – ಜಿ.ಎಂ. ಹೆಗಡೆ

'ಶಾಂತಿನಾಥ ದೇಸಾಯಿ ಕಥಾ ಸಾಹಿತ್ಯದಲ್ಲಿ ಸ್ತ್ರೀಪಾತ್ರಗಳು' ಲೇಖನದಲ್ಲಿ ಡಾ.ಜಿ.ಎಂ. ಹೆಗಡೆಯವರು ಡಾ.ಅರುಂಧತಿ ಬದಾಮಿ ಅವರು ಶಾಂತಿನಾಥ ದೇಸಾಯಿ ಕಥೆ ಕಾದಂಬರಿಗಳ ಸ್ತ್ರೀಪಾತ್ರಗಳನ್ನು ಅಧ್ಯಯನ ಮಾಡಿ ರಚಿಸಿದ ಮಹಾ ಪ್ರಬಂಧವನ್ನು ಕುರಿತು ವಿಮರ್ಶೆ ನಡೆಸಿದ್ದಾರೆ. ಈ ಲೇಖನದಲ್ಲಿ ದೇಸಾಯಿ ಅವರ ಕಥಾ ಸಾಹಿತ್ಯದಲ್ಲಿ ಅದ್ಭುತವಾದ ಸ್ತ್ರೀ ಪ್ರಪಂಚವಿದೆ. ಮಧ್ಯಮ ವರ್ಗದ ಆರ್ಥಿಕವಾಗಿ ಸಬಲರಾದ ಆಧುನಿಕ ಪ್ರಜ್ಞೆಯ ಸ್ತ್ರೀಪಾತ್ರಗಳು ದೇಸಾಯಿ ಅವರ ಕಾದಂಬರಿಗಳಲ್ಲಿವೆ. ದೇಸಾಯಿ ಅವರ ಸಾಹಿತ್ಯದ ತಾತ್ವಿಕ ಚಿಂತನೆಯಲ್ಲಿ ಅಸ್ತಿತ್ವವಾದ ಪ್ರಮುಖವಾದದ್ದು. ಆದ್ದರಿಂದಲೇ ತಮ್ಮ ಕಥೆ ಕಾದಂಬರಿಗಳಲ್ಲಿ ಅಸ್ತಿತ್ವವಾದವನ್ನು ತಂದಿದ್ದಾರೆ[೬] ಎಂಬುದನ್ನು ಗುರುತಿಸಿದ್ದಾರೆ.

೩.೭ ಮುಕ್ತಚಂದ : ಸಂಪಾದಕ – ಡಿ.ವಿ. ಪ್ರಹ್ಲಾದ್ (೨೦೦೧)

'ಮುಕ್ತಚಂದ' ಇದು ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ವಿವಿಧ ಲೇಖಕರು ಬರೆದ ಒಂದು ಕಿರುಪುಸ್ತಕ. ಇದರಲ್ಲಿ ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತಂತೆ ವಿವಿಧ ಲೇಖಕರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದು, ಬಿಡಿ ಬಿಡಿಯಾದ ವಿಮರ್ಶೆಗಳನ್ನು ಇಲ್ಲಿ ನೋಡಬಹುದಾಗಿದೆ.

'ಓಂ ಣಮೋ' ದೇಸಾಯಿ ಅವರ ಕಾದಂಬರಿ ಲೇಖನದಲ್ಲಿ ಜಯಂತ ಕಾಯ್ಕಿಣಿಯವರು ದೇಸಾಯಿ ಯವರನ್ನು ಆಧುನಿಕ ಕನ್ನಡ ಕಥನ ಸಾಹಿತ್ಯದ ಪಂಚ ಮಹಾಭೂತಗಳಲ್ಲಿ ಒಬ್ಬರೆಂದು ಕರೆದಿದ್ದಾರೆ. (ಉಳಿದ ನಾಲ್ವರು ಚಿತ್ತಾಲ, ಲಂಕೇಶ, ಅನಂತಮೂರ್ತಿ ಮತ್ತು ತೇಜಸ್ವಿ) ಶಾಂತಿನಾಥರು ಯಾವ ಪ್ರದೇಶಕ್ಕೂ–ಭೌತಿಕವಾಗಿ, ಸೈದ್ಧಾಂತಿಕವಾಗಿ, ಅಷ್ಟೇ ಯಾಕೆ ಭಾವನಾತ್ಮಕವಾಗಿಯೂ ಒಳಪಡಲೇ ಇಲ್ಲ ಎಂದು ವಿಶ್ಲೇಷಿಸಿದ್ದಾರೆ.

'ನನ್ನ ಪ್ರಿಯಮಿತ್ರ ಶಾಂತಿನಾಥ' ಎಂಬ ಲೇಖನದಲ್ಲಿ – ಕೆ.ವಿ. ತಿರುಮಲೇಶ್‌ರವರು ಶಾಂತಿನಾಥ ದೇಸಾಯಿಯವರು ಚಿತ್ರಿಸುವ ಮನುಷ್ಯರು ಯಾರೂ ಪರಿಪೂರ್ಣರಲ್ಲ, ಪರಿಪೂರ್ಣತೆಯ ಹಂಬಲವೂ ಈ ಪಾತ್ರಗಳಿಗೆ ಇಲ್ಲ. ಹೊರ ತೋರಿಕೆಗೆ ಇವರೆಲ್ಲ ಕಳ್ಳರು, ಸುಳ್ಳರು, ವಂಚಕರು, ಪಾಪಿಗಳು, ತಪ್ಪಿತಸ್ಥರು, ಆದರೆ ಪ್ರತಿಯೊಂದು ವ್ಯಕ್ತಿಗೂ ಒಂದು ಆಂತರಿಕ ಜಗತ್ತು ಇರುತ್ತದೆ ; ಈ ಜಗತ್ತಿನಲ್ಲಿ ಮಾತ್ರ ಯಾರೂ ಪಾಪಿಗಳಲ್ಲ, ಯಾರೂ ದೇವತೆಗಳಲ್ಲ–ಕೇವಲ ಮನುಷ್ಯರು ಎಂದು ವಿಶ್ಲೇಷಿಸಿದ್ದಾರೆ.

ಶಾಂತಿನಾಥ ದೇಸಾಯಿ ಆತ್ಮಕಥನ ಬರೆದಿಲ್ಲ; ಅವರ ಒಟ್ಟಾರೆ ಕೃತಿಗಳೇ ಅವರ ಆತ್ಮಕಥನ. ಕಲ್ಪನೆ ಮತ್ತು ವಾಸ್ತವ ಸಾಹಿತ್ಯದಲ್ಲಿ ಮಾತ್ರವೇ ಬೆರೆತುಕೊಂಡಿರುವುದಲ್ಲ ಎಂದು ವಿಶ್ಲೇಷಿಸಿದ್ದಾರೆ.

'ಶಾಂತಿನಾಥನ ಸುಂದರ ನೆನಪು' ಎಂಬ ತಮ್ಮ ಲೇಖನದಲ್ಲಿ ಪಿ. ಲಂಕೇಶ್‌ರವರು ಶಂಕರ ಮೊಕಾಶಿ ಮತ್ತು ಯಶವಂತ ಚಿತ್ತಾಲರ ವ್ಯಕ್ತಿತ್ವವನ್ನು ಅವರ ವೈಯಕ್ತಿಕ ಹಿನ್ನೆಲೆಯನ್ನು ವಿವರಿಸುತ್ತಾ "ದೇಸಾಯಿ ಅವರು ನಿಜಕ್ಕೂ ನವ್ಯ ವ್ಯಕ್ತಿಯಾಗಿದ್ದ" ಎಂದು ಅಭಿಪ್ರಾಯಪಟ್ಟಿದ್ದಾರೆ. ಶಾಂತಿನಾಥನ ಮೈನಲ್ಲಿದ್ದ ನವ್ಯತೆಯ ಸಂಕೀರ್ಣತೆ, ಅನೇಕ ಭಾವನೆಗಳು, ತಮ್ಮಲ್ಲಿಯೇ ಹೊಸೆದು ಕೊಳ್ಳುತ್ತಿದ್ದುದು. ಕಾಮ, ಪ್ರೀತಿ, ಸಾಮಾಜಿಕ ಬದ್ಧತೆ, ಸ್ಫೋಟಗೊಳ್ಳುವ ಸಿಟ್ಟು ಇವೆಲ್ಲ ಇದ್ದದ್ದು ಅನೇಕರಿಗೆ ಗೊತ್ತೇ ಇರಲಿಲ್ಲ. ಶಾಂತಿನಾಥರ 'ಮುಕ್ತಿ' ಕಾಮ, ಪ್ರೇಮದ ದಿಗ್ಭ್ರಮೆ ನೀಡುತ್ತದೆ; ಆಧುನಿಕ ಮನುಷ್ಯನ ತಲ್ಲಣವನ್ನು ಅದು ಹೇಳುತ್ತದೆ ಎಂದು ಲಂಕೇಶ್ ರವರು ಅಭಿಪ್ರಾಯಪಟ್ಟಿದ್ದಾರೆ.

'ಮರಾಠಿಗರು ಹಚಗೊಳ್ಳದ, ಕನ್ನಡಿಗರು ತಿಳಕೊಳ್ಳದ ಶಾಂತಿನಾಥ ದೇಸಾಯಿ' ಲೇಖನದಲ್ಲಿ ಸಿದ್ಧಲಿಂಗಪಟ್ಟಣಶೆಟ್ಟಿಯವರು ದೇಸಾಯರು, ಧರ್ಮ, ಜಾತಿ, ಗುಂಪುಗಳನ್ನು ಮೀರಿ ಮನುಷ್ಯನ ಮನಸ್ಸಿನ ತಾಕಲಾಟ ಸಂಘರ್ಷಗಳನ್ನು ಚಿತ್ರಿಸಿದವರು. ಅವರ ಕತೆ ಕಾದಂಬರಿಗಳ ಬಗ್ಗೆ ಕನ್ನಡ ವಿಮರ್ಶಕರು ಸರಿಯಾದ ವಿಶ್ಲೇಷಣೆ ಮಾಡಿಯೇ ಇಲ್ಲ. ಅವರ ಪಾತ್ರಗಳು ಸಾರ್ವದೇಶಿಕ, ಸಾರ್ವಭಾಷಿಕ ಮತ್ತು ಸಾರ್ವಕಾಲಿಕ ಎಂದು ವಿಶ್ಲೇಷಿಸಿದ್ದಾರೆ.

'ಶಾಂತಿನಾಥ ದೇಸಾಯಿ : ತಾತ್ವಿಕ ನೆಲೆಗಳು' – ಜಿ.ಎಸ್. ಆಮೂರರವರು ದೇಸಾಯಿಯವರ ವೈಶಿಷ್ಟ್ಯವೆಂದರೆ ಅವರ ಅಪ್ಪಟ ನವ್ಯ ಮನೋಧರ್ಮ. ಅಡಿಗ, ಅನಂತಮೂರ್ತಿ, ತೇಜಸ್ವಿ ಲಂಕೇಶ, ಚಿತ್ತಾಲರಂಥವರಲ್ಲಿ ನವ್ಯತೆ ಒಂದು ಹಂತಕ್ಕೆ ಸೀಮಿತವಾಗಿದ್ದರೆ ದೇಸಾಯಿಯವರಲ್ಲಿ ಅದು ಸ್ಥಾಯಿಯ ರೂಪದಲ್ಲಿದೆ ಎಂದು ವಿಶ್ಲೇಷಿಸಿದ್ದಾರೆ.

ದೇಶೀಯವಾದ ಗಾಂಧೀವಾದಕ್ಕಿಂತ ಅಂತರಾಷ್ಟ್ರೀಯ ಸ್ವರೂಪದ ಮಾರ್ಕ್ಸವಾದ, ರಾಯಲ್ ಪ್ರಣೀತ ನವಮಾನವತಾವಾದ ಹಾಗೂ ಅಸ್ತಿತ್ವವಾದಗಳೇ ಅವರನ್ನು ಹೆಚ್ಚು ಬಲವಾಗಿ ಆಕರ್ಷಿಸಿದವು. ಕಮ್ಯೂನಿಸ್ಟರ ಬಗೆಗಿನ ಅವರ ಧೋರಣೆಯಲ್ಲಿ ಅನಿಶ್ಚಿತತೆ ಇತ್ತು. ಕಮ್ಯೂನಿಜಂಗಿಂತ ರಾಯ್‌ವಾದ ಅವರಿಗೆ ಹೆಚ್ಚು ಪ್ರಿಯವಾಗಿದ್ದುದರ ಕಾರಣ ರಾಯ್‌ವಾದ ಒಂದು ಪಂಥವಾಗಿರದೆ ದೇಸಾಯಿ ಅವರಿಗೆ ಚಿಂತನೆಯ ಕ್ರಮವಾಗಿದ್ದುದು ಎಂದು ವಿಶ್ಲೇಷಿಸಿದ್ದಾರೆ.

'ದೇಸಾಯರ ಕಥಾ ಪ್ರಪಂಚ' ಎಂಬ ಲೇಖನದಲ್ಲಿ ಚ. ಸರ್ವಮಂಗಳ ಅವರು ಸಾಂಪ್ರದಾಯಿಕ ನೈತಿಕ ಕ್ಷಿತಿಜವನ್ನು ವಿಶಾಲಗೊಳಿಸುವ ಬರವಣಿಗೆಯಲ್ಲಿ ತೊಡಗಿದವರು ಮೊದಲಿಗೆ ದೇಸಾಯರು. ಅನಂತಮೂರ್ತಿ, ಕೆ. ಸದಾಶಿವರಿಗಿಂತಲೂ ದೇಸಾಯರು ಆಧುನಿಕತೆಯ ಬಗ್ಗೆ ನವ್ಯಪ್ರಜ್ಞೆಯ ಬಗ್ಗೆ ಹೆಚ್ಚು ನಿರ್ದಿಷ್ಟರಾಗಿದ್ದರು ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಮಾಜ ಒಪ್ಪಿದ ನೈತಿಕ ಮೌಲ್ಯಗಳಿಂದ ದೇಸಾಯರ ಪಾತ್ರಗಳನ್ನು ಅಳೆದರೆ ಎಲ್ಲರೂ ಹಾದಿ ತಪ್ಪಿದವರು ಅಥವಾ ತಪ್ಪುವವರು.[2] ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಮಡಿ ಹೆಂಗಸಿನಂತೆ ನಿರ್ಬಂಧಕ್ಕೆ ಒಳಗಾದ ನೈತಿಕತೆ ದೇಸಾಯರಲ್ಲಿ ಚೆನ್ನಾಗಿ ಪಳಗಿದ ರೂಢಿಯಾಗಿ ನಿಷ್ಪಕ್ಷಪಾತವಾದ ಧೋರಣೆಯಾಗಿ ಬರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಚಂಚಲ ಸಂಚಾರಿ ಭಾವವನ್ನೇ ತಮ್ಮ ಸ್ಥಾಯಿಭಾವವನ್ನಾಗಿ ಮಾಡಿಕೊಂಡಿರುವುದರಿಂದ ದೇಸಾಯರ ಭಾಷೆ ಕೂಡ ಭಿನ್ನವಾಗುವುದು ಅನಿವಾರ್ಯವಾಯಿತು. ವಸ್ತು ಮತ್ತು ಪ್ರಜ್ಞೆಯಲ್ಲಿ ಮೂಡಿಸಲೆತ್ನಿಸಿದ ಆಧುನಿಕತೆಗೆ ಹೊಂದಬಲ್ಲ ಭಾಷೆಯನ್ನು ದೇಸಾಯರು ಸ್ವತಃ ರೂಢಿಸಿಕೊಂಡಿದ್ದಾರೆ. ಶಹರಿನ ಆಧುನಿಕ ಪ್ರಜ್ಞೆಗೆ ಇವರು ಬಳಸುವ ಭಾಷೆ ಸೂಕ್ತ ಕನ್ನಡತನವನ್ನು ಯಶಸ್ವಿಯಾಗಿ ನೀಡುತ್ತದೆ ಎಂಬುದು ಗಮನಾರ್ಹ ಎಂದು ವಿಶ್ಲೇಷಿಸಿದ್ದಾರೆ.

ಕನ್ನಡಕ್ಕೆ ಹೊಸ ಅರಿವು, ಹೊಸ ವಸ್ತು ಪ್ರಜ್ಞೆ ಒದಗಿಸುತ್ತಿರುವ ದೇಸಾಯರ ಕಥಾ ಪ್ರಪಂಚ ಮಿತವಾದ ನವಿರಾದ ಸೂಕ್ಷ್ಮವಾದ ಕಲಾಪ್ರಪಂಚವಾಗಿದೆ. ಕಳೆದುಹೋದುದರ ಬಗ್ಗೆ ಹಂಬಲ, ಇರುವುದರ ನಿಷ್ಠುರ ವಾಸ್ತವತೆಯ ಪ್ರಜ್ಞೆ, ಈ ಎರಡೂ ಮನೋವೃತ್ತಿಗಳಿಗಿಂತಲೂ ಭಿನ್ನವಾದ ಬೊಹೀಮಿಯನ್ ಮನೋಧರ್ಮವನ್ನು ಕನ್ನಡದಲ್ಲಿ ಮೊದಲು ತಂದವರು ದೇಸಾಯರು ಎಂದು ಅಭಿಪ್ರಾಯಪಟ್ಟಿದ್ದಾರೆ.

'ಶಾಂತಿನಾಥದೇಸಾಯವರ ಕೆಲವು ಸ್ತ್ರೀಪಾತ್ರಗಳು' – ಎಲ್.ಜಿ. ಮೀರಾರವರು ದೇಸಾಯಿಯವರ ಅಂತರಾಳ, ವಿಕ್ಷೇಪ, ಮುಕ್ತಿ ಕಾದಂಬರಿಗಳನ್ನು ಪ್ರಧಾನವಾಗಿ ಇಟ್ಟುಕೊಂಡು ಕೆಲವು ಸ್ತ್ರೀಪಾತ್ರಗಳ ವಿಶ್ಲೇಷಣೆಯನ್ನು ನಡೆಸಲಾಗಿದೆ.

ದೇಸಾಯಿಯವರ ನಾಯಕರು ಹೆಣ್ಣಿನೊಂದಿಗಿನ ಸಂಬಂಧದ ಎಲ್ಲ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳುವ ಕುತೂಹಲ ಉಳ್ಳವರು. ಅಂತರಾಳದ ವಿಕ್ರಮ್, ವಿಕ್ಷೇಪದ ರಾಹುಲ, ಮುಕ್ತಿಯ ಗೌರೀಶ ಇವರೆಲ್ಲರ ಜೀವನದಲ್ಲೂ ಹೆಣ್ಣು ಅಪಾರ ಆಕರ್ಷಣೆ ಮತ್ತು ನಿಗೂಢತೆಯನ್ನು ಮೂಡಿಸುತ್ತಾಳೆ ಎಂದು ವಿಶ್ಲೇಷಿಸಿದ್ದಾರೆ.

ದೇಸಾಯಿಯವರ ಸ್ತ್ರೀಪಾತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪುರುಷ ಪ್ರಧಾನ ಜಗತ್ತಿನ ಅಧಿಕಾರ ರಚನೆಗಳ ನಡುವೆಯೂ ಸ್ತ್ರೀಯರು ತಮ್ಮದೇ ಆದ ಒಳ ಲೋಕವೊಂದನ್ನು ಕಟ್ಟಿಕೊಳ್ಳಬಲ್ಲರು ಮತ್ತು ತಾವು ಬದುಕುವ ರೀತಿಯಿಂದಲೇ ಪುರುಷರ ಮನಸ್ಸಿನಲ್ಲಿ ಪ್ರಶ್ನೆಗಳನ್ನು ಹುಟ್ಟು ಹಾಕಬಲ್ಲರು ಅನ್ನಿಸುತ್ತವೆ. ಈ ಸಾಧ್ಯತೆಯನ್ನು ಗುರುತಿಸುವ ದೇಸಾಯಿಯವರು ನಿಜಕ್ಕೂ ಆಧುನಿಕರು ಎಂದು ಹೇಳಿದ್ದಾರೆ.

ಆದರೆ ದೇಸಾಯರು ನವ್ಯದ ಹೆಚ್ಚಿನ ಲೇಖಕರಂತೆ ಸಾಂಪ್ರದಾಯಿಕ 'ಹಿಂದೂ ವೈದಿಕ' ಸಮುದಾಯಕ್ಕೆ ಸೇರಿದವರಲ್ಲ. ದಿಗಂಬರ ಜೈನ ಸಮುದಾಯದ ಹಿನ್ನೆಲೆಯಿಂದ ಹಾಗೂ ಅರೆ ಗ್ರಾಮೀಣ ಪ್ರದೇಶದಲ್ಲಿದ್ದ ಜಮೀನ್ದಾರೀ ಕುಟುಂಬದ ಹಿನ್ನೆಲೆಯಿಂದ ಬಂದವರು, ತಮ್ಮ ಹೆಚ್ಚಿನ ಬದುಕನ್ನು ಕರ್ನಾಟಕದಾಚೆಯ ಮಹಾನಗರಗಳಲ್ಲಿ ಕಳೆದವರು. ಇವೆಲ್ಲ ಅವರ ಬರಹಕ್ಕೆ ಹೊಸ ಆಯಾಮವನ್ನು ಕೊಟ್ಟಿರಬಹುದೇ ಎಂಬ ಕುತೂಹಲದಿಂದಲೂ ಅವರ ಸಾಹಿತ್ಯವನ್ನು ನೋಡಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ದೇಸಾಯಿಯವರ ಕತೆಗಳಲ್ಲಿ ತಲೆಮಾರುಗಳ ಸಂಘರ್ಷಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಈ ಸಂಘರ್ಷಗಳಲ್ಲಿ ಸಾಮಾನ್ಯವಾಗಿ ಗೆಲ್ಲುವುದು ಕಿರಿಯ ತಲೆಮಾರು ಅಥವಾ ಆಧುನಿಕತೆಯೇ ಎಂದು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿನ ನಾಯಕರು ತಮ್ಮನ್ನು ಹುಟ್ಟಿಸಿ ಬೆಳೆಸಿದ ಬಾಲ್ಯದ ಸಾಂಪ್ರದಾಯಿಕ ಸಮಾಜಕ್ಕೆ ಮರಳಿ ಹೋಗುವುದನ್ನು ನಿರಾಕರಿಸುವುದೂ ಕೂಡ ಅವರ ತಾತ್ವಿಕ ಸಂಘರ್ಷದ ಒಂದು ಭಾಗವೇ, ಆದರೆ ಈ 'ಜಾತ್ಯಾತೀತ ಮುಕ್ತತೆ' ಯಾಗಲೀ, ಸಂಪ್ರದಾಯ ವಿರೋಧವಾಗಲೀ, ಈ ಸಮಾಜ ಬದಲಾಗಬೇಕೆಂಬ ಹಠ – ಆದರ್ಶಗಳಿಂದ ಬಂದುದಲ್ಲ. ಬದಲಾಗಿ ಇದು ಮಹಾನಗರಗಳಲ್ಲಿ ವಿರಾಜಮಾನವಾಗಿರುವ ಬಂಡವಾಳಶಾಹಿ ಆಧುನಿಕತೆಯು ಗೆದ್ದುಕೊಟ್ಟ ಮಾಲೆ ಎಂದು ವಿಶ್ಲೇಷಿಸಿದ್ದಾರೆ.

"ಮುಕ್ತಿ' ಒಂದು ಟಿಪ್ಪಣಿ' ಎಂಬ ಲೇಖನದಲ್ಲಿ ಯಶವಂತ ಚಿತ್ತಾಲರು ತನ್ನ ಬದುಕನ್ನು ತಾನೇ ಬದುಕಬೇಕು; ತನ್ನ ಅನುಭವಗಳ ಶಿಲುಬೆಯ ಭಾರವನ್ನು ಬಾಳಿನ ಉದ್ದಕ್ಕೂ ತಾನೇ ಹೊರಬೇಕು; ತನ್ನ ಜೀವನದ ನೀತಿ ನಿಯಮಗಳನ್ನು, ಮೌಲ್ಯಗಳನ್ನು ತನ್ನ ಇರುವಿಕೆಯೇ ನಿಶ್ಚಯಿಸಬಲ್ಲುದೇ ಹೊರತು ಪರರಿಂದ ಎರವಲು ತಂದ ಮೌಲ್ಯಗಳು ತನಗೆ ಸಾಲವು ಎಂಬ ಅಸ್ತಿತ್ವವಾದಿ ಪ್ರಜ್ಞೆಯುಳ್ಳ ಬಹುಶಃ ಕನ್ನಡದ ಮೊತ್ತ ಮೊದಲಿನ ಕಾದಂಬರಿ 'ಮುಕ್ತಿ' ಎಂದು ಅಭಿಪ್ರಾಯ ಪಟ್ಟಿದ್ದಾರೆ.

೩.೮ ಶಾಂತಿನಾಥ ದೇಸಾಯಿ ಅವರ ಸಮಗ್ರ ಕಥೆಗಳು (೨೦೦೧) – (ಸಂ.) ಗಿರಡ್ಡಿ ಗೋವಿಂದರಾಜು

ಗಿರಡ್ಡಿ ಗೋವಿಂದರಾಜುರವರು 'ಶಾಂತಿನಾಥ ದೇಸಾಯಿ ಅವರ ಸಮಗ್ರ ಕತೆಗಳು' ಸಂಪುಟಕ್ಕೆ ಬರೆದ ಪ್ರಸ್ತಾವನೆಯಲ್ಲಿ 'ದೇಸಾಯರ ಎಲ್ಲಾ ನಾಯಕ – ನಾಯಕಿಯರು ಬದುಕಿನ ಸ್ಥಗಿತ,

ಅರ್ಥ ಕಳೆದುಕೊಂಡ ಅಸಹನೀಯವಾದ ನೆಲೆಯಿಂದ 'ಬಿಡುಗಡೆ' ಪಡೆಯುವುದರ ಕಡೆಗೆ ತುಡಿಯುವ ವಸ್ತುವೇ ಅವರ ಕಥೆಗಳ ಮುಖ್ಯ ಕೇಂದ್ರವಾಗಿದೆ. ವೈಯಕ್ತಿಕ ಸಂದಿಗ್ಧತೆಗಳೇ ಅವರ ಬರವಣಿಗೆಯ ಸ್ಥಾಯಿ ನೆಲೆ. ಸಾಮಾಜಿಕ ಕಾಳಜಿಗಳು ಸಂಚಾರಿ ನೆಲೆ. ದೇಸಾಯಿಯವರು ಸತ್ಯದ ಬಹುಮುಖತ್ವವನ್ನು ಒಪ್ಪಿಕೊಂಡ ಮೇಲೆ ಅದನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡುವುದು ಅನಿವಾರ್ಯವಾದಂತೆ ಕಾಣುತ್ತದೆ. ಅಲ್ಲದೆ 'ಪಾತ್ರವನ್ನು ದೃಷ್ಟಿಕೋನದ ಕೇಂದ್ರವನ್ನಾಗಿಟ್ಟುಕೊಂಡು ಅದರ ಪ್ರಜ್ಞೆಯ ಮೂಲಕವೇ ವಸ್ತುವನ್ನು ಗ್ರಹಿಸುವುದು ಅವರಿಗೆ ಪ್ರಿಯವಾದ ತಂತ್ರ. ಆದ್ದರಿಂದಲೇ ಅವರ ಪ್ರತಿಯೊಂದು ಕಥೆಯಲ್ಲೂ ಒಂದು ಹೊಸ ಧ್ವನಿ, ಹೊಸ ದೃಷ್ಟಿ ನಮಗೆ ಗೋಚರವಾಗುತ್ತದೆ'. ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೩.೯ ಪ್ರಮಾಣು (೨೦೦೭) : ಗಿರಡ್ಡಿ ಗೋವಿಂದರಾಜು

ಗಿರಡ್ಡಿಯವರು ತಮ್ಮ 'ಪ್ರಮಾಣು' (೨೦೦೭) ಕೃತಿಯಲ್ಲಿ ಶಾಂತಿನಾಥ ದೇಸಾಯಿಯವರ ಕಥೆ – ಕಾದಂಬರಿಗಳಲ್ಲಿ ಪಾತ್ರಗಳು ಮಾಡಿಕೊಳ್ಳುವ ಆಯ್ಕೆ ಒಂದು ರೀತಿಯಿಂದ ಅನೈತಿಕವಾದುದು. ಸಮಾಜದ ಸಾಂಪ್ರದಾಯಿಕ ನೈತಿಕತೆಯ ಮಾನದಂಡಗಳಿಂದ ಅಂಥ ಆಯ್ಕೆಯನ್ನು ಅಳೆಯುವಂತಿಲ್ಲ. ವಿಶೇಷವಾಗಿ ಅವರು ಚಿತ್ರಿಸುವ ಮುಕ್ತ ಮಾನವೀಯ ಸಂಬಂಧಗಳನ್ನು ಲೈಂಗಿಕ ಸಂಬಂಧಗಳೂ ಸೇರಿದಂತೆ–ವೈಯಕ್ತಿಕ ನೈತಿಕ ಜವಾಬ್ದಾರಿಯ ನೆಲೆಯಿಂದ ನೋಡಬೇಕಾಗುತ್ತದೆ. ದೇಸಾಯಿಯಂಥವರು ಆಧುನಿಕತೆಯ ಪರವಾಗಿ ಕಂಡರೂ ಅವರು ವೈಯಕ್ತಿಕ ನೈತಿಕ ಜವಾಬ್ದಾರಿಗೆ ಬದ್ಧರಾಗಿದ್ದರು. ದೈಹಿಕ ಸಂಬಂಧಗಳನ್ನು, ಮುಕ್ತ ಲೈಂಗಿಕತೆಯನ್ನೇನೂ ಅವರು ಪುರಸ್ಕರಿಸಲಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

೩.೧೦ ಪುಸ್ತಕ ಪ್ರೀತಿ (೧೯೯೩) : ಟಿ.ಪಿ. ಅಶೋಕ

ಟಿ.ಪಿ. ಅಶೋಕ್‌ರವರು ತಮ್ಮ 'ಪುಸ್ತಕ ಪ್ರೀತಿ' (೧೯೯೩) ಕೃತಿಯಲ್ಲಿನ 'ಶಾಂತಿನಾಥ ದೇಸಾಯಿ ಅವರ ಬೀಜ' ಲೇಖನದಲ್ಲಿ ದೇಸಾಯಿಯವರ ಕತೆ, ಕಾದಂಬರಿಗಳಲ್ಲಿ ಎದ್ದು ಕಾಣುವ ಅಂಶವೆಂದರೆ ವ್ಯಕ್ತಿಯ ಅಂತರಂಗ ಶೋಧನೆ. ಆದರೆ ಇದು ದೇಸಾಯಿಯವರ ಕೇವಲ ಮನೋ ವೈಜ್ಞಾನಿಕ ಆಸಕ್ತಿಯಲ್ಲ. ಆ ಮೂಲಕ ಅವರು ಮನುಷ್ಯನ ಅಸ್ತಿತ್ವ ಕುರಿತು ಮೂಲಭೂತ ಪ್ರಶ್ನೆಗಳನ್ನೇ ಶೋಧಿಸುತ್ತಿದ್ದಾರೆ. ಆದ್ದರಿಂದಲೇ ದೇಸಾಯಿ ಅವರ ಬರಹಗಳು ಕೇವಲ ಸ್ವಗತ ಎನಿಸುವುದಿಲ್ಲ. ದೇಸಾಯಿಯವರ ಕತೆ ಕಾದಂಬರಿಗಳಲ್ಲಿ ವ್ಯಕ್ತಿಯ ಒಳಮನಸ್ಸು ಮುಖ್ಯವಾದಷ್ಟು ಆ ಮನಸ್ಸನ್ನು ರೂಪಿಸುವ ಪರಿಸರ ಅಷ್ಟಾಗಿ ಮುಖ್ಯವೆನಿಸದಿದ್ದರೂ ಈ ಬಗೆಯ ಬರವಣಿಗೆಯಲ್ಲಿ ಅವರ ಸಿದ್ದಿ ಗಣನೀಯವಾದದ್ದು. ಅಂದರೆ ನವ್ಯ ಚಳುವಳಿಯ ಸಾಫಲ್ಯ ಮತ್ತು ದೌರ್ಬಲ್ಯಗಳ ಒಟ್ಟಾರೆ ಹಿನ್ನೆಲೆಯಲ್ಲಿಯೇ ದೇಸಾಯಿಯವರ ಸಾಹಿತ್ಯವನ್ನು ಅಭ್ಯಾಸ ಮಾಡಬೇಕಾಗುವುದು ಎಂದು ಅಭಿಪ್ರಾಯಪಟ್ಟಿದ್ದಾರೆ.

೩.೧೧ ಸಂಕಥನ (೨೦೦೦) : ಕರೀಗೌಡ ಬೀಚನಹಳ್ಳಿ

ಕರೀಗೌಡ ಬೀಚನಹಳ್ಳಿಯವರು ತಮ್ಮ 'ಸಂಕಥನ' (೨೦೦೦)ದಲ್ಲಿ ದೇಸಾಯಿಯವರ ಸಾಹಿತ್ಯವನ್ನು ಕುರಿತಂತೆ ಸಣ್ಣ ಕಥೆಯ ಕ್ಷೇತ್ರದಲ್ಲಿ ನವ್ಯತೆ ಒಂದು ಕಥನ ಸಂಪ್ರದಾಯವಾಗಿ

ಸ್ನಿಗ್ಧವಾಗಲು ಶ್ರಮಿಸಿದ ಹಿರಿಯರಲ್ಲಿ ಐತಿಹಾಸಿಕವಾಗಿ ದೇಸಾಯಿ ಅವರು ಒಬ್ಬರು. ದೇಸಾಯಿ ಇವರ ಕಥೆಗಳಲ್ಲಿ ಬರುವ ಕಾಮ ದೈಹಿಕ ಸುಖದ ಸಾಧ್ಯವಲ್ಲ ; ಸಾಮಾಜಿಕವಾಗಿ, ಮಾನಸಿಕವಾಗಿ ತೊಳಲುವ ವ್ಯಕ್ತಿಗಳ ಸಂಕೋಚದ ವಿಮೋಚನೆಯ ಸಂಕೇತವಾಗಿ ಬರುತ್ತದೆ. ಇವರ ಬರವಣಿಗೆಯಲ್ಲಿ ಉದ್ವೇಗವಿಲ್ಲ. ಸಾಂಪ್ರದಾಯಕ ಚೌಕಟ್ಟನ್ನು, ಅಲ್ಲಿಯ ಗಂಡು ಹೆಣ್ಣಿನ ಸಂಬಂಧದ ನೈತಿಕ ಕ್ಷಿತಿಜವನ್ನು ಆರೋಗ್ಯಕಾರೀ ನೆಲೆಯತ್ತ ವಿಸ್ತರಿಸುವ ಧೋರಣೆ ಇವರ ಬಹುಪಾಲು ಕಥೆಗಳಲ್ಲಿ ಪ್ರಧಾನವಾಗಿ ಕಂಡು ಬರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

೩.೧೨ ಪರಿಶ್ರಮ (೨೦೧೧) : ಕರೀಗೌಡ ಬೀಚನಹಳ್ಳಿ

'ಪರಿಶ್ರಮ' (೨೦೧೧)ದಲ್ಲಿ ಕರೀಗೌಡ ಬೀಚನಹಳ್ಳಿಯವರು ಶಾಂತಿನಾಥ ದೇಸಾಯಿಯವರ ಮುಕ್ತಿ ಕಾದಂಬರಿಯಲ್ಲಿ ವ್ಯಕ್ತಿಯ ಅನಾಥ ಪ್ರಜ್ಞೆಯನ್ನು ಹಾಗೂ ವಿಕ್ಷಿಪ್ತತೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ನವ್ಯ ಸಂವೇದನೆಗಳಾದ ಅನಾಸಕ್ತಿ, ಅಪರಿಚಿತತೆ ಹಾಗೂ ನಿರ್ವಿಕಾರಗಳನ್ನು ಗುರುತಿಸಿದ್ದಾರೆ. ಮತ್ತೊಂದೆಡೆ ತಮ್ಮ 'ವ್ಯಷ್ಟಿ ಮತ್ತು ಸಮಷ್ಟಿ' (ದ್ವಿತೀಯ ಮುದ್ರಣ ೨೦೦೭) ಕೃತಿಯಲ್ಲಿ ದೇಸಾಯಿಯವರ ಕಥೆಗಳಲ್ಲಿ ನಗರ ಜೀವನದ ಅನುಭವಗಳಿಗೆ, ಸಮಸ್ಯೆಗಳಿಗೆ ಹೆಚ್ಚಿನ ಪ್ರಾಧಾನ್ಯವಿದೆ. ಅದರಲ್ಲೂ ಅವರ ಕಥೆಗಳ ಮೂಲಭಿತ್ತಿ ಇರುವುದು ಮಧ್ಯಮ ವರ್ಗದ, ವಿದ್ಯಾವಂತ ವರ್ಗದ, ಬುದ್ದಿಜೀವಿ ವರ್ಗದ ಜನರ ವೈವಾಹಿಕ ಜೀವನದ ವಿವಿಧ ಮುಖಗಳನ್ನು ಚಿತ್ರಿಸಿರುವುದರಲ್ಲಿ. ಹೆಣ್ಣು–ಗಂಡಿನ ಲೈಂಗಿಕ ಸಂಬಂಧದ ಆಶಯಗಳು, ಮನುಷ್ಯನ ಒಳಮನಸ್ಸಿನ ಮಾನಸಿಕ ತೊಳಲಾಟಗಳು, ಸಂಕೀರ್ಣತೆಗಳು, ಏಕಾಂಗಿತನಗಳು ಈ ಮುಂತಾದ ಚಿತ್ರಗಳನ್ನು ಇವರ ಕಥೆಗಳು ಒಳಗೊಳ್ಳುತ್ತವೆ. ಹೊಸ ಸಂಸ್ಕೃತಿ, ನಾಗರಿಕತೆ, ಸಮಾಜವನ್ನು ಸೃಷ್ಟಿಸುವತ್ತ ಇವರ ಕಥೆಗಳು ತೀವ್ರವಾದ ಹಂಬಲದೊಡನೆ ತುಡಿಯುತ್ತವೆ. ದೇಸಾಯಿಯವರ ವೈಜ್ಞಾನಿಕ ಪ್ರಜ್ಞೆ ಬರಿ ಹುಸಿ ಪ್ರಜ್ಞೆಯಾಗದೆ, ತನ್ನ ಕಲಾತ್ಮಕತೆಯನ್ನು ಕಳೆದುಕೊಳ್ಳದೆ, ಒಂದು ಪ್ರಬುದ್ಧ ನವ್ಯ ಮಾರ್ಗವನ್ನು ನೆಲೆಗೊಳಿಸುವುದು ಅವರ ಮಹತ್ವದ ಅಂಶಗಳಲ್ಲೊಂದಾಗಿದೆ ಎಂದು ವಿಶ್ಲೇಷಿಸಿದ್ದಾರೆ.

೩.೧೩ ಶತಮಾನದ ಸಣ್ಣಕಥೆಗಳ ಸಮೀಕ್ಷೆ (೨೦೦೩) : ಕರೀಗೌಡ ಬೀಚನಹಳ್ಳಿ

ಕರೀಗೌಡ ಬೀಚನಹಳ್ಳಿ ಅವರು ತಮ್ಮ ಮತ್ತೊಂದು ವಿಮರ್ಶೆಯ ಕೃತಿ 'ಶತಮಾನದ ಸಣ್ಣಕಥೆಗಳ ಸಮೀಕ್ಷೆ' (೨೦೦೩) ಗ್ರಂಥದಲ್ಲಿ, 'ದೇಸಾಯಿ ಅವರ ಮನೋಧರ್ಮ ಮೂಲತಃ ಸಮಾಜದ ಪರಿವರ್ತನೆ. ಬದಲಾದ ಆಧುನಿಕ ಸಮಾಜದಲ್ಲಿ ಜಾತಿ ಪದ್ಧತಿ, ಮದುವೆ ಮುಂತಾದ ಸಮಸ್ಯೆಗಳಿಗೆ ಮಹತ್ವ ಕೊಡಬಾರದು ಎಂಬುದು ಅವರ ಕಥೆಗಳಿಂದ ಮುಖ್ಯವಾಗಿ ಮೂಡಿಬರುವ ತಿಳುವಳಿಕೆಯಾಗಿದೆ. ಇವರ ಕಥಾನಾಯಕಿಯರೆಲ್ಲರೂ ನವಸ್ತ್ರೀಯರು, ವಿದ್ಯಾವಂತ ಮಧ್ಯಮ ವರ್ಗದ ಮಹಿಳೆಯರು. ಕ್ರಾಂತಿಕಾರಿ ಮಹಿಳೆಯರು. ಹೊಸದೃಷ್ಟಿಕೋನ ಬೆಳೆಸಿಕೊಂಡು ಪುರುಷರೊಡನೆ ಸಮಾನತೆಗಾಗಿ, ಹೊಸ ಸಮಾಜ ಹಾಗೂ ಹೊಸ ಬದುಕಿಗಾಗಿ ಹಂಬಲಿಸುವವರು' ಎಂದು ದೇಸಾಯಿ ಕಥಾಸಾಹಿತ್ಯದ ಅನನ್ಯತೆ ಹಾಗೂ ಸಂಘರ್ಷವನ್ನು ಸೂಕ್ಷ್ಮವಾಗಿ ವ್ಯಾಖ್ಯಾನಿಸಿದ್ದಾರೆ.

೩.೧೪ ಅಸ್ತಿತ್ವವಾದ ಮತ್ತು ಕನ್ನಡ ನವ್ಯ ಸಾಹಿತ್ಯ (೨೦೧೧) : ಟಿ. ಸುಬ್ರಹ್ಮಣ್ಯಂ

ಟಿ. ಸುಬ್ರಹ್ಮಣ್ಯಂರವರು ತಮ್ಮ 'ಅಸ್ತಿತ್ವವಾದ ಮತ್ತು ಕನ್ನಡ ನವ್ಯ ಸಾಹಿತ್ಯ' ಕೃತಿಯಲ್ಲಿ ದೇಸಾಯಿಯವರ ಮೇಲೆ ಉಂಟಾದ ರೀತಿಯ ದಟ್ಟ ಅಸ್ತಿತ್ವವಾದಿ ಪ್ರಭಾವ ಉಳಿದ ಕನ್ನಡ ಲೇಖಕರಲ್ಲಿ ವಿರಳ. ಬಹುಮುಖ್ಯವಾದ ಮಾತೆಂದರೆ ಶಾಂತಿನಾಥ ದೇಸಾಯಿಯವರು ಅಸ್ತಿತ್ವವಾದಕ್ಕೆ ಎಷ್ಟೇ ಬದ್ಧರಾದರೂ ಅದನ್ನು ಸೃಜನಶೀಲ ಸಂದರ್ಭದಲ್ಲಿ ಪ್ರತಿಪಾದಿಸುತ್ತಾ ಹೋಗುವ ಸರಳ ಸಂವೇದನೆಯನ್ನು ಉಳ್ಳವರಲ್ಲ. ಬಹುಮಂದಿ ನವ್ಯ ಲೇಖಕರಂತೆ ಶಾಂತಿನಾಥ ದೇಸಾಯಿಯವರು ವ್ಯಕ್ತಿಯ ಬಾಹ್ಯ ಚಟುವಟಿಕೆಗಿಂತಲೂ ಆಂತರಿಕ ಪ್ರಪಂಚಕ್ಕೆ ವಿಶೇಷ ಮಹತ್ವವನ್ನು ಕೊಡುತ್ತಾರೆ. ಮನೋವಿಜ್ಞಾನ ಮತ್ತು ಅಸ್ತಿತ್ವವಾದ–ಇವೆರಡೂ ಇವರ ಒಟ್ಟು ಕಥಾ ಪ್ರಪಂಚದಲ್ಲಿ ಸಾಮಾನ್ಯವಾಗಿ ಹಿನ್ನೆಲೆಯಲ್ಲಿರುತ್ತವೆ. ಅಸ್ತಿತ್ವವಾದಿ ದೃಷ್ಟಿಕೋನದಿಂದಲೇ ವ್ಯಕ್ತಿಗಳ ಒಳ ಮನಸ್ಸನು ಅನ್ವೇಷಿಸಿದ ನವ್ಯ ಮುಖ್ಯ ಲೇಖಕರಲ್ಲಿ ದೇಸಾಯಿಯವರು ಒಬ್ಬರಾಗಿದ್ದಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

೩.೧೫ ಡಾ. ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ; ಒಂದು ಅಧ್ಯಯನ : ಕೆ.ಎನ್. ಗಂಗಾನಾಯಕ್

ಇದು ಶಾಂತಿನಾಥ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ನಡೆಸಿದ ಸಂಶೋಧನಾ ಪ್ರಬಂಧ. ಇದು ಗ್ರಂಥರೂಪದಲ್ಲಿ ಸಹ ಪ್ರಕಟವಾಗಿದೆ (೨೦೦೧).

ಇದು ಐದು ಅಧ್ಯಾಯಗಳ ಅಧ್ಯಯನ ಗ್ರಂಥವಾಗಿದೆ. **ಮೊದಲ ಅಧ್ಯಾಯದಲ್ಲಿ** ಹಳಿಯಾಳದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ದೇಸಾಯಿಯವರು ಮುಂದಿನ ವ್ಯಾಸಂಗಕ್ಕೆಂದು ಧಾರವಾಡಕ್ಕೆ ಬಂದು ಅಲ್ಲಿ ಅವರು ತಮ್ಮ ಜೂನಿಯರ್ ಬಿ.ಎ. ವ್ಯಾಸಂಗವನ್ನು ಮುಗಿಸಿದ ಬಗ್ಗೆ ತಿಳಿಸಿದ್ದಾರೆ. ದೇಸಾಯರ ಉನ್ನತ ವ್ಯಾಸಂಗದ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ದೇಸಾಯರ ವೃತ್ತಿಜೀವನದ ಬಗ್ಗೆ, ಸಂದ ಗೌರವಗಳ ಬಗ್ಗೆ ವಿವರಿಸಿದ್ದಾರೆ. ದೇಸಾಯಿಯವರ ಸಾಹಿತ್ಯ ರಚನೆಗೆ ಪ್ರೇರಕವಾದ ಅಂಶಗಳ ಬಗ್ಗೆ, ದೇಸಾಯಿಯವರು ರಚಿಸಿರುವ ಕಥೆ ಕಾದಂಬರಿಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದ್ದಾರೆ.

ದೇಸಾಯಿಯವರ ಬಾಲ್ಯ ಜೀವನದ ಹುಟ್ಟೂರಿನ ಅನುಭವಗಳು ಹಾಗೂ ತಾರುಣ್ಯದ ನಗರ ಜೀವನದ ಅನುಭವಗಳು ದೇಸಾಯಿಯವರ ವ್ಯಕ್ತಿತ್ವವನ್ನು ಪ್ರಭಾವಿಸಿವೆ ಎಂದು ವಿವರಿಸಿದ್ದಾರೆ. ದೇಸಾಯಿಯವರ ಬಾಲ್ಯ ಜೀವನ, ಅವರ ಸ್ನೇಹಿತರ ಬಳಗ, ಅವರ ಕುಟುಂಬವರ್ಗ ಅವರ ಆತ್ಮೀಯ ವ್ಯಕ್ತಿತ್ವದ ಬಗ್ಗೆ ಸಮಗ್ರ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ ಕನ್ನಡ ನವೋದಯ, ಪ್ರಗತಿಶೀಲ ಸಾಹಿತ್ಯ ಚಳುವಳಿಗಳ ಚಾರಿತ್ರಿಕ ಸನ್ನಿವೇಶಗಳನ್ನು ವಿವರಿಸಿದ್ದಾರೆ. ಇಂಗ್ಲೀಷ್ ಸಾಹಿತ್ಯಾಭ್ಯಾಸದಿಂದಲೇ ನವ್ಯತೆ ಭಾರತವನ್ನು ಪ್ರವೇಶಿಸಿತು. ಸ್ವಾತಂತ್ರ್ಯ ನಂತರ ಭಾರತದ ಪರಿಸ್ಥಿತಿಯೂ ಕೂಡ ಇದಕ್ಕೆ ಪೂರಕ ವಾತಾವರಣವನ್ನು ನಿರ್ಮಿಸಿತು. ಅಂತೆಯೇ ಕನ್ನಡ ಸಾಹಿತ್ಯದಲ್ಲಿಯೂ ಕೂಡ ನವ್ಯ ಸಾಹಿತ್ಯ ಜನ್ಮ ತಳೆದ ಹಿನ್ನೆಲೆಯನ್ನು ವಿವರಿಸಿದ್ದಾರೆ. ಕನ್ನಡ ನವ್ಯ ಸಾಹಿತ್ಯ ಒಳಗೊಂಡಿರುವ ಪ್ರಮುಖ ಅಂಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಮಾನಸಿಕ ಅಸ್ತವ್ಯಸ್ತತೆ, ಭ್ರಮನಿರಸನಗೊಂಡ ಸಮಾಜದ ಚಿತ್ರಣವೇ ನವ್ಯ

ಸಾಹಿತ್ಯದ ಮುಖ್ಯ ಅಂಶವಾಗಿದೆ ಎಂದು ಗುರುತಿಸಿದ್ದಾರೆ. ಕನ್ನಡದ ವಿವಿಧ ನವ್ಯ ಲೇಖಕರು ಪಾಶ್ಚಾತ್ಯ ಲೇಖಕರ ಪ್ರಭಾವಕ್ಕೆ ಒಳಗಾಗಿ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗೆಯನ್ನು ವಿವರಿಸಿದ್ದಾರೆ. ಅಂತೆಯೇ ದೇಸಾಯಿಯವರ ಮೇಲೆ ಪ್ರಭಾವ ಬೀರಿದ ಪಾಶ್ಚಿಮಾತ್ಯ ಲೇಖಕರನ್ನು ಗುರುತಿಸಿದ್ದಾರೆ.

ಅಧ್ಯಾಯ–೩ರಲ್ಲಿ ಶಾಂತಿನಾಥ ದೇಸಾಯಿ ಅವರ ಸಣ್ಣಕತೆಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ದೇಸಾಯಿಯವರು ತಮ್ಮ ಸಮಕಾಲೀನರಿಗಿಂತ ಭಿನ್ನವಾಗಿ ಕಥೆಗಳನ್ನು ರಚಿಸಿ ಸ್ವಂತಿಕೆಯನ್ನು ಕಾಪಾಡಿಕೊಂಡಿದ್ದಾರೆ. ಇವರ ಕಥೆಗಳ ವಸ್ತು, ತಂತ್ರ ಮತ್ತು ಭಾಷೆಯಲ್ಲಿ ವೈವಿಧ್ಯತೆ ಇದೆ. ಬದುಕಿನ ಸಂಕೀರ್ಣತೆ, ಕೌಟುಂಬಿಕ ತೊಡಕು, ನಗರಜೀವನ ಸಮಸ್ಯೆ, ಹೊಸ ನಾಗರಿಕತೆ, ಆಧುನಿಕತೆಯ ಪ್ರಭಾವದಿಂದ ಹೆಚ್ಚಿರುವ ಕಾಮದಾಹ ಮುಂತಾದ ಅಂಶಗಳು ದೇಸಾಯರ ಕತೆಗಳಲ್ಲಿ ಚಿತ್ರಣಗೊಂಡಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಮಂಜುಗಡ್ಡೆ' ಕಥೆಯ ನಾಯಕನಾದ ಗೌರೀಶನ ಭಾವನೆಗಳು ಪ್ರಜ್ಞಾ ಪ್ರವಾಹದ ರೀತಿಯಲ್ಲಿ ಹರಿಯುತ್ತವೆ. ಗೌರೀಶನ ಕನಸುಗಳೆಲ್ಲ ಮೊದಲು ಮಂಜುಗಡ್ಡೆಯಾಗಿ ಕಾಲಕ್ರಮೇಣ ಅವು ಕರಗಿಹೋದವು ಎಂಬುದೇ ಈ ಕಥೆಯ ಶೀರ್ಷಿಕೆಯ ಅರ್ಥವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ ಈ ಕಥೆಯು ಪ್ರಜ್ಞಾಪ್ರವಾಹ ತಂತ್ರಕ್ಕೆ ಒಳ್ಳೆಯ ಉದಾಹರಣೆಯಾಗಿದೆ ಎಂದು ವಿಶ್ಲೇಷಿಸಿದ್ದಾರೆ.

'ಚಂದೂ' ಕಥೆಯಲ್ಲಿ ಚಂದೂನ ಒಳತೋಟ ಮುಖ್ಯವಾಗಿ ನಿಂತಿದೆ. ಅದೆ ಪ್ರಧಾನವಾದ ಅಂಶವಾಗಿದೆ. ಈ ಕಥೆಯಲ್ಲಿ ಹುಡುಗನ ಸಂವೇದನೆ ಮುಖ್ಯವಾಗಿದ್ದು ಒಬ್ಬ ಚಿಕ್ಕ ಹುಡುಗ ಬದುಕನ್ನು ಎಷ್ಟು ಆಸಕ್ತಿಯಿಂದ ನೋಡುತ್ತಿರುತ್ತಾನೆ ಎಂಬುದು ತಿಳಿದು ಬರುತ್ತದೆ. ಈ ರೀತಿಯಾಗಿ ಲೇಖಕರು ನಮ್ಮ ಬದುಕಿನ ಮೌಲ್ಯ ಮತ್ತು ಜೀವನದ ಸಂಕೀರ್ಣತೆಯನ್ನು ಚಂದೂನ ಮೂಲಕ ಕಟ್ಟಿಕೊಟ್ಟಿರುವುದು ಇಲ್ಲಿ ಬಹಳ ಮುಖ್ಯವಾಗಿದೆ ಎಂದು ವಿಶ್ಲೇಷಿಸಿದ್ದಾರೆ.

'ಶೋಭನೆಯ ಹಾದಿ' ಕತೆಯಲ್ಲಿ ಶೋಭನೆಯ ಮಾನಸಿಕ ತಾಕಲಾಟವನ್ನು, ನೈತಿಕ ಸಂಕಟವನ್ನು, ಧೈರ್ಯವನ್ನು ಪ್ರಕಟಿಸುವ ಈ ಕತೆ ವಾಸ್ತವತೆಯಿಂದ ಕೂಡಿದೆ, ಕಲಾತ್ಮಕ ಯಶಸ್ಸನ್ನು ಹೊಂದಿದೆ. ಇಲ್ಲಿ ದೇಸಾಯಿ ಅವರು ಅನುಭವಗಳನ್ನು ಮೂರ್ತೀಕರಿಸುವಲ್ಲಿ ಭಾಷೆಯನ್ನು ಅತ್ಯಂತ ಚೆನ್ನಾಗಿ ದುಡಿಸಿಕೊಂಡಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಕ್ಷಿತಿಜ' ಕತೆಯನ್ನು ಕುರಿತಂತೆ ಸಂಕೀರ್ಣ ಬದುಕಿನ ಹಠವನ್ನು ಸೂಚಿಸುವುದೇ 'ಕ್ಷಿತಿಜ' ಕತೆಯ ವಸ್ತುವಾಗಿದೆ. ಇಲ್ಲಿ ಕ್ಷಿತಿಜವು ವಿಶಾಲ ಬದುಕಿನ ಸಂಕೇತವಾಗಿ ಮೂಡಿ ಬಂದಿದೆ. ವಿಶ್ವದ ಬೇರೆ ಬೇರೆ ದೇಶಗಳ ಸಂಸ್ಕೃತಿಗಳ ಸೂಕ್ಷ್ಮ ಒಳಪದರುಗಳನ್ನು, ಸಂಮಿಲನವನ್ನು ನಾವಿಲ್ಲಿ ಕಾಣುತ್ತೇವೆ. ಇಲ್ಲಿ ಮಂದಾಕಿನಿ ಪ್ರಪಂಚದ ಹೊಸ ಹೊಸ ಮೌಲ್ಯಗಳ ಶೋಧನೆಗಾಗಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೊರಟಿದ್ದಾಳೆ. ನಮ್ಮ ವ್ಯಕ್ತಿತ್ವವನ್ನು ನಾವೇ ಬೆಳೆಸಿಕೊಳ್ಳಬೇಕೆಂಬುದು ಅವಳ ಅಭಿಪ್ರಾಯವಾಗಿದೆ. ಹೀಗೆ ಮಂದಾಕಿನಿಯ ವ್ಯಕ್ತಿತ್ವದಲ್ಲಾದ ಬದಲಾವಣೆಯನ್ನು ಚಿತ್ರಿಸುವುದೇ ಕತೆಗಾರರಿಗೆ ಇಲ್ಲಿ ಮುಖ್ಯವಾಗಿದೆ. ಕ್ಷಿತಿಜದಲ್ಲಿ ಪ್ರಪಂಚದ

ಹಲವಾರು ರಾಷ್ಟ್ರಗಳ ಭಿನ್ನ, ಭಿನ್ನ ಸಂಸ್ಕೃತಿಗಳ ಪರಿಚಯವನ್ನು ಮಾಡಿಸಿದ್ದಾರೆ. ಇಲ್ಲಿನ ಪ್ರತಿಯೊಂದು ಪಾತ್ರವೂ ತನ್ನದೇ ಆದ ಹೊಸತನದ ಶೋಧನೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಮುಗ್ಧತೆ ಮತ್ತು ಅನುಭವಗಳ ಘರ್ಷಣೆಯಿಂದ ಉಂಟಾಗುವ ಪ್ರಬುದ್ಧತೆಯ ಅರಿವು, ವಿವೇಕ, ಈ ಅಂಶಗಳು ದೇಸಾಯಿ ಅವರ ಕತೆ–ಕಾದಂಬರಿಗಳ ಮೂಲ ಪ್ರೇರಣೆಯಾಗಿವೆ. ಅದರಂತೆ 'ಕ್ಷಿತಿಜ' ಕತೆಯಲ್ಲಿ ಮಂದಾಕಿನಿ ಮುಗ್ಧತೆಯ ಸಂಕೇತವಾದರೆ, ಹಡಗಿನೊಳಗಿನ ಜೀವನ, ಪಾಶ್ಚಾತ್ಯ ಸಂಸ್ಕೃತಿ, ಇವು ಅನುಭವದ ಸಂಕೇತಗಳಾಗಿ ನಿಲ್ಲುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಗಂಡ ಸತ್ತ ಮೇಲೆ' ಕತೆಯನ್ನು ಕುರಿತಂತೆ 'ವಿಧವೆ'ಯ ಸೃಜನಶೀಲ ಬೆಳವಣಿಗೆಯನ್ನು ಈ ಕತೆ ತುಂಬಾ ಧ್ವನಿಪೂರ್ಣವಾಗಿ ಚಿತ್ರಿಸುತ್ತದೆ. ಗಂಡ ಬದುಕಿರುವವರೆಗೆ ಯಾವುದೇ ಜವಾಬ್ದಾರಿಯೂ ಇರದ ವಿಜಯಬಾಯಿ ಪತಿ ತೀರಿಕೊಂಡ ಮೇಲೆ ಸಂಸಾರದ ಜವಾಬ್ದಾರಿಯನ್ನು ಹೊತ್ತು ಮಗಳ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸಿದರೂ ತಾಯಿಯ ಅತಿಯಾದ ನಿರ್ಬಂಧದಿಂದ ಮಗಳ ಬದುಕು ದುರಂತಕ್ಕೀಡಾಗುತ್ತದೆ. ಹೀಗೆ ಇಲ್ಲಿ ಅತಿಯಾದ ತಾಯ್ತನದ ನಿರ್ಬಂಧನೆಯಿಂದ ಬಾಳಿ ಬೆಳೆಯಬೇಕಾಗಿದ್ದ ಸ್ತ್ರೀ ಜೀವ ದುರಂತಕ್ಕೀಡಾಗುವುದನ್ನು ಕತೆಗಾರರು ಚಿತ್ರಿಸಿದ್ದಾರೆಂದು ಅಭಿಪ್ರಾಯಪಡುತ್ತಾರೆ.

'ದಂಡೆ' ಕತೆಯಲ್ಲಿ ಜೀವನದಲ್ಲಿ ಬೇಸತ್ತ ವ್ಯಕ್ತಿ ನಿಯಂತ್ರಣವನ್ನು ಕಳೆದುಕೊಂಡು, ಆಪ್ತರನ್ನು, ಹಿತೈಷಿಗಳನ್ನು ತೊರೆದು, ಆತ್ಮಹತ್ಯೆಯನ್ನು ಮಾಡಿಕೊಳ್ಳಲು ನಿರ್ಧರಿಸಿ ಏಕಾಂಗಿಯಾಗಿ ಹೊರಡುವುದೇ ಈ ಕತೆಯ ವಸ್ತುವಾಗಿದೆ. ಕತೆಗಾರರು ಇಲ್ಲಿ ಬಾಂಬೆಯ ಜೀವನದ ಕನಸುಗಾರಿಕೆಯನ್ನು, ಅಲ್ಲಿನ ಜೀವನ ಶೈಲಿಯನ್ನು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಈ ಕತೆ ಕರೀಮನ ಪಾತ್ರದ ಮೂಲಕ ಮನುಷ್ಯನ ಮುಕ್ತಿಯ ಆಕಾಂಕ್ಷೆ, ದೈಹಿಕ ಪ್ರವೃತ್ತಿಗಳ ಸ್ವಾಭಾವಿಕ ಸೆಳೆತ–ಇವುಗಳ ಸಂಘರ್ಷವನ್ನು, ಆ ಮೂಲಕವಾಗಿ ಪ್ರಕಟಗೊಳ್ಳುವ ಅಸ್ತಿತ್ವವಾದದ ಸ್ವರೂಪವನ್ನು ಕಟ್ಟಿಕೊಡುತ್ತದೆ ಎಂದು ವಿಶ್ಲೇಷಿಸಿದ್ದಾರೆ.

'ನಾನಾನ ತೀರ್ಥಯಾತ್ರೆ' ಕತೆಯನ್ನು ಕುರಿತಂತೆ ಈ ಕತೆಯು ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳ ಕಂದರವನ್ನು ಎತ್ತಿ ಹಿಡಿಯುತ್ತದೆ. 'ನಾನಾ' ಮನೆಯ ಹಿರಿಯನಾಗಿದ್ದರೂ ತಮ್ಮನ ಹೆಂಡತಿ ತಾರಾಬಾಯಿಯ ಸಾಮ್ರಾಜ್ಯದಲ್ಲಿ ಮೂಲೆಗುಂಪಾಗಿದ್ದಾನೆ, ಅಸಹಾಯಕನಾಗಿದ್ದಾನೆ. ಜೊತೆಗೆ ಈತ ಹೊರಗಿನ ಪ್ರಪಂಚದಿಂದಲೂ ಬೇಸತ್ತಿದ್ದಾನೆ. ಈ ರೀತಿ ನಾನಾನ ಅಸಹಾಯಕತೆ, ಒಂಟಿತನ, ದ್ವಂದ್ವ , ನೋವು, ದುಗುಡ, ದುಮ್ಮಾನಗಳನ್ನು ಕತೆಗಾರರು ತುಂಬಾ ಔಚಿತ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಇದು ವಯೋವೃದ್ಧ ವ್ಯಕ್ತಿಯೊಬ್ಬನ ಮಾನಸಿಕ ತೊಳಲಾಟವನ್ನು ಚಿತ್ರಿಸುವುದರಿಂದ ಮಿಕ್ಕ ಕತೆಗಳಿಗಿಂತ ಭಿನ್ನವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ರಾಕ್ಷಸ' ಕತೆಯನ್ನು ಕುರಿತು 'ನಳಿನಿಯ ಆಂತರಿಕ ಒಳತೋಟಿಯನ್ನು ಎಳೆ ಎಳೆಯಾಗಿ ಬಿಡಿಸುವುದೇ ಈ ಕಥೆಯ ಮುಖ್ಯ ಉದ್ದೇಶ'ವಾಗಿದೆ. 'ರಾಕ್ಷಸ' ಎಂದರೆ ಕಮಲಾಕರ ಸರನಾಯಕ ಮತ್ತು ನಳಿನಿಯರ ಮನಸ್ಸಿನಲ್ಲಿ ಹುಟ್ಟುವ ಕಾಮಸಂಬಂಧಿಯಾದ ಬಯಕೆ, ರೈಲಿನ ಒಂದೇ

ಬೋಗಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗಿನ ಇವರಿಬ್ಬರ ಅಂತರಂಗದಲ್ಲಿ ಹುಟ್ಟುವ ಕಾಮಸಂಬಂಧಿ ಬಯಕೆಯ ತೊಳಲಾಟವನ್ನು ಕತೆಗಾರರು ಇಲ್ಲಿ ತುಂಬಾ ಸಮರ್ಥವಾಗಿ, ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಈ ರಾಕ್ಷಸ ಇಲ್ಲಿ ಕಾಮದ ಸಂಕೇತ ಮಾತ್ರವಾಗಿರದೆ ಅನೀತಿಯ ಪ್ರತಿಮೆಯಾಗಿಯೂ ಬರುತ್ತದೆ.

'ನದಿಯ ನೀರು' ಕತೆಯನ್ನು ಕುರಿತಂತೆ ಈ ಕತೆ ಮನಃಶಾಸ್ತ್ರದ ಹಿನ್ನೆಲೆಯಿಂದ ಮೂಡಿ ಬಂದಿದ್ದು, ವ್ಯಕ್ತಿ ತಾನು ಮಾಡಿದ ಸಣ್ಣ ಅಪರಾಧಕ್ಕಾಗಿ ತನ್ನ ಮುಂದಿನ ಜೀವನದಲ್ಲಿ ಈ ಅಪರಾಧ ಭೀತಿಯಿಂದ, ಪಾಪ ಪ್ರಜ್ಞೆಯಿಂದ ನರಳುವುದನ್ನು ಅತ್ಯಂತ ಸಮರ್ಥವಾಗಿ ಕಟ್ಟಿಕೊಡುತ್ತದೆ. ವಸ್ತುವಿನ ಆಯ್ಕೆಯಲ್ಲಿ ಮತ್ತು ನಿರ್ವಹಣೆಯಲ್ಲಿ, ಭಾಷೆಯ ಬಳಕೆಯಲ್ಲಿ, ತಂತ್ರ ಪ್ರಯೋಗದಲ್ಲಿ ಪರಿಣಿತಿಯನ್ನು ಪಡೆದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಪರಿವರ್ತನೆ' ಕತೆಯನ್ನು ಕುರಿತಂತೆ, ಈ ಕತೆಯಲ್ಲಿ ಹಳೆಯ ಕಾಲದ ಜನರನ್ನು, ಅವರ ಸಂಪ್ರದಾಯಬದ್ಧ ಮನಸ್ಸನ್ನು ಟೀಕೆ ಮಾಡಲಾಗಿದೆ. ಜೊತೆಗೆ ಹೊಸ ಪೀಳಿಗೆಯ ಪ್ರಗತಿಪರ ಯುವಕ-ಯುವತಿಯರ ವಿಚಾರಗಳಿಗೆ, ಅವರ ಬದುಕಿಗೆ ಮಾನ್ಯತೆ ನೀಡಲಾಗಿದೆ. ಹೀಗೆ ಕತೆಗಾರರು ಇಲ್ಲಿ ಪ್ರಗತಿಪರ ಚಿಂತನೆಗಳನ್ನು, ಆಲೋಚನೆಗಳನ್ನು ತರುವುದರ ಮೂಲಕ ತಾವೊಬ್ಬ ಪ್ರಗತಿಪರ ಲೇಖಕರೆಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ವಿಶ್ಲೇಷಿಸಿದ್ದಾರೆ.

'ಶಿವೂನ ಬಂಡಾಯ' ಕತೆಯನ್ನು ಕುರಿತಂತೆ ಸಣ್ಣ ಹುಡುಗನ ಅನ್ಯಾಯದ ವಿರುದ್ಧದ ಪ್ರತಿಭಟನೆಯನ್ನು ಕಾಣುತ್ತೇವೆ. ಶಿವೂ ಶ್ರೀಮಂತರ ಮನೆಯಲ್ಲಿ ಜನಿಸಿದ್ದರೂ, ದುಡಿಯುವ ವರ್ಗ ಅನುಭವಿಸುತ್ತಿರುವ ನೋವನ್ನು, ಶ್ರೀಮಂತರ ಅಧಿಕಾರದ ದರ್ಪವನ್ನು ಸಹಿಸುವುದಿಲ್ಲ. ಸಂಗ್ಯಾನಂಥ ಮುಗ್ಧ ಮನುಷ್ಯನ ಮೇಲೆ ತಂದೆ ನಡೆಸುತ್ತಿರುವ ದೌರ್ಜನ್ಯವನ್ನು ಕಂಡು ಸಹಿಸುವುದಿಲ್ಲ ಸಂಗ್ಯಾನ ವೈಯಕ್ತಿಕ ವಿಷಯವನ್ನು ಇಟ್ಟುಕೊಂಡು ಅವನನ್ನು ಹಿಂಸಿಸುವ ಅಪ್ಪನ ವಿರುದ್ಧ ಸಿಡಿದೇಳುತ್ತಾನೆ. ಶಿವೂನ ಮಾನಸಿಕ ಬಂಡಾಯವನ್ನು ಕಥೆಗಾರರು ಅರ್ಥಪೂರ್ಣವಾಗಿ ತಂದಿದ್ದಾರೆ. ಒಟ್ಟಾರೆಯಾಗಿ ಈ ಕತೆಯು ಅಪ್ರಾಪ್ತ ವಯಸ್ಸಿನ ಬಾಲಕನ ಜವಾಬ್ದಾರಿಯುತವಾದ ಮನೋಭಾವದ ವಿಶ್ಲೇಷಣೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ದುಃಸ್ವಪ್ನ' ಕತೆಯನ್ನು ಕುರಿತಂತೆ ಈ ಕತೆಯು ವಿಕ್ಷಿಪ್ತ ಮನಸ್ಸಿನ ಹೊಯ್ದಾಟವನ್ನು ಗಂಭೀರವಾಗಿ ಚಿತ್ರಿಸುತ್ತದೆ. ಜೊತೆಗೆ ವಸ್ತುವಿನ ಹೊಸತನದಿಂದಾಗಿ ದೇಸಾಯಿ ಅವರ ಮಿಕ್ಕ ಕತೆಗಳಿಗಿಂತ ಇದು ಭಿನ್ನವಾಗಿ ನಿಲ್ಲುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. 'ಹುಚ್ಚ' ಕತೆಯನ್ನು ಕುರಿತಂತೆ ಈ ಕತೆಯು ಪ್ರೀತಿಯಿಂದ ವಂಚಿತಳಾದ ಹೆಣ್ಣಿನ ನೋವು, ಮಾನಸಿಕ ತಾಕಲಾಟ ಮತ್ತು ಗೊಂದಲವನ್ನು ಸಮರ್ಥವಾಗಿ ಚಿತ್ರಿಸುತ್ತದೆ. ಇಲ್ಲಿ ಕತೆಗಾರರು ಪ್ರೀತಿಯಿಂದ ವಂಚಿತಳಾದ ಹೇಮಾಳ ಮಾನಸಿಕ ನೋವು, ತಾಕಲಾಟಗಳನ್ನು ಸಾಂಕೇತಿಕವಾಗಿ ತಂದಿದ್ದಾರೆ. ಈ ರೀತಿಯಾಗಿ ಈ ಕತೆ ಹೊಸ ತಂತ್ರವನ್ನು ಅಳವಡಿಸಿಕೊಂಡು ಸಾಂಕೇತಿಕ ಅರ್ಥವನ್ನು ಧ್ವನಿಸುವುದರಿಂದ ಒಂದು ಉತ್ತಮ ಕತೆಯಾಗಿ ಪರಿಣಮಿಸಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

'ಕೂರ್ಮಾವತಾರ' ಕತೆಯನ್ನು ಕುರಿತಂತೆ ಪತಂಗರಾವ್‌ನ ಜೀವನದ ಬಗೆಗಿನ ಜಿಗುಪ್ಸೆ ಮತ್ತು ಸೋಂಬೇರಿತನಗಳು ಅವನ ಜೀವನವನ್ನು ಹೊಸಕಿ ಹಾಕಿದ್ದನ್ನು ಈ ಕತೆ ಮಾರ್ಮಿಕವಾಗಿ ಚಿತ್ರಿಸುತ್ತದೆ. ಪತಂಗರಾವ್ ತನ್ನ ಜೀವನದಲ್ಲಿ ಏನೆಲ್ಲ ನಡೆದರೂ ಅದಕ್ಕೆ ಸರಿಯಾಗಿ ಪ್ರತಿಕ್ರಿಯೆ ವ್ಯಕ್ತಪಡಿಸದೆ ಎಲ್ಲವನ್ನು ಲಘುವಾಗಿ ಪರಿಗಣಿಸುತ್ತಾನೆ. ಜೀವನದ ಬಗೆಗಿನ ಆತನ ಇಂಥ ಜಿಗುಪ್ಸಾ ಮನೋಭಾವವೇ, ಬದುಕಿನಲ್ಲಿ ಅವನಿಗೆ ನಿಜವಾದ ತಿರುಳು ಸಿಗದಂತೆ ಮಾಡುತ್ತದೆ. ಗಂಡನ ಇಂಥ ಜಿಗುಪ್ಸೆ ಮನೋಭಾವದಿಂದಾಗಿ ಹೆಂಡತಿ ಜೀಜಾಬಾಯಿಯ ಬದುಕು ಅಸ್ತವ್ಯಸ್ತಗೊಳ್ಳುತ್ತದೆ. ಒಟ್ಟಿನಲ್ಲಿ ಈ ಕತೆಯು ಇಳಿ ವಯಸ್ಸಿನವರ ಪತನದ ಅನುಭವಗಳನ್ನು ಸಮರ್ಥವಾಗಿ ಕಟ್ಟಿಕೊಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಮಧ್ಯಸ್ಥರು' ಕತೆಯನ್ನು ಕುರಿತಂತೆ ಈ ಕತೆಯು ಮಧ್ಯಸ್ಥಿಕೆ ಯಾಕೆ ಬೇಕು? ಯಾವ ಸಂದರ್ಭದಲ್ಲಿ ಮಧ್ಯಸ್ಥಿಕೆ ಬೇಕು? ಮಧ್ಯಸ್ಥರು ಅಂದರೆ ಯಾರು? ಎಂಬ ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತದೆ. ಜೊತೆಗೆ ಗಂಡು-ಹೆಣ್ಣಿನ ನಡುವೆ ಸರಿಯಾದ ಹೊಂದಾಣಿಕೆಯಾದರೆ ಯಾರ ಮಧ್ಯಸ್ಥಿಕೆಯೂ ಬೇಕಾಗಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಯಾಕೆಂದರೆ ಅರ್ಜುನ್ ಮತ್ತು ರೋಹಿಣಿಯರ ನಡುವೆ ಯಾರ ಮಧ್ಯಸ್ಥಿಕೆಯೂ ಇಲ್ಲದೆ ಅವರ ಮದುವೆಯಾಗಿ ಸುಖ ಸಂಸಾರ ನಡೆಸುತ್ತಿದ್ದರು. ಆದರೆ ಡಾ. ಗೋವಿಂದ ಮತ್ತು ಡಾ. ನಿರ್ಮಲೆಯರನ್ನು ಒಂದಾಗಿಸಲು ಎಷ್ಟೇ ಪ್ರಯತ್ನಪಟ್ಟರೂ ಅದು ಸಾಧ್ಯವಾಗದೇ ಬೇರೆ ಬೇರೆಯಾಗಿಯೇ ಉಳಿದುಬಿಡುತ್ತಾರೆ. ಒಟ್ಟಿನಲ್ಲಿ ಈ ಕತೆಯು ಗಂಡು-ಹೆಣ್ಣಿನ ನಡುವೆ ಹೊಂದಾಣಿಕೆ ಮುಖ್ಯ ಎಂಬ ಅಂಶವನ್ನು ಒತ್ತಿ ಹೇಳುತ್ತದೆ. ಜೊತೆಗೆ ಗಂಡು ಹೆಣ್ಣುಗಳ ನಡುವೆ ಪ್ರೀತಿ, ಹೊಂದಾಣಿಕೆಗಳಿದ್ದರೆ ಅವರನ್ನು ಕೂಡಿಸಲು ಬೇರೆ ಯಾರ ಮಧ್ಯಸ್ಥಿಕೆಯ ಅವಶ್ಯಕತೆಯೂ ಇಲ್ಲ ಎಂಬುದನ್ನು ಧ್ವನಿಸುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇಸಾಯಿಯವರ ಕಥಾಲೋಕವನ್ನು ಕುರಿತಂತೆ ಹೊಸ ಸಂವೇದನೆಯುಳ್ಳ ಶಾಂತಿನಾಥ ದೇಸಾಯಿ ಅವರು ಆಧುನಿಕ ಜನಜೀವನಕ್ಕೆ ತನ್ನ ಕತೆಗಳಲ್ಲಿ ಹೆಚ್ಚು ಒತ್ತುಕೊಟ್ಟಿದ್ದರೂ ಬದುಕಿನ ಸಮಗ್ರತೆಯನ್ನು ಬಿಟ್ಟುಕೊಟ್ಟಿಲ್ಲ. ವ್ಯಕ್ತಿ ಪ್ರೇಮ-ಕಾಮಗಳಿಂದಲೇ ಪರಿಪೂರ್ಣನಾಗುತ್ತಾನೆಂಬ ಧೋರಣೆಯನ್ನು ಹೊಂದಿರುವ ದೇಸಾಯಿ ಅವರು ಇಲ್ಲಿ ಪ್ರೇಮ-ಕಾಮಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಆ ಮೂಲಕವಾಗಿ ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸಲು ಪ್ರಯತ್ನಿಸಿದ್ದಾರೆ. ಆಧುನಿಕ ಸಂವೇದನೆಗಳನ್ನು ಕಲಾತ್ಮಕವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ದೇಸಾಯಿಯವರು ಹೆಣ್ಣಿನ ಮೂಲಕವೇ ಎಲ್ಲ ಬಗೆಯ ಆಧುನಿಕತೆಯನ್ನು ತರಲು ಇಲ್ಲಿ ಪ್ರಯತ್ನಿಸಿದ್ದಾರೆ. ವಸ್ತುವಿನ ಭಿನ್ನತೆಯಿಂದ, ವಿವಿಧ ಬಗೆಯ ಅನುಭವಗಳಿಂದ, ಹೊಸ ಸಂವೇದನೆಗಳಿಂದ, ನವೀನ ತಂತ್ರ ಶೈಲಿಗಳಿಂದ-ದೇಸಾಯಿ ಅವರ ಕತೆಗಳು ಕನ್ನಡ ಸಾಹಿತ್ಯದಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡಿವೆ ಎಂಬ ಅಭಿಪ್ರಾಯಕ್ಕೆ ಸಂಶೋಧಕರು ಬರುತ್ತಾರೆ.

ಗಂಗಾನಾಯಕ್ ಅವರು ತಮ್ಮ ಈ ಮಹಾಪ್ರಬಂಧದ **ಅಧ್ಯಾಯ-೪ರಲ್ಲಿ** ಶಾಂತಿನಾಥ ದೇಸಾಯಿ ಅವರ ಐದು ಕಾದಂಬರಿಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಈ ಅಧ್ಯಾಯದ ಪ್ರಾರಂಭದಲ್ಲಿ

'ಕಾದಂಬರಿ' ಪದದ ಅರ್ಥವನ್ನು ವಿವರಿಸುತ್ತಾ ಕಾದಂಬರಿಯ ಹಿನ್ನೆಲೆಯನ್ನು ವಿವರಿಸಿದ್ದಾರೆ. ಕಾದಂಬರಿಯ ಬೆಳವಣಿಗೆಯನ್ನು ಕುರಿತಂತೆ ವಿವಿಧ ಬರಹಗಾರರ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಕನ್ನಡದ ಪ್ರಾರಂಭಿಕ ಕಾದಂಬರಿಗಳನ್ನು ಹೆಸರಿಸುವುದರ ಜೊತೆಗೆ ಆಧುನಿಕ ಕನ್ನಡ ಕಾದಂಬರಿ ಕ್ಷೇತ್ರದ ಮೇಲೆ ಇಂಗ್ಲೀಷ್ ಸಾಹಿತ್ಯದ ಪ್ರಭಾವವನ್ನು ಗುರುತಿಸಿದ್ದಾರೆ. ಕನ್ನಡದ ಪ್ರಾರಂಭದ ಕಾದಂಬರಿಗಳಿಂದ ಮೊದಲುಗೊಂಡು ನವ್ಯ ಕಾದಂಬರಿಗಳವರೆಗಿನ ಕಾದಂಬರಿಗಳು ಒಳಗೊಂಡಿರುವ ಅಂಶಗಳನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ.

ದೇಸಾಯಿ ಅವರ ಮೊದಲ 'ಮುಕ್ತಿ' ಕಾದಂಬರಿಯನ್ನು ಕುರಿತಂತೆ ಇದು ಪಟ್ಟಣಗಳಲ್ಲಿನ ಕೃತ್ರಿಮ ಬದುಕು,ಮನುಷ್ಯನ ಅಸಹಾಯಕತೆ, ಒಂಟಿತನ, ದ್ವಂದ್ವ–ಇವೇ ಮುಂತಾದ ಅಂಶಗಳನ್ನೊಳಗೊಂಡಿದೆ. ಈ ಕಾದಂಬರಿಯು ಆಧುನಿಕ ಬದುಕಿನ ವೈವಿಧ್ಯತೆಯನ್ನೂ, ವೈಚಿತ್ರ್ಯವನ್ನೂ ಚಿತ್ರಿಸುತ್ತದೆ. ಈ ಕಾದಂಬರಿಯಲ್ಲಿ ಮಹಾ ಪಟ್ಟಣಗಳ ಚಿತ್ರಣವಿದೆ. ಮಹಾನಗರಗಳಲ್ಲಿ ಬದುಕುತ್ತಿರುವ ಜನರು ಬೇರು ಕಳಕೊಂಡು ಯಾವಾಗಲು ಸ್ವಂತ ಅಸ್ತಿತ್ವದ ಸಲುವಾಗಿ, ಸ್ವಸಂರಕ್ಷಣೆಯ ಸಲುವಾಗಿ ಹೆಣಗುತ್ತಾ, ವೈಚಾರಿಕತೆಯ ಆಸರೆಯಿಂದ ಆತ್ಮಗೌರವವನ್ನು ಕಾಪಾಡಿಕೊಳ್ಳುತ್ತ; ಆರ್ಥಿಕ ಮುಗ್ಗಟ್ಟಿನಲ್ಲಿಯೇ ದೊಡ್ಡದೊಡ್ಡ ಕನಸುಗಳನ್ನು ಕಾಣುತ್ತಾ ಜೀವನವನ್ನು ಸಾಗಿಸುತ್ತಿರುವುದನ್ನು ಕಾಣುತ್ತೇವೆ. ಪಟ್ಟಣಗಳಲ್ಲಿನ ಹೊಸ ನಾಗರೀಕತೆ , ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಜನ ವರ್ತಿಸುತ್ತಿದ್ದ ರೀತಿಯನ್ನು, ಅವರ ನಡವಳಿಕೆಗಳನ್ನು ಮನೋವಿಜ್ಞಾನದ ತಳಹದಿಯ ಮೇಲೆ ದೇಸಾಯಿರವರು ತಮ್ಮ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಪಾಶ್ಚಾತ್ಯ ಸಾಹಿತಿಗಳ ಪ್ರಭಾವಕ್ಕೆ ಒಳಗಾದ ಕನ್ನಡ ನವ್ಯ ಸಾಹಿತಿಗಳು ಕಲ್ಕತ್ತ, ದೆಹಲಿ, ಮುಂಬೈ ಮತ್ತು ಮದರಾಸು ಮುಂತಾದ ಪಟ್ಟಣಗಳನ್ನು ಆರಿಸಿಕೊಂಡು ಅಲ್ಲಿನ ಅನುಭವದ ಆಧಾರದ ಮೇಲೆ ಸಾಹಿತ್ಯ ಸೃಷ್ಟಿಸುತ್ತಾರೆ. ಆಧುನಿಕ ಯುಗದ ಅಸ್ತವ್ಯಸ್ತ ಬದುಕಿನ ವಿಶ್ಲೇಷಣೆ ಮಾಡಲು ನವ್ಯರು ಇಂಥ ನಗರಗಳನ್ನು ಆರಿಸಿಕೊಳ್ಳುತ್ತಾರೆ. ಅಲ್ಲಿನ ಜೀವನ ವ್ಯವಸ್ಥೆಯಲ್ಲಿನ ಬೇಸರಿಕೆ, ದ್ವಂದ್ವ ಒಂಟಿತನಗಳನ್ನು ತಮ್ಮ ಕೃತಿಗಳ ಮೂಲಕ ಪ್ರಕಟಿಸಿದರು. ಇಂಥ ವಾತಾವರಣದಲ್ಲಿ ಬೆಳೆಯುತ್ತಿದ್ದ ದೇಸಾಯಿ ಅವರು ಇದರ ಪ್ರಭಾವಕ್ಕೆ ಒಳಗಾಗಿ ಈ ಅಂಶಗಳನ್ನು 'ಮುಕ್ತಿ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿ ಬರುವ ಶ್ರೀಕಾಂತ ಮತ್ತು ಗೌರೀಶ ಇಬ್ಬರದ್ದೂ ವಿಭಿನ್ನ ರೀತಿಯ ಮನೋಭಾವವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಕಾದಂಬರಿಯ ನಿರೂಪಕನೂ ಆದ ಗೌರೀಶನು ತನ್ನ ಮತ್ತು ತನ್ನ ಮನಸ್ಸನ್ನು, ಬೇರೆಯವರನ್ನು ಮತ್ತು ಬೇರೆಯವರ ಮನಸ್ಸುಗಳನ್ನು ಅವನೇ ಚಿತ್ರಿಸಿರುವುದರಿಂದ ಕಾದಂಬರಿಗೆ ಬಹು ದೊಡ್ಡಪೆಟ್ಟು ಬಿದ್ದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಕಾದಂಬರಿಯು ಹದಿಹರೆಯದವರ ಸಮಸ್ಯೆಗಳನ್ನು ಚಿತ್ರಿಸುವುದರಿಂದ ಇಲ್ಲಿ ವೈಚಾರಿಕ ಅಂಶಗಳು ಹೆಚ್ಚಾಗಿವೆ ಎಂಬ ಅನಿಸಿಕೆಯನ್ನು ಲೇಖಕರು ವ್ಯಕ್ತಪಡಿಸಿದ್ದಾರೆ. ಕಾದಂಬರಿಯ ತಂತ್ರವನ್ನು ಕುರಿತು 'ಮುಕ್ತಿ' ಕಾದಂಬರಿ ಪ್ರಜ್ಞಾಪ್ರವಾಹ ತಂತ್ರದ ಹಿನ್ನೆಲೆಯಲ್ಲಿ ರಚನೆಗೊಂಡಿದೆ ಎಂದು ಹೇಳುತ್ತಾ 'ಪ್ರಜ್ಞಾ ಪ್ರವಾಹ ತಂತ್ರ' ವೆಂದರೇನೆಂದು ವಿವರಿಸಿದ್ದಾರೆ. ದೇಸಾಯಿಯವರು

ಬಳಸಿರುವ ಎಲ್ಲಾ ಅಂಶಗಳು ಈ ಕಾದಂಬರಿಯಲ್ಲಿ ಸಂದರ್ಭಕ್ಕೆ ಸೂಕ್ತವೆನಿಸುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

'ವಿಕ್ಷೇಪ' ಕಾದಂಬರಿಯಲ್ಲಿ ಆಧುನಿಕ ಬದುಕಿನ, ಹೊಸ ನಾಗರೀಕತೆಯ ಒತ್ತಡದಲ್ಲಿ ಸಿಲುಕಿ ಒದ್ದಾಡುವ ವ್ಯಕ್ತಿಯ ಮನಃಶ್ಚಿತ್ರಣವೇ ಈ ಕಾದಂಬರಿಯ ವಸ್ತುವಾಗಿದೆ. 'ವಿಕ್ಷೇಪ' ಕಾದಂಬರಿಯು ರಾಹುಲನ ವಿಕ್ಷಿಪ್ತ ವ್ಯಕ್ತಿತ್ವವನ್ನು, ಮಾಧವಿಯ ಪರಾವಲಂಬಿ ಬದುಕನ್ನು, ಫಾದರ್ ಡಿಮೆಲೊ, ಪ್ರೊ.ವಿಲಿಯಮ್ಸ್‌ರ ವೈಚಾರಿಕತೆಯನ್ನು ಪ್ರಕಟಪಡಿಸುತ್ತದೆ. ರಾಹುಲ ಹೊಸ ನಾಗರಿಕತೆಯ ಸೆಳೆತದಿಂದ ದಿಕ್ಕು ತಪ್ಪುತ್ತಿರುವುದನ್ನು, ಬದುಕಿನ ಆಶೆ ಕಳೆದುಕೊಂಡಿರುವುದನ್ನು ಇಲ್ಲಿ ಕಾಣುತ್ತೇವೆ. ಹೀಗೆ 'ವಿಕ್ಷೇಪ' ಕಾದಂಬರಿಯು ಆಧುನಿಕ ಯುವ ಪೀಳಿಗೆಯ ಜೀವನ ವಿಧಾನವನ್ನು, ಅವರ ನಡವಳಿಕೆಯನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. ವಿಕ್ಷೇಪ ಕಾದಂಬರಿ ಬಾಂಬೆ ಜೀವನದೊಂದಿಗೆ ಬೆಳಗಾವಿ, ಕಾರವಾರ, ಗೋವಾಗಳಲ್ಲಿನ ಜೀವನದ ಅನುಭವಗಳನ್ನು ಆಧರಿಸಿ ರಚನೆಯಾಗಿದೆ. ನಗರೀಕರಣ ತರುವ Rootlessness ಅಥವಾ ಅತಂತ್ರತೆಯನ್ನು ಶೋಧಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ. ಈ ಕಾದಂಬರಿಯು ಇಂದಿನ ತರುಣ ಮನಸ್ಸಿನ ಅನಿಶ್ಚಿತತೆಗೆ, ಅಸ್ವಸ್ಥತೆಗೆ, ದ್ವಂದ್ವಕ್ಕೆ ಕನ್ನಡಿ ಹಿಡಿಯುತ್ತದೆ. 'ವಿಕ್ಷೇಪ' ಕಾದಂಬರಿಯು ನಗರ ಜೀವನದ ಜಂಜಾಟದಿಂದ ಬೇಸತ್ತು, ಅದಕ್ಕೆ ಪರಿಹಾರ ಸಿಗದೆ, ಮಾನಸಿಕವಾಗಿ ತೊಳಲಾಡುವ ಯುವಕ-ಯುವತಿಯರ ಮನಃಶ್ಚಿತ್ರಣವನ್ನೊಳಗೊಂಡಿದೆ. ಮಾನವೀಯ ಸಂಬಂಧದ ವಾತಾವರಣದ ನಿರ್ಮಾಣಕ್ಕೆ ಇಲ್ಲಿ ಮಹತ್ವ ಕೊಡಲಾಗಿದೆ. ಮಾನವೀಯ ಸಂಬಂಧಗಳು ಮತ್ತು ಆ ಕುರಿತ ಘಟನೆಗಳು ಇಲ್ಲಿ ಮುಖ್ಯವಾಗುತ್ತವೆ. ಈ ಅಂಶಗಳ ಆಧಾರದ ಮೇಲೆ ನಾಯಕನ ಮಾನಸಿಕ ಸ್ಥಿತಿಯನ್ನು ಇಲ್ಲಿ ಚಿತ್ರಣ ಮಾಡಲಾಗಿದೆ ಎಂದು ಗುರುತಿಸಿದ್ದಾರೆ.

'ಸೃಷ್ಟಿ' ಕಾದಂಬರಿಯ ವಸ್ತುವಿನಲ್ಲಿ ಹೊಸತನವನ್ನು ತರಲು ಪ್ರಯತ್ನಿಸಿದಂತೆ ಕಾದಂಬರಿಯ ರಚನಾ ತಂತ್ರದಲ್ಲಿ ಕೂಡ ಬದಲಾವಣೆ ತರಲು ಇಲ್ಲಿ ಯತ್ನಿಸಿದ್ದಾರೆ. ಈ ಹಿಂದಿನ ಅವರ ನೇರವಾದ ಬರವಣಿಗೆಗಿಂತ ಭಿನ್ನವಾದ ಹಾಗೂ ವಿಶಿಷ್ಟವಾದ ಸೃಜನಶೀಲತೆಯ ತಂತ್ರವನ್ನು ಸೃಷ್ಟಿಯಲ್ಲಿ ಕಾಣುತ್ತೇವೆ. ಕಲ್ಪಿತ ಲೇಖಕ ಹಾಗೂ ಮೂಲ ಲೇಖಕ ಇವರ ಮಧ್ಯೆ ಇಲ್ಲಿ ಸಂಘರ್ಷ ಉಂಟಾಗುತ್ತದೆ. ಇಂಥ ವಿಶ್ವಾಸಪೂರ್ವಕವಾದ ಘರ್ಷಣೆಯು 'ಸೃಷ್ಟಿ' ಕಾದಂಬರಿಯುದ್ದಕ್ಕೂ ನಡೆಯುವುದನ್ನು ಕಾಣುತ್ತೇವೆ. ಮೂಲ ಲೇಖಕ ಪ್ರತಿಯೊಂದು ಘಟನೆ, ಪಾತ್ರ, ಸನ್ನಿವೇಶಗಳ ಚಿತ್ರಣದ ಸಂದರ್ಭ ಬಂದಾಗಲೆಲ್ಲ ಯಾವುದನ್ನು ಸೇರಿಸಬೇಕು, ಯಾವುದನ್ನು ಬಿಡಬೇಕು ಎಂದು ಕಲ್ಪಿತ ಲೇಖಕನಲ್ಲಿ ಅಭಿಪ್ರಾಯ ಕೇಳುತ್ತಾನೆ. ಈ ರೀತಿಯಾಗಿ ಹೊಸ ತಂತ್ರದಲ್ಲಿ ರಚನೆಗೊಂಡಿರುವ 'ಸೃಷ್ಟಿ' ಕಾದಂಬರಿಯು ಯಶಸ್ವಿಯಾಗಿದೆ ಎಂದು ವಿಶ್ಲೇಷಿಸಿದ್ದಾರೆ.

ವಸ್ತು ಮತ್ತು ತಂತ್ರದಲ್ಲಿ ವಿಶಿಷ್ಟತೆಯನ್ನು ಹೊಂದಿರುವ 'ಸೃಷ್ಟಿ' ಕಾದಂಬರಿಯು ನವ್ಯ ಸಾಹಿತ್ಯದ ಉತ್ತಮ ಕೊಡುಗೆಯಾಗಿದೆ. 'ಸೃಷ್ಟಿ' ಕಾದಂಬರಿಯಲ್ಲಿ ಸಸ್ಯ, ಪ್ರಾಣಿ ಮತ್ತು ಮನುಷ್ಯ – ಈ ಮೂರರ ಸೃಷ್ಟಿಯ ಸಾರ್ವತ್ರಿಕ ಸತ್ಯವನ್ನು ಸಾಂಕೇತಿಕವಾಗಿ ನಿರೂಪಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಸಂಬಂಧ' ಕಾದಂಬರಿಯಲ್ಲಿ ಮನುಷ್ಯ ಸಂಬಂಧಗಳ ವಿಶ್ಲೇಷಣೆಯ ಚಿತ್ರಣವನ್ನು ಕಾಣುತ್ತೇವೆ. ಮಾನವೀಯ ಒಡನಾಟದ ಸಂಬಂಧಗಳು ಇಲ್ಲಿ ಮುಖ್ಯ ಮನುಷ್ಯ ಮನುಷ್ಯರ ನಡುವಿನ ಒಡನಾಟ ಹೇಗೆ ಆರಂಭವಾಗುತ್ತದೆ ಮತ್ತು ಗಟ್ಟಿಗೊಳ್ಳುತ್ತದೆಂಬ ಅಂಶಕ್ಕೆ ಒತ್ತು ಕೊಡಲಾಗಿದೆ. ಜೊತೆಗೆ ಗಂಡು–ಹೆಣ್ಣಿನ ನಡುವಿನ ಸಂಬಂಧದ ಬೇರೆ ಬೇರೆ ಆಯಾಮಗಳೂ ಇಲ್ಲಿ ಮುಖ್ಯವಾಗುತ್ತವೆ. ಅಲ್ಲದೆ ಸ್ತ್ರೀ –ಪುರುಷರ ನಡುವಿನ ಸೃಜನಶೀಲತೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯಾಗಿದೆ. ಈ ಸೃಜನಶೀಲತೆಗೆ ಸ್ವಾತಂತ್ರ್ಯ ಬೇಕು. ಇಂಥ ಸ್ವಾತಂತ್ರ್ಯ ಪಡೆಯುವ ಪ್ರಯತ್ನ ಇಲ್ಲಿ ಇದ್ದೇ ಇದೆ. ಆದ್ದರಿಂದಲೇ ಶೀತಲಕುಮಾರ ಸ್ವಾತಂತ್ರ್ಯ ದೊರಕುವ ಕಡೆಗೆ ಹೋಗುತ್ತಾನೆ. ಆಗ ಅವನಲ್ಲಿ ಸಾರ್ಥಕ್ಯದ ಭಾವನೆ ಮೂಡುತ್ತದೆ.

ಈ ಕಾದಂಬರಿಯಲ್ಲಿ ಬರುವ ಲೈಂಗಿಕತೆಯು ಹೆಣ್ಣು–ಗಂಡಿನ ನಡುವಿನ ಎಲ್ಲಾ ಸಂಬಂಧಗಳನ್ನು ಪರೀಕ್ಷಿಸಲು ಪೂರಕವಾಗಿ ನಿಂತಿದೆ. ಇಲ್ಲಿ ಲೈಂಗಿಕ ಸಂಬಂಧದ ಮೂಲಕವೇ ಮನುಷ್ಯ ಸಂಬಂಧಗಳನ್ನು ಪರಿಶೀಲಿಸುವ ಪ್ರಯತ್ನವಿದೆ. ಇದೊಂದು ವಾಸ್ತವವಾದಿ ನೆಲೆಯ ಕಾದಂಬರಿಯಾಗಿರುವುದರಿಂದ ಬದುಕಿನ ವಾಸ್ತವಿಕತೆಗೆ ಇಲ್ಲಿ ಹೆಚ್ಚು ಒತ್ತು ಕೊಡಲಾಗಿದೆ ಎಂದು ಅಭಿಪ್ರಾಯಪಡುತ್ತಾರೆ.

'ಬೀಜ' ಕಾದಂಬರಿಯಲ್ಲಿ ಕನ್ನಡ ಸಾಹಿತ್ಯದ ಬದಲಾಗುತ್ತಿರುವ ಕಾಳಜಿಗಳ ಹಿನ್ನೆಲೆಯಲ್ಲಿ ಇದೊಂದು ಔಚಿತ್ಯಪೂರ್ಣವಾದ ಕೃತಿ ಎನಿಸುತ್ತದೆ. ಇಲ್ಲಿ ನಗರ ಜೀವನದ ಜೊತೆಗೆ ಹಳ್ಳಿಯ ಬದುಕಿನ ಸಮಗ್ರ ಚಿತ್ರಣವನ್ನು ವಿಶ್ಲೇಷಣೆ ಮಾಡಿದ್ದಾರೆ. ಆದ್ದರಿಂದ ಇಲ್ಲಿ ವೈಯಕ್ತಿಕ ಅನಿಸಿಕೆಗಿಂತ ಸಾಮಾಜಿಕ ಬದ್ಧತೆ ಮುಖ್ಯವಾಗುತ್ತದೆ. ಈ ಕಾದಂಬರಿಯ ನಾಯಕನಾದ ಶ್ರೇಯಾಂಸ ನಗರ ಜೀವನದ ಜಂಜಾಟದಿಂದ ಬಿಡಿಸಿಕೊಂಡು ತನ್ನ ಹುಟ್ಟೂರಾದ, ಮೂಲ ನೆಲೆಯಾದ ಕೃಷ್ಣಾಪುರಕ್ಕೆ ಬಂದು ಅಲ್ಲಿನ ಜೀವನದಲ್ಲಿ ಭಾಗಿಯಾಗಿ ಹಳ್ಳಿ ಬದುಕನ್ನು ಸುಧಾರಿಸುತ್ತಾನೆ; ಹಳ್ಳಿಯ ಸಮಗ್ರ ಬೆಳವಣಿಗೆಗೆ ಶಕ್ತಿಮೀರಿ ದುಡಿಯುತ್ತಾನೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿನಲ್ಲಿ 'ಬೀಜ' ಕಾದಂಬರಿಯು ದೇಸಾಯಿ ಅವರ ಹಿಂದಿನ ವೈಯಕ್ತಿಕ, ಅಸಂಗತ ಅಂಶಗಳಿಗಿಂತ ಭಿನ್ನವಾದ ಸಾಮಾಜಿಕ ಪರಿವರ್ತನೆಯ ಸಂದೇಶವನ್ನು ಸಾರುವ ಉತ್ತಮ ಕಾದಂಬರಿಯಾಗಿದೆ. ಇಲ್ಲಿ ಹಳ್ಳಿ ಮತ್ತು ನಗರಗಳೆರಡರ ಜೀವನ ಚಿತ್ರಣ ಬಂದಿರುವುದರಿಂದ ಕಾದಂಬರಿ ಸಮಗ್ರ ಬದುಕಿನ ಚಿತ್ರಣವನ್ನು ಒಳಗೊಂಡಿದೆ ಎನ್ನಬೇಕು ಎಂದು ವಿಶ್ಲೇಷಿಸಿದ್ದಾರೆ. ಒಟ್ಟಾರೆಯಾಗಿ ದೇಸಾಯಿ ಅವರು ವಸ್ತು, ತಂತ್ರ ಮತ್ತು ಭಾಷೆಯಲ್ಲಿ ಹೊಸತನವನ್ನು, ಹೊಸ ಆಯಾಮವನ್ನು ತಂದು ವಿಶಿಷ್ಟಪೂರ್ಣವಾದ, ಮಹತ್ವಪೂರ್ಣವಾದ, ಕಲಾತ್ಮಕ ಮೆರುಗಿನಿಂದ ಕೂಡಿದ ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಧ್ಯಾಯ ೫ರಲ್ಲಿ ಶಾಂತಿನಾಥ ದೇಸಾಯಿಯವರ ನಾಟಕ ಮತ್ತು ವಿಮರ್ಶೆಯನ್ನು ಕುರಿತು ವಿಶ್ಲೇಷಿಸಿದ್ದಾರೆ.

ದೇಸಾಯಿಯವರ ನಾಟಕಗಳನ್ನು ಕುರಿತಂತೆ ಶಾಂತಿನಾಥ ದೇಸಾಯಿ ಅವರು ನಾಟಕ ಕ್ಷೇತ್ರದಲ್ಲಿ ಅಲ್ಪಮಟ್ಟಿನ ಸೇವೆ ಸಲ್ಲಿಸಿದ್ದಾರೆ. ದೇಸಾಯಿ ಅವರು ಬರೆದ ಮತ್ತು ಅಧಿಕೃತವಾಗಿ

ಪ್ರಕಟಗೊಂಡ ನಾಟಕಗಳು ಎರಡು ಮಾತ್ರ. ಒಂದು 'ಹೆಲೆನ್', ಇನ್ನೊಂದು 'ಕುಸಿದ ಕನಸು.' 'ಹೆಲೆನ್' ಗ್ರೀಕ್ ಪುರಾಣದ ಪ್ರಸಿದ್ಧ ವಸ್ತುವನ್ನು ಆಧರಿಸಿದ ಪೌರಾಣಿಕ ನಾಟಕವಾದರೆ, 'ಕುಸಿದ ಕನಸು' ಸಾಮಾಜಿಕ ವಸ್ತುವನ್ನುಳ್ಳ ಸಾಮಾಜಿಕ ನಾಟಕ. ಈ ಎರಡು ನಾಟಕಗಳು ರೇಡಿಯೋ ನಾಟಕಗಳಾಗಿದ್ದು ಗಾತ್ರದಲ್ಲಿ ಚಿಕ್ಕದಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಹೆಲೆನ್' ನಾಟಕವು ಪೌರಾಣಿಕ ವಸ್ತುವನ್ನು ಒಳಗೊಂಡಿರುವ ಈ ನಾಟಕವು ಮೂಲ ವಸ್ತುವಿನ ಪ್ರಮುಖ ಅಂಶಗಳನ್ನು ಅತ್ಯಂತ ಹಿತ-ಮಿತವಾಗಿ, ಧ್ವನಿಪೂರ್ಣವಾಗಿ ಚಿತ್ರಿಸುತ್ತದೆ. ದೇಸಾಯಿ ಅವರ ನಾಟಕ ರಚನಾ ಸಾಮರ್ಥ್ಯವನ್ನು ಇದು ಎತ್ತಿ ತೋರಿಸುತ್ತದೆ. ಪಾತ್ರಗಳ ಮನಸ್ಸನ್ನು ಒಳಹೊಕ್ಕು ಅವುಗಳ ಒಳತೋಟಿಯನ್ನು ಅತ್ಯಂತ ಸಮರ್ಥವಾಗಿ ಬಿಡಿಸಿಟ್ಟಿದ್ದಾರೆ. ಆಯಾ ಪಾತ್ರಗಳ, ಆಯಾ ಸಂದರ್ಭಗಳ ಔಚಿತ್ಯವರಿತು ಭಾಷೆಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಆ ಮೂಲಕವಾಗಿ ನಾಟಕ ಕಲಾತ್ಮಕವಾಗಿ ಮೂಡಿ ಬರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ವಿಶ್ಲೇಷಿಸಿದ್ದಾರೆ.

'ಕುಸಿದ ಕನಸು' ನಾಟಕದ ವಸ್ತು ದೇಸಾಯಿ ಅವರದೇ ಕತೆಯಾದ 'ಗಂಡ ಸತ್ತ ಮೇಲೆ' ಕತೆಯ ರೇಡಿಯೋ ರೂಪಕವಾಗಿದೆ. ಸಂಶೋಧಕರು ಇದು ಸಾಮಾಜಿಕ ನಾಟಕವಾಗಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸುತ್ತಾ ಕತೆಯ ಸಂಪೂರ್ಣ ಸಾರಾಂಶವನ್ನು ವಿಶ್ಲೇಷಿಸಿದ್ದಾರೆ. ಅಂತಿಮವಾಗಿ 'ಗಂಡ ಸತ್ತ ಮೇಲೆ' ಕತೆಯಲ್ಲಿ ಶಶಿಕಲೆ ಆತ್ಮಹತ್ಯೆಗೆ ಪ್ರಯತ್ನಿಸದೆ, ಅಲ್ಲಿ ಅವಳಿಗೆ ಕ್ಷಯರೋಗ ಬಂದು ಅವಳ ಬದುಕು ಕ್ಷಯಿಸಿ ಹೋಗುತ್ತದೆ. ಮಿಕ್ಕಂತೆ ಕತೆ ಮತ್ತು ನಾಟಕಗಳೆರಡರಲ್ಲೂ ವಸ್ತು ಒಂದೇ ರೀತಿಯದಾಗಿದೆ. ನಾಟಕ ಫ್ಲಾಶ್‌ಬ್ಯಾಕ್ ತಂತ್ರದಿಂದ ಕೂಡಿದ್ದು, ಘಟನೆಗಳು ಮತ್ತು ಸಂದರ್ಭಗಳು ಅತ್ಯಂತ ಕಲಾತ್ಮಕವಾಗಿ ಹಾಗೂ ಔಚಿತ್ಯಪೂರ್ಣವಾಗಿ ಜೋಡಿಸಲ್ಪಟ್ಟಿವೆ. ನಾಟಕ ಎಲ್ಲೂ ಬೇಸರಕ್ಕೆ ಅವಕಾಶವಿಲ್ಲದೆ ನಿರಾಯಾಸವಾಗಿ ಓದಿಸಿಕೊಂಡು ಹೋಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ದೇಸಾಯಿಯವರ ವಿಮರ್ಶಾ ಕೃತಿಗಳನ್ನು ಕುರಿತಂತೆ ದೇಸಾಯಿ ಅವರ ವಿಮರ್ಶೆಯ ಒಲವು ಹೆಚ್ಚು ನವ್ಯ ಸಾಹಿತ್ಯದ ಕಡೆಗೆ ಇದ್ದರೂ ಕನ್ನಡ ಕಾದಂಬರಿಗಳನ್ನು ಕುರಿತು ಸಮೀಕ್ಷೆ ಮಾಡುವಾಗ ನವೋದಯದಿಂದ ಹಿಡಿದು ದಲಿತ-ಬಂಡಾಯ ಸಾಹಿತ್ಯದವರೆಗಿನ ಎಲ್ಲ ಪಂಥಗಳ, ಕಾದಂಬರಿಗಳ ದೃಷ್ಟಿ ಧೋರಣೆಗಳನ್ನು ಹೊಂದಿದ್ದು, 'ಸಾಹಿತ್ಯ ಮತ್ತು ಭಾಷೆ' ಎಂಬ ಕೃತಿಯಲ್ಲಿ ಸಾಹಿತ್ಯ, ಭಾಷೆಯು ಮೂಲಕ ಸೃಷ್ಟಿಯಾಗುವ ವಿಚಾರವನ್ನು ಗುರುತಿಸಿದ್ದಾರೆಂದು ಅಭಿಪ್ರಾಯಪಡುತ್ತಾರೆ.

ವಿಮರ್ಶೆಯಲ್ಲಿ ರಾಜಕಾರಣ, ಪಕ್ಷಪಾತ ಬುದ್ಧಿ, ಬೈದಾಟ, ಸ್ಲೋಗನ್ ಇವು ಇರಬಾರದೆಂದು ಬಯಸಿ, ದೇಸಾಯಿ ಅವರು ನಿಷ್ಪಕ್ಷಪಾತವಾಗಿ, ವಸ್ತುನಿಷ್ಠವಾಗಿ, ಜವಾಬ್ದಾರಿಯುತವಾಗಿ ಕೃತಿಗಳನ್ನು ವಿಮರ್ಶೆ ಮಾಡುವುದರ ಮೂಲಕ ಆ ಕ್ಷೇತ್ರದಲ್ಲಿ ಆರೋಗ್ಯಕರವಾದ ರೀತಿಯಲ್ಲಿ ಬೆಲೆಯುಳ್ಳ ಸೇವೆ ಸಲ್ಲಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

೩.೧೩ ಶಾಂತಿನಾಥ ದೇಸಾಯಿವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ(೨೦೧೨)
– ರೇಖಾ ಈ.ಜಿ.

ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ (೨೦೧೨) ಕೃತಿಯು ಶಾಂತಿನಾಥ ದೇಸಾಯಿ ಅವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ ವಿಷಯವಾಗಿ ರೇಖಾ. ಈ.ಜಿ. ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧವಾಗಿದೆ ಮತ್ತು ಪ್ರಕಟವಾಗಿದೆ. ಈ ಕೃತಿಯಲ್ಲಿ ರೇಖಾ. ಈ.ಜಿ. ಯವರು ಒಂಬತ್ತು ಅಧ್ಯಾಯಗಳಲ್ಲಿ ಈ ಅಧ್ಯಯನವನ್ನು ರೂಪಿಸಿದ್ದಾರೆ. ಇದರಲ್ಲಿ ದೇಸಾಯಿ ಅವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ.

ನವ್ಯ ಸಾಹಿತ್ಯದ ಕಾಲಘಟ್ಟವನ್ನು ಗುರುತಿಸುವುದರೊಂದಿಗೆ ಪ್ರಮುಖ ನವ್ಯ ಸಾಹಿತಿಗಳನ್ನು ಹೆಸರಿಸಿದ್ದಾರೆ. ದೇಸಾಯಿಯವರನ್ನು ಹೆಸರಿಸುತ್ತಾ 'ದೇಸಾಯಿಯವರು ಕನ್ನಡ ಸಾಹಿತ್ಯಕ್ಕೆ ತಮ್ಮ ಕಥನ ಸಾಹಿತ್ಯದಿಂದ ವಿಶಿಷ್ಠ ಕೊಡುಗೆ ನೀಡಿದ್ದಾರೆ' ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ದೇಸಾಯಿ ಅವರು ಚಿತ್ರಿಸಿದ ಮಹಿಳೆಯರ ಆಧುನಿಕ ಪ್ರಜ್ಞೆಯ ಸ್ವರೂಪವನ್ನು ಶೋಧಿಸುವುದು ತಮ್ಮ ಈ ಅಧ್ಯಯನದ ಮುಖ್ಯ ಗುರಿಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ತಮ್ಮ ಅಧ್ಯಯನದ ಮಹತ್ವವನ್ನು ತಿಳಿಸುವುದಕ್ಕೆ ಪೂರಕವಾಗಿ ನವ್ಯ ಸಾಹಿತ್ಯ ಚಳುವಳಿ ಹೆಣ್ಣನ್ನು ಅರಿಯುವುದರಲ್ಲಿ, ಅವಳ ಮನೋಭಾವವನ್ನು ಬಿಂಬಿಸುವುದರಲ್ಲಿ, ಅವಳು ಕೂಡ ಗಂಡಿನಂತೆ ಸ್ವತಂತ್ರ ವ್ಯಕ್ತಿತ್ವ, ಪ್ರತಿಭೆಯುಳ್ಳವಳು ಎಂದು ತಿಳಿಯುವುದರಲ್ಲಿ ವಿಫಲವಾಯ್ತು. ಹೆಣ್ಣಿನ ಬಗ್ಗೆ ನವೋದಯದವರಿಗೆ ಇದ್ದ ಉದಾರವಾದ ದೃಷ್ಟಿಕೋನ ಸಹ ಇರದಿದ್ದ ಈ ಸಾಹಿತ್ಯ ಚಳುವಳಿ, ವಿಚಾರದಲ್ಲೂ ನವ್ಯವಾಗಿರಲಿಲ್ಲ. ಮುಖ್ಯವಾಗಿ ಅಲ್ಲಿ ವರ್ಣಿತವಾಗಿರುವುದು ಗಂಡಿನ ಜಗತ್ತು. ವ್ಯಕ್ತವಾಗಿರುವುದು ಗಂಡಿನ ಮನೋಧರ್ಮ. ಪುರುಷ ಕೇಂದ್ರಿತ ನೆಲೆಯಿಂದ ಸ್ತ್ರೀಯರನ್ನು ಕಾಣಲು ಮತ್ತು ಕಾಣಿಸಲು ಹೊರಟಾಗ ನವ್ಯ ಸಾಹಿತಿಗಳು ತಲುಪುವ ನೆಲೆಗಳಿಗೂ, ಸ್ತ್ರೀಯರನ್ನು ಸ್ತ್ರೀ ಕೇಂದ್ರಿತ ದೃಷ್ಟಿಯಿಂದಲೇ ಕಂಡರಿಸಲು ಹೊರಟಾಗ ತಲುಪುವ ನೆಲೆಗಳಿಗೂ ಮುಖ್ಯ ವ್ಯತ್ಯಾಸವಿದೆ. ಅನಂತಮೂರ್ತಿ, ಯಶವಂತ ಚಿತ್ತಾಲ, ಲಂಕೇಶ್ ಹಾಗೂ ಶ್ರೀ ಕೃಷ್ಣ ಆಲನಹಳ್ಳಿ ಮೊದಲಾದವರು ಹೆಣ್ಣನ್ನು ಪುರುಷನಷ್ಟೇ ಸ್ವತಂತ್ರ ಅಸ್ತಿತ್ವವುಳ್ಳವಳು ಎಂಬಂತೆ ರೂಪಿಸಿದ್ದು ಅಪರೂಪ. ಇವರು ಜೀವನ ಸತ್ಯವನ್ನು ಅರಿಯಲು ಮುಖ್ಯ ಮಾನದಂಡವನ್ನಾಗಿ ಬಳಸಿದ್ದು ಲೈಂಗಿಕತೆಯನ್ನು. ಆದ್ದರಿಂದಲೇ ಬಹುಪಾಲು ನವ್ಯ ಸಾಹಿತ್ಯದಲ್ಲಿ ಅದರ ಉತ್ಕೃಷ್ಟ ಭಾಗಗಳಲ್ಲಿ ಕೂಡಾ ಗಂಡಿನ ಅರಿವನ್ನು ವಿಸ್ತರಿಸುವ ಅಥವಾ ಅವನನ್ನು ಪರಿಪೂರ್ಣನನ್ನಾಗಿಸುವ ಸಾಧನವಾಗಿ ಮಾತ್ರ ಹೆಣ್ಣು ಬಳಕೆಯಾಗುತ್ತಾಳೆ. ಆದ್ದರಿಂದಲೇ ಇಡೀ ನವ್ಯ ಸಾಹಿತ್ಯದಲ್ಲಿ ಲೈಂಗಿಕ ಉಪಭೋಗಕ್ಕೆ ನೆರವಾಗುವ ಸ್ತ್ರೀ ಎಂಬ ಸಾಮಗ್ರಿಯನ್ನು ಬಿಟ್ಟರೆ, ಗಂಡಿಗಿರುವಷ್ಟೆ ಸಮಾನವಾದ ಅಧಿಕಾರ ಇರುವ ಹೆಣ್ಣನ್ನು ಕಾಣುವುದು ಅಪರೂಪ. ಆದರೆ ಶಾಂತಿನಾಥ ದೇಸಾಯಿಯವರ ಸಾಹಿತ್ಯ ಇದಕ್ಕೆ ಅಪವಾದವಾಗಿದೆ.

ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಹೆಣ್ಣು ಗಂಡಿನ ಕಾಮತೃಷೆಯನ್ನು ತಣಿಸುವ ಸಾಧನವಾಗಿ ಬರುವುದಿಲ್ಲ. ಬದಲಾಗಿ ಗಂಡಿನಷ್ಟೇ ಸ್ವತಂತ್ರ ಅಸ್ತಿತ್ವವುಳ್ಳ, ಆಧುನಿಕ ಪ್ರಜ್ಞೆಯುಳ್ಳ

ಪಾತ್ರವಾಗಿ ಬರುತ್ತಾಳೆ. ಹೆಣ್ಣು ಸದಾ ಅವರ ಸಾಹಿತ್ಯದ ಕೇಂದ್ರವಾಗಿದ್ದಾಳೆ. ಅವರು ವ್ಯಕ್ತಿತ್ವವನ್ನು ಮಂಡಿಸಲು ತಮ್ಮ ಸಾಹಿತ್ಯದಲ್ಲಿ ಒದಗಿಸಿರುವ ಅವಕಾಶ ಬಹಳ ದೊಡ್ಡದು. ಗಂಡು-ಹೆಣ್ಣಿನ ಸಂಬಂಧಗಳನ್ನು ಚಿತ್ರಿಸುವಾಗ ಅವರು ಎರಡೂ ಕಡೆಯಿಂದ ಸಮಸ್ಯೆಯನ್ನು ನೋಡಲು ಪ್ರಯತ್ನಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವರ ಸ್ತ್ರೀ ಪಾತ್ರಗಳೇ ಹೆಚ್ಚು ಆಕ್ರಮಣಕಾರಿಯಾಗಿ ಕಾಣಿಸಿಕೊಳ್ಳುತ್ತವೆ. ದೇಸಾಯಿಯವರು ತಮ್ಮ ಸಾಹಿತ್ಯದಲ್ಲಿ ಬರುವ ಮಹಿಳೆಯರನ್ನು ಸಾಂಪ್ರದಾಯಿಕವಾಗಿಯೂ ಚಿತ್ರಿಸದೆ ಭೋಗದ ವಸ್ತುವನ್ನಾಗಿಯೂ ನೋಡದೆ, ಜವಾಬ್ದಾರಿ ಇರುವ ಒಂದು ಮನಸ್ಸಿನ ಪ್ರಜ್ಞೆಯುಳ್ಳವರನ್ನಾಗಿ ಚಿತ್ರಿಸುತ್ತಾರೆ. ಅವರನ್ನು ನವ್ಯ ಸಂದರ್ಭದ ಮಹತ್ವದ ಲೇಖಕರೆಂದು ಪರಿಗಣಿಸಲು ಕಾರಣ ಅವರ ಸ್ತ್ರೀ ಸಂವೇದನೆ. ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಆಧುನಿಕತೆಯ ಶೋಧವನ್ನು ಅತ್ಯಂತ ಜವಾಬ್ದಾರಿಯುತವಾಗಿ ಕೈಗೊಂಡ ಲೇಖಕರಿವರು. ಕಾಮಕೇಂದ್ರದ ನೆಲೆಯಲ್ಲಿ ವೈಯಕ್ತಿಕ ಅನುಭವದ ಶೋಧಕ್ಕೆ ಮುನ್ನುಗ್ಗುವ ಭರದಲ್ಲಿ ಅನೇಕ ನವ್ಯ ಲೇಖಕರು ಹೆಣ್ಣನ್ನು ಭೋಗ ವಸ್ತುವನ್ನಾಗಿ ಕಂಡದ್ದುಂಟು. ಆದರೆ ದೇಸಾಯಿಯವರ ಕಥನಗಳು ಈ ಮಿತಿಯಿಂದ ದೂರವಾಗಿವೆ. ಈ ದೂರವಾಗುವಿಕೆಯೇ ಅವರನ್ನು ಸಮಕಾಲೀನ ಲೇಖಕರಿಗಿಂತ ಭಿನ್ನವಾಗಿಸುವಂತೆ ಮಾಡಿದೆ. ಅದಕ್ಕೋಸ್ಕರ ಈ ಅಧ್ಯಯನ ಮಾಡುವ ಮಹತ್ವ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನವ್ಯದ ತಲೆಮಾರಿನ ಲೇಖಕರು ಸಾಮಾಜಿಕತೆಯನ್ನು ಪರಿಗಣನೆಗೆ ತೆಗೆದುಕೊಳ್ಳದೆ ವ್ಯಕ್ತಿಯ ಪ್ರಜ್ಞೆಯನ್ನೇ ಕೇಂದ್ರವಾಗಿಟ್ಟುಕೊಂಡು ಕಥಾ ಸಾಹಿತ್ಯವನ್ನು ಕಟ್ಟಿದವರು. ವ್ಯಕ್ತಿಯ ಅಸ್ತಿತ್ವವನ್ನು ಶೋಧಿಸುವ ನೈತಿಕ ಜವಾಬ್ದಾರಿಯನ್ನು ಈ ಚಳುವಳಿಯ ಲೇಖಕರು ಹೊತ್ತರು. ಇದರಿಂದಾಗಿ ವ್ಯಕ್ತಿಯ ನೋವು, ವಿಲಕ್ಷಣತೆ, ವಿಕ್ಷಿಪ್ತತೆ, ಅಸಹಾಯಕತೆ, ಬೇಸರ, ಹತಾಶೆ, ಸಾವಿಗೆ ಶರಣಾಗುವ ಮನಸ್ಥಿತಿಯಲ್ಲೇ ನವ್ಯದ ಕಥಾವಸ್ತು ಹುಟ್ಟಿಕೊಂಡಿತು. ಆದರೆ ಶಾಂತಿನಾಥ ದೇಸಾಯಿ ಅವರು ಇತರೆ ನವ್ಯ ಕಥೆಗಾರರಿಗಿಂತ ಭಿನ್ನ ಕಥಾವಸ್ತುವನ್ನು ಆಯ್ದುಕೊಂಡರು. ಮೂಲತಃ ಅಸ್ತಿತ್ವವಾದದ ನೆಲೆಯನ್ನೇ ತಮ್ಮ ಕಥಾ ಸಾಹಿತ್ಯದಲ್ಲಿ ತಂದರು. ಕಾಮ ಪ್ರೇಮಗಳ ಹಿನ್ನೆಲೆಯಲ್ಲಿ ಮತ್ತು ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಮನುಷ್ಯ ನಂಬಂಧಗಳನ್ನು ಹುಡುಕಿದರು. ಮನೋವಿಜ್ಞಾನದ ಹಿನ್ನೆಲೆಯೂ ಈ ಕಥೆಗಳಲ್ಲಿದೆ. ವ್ಯಕ್ತಿಗಳ ಸಂಬಂಧವನ್ನು ಅಂತರಂಗದ ಏರಿಳಿತದೊಂದಿಗೆ ಮುಕ್ತವಾಗಿ ಚಿತ್ರಿಸಿದರು. ಹೆಣ್ಣು-ಗಂಡುಗಳ ಕಾಮಪ್ರೇಮ ಸಂಬಂಧಗಳನ್ನು ನೈತಿಕ ನೆಲೆಯಲ್ಲೇ ಚಿತ್ರಿಸಿದರೂ ಅದು ಸಂಪ್ರದಾಯವನ್ನು ಮೀರಿ ಆಧುನಿಕ ನೈತಿಕ ಪ್ರಜ್ಞೆಯೊಂದಿಗೆ ವ್ಯಕ್ತವಾಗುತ್ತಿತ್ತು. ಹೀಗಾಗಿ ಲಘು ಪ್ರೇಮ-ಕಾಮಗಳೇ ಕಥಾ ವಸ್ತುವಾಗದೆ ಗಂಭೀರವಾದ ಕಥೆಗಳು ಕೂಡ ಹುಟ್ಟಿಕೊಂಡಿದ್ದನ್ನು ಕಾಣಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಮಹಾಪ್ರಬಂಧದ ಬಹುಮುಖ್ಯ ಅಧ್ಯಾಯವೆಂದರೆ **ಆರನೆಯ ಅಧ್ಯಾಯ**. ಈ ಅಧ್ಯಾಯದಲ್ಲಿ ಮಹಿಳೆ ಮತ್ತು ಪುರುಷನ ನಡುವಿನ ಸಂಘರ್ಷದ ಸ್ವರೂಪವನ್ನು ಕುರಿತು ವಿಶ್ಲೇಷಿಸಿದ್ದಾರೆ. ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಮದುವೆ ಮತ್ತು ಕುಟುಂಬ ವ್ಯವಸ್ಥೆಗಳ ಸ್ವರೂಪವನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಈ ಎರಡರ ಸ್ವರೂಪ ಗ್ರಾಮ ಮತ್ತು ನಗರ ಸಮಾಜದಲ್ಲಿ

ಭಿನ್ನವಾಗಿರುವುದನ್ನು ಕಾಣಬಹುದು. ಸಂಪ್ರದಾಯಸ್ಥ ಗ್ರಾಮ ಸಮಾಜದಲ್ಲಿ ಮದುವೆಗೆ ಒಂದು ಪವಿತ್ರವಾದ ಸ್ಥಾನ ನೀಡಲಾಗಿದೆ. ಮದುವೆಗೆ ಹೇಗೋ ಹಾಗೆಯೇ ಕುಟುಂಬಕ್ಕೂ ಮಹತ್ವದ ಸ್ಥಾನ ಕೊಡಲಾಗಿದೆ ಎಂದು ಹೇಳುತ್ತ ಕುಟುಂಬ ವ್ಯವಸ್ಥೆಯಲ್ಲಿನ ಮಹತ್ವವನ್ನು ವಿವರಿಸಿದ್ದಾರೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಸೌಹಾರ್ದದ ವಾತಾವರಣವಿದ್ದಂತೆ ಸಂಘರ್ಷಗಳೂ ಇರುತ್ತವೆ ಎಂದು ಹೇಳುತ್ತ ಸಂಪ್ರದಾಯಸ್ಥ ಸಮಾಜದ ಕುಟುಂಬಗಳಲ್ಲಿನ ಬಿರುಕಿಗೆ ಕಾರಣವಾಗುವ ಅಂಶಗಳನ್ನು ಪಟ್ಟಿ ಮಾಡಿದ್ದಾರೆ. ನಗರ ಕೇಂದ್ರಿತ ಕುಟುಂಬಗಳಲ್ಲೂ ಕೂಡ ಬಿರುಕುಗಳಿದ್ದರೂ ಮಕ್ಕಳ ಸಂಬಂಧವಾಗಿ ಹೊಂದಾಣಿಕೆ ಏರ್ಪಡುತ್ತದೆ. ಒಂದು ವೇಳೆ ಹೆಣ್ಣು ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೆ, ಗಂಡನನ್ನು ಒಂದು ಹಂತದವರೆಗೆ ಮಾತ್ರ ತಾಳಿಕೊಂಡಿರಬಹುದು. ಅದು ಮೀರಿದರೆ ಸ್ವತಂತ್ರವಾಗಿರಲು ಬಯಸುತ್ತಾಳೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನವ್ಯ ಸಾಹಿತ್ಯ ಸಂದರ್ಭದಲ್ಲಿ ಹೆಣ್ಣನ್ನು ಎರಡನೇ ದರ್ಜೆ ಪ್ರಜೆಯನ್ನಾಗಿ ಗ್ರಹಿಸಲಾಗಿದೆ. ಹೆಣ್ಣು ಕೌಟುಂಬಿಕ ಪರಿಸರದಲ್ಲಿ ಗಂಡಿನಷ್ಟೇ ಸ್ವಾಭಿಮಾನಿಯಾಗಿ, ಸ್ವತಂತ್ರ ಮನೋಭಾವದಿಂದ, ಮುಕ್ತವಾಗಿರಲು ಬಯಸಿದರೂ ಗಂಡಿನ ಅಧಿಕಾರದಿಂದ ಅದು ಸಾಧ್ಯವಾಗುವುದಿಲ್ಲ. ಸ್ವಾಭಿಮಾನ, ಮುಕ್ತತೆ, ಸಮಾನತೆ ಮತ್ತು ಸ್ವಾತಂತ್ರ್ಯ ಬಯಸುವ ಹೆಣ್ಣು ಗಂಡಿನ ಮುಂದೆ ಬಿಕ್ಕಟ್ಟಿಗೆ ಒಳಗಾಗುತ್ತಾಳೆ. ಈ ಹೆಣ್ಣು ಗಂಡಿನ ಸಂಘರ್ಷವನ್ನು ದೇಸಾಯಿ ತಮ್ಮ ಕಥೆಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಕುಟುಂಬ ಮತ್ತು ಮದುವೆ ಪರಿಸರದಲ್ಲಿ ಹೆಣ್ಣು ಪ್ರಶ್ನಿಸುವ ಹಕ್ಕನ್ನು ಉಳಿಸಿಕೊಳ್ಳುತ್ತಾಳೆ. ಪುರುಷನನ್ನು ವಿರೋಧಿಸುತ್ತಾಳೆ. ಪ್ರತಿಭಟಿಸುತ್ತಾಳೆ. ಗಂಡನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಬಿಡುತ್ತಾಳೆ. ಇದು ಹೆಣ್ಣಿನ ಆಧುನಿಕ ಪ್ರಜ್ಞೆಯಿಂದ ಮಾತ್ರ ಸಾಧ್ಯವಾಗುತ್ತದೆ. ಶಾಂತಿನಾಥ ದೇಸಾಯಿ ಅವರ ಕಥೆಗಳಲ್ಲಿ ಬರುವ ಮಹಿಳೆಯರು ಗೌರವ ಸ್ಥಾನದಲ್ಲಿ ನಿಲ್ಲುತ್ತಾರೆ ಎಂದು ವಿಶ್ಲೇಷಿಸುತ್ತಾ ಕೌಟುಂಬಿಕ ವ್ಯವಸ್ಥೆಯಲ್ಲಿನ ಕೆಲವು ಪ್ರಮುಖ ಸಂಘರ್ಷಗಳನ್ನು ದೇಸಾಯಿ ಅವರ ಕಥೆಗಳ ಮೂಲಕ ವಿವರಿಸಿದ್ದಾರೆ. 'ದಾಂಪತ್ಯ ಜೀವನದ ಸಂಘರ್ಷವನ್ನು ವಿವರಿಸುವ ಸಲುವಾಗಿ ದೇಸಾಯಿ ಅವರ 'ಅಂಟಿದ ನಂಟು', 'ದಿಗ್ಭ್ರಮೆ', 'ಬಿಡುಗಡೆ', 'ಕೂರ್ಮಾವತಾರ', 'ತೃಪ್ತ', 'ಯಾಕೆ', 'ವಿಯೋಗ' ಮುಂತಾದ ಕತೆಗಳಲ್ಲಿ ಕಾಣಬಹುದು ಎಂದು ಈ ಕತೆಗಳ ಮೂಲಕ ವಿವರಿಸಿದ್ದಾರೆ. ಹೆಣ್ಣು ಅಬಲೆಯಲ್ಲ ಸಬಲೆ, ಬದುಕಿನ ಅರ್ಥವನ್ನು ಶೋಧಿಸುವ ಹಕ್ಕು ಗಂಡಿನಷ್ಟೇ ಹೆಣ್ಣಿಗೂ ಇದೆ. ಗಂಡು ಸಿಡಿಯುವಂತೆ ಹೆಣ್ಣು ಸಿಡಿಯುತ್ತಾಳೆ. ಅರ್ಥಹೀನ ಬದುಕಿನಿಂದ ಬಿಡುಗಡೆ ಪಡೆಯುವುದರ ಕಡೆ ಆಕೆಯ ಒಲವಿರುವುದನ್ನು ಕಾಣಬಹುದು.

ದಾಂಪತ್ಯದ ಚೌಕಟ್ಟನ್ನು ಮುರಿದು ಹೊರಗೆ ಬರುವುದು ಗಂಡಿಗಿಂತ ಹೆಣ್ಣಿಗೆ ಹೆಚ್ಚು ಆತಂಕದ ವಿಷಯ. ಆರ್ಥಿಕ ಬಲವಿಲ್ಲದಿದ್ದಾಗ ಹೆಣ್ಣಿಗೆ ಇಂಥ ನಿರ್ಣಯ ಸುಲಭವಲ್ಲ. ಆದರೆ ದೇಸಾಯಿಯವರ ಪಾತ್ರಗಳಿಗೆ ಸಮಾಜಕ್ಕಿಂತಲೂ ವೈಯಕ್ತಿಕ ಬದುಕು ಮುಖ್ಯವಾಗುತ್ತದೆ. ಅದಕ್ಕೋಸ್ಕರ ಅವರು ಇಡೀ ವ್ಯವಸ್ಥೆಯನ್ನೇ ಧಿಕ್ಕರಿಸಿ ಧೈರ್ಯದಿಂದ ಹೊರಬಂದು ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾರೆ ಎಂದು ವಿಶ್ಲೇಷಿಸಿದ್ದಾರೆ. 'ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷದ ಅಧ್ಯಯನಕ್ಕೆ 'ಕ್ಷಿತಿಜ' ಹಾಗೂ 'ಪರಿವರ್ತನೆ' ಕಥೆಗಳನ್ನು ಆಯ್ಕೆ

ಮಾಡಿಕೊಂಡಿದ್ದಾರೆ. 'ಕ್ಷಿತಿಜ' ಕಥೆಯಲ್ಲಿ ಬರುವ ಮಂದಾಕಿನಿ ಆಧುನಿಕ ಭಾರತದ ಸಾಂಪ್ರದಾಯಿಕ ಹೆಣ್ಣು. ಮಂದಾಕಿನಿ ಪಾಶ್ಚಾತ್ಯ ಸಂಸ್ಕೃತಿಗೆ ಮುಖಾಮುಖಿಯಾಗುವಾಗ ಅವಳಲ್ಲಿ ಉಂಟಾಗುವ ಸಂಘರ್ಷಗಳು ಈ ಕಥೆಯಲ್ಲಿ ಮುಖ್ಯವಾಗುತ್ತವೆ. ಆದರೆ ತುಂಬಾ ಸಾಂಪ್ರದಾಯಿಕಳಾದ ಮಂದಾಕಿನಿಗೆ ಆಧುನಿಕ ಪರಿಸರ ತನ್ನ ಕಡೆಗೆ ಸೆಳೆದುಕೊಳ್ಳುತ್ತಿದ್ದರೂ, ಅದನ್ನು ಪರಿಪೂರ್ಣವಾಗಿ ಸ್ವೀಕರಿಸುವ ಸಾಮರ್ಥ್ಯ ಆಕೆಗಿಲ್ಲದೆ ಹೋಗುತ್ತದೆ. ಭಾರತೀಯ ಸಂಪ್ರದಾಯದ ಆದರ್ಶವನ್ನು ಮೈಗೂಡಿಸಿಕೊಂಡ ಮಂದಾಕಿನಿ, ತನ್ನ ಜೀವನದಲ್ಲಿ ಮೊದಲ ಸಲ ಪಾಶ್ಚಾತ್ಯ ಸಂಸ್ಕೃತಿಯ ಆಘಾತಕ್ಕೆ ಒಳಗಾಗುತ್ತಾಳೆ. ಈ ಮುಖಾಮುಖಿಯ ಪರಿಣಾಮವಾಗಿ ಅವಳ ವ್ಯಕ್ತಿತ್ವದಲ್ಲಿ ಘಟಿಸುವ ಸೂಕ್ಷ್ಮ ಪರಿವರ್ತನೆಗಳನ್ನು ಹೊಯ್ದಾಟಗಳನ್ನು ಈ ಕಥೆಯಲ್ಲಿ ಕಾಣಬಹುದು. ಹಳೆಯ ಹಾಗೂ ಹೊಸ ಮೌಲ್ಯಗಳ ನಡುವಿನ ಸಂಘರ್ಷವನ್ನು 'ಪರಿವರ್ತನೆ' ಕಥೆಯಲ್ಲಿ ಕಾಣಬಹುದು ಎಂದು ವಿಶ್ಲೇಷಿಸಿದ್ದಾರೆ.

'ಲೈಂಗಿಕ ಬದುಕಿನ ಸಂಘರ್ಷವನ್ನು ಕುರಿತಂತೆ ಕಾಮ ಅಥವಾ ಲೈಂಗಿಕತೆ ಎನ್ನುವುದು ಮನುಷ್ಯನ ಮೂಲ ಪ್ರವೃತ್ತಿಗಳಲ್ಲಿ ಒಂದು. ಆದ್ದರಿಂದ ಅದರ ಹಿನ್ನೆಲೆಯಲ್ಲಿ ಜೀವನ ವಿನ್ಯಾಸವನ್ನು ದೇಸಾಯಿಯವರು ಕಂಡುಕೊಂಡಿದ್ದಾರೆ. ಹಾಗಾಗಿ ಇವರು ಕಾಮವನ್ನೇ ತಮ್ಮ ಸಾಹಿತ್ಯದ ಕೇಂದ್ರವನ್ನಾಗಿ ಮಾಡಿಕೊಂಡು ಆ ಮೂಲಕ ಬದುಕನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದ್ದಾರೆ. ದೇಸಾಯಿಯವರಿಗೆ ಲೈಂಗಿಕತೆ ಜೀವನದ ಸಾಫಲ್ಯ ಹಾಗೂ ವೈಫಲ್ಯಗಳನ್ನು ಅಳೆಯುವ ನಿಕಷವಾಗುತ್ತದೆ. ದೇಸಾಯಿಯವರ ಸಾಹಿತ್ಯದಲ್ಲಿ ಕಾಮ ವ್ಯಕ್ತಿತ್ವದ ಅನನ್ಯತೆಯನ್ನು ಗುರುತಿಸುವ ಅಥವಾ ನಿರ್ಧರಿಸುವ ಮಾನದಂಡವಾಗಿ ಬರುತ್ತದೆ. ಆ ಮೂಲಕವೇ ಜೀವನವನ್ನು ನೋಡುವ ಕ್ರಮ ದೇಸಾಯಿಯವರದು. ಇದಕ್ಕೆ ಪೂರಕವಾಗಿ ಇವರು ದೇಸಾಯಿ ಅವರ 'ತೃಪ್ತಿ', 'ನಿರ್ಣಯ', ರಾಕ್ಷಸ', 'ಸಹೋದರ', ' ಯಥಾಕಾಷ್ಠಂ ಚ ಕಾಷ್ಠಂಚ', 'ಶೋಭನೆಯ ಹಾದಿ', 'ಹೊಸತಿಲಾಚೆಗೆ', 'ಸೇಡುಗೀಡು', '–ನ್ನು' ತನ್ನ ಹಿಂದೆ ಬಿಟ್ಟು ಹೋಗಿದ್ದಾಳೆ' ಕಥೆಗಳ ಹಿನ್ನೆಲೆಯಲ್ಲಿ ಒಟ್ಟಾರೆಯಾಗಿ ಮಹಿಳೆ ಮತ್ತು ಪುರುಷನ ಸಂಘರ್ಷದಲ್ಲಿ ಕಾಮ ಬಹಳ ಪ್ರಧಾನವಾಗಿ ಬರುತ್ತದೆ ಎನ್ನುವುದನ್ನು ಗುರುತಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

'ಮಾನಸಿಕ ಸಂಘರ್ಷ'ವನ್ನು ಕುರಿತಂತೆ ದೇಸಾಯಿಯವರ ಕಥೆಗಳಲ್ಲಿ ಬರುವ ಕೆಲವು ಪಾತ್ರಗಳು ತುಂಬಾ ಸೂಕ್ಷ್ಮ ಹಾಗೂ ದುರ್ಬಲ. ಇವರು ತಮ್ಮ ಬದುಕಿನಲ್ಲಿ ಮುಖಾಮುಖಿಯಾಗುವ ಕೆಲವು ಸಂದರ್ಭ ಸನ್ನಿವೇಶಗಳಿಂದಾಗಿ ಆಘಾತಕ್ಕೆ ಒಳಗಾಗಿರುತ್ತಾರೆ. ಈ ರೀತಿಯ ಆಘಾತ ಅವರನ್ನು ಮಾನಸಿಕ ಕ್ಷೋಭೆಗೆ ಒಳಗಾಗುವಂತೆ ಮಾಡುತ್ತದೆ. ಆತಂಕ, ಉದ್ವೇಗ ಎನ್ನುವುದು ಅವರೊಳಗಡೆಯೇ ಇರುತ್ತದೆ. ಅದು ಬಾಹ್ಯ ರೂಪದಲ್ಲಿ ಗೋಚರವಾಗುವುದು ಅವರ ವರ್ತನೆ ಹಾಗೂ ಸ್ವಭಾವದ ಮೂಲಕ. ಅಂಥ ಸಂದರ್ಭದಲ್ಲಿ ಅವರು ತಮ್ಮ ಮನಸ್ಸಿನ ಮೇಲಿನ ಹಿಡಿತವನ್ನು ಕಳೆದುಕೊಂಡು ಅಸ್ವಸ್ಥರಾಗುತ್ತಾರೆ. ಇದು ಅವರ ಮಾನಸಿಕ ಸಂಘರ್ಷಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ 'ಮಳೆ' 'ಬೇಸರ' ಹಾಗೂ 'ಹುಚ್ಚ' ಕಥೆಗಳನ್ನು ಚರ್ಚೆಗೊಳಪಡಿಸಲಾಗಿದೆ ಎಂದು ವಿವರಿಸಿದ್ದಾರೆ. ಅಲ್ಲದೆ ತುಂಬಾ ಸೂಕ್ಷ್ಮ ಹಾಗೂ ದುರ್ಬಲ

ಮನಸ್ಸಿನವರು ತಮ್ಮ ಬದುಕಿನಲ್ಲಿ ನಡೆಯಬೇಕಿದ್ದ ಎಷ್ಟೋ ಘಟನೆಗಳು ನಡೆಯದೆ ಹೋದಾಗ ಈ ರೀತಿ ಆಘಾತಕ್ಕೆ ಒಳಗಾಗಿ ಭ್ರಮಾತ್ಮಕ ಸ್ಥಿತಿಯನ್ನು ತಲುಪಿರುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷವನ್ನು ಕುರಿತಂತೆ 'ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷ ಎಂದಾಗ ಅದು ಬಹುತೇಕ ಕೌಟುಂಬಿಕ ಸಂಘರ್ಷವೇ ಆಗಿರುತ್ತದೆ.' ಎಲ್ಲಾ ಕೌಟುಂಬಿಕ ಸಂಘರ್ಷಗಳು, ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷಗಳೇ ಆಗಿರುತ್ತವೆ. ಆದರೆ ಎಲ್ಲಾ ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷಗಳು ಕೌಟುಂಬಿಕ ಸಂಘರ್ಷಗಳಾಗಿರುವುದಿಲ್ಲ ಎಂದು ವಿವರಿಸುತ್ತಾ ಇದಕ್ಕೆ ಪೂರಕವಾಗಿ ದೇಸಾಯಿ ಅವರ 'ಚಂದೂ', 'ಗಂಡ ಸತ್ತ ಮೇಲೆ', 'ಏಕಾಂಗಿ', 'ನಾನಾನ ತೀರ್ಥಯಾತ್ರೆ', 'ಜವಾಬ್ದಾರಿ', 'ಲಗ್ನ' , 'ಅಂತರ' ಕಥೆಗಳನ್ನು ತಮ್ಮ ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಮಹಾಪ್ರಬಂಧದ ಮತ್ತೊಂದು ಮುಖ್ಯ ಅಧ್ಯಾಯವೆಂದರೆ **ಏಳನೆಯ ಅಧ್ಯಾಯ**. ಈ ಅಧ್ಯಾಯದಲ್ಲಿ ಕಾದಂಬರಿ ಸಾಹಿತ್ಯ ವಸ್ತುವಿನ ಸ್ವರೂಪವನ್ನು ಕುರಿತಂತೆ ಚರ್ಚಿಸಿದ್ದಾರೆ. ಆಧುನಿಕ ಕನ್ನಡ ಕಾದಂಬರಿಯ ವಸ್ತುವಿನ ಬಗ್ಗೆ ಚರ್ಚಿಸುತ್ತಾ ಮಲೆನಾಡಿನ ದಟ್ಟ ಪರಿಸರದೊಂದಿಗೆ ಅಲ್ಲಿನ ಜೀವನ ಸಂಸ್ಕೃತಿಯನ್ನು ಕುವೆಂಪು ಕಾದಂಬರಿಗಳು ಕಟ್ಟಿಕೊಟ್ಟಂತೆ ಕರಾವಳಿಯ ಪರಿಸರವನ್ನು ಅಲ್ಲಿಯ ಸಂಸ್ಕೃತಿಯನ್ನು ಕಾರಂತರ ಕಾದಂಬರಿಗಳು ಬಿಂಬಿಸುತ್ತವೆ. ಉತ್ತರ ಕರ್ನಾಟಕದ ಪ್ರಾದೇಶಿಕತೆಯೊಂದಿಗೆ ಬಯಲು ಸೀಮೆಯ ಬದುಕನ್ನು ರಾವ್ ಬಹದ್ದೂರ ಅವರ ಕಾದಂಬರಿಗಳು ಚಿತ್ರಿಸುತ್ತವೆ. ಗೊರೂರರ ಕಾದಂಬರಿಗಳು ಮೈಸೂರು ಸೀಮೆಯ ಬದುಕನ್ನು ಕಟ್ಟಿಕೊಡುತ್ತವೆ. ಕರ್ನಾಟಕದ ಭಿನ್ನ ಪ್ರಾದೇಶಿಕತೆಗಳು, ಅವುಗಳ ಸ್ವರೂಪವನ್ನು ತಿಳಿಯಲು ಈ ಕಾದಂಬರಿಗಳು ಈ ಹೊತ್ತಿಗೂ ಜೀವಂತವಾಗಿವೆ. ಪ್ರಗತಿಶೀಲ ಲೇಖಕರು ಕೂಡ ತಮ್ಮ ಧೋರಣೆಯೊಂದಿಗೆ ಕಾದಂಬರಿಗಳನ್ನು ಬರೆದರೂ ಅದರಲ್ಲಿ ಕರ್ನಾಟಕದ ಬೇರೆ ಬೇರೆ ಪ್ರಾದೇಶಿಕತೆ, ಸಂಸ್ಕೃತಿ ಮತು ವಸ್ತು ವೈವಿಧ್ಯವನ್ನು ಕಾಣಬಹುದು. ಸಮಾಜದಲ್ಲಿ ಆದ ಎಲ್ಲಾ ರೀತಿಯ ಸ್ಥಿತ್ಯಂತರಗಳನ್ನು ಕುರಿತು ಕಾದಂಬರಿಗಳು ಚಿತ್ರಿಸಿದ್ದರಿಂದ ವ್ಯಕ್ತಿಯ ಬದುಕು ವೈವಿಧ್ಯಮಯವಾಗಿ ಚಿತ್ರಿತವಾಯಿತು. ನವೋದಯ ಪಂಥದ ಕಾದಂಬರಿಕಾರರು ಸಂಬಂಧಗಳನ್ನು ನೈತಿಕ, ಆದರ್ಶಗಳ ನೆಲೆಯಲ್ಲಿ, ಮಾನವೀಯ ಸಂಬಂಧಗಳ ಸ್ವರೂಪವನ್ನು ಮೌಲ್ಯಗಳ ಹಿನ್ನೆಲೆಯಲ್ಲಿಯೂ ಗ್ರಹಿಸಿದರು. ಪ್ರಗತಿಶೀಲ ಕಾದಂಬರಿಕಾರರು ಶೋಷಣೆಗೆ ಒಳಗಾಗುವ ದುಡಿಯುವ ವರ್ಗದ ನಾನಾ ರೀತಿಯ ಸಮಸ್ಯೆಗಳನ್ನು ಢಾಳಾಗಿ ಚಿತ್ರಿಸಿದರು. ಸ್ವಾತಂತ್ರ್ಯ ನಂತರದಲ್ಲಿ ಬದಲಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಗತಿಯನ್ನು ಗ್ರಹಿಸಲು ನವ್ಯ ಕಾದಂಬರಿಕಾರರು ಪ್ರಯತ್ನಿಸಿದರು. ಆದರ್ಶ, ಮೌಲ್ಯಗಳು, ನೈತಿಕತೆ ಇವುಗಳನ್ನು ವಾಸ್ತವದ ನೆಲೆಯಲ್ಲಿ ಮನೋವಿಜ್ಞಾನದ ಹಿನ್ನೆಲೆಯಲ್ಲಿ ಕಾಣಲು ಪ್ರಯತ್ನಿಸಿದ ಫಲವಾಗಿ ಕಾದಂಬರಿಯ ವಸ್ತು ಭಿನ್ನವಾಗಿ ರಚನೆಯಾಯಿತು. ವ್ಯಕ್ತಿಯ ಬದುಕಿನ ಅಸ್ತಿತ್ವದ ಏಳು-ಬೀಳುಗಳನ್ನು ಅಸ್ತಿತ್ವವಾದದ ಲಕ್ಷಣಗಳ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇಸಾಯಿಯವರು ನವ್ಯದ ಸಮಕಾಲೀನ ಕಾದಂಬರಿಕಾರರಿಗಿಂತ ಭಿನ್ನವಾದ ಶೋಧ ನಡೆಸಿದರು. ತಮ್ಮ ಕಾದಂಬರಿಗಳ ನಿರೂಪಣೆಯನ್ನು ವಾಸ್ತವವಾದದ ನೆಲೆಯಲ್ಲಿ ಗ್ರಹಿಸಿದರು. ದೇಸಾಯಿ ಅವರ ಕಾದಂಬರಿಗಳ ವಸ್ತು ಕಾಮ, ಪ್ರೇಮವೇ ಆಗಿದ್ದರೂ, ಹೆಣ್ಣು-ಗಂಡಿನ ಜೀವನ ಶೈಲಿಯನ್ನು ಹೊಸದಾಗಿ ರೂಪಿಸಲು ಪ್ರಯತ್ನಿಸಿದರೂ, ಹೆಣ್ಣು ಆಧುನಿಕ ಪ್ರಜ್ಞೆಯಿಂದ, ಗಂಡಸಿನ ಹುಸಿ ನೈತಿಕತೆಯನ್ನು ಪ್ರಶ್ನಿಸುತ್ತಾಳೆ. ಕನ್ನಡ ಕಾದಂಬರಿಗಳಲ್ಲಿ ಶಾಂತಿನಾಥರ ಕಾದಂಬರಿಗಳು ಅವುಗಳ ಕಥಾವಸ್ತುವಿನಿಂದಾಗಿ ಭಿನ್ನವಾಗಿ ಕಾಣುತ್ತವೆ ಎಂದು ಅಭಿಪ್ರಾಯಪಟ್ಟಿದ್ದಾರೆ. 'ಮುಕ್ತಿ' ಕಾದಂಬರಿಯನ್ನು ಕುರಿತಂತೆ 'ಮುಕ್ತಿ' ದೇಸಾಯಿ ಅವರ ಮೊದಲ ಕಾದಂಬರಿಯಾಗಿದ್ದು, ಪ್ರಥಮ ಕಾದಂಬರಿಗೆ ಇರುವಂತಹ ಮಿತಿಗಳನ್ನೆಲ್ಲ ಮೀರಿ ಬೆಳೆದಿದೆ. ನವ್ಯದ ಪ್ರಮುಖ ಲಕ್ಷಣಗಳಾದ ಆತ್ಮ ಶೋಧನೆ, ಮುಕ್ತ ಭಾಷೆ, ಕಾಮ, ಸಾವು, ಬದುಕಿನ ಹುಡುಕಾಟ, ಒಂಟಿತನ, ದ್ವಂದ್ವ ಈ ಮುಂತಾದವುಗಳು ಇಲ್ಲಿ ಕಾಣಿಸಿಕೊಂಡಿವೆ. ಮುಕ್ತಿ ಎಂದರೆ ಇಲ್ಲಿ ಸತ್ತ ಮೇಲೆ ಸಿಗುವಂತಹದ್ದಲ್ಲ. ಇದ್ದಾಗಲೇ ಕಾಣುವಂತಹದ್ದಾಗಿದೆ. ಆಧ್ಯಾತ್ಮದ ಹಿನ್ನೆಲೆಯಲ್ಲಿ ಬಳಸಿದ ಈ ಪದಕ್ಕೆ ದೇಸಾಯಿ ಹೊಸ ಅರ್ಥ ನೀಡಿ ಬದುಕಿನ ಸ್ಪರ್ಷ ಕೊಟ್ಟಿದ್ದಾರೆ. ಮುಕ್ತಿಯೆಂದರೆ ಬಿಡುಗಡೆ. ಬದುಕಿನ ಜಟಿಲತೆಯಿಂದ, ಬಿಕ್ಕಟ್ಟಿನಿಂದ, ಬಿಡುಗಡೆ ಹೊಂದುವುದೇ ಇಲ್ಲಿ ಮುಕ್ತಿಯ ಆಶಯ. ಹಳ್ಳಿಯಿಂದ ನಗರಕ್ಕೆ ಬಂದ ಸ್ವತಂತ್ರ ಅಸ್ತಿತ್ವವಿಲ್ಲದ ಗೌರೀಶ, ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ಜೀವನ ದೃಷ್ಟಿಯನ್ನು ಅಧ್ಯಯನ ಮಾಡಿದ ಶ್ರೀಕಾಂತ, ಪಾಶ್ಚಾತ್ಯ ಸಂಸ್ಕೃತಿಗಳ ಅಧ್ಯಯನ ಮಾಡಿ ಗಂಡಿನಂತೆ ಸ್ವೇಚ್ಛೆಯಿಂದ ಬದುಕುವ ಕಾಮಿನಿ, ಬದುಕಿನಲ್ಲಿ ಯಾವ ತೊಡಕುಗಳನ್ನು ಮಾಡಿಕೊಳ್ಳದೆ ಅತ್ಯಂತ ಸರಳವಾಗಿ ಜೀವನ ಸಾಗಿಸಿದ ಸತ್ಯೇಂದ್ರ, ರೋಹಿಣಿ, ಶಶಿಕಲಾ, ಮೇರಿ, ಇಷ್ಟು ಪಾತ್ರಗಳ ನಡುವಿನ ಸಂಬಂಧಗಳ ಜಾಲವನ್ನು ಕಾದಂಬರಿ ನಿರೂಪಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ವಿಕ್ಷೇಪ' ಕಾದಂಬರಿಯನ್ನು ಕುರಿತು 'ವಿಕ್ಷೇಪ' ವಸ್ತು ಹಾಗೂ ತಂತ್ರದ ದೃಷ್ಟಿಯಿಂದ 'ಮುಕ್ತಿ'ಗಿಂತ ಭಿನ್ನವಾಗಿದೆ. ಮುಕ್ತಿಯ ನಾಯಕ ಗೌರೀಶ ಪ್ರಭಾವಗಳಿಂದ ತಪ್ಪಿಸಿಕೊಂಡು ತನ್ನತನ ಉಳಿಸಿಕೊಳ್ಳಲು ಹೋರಾಟ ನಡೆಸಿದವ. ಆದರೆ ಕೇವಲ ಅಸ್ತಿತ್ವವಾದಿಯಾದ 'ವಿಕ್ಷೇಪ'ದ ನಾಯಕ ರಾಹುಲನಿಗೆ ಗೌರೀಶನ ಯಾತನೆಯೂ ಇಲ್ಲ, ಬಿಡುಗಡೆಯ ಜರೂರು ಇಲ್ಲ. ಅವನ ಅವಸ್ಥೆ 'ವಿಕ್ಷೇಪ'. ನೆಲೆಕಳೆದುಕೊಂಡು ವೇಷದಿಂದ ವೇಷಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ತನ್ನನ್ನು ತೋರಿಸಿಕೊಳ್ಳುವುದು ರಾಹುಲನ ಸ್ವಭಾವ. ಕಾದಂಬರಿಯ ಪ್ರಮುಖ ಪಾತ್ರಗಳಾದ ಮಾಧವಿ, ವೈದೇಹಿ, ರೋಜಿ, ಕುಂದಾ ಮೊದಲಾದವರೊಡನೆ ಅವನು ಕಟ್ಟಿ ಕೆಡಿಸುವ ಸಂಬಂಧಗಳ ಮೂಲ ಪ್ರೇರಣೆ ಈ ಸ್ವಭಾವದಲ್ಲಿಯೇ ಇದೆ. ಮುಕ್ತಿಯ ಕಥೆಗೆ ಒಂದು ಮುಕ್ತಾಯವಿದೆ. ಆದರೆ 'ವಿಕ್ಷೇಪ'ಕ್ಕೆ ಅಂಥ ಮುಕ್ತಾಯದ ಸಾಧ್ಯತೆಯೇ ಇಲ್ಲ. ಇದಕ್ಕಾಗಿಯೇ ಏನೋ ಭೂತ-ವರ್ತಮಾನಗಳ ನಡುವೆ ಕ್ರಿಯಾತ್ಮಕ ಸಂಬಂಧ ಬೆಳೆಸುವ ತಂತ್ರವನ್ನು 'ಮುಕ್ತಿ' ಹುಡುಕಿಕೊಂಡರೆ, 'ವಿಕ್ಷೇಪ' ಕಾಲಕ್ಕೆ ವಿಶೇಷ ಗಮನ ಕೊಡದೆ, ಮಾನವೀಯ ಸಂಬಂಧಗಳ ಸುತ್ತ ಘಟನೆಗಳನ್ನು ಹೆಣೆದು ನಾಯಕನ ವಿಕ್ಷಿಪ್ತ ಮನಃಸ್ಥಿತಿಯನ್ನು ಚಿತ್ರಿಸುವ ತಂತ್ರವನ್ನು ಆಯ್ದುಕೊಂಡಿದೆ.

ರಾಹುಲನಲ್ಲಿ ಎದ್ದು ಕಾಣುವ ವಿಕ್ಷಿಪ್ತತೆಯೆಂದರೆ ಶುದ್ಧ ಸಂಬಂಧಗಳು ತನಗೆ ಸಾಧ್ಯವಿಲ್ಲ ಎಂಬುದರ ಅರಿವಿದ್ದರೂ ಸಂಬಂಧಗಳನ್ನು ಹುಡುಕುತ್ತಲೇ ಇರುವುದು. ರಾಹುಲನನ್ನು ಅಸ್ತಿತ್ವವಾದಿ ಪಾತ್ರವಾಗಿಸುವಲ್ಲಿ ಒಂದು ಬಗೆಯ ಮೃದು ಸಹಾನುಭೂತಿಪರ ವಸ್ತುನಿಷ್ಠತೆ ಇದೆ. ತನ್ನ ವಿಕ್ಷಿಪ್ತತೆಯಲ್ಲಿಯೂ ರಾಹುಲ ತನ್ನ ಹಾಗೂ ತನ್ನೊಂದಿಗಿರುವವರ ಸಂಬಂಧದ ಅಸಂಗತತೆಯನ್ನು ಅನುಭವಿಸಬಲ್ಲವನೆಂಬುದೇ ಇಲ್ಲಿ ಮುಖ್ಯ. ಅಷ್ಟೇ ಅಲ್ಲ, ಈ ಅಸಂಗತತೆಯನ್ನು ಪ್ರಜ್ಞೆಯ ನೆಲೆಯಲ್ಲಿ ಅರ್ಥೈಸಬಲ್ಲ ಕೂಡ. ರಾಹುಲನ ಅಸ್ತಿತ್ವವಾದಿ ಎಚ್ಚರದ ಪರಿಣಾಮವಾಗಿ ವಿಕ್ಷಿಪ್ತತೆ ಕೆಲವೊಮ್ಮೆ ಪಲಾಯನವಾದ, ಬೇಜವಾಬ್ದಾರಿತನ ಎಂದೆನಿಸಿದ್ದರೂ ಅದು ಕುಂದಾಳಲ್ಲಿ ಉಂಟು ಮಾಡುವ ಅನಿರೀಕ್ಷಿತ ಪರಿಣಾಮ ಓದುಗರನ್ನು ತೀವ್ರವಾಗಿ ತಟ್ಟುತ್ತದೆ ಎಂದು ವಿಶ್ಲೇಷಿಸಿದ್ದಾರೆ.

'ಸಂಬಂಧ' ಕಾದಂಬರಿಯನ್ನು ಕುರಿತು ಸೃಜನಶೀಲತೆ ಮತ್ತು ಬದುಕುಗಳ ನಡುವಿನ ಸಂಬಂಧವನ್ನು ಸೃಜನಶೀಲವಾಗಿ ಶೋಧಿಸುವ ಯತ್ನ ಈ ಕಾದಂಬರಿಯಲ್ಲಿದೆ. ಪಾಶ್ಚಾತ್ಯ ಆಧುನಿಕತೆಯ ಆಧಾರವಾದ ಸ್ವಾತಂತ್ರ್ಯದ ಪರಿಕಲ್ಪನೆಗೂ, ಭಾರತೀಯ ಸಂದರ್ಭದ ಸ್ವಾತಂತ್ರ್ಯಾಧಾರಿತ ಆಧುನಿಕತೆಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿಕೊಳ್ಳಲು ಕಾದಂಬರಿಕಾರರು ಯತ್ನಿಸುತ್ತಿದ್ದಾರೆಂದೆನಿಸುವುದು ಎಂದು ಅಭಿಪ್ರಾಯಪಟ್ಟಿದ್ದಾರೆ.

'ಬೀಜ' ಕಾದಂಬರಿಯಲ್ಲಿ ದೇಸಾಯಿ ಅವರು ನಗರ ಜೀವನದ ಜೊತೆಗೆ ಹಳ್ಳಿಯ ಬದುಕಿನ ಸಮಗ್ರ ಚಿತ್ರಣವನ್ನು ವಿಶ್ಲೇಷಣೆ ಮಾಡಿದ್ದಾರೆ. ಆದ್ದರಿಂದ ಇಲ್ಲಿ ವೈಯಕ್ತಿಕ ಅನಿಸಿಕೆಗಿಂತ ಸಾಮಾಜಿಕ ಬದ್ಧತೆ ಮುಖ್ಯವಾಗುತ್ತದೆ. ಕುಟುಂಬ, ಜಾತಿ, ವರ್ಗ ರಾಜಕೀಯ, ಅಧಿಕಾರ, ರಾಷ್ಟ್ರ, ವಿಶ್ವ ಹೀಗೆ ವ್ಯಕ್ತಿ ತನ್ನನ್ನು ಈ ಸ್ತರಗಳ ಜೊತೆ ಸಂಬಂಧಿಸಿಕೊಳ್ಳುವಲ್ಲಿಯೆ 'ಬೀಜ'ದ ಪರಿಕಲ್ಪನೆ ಸ್ಫುಟವಾಗತೊಡಗುತ್ತದೆ. ಅಸ್ತಿತ್ವವಾದಿ ನಿರಾಶೆ, ಹತಾಶೆಗಳೆಲ್ಲ ಮಾನವತಾವಾದಿ ಕನಸು, ಸಂಭ್ರಮ, ಭರವಸೆಗಳಲ್ಲಿ ನಿಲುಗಡೆ ಹೊಂದುತ್ತದೆ. 'ಪ್ರೀತಿಯೆಂದರೆ ಸ್ವಾತಂತ್ರ್ಯದ ಕೂಸು' ಎಂಬ ಹಳೆಯ ಫ್ರೆಂಚ್ ಹಾಡಿನ ಸಾಲೊಂದನ್ನು ಕಾದಂಬರಿ ಸ್ಫೂರ್ತಿಯಾಗಿ ಬಳಸಿಕೊಂಡಿದೆ. ಶಾಂತಿನಾಥರ ಇತರ ಕಾದಂಬರಿಗಳ ನಾಯಕರಂತೆ ಬೇರಿಲ್ಲದ ಹುಡುಕಾಟ, ತಡಕಾಟಗಳ ವಿಕ್ಷಿಪ್ತತೆಯನ್ನು ಶ್ರೇಯಾಂಸ ಹೊಂದಿಲ್ಲ. ಇಲ್ಲಿ ಆಧುನಿಕ ಪ್ರಜ್ಞೆಯುಳ್ಳ ರೇವತಿ ಮನಸ್ಸು ಮಾಡಿದ್ದರೆ ಶ್ರೇಯಾಂಸನನ್ನು ಮದುವೆಯಾಗಬಹುದಿತ್ತು. ಆದರೆ ಅವರಿಬ್ಬರೂ ತಮ್ಮ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಬದುಕಲಿಕ್ಕೆ ತಯಾರಿರುವುದಿಲ್ಲ. ರೇವತಿ ತನ್ನ ಸುಖವನ್ನು ಮಾತ್ರ ನೋಡಿಕೊಳ್ಳುವುದಿಲ್ಲ. ಅಸ್ತಿತ್ವ ಮಾತ್ರ ಮುಖ್ಯ ಅಂತ ಭಾವಿಸುವುದಿಲ್ಲ. ಜೊತೆಗೆ ಶ್ರೇಯಾಂಸನ ಕುಟುಂಬ, ಹೆಂಡತಿ, ಮಕ್ಕಳು, ಊರು ಎಲ್ಲದರ ಬಗೆಗೂ ಆಲೋಚನೆ ಮಾಡುತ್ತಾಳೆ. ಹೀಗೆ ಇವರ ಪ್ರೀತಿಗೂ ಒಂದು ನೈತಿಕತೆಯಿರುವುದನ್ನು ಕಾಣುತ್ತೇವೆ. ಹೀಗಾಗಿ ಕಾದಂಬರಿಯ ಕೊನೆಯಲ್ಲಿ ಶ್ರೇಯಾಂಸ ಕೃಷ್ಣಾಪುರದಲ್ಲಿಯೇ ಉಳಿಯುವ ತೀರ್ಮಾನವನ್ನು ಕೈಗೊಂಡು, ಅವನ ಅಪ್ಪನ ಜೀವನ ವಿಧಾನವನ್ನು ಮುಂದುವರಿಸುತ್ತಾನೆ. ಇವನ ಅಪ್ಪನದು ಸಾಂಪ್ರದಾಯಿಕ ಜೀವನ ವಿಧಾನವಾದರೆ, ಇವನದು ಆಧುನಿಕ ಜೀವನ ವಿಧಾನ ಎಂದು ವಿಶ್ಲೇಷಿಸಿದ್ದಾರೆ.

'ಓಂ ಣಮೋ' ಕಾದಂಬರಿಯನ್ನು ಕುರಿತಂತೆ ಯಾವುದೇ ಒಂದು ಧರ್ಮವನ್ನು ತೆಗೆದುಕೊಂಡರೂ ಅದು ಒಂದು ವ್ಯವಸ್ಥೆಯಾಗಿ ನಿಂತಿರುತ್ತದೆ. ಧರ್ಮದ ತಿರುಳು ಅಥವಾ ಸಾರ ಏನು ಅಂತ ಆ ಧರ್ಮದಲ್ಲಿದ್ದವರಿಗೆ ಸಂಪೂರ್ಣ ಗೊತ್ತಿರುವುದಿಲ್ಲ. ಆದರೂ ಆಚರಣೆಗಳನ್ನು, ನಂಬಿಕೆಗಳನ್ನು ಪಾಲಿಸುತ್ತಾ ಬರುತ್ತಾರೆ. ಆದರೆ ಅದರಲ್ಲಿ ಮುಕ್ತತೆ ಅನ್ನುವುದು ಇರುವುದಿಲ್ಲ. ವ್ಯಕ್ತಿಗೆ ಸ್ವಾತಂತ್ರ್ಯ ಅನ್ನುವುದು ಇರುವುದಿಲ್ಲ. ಧರ್ಮ ವ್ಯಕ್ತಿಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುತ್ತದೆ. ಹಾಗಾಗಿ ಸ್ವತಃ ಶಾಂತಿನಾಥ ದೇಸಾಯಿಯವರಿಗೆ ಒದಗುವ ಸಂದಿಗ್ಧತೆಯೇನೆಂದರೆ, ಸ್ವಾನುಭವ ಹಾಗೂ ವಸ್ತು ನಿಷ್ಠತೆಯ ನಡುವಣ ಸಂಬಂಧ. ಜೈನಿಸಂ ಬಗೆಗೆ ಬರೆಯಬೇಕಾದರೆ ಅದರೊಳಗಿರಬೇಕು. ಆದರೆ ಒಳಗಿರುವ ಮನುಷ್ಯನಿಗೆ ಸಾಕಷ್ಟು ವಸ್ತುನಿಷ್ಠತೆ ಇರುತ್ತದೆಯೇ? ಸ್ವಯಂ ಜೈನರಾದ ಶಾಂತಿನಾಥರು, ಇದನ್ನು ಪರಿಹರಿಸಿಕೊಳ್ಳುವುದಕ್ಕೆ ಅರ್ಧ ಜೈನ, ಅರ್ಧ ಕ್ರಿಶ್ಚಿಯನ್ ಮತದ ಆ್ಯಡಂ ಮತ್ತು ಜನ್ಮತಃ ಕ್ರಿಶ್ಚಿಯನ್ನಳಾಗಿದ್ದು, ಭಾರತಕ್ಕೆ ಬಂದ ಮೇಲೆ ಜೈನಧರ್ಮಕ್ಕೆ ಮತಾಂತರಗೊಳ್ಳುವ ಆ್ಯನ್ ಈಗಲ್ಟನ್ ಎಂಬ ಬ್ರಿಟೀಷ್ ಯುವತಿ ಇವರ ಪ್ರಜ್ಞೆಗಳನ್ನು ಕಥಾ ನಿರೂಪಣೆಗೆ ಬಳಸಿಕೊಳ್ಳುತ್ತಾರೆ. ಆ್ಯಡಂ – ಆ್ಯನ್‌ಗೆ ಸಂಬಂಧಿಸಿದ ಕಥೆಯಲ್ಲಿ ಗಂಡು–ಹೆಣ್ಣು ಸಂಬಂಧಗಳ ಅನ್ವೇಷಣೆಗೆ ಮುಖ್ಯವಾದರೆ, ದೇಸಾಯಿ ಮನೆತನಕ್ಕೆ ಸಂಬಂಧಿಸಿದ ಕಥೆಯಲ್ಲಿ ಆಧುನೀಕರಣದ ಕ್ರಿಯೆಯ ಶೋಧ ಮುಖ್ಯವಾಗುತ್ತದೆ. ಎರಡು ಸಂಸ್ಕೃತಿಗಳ ಮುಖಾಮುಖಿಯ ಸಂದರ್ಭದಲ್ಲಿ ಈ ಶೋಧಗಳು ನಡೆಯುವುದರಿಂದ ಅವುಗಳಿಗೆ ವ್ಯಾಪಕವಾದ ಸಾಂಸ್ಕೃತಿಕ ಆಯಾಮವೂ ಒದಗಿ ಬರುತ್ತದೆ ಎಂದು ವಿಶ್ಲೇಷಿಸಿದ್ದಾರೆ.

ವ್ಯಕ್ತಿ ಸ್ವಾತಂತ್ರ್ಯದ ತಾತ್ವಿಕತೆಯನ್ನು ಜೈನದರ್ಶನ ಹಾಗೂ ಆಚರಣೆಗಳಲ್ಲಿ ಶೋಧಿಸಲು ಯತ್ನಿಸುವ ಪ್ರಾಮಾಣಿಕ ಪಾತ್ರ ಆ್ಯನ್ ಈಗಲ್ಟನ್‌ಳದು. ಜೈನರ ಇತಿಹಾಸ, ಪುರಾಣ, ಕಲಾಕೃತಿಗಳ ಅಭ್ಯಾಸದ ಮೂಲಕ ಸಾಧ್ಯವಾಗುವ ಕಲ್ಪಿತ ಸಂಸ್ಕೃತಿಯ ಗ್ರಹಿಕೆಯಲ್ಲಿ ಆ್ಯನ್‌ಳಿಗೆ ಆಸಕ್ತಿಯಿಲ್ಲ. ಜೈನತತ್ವ, ಆಚರಣೆಗಳ ಸಾಮಾಜಿಕತೆಯ ಆಯಾಮಕ್ಕಿಂತ, ವೈಯಕ್ತಿಕ ಅನ್ವೇಷಣೆಯೇ ಆ್ಯನ್‌ಳಲ್ಲಿ ಮುಖ್ಯವಾಗುತ್ತ ಹೋಗುತ್ತದೆ. ಜೈನ 'ಅಪರಿಗ್ರಹ' ತತ್ವವನ್ನು ಆ್ಯನ್ ಪರಿಭಾವಿಸುವ ಕ್ರಮದಲ್ಲಿಯೇ ಆ ತತ್ವದ ಬಹುಮುಖಿ ಆಯಾಮ ಪ್ರಕಟವಾಗುತ್ತದೆ. ಧರ್ಮವೆನ್ನುವುದು ವ್ಯಕ್ತಿ ಜೀವನದ ಆಂತರಿಕ ಶೋಧದೊಂದಿಗೆ ಪಡೆದುಕೊಳ್ಳುವ ಅರಿವಿನ ಬೆಳವಣಿಗೆ ಎಂಬುದು ಆ್ಯನ್ ಪಾತ್ರದ ಮೂಲಕ ಸಮರ್ಥವಾಗಿ ನಿರೂಪಿತವಾಗಿದೆ. ಈ ವ್ಯಕ್ತಿನಿಷ್ಠ ನೆಲೆಯಲ್ಲಿಯೇ ಧರ್ಮದ ಸಾಮಾಜಿಕ ಆಯಾಮ ಕೂಡ ಸದಾ ಚಿಕಿತ್ಸೆಗೆ ಒಳಗಾಗಬೇಕಾದುದು ಅನಿವಾರ್ಯ, ಅಗತ್ಯ ಎಂಬ ಮಹತ್ವದ ನಿರ್ಧಾರವನ್ನು ಕಾದಂಬರಿ ಪ್ರಕಟಿಸುತ್ತದೆ ಎಂದು ವಿಶ್ಲೇಷಿಸಿದ್ದಾರೆ.

ಈ ಮಹಾಪ್ರಬಂಧದ ಮತ್ತೊಂದು ಮುಖ್ಯ ಅಧ್ಯಾಯವೆಂದರೆ **ಎಂಟನೆಯ ಅಧ್ಯಾಯ**. ಈ ಅಧ್ಯಾಯದಲ್ಲಿ ರೇಖಾರವರು ಮಹಿಳೆ ಮತ್ತು ಪುರುಷನ ನಡುವಿನ ಸಂಘರ್ಷದ ಸ್ವರೂಪದ ಬಗ್ಗೆ ಚರ್ಚಿಸಿದ್ದಾರೆ. ಆಧುನಿಕ ಕನ್ನಡ ಕಾದಂಬರಿಗಳು ಮಹಿಳೆ ಅಸಹಾಯಕತೆಯಿಂದ ಸಂಕಷ್ಟಗಳನ್ನು ಎದುರಿಸುವುದನ್ನು ಮಾರ್ಮಿಕವಾಗಿ ಚಿತ್ರಿಸಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರವೂ ಕೂಡ ಮಹಿಳೆ ಶೋಷಣೆಗೆ ಒಳಗಾಗುವುದು ತಪ್ಪುವುದಿಲ್ಲ. ಕನ್ನಡ ಕಾದಂಬರಿಗಳು

ಮಹಿಳಾ ಸ್ವಾತಂತ್ರ್ಯ ಎಂಬ ಕಲ್ಪನೆಯಿಂದ ರೂಪುಗೊಂಡದ್ದು ಇಲ್ಲ. ಅಧೀನವಾಗಿರುವ ಕಲ್ಪನೆಯೇ ಹೆಚ್ಚು. ನವ್ಯ ಕಾದಂಬರಿಗಳಲ್ಲಿ ಮಹಿಳೆ ತನ್ನ ಆಧುನಿಕ ಪ್ರಜ್ಞೆಯಿಂದ ಪುರುಷನಷ್ಟೇ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸುತ್ತಾಳೆ. ಪುರುಷನ ಅಧೀನದಲ್ಲಿ ಇರುವ ಪ್ರಸಂಗಗಳು ಬಂದರೂ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಿಲ್ಲ. ಹೆಣ್ಣು ಗಂಡಿನ ನಡುವಿನ ಸಂಘರ್ಷಕ್ಕೆ ಕಾರಣ ಅವರವರ ಸ್ವಾತಂತ್ರ್ಯ ಮತ್ತು ಅಸ್ತಿತ್ವದ ಹುಡುಕಾಟ. ದೇಸಾಯಿ ಅವರ ಸಮಕಾಲೀನ ನವ್ಯ ಕಾದಂಬರಿಕಾರರು ಗಂಡಿನ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ಶೋಧಿಸಿದಷ್ಟು ಹೆಣ್ಣಿನ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನು ಶೋಧಿಸಲು ಹೋಗುವುದಿಲ್ಲ. ಹೆಣ್ಣನ್ನು ಭೋಗದ ಸರಕು ಎಂಬಂತೆ ಕಂಡಿರುವುದೇ ಹೆಚ್ಚು. ಈ ದೃಷ್ಟಿಯಿಂದ ದೇಸಾಯಿ ಅವರು ಚಿತ್ರಿಸಿರುವ ಕಾಮಿನಿ,ಡಾಲಿ,ಮಾಧವಿ,ಕುಂದಾ, ರೋಜಿ, ಶಿರೀನ್, ರಾಧಿಕಾ, ಲಿಝಿ, ರೇವತಿ, ರೋಜಾ, ಆ್ಯನ್, ಮುಂತಾದ ಮಹಿಳೆಯರು ಆಧುನಿಕ ಪ್ರಜ್ಞೆಯ ಸಂಕೇತಗಳಾಗಿ ನಿಂತಿದ್ದಾರೆ. ಪುರುಷನ ಎದುರು ತಮ್ಮ ಸಂಬಂಧಗಳಲ್ಲಿ ಸೋಲು ಗೆಲುವಿನ ನಡುವೆ ತಮ್ಮ ಆಯ್ಕೆ ಮತ್ತು ಜೀವನವನ್ನು ಗಂಭೀರವಾಗಿ ಪರಿಗಣಿಸಿ ಬದುಕುವ ಛಲ ಹೊಂದಿದ್ದಾರೆ ಎಂದು ವಿಶ್ಲೇಷಿಸಿದ್ದಾರೆ.

ಈ ಸಮೀಕ್ಷೆಯಲ್ಲಿ ದೇಸಾಯಿಯವರನ್ನು ಕುರಿತು ಬಂದಿರುವ ವಿಮರ್ಶೆಗಳಲ್ಲಿ ಹಾಗೂ ಮಹಾ ಪ್ರಬಂಧಗಳಲ್ಲಿ ದೇಸಾಯಿ ಅವರ ಸಾಹಿತ್ಯವನ್ನು ಕುರಿತು ಶೋಧಿಸುವ ವಿಷಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಯು ನನ್ನ ಮುಂದಿನ ಅಧ್ಯಯನಕ್ಕೆ ಬೇಕಾದ ಮಾರ್ಗಸೂಚಿಗಳನ್ನು ನೀಡುತ್ತವೆಂದು ನಾನು ಭಾವಿಸಿದ್ದೇನೆ. ಈ ಅಧ್ಯಯನಗಳಿಂದ ಭಿನ್ನವಾದ ನೆಲೆಯನ್ನು, ಹೊಸ ಆಲೋಚನೆಗಳನ್ನು, ಮಾರ್ಗಗಳನ್ನು ನಾನು ಕಂಡುಕೊಳ್ಳಲು ಯತ್ನಿಸುತ್ತೇನೆ.

ಅಡಿ ಟಿಪ್ಪಣಿಗಳು :

೧. ಆಮೂರ ಜಿ.ಎಸ್., ೧೯೮೧, ಸಮಕಾಲೀನ ಕಥೆ–ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪುಟ ಸಂಖ್ಯೆ ೫೦.

೨. ಆಮೂರ ಜಿ.ಎಸ್., ೧೯೮೧, ಸಮಕಾಲೀನ ಕಥೆ–ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪುಟ ಸಂಖ್ಯೆ ೫೭.

೩. ಆಮೂರ ಜಿ.ಎಸ್., ೧೯೮೧, ಸಮಕಾಲೀನ ಕಥೆ–ಕಾದಂಬರಿ ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪುಟ ಸಂಖ್ಯೆ ೪೦.

೪. ಗಿರಡ್ಡಿ ಗೋವಿಂದರಾಜ, ೧೯೯೨, ಸಾತತ್ಯ, ಸ್ನೇಹ ಪ್ರಕಾಶನ, ಬೆಂಗಳೂರು ಪುಟ ಸಂಖ್ಯೆ ೧೯೨.

೫. ಆಮೂರ ಜಿ.ಎಸ್., ೨೦೦೦, ಶಾಂತಿನಾಥ ದೇಸಾಯಿ, ಸಾಹಿತ್ಯ ಅಕಾಡೆಮಿ, ನವದೆಹಲಿ, ಪುಟಸಂಖ್ಯೆ ೧೧೯.

೬ ಹೆಗಡೆ ಜಿ.ಎಂ., ೨೦೧೦, ವಿಮರ್ಶಾ ವಿವೇಕ, ರಂಜನಾ ಪ್ರಕಾಶನ, ಧಾರವಾಡ, ಪುಟ ಸಂಖ್ಯೆ ೧೪೮.

೭ ಸರ್ವಮಂಗಳಾ ಚ., ೨೦೦೧, ದೇಸಾಯರ ಕಥಾಪ್ರಪಂಚ – ಮುಕ್ತ ಚಂದ, ಸಂ. ಡಿ.ವಿ. ಪ್ರಹ್ಲಾದ್. ಪುಟ ಸಂಖ್ಯೆ ೪೭

ಅಧ್ಯಾಯ : ನಾಲ್ಕು

ದೇಸಾಯಿ ಅವರ ಸಣ್ಣಕಥೆಗಳಲ್ಲಿ ಸಂಘರ್ಷದ ಸ್ವರೂಪಗಳು

೪.೧. ಪರಂಪರೆಯೊಡನೆ ಮಹಿಳೆಯರ ಸಂಘರ್ಷ : 'ಕ್ಷಿತಿಜ' ಹಾಗೂ 'ಲಗ್ನ ಕಥೆಗಳು'

೪.೨. ಪ್ರೇಮದ ವಿಘಟನೆ, ವೈವಾಹಿಕ ಸಂಬಂಧಗಳ ಸಂಘರ್ಷ : 'ಮಂಜುಗಡ್ಡೆ' ಹಾಗೂ 'ಅವರು, ಕಾರು ಮತ್ತು ನಗು' ಕಥೆಗಳು

೪.೩. ಮನುಷ್ಯನ ಮೂಲ ಪ್ರವೃತ್ತಿ : 'ದುಃಸ್ವಪ್ನ' ಹಾಗೂ 'ಮಧ್ಯಸ್ಥರು' ಕಥೆಗಳು

೪.೪. ಮನೋ ವೈಜ್ಞಾನಿಕತೆಯ ಸಂಘರ್ಷ : 'ತೃಪ್ತ' ಹಾಗೂ 'ನಾನಾನ ತೀರ್ಥಯಾತ್ರೆ' ಕಥೆಗಳು

೪.೫. ಅಸ್ತಿತ್ವವಾದದೊಡನೆ ಸಂಘರ್ಷ : 'ಪ್ರಯಾಣ' ಹಾಗೂ 'ಅಂತರ' ಕಥೆಗಳು

೪.೬. ಬಂಡಾಯದ ಮನೋಭಾವ : 'ಚಂದೂ' ಹಾಗೂ 'ಶಿವೂನ ಬಂಡಾಯ' ಕಥೆಗಳು

೪.೭. ಆಧುನಿಕ ಬೆಳವಣಿಗೆ : 'ನದಿಯ ನೀರು' ಹಾಗೂ 'ಪರಿವರ್ತನೆ' ಕಥೆಗಳು

ಅಧ್ಯಾಯ : ನಾಲ್ಕು

ದೇಸಾಯಿ ಅವರ ಸಣ್ಣಕಥೆಗಳಲ್ಲಿ ಸಂಘರ್ಷದ ಸ್ವರೂಪಗಳು

"ಸಣ್ಣಕಥೆಯೇ ಅಸ್ತಿತ್ವವಾದೀ ಭೂಮಿಕೆಗೆ ತಕ್ಕುದಾದ ಸಾಹಿತ್ಯ ಪ್ರಕಾರ ಎಂದು ನನಗೆ ಅನ್ನಿಸಿದ್ದುಂಟು" ಎಂದು ಹೇಳಿದ ದೇಸಾಯಿ ಅವರ ಈ ಮಾತು ಅವರ ಸಣ್ಣಕಥೆಗಳ ಸಂದರ್ಭದಲ್ಲಿ ವಿಶೇಷ ಮಹತ್ವವಿದೆ. ನವ್ಯ ಮನೋಧರ್ಮದ ಅಭಿವ್ಯಕ್ತಿಗೆ ಅವರ ಕಥೆಗಳು ರುಜುವಾತುಗಳಾಗಿವೆ. ಆಧುನಿಕತೆ, ನವ್ಯತೆ ಮತ್ತು ಮನೋವಿಶ್ಲೇಷಣೆತೆಗೆ ನನ್ನ ಕಥೆಗಳು ಮುಖ್ಯ ಭೂಮಿಕೆಯಾಗಿವೆ ಎನ್ನುತ್ತಲೇ ತಮ್ಮ ಮೊದಲ ಕಥಾಸಂಕಲನ 'ಮಂಜುಗಡ್ಡೆ' (೧೯೫೮) ಕೃತಿಯ 'ಮುನ್ನುಡಿ'ಯಲ್ಲಿ ನವ್ಯತೆಯ / ಆಧುನಿಕತೆಯ (Modernity) ಪ್ರಣಾಳಿಕೆ (Manifesto) ಸ್ವರೂಪಿಯ ಮಾತುಗಳನ್ನು ದೇಸಾಯಿ ಅವರು ಹೇಳಿಕೊಂಡಿದ್ದಾರೆ.

ದೇಸಾಯಿ ಅವರೇ ಹೇಳುವಂತೆ, "ನಾನು ಮೊದಲು ಬರೆಯಲು ಶುರು ಮಾಡಿದ್ದು ಕಾವ್ಯ. ನಾನು ಕಥೆ ಬರೆಯಲು ಶುರುಮಾಡಿದ್ದು ನನ್ನ ೨೧ನೆಯ ವಯಸ್ಸಿನ ನಂತರ. ಇಂಗ್ಲೀಷ್ ಸಾಹಿತ್ಯ, ಯುರೋಪಿಯನ್ ಸಾಹಿತ್ಯವನ್ನು ತುಂಬಾ ಓದಿಕೊಂಡಿದ್ದರೂ ನಾನು ನನ್ನ ಮೊದಲ ಕಥೆ ಬರೆದದ್ದು ಮರಾಠಿಯ ಗಂಗಾಧರ ಗಾಡಗೀಳ್‌ರ 'ಮಾನಸಚಿತ್ರೆ' ಎಂಬ ಕಥಾಸಂಕಲನದ ಕಥೆಗಳನ್ನು ಓದಿದ ನಂತರ. ಕೂಡಲೇ ನಾನು 'ಮಳೆ' ಎಂಬ ಕಥೆ ಬರೆದೆ. ಅದೇ ಲಗ್ನವಾದ ಒಬ್ಬ ಹುಡುಗಿ ತನ್ನ ಮೊದಲಿನ ಪ್ರಿಯಕರನಿಗೆ ಒಂದು ಪತ್ರ ಬರೆದು, ಕೊನೆಗೆ ಹರಿದು ಹಾಕಿ ಅದರ ತುಂಡುಗಳನ್ನು ಮಳೆಯಲ್ಲಿ ಹೊರಗೆ ಚೆಲ್ಲಿ ಬಿಡುತ್ತಾಳೆ. ಇದು ನನ್ನ ಮೊದಲ ಕಥೆ; ಇದು 'ಜಯಂತಿ' ಪತ್ರಿಕೆಯಲ್ಲಿ 'ನವ್ಯತೆ' ಎಂಬ ಉಪಶೀರ್ಷಿಕೆಯೊಡನೆ ಪ್ರಕಟವಾಯಿತು. ಮುಂದೆ ೩–೪ ತಿಂಗಳಿನಲ್ಲಿ ಏಳೆಂಟು ಕಥೆ ಬರೆದೆ. 'ಚಂದೂ', 'ಶೋಭನೆಯ ಹಾದಿ', 'ಹೊಸತಿಲಿದಾಚೆಗೆ', 'ಮಂಜುಗಡ್ಡೆ' ಇತ್ಯಾದಿ. ಇವೆಲ್ಲಾ 'ಜಯಂತಿ', 'ಪ್ರಪಂಚ', 'ಜಯಕರ್ನಾಟಕ', 'ಜನಸೇವಕ' ಪತ್ರಿಕೆಯಲ್ಲಿ 'ನವ್ಯಕಥೆ'ಗಳೆಂದೇ ಪ್ರಕಟವಾದವು" (ಮಂಜುಗಡ್ಡೆ ಕಥಾಸಂಕಲನದ ಮುನ್ನುಡಿ) ಈ ಕಥೆಗಳೆಲ್ಲಾ 'ಮಂಜುಗಡ್ಡೆ' ಕಥಾಸಂಗ್ರಹದಲ್ಲಿವೆ.

ಅದೇ ವೇಳೆಯಲ್ಲಿ ಗಳಗನಾಥರ ಕಾದಂಬರಿಗಳನ್ನು ಓದಿ ಅವುಗಳ ಅನುಕರಣೆಯಲ್ಲಿ ಒಂದರ್ಧ ಕಾದಂಬರಿಯನ್ನು ಬರೆದು, ಕೊನೆಗೆ ಹರಿದು ಹಾಕಿದ್ದಾಗಿ ದೇಸಾಯಿ ಅವರು ಹೇಳಿಕೊಂಡಿದ್ದಾರೆ. (ನಾಡಿಗರ ಸಂದರ್ಶನದಲ್ಲಿ) ಆದರೆ ಅವರು ತಮ್ಮ 'ಮಂಜುಗಡ್ಡೆ' (೧೯೫೩) ಕಥೆಯಿಂದ ಹಿಡಿದು 'ಲಗ್ನ' (೧೯೯೪) ದವರೆಗೆ ಅಂದರೆ ೪೦ ವರ್ಷಗಳ ಕಾಲ ಒಟ್ಟು ಆರು ಕಥಾಸಂಕಲನಗಳು ಮತ್ತು ಸಂಕಲನರೂಪದಲ್ಲಿ ಬಾರದಿರುವ ಕಥೆಗಳೂ ಸೇರಿ ಒಟ್ಟು ೪೯

ಕಥೆಗಳನ್ನು ಬರೆದಿದ್ದಾರೆ. ಕನ್ನಡದ ಪ್ರಮುಖ ನವ್ಯ ಕಥೆಗಾರರಲ್ಲಿ ದೇಸಾಯಿ ಅವರು ಒಬ್ಬರು. ಅವರ ಕಥೆಗಳ ಬಗ್ಗೆ ಅಲ್ಲಲ್ಲಿ ತಕ್ಕಮಟ್ಟಿನ ಚರ್ಚೆ ನಡೆದಿದೆ. (ಮುಖ್ಯವಾಗಿ ಜಿ.ಎಸ್. ಆಮೂರ, ಗಿರಡ್ಡಿ ಗೋವಿಂದರಾಜ, ರಹಮತ್ ತರೀಕೆರೆ ಮುಂತಾದವರು) ಪ್ರಸ್ತುತದಲ್ಲಿ ದೇಸಾಯಿ ಅವರ ಕಥೆಗಳಲ್ಲಿ ಬರುವ ಸಂಘರ್ಷಗಳನ್ನು ಇಲ್ಲಿ ಪರಿಶೀಲಿಸಲಾಗುವುದು. ಈ ಕಥೆಗಳಲ್ಲಿ ಕಾಣಿಸಿಕೊಳ್ಳುವ ಪ್ರೇಮದ ವಿಘಟನೆ, ಬೌದ್ಧಿಕ ಚರ್ಚೆ ಮತ್ತು ಮಾನವೀಯ ಮೌಲ್ಯಗಳ ಅಂಶಗಳನ್ನು ಇಲ್ಲಿ ಗುರ್ತಿಸುವ ಪ್ರಯತ್ನವನ್ನು ಮಾಡಲಾಗುವುದು. ಇಲ್ಲಿ ಅವರ ಎಲ್ಲಾ ಕಥೆಗಳನ್ನೂ ಬಿಡಿಬಿಡಿಯಾಗಿ ಚರ್ಚಿಸಲು ಅಸಾಧ್ಯ. ಆದರೆ ಅವರ ಕಥೆಗಳಲ್ಲಿ ವ್ಯಕ್ತವಾಗುವ ಜೀವಾನುಭವ, ಮನಸ್ಸು, ಮಾನಸಿಕ ಘಟನೆ, ಲೈಂಗಿಕ ಘಟನೆ, ವೈವಾಹಿಕ ಸಂಬಂಧ – ಸಂಘರ್ಷಗಳನ್ನು ಅವರ ಕೆಲವು ಪ್ರಾತಿನಿಧಿಕವಾದ ಕಥೆಗಳ ಮೂಲಕ ಗುರುತಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗುವುದು. ಜೊತೆಗೆ ಅವರ ಕಥೆಗಳಲ್ಲಿ ಕಾಣಿಸಿಕೊಳ್ಳುವ ಅಸ್ತಿತ್ವವಾದೀ ಚಿಂತನೆ, ಅದರ ಜೊತೆಗೆ ಅವರೇ 'ತಮಗೆ ಎಂ.ಎನ್. ರಾಯ್ ಅವರ ಮಾರ್ಕ್ಸ್‌ವಾದವೂ ಇಷ್ಟ' ಎಂಬ ಚಿಂತನೆ, ಮಾನವೀಯ ಮೌಲ್ಯಗಳ ವಿವೇಚನೆ ಇತ್ಯಾದಿ ಅಂಶಗಳನ್ನೂ ಗುರುತಿಸುವ ಯತ್ನವನ್ನು ಇಲ್ಲಿ ಮಾಡಲಾಗುವುದು. ದೇಸಾಯಿ ಅವರ ಸಮಗ್ರ ಕಥಾ ಸಂಕಲನ ಪ್ರಥಮ ಬಾರಿಗೆ ೨೦೦೧ ರಲ್ಲಿ ಪ್ರಕಟಗೊಂಡಿದ್ದು, ನಾನು ನನ್ನ ಅಧ್ಯಯನಕ್ಕೆ ೨೦೧೩ರ ೨ನೇ ಮುದ್ರಣದ ಪ್ರತಿಯನ್ನು ಬಳಸಿಕೊಂಡಿದ್ದೇನೆ.

೪.೧ ಪರಂಪರೆಯೊಡನೆ ಮಹಿಳೆಯರ ಸಂಘರ್ಷ

ಕ್ಷಿತಿಜ ಹಾಗೂ ಲಗ್ನ ಕಥೆಗಳ ಹಿನ್ನೆಲೆಯಲ್ಲಿ

ಕ್ಷಿತಿಜ :

'ಕ್ಷಿತಿಜ' ದೇಸಾಯಿ ಅವರು ೧೯೬೬ರಲ್ಲಿ ಬರೆದ ಕಥೆಯಾಗಿದ್ದು, ೧೯೭೧ ರಲ್ಲಿ ಹೊರ ತಂದ ಅವರ ಎರಡನೇ ಕಥಾ ಸಂಕಲನದ ಶೀರ್ಷಿಕೆಯೂ ಆಗಿದೆ. 'ಕ್ಷಿತಿಜ' ಕಥೆಯ ನಾಯಕಿಯಾದ 'ಮಂದಾಕಿನಿ'ಯು ಸಾಂಪ್ರದಾಯಿಕ ವ್ಯಕ್ತಿತ್ವವನ್ನು ಸುತ್ತಲಿನ ಘಟನೆಗಳ ಮೂಲಕ ಅನಾವರಣಗೊಳಿಸುವ ರೀತಿಯು ಅತ್ಯಂತ ಕಲಾತ್ಮಕತೆಯಿಂದ ಕೂಡಿದೆ. ಸಂಜ್ಞಾ ಪ್ರವಾಹ ತಂತ್ರ, ಸಂಕೇತಗಳು, ವರ್ಣನೆಗಳು ಹಾಗೂ ಸಂಭಾಷಣೆಗಳನ್ನು ದೇಸಾಯಿ ಅವರು ಈ ಕಥೆಯಲ್ಲಿ ಸಮರ್ಥವಾಗಿ ಬಳಸಿದ್ದಾರೆ. ಕಥೆಯು ಸಾಂಪ್ರದಾಯಿಕ ಹಾಗೂ ಆಧುನಿಕ ಮನೋಭಾವಗಳ ನಡುವೆ ನಡೆಯುವ ಸಂಘರ್ಷಗಳನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದೆ.

ಇಪ್ಪತ್ತೆಂಟು-ಇಪ್ಪತ್ತೊಂಬತ್ತು ವರ್ಷದವಳಾದ ಮಂದಾಕಿನಿ ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ಬೆಳೆದಿರುತ್ತಾಳೆ. ಬಿ.ಎ. ಮುಗಿಸಿ ಶಿಕ್ಷಕ ವೃತ್ತಿಗೆ ಸೇರಿದ್ದ ಮಂದಾಕಿನಿ ತನ್ನ ಸಹೋದ್ಯೋಗಿ ದೇಶಪಾಂಡೆಯ ಪ್ರೀತಿಯನ್ನು ನಯವಾಗಿಯೇ ತಿರಸ್ಕರಿಸಿರುತ್ತಾಳೆ. ತನ್ನ ತಾಯಿ ಹಾಗೂ ತಮ್ಮಂದಿರನ್ನು ನೋಡಿಕೊಳ್ಳುವ ಜವಾಬ್ದಾರಿ ಅವಳ ಮೇಲಿರುತ್ತದೆ. ಇವಳ ಕಾರ್ಯಶ್ರದ್ಧೆಯನ್ನು ಗುರುತಿಸಿದ ಮಿಷನರಿಗಳು ಅವಳಿಗೆ ಸ್ಕಾಲರ್‌ಶಿಪ್ಪಿನ ವ್ಯವಸ್ಥೆಯನ್ನು ಮಾಡಿ ಉನ್ನತ ಅಧ್ಯಯನಕ್ಕೆಂದು ಇಂಗ್ಲೆಂಡಿನ ಚೆಜಲ್ ಹರ್ಸ್ಟಿಗೆ ಕಳುಹಿಸಿಕೊಡುವ ತೀರ್ಮಾನ ಕೈಗೊಳ್ಳುತ್ತವೆ. ಇಂಗ್ಲೆಂಡಿಗೆ ಹಡಗಿನಲ್ಲಿ ಪ್ರಯಾಣ ಕೈಗೊಳ್ಳುವ ಮಂದಾಕಿನಿ ಜೀವನದಲ್ಲಿ ಮೊದಲ ಬಾರಿಗೆ ಪಾಶ್ಚಾತ್ಯ ಸಂಸ್ಕೃತಿಯ ಆಘಾತಕ್ಕೆ ಒಳಗಾಗುತ್ತಾಳೆ.

'ಬಿ' ಡೆಕ್ಕಿನ ಮೇಲೆ ಒಬ್ಬಳೇ ನಿಂತು ಮಂದಾಕಿನಿ ಸಮುದ್ರದ ತೆರೆಗಳನ್ನೂ, ಇದ್ದಲ್ಲಿಯೇ ಇದ್ದಂತೆ ಕಾಣುವ ಕ್ಷಿತಿಜವನ್ನು ಎಷ್ಟೋ ಹೊತ್ತು ನೋಡುತ್ತ ನಿಂತಿದ್ದಾಳೆ. 'ಕ್ಷಿತಿಜ'ವು ಇದ್ದಲ್ಲಿಯೇ ಇದ್ದಂತಹ ಮಂದಾಕಿನಿಯ ಸ್ವಭಾವವನ್ನು ಸಾಂಕೇತಿಸಿದರೆ, ಸಮುದ್ರದ ತೆರೆಗಳು ಚಲನೆಯನ್ನು ಸಂಕೇತಿಸುತ್ತವೆ. ಭಾರತೀಯರಾದರೂ ಹಡಗಿನ ಮುಕ್ತ ವಾತಾವರಣವನ್ನು ಅನುಭವಿಸಲು ಬಯಸುವ ಮಿಸ್ ಜೊಸೆಫ್‌ಳ ಮಾತುಗಳಿಗೆ ಮಂದಾಕಿನಿ ಅಷ್ಟಾಗಿ ಪ್ರತಿಕ್ರಿಯಿಸುವುದಿಲ್ಲ. ಡಾ.ಮುಖರ್ಜಿಯವರ ಕಣ್ಣುಗಳು ಮಂದಾಳನ್ನು ನಖಶಿಖಾಂತ ಪರೀಕ್ಷಿಸಿ ಅವಳ ಎದೆಯ ಮೇಲೆ ನೆಟ್ಟಾಗ ಅವಳಿಗೆ 'ಹೇಗೊ' ಅನ್ನಿಸುತ್ತದೆ. ಹ್ಯಾರಿ ಮೆಕಾರ್ಥಿಯ ಪರಿಚಯವಾದ ನಂತರ ಮಂದಾಕಿನಿ ಸ್ವಲ್ಪ ನಿರ್ಭಿಡೆಯಿಂದ ಮಾತನಾಡತೊಡಗುತ್ತಾಳೆ. ಆದರೆ ಹ್ಯಾರಿ ಮೆಕಾರ್ಥಿಯು "ಇಂಡಿಯನ್ನರಲ್ಲಿ ಬಹಳ ಜನರಿಗೆ ಜೀವನ ಉಪಭೋಗಿಸುವುದೇ ಗೊತ್ತಿಲ್ಲವೆಂದು ಕಾಣುತ್ತದೆ. ಸಂಕೋಚ,ನಾಚಿಕೆ, ಅಧೈರ್ಯ- ಮೈ ಚಳಿ ಬಿಟ್ಟು ಆಡುವುದು, ನಗುವುದು, ನಲಿಯುವುದು ಗೊತ್ತೆ ಇಲ್ಲವೇನೋ ಇವರಿಗೆ.. ಜೀವನ ಉಪಭೋಗಿಸಬೇಕು. ಸಮಯ ಮೀರುವ ಮುಂಚೆ" ಎಂಬ ಮಾತುಗಳು ಅವಳನ್ನು ಕೆರಳಿಸುತ್ತವೆ "ಯಾಕೆ? ಎಲ್ಲಿದ್ದರೇನು ಇಂಡಿಯನ್ನರು ಇಂಡಿಯನ್ನರೇ ಅಲ್ಲವೇ? ರೋಮದಲ್ಲಿ ಇಂಡಿಯನ್ನರಂತೆ ಇರಲಿಕ್ಕಾಗದೇ?" (ಪು. ೮೪) ಎಂದು ತೀಕ್ಷ್ಣವಾಗಿ

ಉತ್ತರಿಸುತ್ತಾಳೆ. ಅವಳಿಂದ ಈ ಉತ್ತರವನ್ನು ನಿರೀಕ್ಷಿಸಿರದ ಮೆಕಾರ್ಥಿ ಅವಳನ್ನು ಸಮಾಧಾನ ಪಡಿಸುತ್ತಾನೆ. ಮಂದಾಕಿನಿಯ ಪರಿಚಯ ಮಾಡಿಕೊಂಡಿದ್ದ ಮುಖರ್ಜಿಯು ಮಂದಾಕಿನಿ ಹೇಳಿದಂತೆ ತಾನು ಕೇಳುತ್ತಿರುವುದರಿಂದ ಅವಳೂ ತಾನು ಹೇಳಿದಂತೆ ಕೇಳಬೇಕೆಂದು ಹೇಳುತ್ತಾನೆ. "ನಿನ್ನ ಸಹವಾಸವೆಂದರೆ, ಮದ್ಯಕ್ಕಿಂತ ಹೆಚ್ಚು ಎಕ್ಸೈಟಿಂಗ್, ನಡೆ ನಾವು "ಏ" ಡೆಕ್ಕಿಗೆ ಹೋಗೋಣ... ಆಯ್ ಲವ್ಹ್ ಯು" ಎಂದು ಹೇಳಿದಾಗ ಇದನ್ನು ನಿರೀಕ್ಷಿಸಿರದ ಮಂದಾಕಿನಿ 'I am sorry ನೀವು ನಿಜಕ್ಕೂ ನನ್ನ ಬಗ್ಗೆ ತಪ್ಪು ತಿಳಿದುಕೊಂಡಿದ್ದೀರಿ.. ಗುಡ್ ನಾಯ್ಟ್' ಎಂದು ಹೇಳಿ ಅಲ್ಲಿಂದ ಹೊರಡಲು ಮುಂದಾದಾಗ ಮುಖರ್ಜಿ ಅವಳನ್ನು ಹಿಡಿದೆಳೆಯುತ್ತಾನೆ. ಅವನ ಎಳೆತಕ್ಕೆ ಸಿಲುಕಿ ಸ್ವಲ್ಪ ಜೋಲಿ ತಪ್ಪಿದಂತಾದ ಮಂದಾಕಿನಿ ತನಗೆ ಸಿಕ್ಕ ಮೆಕಾರ್ಥಿಯ ಜೊತೆ "ಅಸಹ್ಯವಾಗುತ್ತಿದೆ. ಪುರುಷರೆಂದರೆ ತೋಳಗಳು !"ನಾನೆಂದರೆ ಯಃಕಶ್ಚಿತ ಹಾದಿಯ ಮೇಲಿನ ಹೆಣ್ಣೆಂದು ತಿಳಿದಿದ್ದಾನೆ ಆತ! ಎಷ್ಟೊಂದು ಧೈರ್ಯವಾಗಿ ಏನೂ ನಾಚಿಕೆಯಿಲ್ಲದೆ ಕೇಳುವುದೆಂದರೇನು? ನಮ್ಮ ದೇಶವಾಗಿದ್ದರೆ ಚಪ್ಪಲಿಯಿಂದ ಹೊಡೆಯುತ್ತಿದ್ದೆ, ಪೋಲೀಸರ ಕೈಯಲ್ಲಿ ಕೊಡುತ್ತಿದ್ದೆ (ಪು. ೮೮) ಎಂಬ ಮಾತುಗಳು ಅವಳ ಆಕ್ರೋಶವನ್ನು, ಜೊತೆಗೆ 'ಮುಕ್ತ ವಾತಾವರಣಕ್ಕೆ' ಹೊಂದಿಕೊಳ್ಳದ ಅವಳ ಮನೋಭಾವವನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ.

ಇದಕ್ಕೆ ಪ್ರತಿಯಾಗಿ ಮೆಕಾರ್ಥಿ ಹೇಳುವ "ದೇವರೇ, ಇಂಥವನ್ನೆಲ್ಲ ಇಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಾರೆಯೇ ನಿಮ್ಮ ದೇಶದಲ್ಲಿ? ಹಾಗಿದ್ದರೆ ಜೀವನ ಭಯಂಕರವಾಗಿರಬೇಕು ಅಲ್ಲಿ. ಅತ್ತಿಂದಿತ್ತ ಇತ್ತಿಂದತ್ತ ಹಾರಾಡುವ ಬೂಟುಗಳು, ಸೀಟಿ ಊದುತ್ತ ಓಡಾಡುವ ಪೋಲೀಸರು" ಎಂಬ ಮಾತುಗಳು ಎರಡು ಸಂಸ್ಕೃತಿಗಳ ನಡುವೆ ಇರುವ ಅಂತರವನ್ನು ಸೂಚಿಸುತ್ತವೆ. ಅಲ್ಲದೆ ಅವರ ದೇಶದಲ್ಲಿ ಇವೆಲ್ಲವೂ ಸಣ್ಣ-ಪುಟ್ಟ ವಿಷಯಗಳಾಗಿದ್ದು, ಅವುಗಳಿಗೆ ಮಹತ್ವ ಕೊಡುವುದಿಲ್ಲವೆಂದು ಹೇಳುತ್ತಾನೆ. "ಆತ್ಮಭಾವನೆಗಳಿಗೆ ತಕ್ಕಂತೆ ನಿರ್ಬಂಧವಿಲ್ಲದೆ ಸ್ಥೈರ್ಯವಾಗಿ ನಡೆಯಲು ಬಿಟ್ಟರೆ ಜನರು ನಾಯಿಗಳಾಗುವರು, ತೋಳಗಳಾಗುವರು. ಆಮೇಲೆ ಜೀವನವೆಂದರೆ..." ಎಂಬ ಮಂದಾಕಿನಿಯ ಮಾತುಗಳು ಅವಳು ಆಧುನಿಕ ಮನೋಭಾವದ ಸ್ವೇಚ್ಛಾಚಾರದ ವಿರುದ್ಧ ಸಂಘರ್ಷಕ್ಕಿಳಿದಿರುವುದನ್ನು ಗುರುತಿಸಬಹುದು. ಮುಂದೆ ಮಂದಾಕಿನಿಗೆ ಪಾಃಲ್ ಲೆಗ್ವಿಯ ಪರಿಚಯವಾದ ನಂತರ ಅವಳ ವರ್ತನೆಗಳಲ್ಲಿ ಬದಲಾವಣೆಗಳಾಗುವುದನ್ನು ಗುರುತಿಸಬಹುದು. ಮೂಲತಃ ಪ್ಯಾರೀಸ್‌ನವನಾದ ಪಾಃಲ್ ಲೆಗ್ವಿ ಪ್ರಸ್ತುತ ಲಂಡನ್ನಿನಲ್ಲಿರುತ್ತಾನೆ. "ನನಗೆ ಇಂಡಿಯಾ ಬಹಳ ಸೇರುವುದು. ವಂಡರ್‌ಫುಲ್ ದೇಶ! ನೆಹರೂ ಬಹಳ ದೊಡ್ಡ ಮನುಷ್ಯ. ವಂಡರ್‌ಫುಲ್ ಮ್ಯಾನ್! ನಿಮ್ಮ ಹೆಸರು ಗೊತ್ತು ಮಾಡಿಕೊಳ್ಳುವ ಸಂತೋಷ ಲಭಿಸಬಹುದೆ ನನಗೆ" ಎಂಬ ಅವನ ವಿನಯ ಪೂರ್ಣ ಪ್ರೇಮಭರಿತ ಮಾತುಗಳು ಅವಳಿಗೆ ಬಹಳ ಸೇರುತ್ತವೆ.

ಲೆಗ್ವಿಯ ಸಹವಾಸದಲ್ಲಿ ಮಂದಾಕಿನಿಯಲ್ಲಿ ಒಮ್ಮೆಲೆ ಎಲ್ಲಿಲ್ಲದ ಚೇತನೆ ಒಸರ ತೊಡಗುತ್ತದೆ. ಪಾಃಲ್ ಲೆಗ್ವಿಯತ್ತ ಧೈರ್ಯವಾಗಿ ಕಣ್ಣು ಹೊರಳಿಸಿ ಕುತೂಹಲದಿಂದ ಅವನ ಅಂಗಾಂಗಗಳ ಮೇಲೆ ದೃಷ್ಟಿಯಾಡಿಸುತ್ತಾಳೆ. ಲೆಗ್ವಿಯ ಸಹವಾಸದಲ್ಲಿ ಮಂದಾಕಿನಿ ಮೆಲ್ಲನೆ ತನ್ನನ್ನು ತಾನು ತೆರೆದುಕೊಳ್ಳಲಾರಂಭಿಸುತ್ತಾಳೆ. "ಮಂದಾಳನ್ನು ಸಂಕೋಚದ ಜೊತೆಗೆ ಆನಂದವೂ ಕಂಕುಳದಲ್ಲಿ

ಕೈಯಿಕ್ಕಿ ನಗಿಸುತ್ತಿತ್ತು. ಲೆಗ್ವಿಯ ಸಹವಾಸದಲ್ಲಿ ಮಾಣಿಕದಂತೆ ಹೊಳೆಯುವ ಪೇಯದ ಮಾದಕತೆ ಇತ್ತು. ಲೆಗ್ವಿಯ ಜೊತೆ ಸೋಪಾದಲ್ಲಿ ಕುಳಿತು ಗೆಳೆಯರಂತೆ ಹರಟೆ ಹೊಡೆಯುವುದು ತಪ್ಪೆಂದು ಭಾಸವಾಗುವುದಿಲ್ಲ. ಸ್ವಲ್ಪ ಸ್ವಚ್ಚಂದವಾಗಿ ಅವನೊಡನೆ ಕೂತು ಮಾತನಾಡಬೇಕೆಂದೆನಿಸುತ್ತದೆ. ಆದರೆ ಈ ಹೊಸ ಅನುಭವಕ್ಕೆ ತನ್ನನ್ನು ತಾನು ಮುಕ್ತವಾಗಿ ತೆರೆದುಕೊಳ್ಳುವುದು ಅವಳಿಗೆ ಸಾಧ್ಯವಾಗುವುದೇ ಇಲ್ಲ. ಗಾಲಾ ಡಿನ್ನರಿನ ವಾತಾವರಣದಲ್ಲಿನ ರಕ್ತ ಕುದಿಸುವ ಉನ್ಮಾದ ಅವಳಲ್ಲಿ ಆತಂಕವನ್ನು ಉಂಟು ಮಾಡುತ್ತದೆ. ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವುದಕ್ಕೆ ಅವಳಿಗೆ ಸಾಧ್ಯವಾಗುವುದೇ ಇಲ್ಲ.

"ಪ್ಲೀಜ್, ಮಿ. ಲೆಗ್ವಿ, ಪ್ಲೀಜ್.. ತಲೆ ತಿರುಗುತ್ತಿದೆ."

"ಸಾಃರಿ, ನಿನ್ನ ಶೂ ನನ್ನ ಕಾಲು ತುಳಿಯುತ್ತಿದೆ.. ನಾನು ಕಾಲು ಸರಿಸಿದಂತೆ ಸರಿಸು ಸಾಕು.."

"ಓಹ್, ನನಗಿದು ಸಾಧ್ಯವಿಲ್ಲ ಬಿಡಿರಿ...."

"ಅಷ್ವೇಕೆ ಮೈ ಬಿಗಿ ಹಿಡಿದಿರುವಿ? Relax Relax... ಸ್ವಲ್ಪ ಸಡಿಲಿಸು..... ಸ್ವಲ್ಪ ಸಮೀಪ ಬಾ... ಇನ್ನಿಷ್ಟು".

"ಬೇಡ ಬಿಡಿರಿ... ಓಹ್ ... ಹೋ... ನಿಜಕ್ಕೂ ತಲೆ ತಿರುಗುತ್ತಿದೆ ತಲೆ" ಎಂದು ಮಂದಾ ಒಮ್ಮೆಲೆ ತಲೆ ಹಿಡಿದುಕೊಂಡಳು (ಪು. ೯೬). ಲೆಗ್ವಿ ತನ್ನ ಸುಸಂಸ್ಕೃತ ನಡತೆ, ಭಾರತದ ಬಗೆಗಿನ ಪ್ರೇಮ ಹಾಗೂ ಆರಾಧನ ಭಾವಗಳಿಂದಾಗಿ ಮಂದಾಕಿನಿಯ ಮನಸ್ಸನ್ನು ಗೆದ್ದರೂ ಕೂಡ ಅವಳ ಸಾಂಪ್ರದಾಯಿಕ ಮನಸ್ಸನ್ನು ಪರಿವರ್ತನೆಗೊಳಿಸುವಲ್ಲಿ ವಿಫಲನಾಗುತ್ತಾನೆ. ತನ್ನ ಪರಂಪರೆಯನ್ನು ಬಿಟ್ಟು ಹೊಸ ಪರಂಪರೆಯೊಡನೆ ಹೊಂದಿಕೊಳ್ಳಲಾಗದೇ ಮಂದಾಕಿನಿ ಸಂಘರ್ಷಕ್ಕೊಳಗಾಗುತ್ತಾಳೆ. 'ಗಾಲಾ ರಾತ್ರಿಯು ಅವಳಿಗೆ ಅವಳ ವ್ಯಕ್ತಿತ್ವದ ನಗ್ನ ಸತ್ಯವನ್ನು ತೋರಿಸಿತ್ತು'. ಹೀಗಾಗಿಯೇ ಅಂದು ರಾತ್ರಿ ಲೆಗ್ವಿ ಅವಳನ್ನು ಅವಳ ಕೇಬಿನ್ನಿಗೆ ಕಳಿಸಿ ಹೋಗುವಾಗ "ಮಿಸ್ ಬೋತೆ , ನಮ್ಮ ಸಂಜೆ ಈ ಪ್ರಕಾರ ಬಂಜೆಯಾಯಿತೆಂದು ನನಗೆ ಭಾರಿ ದುಃಖವಾಗುತ್ತಿದೆ.. Doesn't matter... ನಿಮ್ಮ ಸುಂದರ ಸಹವಾಸಕ್ಕೆ ಥ್ಯಾಂಕ್ಸ್. ನೀವು ನಿಜಕ್ಕೂ ವಂಡರ್‌ಫುಃಲ್. ನಾನು Fare Well ಹೇಳುವುದಕ್ಕೆ ಮುಂಚೆ ಒಂದು ಮುತ್ತು ಕೊಡಬಹುದೇ?" ಎಂದು ವಿನಯದಿಂದಲೂ ಮಮತೆಯಿಂದಲೂ ಕೇಳಿದಾಗಲೂ ಕೂಡ ಅವಳು ಬರೀ ಒಂದು ಕಲ್ಲಿನ ಪ್ರತಿಮೆ... ಬರೇ ಸಂಕೋಚ, ಹೆದರಿಕೆ, ತಲೆಯ ಮೇಲೆ ಕಾಣದ, ಸತ್ತ ಅಪ್ಪನ (ತಾನೆಂದೂ ಅನುಭವಿಸದ) ಭಯಂಕರ ಚಾಟಿ.....! ಇಲ್ಲದಿದ್ದರೆ ಲೆಗ್ವಿಯ ಕೇಬಿನ್ನಿನಲ್ಲಿ ಆತನ ಪ್ರೀತಿಯ ಕೈ ಅವಳನ್ನು ಮೃದುವಾಗಿ ಹಿಡಿದಾಗ ಮರಳಿ ಒಕ್ಕೆಂದು ವಾಂತಿಯಾಗಬೇಕೇ?... (ಪು. ೯೯) ಹೀಗೆ ಆಧುನಿಕ ವಾತಾವರಣಕ್ಕೆ ತನ್ನನ್ನು ತಾನು ತೆರೆದುಕೊಳ್ಳಬೇಕೆಂದರೂ ಅವಳಿಂದ ಅದು ಸಾಧ್ಯವಾಗುವುದಿಲ್ಲ. ಇಂಗ್ಲೆಂಡು ಸಮೀಪಿಸಿದರೂ ಕೂಡ ಮಂದಾಕಿನಿಯಲ್ಲಿ ಉತ್ಸಾಹ ಕಂಡು ಬರುವುದಿಲ್ಲ. "ಇಂಗ್ಲೆಂಡಿಗೆ ಹೋಗಿ ಅಲ್ಲಿರಲು ತಾನು ಅಯೋಗ್ಯಳೆಂಬ ಭಾವನೆ ಅವಳನ್ನು ಮುತ್ತುತ್ತದೆ. ಏನು ಮಾಡುವುದು ಅಲ್ಲಿಗೆ ಹೋಗಿ? ಬರಿಯ ಟೀ.ಡಿ? ಜೀವನದ ರಸವನ್ನು

ಆಸ್ವಾದಿಸುವ ನಾಲಿಗೆಯಿಲ್ಲ, ತುಟಿಗಳಿಲ್ಲ, ಕೈಗಳಿಲ್ಲ.. ಬರಿಯ ಕಣ್ಣಿನಿಂದ ತಿನ್ನುವದಿದೆ?" ಎಂಬ ದ್ವಂದ್ವ ಅವಳನ್ನು ಕಾಡತೊಡಗುತ್ತದೆ. ಹೀಗಾಗಿಯೇ ಮೆಕಾರ್ಥಿ "ಹೇಗಿದೆ ಇಂಗ್ಲೆಂಡು" ಎಂದು ಕೇಳಿದ ಪ್ರಶ್ನೆಗೆ "ಹೇಗೆಂದರೆ, ಭೂತದಂತೆ !" ಎಂದು ಹೇಳಿ ತನ್ನ ನಾಲಗೆ ತಾನೇ ಕಚ್ಚಿಕೊಳ್ಳುತ್ತಾಳೆ. ಒಟ್ಟಾರೆಯಾಗಿ ತನ್ನ ಪರಂಪರಾಗತ ಒಳ ಜಗತ್ತನ್ನು ಬಿಟ್ಟು ಸಾಂಪ್ರದಾಯಿಕ ಚೌಕಟ್ಟನ್ನು ದಾಟ ಹೊರ ಜಗತ್ತಿಗೆ ತನ್ನನ್ನು ತಾನು ಮುಕ್ತವಾಗಿ ತೆರೆದುಕೊಳ್ಳಲಾರದ ಮಂದಾಕಿನಿಯು, ಮೆಕಾರ್ಥಿಯ "ಯಾವುದರ ಬಗ್ಗೆಯೂ ದುಃಖ ವಿಷಾದವಿಲ್ಲ ತಾನೇ?" ಎಂಬ ಪ್ರಶ್ನೆಗೆ "ದುಃಖ! ವಿಷಾದ! ಛೇ.. ಎಲ್ಲವೂ ಇಂಟರೆಸ್ಟಿಂಗ್ ಅಗಿತ್ತು" ಎಂದು ಹೇಳುತ್ತಾ ಅವನ ನಗುವ ಕಣ್ಣುಗಳಲ್ಲಿ ಕಣ್ಣಿಟ್ಟು ನಗುತ್ತಾಳೆ. ತನ್ನ ಅಂತರಂಗದಲ್ಲಿ ನಡೆದಿರುವ ಭಾವನೆಗಳ ಸಂಘರ್ಷ ಹೊರ ಜಗತ್ತಿಗೆ ತೋರದಂತೆ ಮಂದಾಕಿನಿಯು ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನವನ್ನು ಗುರುತಿಸಬಹುದು. ಹೀಗೆ ದೇಸಾಯಿ ಅವರ ಈ ಕಥೆಯು ಎಲ್ಲಾ ರೀತಿಯಿಂದಲೂ ಒಂದು ಮಹತ್ವದ ಕಥೆಯಾಗಿದೆ.

ಲಗ್ನ :

'ಲಗ್ನ' ಕಥೆಯು ದೇಸಾಯಿ ಅವರು ೧೯೬೪ ರಲ್ಲಿ ಬರೆದ ಕಥೆಯಾಗಿದ್ದು ಅಂತರ್ಜಾತಿಯ ವಿವಾಹದ ಸಮಸ್ಯೆಯನ್ನು ಪ್ರಮುಖವಾಗಿ ಚಿತ್ರಿಸಿದೆ. ಕಥೆಯಲ್ಲಿನ ಪ್ರಮುಖ ಪಾತ್ರವಾದ ಲೇಖಾ ಸಾಹಿತ್ಯದ ಓದು, ಚರ್ಚೆಗಳ ಮೂಲಕ ಆಧುನಿಕ ಮನೋಭಾವವನ್ನು ರೂಢಿಸಿಕೊಂಡಿದ್ದು, ತನ್ನ ಅಣ್ಣನ ಮಗನ ಮದುವೆಯ ವಿಚಾರದಲ್ಲಿ ಸಂಪ್ರದಾಯಸ್ಥ ಮನಃಸ್ಥಿತಿಯ ತನ್ನ ಅಣ್ಣನ ವಿರುದ್ಧ ನಡೆಯುವ ಸಂಘರ್ಷದಲ್ಲಿ ಸೋಲೊಪ್ಪಿಕೊಳ್ಳಬೇಕಾಗುತ್ತದೆ.

ಲೇಖಾ ಬೆಳಗಾವಿಯಲ್ಲಿದ್ದ ಡಾ. ರಮೇಶರೊಡನೆ ವಿವಾಹವಾಗಿ ಸಂತೃಪ್ತ ಜೀವನ ನಡೆಸುತ್ತಿರುತ್ತಾಳೆ. ಸುಶಿಕ್ಷಿತೆಯಾಗಿದ್ದ ಲೇಖಾ ಸಾಕಷ್ಟು ಸಾಹಿತ್ಯ ಓದಿಕೊಂಡಿರುತ್ತಾಳೆ. ಅಲ್ಲದೆ ಮನೆಯಲ್ಲಿ ನಡೆಯುತ್ತಿದ್ದ ಸ್ನೇಹಿತರ ಚರ್ಚೆಗಳು ಅವಳ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿರುತ್ತವೆ. ಲೇಖಾಳ ಅಣ್ಣನಾದ ವಾಸೂ ದಾದಾನೇ ಡಾ.ರಮೇಶರೊಂದಿಗೆ ಅವಳ ವಿವಾಹವನ್ನು ಮಾಡಿಸಿರುತ್ತಾನೆ. ಲೇಖಾಳಿಗೆ ತಾನೂ ಎಂದೂ ತನ್ನ ಅಣ್ಣನ ಮಾತನ್ನು ಮೀರಿದ ನೆನಪೇ ಇರುವುದಿಲ್ಲ.

ಲೇಖಾ ಹೈಸ್ಕೂಲಿನಲ್ಲಿದ್ದಾಗ ವಾಸೂ ದಾದಾನ ಲಗ್ನವಾಗುತ್ತದೆ. ಆದರೆ ಇದು ಲೇಖಾಳಿಗೆ ಆಘಾತದ ಸಂಗತಿ. ಏಕೆಂದರೆ ವಾಸು ದಾದಾನ ವಿವಾಹದ ಬಗ್ಗೆ ಯಾರೂ ಲೇಖಾಳೊಂದಿಗೆ ಚರ್ಚೆ ನಡೆಸಿರುವುದಿಲ್ಲ. ಒಂದು ಮಾತನ್ನೂ ಕೂಡ ಹೇಳಿರುವುದಿಲ್ಲ. ಅಪ್ಪ ಹೇಳದೇ ಕೇಳದೇ ಅವನ ವಿವಾಹವನ್ನು ಹುಬ್ಬಳ್ಳಿಯ ಪ್ರಸಿದ್ಧ 'ನರಗುಂದಕರ ವಕೀಲ'ರ ಒಬ್ಬಳೇ ಮಗಳ ಜೊತೆ ನಿಶ್ಚಯ ಮಾಡಿರುತ್ತಾರೆ. ಏಕೆಂದರೆ ಮುಂದೆ ಅವರ ಎಲ್ಲಾ ಆಸ್ತಿಗೆ ವಾಸೂನೇ ಮಾಲೀಕನಾಗುತ್ತಿದ್ದುದರಿಂದ ಅವನನ್ನು ಕೇಳುವ ಅವಶ್ಯಕತೆ ಇಲ್ಲವೆಂಬುದು ಅವರ ಅಭಿಪ್ರಾಯವಾಗಿರುತ್ತದೆ. ಔಪಚಾರಿಕವಾಗಿ ಹುಡುಗಿಯ ಮನೆ ನೋಡಲು ಹೋದಾಗಲೂ ಕೂಡ ಲೇಖಾ ಹೋಗಿರುವುದಿಲ್ಲ. ಮದುವೆಯ ಸಮಯದಲ್ಲೂ ಕೂಡ ಅನಾರೋಗ್ಯದಿಂದ ಲೇಖಾ ಮದುವೆಗೆ ಹೋಗಲಾಗಿರುವುದಿಲ್ಲ, ತನ್ನ ತಾಯಿ ಒಮ್ಮೊಂದೊಮ್ಮೆಲೆ ತೀರಿಕೊಳ್ಳುವವರೆಗೂ

ಲೇಖಾ ತನ್ನ ಅಣ್ಣನಿಂದ ದೂರವೇ ಇರುತ್ತಾಳೆ. ತಾಯಿ ತೀರಿಕೊಂಡ ಮೇಲೆ ಊರಿಗೆ ಬಂದ ದಾದಾ ಮರಳಿ ಲೇಖಾಳ ಪ್ರೀತಿಯ ಅಣ್ಣನಾಗುತ್ತಾನೆ. ಅವರಿಬ್ಬರ ನಡುವೆ ಅತ್ತಿಗೆ ರೋಹಿಣಿಗೆ ಜಾಗವೇ ಇರುವುದಿಲ್ಲ. ಆಗಲೇ ಲೇಖಾಳಿಗೆ ತಿಳಿದದ್ದು-ವಾಸೂ ದಾದ-ವಹಿನಿಯರ ಸಂಸಾರವೆಂದರೆ ವಿರಸದ ಸಂಸಾರವೆಂದು; ಅವರ ಚಿಕ್ಕಪುಟ್ಟ ಜಗಳಗಳು, ವಹಿನಿಯ ಚುಚ್ಚು ಮಾತುಗಳು, ದಾದಾ- ವಹಿನಿಯರ ಮುಖದ ಮೇಲಿನ ಗಂಟುಗಳು ಇವು ಸೂಚಿಸುವ ಕತೆ ಲೇಖಾಳಲ್ಲಿ ಕುತೂಹಲವನ್ನು ಮೂಡಿಸುತ್ತವೆ. ಹೀಗಾಗಿಯೇ ಲೇಖಾ ತನ್ನ ಅಣ್ಣನನ್ನು ಕುರಿತು ಅವನು ಅತ್ತಿಗೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂದು ಆರೋಪಿಸುತ್ತಾಳೆ. ಅದಕ್ಕೆ ವಾಸೂ ದಾದ "ಲೇಖಾ, ಲಗ್ನ ಆಗೇದ ಖರೆ, ಆದರೆ ನಾ ನಾನಾಗೇ ಎಲ್ಲಿ ಮಾಡಿಕೊಂಡೀನಿ?" (ಪು. ೫೩೨) ಎಂದು ವಿಷಾದದಿಂದ ನಗುತ್ತಾನೆ. ಇದು ಲೇಖಾಳ ಮನದಲ್ಲಿ ಅಚ್ಚಳಿಯದೆ ಉಳಿದಿರುತ್ತದೆ.

ಪುಟ್ಟು ಅಂದರೆ ಪ್ರವೀಣ, ವಾಸೂ ದಾದಾನ ಏಕೈಕ ಮಗ ಪುಟ್ಟೂನ ವಿದ್ಯಾಭ್ಯಾಸಕ್ಕೆ ಕೃಷ್ಣಪುರ ಒಳ್ಳೆಯ ಊರಲ್ಲ ಎಂಬ ಕಾರಣಕ್ಕಾಗಿ ವಾಸೂದಾದಾ ಹೆಂಡತಿ ರೋಹಿಣಿಯ ಮನಸ್ಸಿನ ವಿರುದ್ಧವಾಗಿ ಅವನನ್ನು ಬೆಳಗಾವಿಯ ಲೇಖಾಳ ಮನೆಯಲ್ಲಿಟ್ಟಿರುತ್ತಾನೆ. ಲೇಖಾ-ರಮೇಶರೂ ಕೂಡ ಪುಟ್ಟುನನ್ನು ಹಾಗೂ ತಮ್ಮ ಮಗ ರಘೂನನ್ನು ಕೂಡ ಸಮಾನ ಪ್ರೀತಿಯಿಂದ ನೋಡಿಕೊಂಡಿರುತ್ತಾರೆ. ರಘು ಪುಟ್ಟುಗಿಂತ ಮೂರು ವರ್ಷ ಚಿಕ್ಕವನಾಗಿದ್ದರೂ ಕೂಡ ಇಬ್ಬರೂ ತೀರ ಹತ್ತಿರದ ಸ್ನೇಹಿತರಂತೆ ಸಂಬಂಧವಿಟ್ಟುಕೊಂಡಿರುತ್ತಾರೆ. ಹೀಗೆ ಪುಟ್ಟು ಲೇಖಾಳ ಮನೆಯಲ್ಲಿಯೇ ಬೆಳೆದು ದೊಡ್ಡವನಾಗಿರುತ್ತಾನೆ. ಅವನು ಬಿ.ಎ. ಪಾಸಾದ ನಂತರ ಲಾ ಪರೀಕ್ಷೆಯ ಅಭ್ಯಾಸ ಮಾಡುವಾಗ ಡಾ. ರಮೇಶ ಅವರ ಪೇಶೆಂಟಾದ ಜಾಧವ ಸಾಹೇಬರ ಮಗಳಾದ ಪ್ರೇಮಲತಾಳನ್ನು ಪ್ರೀತಿಸುತ್ತಿರುತ್ತಾನೆ. ಅವರಿಬ್ಬರ ಪ್ರೀತಿ ಡಾ. ರಮೇಶರ ದವಾಖಾನೆಯಲ್ಲಿಯೇ ಪ್ರಾರಂಭವಾಗಿರುತ್ತದೆ. ಆದರೆ ಇವರಿಬ್ಬರ ಪ್ರೀತಿಯ ವಿಚಾರ ಲೇಖಾಳಿಗೆ ತಿಳಿಯುವಷ್ಟರಲ್ಲಿ ಅದು ಊರಲ್ಲಿ ಹಳೆಯ ಸುದ್ಧಿಯಾಗಿರುತ್ತದೆ. ಪುಟ್ಟೂನ ಪ್ರೀತಿಯ ವಿಚಾರ ತಿಳಿದಾಗಲಿಂದ ಲೇಖಾಳಿಗೆ ಅವರಿಬ್ಬರ ಪ್ರೀತಿಯ ಬಗ್ಗೆ ಎಲ್ಲಿಲ್ಲದ ಉತ್ಸಾಹ, ಸಹಾನುಭೂತಿ. ತನ್ನ ಅಣ್ಣನ ಲಗ್ನ ಪ್ರೀತಿ ವಿರಹಿತವಾಗಿದ್ದರೆ ಅವನ ಮಗನ ಲಗ್ನ ಪ್ರೀತಿಯುಕ್ತವಾದರೆ ಎಷ್ಟು ಚಲೋ ಎಂಬುದು ಅವಳ ಆಲೋಚನೆ ಆಗಿರುತ್ತದೆ. ಅಲ್ಲದೆ ಹುಬ್ಬಳ್ಳಿಯಲ್ಲಿ ತನ್ನ ಮಾವನ ಮನೆಯಲ್ಲಿಯೆ ಪ್ರಾಕ್ಟೀಸ್ ಸುರು ಮಾಡಿದ ವಾಸೂ ದಾದಾ ಬೆಳಗಾಂವಿಗೆ ಒಂದಿಲ್ಲೊಂದು ಕೆಲಸಕ್ಕೆ ಬರುವುದು ಹೆಚ್ಚಾಗಿರುತ್ತದೆ. ಹೀಗೆ ಬಂದಾಗಲೆಲ್ಲಾ ಅಣ್ಣ-ತಂಗಿಯರ ಮಾತುಕತೆ ಮಧ್ಯ ರಾತ್ರಿ ಎರಡು ಗಂಟೆಯವರೆಗೆ ನಡೆಯುತ್ತಿರುತ್ತದೆ. ಸಿನೇಮ, ಹೋಟೆಲ್, ಶಾಪಿಂಗ್ ಇತ್ಯಾದಿಗಳ ಮೂಲಕ ಅನ್ಯೋನ್ಯವಾಗಿರುತ್ತಾರೆ. ತಮ್ಮಿಬ್ಬರ ಈ ಅನ್ಯೋನ್ಯ ಸಂಬಂಧದಿಂದಾಗಿ ಅಣ್ಣ ತನ್ನ ಮಾತನ್ನು ಕೇಳುತ್ತಾನೆ. ಅದೂ ಪುಟ್ಟೂನ ಸುಖದ ಮಾತು ಎಂದ ಮೇಲೆ ತನ್ನ ಮಾತನ್ನು ಒಪ್ಪಿಕೊಂಡಿಯೇ ಒಪ್ಪಿಕೊಳ್ಳುತ್ತಾನೆ ಎಂಬುದು ಅವಳ ಅಭಿಪ್ರಾಯವಾಗಿರುತ್ತದೆ. ಇದಕ್ಕೆ ತನ್ನ ಅತ್ತಿಗೆ ರೋಹಿಣಿಯ ವಿರೋಧ ಬರಬಹುದೆಂಬುದು ಅವಳ ಆಲೋಚನೆಯಾಗಿರುತ್ತದೆ.

ಆದರೆ ಅವಳಿಗೆ ಗೊತ್ತಿಲ್ಲದ ಒಂದು ಸಂಗತಿ ಎಂದರೆ ದಾದಾ ವಹಿನಿಯರು ಸಂಸಾರದ ಗಾಡಿಯನ್ನು ನೂಕುತ್ತಾ ನೂಕುತ್ತಾ ಈಗ ಎಷ್ಟೋ ಸಮೀಪ ಬಂದಿದ್ದಾರೆ ಎಂಬುದು. ಅವರ ಮನಸ್ಸುಗಳು ಅವರ ದೇಹಗಳಂತೆ ಎಲ್ಲೋ ಒಂದೆಡೆ ಗಟ್ಟಿಯಾಗಿ ಕೂಡಿವೆ ಎಂಬುದು. ತನ್ನಿಂದ ತಾನೇ ನಿರ್ಮಾಣವಾದ ಅವರ ಚಿಕ್ಕ ವರ್ತಲದಲ್ಲಿ ಲೇಖಾಳಿಗೆ ಸ್ಥಾನವಿಲ್ಲವೆಂಬ ಮಾತನ್ನು ಅವಳು ಅರಿಯಳು. ಹೀಗಾಗಿ ಅವಳು ಡಾ.ರಮೇಶ್ "ವಾಸೂ ಎಷ್ಟೆಂದರೂ ಸಂಪ್ರದಾಯಸ್ಥ. ಅವನಿಗೆ, ಅವನ ಹೆಂಡತಿಗೆ ಪುಟ್ಟೂನ ಪ್ರಕರಣದ ಬಗ್ಗೆ ಎಳ್ಳಷ್ಟೂ ಸಹಾನುಭೂತಿ ಅನ್ನೋದು ಇರಲಾರದು... ನೀ ಹೋಗಬ್ಯಾಡಾ – ಇದು ಮುಖ್ಯ ಅಂತರ್ಜಾತಿಯ ಲಗ್ನದ ಪ್ರಶ್ನೆ" (ಪು. ೫೩೦) ಎಂದು ಹೇಳುವ ಮಾತುಗಳನ್ನು ಧಿಕ್ಕರಿಸಿ ಹುಬ್ಬಳ್ಳಿಗೆ ರಘೂನ ಜೊತೆ ಕಾರಿನಲ್ಲಿ ಹೊರಡುತ್ತಾಳೆ.

ಹತ್ತು ವರ್ಷಗಳ ಹಿಂದೆ ಮಾವ ತೀರಿಕೊಂಡಿದ್ದರಿಂದ ಹುಬ್ಬಳ್ಳಿಯ ಮನೆ, ಮಾವನ ದೊಡ್ಡ ಪ್ರಾಕ್ಟೀಸು ಎಲ್ಲವೂ ಅನಾಯಾಸವಾಗಿ ವಾಸೂ ದಾದಾನಿಗೆ ದೊರಕಿರುತ್ತವೆ. ವಾಸೂ ರೋಹಿಣಿಯದು ಈಗ ರಾಜಾ–ರಾಣಿ ಸಂಸಾರ, ಕಾರು–ಹೊಲ–ಪ್ಲಾಟು ಇತ್ಯಾದಿ ಶ್ರೀಮಂತಿಕೆಯ ಎಲ್ಲಾ ಆಯಾಮಗಳೂ ಅವರ ಸಂಸಾರಕ್ಕೆ ಮೂಡಿರುತ್ತವೆ. ಲೇಖಾ ಹುಬ್ಬಳ್ಳಿಗೆ ಹೋದಾಗ ವಾಸೂ ದಾದಾ ಮನೆಯಲ್ಲಿರುವುದಿಲ್ಲ. ರೋಹಿಣಿ ಮನೆಯಲ್ಲಿದ್ದರೂ ಕೂಡ ಹೊರಗೆ ಬರಲು ಹದಿನೈದು ನಿಮಿಷ ತೆಗೆದುಕೊಳ್ಳುತ್ತಾಳೆ. ಆದರೆ ಪುಟ್ಟು ತನ್ನ ಈ ವಿಷಯದ ಬಗ್ಗೆ ಮಾತನಾಡುತ್ತಾ ಅತ್ತ್ಯಾ ಇದು ಸ್ವಲ್ಪ ಕಠಿಣ ಕಾಣಿಸಲಿಕ್ಕೆ ಹತ್ತ್ಯೇದ... ಓಡಿ ಹೋಗೇ ಲಗ್ನ ಮಾಡಿಕೋಬೇಕಿತ್ತು. ಈಗ ಇಲ್ಲದ ತೊಡಕುಗಳು... ಅತ್ಯಾ, ನೀವು ಈ ವಿಷಯ ಸದ್ಯ ಏನೂ ತೆಗೆಯದೆ ಆರಾಮವಾಗಿ ಒಂದೆರಡು ದಿನ ಇದ್ದು ಹೋಗಿ ಬಿಡಿರಿ" ಎಂದು ಹೇಳಿದರೂ ಕೂಡ ಲೇಖಾ ಅದರ ಬಗ್ಗೆ ಆಲೋಚಿಸುವುದಿಲ್ಲ.

ರಾತ್ರಿ ಊಟವಾದ ನಂತರ ಪುಟ್ಟುನನ್ನು ಬಿಟ್ಟು ಉಳಿದವರೆಲ್ಲರೂ ದೊಡ್ಡ ದಿವಾಣಖಾನೆಯಲ್ಲಿ ಕುಳಿತು ಮಾತನಾಡುತ್ತಿದ್ದಾಗ ವಾಸು ದಾದಾನೇ ಪುಟ್ಟುವಿನ ಮದುವೆಯ ವಿಚಾರ ಪ್ರಸ್ತಾಪಿಸುತ್ತಾನೆ. ಪುಟ್ಟುಗೆ ಒಂದೆರಡು ಒಳ್ಳೇ ಸಂಬಂಧಗಳು ಬಂದಿವೆಯೆಂದು ಹೇಳುವಾಗ, ರೋಹಿಣಿ ಕೂಡ ಬಂದಿರುವ ಸಂಬಂಧಗಳ ಬಗ್ಗೆ ತನ್ನ ಸಹಮತವನ್ನು ವ್ಯಕ್ತ ಪಡಿಸುತ್ತಾಳೆ. ಆಗ ಲೇಖಾ ಪುಟ್ಟೂನ ಅಭಿಪ್ರಾಯವನ್ನು ಕೇಳುವಂತೆ ಹೇಳುತ್ತಾಳೆ. ಆದರೆ ಪುಟ್ಟು ಇವರ ಮಾತುಕತೆಯ ಮಧ್ಯೆ ಬರಲು ನಿರಾಕರಿಸುತ್ತಾನೆ. ರಘು ಪುಟ್ಟುನ ಪ್ರೇಮ ಪ್ರಕರಣದ ಬಗ್ಗೆ ತಿಳಿಸುವಂತೆ ಲೇಖಾಳಿಗೆ ಹೇಳುತ್ತಾನೆ. ಲೇಖಾಳಿಂದ ಪುಟ್ಟುನ ಪ್ರೇಮ ಪ್ರಕರಣಗಳ ಬಗ್ಗೆ ತಿಳಿದ ವಾಸು ದಾದಾ "ಅಂತರ್ಜಾತಿಯ ವಿಚಾರ... ಲೇಖಾ ಇದು ಕಠಿಣ ಪ್ರಶ್ನೆ.. ನನ್ನ ಕುತ್ತಿಗೆಗೆ ಕಟ್ಟಬ್ಯಾಡ. ಈ ಪ್ರಶ್ನೆ–ಲೇಖಾ, ನಮ್ಮ ಮಗನ ಪ್ರಶ್ನೆ ನಾವೇ ಬಿಡಿಸ್ತೀವಿ" ಎಂದು ತನ್ನ ಮಾತಿನ ಧಾಟಿಯನ್ನೇ ಬದಲಿಸುತ್ತಾನೆ. ಅಲ್ಲದೇ ಪುಟ್ಟು ಲೇಖಾಳ 'ಮಗನಂತೆ' ಹೌದಾದರೂ ಆತ ತನ್ನ ರೋಹಿಣಿಯ ಮಗ ಎಂಬುದನ್ನು ಮರೀಬೇಡ ಎಂದು ಹೇಳುತ್ತಾನೆ. ರೋಹಿಣಿ ರೂಮಿನಿಂದ ಬರುತ್ತಿರುವುದನ್ನು ಕಂಡು 'ಬಾಯಿ ಮುಚ್ಚಿ ಕೂಡುವಂತೆ' ಲೇಖಾಳಿಗೆ ಆಗ್ರಹಿಸುತ್ತಾನೆ. ವಿಷಯ ತಿಳಿದು ಅಸ್ವಸ್ಥಗೊಂಡ ಹೆಂಡತಿಯನ್ನು

ಜಬರದಸ್ತಿನಿಂದ ಎಬ್ಬಿಸಿ ರಮಿಸುತ್ತಾ ತಮ್ಮ ಬೆಡ್‌ರೂಮಿಗೆ ಕರೆದೊಯ್ಯುತ್ತಾನೆ. ಇದನ್ನು ನಿರೀಕ್ಷಿಸಿಯೇ ಇರದ ಲೇಖಾ ಅಪಮಾನಿತಳಾಗಿ ಬೆಳಗಾವಿಗೆ ಹಿಂತಿರುಗುತ್ತಾಳೆ.

ಪುಟ್ಟುವಿನ ಪ್ರೇಮ ವಿವಾಹಕ್ಕೆ ರೋಹಿಣಿ ಮತ್ತು ವಾಸುದಾದಾ ತಡವಾಗಿ ತಮ್ಮ ಒಪ್ಪಿಗೆಯನ್ನು ಕೊಟ್ಟರೂ ಸಹ, ಆ ಮದುವೆಯಿಂದ ಲೇಖಾಳ ಸಂಸಾರವನ್ನು ದೂರವಿಡುತ್ತಾರೆ. ಇದಕ್ಕೆಲ್ಲ ಲೇಖಾಳೇ ಕಾರಣ "ಪುಟ್ಟುನನ್ನು ಅವರಿಂದ ದೂರ ಮಾಡಲು ಈ ಸಂಚು ಹೂಡಿದ್ದಾಳೆ" ಎಂಬುದು ರೋಹಿಣಿಯ ಅಭಿಪ್ರಾಯವಾದರೆ, "ಲೇಖಾ ತನ್ನ ವಿಶ್ವಾಸಘಾತ ಮಾಡಿದ್ದಾಳೆ. ಅವಳ ನೈತಿಕ ಬೆಂಬಲ ಇರದಿದ್ದರೆ ಪುಟ್ಟು ಅಷ್ಟು ಮುಂದುವರಿಯುವುದು ಶಕ್ಯವೇ ಇರಲಿಲ್ಲ" ಎಂಬುದು ವಾಸು ದಾದಾನ ಅಭಿಪ್ರಾಯವಾಗಿರುತ್ತದೆ (ಪು. ೫೪೬).

ಲಗ್ನ ಕಥೆಯ ಮೌಲ್ಯಗಳ ಘರ್ಷಣೆ ಮೂಲಕ, ತಾನು ಹೇಳಿದಂತೆ ಲೇಖಾ ಕೇಳಬೇಕು, ಮಗ ಕೇಳಬೇಕು ಎಂದು ಭಾವಿಸುವ, ಸರಂಜಾಮಿಶಾಹಿ ಮೌಲ್ಯಗಳನ್ನು ಹೊಂದಿದ್ದ ವಾಸುದಾದಾ ಇಲ್ಲಿ ಜಯಶಾಲಿಯಾಗುತ್ತಾನೆ. ಪರಂಪರೆಯೊಡನೆ ನಡೆದ ಘರ್ಷಣೆಯಲ್ಲಿ ಲೇಖಾ ಸೋಲನ್ನಪ್ಪುತ್ತಾಳೆ. ತನ್ನ ಅಣ್ಣನು ತನ್ನ ಬಗ್ಗೆ ಹೊಂದಿದ್ದ ತಪ್ಪು ತಿಳಿವಳಿಕೆಯನ್ನು ಸರಿಪಡಿಸಲು ಲೇಖಾಳಿಗೆ ಸಾಧ್ಯವಾಗೋದೇ ಇಲ್ಲ.

ಹೀಗಾಗಿ ಕ್ಷಿತಿಜ ಮತ್ತು ಲಗ್ನ ಈ ಎರಡು ಕಥೆಗಳಲ್ಲಿ ಮಹಿಳೆಯರು ಪರಂಪರೆಯನ್ನು ಮೀರಿ ಆಧುನಿಕತೆಯನ್ನು ಮೈಗೂಡಿಸಿಕೊಳ್ಳಲು, ಆಧುನಿಕ ಮನೋಭಾವವನ್ನು ಮೂಡಿಸಲು ಪ್ರಯತ್ನಿಸಿದರೂ ಕೂಡ ಅದರಲ್ಲಿ ವಿಫಲರಾಗುವುದನ್ನು ಎರಡೂ ಕಥೆಗಳು ಸಮರ್ಥವಾಗಿ ಚಿತ್ರಿಸಿವೆ. ಎರಡೂ ಕಥೆಗಳ ನಡುವೆ ಇಪ್ಪತ್ತೆಂಟು ವರ್ಷಗಳ ಅಂತರವಿದ್ದರೂ ಕೂಡ, ಪರಂಪರೆಯನ್ನು ಮೀರಿ ಬದುಕುವುದು ಅಸಾಧ್ಯದ ಮಾತಾಗಿದೆ ಎಂಬುದನ್ನು ದೇಸಾಯಿ ಅವರು ಕಲಾತ್ಮಕತೆಯಿಂದ ವಾಸ್ತವವಾದೀ ನೆಲೆಯಲ್ಲಿ ಚಿತ್ರಿಸಿದ್ದಾರೆ.

೪.೨ ಪ್ರೇಮದ ವಿಘಟನೆ, ವೈವಾಹಿಕ ಸಂಬಂಧಗಳ ಸಂಘರ್ಷ

ಮಂಜುಗಡ್ಡೆ ಹಾಗೂ ಅವರು, ಕಾರು ಮತ್ತು ನಗು ಕಥೆಗಳ ಹಿನ್ನೆಲೆಯಲ್ಲಿ

ಮಂಜುಗಡ್ಡೆ :

'ಮಂಜುಗಡ್ಡೆ' (೧೯೫೩) ದೇಸಾಯಿ ಅವರ ಕಥೆಯೂ ಹೌದು. ಅವರ ಮೊದಲ ಕಥಾಸಂಕಲನ (೧೯೫೮)ದ ಶೀರ್ಷಿಕೆಯೂ ಹೌದು. 'ಮಂಜುಗಡ್ಡೆ' ಕಥೆಯ ನಾಯಕ ಗೌರೀಶ; ಆತ ಬದುಕಿನ ಬಗ್ಗೆ ಕಟ್ಟಿಕೊಂಡ ಕನಸುಗಳು, ನಿರೀಕ್ಷೆಗಳು ಎಲ್ಲವೂ ಕೊನೆಗೆ ಮಂಜುಗಡ್ಡೆ ಕರಗಿ ಹೋಗುವ ರೀತಿಯಲ್ಲಿ ಕರಗಿ ಹೋಗುವುದರ ಚಿತ್ರ ಇಲ್ಲಿ ಬರುತ್ತದೆ. ಪ್ರಜ್ಞಾಪ್ರವಾಹ ತಂತ್ರದ ರೂಪದಲ್ಲಿ ದೇಸಾಯಿ ಅವರು ಬರೆದ ಬಹುಮುಖ್ಯ ಕಥೆಗಳಲ್ಲಿ ಇದೂ ಒಂದು. ಈ ಕಥೆಯ ಆಶಯಗಳು ಮುಂದೆ ಅವರ ಮಹತ್ವದ ನವ್ಯ ಕಾದಂಬರಿ 'ಮುಕ್ತಿ' ಕಾದಂಬರಿಗೆ ಬೇರುಗಳ ರೀತಿಯಲ್ಲಿ ಪ್ರೇರಣೆಗಳನ್ನು ನೀಡಿವೆ.

ಗೌರೀಶ ಯಾವುದೋ ಒಂದು ಆಫೀಸಿನಲ್ಲಿ ಉದ್ಯೋಗಿ. ಅವನಿಗೆ ನೌಕರಿಯಲ್ಲಿ ಬಡ್ತಿಯೂ ಸಿಕ್ಕಿ ಹಣಕಾಸಿನ ಸಮಸ್ಯೆ ಸ್ವಲ್ಪಮಟ್ಟಿಗೆ ಸುಧಾರಿಸಿದೆ. ಲಗ್ನ ಮಾಡಿಕೊಳ್ಳುವ ಬಗ್ಗೆ ಆಲೋಚಿಸುತ್ತಾನೆ. ಆದರೆ ಅದರ ಬಗ್ಗೆಯೂ ಅವನಿಗೆ ಅಂತಹ ಆಸಕ್ತಿಯೂ ಇಲ್ಲ. ಮದುವೆ, ಮಡದಿ, ಮಕ್ಕಳು, ಸಂಸಾರ ಈ ಎಲ್ಲಾ ತಾಪತ್ರಯಗಳು ಅವನ ಮನಸ್ಸಿಗೆ ಇಷ್ಟವಾಗದು. ದೂರದ ಹಳ್ಳಿಯಲ್ಲಿ ತನ್ನ ದೊಡ್ಡಪ್ಪನ ಮನೆಯಲ್ಲಿರುವ ತನ್ನ ಅವ್ವ, ತಮ್ಮ; ಆ ತಮ್ಮನ ವಿದ್ಯಾಭ್ಯಾಸವನ್ನೂ ತನ್ನ ದೊಡ್ಡಪ್ಪನೇ ನೋಡಿಕೊಳ್ಳುತ್ತಿದ್ದಾನೆ. ತನ್ನ ಅವ್ವ ತನಗೆ ಬೈಲಹೊಂಗಲದ ಕುಲಕರ್ಣಿಯವರ ಹೆಣ್ಣನ್ನು ಬಂದು ನೋಡಲು ಕಾಗದ ಬರೆದಿದ್ದಾಳೆ. ಆದರೆ ಆತ ತನಗೆ ಬರುವ ಸಂಬಳದಲ್ಲಿ ತಾನೇ ಖರ್ಚು ಮಾಡಿಕೊಂಡು ಆರಾಮಾಗಿದ್ದಾನೆ. ಬೇಸರವೆನಿಸಿದಾಗ ವೋಡ್‌ಹೌಸ್‌ನ ಕಾದಂಬರಿಗಳನ್ನು ಓದುತ್ತಾನೆ. ವೋಡ್‌ಹೌಸ್‌ನ ಹಾಸ್ಯಭರಿತ ಕಥೆಗಳು ಅವನಿಗೆ ಕಾಲೇಜಿನ ದಿನಗಳಿಂದಲೂ ಬಹಳ ಇಷ್ಟ. ವೋಡ್‌ಹೌಸ್ ಇಪ್ಪತ್ತನೆಯ ಶತಮಾನದ ಇಂಗ್ಲೀಷ್ ಹಾಸ್ಯಭರಿತ ಲೇಖಕ. ಆತ ೧೯೭೫ರಲ್ಲಿ ನಿಧನ ಹೊಂದಿದ.

ಆದರೆ ಗೌರೀಶನಿಗೆ ತನ್ನ ಅವ್ವನ ಪತ್ರದ ಒಕ್ಕಣೆ ನೆನಪಾಗಿ ಅವನಿಗೆ ಮುಖ ಗಂಟಿಕ್ಕುತ್ತದೆ. "ಅಯ್ಯೋ, ಎಂಥ ಜೀವನ! ಲಗ್ನ – ತಾನು ಎಂದೂ ಲಗ್ನ ಆಗಲಾರೆ. ಒಂದು ಹೆಣ್ಣನ್ನು ಮನೆಯಲ್ಲಿ ಸಾಕಿ ದಿನಾಲು ಉಪಭೋಗಿಸಿದರೆ, ಎಂಟೇ ದಿನಗಳಲ್ಲಿ ಜೀವನದ ಬಗ್ಗೆ ತಿರಸ್ಕಾರ ಹುಟ್ಟಬಹುದು! ಲಗ್ನ – ಹೆಣ್ಣು – ಉಪಭೋಗ – ಮಕ್ಕಳು – ಟ್ಯಾಂ – ಪ್ಯಾಂ – ಅವುಗಳ ಸಂರಕ್ಷಣೆ – ಸಾಲೆ – ಕಾಲೇಜು – ಓಹ್ – ಈ ಚಕ್ರ ಬೇಡ. ಆ ಮಕ್ಕಳೂ ಮುಂದೆ ತನ್ನಂತೆ ಆಗಬಹುದು – ನಿಷ್ಪ್ರಯೋಜಕ, ದುಃಖಿ! ಜಗತ್ತಿನಲ್ಲಿ ಮತ್ತೇಕೆ ದುಃಖ – ಸಂತಾಪ – ಜಂಜಾಟ ಹೆಚ್ಚಿಸಬೇಕು? ತನ್ನಿಂದ ಇಂಥ ತಪ್ಪು – ಅಪರಾಧ ಆಗಕೂಡದು. ತಾನೊಬ್ಬನೇ ಜಗತ್ತಿನಲ್ಲಿದ್ದದ್ದು ಸಾಕು. ಏಕೆ ಆ ಮಕ್ಕಳು – ಮರಿ? ಯಾಕೆ ಅವರ ಜೀವನ – ಜಂಜಾಟ? ಲಗ್ನವನ್ನೇ ಆಗಕೂಡದು.... ತಾನೊಬ್ಬನೇ ಇರಬೇಕು. ಆರಾಮಾಗಿ, ನಿಶ್ಚಿಂತೆಯಿಂದ" (ಪು. ೫).

ಹೀಗೆ ಗೌರೀಶನ ಮನಸ್ಸು ದ್ವಂದ್ವ ಪ್ರವೃತ್ತಿಯದು. ಆತ ಲಗ್ನದ ಜವಾಬ್ದಾರಿಯ ಹೊತ್ತುಕೊಳ್ಳಲು ಸಿದ್ಧನಿಲ್ಲ. ಆದರೆ ತನಗೆ ಒದಗಿ ಬರುವ ಸುಖ ಸಂತೋಷಗಳನ್ನು ಮಾತ್ರ ಸ್ವೀಕರಿಸುವ ಆಸೆಯುಳ್ಳವ. ಆತನಿಗೆ ಇಂಗ್ಲೀಷ್ ಸಿನೆಮಾಗಳನ್ನು ನೋಡುವುದರಲ್ಲಿ ಆಸಕ್ತಿ. ಸಿನೆಮಾ ನೋಡುವಾಗ, 'ಹತ್ತಿರ ಒಂದು ಹುಡುಗಿ ಇದ್ದರೆ ಎಷ್ಟು ಚಂದ, ಏನು ಮಜಾ' ಎಂದೆಲ್ಲಾ ಭ್ರಮಿಸುವನು. ತನ್ನ ಆಫೀಸಿನಲ್ಲಿ ಟೈಪಿಸ್ಟ್ ಕೆಲಸ ಮಾಡುತ್ತಿದ್ದ ಕ್ರಿಶ್ಚಿಯನ್ ಹುಡುಗಿಯನ್ನು ಕರೆದರೆ ಆಕೆ ತನ್ನ ಜೊತೆ ಸಿನೆಮಾಕ್ಕೆ ಬರುತ್ತಿದ್ದಳೇನೋ ಅಂದುಕೊಳ್ಳುವನು. ಒಂದು ದಿನ ಆತ ಆಫೀಸಿನ ಅಟ್ಟದ ಮೂಲೆಯಲ್ಲಿ ಆಕೆಯನ್ನು ಜಗ್ಗಿ, ಅಪ್ಪಿ ಮುತ್ತನ್ನಿಕ್ಕುವನು. ಅದಕ್ಕೆ ಆಕೆಯೂ ಸಮ್ಮತಿಸಿದ್ದಳು. ಆದರೆ ಆಕೆ ತನ್ನನ್ನು ಮದುವೆ ಆಗು ಎಂದರೆ, ಆಕೆ ತನ್ನನ್ನು ಕ್ರಿಶ್ಚಿಯನ್ ಆಗು ಎಂದು ಹಠ ಹಿಡಿದರೆ ಎಂದು – ಭಯಪಟ್ಟು ಆತ ಆಕೆಯಿಂದ ದೂರವಾಗುತ್ತಾನೆ. ಕೊನೆಗೆ ಒಬ್ಬನೇ ಸಿನೆಮಾಕ್ಕೆ ಹೊರಟು ಕ್ಯೂನಲ್ಲಿ ನಿಲ್ಲುತ್ತಾನೆ.

"ಅವನ ಮುಂದೆ ಪಾರ್ಸಿ ಮುದುಕಿಯೊಬ್ಬಳು ನಿಂತಿದ್ದಳು. ಅವಳನ್ನು ನೋಡಿ ಪಾಪವೆನಿಸಿತು ಗೌರೀಶನಿಗೆ : ಈ ಮುದುಕಿಗೆ ಇನ್ನೂ ಸಿನೆಮಾ ನೋಡುವ ಹುಚ್ಚು, ಅದೂ ಒಬ್ಬಳೇ ಬಂದಿದ್ದಾಳೆ. ಮಕ್ಕಳು – ಗಂಡ ಯಾರೂ ಇರಲಿಕ್ಕಿಲ್ಲ. ಈ ತೋಳಿಲ್ಲದ ಬ್ಲಾವುಜೇಕೆ ಹಾಕುತ್ತಾರೋ ಇವರು? ಅಸಹ್ಯವಾದ ತೋಳುಗಳು – ಜೋತುಬಿದ್ದಂಥ ತೊಗಲು... ಅವಳು ಸೀರೆಯಿಲ್ಲದೆ ಹೇಗೆ ಕಾಣಬಹುದು ಎಂದು ಗೌರೀಶ ತನ್ನ ಮನಃಚಕ್ಷುವಿನ ಮುಂದೆ ಕಲ್ಪಿಸಿದ. ಅವನು ಸ್ವಲ್ಪ ನಡುಗಿದ! ಓ ಡಿಯರ್, ಇದು ಜೀವನವೇ! ಅವನು ಲಗ್ನವಾದ ಹೆಣ್ಣು ಮುಂದೆ ಇದೇ ಸ್ಥಿತಿಗೆ ಬಂದರೆ, ಅವಳೊಡನೆ ಸಂಸಾರ ಮಾಡುವುದು ಹೇಗೆ? ದಿನಾಲು ಅವಳೊಡನೆ ಇರುವುದು ಹೇಗೆ? – ಛೆ!" (ಪು. ೬) ಎಂದು ಗೌರೀಶನ ಮನಸ್ಸಿನಲ್ಲಿ ಆಗುತ್ತಿರುವ ಮಾನಸಿಕ ತಲ್ಲಣಗಳನ್ನು ದೇಸಾಯಿ ಅವರು ಹೀಗೆ ಸ್ಫುಟವಾಗಿ ವಿಶ್ಲೇಷಿಸುತ್ತಾರೆ.

ಗೌರೀಶ ಸಿನೆಮಾ ಟೀಕೆಟ್ ತೆಗೆದುಕೊಂಡು ಸಿನೆಮಾ ಪೋಸ್ಟರ್ ನೋಡುತ್ತಾ ನಿಲ್ಲುತ್ತಾನೆ. ಅದು 'ಸೀಜರ್ ಆಂಡ್ ಕ್ಲಿಯೋಪಾತ್ರ' ಸಿನೆಮಾ. ಅದರಲ್ಲಿ ಹೀರೋಯಿನ್ ಪಾತ್ರ ಮಾಡಿರುವವಳು ವಿವಿಯನ್ ಲೇನ್. ಅದನ್ನು ಕಂಡು ಅವನಿಗೆ ಸಿನೆಮಾ ಚೆನ್ನಾಗಿರಬಹುದು, ಬಂದಿದ್ದು ಸಾರ್ಥಕವಾಯ್ತು ಎಂದು ಖುಷಿಪಡುತ್ತಾನೆ. ಬ್ರಿಟೀಷ್‌ನ ಇಂಗ್ಲಿಷ್ ಫಿಲಂಗಳಲ್ಲಿ ಆಕೆ ಪ್ರಸಿದ್ಧ ನಟಿ; ಅಸಾಧಾರಣ ಸುಂದರಿ. ಆಕೆ ೧೯೬೭ರಲ್ಲಿ ಕಾಯಿಲೆಯಿಂದ ನಿಧನ ಹೊಂದಿದಳು. ವಿವಿಯನ್ ಲೇನ್ ಗೌರೀಶನಿಗೆ ತನ್ನ ಕಾಲೇಜಿನ ಪ್ರೇಯಸಿ ಕಲ್ಪಲತೆಯಂತೆ ಕಾಣುತ್ತಿದ್ದಳು. ಆಕೆ ತನ್ನ ಕಲ್ಪಲತೆಯೇ ಎಂದು ಆತ ತನ್ನ ಮನಸ್ಸಿನಲ್ಲಿ ಅಂದುಕೊಂಡು ಆನಂದಿಸಿದ. ಆದರೆ ಕಲ್ಪಲತೆ ಗೌರೀಶನನ್ನು ಅಂದು ನಿರಾಕರಿಸಿದ್ದಳು. ಆಗ ಆತನಿಗೆ ಆಕೆಯನ್ನು ಸುಮ್ಮನೆ ಬಿಡಬಾರದು ಅನ್ನಿಸಿತ್ತು.

"ಆಕೆಗೆ ಸ್ವಲ್ಪವೂ ಕರುಣೆಯಿದ್ದಿಲ್ಲವೇ ಅವಳಿಗೆ? ಅವಳ ಮನಸ್ಸೆಂದರೆ ಹಿಮದ ಮುದ್ದೆ – ಮಂಜುಗಡ್ಡೆಯಾಗಿತ್ತೇ? ಈ ಜಗತ್ತಿನಲ್ಲಿ ಯಾವುದಾದರೂ ಹೆಣ್ಣಿನ ಬಗ್ಗೆ ಪ್ರೇಮ ಎಂಬ ಭಾವನೆ ನನ್ನ ಹೃದಯದಲ್ಲಿ ಮೂಡಿದ್ದರೆ, ಅದು ಕಲ್ಪಲತೆಯ ಬಗ್ಗೆ! ಅವಳ ಸಲುವಾಗಿ ಏನು ಬೇಕಾದರೂ

ಮಾಡಲು ಸಿದ್ಧನಿದ್ದೆ. ಮನೆ – ಮಠ ಎಲ್ಲ ಬಿಟ್ಟು, ಅವಳ ದಾಸನಾಗಲು ಒಂಟಿ ಕಾಲಮೇಲೆ ತಯಾರಾಗಿದ್ದೆ. ಅವಳ ಬೆನ್ನು ಹತ್ತಿ ಎರಡು ವರ್ಷ ಬಿ.ಎ. ನಪಾಸಾದೆ... ತ್ಯಾಗ! ಐ.ಎ.ಎಸ್. ಪರೀಕ್ಷೆಗೂ ಕೂಡಲಾಗಲಿಲ್ಲ – ವಯಸ್ಸಾಯಿತೆಂದು ಒಳ್ಳೆಯ ನೌಕರಿ ದೊರೆಯಲಿಲ್ಲ – ಎಲ್ಲ ಇವಳ ಸಲುವಾಗಿ! ನಾನು ಇವಳ ದೆಸೆಯಿಂದ ಕೊರಗಿದ್ದೇನೆ, ದುಃಖ ಪಟ್ಟಿದ್ದೇನೆ – ಇವಳು ಮಾತ್ರ ನನ್ನ ದುಃಖ – ಕೊರಗು –ಕೂಗು ಎಲ್ಲವುಗಳನ್ನು ಕಡೆಗಣಿಸಿ ಮೂಗು ಮೇಲೆ ಮಾಡಿ ಹೋದಳು. ಎರಡು ವರ್ಷ ನನಗೆ ತಲೆಕೆಡಿಸಿದಳು." (ಪು. ೭)

ಕಲ್ಪಲತೆ ಗೌರೀಶನನ್ನೇನೂ ಪ್ರೀತಿಸಿರಲಿಲ್ಲ. 'ಹುಚ್ಚು ವಿಚಾರಗಳಿಗೆ ಎಡೆಗೊಡಬೇಡ' ಎಂದು ಆಕೆ ಅವನಿಗೆ ಹೇಳಿದಾಗ ಆತನಿಗೆ ಅವಳನ್ನು 'ಬಲತ್ಕಾರ ಮಾಡಬೇಕಾಗಿತ್ತು' ಅನ್ನಿಸಿತ್ತು. ಆದರೆ ಅಂದು ಕ್ಯೂನಲ್ಲಿ ಸಿನೆಮಾಕ್ಕೆ ಬಂದು ನಿಂತಿದ್ದ ಕಲ್ಪಲತೆ ಗೌರೀಶನ ಕಣ್ಣಿಗೆ ಬೀಳುತ್ತಾಳೆ. ಮದುವೆಯಾದ ಗಂಡನ ಜೊತೆ ಆಕೆ ಸಿನೆಮಾಕ್ಕೆ ಬಂದಿದ್ದಾಳೆ. ಈಗಾಗಲೇ ಆಕೆಗೆ ಒಬ್ಬ ಗಂಡು ಮಗು ಆಗಿದೆ. ಅದಕ್ಕೆ ಆಕೆ 'ಗೌರೀಶ' ಎಂದು ಗೌರೀಶನ ಹೆಸರನ್ನೇ ಇಟ್ಟಿದ್ದಾಳೆ. ಆಕೆ ತನ್ನ ಗಂಡನನ್ನು ಗೌರೀಶನಿಗೆ ಪರಿಚಯ ಮಾಡಿಕೊಡುತ್ತಾಳೆ. ಕಲ್ಪಲತೆ ಕೊನೆಗೆ ಹಣವಿದ್ದವನನ್ನೇ ಲಗ್ನವಾಗಿದ್ದಳು. ಜಾಣೆ ಅವಳು! ಪ್ರೇಮ – ಪ್ರೇಮವೆಂದು ಯಾವ ಬಾನಗಡಿಯಲ್ಲಿ ಆಕೆ ಬೀಳಲಿಲ್ಲ. ಪ್ರೇಮದ ದಂಡೆಯ ಮೇಲೆ ಅಡ್ಡಾಡಿದರೂ, ಅದರ ನೀರಿನಲ್ಲಿ ಕಾಲಿರಿಸಲಿಲ್ಲ. ಗೌರೀಶನನ್ನು ದುಃಖಿತನನ್ನಾಗಿ ಮಾಡಿ, ತನಗೆ ಏನೂ ಆಗದಿದ್ದಂತೆ ಮದುವೆಯಾಗಿ ನಿಶ್ಚಿಂತೆಯಿಂದ ಇದ್ದಳು ಆಕೆ.

ಗೌರೀಶನಿಗೆ ಆಗ ಆಕೆಯನ್ನೂ, ಆಕೆಯ ಗಂಡನನ್ನೂ ಕಂಡಾಗ ತನಗೆ ಆದ ಅವಮಾನವನ್ನು ಸಹಿಸಿಕೊಂಡು ಸಿನೆಮಾಕ್ಕೆ ಹೋಗಲಾಗದೆ ತನ್ನಲ್ಲಿದ್ದ ಸಿನೆಮಾ ಟೀಕೆಟನ್ನು ಬೇರೆಯವರಿಗೆ ಸಿಕ್ಕಷ್ಟು ಹಣಕ್ಕೆ ಮಾರಿ ಹೊರಟು ಹೋಗುತ್ತಾನೆ. ಕೊನೆಗೆ ಅವನಿಗೆ ತನ್ನ 'ಹೃದಯವನ್ನು ಅಖಂಡ ಮಂಜುಗಡ್ಡೆ ಮಾಡಿದರೇನೆ ಈ ಜಗತ್ತಿನಲ್ಲಿ ಮೋಜು!' ಎನ್ನಿಸುತ್ತದೆ. ನಾಳೆ ತನ್ನ ತಾಯಿಗೆ ಬೈಲಹೊಂಗಲದ ಕುಲಕರ್ಣಿಯವರ ಹೆಣ್ಣು ಸುಂದರವಾಗಿದ್ದರೆ ನಾನು ಒಪ್ಪಿದೆ, ಇಲ್ಲದಿದ್ದರೆ ಇಲ್ಲ; ಹೌದು, ಲಗ್ನವಾಗುವುದಾದರೆ ಸೌಂದರ್ಯವೇ ಮುಖ್ಯ. ಅದು ಇಲ್ಲದಿದ್ದಂತೆ ಹಣ – ಉಪಭೋಗ! ಎಂಬ ತೀರ್ಮಾನಕ್ಕೆ ಬರುತ್ತಾನೆ. ಆಗ ಅವನ ಮನಸ್ಸಿನಲ್ಲಿ ಒಂದು ವಿಚಿತ್ರ ರೀತಿಯ ಸಮಾಧಾನ ಕಾಣಿಸುತ್ತದೆ. ತನ್ನ ಹೃದಯ ಮತ್ತು ಮನಸ್ಸಿಗೆ ನೆಮ್ಮದಿಯನ್ನು ತಂದುಕೊಳ್ಳುತ್ತಾನೆ. ಮುಂಬೈ ನಗರದ ಜೀವನದ ಹಿನ್ನೆಲೆಯಲ್ಲಿ ಮೌಲ್ಯಗಳ ಶೋಧನೆ, ತರುಣನೊಬ್ಬನ ಆಂತರಿಕ ದರ್ಶನ ಇವುಗಳನ್ನು ಸಂಜ್ಞಾಪ್ರವಾಹ ತಂತ್ರದಲ್ಲಿ ಈ ಕಥೆಯಲ್ಲಿ ದೇಸಾಯಿ ಅವರು ಸಮರ್ಥವಾಗಿ ಕಾಣಿಸಿದ್ದಾರೆ.

ಅವರು, ಕಾರು ಮತ್ತು ನಗೆ :

ದೇಸಾಯಿ ಅವರ 'ಮಂಜುಗಡ್ಡೆ' ಕಥೆಯ ವಸ್ತುವನ್ನು ಬಹುಮಟ್ಟಿಗೆ ಹೋಲುವ 'ಅವರು, ಕಾರು ಮತ್ತು ನಗೆ' ದಂಡೆ (೧೯೭೧) ಕಥಾ ಸಂಕಲನದ ಕಥೆಯನ್ನು ಕೂಡ ಇಲ್ಲಿ ವಿವರಿಸಿ, ವಿಶ್ಲೇಷಿಸಬಹುದಾಗಿದೆ. 'ಮಂಜುಗಡ್ಡೆ' ಕಥೆಯಲ್ಲಿನ ಮೂರು ಪಾತ್ರಗಳಾದ ಗೌರೀಶ, ಕಲ್ಪಲತೆ ಮತ್ತು ಆಕೆಯ ಗಂಡ ಪಾಟೀಲನ ಅಂತರಂಗಗಳ ಸ್ವಭಾವಗಳನ್ನು ಹಿಡಿದಿಟ್ಟಂತೆಯೇ, ಈ

'ಅವರು, ಕಾರು ಮತ್ತು ನಗೆ' ಕಥೆಯಲ್ಲಿ 'ನಗು' ಕೇಂದ್ರ ಬಿಂದುವಾದರೂ, ಮೂವರು ಪಾತ್ರಗಳಾದ ಶಕುಂತಲೆ, ಪ್ರೊ. ಪ್ರಭು ಮತ್ತು ಮಾಧವರಾಯ ಅವರ ಸ್ವಭಾವಗಳಿಗೆ ಅನುಗುಣವಾಗಿ ಅವರವರ ಪ್ರತಿಕ್ರಿಯೆ, ಶಕುಂತಲೆಯ ಉತ್ಸಾಹ, ಪ್ರಭುವಿನ ಲವಲವಿಕೆ, ಮಾಧವರಾಯನ ನಿರ್ಲಿಪ್ತತೆ ಇವುಗಳನ್ನು ಹಿಡಿದಿಡಲಾಗಿದೆ. ಆದರೆ 'ಮಂಜುಗಡ್ಡೆ' ಕಥೆಗಿಂತ ಇದು ಹೆಚ್ಚು ಪರಿಪಕ್ವವಾದ ಕಥೆಯಾಗಿದೆ.

ದೇಸಾಯಿ ಅವರು ಅರವತ್ತರ ದಶಕದ ಕೊನೆಯಲ್ಲಿ ಬರೆದ ಕಥೆ ಇದು. ಅವರು ಅಂದರೆ ಇಲ್ಲಿ ಮೂವರು ಮತ್ತು ಅಂಬ್ಯಾಸಿಡರ್ ಕಾರು. ಮತ್ತೆ ಆ ಮೂವರ ನಡುವೆ ಹೊಮ್ಮುವ, ಚಿಮ್ಮುವ ನಗು. ಅದರಲ್ಲೂ ನಗುವಿನ ಕ್ಷಣಗಳನ್ನು, ಅಲೆಗಳನ್ನು ದೇಸಾಯಿ ಅವರು ಭಾಷೆಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ಶಕುಂತಲ ಮತ್ತು ಆಕೆಯ ಗಂಡ ಮಾಧವರಾಯ ಅಂಬ್ಯಾಸಿಡರ್ ಕಾರಿನಲ್ಲಿ ಕೂತು ಮಾರ್ನಿಂಗ್ ಸಿನೆಮಾ ನೋಡಲು ಹೊರಟಿರುತ್ತಾರೆ. ಅವರ ಡ್ರೈವರ್ ಶಂಕರ್ ಕಾರನ್ನು ಚಾಲನೆ ಮಾಡುತ್ತಿದ್ದಾನೆ. ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿರುವ ಫಿಲಾಸಫಿ ಪ್ರೊ. ಪ್ರಭುವನ್ನು ಗಮನಿಸಿದ ಶಕುಂತಲೆ ಕಾರನ್ನು ಪಕ್ಕಕ್ಕೆ ನಿಲ್ಲಿಸಲು ಡ್ರೈವರ್‌ಗೆ ಹೇಳುತ್ತಾಳೆ. ಕಾರು ಪಕ್ಕಕ್ಕೆ ಗಕ್ಕನೆ ನಿಲ್ಲುತ್ತದೆ. ಆಕೆ ಒಳಗೆ ಕೂತಲ್ಲಿಂದಲೇ ಕಾರಿನ ಬಾಗಿಲು ತೆಗೆದು ಹಿಂದಕ್ಕೆ ಬಾಗಿ ಪ್ರೊ. ಪ್ರಭುವನ್ನು ಗಮನಿಸುತ್ತಾಳೆ. ಅವರು ಪ್ರಭುವೇ ಎಂದು ಖಾತ್ರಿಯಾದಾಗ ಕೆಳಗೆ ಇಳಿದು ಅವರನ್ನು ಮಾತನಾಡಿಸುತ್ತಾಳೆ. ಆತನನ್ನು ತನ್ನ ಗಂಡ ಮಾಧವರಾಯನಿಗೂ ಪರಿಚಯ ಮಾಡಿಕೊಡುತ್ತಾಳೆ.

ಒಂದು ಕ್ಷಣದ ಮಟ್ಟಿಗೆ ಕಾಲವನ್ನು ಸ್ಥಗಿತಗೊಳಿಸಿ ಮೂವರು ವ್ಯಕ್ತಿಗಳ ಒಳಜೀವನ ಹಾಗೂ ಹೊರಜೀವನ ಎರಡನ್ನೂ ಒಟ್ಟಿಗೆ ತೋರಿಸುವ ಕಥೆಯ ತಂತ್ರ ನವೀನವಾಗಿದೆ, ಯಶಸ್ವಿಯಾಗಿದೆ. ಪ್ರೊ. ಪ್ರಭು ಶಕುಂತಲೆಯ ಹಳೆಯ ಸಹೋದ್ಯೋಗಿ. ಆದರೆ ಆಕೆ ಮುಂಬೈಯಲ್ಲಿ ಎಕ್ಸ್‌ಪೋರ್ಟ್ – ಇಂಪೋರ್ಟ್ ಬಿಸಿನೆಸ್‌ನಲ್ಲಿ ತೊಡಗಿರುವ ಮಾಧವರಾಯನನ್ನು ಮದುವೆಯಾಗಿ ಹೋಗಿರುತ್ತಾಳೆ. ಈಗ ಪ್ರೊ. ಪ್ರಭು ತನ್ನ ಉದ್ಯೋಗದಲ್ಲಿ ನಿರಾಸಕ್ತಿ ತಾಳಿ ಮನೆಯಲ್ಲಿಯೇ ಲೆಕ್ಚರಿಂಗ್ ಮಾಡುತ್ತಾ, ವಿದ್ಯಾರ್ಥಿನಿಯರಿಗೆ ಪ್ಲೇಟೋ ಫಿಲಾಸಫಿಯ ಬಗ್ಗೆ ಮಾರ್ಗದರ್ಶನ, ಸಲಹೆ ನೀಡುತ್ತಾ ಕಾಲ ಕಳೆಯುತ್ತಿದ್ದಾನೆ. ಆದರೆ ಪ್ರಭು ಧೈರ್ಯ ಮಾಡಿದ್ದರೆ ಶಕುಂತಲಳನ್ನು ಮದುವೆಯಾಗಬಹುದಾಗಿತ್ತು.

ಶಕುಂತಲೆ ತನ್ನ ಗಂಡನಿಗೆ ಆತನನ್ನು ಪರಿಚಯ ಮಾಡಿಕೊಟ್ಟು ನಕ್ಕಳು. ಆಗ "ಮೂವರೂ ಹಾ ಹಾ ಹಾ... ಹಾ ಹಾ ಹಾ... ನಕ್ಕರು". ಆಗ ಪ್ರೊ. ಪ್ರಭುಗೆ ಆ ದಂಪತಿಗಳ ಸ್ವಭಾವಗಳನ್ನು ಕಂಡು ಅವನ ಮನಸ್ಸಿನಲ್ಲಿ ಮೂಡುವ ಮೌನದ ಪ್ರತಿಕ್ರಿಯೆಗಳನ್ನು ದೇಸಾಯಿ ಅವರು ಕಥೆಯಲ್ಲಿ ಹೀಗೆ ಭಾಷೆಯಲ್ಲಿ ಹಿಡಿದಿಡುತ್ತಾರೆ :

"ನಗು, ನಗು, ನಗು... ಎಷ್ಟು ಚೆನ್ನಾಗಿ ನಗ್ತೀಯಾ, ಶಕುಂತಲಾ? ಅವನ ಕೂದಲು ಸ್ವಲ್ಪ ತೆಳಗಿದ್ದರೇನು? ಹೊಟ್ಟೆ ದಪ್ಪಾಗಿದೆಯಲ್ಲ; ಅವನ ತುಟಿಗಳ ತುದಿಗೆ ಗೆರೆಗಳು ಮೂಡಿದ್ದರೇನು, ಅವನ ಕಾರಿಗೆ ಗೆರೆಗಳು ಬಿದ್ದಿಲ್ಲವಲ್ಲ; ಅವನಿಗೆ ವಯಸ್ಸಾಗಿದ್ದರೇನು? ಹಾ ಹಾ ಹಾ... ಅವನ ಡ್ರಾಯಿವ್ಹರ್ ತರುಣನಿದ್ದಾನಲ್ಲ – ಹೀಗಿದ್ದಾಗ ನಗಬಾರದೇಕೆ? ಸುಖದ ಮಹಾಬಲೇಶ್ವರವನ್ನೇರಿ

ನಿಂತಾಗ ಆನಂದದಿಂದ ಹೆಮ್ಮೆಯಿಂದ ನಗಬಾರದೇಕೆ? ನಗು. ಬಲ್ಲ ಇತಿಹಾಸವನ್ನು ಪಾಟಿಯ ಮೇಲಿನ ಅಕ್ಷರಗಳನ್ನು ಅಳಿಸಿದಂತೆ ಅಳಿಸಿ ಚೊಕ್ಕಾಗಿ ಶುಭ್ರವಾಗಿ ಝುಳಝುಳವಾಗಿ ನಗು... ಹಾ ಹಾ ಹಾ... ಧಬಧಬೆಯಂತೆ ನಗು. ಶಕುಂತಲಾ, ಎಲ್ಲವನ್ನೂ ಮಹಾಪೂರದಲ್ಲಿ ಮುಳುಗಿಸಿ, ಮುಂದೆ ಕುಲುಕುಲು ಹರಿಯುವ ನದಿಯಂತೆ ನಗು... ಅದೇ ಜೀವನ, ಅದೇ ಸುಖ – ಅದೇ ಮುಕ್ತಿ, ಅದೇ ಪ್ರಗತಿ!... ನೀನು ನಿನ್ನ ತೋಳ್ದೆರೆದು ನನ್ನನ್ನು ಆಲಂಗಿಸಲು ಬಂದಿ. ನೀನು ಬಾ ಎಂದು ಹೇಳುವುದೇ ತಡ ನಾ ಬಂದೇ ಬಿಡುವೆ ಎಂದು ತಿಳಿದಿ. ನಿನ್ನ ಬುದ್ಧಿಮತ್ತೆಯ ಪ್ರಭಾವಕ್ಕೆ ನನ್ನಂಥ ಮಳ್ಳ ತತ್ವಜ್ಞಾನದ ಪ್ರಾಧ್ಯಾಪಕ ಒಳಗಾಗದೆ ಮತ್ತರಾಗಬೇಕು ಎಂದು ಆತ್ಮವಿಶ್ವಾಸದಿಂದ ಮೆರೆದಿ. ಜನರಿಗೆಲ್ಲ ನಾನು ನಿನ್ನ ಪ್ರಿಯಕರ, ನಿನ್ನ ಭಾವಿ ಗಂಡ ಎಂಬ ಭಾವನೆ ಹುಟ್ಟಿಸುವಂತೆ ವರ್ತಿಸಿದಿ. ಕೊನೆಗೆ ನಾನೇ ಸ್ಪಷ್ಟವಾಗಿ, ನಿಷ್ಠುರವಾಗಿ 'ದಯವಿಟ್ಟು ನಿನ್ನ ನಾಟಕ ಸಾಕು ಮಾಡು, ಶಕುಂತಲಾ, ನೀನು ತಿಳಿದಂತೆ, ನೀನು ಬಯಸಿದಂತೆ ನನ್ನ ಭಾವನೆಗಳಿಲ್ಲ' ಎಂದು ಹೇಳಬೇಕಾಯಿತು. ಆಗಲೂ ನೀ ನಕ್ಕಿ. ಭೂತಕಾಲವಿರಲಿ, ವರ್ತಮಾನವಿರಲಿ, ಪ್ರೀತಿಯಿರಲಿ, ದುಃಖವಿರಲಿ, ಪ್ರಿಯಕರನಿರಲಿ, ಗಂಡನಿರಲಿ – ನಕ್ಕರೆ ತೀರಿತು" (ಪು. ೧೭೫).

ಶಕುಂತಲಳ ನಗು ಪ್ರಭುಗೆ ಹಿಡಿಸದು. ಅದು ಅವನಿಗೆ ನೋವನ್ನು ತರುತ್ತದೆ. ಹೀಗೆ ಪ್ರೊ. ಪ್ರಭು ಆಕೆಗೆ ತನ್ನ ಭಾವನೆಗಳನ್ನು ನಿಷ್ಠುರವಾಗಿ ಹೇಳಿ ಆಕೆಯನ್ನು ಮದುವೆಯಾಗಲೂ ನಿರಾಕರಿಸಿದವನು. ಆಕೆಯ ಬಗ್ಗೆ ಅವನು ಹೊಂದಿರುವ ಅಭಿಪ್ರಾಯಗಳು ವ್ಯಕ್ತಿನಿಷ್ಠವಾದವು. ಮಾಧವರಾಯ ಆತನನ್ನು ಮುಂಬೈಗೆ ಬಂದಾಗ ತನ್ನ ಮನೆಗೆ ಬರುವಂತೆ ಆಹ್ವಾನಿಸುತ್ತಾನೆ. ಆಗ ಪ್ರೊ. ಪ್ರಭು ಆ ದಂಪತಿಗಳಿಬ್ಬರನ್ನೂ ತನ್ನ ಮನೆಗೆ ಚಹಾಕ್ಕೆ ಆಹ್ವಾನಿಸುತ್ತಾನೆ. ಕೊನೆಗೆ ಆಕೆಯೊಬ್ಬಳೆ ಆ ಸಂಜೆ ಅವನ ಮನೆಗೆ ಚಹಾಗೆ ಹೋಗುತ್ತಾಳೆ. ಆದರೆ ಮಾಧವರಾಯನಿಗೆ "ಅವರಿಬ್ಬರಲ್ಲಿ ಏನಾದರೂ ಸಂಬಂಧವಿತ್ತೆ?" ಎಂದು ಅನುಮಾನ. ಮಾಧವರಾಯ ಪ್ರಭುಗೆ ಇನ್ನೂ ಮದುವೆ ಆಗಿಲ್ಲದೆ ಇರುವುದರ ಬಗ್ಗೆ ಅವನನ್ನು ಪ್ರಶ್ನಿಸುತ್ತಾನೆ. ಆತ ತಾನು ಲಗ್ನವಾಗುವುದಾದರೆ "ಒಬ್ಬ ನಿಗ್ರೋ ಹಬನಿ ಹುಡುಗಿಯನ್ನು, ಮುಂಬೈಯಲ್ಲಿದ್ದರೆ ಹೇಳಿ" ಎಂದು ಅವರನ್ನೇ ಚುಡಾಯಿಸುತ್ತಾನೆ. ಆಗ ಮಾಧವರಾಯ "ಮುಂಬೈಯಲ್ಲಿ ಸಿಗದಿದ್ದರೆ ಇಂಪೋರ್ಟ್ ಮಾಡಿ ತಂದುಕೊಡುವೆ" ಎಂದು ಅವನನ್ನು ರೇಗಿಸುತ್ತಾನೆ. ಅದರಿಂದ ಮಾಧವರಾಯ ಅವನು ಲಗ್ನವಾಗುವ ಆಸೆಯನ್ನೇ ಬಿಟ್ಟಂತಿದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಶಕುಂತಲಾ ಆ ಸಂಜೆ ಪ್ರೊ. ಪ್ರಭು ಮನೆಗೆ ಹೋದಾಗ ತನ್ನ ಮತ್ತು ಪ್ರಭುವಿನ ನಡುವೆ ಹಿಂದೆ ನಡೆದ ಹಳೆಯ ಸಂಗತಿಗಳನ್ನು ಕೆದಕಬಾರದು ಅಂದುಕೊಂಡು ಬರುತ್ತಾಳೆ. ಆದರೂ ಹಳೆಯ ನೆನಪುಗಳು ಆಕೆಯಲ್ಲಿ ಮರುಕಳಿಸುತ್ತವೆ :

"ಹಿಂದೆ – ಆತನ ಇಂಥ ಸರ್ಕಸ್ಸುಗಳನ್ನು ನೋಡಿ ಆನಂದಿಸುವುದರಲ್ಲಿಯೇ ಎರಡು ವರ್ಷ ಕಳೆದೆ. ಜೀವನವೆಂದರೆ ಬುದ್ಧಿಯ ಕತ್ತರಿಯಿಂದ ಕಟಕಟ ಕತ್ತರಿಸಿ ಒಗೆಯುವ ಕಾಗದದ ತುಂಡು ಎಂಬಂತೆ ಅವನ ಜೊತೆ ನಾನೂ ವರ್ತಿಸಿದೆ. ನಾನು ತನ್ನ ಬೆನ್ನು ಹತ್ತಿದ ಹುಡುಗಿಯೆಂದು ಆತನಿಗೆ ತುಂಬ ಹೆಮ್ಮೆ. ಕೊನೆಗೆ ಅವನ ಸ್ವಾಭಿಮಾನ ತೃಪ್ತಿಗೊಂಡ ನಂತರ, ನನ್ನನ್ನು ಎಳೆದೆಳೆದು

ಮೈಮೇಲೆ ಬೀಳುವಂತೆ ಮಾಡಿ ಕೊನೆಗೆ ಮಡಿವಂತನಂತೆ, 'ಛೇ ನೀನು ತಿಳಿದುಕೊಂಡದ್ದೇ ಬೇರೆ – ನಾನು ತಿಳಿದುಕೊಂಡದ್ದೇ ಬೇರೆ' ಎಂದು ದೂಡಿಬಿಟ್ಟ. ಜವಾಬ್ದಾರಿಯ ಬಿಸಿ ಹತ್ತಿದೊಡನೆ ಕಾಲು ಕಿತ್ತು ಪಲಾಯನ ಮಾಡಿದ... ಇವ ಓಡಿದ ಎಂದು ನಾನೇಕೆ ನಿರಾಶಳಾಗಬೇಕು? ಇಂಥ ಪೆದ್ದನನ್ನು ನಾನಾದರೂ ಎಲ್ಲಿ ಲಗ್ನ ಮಾಡಿಕೊಳ್ಳುವವಳಿದ್ದೆ? ಮಾತಾಡಲಿಕ್ಕೆ, ಈ ವಿಷಯ ಆ ವಿಷಯ ಚರ್ಚಿಸಲಿಕ್ಕೆ, ಹಾಳು ಹರಟೆ ಕೊಚ್ಚಲಿಕ್ಕೆ ಒಳ್ಳೆಯ ಹುಡುಗ! ಆದರೆ ನನ್ನ ಗಂಡನೆಂದು? – ಛೆ, ನನ್ನ ಕನಸಿನಲ್ಲಿಯೂ ಎಣಿಸದ ಮಾತು... ನಾನೆಂದರೆ ಗಂಡಿಗಾಗಿ ಬಾಯ್ಬಿಡುವ ಹೆಣ್ಣೆಂದು ಜನರ ಎಣಿಕೆಯಾಗಿತ್ತು... ಈಗ ನಾನು ಒಬ್ಬಳೇ ಅವನ ಮನೆಗೆ ಹೋದರೆ ಅರ್ಥ ಹಚ್ಚುವವರೇ. ಈಕೆ ಮದುವೆಯಾದರೂ ಇವಳ ಪ್ರೇಮ ವ್ಯವಹಾರ ಮೊದಲಿನಂತೆಯೇ ಇದೆ ನೋಡಿರಿ ಅಂತಾರೆ... ಅವಳಿಗೆ ಈಗ ಹೆಚ್ಚಿನ ಸ್ವಾತಂತ್ರ್ಯ ಇದೆ ಎನ್ನುವರು... ಆದರೂ ಹೋಗಿ ನೋಡಲು ಅಡ್ಡಿಯಿಲ್ಲ" (ಪು. ೧೭೬).

ಹೀಗೆ ಶಕುಂತಲ ತನ್ನ ಮನಸ್ಸಿನಲ್ಲಿ ಆಂತರಿಕವಾಗಿ ಮತ್ತು ಸಾಮಾಜಿಕವಾಗಿ ಎದುರಿಸುವ ಸಮಸ್ಯೆಗಳನ್ನು ಎದುರಿಸಿ ಅವನ ಮನೆಗೆ ಹೋಗಿ ಬರುತ್ತಾಳೆ. ಆದರೆ ಪ್ರೊ. ಪ್ರಭುಗೆ ಪ್ಲೇಟೋನ 'ಪ್ಲೆಟಾನಿಕ್ ಲವ್' ಪರಿಕಲ್ಪನೆಯಲ್ಲಿ ಮಾತ್ರ ನಂಬಿಕೆ ಇದ್ದಂತಿದೆ. ಹಾಗಾಗಿ ಆತ ಬರೀ ಆಕೆಯ ಜೊತೆ ಪ್ರೇಮವನ್ನು ಬಯಸುತ್ತಾನೆಯೇ ಹೊರತು ಮದುವೆಯನ್ನಲ್ಲ. ಆದರೆ ಆಕೆ ಮಾತ್ರ ಮದುವೆಯ ವ್ಯವಸ್ಥೆಯನ್ನು ಅಪೇಕ್ಷಿಸಿದವಳು. ಕೊನೆಯಲ್ಲಿ ಆ ದಂಪತಿಗಳಿಬ್ಬರೂ ಪ್ರೊ. ಪ್ರಭುಗೆ 'ನೀವು ಮದುವೆಯಾದರೆ ಲಗ್ನಪತ್ರಿಕೆ ಕಳಿಸಿ' ಎಂದು ಹಾರೈಸಿ ನಕ್ಕು ಹೊರಟು ಹೋಗುತ್ತಾರೆ. ಅವರ "ನಗು, ನಗು, ನಗು – ಕಾರಿನ ಒಳಗೆ ಹೊರಗೆ ನಗು"ತುಂಬಿಕೊಳ್ಳುತ್ತದೆ. ಮಾಧವರಾಯ ಶಕುಂತಲಾಳ ಜೊತೆ ಕು ಕು ಕು ಎಂದು ನಗು ವ್ಯಕ್ತಪಡಿಸುತ್ತಾನೆ. ಜೀವನದ ಆಳಕ್ಕೆ ಇಳಿಯದ ಶಕುಂತಲಾ, ಬೌದ್ಧಿಕ ನಿರ್ಲಿಪ್ತತೆಯನ್ನು ಬಿಟ್ಟುಕೊಡದ ತತ್ವಶಾಸ್ತ್ರದ ಪ್ರಾಧ್ಯಾಪಕ ಪ್ರಭು, ತೃಪ್ತ ಮನೋವೃತ್ತಿಯ ಮಾಧವರಾಯ ಇವರ ವ್ಯಕ್ತಿತ್ವಗಳನ್ನು ಕಥೆಗಾರ ಇಲ್ಲಿ ಯಶಸ್ವಿಯಾಗಿ ಕಟ್ಟಿಕೊಡುತ್ತಾರೆ. ಈ ವ್ಯಕ್ತಿಗಳ ಆಂತರಿಕ ಸಂಬಂಧಗಳು ಇಲ್ಲಿ ಅವರವರ ವ್ಯಕ್ತಿನಿಷ್ಠ ನೆಲೆಯಲ್ಲಿ ಬಿಚ್ಚಿಕೊಳ್ಳುತ್ತವೆ. ಬೌದ್ಧಿಕತೆ, ಮಡಿವಂತಿಕೆ ಹಾಗೂ ಗಂಭೀರ ಬದುಕಿನ ಬಗೆಯ ಗಾಂಭೀರ್ಯತೆ ಇಲ್ಲಿ ಶೋಧನೆಗೆ ಒಳಗಾಗುತ್ತವೆ. ಒಟ್ಟಾರೆ ಈ ಎರಡೂ ಕಥೆಗಳ ಸಾಮಗ್ರಿಯಲ್ಲಿ ಒಂದು ಬಗೆಯ ಹೋಲಿಕೆ ಇದ್ದರೂ ಈ ಕಥೆಯು ಆ ಕಥೆಗಿಂತ ಹೆಚ್ಚು ಪರಿಪಕ್ವವಾಗಿದೆ.

೪.೩ ಮನುಷ್ಯನ ಮೂಲ ಪ್ರವೃತ್ತಿ
ದುಃಸ್ವಪ್ನ ಹಾಗೂ ಮಧ್ಯಸ್ಥರು ಕಥೆಗಳ ಹಿನ್ನೆಲೆಯಲ್ಲಿ

ದುಃಸ್ವಪ್ನ :

ದೇಸಾಯಿ ಅವರ 'ದುಃಸ್ವಪ್ನ' ಹಾಗೂ 'ಮಧ್ಯಸ್ಥರು' ಕಥೆಗಳೆರಡರಲ್ಲೂ ಮನೋವೈಜ್ಞಾನಿಕ ಆಸ್ಥೆಗಳು ಕಂಡು ಬರುತ್ತವೆಯಾದರೂ ಕೂಡ 'ದುಃಸ್ವಪ್ನ' ಕಥೆಯು 'ಮಧ್ಯಸ್ಥ'ರಿಗಿಂತ ಹೆಚ್ಚು ಸಂಕೀರ್ಣತೆಯನ್ನು ಒಳಗೊಂಡಿದೆ.

ದುಃಸ್ವಪ್ನ ಕಥೆಯಲ್ಲಿನ 'ರಾಜಾ' ಮುಂಬಯಿಯಲ್ಲಿ ಒಂದು ದಿನಪತ್ರಿಕೆಯ ಪತ್ರಕರ್ತನಾಗಿರುತ್ತಾನೆ. ಜಯಶ್ರೀ ಅದೇ ಕಛೇರಿಯಲ್ಲಿ ಕೆಲಸ ಮಾಡುತಿದ್ದು, ಇಬ್ಬರೂ ಪ್ರೀತಿಸುತ್ತಿರುತ್ತಾರೆ. ಎರಡು ವರ್ಷಗಳಿಂದ ಪ್ರೀತಿಸುತ್ತಿದ್ದ ಅವರು ಲಗ್ನವಾಗಬೇಕೆಂದುಕೊಂಡಿರುತ್ತಾರೆ. ಆದರೆ ರಾಜಾನ ಬದುಕಿನಲ್ಲಿ ನಡೆದ ಒಂದು ಘಟನೆಯಿಂದ ಅವರ ಬದುಕು ಸಮಸ್ಯೆಯಲ್ಲಿ ಸಿಲುಕುತ್ತದೆ. ಈ ಘಟನೆಯಿಂದಾಗಿ ರಾಜಾನಿಗೆ ತಾನು ಜಯಶ್ರೀಯನ್ನು ಸದ್ಯ ಮದುವೆಯಾಗುವುದು ಬೇಡ ಎಂದೆನಿಸಿ ಮುಂದಿನ ಮೂರು ವರ್ಷಗಳ ಕಾಲವಾದರೂ ತಮ್ಮ ಮದುವೆಯನ್ನು ಮುಂದೂಡಬೇಕೆಂದು ಜಯಶ್ರೀಯೊಂದಿಗೆ ಹೇಳುತ್ತಾನೆ. ಆದರೆ ರಾಜನ ಮನಸ್ಸಿನ ಮಂಗ, ಮಂಗತನಗಳ ಬಗ್ಗೆ ಅರಿವಿದ್ದ ಜಯಶ್ರೀ ಪುಣ್ಯಕ್ಕೆ ಏನೂ ಗಡಿಬಿಡಿಯಾಗದಿರುವುದೇ ಹೆಚ್ಚು ಎಂದು ಹೇಳುತ್ತಾಳೆ. ಜಯಶ್ರಿಯ ಮಾತುಗಳಿಂದ ಮನುಷ್ಯನ ಮೂಲ ಪ್ರವೃತ್ತಿಗಳಲ್ಲಿ ಒಂದಾದ ಲೈಂಗಿಕತೆಯಲ್ಲಿ ರಾಜನು ತೀವ್ರ ಆಸಕ್ತಿ ಹೊಂದಿರುವುದನ್ನು ಗುರುತಿಸಬಹುದಾಗಿದೆ. ರಾಜಾನ ಪ್ರಕಾರ ಸೆಕ್ಸ್‌ನ್ನು ಕಂಟ್ರೋಲ್ ಮಾಡಬಹುದಾಗಿದೆ. ಆದರೆ ಅದೇ ಸೆಕ್ಸ್ ಅವನು ತನ್ನ ಮತ್ತು ಜಯಶ್ರಿಯ ಮದುವೆಯನ್ನು ಮುಂದೂಡುವ ಆಲೋಚನೆಗೆ ಕಾರಣವಾಗಿರುತ್ತದೆ.

ತನ್ನ ತಾಯಿ ಸೀರಿಯಸ್ಸಾಗಿರುವ ವಿಷಯ ತಾರಿನ ಮೂಲಕ ತಿಳಿದಾಗ ರಾಜಾ ತಕ್ಷಣ ಊರಿಗೆ ಹೊರಡುತ್ತಾನೆ. "ತನ್ನ ತಾಯಿ ಸತ್ತಿರಬಹುದು, ಆದರೆ ರಾಮಣ್ಣ ಸತ್ಯವನ್ನು ಮುಚ್ಚಿಡುವ ಪ್ರಯತ್ನ ಮಾಡಿರಬೇಕು" ಎಂಬ ಆಲೋಚನೆಯಲ್ಲಿಯೇ ಊರಿಗೆ ಬರುತ್ತಾನೆ. ಸ್ಟೇಷನ್ನಿಗೆ ಬಂದ ಕೂಡಲೇ ರಾಮಣ್ಣ ಅವನನ್ನು ಹುಡುಕುತ್ತ ಬಂದು "ಕಮಲತ್ತೆಯನ್ನು ಹಾಸ್ಪಿಟಲಿನಲ್ಲಿ ಇಟ್ಟೀವಿ. ಅರ್ಧಾಂಗ ವಾಯು ಆಗೇದ. ಬಹುಶಃ ಬ್ರೇನ್ ಹ್ಯಾಮರೇಜ್ ಆಗಿರಬೇಕು ಅಂತ ಡಾಕ್ಟರ್ ಹೇಳ್ಯಾರ" (ಪು. ೩೫೦) ಎಂದು ಸತ್ಯವನ್ನೇ ಹೇಳುತ್ತಾನೆ. ಕಮಲಮ್ಮ ರಾತ್ರಿ ಸಂಡಾಸಿಗೆ ಹೋದಾಗ ಅಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ. ಅರ್ಧ ಗಂಟೆಯಾದರು ಹೊರ ಬರದೇ ಇದ್ದಾಗ, ನೆರೆಮನೆಯ ಜನರ ಸಹಾಯದೊಂದಿಗೆ ಬಾಗಿಲನ್ನು ಮುರಿದು ಆಸ್ಪತ್ರೆಗೆ ಸೇರಿಸಿರುತ್ತಾರೆ. ಸದ್ಯ ಏನೂ ನಕ್ಕೀ ಹೇಳಲಿಕ್ಕೆ ಬರೋದಿಲ್ಲ. ನಾವು ಮಾಡೋವಷ್ಟು ಪ್ರಯತ್ನ ಮಾಡಿದ್ದೇವೆ. ತೊಂಬತ್ತಾರು ತಾಸು ಹೋದ ನಂತರವಷ್ಟೇ ಪಾಜಿಟಿವ್ಹ್ ಏನಾದರೂ ಹೇಳಲಿಕ್ಕೆ ಸಾಧ್ಯ. ಸಮೀಪದ ಸಂಬಂಧಿಕರು ಯಾರಾದರೂ ಇದ್ದರೆ ಅವರನ್ನು ಕರೆಸಿರಿ. ಅಂಜುವ ಕಾರಣವಿಲ್ಲ ಎಂದು ವೈದ್ಯರು ಹೇಳಿದ ಕಾರಣಕ್ಕೆ ರಾಜಾನಿಗೆ ಸುದ್ದಿ ಕೊಟ್ಟು ಕರೆಸಿಕೊಂಡಿರುತ್ತಾರೆ. ತಾಯಿಯ ಸದ್ಯದ ಆರೋಗ್ಯದ ವಿಷಯವನ್ನು ಕೇಳಿ ಏನೇನೆಲ್ಲ ವಿಚಾರ ಮಾಡಿ, ಮರಣದ ಸತ್ಯವನ್ನೇ

ಎದುರಿಸಲು ಸಿದ್ಧವಾಗಿದ್ದ ರಾಜಾನ ಮನಸ್ಸು ತನ್ನ ಜಡತ್ವವನ್ನೂ, ಬಿಗುವನ್ನೂ ಕಳೆದುಕೊಂಡು ಹಗುರವಾಗುತ್ತದೆ. ತಾಯಿಯಿದ್ದ ರೂಮಿನ ಒಳ ಹೋದ ರಾಜಾ ತನ್ನ ತಾಯಿಯನ್ನು ಮಾತನಾಡಿಸಲು ಪ್ರಯತ್ನಿಸುತ್ತಾನೆ. ಪ್ರಯತ್ನ ಪೂರ್ವಕವಾಗಿ ಕಣ್ಣು ತೆರೆದು "ಆಂ" ಅನ್ನಲು ಯತ್ನ ಮಾಡುತ್ತಾಳೆ. ಮುಖ ಸ್ವಲ್ಪ ಡೊಂಕಾಗಿರುತ್ತದೆ. ಹಲ್ಲು ಹೋಗಿ ಅರ್ಧ ಬೊಚ್ಚಾದ ಬಾಯಿ ಸ್ವಲ್ಪ ತಿರುವಾಗಿರುತ್ತದೆ. ಬಲಗೈ ಸಂವೇದನೆಯನ್ನು ಕಳೆದುಕೊಂಡಿರುತ್ತದೆ. ರಾಜಾ ಮತ್ತೆ "ಹೇಗಿದೆ" ಎಂದು ಕೇಳಿದ್ದಕ್ಕೆ ಅವಳು ತೊದಲು ನುಡಿದಂತಾಗುತ್ತದೆ. ಅವಳು ತನ್ನ ಹೆಸರು ಕರೆದಿರಬೇಕು ಎಂದು ರಾಜಾನಿಗೆ ಭಾಸವಾಗುತ್ತದೆ. ರಾಜಾನ ಮನಸ್ಸಿನಲ್ಲಿ ಯಾವುದೋ ಒಂದು ಸೂತ್ರ ಹರಿದಂತಾಗಿ ಅಸ್ವಸ್ಥಗೊಳ್ಳುತ್ತಾನೆ. ಡಾಕ್ಟರನ್ನು ಭೇಟಿಯಾಗಿ ತನ್ನ ತಾಯಿಯ ಆರೋಗ್ಯದ ಬಗ್ಗೆ ತಿಳಿದುಕೊಂಡ ರಾಜಾ ನಾಲ್ಕು ದಿನಗಳು ರಜೆಯನ್ನು ಬೇಡಿ ಆಫೀಸಿಗೆ ತಾರು ಕಳುಹಿಸಿ ತನ್ನ ತಾಯಿಯ ಆರೈಕೆಯಲ್ಲಿ ನಿರತನಾಗುತ್ತಾನೆ.

ನಾಲ್ಕೂ ದಿನಗಳೂ ಕೂಡ ಊಟ, ಸ್ನಾನ ಮಾಡಲು ಅಕ್ಕನ ಮನೆಗೆ ಹೋಗಿ ಬರುತ್ತಿದ್ದುದನ್ನು ಬಿಟ್ಟರೆ ಆಸ್ಪತ್ರೆಯಲ್ಲಿಯೇ ಇರುತ್ತಾನೆ. ಆ ನಾಲ್ಕು ದಿನಗಳಲ್ಲಿಯೇ ನರ್ಸಿಂಗ್ ಹೋಮ್‌ನ ಎಲ್ಲಾ ಡಾಕ್ಟರರು, ಅವರ ಅಸಿಸ್ಟಂಟರು, ನರ್ಸುಗಳು, ಆಚೆ ಈಚೆಯ ಪೇಶೆಂಟ್‌ಗಳೆಲ್ಲರೂ ಪರಿಚಯವಾಗುತ್ತಾರೆ. ಎಲ್ಲರ ಜೊತೆಗೂ ಸ್ನೇಹದಿಂದ ಇರುತ್ತಾನೆ. ಐದನೇ ದಿನ ಡಾ. ಬೊಂಗಾಳೆಯವರ ಹತ್ತಿರ ತನ್ನ ತಾಯಿಯ ಆರೋಗ್ಯ ಪರಿಸ್ಥಿತಿ ಹೇಗಿದೆ ಎಂಬ ಮಾಹಿತಿಯನ್ನು ಕೇಳುತ್ತಾನೆ. ಅದಕ್ಕೆ ಡಾ. ಬೊಂಗಾಳೆಯವರು "ಸಂಕಟ–ಕಾಲ ಮುಗಿಯಿತು" ಎಂದು ಹೇಳುತ್ತಾರೆ. "ಪೇಶೆಂಟನ್ನು ಮುಂಬಯಿಗೆ ಒಯ್ದರೆ ಹೇಗೆ?" ಎಂಬ ರಾಜಾನ ಪ್ರಶ್ನೆಗೆ "ಏನೂ ಉಪಯೋಗವಾಗಲಾರದು. ಆದರೂ ನಿಮ್ಮ ಮರ್ಜಿ !" ಎಂದು ಹೇಳಿ ಹೊರಟು ಹೋಗುತ್ತಾರೆ. ತದ ನಂತರ ಡಾ॥ ಟಿಪನೀಸರನ್ನು ಕೇಳಿದಾಗ "ಮತ್ತೆ ೧೦–೧೫ ದಿನ ಇದ್ದರೆ ಒಳ್ಳೆಯದು" ಎಂದು ಹೇಳುತ್ತಾರೆ. ಆಗ ರಾಜಾ ಬೇರೆ ಏನೂ ಆಲೋಚಿಸದೇ ಇಪ್ಪತ್ತು ದಿನಗಳ ಹಕ್ಕಿನ ರಜೆಯ ಸಲುವಾಗಿ ಮುಂಬಯಿಗೆ ಪತ್ರ ಬರೆಯುತ್ತಾನೆ.

ಮೊದಲ ನಾಲ್ಕೈದು ದಿನಗಳಲ್ಲಿ ಸಂಬಂಧಿಕರು,ನೆರೆಹೊರೆಯವರು, ಹಳೆಯ ಸ್ನೇಹಿತರೆಲ್ಲರೂ ಬಂದು ಭೇಟಿಯಾಗಿ, ಸಹಾನುಭೂತಿಯನ್ನು ವ್ಯಕ್ತಪಡಿಸಿ ಹೋಗುತ್ತಾರೆ. ಆದರೆ ಬರಬರುತ್ತಾ ಬೆಳಗಿನಿಂದ ರಾತ್ರಿಯವರೆಗೂ ಹೇಗೋ ಸಮಯ ಸರಿದುಹೋಗುತ್ತಿತ್ತು. ಆದರೆ ರಾತ್ರಿ ವೇಳೆ ತಾನೊಬ್ಬನೇ ಅವ್ವನ ಆ ದೇಹದ ಕೂಡ ಇರುವುದೆಂದರೆ ರಾಜಾನಿಗೆ ದುಃಸ್ವಪ್ನವನ್ನು ಅನುಭವಿಸಿದಂತೆ ಆಗುತ್ತಿತ್ತು. ಹೀಗಾಗಿಯೇ ಆತ ರಾತ್ರಿ, ಯಾರೇ ಬಂದರೂ – ಡಾಕ್ಟರರಾಗಲೀ, ಅಸಿಸ್ಟಂಟ್ ಡಾಕ್ಟರರಾಗಲೀ, ನರ್ಸಾಗಲಿ, ಆಯಾ ಆಗಲೀ ಅವರ ಜೊತೆ ಹರಟೆ ಹೊಡೆಯುತ್ತಾ, ಸ್ವಲ್ಪ ಸಮಯ ಅವರನ್ನು ತನ್ನೊಂದಿಗೆ ನಿಲ್ಲಿಸಿಕೊಳ್ಳುತ್ತಿದ್ದನು. ಇದಲ್ಲದೆ ಒಂದೇ ಸಮನೆ ಸಿಗರೇಟು ಸೇದುವುದೂ ಇದ್ದೇ ಇತ್ತು. ದಿನವೂ ರಾತ್ರಿ ಕಳ್ಳತನದಿಂದ ಬಾಟಲಿ ತೆಗೆದು ಒಂದೆರಡು ಪೆಗ್ಗು ಹೀರುವುದಕ್ಕೆ ಪ್ರಾರಂಭಿಸುತ್ತಾನೆ. ಏತನ್ಮಧ್ಯೆ ಒಂದು ರಾತ್ರಿ ಅವನ ಅವ್ವನ ಒದ್ದಾಟ ಜೋರಾದಾಗ, ಎಡಗೈ ನಡುಗಲಾರಂಭಿಸಿದಾಗ ರಾಜಾನಿಗೆ ಹೆದರಿಕೆಯಾಗುತ್ತದೆ. ಹೀಗಾಗಿ ಆತ ಕೆಳಗೆ ಓಡೋಗಿ,

ನರ್ಸ್‌ನ್ನು ಕರೆಯುತ್ತಾನೆ. ಆದರೆ ಅಂದು ಮೀನಾ ಪಾಟಣಕರ ಇರುತ್ತಾಳೆ. ಅವಳು ಹೊಸಬಳಿದ್ದರಿಂದ ಅವಳಿಗೆ ತನ್ನ ತಾಯಿಯ ಪರಿಸ್ಥಿತಿಯನ್ನು ವಿವರಿಸಿ ಡಾಕ್ಟರನ್ನು ಕರೆ ತರುವಂತೆ ಹೇಳಿ ಮೇಲೆ ಹೋಗುತ್ತಾನೆ. ಡಾ॥ ಶೇಖ ಅಂದು ಡ್ಯೂಟಿಯಲ್ಲಿದ್ದು, ಬಂದು ಪೇಶೇಂಟನ್ನು ನೋಡುತ್ತಾನೆ. ಔಷಧಿಗಳನ್ನು ಹಾಕುವಂತೆ ಮೀನಾಳಿಗೆ ಸಲಹೆ ನೀಡಿ ಔಷಧಿ ಹಾಕಿದ ನಂತರ ಅವಳ ಹೆಗಲ ಮೇಲೆ ಕೈ ಹಾಕುತ್ತಾನೆ. ನಂತರ ಹೊರಡುವಾಗ ಅವಳ ಟೊಂಕವನ್ನು ತನ್ನ ಬಲಗೈಯಿಂದ ಹಿಡಿದುಕೊಡು ಹೋಗುತ್ತಾನೆ. ಸ್ವಲ್ಪ ಹೊತ್ತಿನ ನಂತರ ತಾಯಿ ಮತ್ತೆ ಹೊಟ್ಟೆ ನೋವೆಂದು ಒದ್ದಾಡತೊಡಗಿದಾಗ, ಹಾಟ್ ವಾಟರ್ ಬ್ಯಾಗ್ ತರುವ ಸಲುವಾಗಿ ನರ್ಸ್ ರೂಮಿಗೆ ಇಣುಕುತ್ತಾನೆ. ಅಲ್ಲಿ ಸಿಸ್ಟರ್ ಶೇಂಡೇ ನಿದ್ದೆ ಮಾಡುತ್ತಿದ್ದುದರಿಂದ ಅನಿವಾರ್ಯವಾಗಿ ಡಾ.ಶೇಖ್ ರೂಮಿಗೆ ಹೋಗಬೇಕಾಗುತ್ತದೆ. ಹೋಗಿ ಬಾಗಿಲು ಬಡಿದಾಗ ಸ್ವಲ್ಪ ಹೊತ್ತಿನ ನಂತರ ಅರ್ಧ ಬಾಗಿಲು ತೆರೆದ ಶೇಖ್ ಕಳುಹಿಸುತ್ತೇನೆ ಎಂದು ಹೇಳುತ್ತಾನೆ. ಹತ್ತು ಹದಿನೈದು ನಿಮಿಷದ ನಂತರ ಮೀನಾ ಹಾಟ್ ವಾಟರ್ ಬಾಗನ್ನು ತಂದು ಪೇಶಂಟಿನ ಹೊಟ್ಟೆಗೆ ಒತ್ತಿ ಹಿಡಿಯುತ್ತಾಳೆ. ಜನರಲ್ ವಾರ್ಡಿನಲ್ಲಿ ಒಂದು ಪೇಶಂಟ್ ಸೀರಿಯಸ್ಸಾಗಿರುವುದರಿಂದ ತಾನು ಅಲ್ಲಿಗೆ ಹೋಗಬೇಕಾಗಿದೆ ಎಂದು ರಾಜಾನಿಗೆ ಆ ಬ್ಯಾಗನ್ನು ಒತ್ತಿ ಹಿಡಿಯಲು ಹೇಳಿ ಹೊರಟು ಹೋಗುತ್ತಾಳೆ.

ರಾಜಾನಿಗೆ ಡ್ರಿಂಕ್ಸ್ ಮಾಡುವ ಅಭ್ಯಾಸ ರೌಂಡ್ಸಿಗೆಂದು ಬಂದ ಡಾ॥ ಟಿಪನೀಸರಿಗೆ ತಿಳಿಯುತ್ತದೆ. ಅವರೂ ರಾಜಾನ ಜೊತೆ ಸೇರಿಕೊಳ್ಳುತ್ತಾರೆ. ಇಬ್ಬರೂ ಬಾಲ್ಕನಿಯಲ್ಲಿ ಕೂತು ಹರಟೆ ಹೊಡೆಯುತ್ತಿದ್ದಾಗ ಎಲ್ಲಾ ವಿಚಾರಗಳು ಚರ್ಚೆಗೆ ಬರುತ್ತವೆ. ಮೀನಾ ಪಾಟಣಕರಳ ವಿಚಾರ ಬಂದಾಗ ರಾಜಾ ತನ್ನ ಮುಂಬಯಿಯ ನೇರತೆಯಿಂದ ತನಗೆ ಅವಳು ಇಷ್ಟವಾಗಿರುವುದಾಗಿ ಹೇಳುತ್ತಾನೆ. ಡಾ.ಟಿಪನೀಸರು ಅವಳ ವೈಯಕ್ತಿಕ ಜೀವನದ ಹಿನ್ನೆಲೆಯನ್ನು ತಿಳಿಸಿದಾಗ ಉತ್ತೇಜಿತಗೊಂಡ ರಾಜಾ ಮೈ ಛಳಿ ಬಿಟ್ಟು ಅವಳೊಂದಿಗೆ ಫ್ಲರ್ಟ್ ಮಾಡತೊಡಗುತ್ತಾನೆ. ಅವಳು ರೂಮಿಗೆ ಬಂದಾಗಲೆಲ್ಲ, ಕೆಲವೊಮ್ಮೆ ಅವಳನ್ನು ಬೇಕೆಂತಲೇ ಕರೆಸಿ, ಅವಳೊಡನೆ ಮಂಗಚೇಷ್ಟೆ ಮಾಡತೊಡಗುತ್ತಾನೆ. ರಾಜಾನ ಅಕ್ಕನಿಗೆ ಅವನ ಈ ಕೃತ್ಯದ ಬಗ್ಗೆ ಏನೋ ವಾಸನೆ ಹತ್ತಿದಂತಾಗಿ ಅವನನ್ನು ವಾಪಸ್ಸು ಮುಂಬೈಗೆ ಹೋಗುವಂತೆ ಸಲಹೆ ನೀಡುತ್ತಾಳೆ. ಆದರೆ ಅದನ್ನು ನಿರಾಕರಿಸಿದ ರಾಜಾ ಆಸ್ಪತ್ರೆಯಲ್ಲಿಯೇ ಉಳಿಯುತ್ತಾನೆ. ರಾತ್ರಿ ತನ್ನೊಂದಿಗೆ ಭಾವ ರಾಮಣ್ಣ ಉಳಿಯುತ್ತೇನೆಂದು ಹೇಳಿದರೂ ಅವರನ್ನೂ ಮನೆಗೆ ವಾಪಸ್ಸು ಕಳುಹಿಸುತ್ತಾನೆ. ಡಾ. ಟಿಪನೀಸರ ಜೊತೆಗೆ ಮೂರು ಪೆಗ್ಗುಗಳ ಸೇವನೆ ಆಗಿರುತ್ತದೆ. ಮಲಗಲೆಂದು ಬಂದಾಗ ತನ್ನ ಅವ್ವನ ಒದ್ದಾಟವನ್ನು ನೋಡಲಾರದೆ ಸರಿಯಾಗಿ ನಿದ್ದೆ ಮಾಡಲಿ ಎಂದು ತಾನೇ ಟೇಬಲ್ ಮೇಲಿದ್ದ ಔಷಧಿಯನ್ನು ತೆಗೆದು ಮೂಗಿನ ನಳಿಕೆಯಿಂದ ಒಂದು ಡೋಜ್ ಸುರಿಯುತ್ತಾನೆ. ನಿದ್ದೆ ತಡೆಯಲಾರದೇ ಲೈಟ್ ಆರಿಸಿ ಎಂದಿನಂತೆ ಹಳವಂಡ ಕನಸುಗಳನ್ನೇ ಕಾಣುತ್ತಾ ಮಲಗಿರುತ್ತಾನೆ. ರಾತ್ರಿ ಎರಡು ಮೂರು ಗಂಟೆಗೆ ಬಾಗಿಲು ತೆರೆದಂತಾಗಿ, ಲೈಟು ಹತ್ತುತ್ತದೆ. ರಾಜಾ ತನ್ನ ಅರ್ಧಗಣ್ಣು ತೆರೆದು ನೋಡಿದಾಗ ಮೀನಾ ಬಂದು ತಾಯಿಯ ಪ್ರಕೃತಿಯನ್ನು ನೋಡುತ್ತಿರುತ್ತಾಳೆ. ಎಚ್ಚರಗೊಂಡ ರಾಜಾ ತನ್ನ ತಾಯಿಯನ್ನು ಪರೀಕ್ಷಿಸಿ 'ಗುಡ್‌ನೈಟ್' ಎಂದು ಹೇಳಿ ಹೊರಗೆ ಹೋಗುತ್ತಿದ್ದ ಮೀನಾಳನ್ನು ಒಳಗೆ ಎಳೆದುಕೊಂಡು ಹುಚ್ಚು ಆವೇಶದಲ್ಲಿ

ಅವಳೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾನೆ. ಆದರೆ ಪ್ರಜ್ಞೆ ಬಂದಾಗ "ಮೀನಾ ಆಯ್ ಆ್ಯಮ್ ವ್ಹೆರಿ ಸಾರಿ, ವ್ಹೆರಿ ಸಾರಿ ನನ್ನನ್ನು ಪ್ಲೀಜ್ ಕ್ಷಮಿಸು ಎಂದು ಅವಳ ಕಾಲು ಹಿಡಿದು ಬಿಕ್ಕಿದ್ದೆ. ನಿಜವಾಗಿಯೂ ನನ್ನ ರಕ್ತವೆಲ್ಲ ಭಯಂಕರ ಅಪರಾಧ ಪ್ರಜ್ಞೆಯಿಂದ ನೀರು ನೀರಾಗಿತ್ತು" (ಪು. ೩೫೪) ಎಂದು ಹೇಳುವಲ್ಲಿ ನಿಜವಾಗಿಯೂ ಅವನ ಈ ಅಪರಾಧ ಪ್ರಜ್ಞೆ ತಾನು ಬಲವಂತವಾಗಿ ಭೋಗಿಸಿದ ಮೀನಾಳ ವಿರುದ್ಧವಾಗಿತ್ತೇ ಅಥವಾ ಮೃತ್ಯು ಶಯ್ಯೆಯಲ್ಲಿದ್ದ ತನ್ನ ತಾಯಿಯ ವಿರುದ್ಧವಾಗಿತ್ತೇ ಅಥವಾ ತನ್ನನ್ನು ಮದುವೆ ಆಗಲಿರುವ ಏನೂ ಅರಿಯದ ಮುಗ್ದೆ ಜಯಶ್ರೀ ವಿರುದ್ಧವಾಗಿತ್ತೇ ಎಂಬ ಸಂದಿಗ್ಧತೆ ಉಳಿಯುತ್ತದೆ.

ಆದರೆ ತಾನು ಮಾಡಿರುವ ಈ ಅಪರಾಧದಿಂದ ಅವನಿಗೆ ಬಿಡುಗಡೆಯೇ ಇಲ್ಲ ಎಂಬ ಭಯದಿಂದ ಅವನು ಮುಕ್ತನಾಗುವುದೇ ಇಲ್ಲ. "ಈ ನಿತ್ಯದ ಕೆಲಸದಲ್ಲಿ, ಮಿತ್ರರ ಸಹವಾಸದಲ್ಲಿ, ಡಿಂಪಲ್ಲಳ ಲವಲವಿಕೆಯಲ್ಲಿ ತಾನು ಒಳಗಿನ ಜ್ವಲಂತ ಪ್ರಜ್ಞೆಯನ್ನು ಬೂದಿಯಲ್ಲಿ ಮುಚ್ಚಿಡುತ್ತಿರುವೆ. ನಿಜ ನಾನು ಇಲ್ಲಿಂದ–ಡಿಂಪಲ್ಲಳಿಂದ ಕೂಡ–ಎಲ್ಲಿಯಾದರೂ ದೂರ ಹೋಗಿದ್ದು ಬರಬೇಕು. ಅಂದಾಗಲೇ ಸ್ವಲ್ಪಲ್ಪ ಸ್ವಲ್ಪ ಬಿಡುಗಡೆ ದೊರೆಯಬಹುದು ಅಥವಾ ಬಿಡುಗಡೆಯೇ ಇಲ್ಲವೇನೋ.." (ಪು. ೩೫೯) "ಛೇ ನಾನು ಎಲ್ಲಿಯಾದರೂ ದೂರ ಓಡಿ ಹೋಗಬೇಕು,ರಶಿಯಾದಲ್ಲಿಯೇ ಫಾರಿನ್ ಕರಸ್ಪೋಂಡೆಂಟ್ ಎಂದು ಕೆಲವು ವರ್ಷ ಯಾಕೆ ಇದ್ದು ಬಿಡಬಾರದು? ಈ ವಿಚಾರ ನನ್ನ ಒಂದು ರೀತಿಯ ಅಪರಾಧ ಪ್ರಜ್ಞೆಯಿಂದ ಬಂದದ್ದೆಂದು ನನಗೆ ಗೊತ್ತಿದೆ. ಈ ಪ್ರಜ್ಞೆ ಈ ಮುಂಬಯಿಯ ಗದ್ದಲದಲ್ಲಿ, ಡಿಂಪಲ್ಲಳ ಸಹವಾಸದಲ್ಲಿ, ಕೊನೆಗೆ ಕಾಲ ಪ್ರವಾಹದಲ್ಲಿ, ಸಾವಕಾಶವಾಗಿ ಕರಗಿ ಮಾಯವಾದೀತು, ನಿಜ– ಆದರೆ" ತಾಯಿಯ ಮರಣವೆಂದರೆ ಭಯಂಕರ ವಾದುದು, ಮಗನಾದವನು ಅದನ್ನು ಎದುರಿಸಬಾರದು.. ವೃದ್ಧತ್ವ ಮತ್ತು ಮೃತ್ಯು ಇವು ಮಹಾ ಭಯಂಕರ ವಿಷಯಗಳು ಎಂಬ ಕಟು ಸತ್ಯವನ್ನು ಅರಿತಿದ್ದರೂ ಕೂಡ ರಾಜಾ ತನ್ನ ಮೂಲ ಪ್ರವೃತ್ತಿಯನ್ನು ತಡೆಯಲು ಶಕ್ತನಾಗುವುದಿಲ್ಲ. ಹೀಗಾಗಿ ಅದೊಂದು ದುಃಸ್ವಪ್ನದಂತೆ ಅವನನ್ನು ಕಾಡುತ್ತಲೇ ಇರುತ್ತದೆ.

ಮಧ್ಯಸ್ಥರು :

ಮಧ್ಯಸ್ಥರು ಕತೆಯೂ ಕೂಡ ಮನುಷ್ಯನ ಮೂಲ ಪ್ರವೃತ್ತಿಯಾದ 'ಕಾಮ'ದ ವಸ್ತುವನ್ನೇ ಒಳಗೊಂಡಿದ್ದರೂ ಕೂಡ ದುಃಸ್ವಪ್ನದಷ್ಟು ಸಂಕೀರ್ಣತೆಯನ್ನು ಹೊಂದಿಲ್ಲ. ಆದರೆ ಈ ಕಥೆಯೂ ಕೂಡ ದೇಸಾಯಿ ಅವರ ಬಹುಪಾಲು ಕಥೆಗಳಂತೆ ಮನೋ ವೈಜ್ಞಾನಿಕ ಆಸ್ಥೆಯನ್ನು ಹೊಂದಿದೆ. 'ಮಧ್ಯಸ್ಥರು' ಕಥೆಯ ಅರ್ಜುನನಿಗೆ ಮದುವೆಯ ವಿಚಾರದಲ್ಲಿ ಮಧ್ಯಸ್ಥಿಕೆಯನ್ನು ವಹಿಸುವುದು ಸ್ವಲ್ಪವೂ ಇಷ್ಟವಿರುವುದಿಲ್ಲ. ಆದರೆ ಅವನ ಹೆಂಡತಿ ರೋಹಿಣಿಗೆ ಇಂಥ ಕೆಲಸವೆಂದರೆ ಅತ್ಯಂತ ಉತ್ಸಾಹ, ಉಮೇದು. ಇತಿಹಾಸ ಪ್ರಾಧ್ಯಾಪಕನಾಗಿದ್ದ ಅರ್ಜುನನ ವಿವಾಹ ಯಾರ ಮಧ್ಯಸ್ಥಿಕೆಯೂ ಇಲ್ಲದೇ ರೋಹಿಣಿಯೊಂದಿಗೆ ನಡೆದಿರುತ್ತದೆ. ತನ್ನ ವಿದ್ಯಾರ್ಥಿನಿಯಾಗಿದ್ದ ರೋಹಿಣಿಯನ್ನು ಪ್ರೀತಿಸುತ್ತಿದ್ದ ಅರ್ಜುನ ತನ್ನ ಪ್ರೀತಿ ಸಾವಕಾಶವಾಗಿ ಬೆಳೆದು, ಮನ್ಮಥ "ಸಾಕು ನಿಮ್ಮ ಆಟ–ಪಾಟ. ಇನ್ನು ಸೀರಿಯಸ್ಸಾಗಿ ಬ್ರಹ್ಮಪ್ಪನ ಕರ್ತವ್ಯವನ್ನು ಕೈಗೊಳ್ಳುವಂಥವರಾಗಿರಿ. ಹಾಗೂ ನನಗೆ

ಸ್ವಲ್ಪ ಬಿಡುವು ಕೊಡಿರಿ" (ಪು. ೪೧೫) ಎಂದು ಹೇಳಿದ ನಂತರ ಧೈರ್ಯ ಮಾಡಿ ರೋಹಿಣಿಯ ಒಪ್ಪಿಗೆಯನ್ನು ಕೇಳುತ್ತಾನೆ. ರೋಹಿಣಿಯು ಅದಕ್ಕೆ ಒಪ್ಪಿಕೊಂಡ ನಂತರ ವಿವಾಹವಾಗುತ್ತಾರೆ. ತನ್ನ ವಿವಾಹವನ್ನು ಸರಾಗವಾಗಿ ನೆರವೇರಿಸಿಕೊಂಡ ಅರ್ಜುನನಿಗೆ ಇತರರ ವಿವಾಹವನ್ನು ಮಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಜೀವನದ ಬಗೆಗಿನ ದಟ್ಟ ಸಂಶಯಗಳೇ ಅವನನ್ನು ಆವರಿಸಿಕೊಳ್ಳುತ್ತಿದ್ದುದರಿಂದ ಯಾರನ್ನೂ ಹೊಗಳಲು ಸಾಧ್ಯವಾಗುತ್ತಿರಲಿಲ್ಲ. ಆದರೆ ರೋಹಿಣಿ ಇದಕ್ಕೆ ತದ್ವಿರುದ್ಧ. ಅವಳ ಪ್ರಕಾರ ತಾತ್ವಿಕವಾಗಿ "ಯಾವ ಹೆಣ್ಣು ಯಾವುದೇ ಗಂಡಿನೊಡನೆ ಉಳಿದ ಜಾತಿ–ಸಂಸ್ಕೃತಿ ಶಿಕ್ಷಣ – ವಯಸ್ಸು ಇತ್ಯಾದಿ, ಅಂಶಗಳು ಕೂಡಿ ಬಂದರೆ –ಸಂಸಾರ ಮಾಡಲು ಸಾಧ್ಯ ಎಂಬ ದೃಢ ವಿಶ್ವಾಸವನ್ನು ಹೊಂದಿರುತ್ತಾಳೆ. ಹೀಗಾಗಿ ಅವಳು ಏನೇನನ್ನೋ ಹೇಳಿ, ಕೆಲವನ್ನು ಮುಚ್ಚಿಟ್ಟು, ಕೆಲವನ್ನು ಅತಿಯಾಗಿ ವರ್ಣಿಸಿ ಒಂದು ಗಂಡಿನೊಂದಿಗೆ ಒಂದು ಹೆಣ್ಣನ್ನು ಗಟ್ಟಿಯಾಗಿ ಕಟ್ಟಿ ಹಾಕಿ ಸಾರ್ಥಕ್ಯದ ಸುಖವನ್ನು ಅನುಭವಿಸುತ್ತಿರುತ್ತಾಳೆ. ಮುಂದೆ ಏನಾದರೂ ತೊಂದರೆಯಾದರೆ? ಎಂಬುದು ಅರ್ಜುನನ ಅನುಮಾನವಾದರೆ ಮುಂದೆ ಹ್ಯಾಂಗಾದರೂ ಅಡ್ಜಸ್ಟ್ ಮಾಡಿಕೋತಾರೆ ಪಾಪ.. ನಡುವೆ ಕಾಮನೆಂಬ ಮಧ್ಯಸ್ಥ ಇರ್ತಾನೆ ತಾನೆ?" (ಪು. ೪೧೬) ಎಂದು ಹೇಳಿ ನಕ್ಕು ಬಿಡುವುದು ಅವಳ ವಾಡಿಕೆಯಾಗಿರುತ್ತದೆ. ಆದರೆ ಈ ಕಥೆಯ ಕೇಂದ್ರ ಬಿಂದುಗಳು ಅರ್ಜುನನ ಸಹೋದ್ಯೋಗಿ ಡಾ.ಎಸ್ ನಿರ್ಮಲೆ ಹಾಗೂ ಅರ್ಜುನನ ಗೆಳೆಯ ಡಾ॥ ಗೋವಿಂದ ದೇಶಪಾಂಡೆ. ಡಾ॥ ನಿರ್ಮಲೆ ಪ್ರಖರ ಬುದ್ಧಿವಾದಿ, ಸ್ವಲ್ಪ ಸ್ತ್ರೀವಾದಿ. ಸ್ತ್ರೀಗೆ ಸಮಾನ ಹಕ್ಕು ಇರಬೇಕು. ಸ್ತ್ರೀ ತಾನೇ ಮುಂದಾಗಿ ತನಗೆ ಬೇಕಾದಂಥ ಶಿಕ್ಷಣ ಪಡೆದು, ತನಗೆ ಬೇಕಾದಂಥ ಗಂಡನನ್ನು ಶೋಧಿಸಿ ತನ್ನ ಭವಿಷ್ಯವನ್ನು ತಾನೇ ಸ್ವತಂತ್ರವಾಗಿ ರೂಪಿಸಬೇಕು ಎಂದು ಭಾಷಣ ಮಾಡುವಂಥವಳು. ತನ್ನ ಸ್ವಾತಂತ್ರ್ಯವನ್ನು, ತನ್ನ ಸ್ವತಂತ್ರ ವ್ಯಕ್ತಿತ್ವವನ್ನು ಗಂಡನಾದಂಥವನು ಗೌರವಿಸುವಂತೆ ನೋಡಬೇಕು. ಹಾಗೆ ಸ್ತ್ರೀಯಾದವಳು ಅವನ ದೃಷ್ಟಿಕೋನವನ್ನು ಕಟೆಕಡಿದು ರೂಪಿಸಬೇಕು ಎಂದು ಪ್ರತಿಪಾದಿಸುವವಳು. ಟೊರೊಂಟೋಕ್ಕೆ ಡಾಕ್ಟರೇಟ್ ಮಾಡಲೆಂದು ಹೋಗಿದ್ದ ನಿರ್ಮಲೆ ವಾಪಸ್ ಬಂದ ಮೇಲೆ ಅರ್ಜುನನ ಡಿಪಾರ್ಟ್‌ಮೆಂಟಿನಲ್ಲೇ ಲೆಕ್ಚರರ್ ಆಗಿ ನೇಮಕ ಹೊಂದಿ ಸದ್ಯ ರೀಡರ್ ಆಗಿರುತ್ತಾಳೆ. ಅವಳ ಈ ಎಲ್ಲಾ ಗದ್ದಲದಲ್ಲಿ ಅವಳು ಲಗ್ನವಾಗಿರಲಿಲ್ಲ. ಲಗ್ನವಾಗುವ ಲಕ್ಷಣವೂ ಕಾಣಿಸಲಿಲ್ಲ. ಈಗ ವಯಸ್ಸು ನಲವತ್ತಾಗಿದ್ದರಿಂದ ಲಗ್ನದ ಆಶೆಯೇ ಇಂಗಿಹೋಗತೊಡಗಿರುತ್ತದೆ. ಡಿಪಾರ್ಟ್‌ಮೆಂಟಿನ ಇತರರು ಈ ಬಗ್ಗೆ ರೇಗಿಸಿದರೆ ಅವಳು ನಕ್ಕು "ಈ ಬದಲಾಗುತ್ತಿರುವ ಸಮಾಜದಲ್ಲಿ ನಮ್ಮಂಥವರೆಷ್ಟೋ ಜನ ಕುಮಾರಿಕೆಯಾಗಿಯೇ ಉಳಿಯಬೇಕಾದದ್ದು ಅನಿವಾರ್ಯ" ಎನ್ನುತ್ತಿದ್ದಳು. ಉಳಿದವರು ನಿರ್ಮಲೆಯ ಪಾಂಡಿತ್ಯ, ಅವಳ ಲೇಖನಗಳು, ಅವಳ ಭಾಷಣಗಳು ಇತ್ಯಾದಿಗಳನ್ನು ಎಷ್ಟೆ ಪ್ರಶಂಸಿದರೂ ಕೂಡ ರೋಹಿಣಿ ಮಾತ್ರ ಅದೆಲ್ಲಾ ಛಂದಾಗ್ತಿತ್ತು– ಅವಳಿಗೆ ಗಂಡನೊಬ್ಬನಿದ್ದರೆ, ಒಂದಾದರೂ ಮಗುವಿದ್ದರೆ' ಎಂದು ಹಳಹಳಿಸುತ್ತಿದ್ದಳು.

ಡಾ. ಗೋವಿಂದ ದೇಶಪಾಂಡೆ ಗೋಖಲೆ ಹೈಸ್ಕೂಲಿನಿಂದ ಹಿಡಿದು ಗೋಖಲೆ ಕಾಲೇಜಿನವರೆಗೆ ಅರ್ಜುನನ ಸಹಪಾಠಿಯಾಗಿದ್ದವನು. ಆತ ಮುಂದೆ ಮುಂಬೈಯಿಗೆ ಹೋಗಿ ಸ್ಕೂಲ್ ಆಫ್ ಇಕನೋಮಿಕ್ಸ್ ದಲ್ಲಿ ಎಂ.ಎ., ಪಿಎಚ್.ಡಿ ಮಾಡಿ ನಂತರ ಫುಟ್ಟ ಬ್ರೈಟ್ ಸ್ಕಾಲರ್‌ಶಿಪ್ಪಿನ ಮೇಲೆ

ಅಮೇರಿಕಗೆ ಹೋಗಿ ಅಲ್ಲೇ ನೆಲೆಸಿರುತ್ತಾನೆ. ಇಂಟರ್ ನ್ಯಾಷನಲ್ ಲಾ ದಲ್ಲಿ ಮತ್ತೊಂದು ಪಿಎಚ್.ಡಿ, ಮಾಡಿ ಅಲ್ಲಿಯ ಯುನಿವರ್ಸಿಟಿಯಲ್ಲಿ ಲೆಕ್ಚರರಾಗಿರುತ್ತಾನೆ. ಅಲ್ಲಿಯೇ ಒಬ್ಬಾಕೆಯನ್ನು ವಿವಾಹವಾಗಿ ಅವಳಿಂದ ವಿಚ್ಛೇದನವನ್ನು ಪಡೆದಿರುತ್ತಾನೆ. 'ಅವನಲ್ಲಿ ವಿಕೃತಿ ಇದೆ' ಎಂಬುದು ಅವನ ಅಮೆರಿಕನ್ ಹೆಂಡತಿಯ ಆರೋಪ ಆಗಿರುತ್ತದೆ. ಇದರಿಂದಾಗಿ ಆತ ಕೆಲವರ್ಷಗಳ ಕಾಲ ಎಲ್ಲರಿಂದಲೂ ದೂರ ಉಳಿದಿರುತ್ತಾನೆ. ತಂದೆ ಸತ್ತಾಗಲೂ ಕೂಡ ಭಾರತಕ್ಕೆ ಬರದೇ ಅಲ್ಲಿಯೇ ಉಳಿದುಕೊಂಡಿರುತ್ತಾನೆ. ಭಾರತಕ್ಕೆ ಅವನು ಬರುತ್ತಿರುವ ವಿಚಾರ ತಿಳಿಯುತ್ತಲೇ , ರೋಹಿಣಿ ಅವನಿಗೂ ಕೂಡ ಒಂದು ಮದುವೆ ಮಾಡಿಸುವ ಯೋಜನೆ ಹೂಡುತ್ತಾಳೆ. ಗೋವಿಂದನೊಡನೆ ನಿರ್ಮಲೆಯ ವಿವಾಹ ಮಾಡಬಹುದು ಎಂಬುದು ಅವಳ ಆಲೋಚನೆಯಾಗಿರುತ್ತದೆ. ಗೋವಿಂದನ ಮನೆಯಲ್ಲಿ ಪಾರ್ಟಿಗೆ ಕೂತಾಗ ಗೋವಿಂದನು "ಅರ್ಜುನ್, ಎಷ್ಟೆಂದರೂ ದ ಈಸ್ಟ್ ಈಸ್ ಈಸ್ಟ್, ದ ವೆಸ್ಟ್ ಈಸ್ ವೆಸ್ಟ್. ನಮ್ಮ ಸಂಸ್ಕೃತಿ ಬೇರೆ, ಅವರ ಸಂಸ್ಕೃತಿ ಬೇರೆ. ನಾ ಅಮೆರಿಕನ್ ಹುಡುಗಿಯನ್ನು ಮದುವೆಯಾದದ್ದೇ ತಪ್ಪಾತು" (ಪು. ೪೨೧) ಎಂದು ಹೇಳುವಲ್ಲಿ ಗೋವಿಂದನ ಮನೋ ವ್ಯಥೆಯನ್ನು ಗುರುತಿಸಬಹುದಾಗಿದೆ.

ಗೋವಿಂದನು ಈಗ ವಿವಾಹವಾಗಲು ಸಿದ್ಧನಾಗಿದ್ದಾನೆ. ಆತನಿಗೆ ಮುಖ್ಯ ಒಳ್ಳೆಯ ಹೆಣ್ಣು ಬೇಕಾಗಿರುತ್ತದೆ. ಅವನನ್ನು ಅವನ ಅಕ್ಕನಂತೆ ನೋಡಿಕೊಳ್ಳುವ ಹೆಣ್ಣು ಬೇಕಾಗಿರುತ್ತದೆ. ಆದರೆ ಅವನೇ ಹೇಳುವಂತೆ "ಆತ ಈಗ ಭೂತವಾಗಿದ್ದಾನೆ. ಸತ್ತು ಮರಳಿ ಜೀವಂತವಾಗಿರುತ್ತಾನೆ. ಅವನಿಗೆ ಹೆಂಡತಿ ಬೇಡವಾಗಿರುತ್ತಾಳೆ. ಸಹಚರಿ ಬೇಕಾಗಿರುತ್ತಾಳೆ– ಸಖಿ ಬೇಕಾಗಿರುತ್ತಾಳೆ. ಸಿಸ್ಟರ್ ಬೇಕು ಈಗ ನನ್ನ ಕೂಡ ಲಗ್ನವಾಗಲು ಸಿದ್ಧರಾಗುವ ಸ್ತ್ರೀಯೆಂದರೆ ವಿಧವೆ ಅಥವಾ ನನ್ನಂತೆಯೇ ಡಿವೋರ್ಸ್ ಮಾಡಿದಂಥ ಸ್ತ್ರೀ! ನನಗೆ ವಿಧವೆ ನಡೀತದೆ ಹಾಂ. ಆದರೆ ಪ್ರೀತಿಯಿಂದ ಲಗ್ನ ಆಗಲು ಸಿದ್ಧವಾಗೋ ವಿಧವೆ ಇಲ್ಲೆಲ್ಲಿ ಸಿಗಬೇಕು" (ಪು. ೪೨೨) ಎಂಬಲ್ಲಿ ಅವನ ಮಾತುಗಳು ವಾಸ್ತವತೆಯಿಂದ ಕೂಡಿರುವುದನ್ನು ಗಮನಿಸಬಹುದಾಗಿದೆ. ಗೋವಿಂದನ ಈ ಮಾತುಗಳಿಂದ ಸ್ಫೂರ್ತಿ ಪಡೆದ ಅರ್ಜುನ ಮತ್ತು ರೋಹಿಣಿ ನಿರ್ಮಲೆಗೆ ಗೋವಿಂದನ ಜೊತೆ ಮದುವೆ ಮಾಡಿಸಬಹುದೆಂದು ಆಲೋಚಿಸಿ ಅವಳನ್ನೂ ಮನೆಗೆ ಊಟಕ್ಕೆ ಕರೆಯುತ್ತಾರೆ. ಊಟಕ್ಕೆ ಬಂದ ನಿರ್ಮಲೆಯ ಜೊತೆ ರೋಹಿಣಿ ನೇರವಾಗಿ ವಿಚಾರ ಪ್ರಸ್ತಾಪಿಸುತ್ತಾಳೆ. ರೋಹಿಣಿಯ ಮಾತುಗಳನ್ನು ಕೇಳಿದ ನಿರ್ಮಲೆ ತನಗೆ ಈ ವಯಸ್ಸಿನಲ್ಲಿ ಮದುವೆಯೇ ಎಂದು ಕೇಳುತ್ತಾಳೆ. ಅಲ್ಲದೆ ನಾನು ಒಳಗೇ ಡ್ರಾಯ್ಡ್ ಆಪ್ ಆಗಿದ್ದೇನೆ, ಒಣಗಿ ಕಟ್ಟಿಗೆಯಾಗಿದ್ದೇನೆ (ಪು. ೪೨೩) ಎಂದು ಹೇಳುವಲ್ಲಿ ಅವಳು ಮದುವೆಯ ಬಗ್ಗೆ ನಿರಾಸಕ್ತಿ ಹೊಂದಿರುವುದನ್ನು ಗುರುತಿಸಬಹುದು. ಆದರೆ ರೋಹಿಣಿ 'ಲಗ್ನದ ನೀರು ಬಿದ್ದ ಮ್ಯಾಲೆ ದೇಹ ಹ್ಯಾಂಗ ಚಿಗುರ್‍ತ್ಯದ ಗೊತ್ತದೇನ್ರಿ? ಆ ಮಾಲಿನಿ ಹ್ಯಾಂಗಿದ್ದಳು ಲಗ್ನದಕ್ಕಿಂತ ಮುಂಚೆ' ಎಂದು ಕತೆ ಹೇಳುತ್ತಾ ಗೋವಿಂದನ ಬಗ್ಗೆಯೂ ಮಾಹಿತಿಯನ್ನು ನೀಡುತ್ತಾ, ನಿರ್ಮಲೆಯಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತಾಳೆ. ರೋಹಿಣಿ ಗೋವಿಂದನನ್ನು ಹೊಗಳಿ ನಿರ್ಮಲೆಯಲ್ಲಿ ಇಲ್ಲದ ಅಪೇಕ್ಷೆಗಳನ್ನು ಹುಟ್ಟಿಸುತ್ತಿರುವುದಕ್ಕೆ ಅರ್ಜುನ ಕೋಪಗೊಳ್ಳುತ್ತಾನೆ. ತಾವು ಯಾವುದೇ ರೀತಿಯ ಮಧ್ಯಸ್ಥಿಕೆಯನ್ನು ವಹಿಸುತ್ತಿಲ್ಲವೆಂದೂ, ಅವರ ನಿರ್ಧಾರವನ್ನು

ಅವರೇ ಮಾಡಬೇಕೆಂದೂ, ತಾವಿಬ್ಬರೂ ಹೇಳಿದ್ದನ್ನು ಕಿವಿಯ ಮೇಲೆ ಹಾಕಿಕೊಳ್ಳಬಾರದೆಂದೂ ಅರ್ಜುನ ನಿರ್ಮಲೆಗೆ ಹೇಳುತ್ತಾನೆ.

ಗೋವಿಂದ ಭಾರತಕ್ಕೆ ಬರುವ ಮೊದಲೇ ನಿರ್ಮಲೆಯ ನಡೆ–ನುಡಿಗಳಲ್ಲಿ ಎದ್ದು ಕಾಣುವಂತಹ ಬದಲಾವಣೆ ಕಂಡುಬರುತ್ತದೆ. ಒಳ್ಳೊಳ್ಳೆ ಇಂಪೋರ್ಟೆಡ್ ಮೇಕಪ್, ಲಿಪ್‌ಸ್ಟಿಕ್, ಸೆಂಟ್ಸ್ ಇತ್ಯಾದಿ ಹೊರಬರುತ್ತವೆ. ಬಾಬ್ ಕಟ್ ಇದ್ದ ಕೂದಲನ್ನು ಸ್ಪೆಶಲ್ ಹೇರ್ ಡ್ರೆಸರ್ ನ ಕಡೆಯಿಂದ ಆಕರ್ಷಕವಾಗಿ ಸೆಟ್ ಮಾಡಿಸಿಕೊಂಡಿರುತ್ತಾಳೆ. ಅವಳ ಈ ಬದಲಾವಣೆಗಳನ್ನು ಗಮನಿಸಿದ ಅವಳ ಸಹೋದ್ಯೋಗಿಗಳು ಅವಳನ್ನು ರೇಗಿಸತೊಡಗುತ್ತಾರೆ. ಅರ್ಜುನನಿಂದ ಸಹೋದ್ಯೋಗಿಗಳಿಗೆ ವಿಷಯ ತಿಳಿದಿರಬಹುದೆಂಬ ಗುಮಾನಿ ಅವಳಿಗೆ ಬರುತ್ತದೆ. ಅಲ್ಲದೇ ಹತ್ತು –ಹದಿನೈದು ದಿನಗಳಿಂದ ಗೋವಿಂದನಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಇದರಿಂದಾಗಿ ನಿರ್ಮಲೆ ಅರ್ಜುನನಿಗೆ "ನಾನೇನೂ ಹಿಂದಿ ಸಿನೇಮಾದ ನಾಯಕಿಯಂತೆ ಹಾದಿ ಕಾಯುತ್ತಿಲ್ಲಪ್ಪ. ಬಂದರೇನು? ಬಿಟ್ಟರೇನು? ನೋಡ್ರಿ ಅರ್ಜುನರಾವ್, ನೀವು ಮಾಡಿದ್ದಲ್ಲಿ ಏನೂ ತಪ್ಪಿಲ್ಲ – ನಿಮ್ಮ ಉದ್ದೇಶ ಛಲೋನೇ ಇವೆ–ಇದ್ದವು ಅನ್ನಿ, ಆದರೆ ಈ ವಿಷಯಕ್ಕೆ ಪಬ್ಲಿಸಿಟಿ ಕೊಡಬಾರದಿತ್ತು" (ಪು. ೪೨೫) ಎಂದು ಹೇಳುವಲ್ಲಿ ಅವಳ ನಿರಾಸೆಯನ್ನು ಗುರುತಿಸಬಹುದು.

ಇದೆಲ್ಲದರಿಂದ ಬೇಸರಗೊಂಡ ಅರ್ಜುನ 'ಕ್ರೈಸಿಸ್ ಕಮ್ ಅರ್ಜೆಂಟ್ಲೆ' ಎಂದು ಗೋವಿಂದನಿಗೆ ತಾರು ಮಾಡುತ್ತಾನೆ. ಕೊನೆಗೂ ಜುಲೈನಲ್ಲಿ ಅರ್ಜುನನ ಮನೆಗೆ ಬಂದ ಗೋವಿಂದನಿಗೆ ನಿರ್ಮಲೆಯ ಪರಿಚಯವಾಗುತ್ತದೆ. ನಿರ್ಮಲೆಯೊಂದಿಗೆ ಕೃಷ್ಣದುರ್ಗಕ್ಕೆ ಹೋಗಿ ಅಡ್ಡಾಡಿಕೊಂಡು ಸಂಜೆಯೊಳಗೆ ಹಿಂದಿರುಗುತ್ತೇನೆಂದು ಹೋದ ಗೋವಿಂದ ಸಂಜೆಯಲ್ಲ, ರಾತ್ರಿಯಾದರೂ ಕೂಡ ಹಿಂದಿರುಗುವುದಿಲ್ಲ. ಮಾರನೇ ದಿನ ಬೆಳಿಗ್ಗೆ ೮ ಗಂಟೆಗೆ ಹಿಂದಿರುಗುತ್ತಾರೆ. ಹಿಂದಿನ ರಾತ್ರಿಯ ವಿಚಾರ ಮಾತನಾಡುತ್ತಾ ಗೋವಿಂದ "ಸಾರಿ, ಓಲ್ಡ್ ಮ್ಯಾನ್! ನಾನು ರಾತ್ರಿ ಬರಲಿಲ್ಲ. ಕಾಳಜೀ ಮಾಡಬ್ಯಾಡಾ, ವಿಶೇಷ ಏನೂ ಆಗಿಲ್ಲ. ನನಗೆ ಅವಳ ಬಗ್ಗೆ ಹಾಗೆ ರೋಮ್ಯಾಂಟಿಕ್ ಅನಿಸಲಿಲ್ಲಪ್ಪ. ಆದರೂ ನಾನು ನನ್ನ ಅಕ್ಕನ ಜೊತೆ ಚರ್ಚಾ ಮಾಡಿ ತಿಳಿಸ್ತೀನಿ. ಹಾಗೆ ಶೀ ಇಜ್ ಆ ಗುಡ್ ಗರ್ಲ್, ಒಳ್ಳೇ ಹುಡುಗಿ ಪಾಪ. ಎಂದೋ ಲಗ್ನ ಮಾಡಿಕೊಂಡು ಸುಖದಿಂದ ಸಂಸಾರ ಮಾಡಬೇಕಿತ್ತು. ಆದರೆ ಅವಳಿಗೆ ನನ್ನಂಥವ ಯೋಗ್ಯನಲ್ಲವೇನೋ.. ಅವಳಿಗೆ ನಿನ್ನಂಥ ಮೃದು ಸ್ವಭಾವದ, ಆಜ್ಞಾಧಾರಕನಾದ ತಿಳುವಳಿಕೆಯಿದ್ದಂಥ ಗಂಡ ಬೇಕು. ನನಗೆ ಲಗ್ನ ಉಪಯೋಗವಿಲ್ಲವೇನೋ" (ಪು. ೪೨೯) ಎಂದು ತನ್ನ ಅನಿಶ್ಚಿತತೆಯನ್ನು, ನಿರುತ್ಸಾಹವನ್ನು ವ್ಯಕ್ತಪಡಿಸುತ್ತಾನೆ. ಆದರೆ "ಒಂದು ವಯಸ್ಸಾದ ನಂತರ ಯಾರೂ ಲಗ್ನದ ವಿಚಾರ ಮಾಡಬಾರದು?" (ಪು. ೪೨೯) ಎಂದು ಹೇಳುವ ನಿರ್ಮಲೆ ಆತ ತನ್ನ ಎಲ್ಲಾ ನಿರ್ಧಾರವನ್ನು ಅಕ್ಕನ ಮೇಲೆ ಬಿಟ್ಟಿರುವುದಾಗಿ ಹೇಳುತ್ತಾಳೆ. ಇಂತಹ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕೆ ನಿರ್ಮಲೆ ಅರ್ಜುನರಾವ್ ದಂಪತಿಗಳಿಗೆ ತನ್ನ 'ಕೃತಜ್ಞತೆ'ಯನ್ನು ಸಲ್ಲಿಸುತ್ತಾಳೆ.

ಗೋವಿಂದ ದೇಶಪಾಂಡೆ ಹಾಗೂ ನಿರ್ಮಲೆ ಇವರ ವಿವಾಹವು ಮುರಿದು ಬೀಳಲು ನಿರ್ಮಲೆಯ ಸ್ತ್ರೀವಾದಿ ನಿಲುವು ಕಾರಣವಾಗಿರದೇ, ದೇಶಪಾಂಡೆಯ ಅನಿಶ್ಚಿತ ಮನಃಸ್ಥಿತಿಯೇ

ಕಾರಣವಾಗುವುದನ್ನು ಇಲ್ಲಿ ಗುರುತಿಸಬಹುದು. ದೇಶಪಾಂಡೆ ಕೊನೆಗೆ ಯಾರನ್ನೂ ವಿವಾಹವಾಗದೇ ತನ್ನ ತಾಯಿಯನ್ನು ತನ್ನ ಸೋದರಮಾವನ ಮನೆಯಲ್ಲಿ ಬಿಟ್ಟು ತನ್ನ ಅಕ್ಕ ರಾಧಕ್ಕನನ್ನು ತನ್ನೊಂದಿಗೆ ಅಮೇರಿಕಾಕ್ಕೆ ಕರೆದುಕೊಂಡು ಹೋಗುತ್ತಾನೆ. ಇದು ಆತನ ಪಲಾಯನವಾದವೆಂದೂ ಕೂಡ ಹೇಳಬಹುದಾಗಿದೆ. ಆದರೆ ಇದರ ಪಾಪಪ್ರಜ್ಞೆ ಮಾತ್ರ ಅರ್ಜುನನ್ನು ಭೂತದಂತೆ ಕಾಣುತ್ತಿರುತ್ತದೆ.

ಒಟ್ಟಾರೆಯಾಗಿ ದುಃಸ್ವಪ್ನ ಮತ್ತು ಮಧ್ಯಸ್ಥರು ಎರಡು ಕಥೆಗಳಲ್ಲಿಯೂ ಮನುಷ್ಯನ ಮೂಲ ಪ್ರವೃತ್ತಿಗಳನ್ನು ನಿಯಂತ್ರಿಸಲು ಸಾಧ್ಯವಾಗದ ಹಪಾಹಪಿತನವನ್ನು ಗುರುತಿಸಬಹುದಾಗಿದೆ. ದುಃಸ್ವಪ್ನದಲ್ಲಿ ರಾಜಾ ತನ್ನಿಂದಾದ ಕೃತ್ಯಕ್ಕೆ ಪಾಪಪ್ರಜ್ಞೆಯಲ್ಲಿ ನರಳುತ್ತಿದ್ದರೆ, ಮಧ್ಯಸ್ಥರು ಕಥೆಯಲ್ಲಿ ಅರ್ಜುನನಲ್ಲಿ ಪಾಪಪ್ರಜ್ಞೆ ಭೂತದಂತೆ ಕಾಡುತ್ತಿರುತ್ತದೆ. ಅದರಿಂದ ಬಹುಶಃ ಅವನಿಗೆ ಬಿಡುಗಡೆಯೇ ಸಿಗುವುದಿಲ್ಲವೇನೋ. ಅರ್ಜುನನ ಈ ಪಾಪಪ್ರಜ್ಞೆ ತಾನು ನಿರ್ಮಲೆಯಲ್ಲಿ ಇಲ್ಲದಿದ್ದ ಆಸೆಗಳನ್ನು ಗೋವಿಂದನ ಮೂಲಕ ಮತ್ತೆ ಮೂಡುವಂತೆ ಮಾಡಿದ್ದರ ಪರಿಣಾಮವಾಗಿರುತ್ತದೆ.

೪.೪ ಮನೋ ವೈಜ್ಞಾನಿಕತೆಯ ಸಂಘರ್ಷ
ತೃಪ್ತ ಹಾಗೂ ನಾನಾನ ತೀರ್ಥಯಾತ್ರೆ ಕಥೆಗಳ ಹಿನ್ನೆಲೆಯಲ್ಲಿ

ತೃಪ್ತ :

ದೇಸಾಯಿ ಅವರು ೧೯೭೧ರಲ್ಲಿ ಹೊರ ತಂದ ಅವರ ಮೂರನೇ ಕಥಾ ಸಂಕಲನ 'ದಂಡೆ'ಯಲ್ಲಿನ ಎರಡು ಕಥೆಗಳು ತೃಪ್ತ ಹಾಗೂ ನಾನಾನ ತೀರ್ಥಯಾತ್ರೆ. ಈ ಎರಡೂ ಕಥೆಗಳಲ್ಲಿನ ನಾಯಕರು ಮಾನಸಿಕವಾಗಿ ಸಂಘರ್ಷಗಳನ್ನು ಎದುರಿಸುತ್ತಿದ್ದರೂ ಕೂಡ ಮೇಲ್ನೋಟಕ್ಕೆ ಮಾತ್ರ ತಮಗೇನೂ ಆಗೇ ಇಲ್ಲವೇನೋ ಎಂಬಂತೆ ಇರುತ್ತಾರೆ. 'ತೃಪ್ತ' ಕಥೆಯ ನಾಯಕ ವಿಶ್ವನಾಥ ಮುಂಬೈನಲ್ಲಿ ನ್ಯಾಶನಲ್ ಬ್ಯಾಂಕಿನಲ್ಲಿ ಉದ್ಯೋಗಿ. ಅವನ ಹೆಂಡತಿ ಪದ್ಮಿನಿ ಡಾ.ಪಾರೀಖರ ಔಷಧ ಕಂಪನಿಯಲ್ಲಿ ಕೆಲಸ ಮಾಡುತ್ತಿರುತ್ತಾಳೆ. ಇಬ್ಬರು ಮಕ್ಕಳು– ಒಂದು ಹೆಣ್ಣು, ಒಂದು ಗಂಡು. ವಿಶ್ವನಾಥನ ಜೀವನ ವೃತ್ತಗೊಂಡಿತ್ತು. ಹೆಂಡತಿ ಮಕ್ಕಳ ಸಣ್ಣ ಪುಟ್ಟ ಕಾಯಿಲೆಗಳ ಹೊರತಾಗಿ ಅವನಿಗೆ ಬೇರಾವ ವಿಶೇಷ ಚಿಂತೆ ಇರಲಿಲ್ಲ. ಜೀವನದಲ್ಲಿ ಬರುವ ಸಮಸ್ಯೆಗಳನ್ನು ಅಲ್ಲಲ್ಲಿಯೇ ನಿರ್ನಾಮ ಮಾಡಬೇಕು ಎಂಬುದು ಅವನ ಸಿದ್ಧಾಂತವಾಗಿರುತ್ತದೆ. ವಿಶ್ವನಾಥನಿಗೆ ಜೀವನದಲ್ಲಿ ತೊಡಕೆಂದರೆ ಆಗದು. ಹೀಗಾಗಿಯೇ ಆತ ತನ್ನ ನೆರೆಮನೆಯಲ್ಲಿದ್ದ ಅವಿನಾಶ ಬಿಡಕರ ತನ್ನ ಕೌಟುಂಬಿಕ ಜೀವನದಲ್ಲಿ ಸಮಸ್ಯೆಯಾಗಬಹುದು ಎಂದು ಎಣಿಸಿ ಅವನಿಗೆ ಪತ್ರವನ್ನು ಬರೆದು ತನ್ನ ಮನೆಗೆ ಬರುವುದನ್ನು ನಿಲ್ಲಿಸುವಂತೆ ಹೇಳುತ್ತಾನೆ. ಏಕೆಂದರೆ ತನ್ನ ಜೀವನ ಸರಳವಾಗಿ ಸಾಗಿರುವಾಗ ಅವಿನಾಶ ಎಲ್ಲಿಂದಲೋ ಬಂದು ಹಾಲಿನಲ್ಲಿ ಉಪ್ಪು ಸೇರಿಸುವುದು ಅವನಿಗೆ ಎಳ್ಳಷ್ಟೂ ಸೇರಿರಲಿಲ್ಲ. ಪದ್ಮಿನಿಯೂ ಆ ಬಗ್ಗೆ ಜಾಸ್ತಿ ಚರ್ಚಿಸದೇ ಸುಮ್ಮನಾದದ್ದು ಅವನಿಗೆ ಸಮಾಧಾನವನ್ನು ಕೊಟ್ಟಿರುತ್ತದೆ.

ವಿಶ್ವನಾಥ ಪದ್ಮಿನಿಯರ ವಿವಾಹಕ್ಕೆ ಎಂಟು ದಿನಗಳಿದ್ದ ಹಾಗೆ ಒಂದು ಅನಾಮಿಕ ಪತ್ರ 'ಪದ್ಮಿನಿ ಪ್ರೊ.ದೇಶಮುಖರ ಪ್ರೇಯಸಿಯಾಗಿದ್ದಳು' ಎಂಬ ಒಕ್ಕಣಿಯೊಂದಿಗೆ ಬಂದಿರುತ್ತದೆ. ಆ ಪತ್ರವನ್ನು ಓದಿ ಅವನಿಗೆ ನಗು ಬಂದಿರುತ್ತದೆ. ಪದ್ಮಿನಿ 'ಯಾರೋ ಅಸೂಯೆಯಿಂದ ಬರೆದಿದ್ದಾರೆ. ನಿಮಗೆ ನಂಬಬೇಕೆನಿಸಿದರೆ ನಂಬಿರಿ' ಎಂದಾಗ ಅವಳ ನಗುವ ಕಣ್ಣುಗಳನ್ನು ನೋಡಿ 'ಜಾನೇ ದೋ' ಎಂದು ಆ ಗುಂಗಾಡನ್ನು ಅಲ್ಲೇ ಟಪ್ಪನೆ ಹೊಡೆದು ಬಿಟ್ಟಿರುತ್ತಾನೆ. ಆ ಸಮಸ್ಯೆ ಅಲ್ಲಿಯೇ ನಿರ್ನಾಮವಾಗಿರುತ್ತದೆ. ಆದರೆ ಮುಂದೆ ಒಂದು ಸಲ ವಿಶ್ವನಾಥ ಬ್ಯಾಂಕಿನ ಕೆಲಸದ ಮೇಲೆ ಹೋಗುತ್ತಿದ್ದಾಗ ಪದ್ಮಿನಿ ಒಬ್ಬ ಅಪರಿಚಿತ ವ್ಯಕ್ತಿಯೊಡನೆ ಮಾತನಾಡುತ್ತಾ ನಿಂತಿರುವುದನ್ನು ಗಮನಿಸಿ ಆತ ಪ್ರೊ. ದೇಶಮುಖನಿರಬಹುದೇ ಎಂಬ ಅನುಮಾನ ಬರುತ್ತದೆ. ಮನೆಯಲ್ಲಿ ಗೆಳತಿಯೊಡನೆ ಸಿನಿಮಾಕ್ಕೆ ಹೋಗುವುದಾಗಿ ಹೇಳಿ ಪ್ರೊ. ದೇಶಮುಖನ ಜೊತೆ ತಿರುಗಾಡಲು ಹೋಗಿದ್ದಾಳೆಯೇ ಎಂದು ಅಸ್ವಸ್ಥಗೊಳ್ಳುತ್ತಾನೆ. ಆದರೆ ಮನೆಗೆ ಬಂದ ಮೇಲೆ ಪದ್ಮಿನಿ ನೀಡುವ ಉತ್ತರದಿಂದ ಅವನ ಸಂಶಯವೆಲ್ಲವೂ ಮಾಯವಾಗಿರುತ್ತದೆ. "ತನಗೆ ಸಾಕಷ್ಟು ಸಿಟ್ಟು ಬರುವುದಿಲ್ಲ. ತನ್ನಲ್ಲಿ ಸಾಕಷ್ಟು ಉತ್ಕಟತೆಯಿಲ್ಲ. ಪ್ಯಾಷನ್ ಇಲ್ಲ" ಎಂದು ಒಮ್ಮೊಮ್ಮೆ ವಿಶ್ವನಾಥನಿಗೆ ಅನಿಸಿತ್ತು. ಆದರೆ "ಸಂಶಯದ ಉರಿಯಲ್ಲಿ ಸುಟ್ಟು ಬೂದಿಯಾಗುವುದರಲ್ಲಿ ಯಾವ ಪುರುಷಾರ್ಥವಿದೆ?" (ಪು. ೧೮೨) ಎಂಬುದು ಅವನ ಆಲೋಚನೆ ಆಗಿರುತ್ತದೆ.

ಹೀಗೆ ಪದ್ಮಿನಿ ಮೇಲೆ ಅನುಮಾನ ಬಂದಾಗಲೆಲ್ಲಾ ವಿಶ್ವನಾಥ ಅವಳೊಂದಿಗೆ ಚರ್ಚಿಸಿ ಅವಳು ನೀಡಿದ ಉತ್ತರದಿಂದ ತೃಪ್ತನಾಗುತ್ತಿರುತ್ತಾನೆ. ಅವಳು ಪ್ರೀತಿಯಿಂದ ಹೇಳಿದ ಮಾತುಗಳನ್ನು ಆತ ಸಂತೋಷದಿಂದ ನುಂಗಿ ಅರಗಿಸಿಬಿಡುತ್ತಿದ್ದ – ತನ್ನನ್ನು ಕದಡಿಸುವ ಕಲ್ಲನ್ನು ನುಂಗುವ ಬಾವಿಯ ನೀರಿನಂತೆ. ಆದರೆ ಯಾಕೋ ಇತ್ತೀಚೆಗೆ ಏನೋ ಹೊಸದೊಂದು ಅಧ್ಯಾಯ ಶುರುವಾದಂತೆ ವಿಶ್ವನಾಥನಿಗೆ ಭಾಸವಾಗತೊಡಗುತ್ತದೆ. ಏಕೆಂದರೆ ಪಾರೀಖ ಎಂದರೆ ಮಹಾ ಲಂಪಟ ಎಂದು ಹೇಳಿದ್ದ ಪದ್ಮಿನಿಯೇ ಇತ್ತೀಚೆಗೆ ವಾರಕ್ಕೊಂದು ಸಲವಾದರೂ ಸಂಜೆ ತಡವಾಗಿ ಮನೆಗೆ ಬರತೊಡಗುತ್ತಾಳೆ. ಆಫೀಸಿನ ಕೆಲಸ ಬಹಳವಾದರೆ ಕೆಲಸ ಬಿಟ್ಟು ಬಿಡುವಂತೆ ವಿಶ್ವನಾಥ ಸಲಹೆ ನೀಡುತ್ತಾನೆ. ಆಗ ಪದ್ಮಿನಿ 'ಎಲ್ಲ ಚೆನ್ನಾಗಿಯೇ ಸಾಗಿದೆಯಲ್ಲ. ತಿಂಗಳಿಗೆ ೩೮೦ ರೂ ಅಂದರೇನು ಕಡಿಮೆಯೇ" ಎಂದು ಹೇಳಿ ಅವನನ್ನು ಸುಮ್ಮನಿರಿಸುತ್ತಾಳೆ. ಡಾ.ಪಾರೀಖ ಲಿಫ್ಟ್ ಕೊಡುವ ವಿಚಾರಕ್ಕೆ "ಅವನಿಗೇನು ಟೈಪಿಸ್ಟ್ ಹುಡುಗಿಯರಿಗೇನು ಕಡಿಮೆ ಅಂತ ತಿಳಕೊಂಡೀರೇನು? ನನ್ನಂಥ ಮಕ್ಕಳು ಮರಿ ಇದ್ದ ಮುದುಕಿಯ ಬೆನ್ನು ಹತ್ತಲಿಕ್ಕೆ? ದಾದರ ಅವನ ಹಾದಿಯಲ್ಲೇ ಇದೆ. ಬರ್‍ತೀರಾ ಅಂತ ಕರಿತಾನೆ. ಹೂಂ ಅನ್ನಲೇ ಬೇಕಾಗುತ್ತದೆ" ಎಂಬ ಅವಳ ಉತ್ತರದಿಂದ ಸಮಧಾನವಾದರೂ ಯಾಕೋ ಏನೋ ಮೈ ಮೇಲೆ ತನಗೆ ಗೊತ್ತಿಲ್ಲದ ಸಂದಿಗಳಲ್ಲಿ ಇರುವೆ ಹರಿದಾಡಿದಂತಾಗಿರುತ್ತದೆ. "ಇಂದು ಡಾ. ಪಾರೀಖನ ಮನೆಯಲ್ಲಿ ಇಂಗ್ಲೇಂಡಿನ ಬಾಸ್ ಬಂದಿದ್ದರ ನಿಮಿತ್ತ ಪಾರ್ಟಿ ಇದೆ. ನನಗೆ ಅಗತ್ಯದ ಆಮಂತ್ರಣವಿದೆ. ರಾತ್ರಿ ಹತ್ತರ ಸುಮಾರಿಗೆ ತಿರುಗಿ ಬರುವೆ. ಬಹುಶಃ ಅವರೇ ನನಗೆ ಡ್ರಾಪ್ ಮಾಡಬಹುದು. ಹುಡುಗರಿಗೆ ,ನಿಮಗೆ ಅಡಿಗೆ ಮಾಡಿ ಇಟ್ಟಿದ್ದೇನೆ" (ಪು. ೧೮೦) ಎಂದು ಪತ್ರ ಬರೆದಿಟ್ಟು ಹೋಗಿದ್ದ ಪದ್ಮಿನಿ ರಾತ್ರಿ ಹನ್ನೆರಡು ಗಂಟೆಯಾದರೂ ಮನೆಗೆ ಹಿಂತಿರುಗಿರುವುದಿಲ್ಲ. ಎಂದೂ ಇಷ್ಟು ತಡ ಮಾಡಿದವಳಲ್ಲ. ರಾತ್ರಿ ಒಂದು ಗಂಟೆಯಾದರೂ ಕೂಡ ಡಾ. ಪಾರೀಖರ ಕಾರಿನ ಸಪ್ಪಳವಾಗುವುದಿಲ್ಲ. ರಾತ್ರಿ ಹನ್ನೊಂದು ಗಂಟೆಗೇ ಫೋನ್ ಮಾಡಬೇಕೆಂಬುದೂ ಕೂಡ ಅಸ್ವಸ್ಥತೆಯಿಂದ ಕಳವಳಗೊಂಡಿದ್ದ ವಿಶ್ವನಾಥನಿಗೆ ಹೊಳೆದಿರುವುದಿಲ್ಲ. ಸಿಟ್ಟಿನಿಂದ ತಪ್ತನಾಗಿದ್ದ ವಿಶ್ವನಾಥನಿಗೆ ಪದ್ಮಿನಿ ಮನೆಗೆ ಬಂದೊಡನೆ 'ಯು ಡರ್ಟಿ ಬಿಚ್' ಎಂದು ಒದರಿ ಅವಳ ಕಪಾಳಕ್ಕೆ ಬಿಗಿಯುವಷ್ಟು ಆವೇಶ ಬಂದಿರುತ್ತದೆ. ಮನೆಯಿಂದ ಓಡಿಸಿಬಿಡಬೇಕು ಎಂಬ ಆಲೋಚನೆಯೂ ಮೂಡಿರುತ್ತದೆ.

ಆದರೆ ಅವಳು ಈಗ ಬಂದರೆ–ಯಾಕೆ ಇಷ್ಟು ತಡವಾದದ್ದು? ಎಂದು ಕೇಳಿದಾಗ ಆಕೆ ಥಪ್ಪನೆ ಮುಖದ ಮೇಲೆ ಸತ್ಯವನ್ನೇ ಉಗುಳುಬಿಟ್ಟರೆ– ವಿಶ್ವನಾಥನಿಗೆ ವಿಚಿತ್ರ ಭಯವಾಗುತ್ತದೆ. 'ಯಾಕೆ ತಡವಾಯಿತು? ಡಾ.ಪಾರೀಖರ ಜೊತೆಗಿದ್ದೆ. ಇಷ್ಟೂ ತಿಳಿಯಬಾರದೇ ನಿನ್ನ ದಟ್ಟವಾದ ಮಿದುಳಿಗೆ?' ಎಂದು ಅವಳು ಖಡಾಖಂಡಿತವಾಗಿ ಹೇಳಿ ಬಿಟ್ಟರೇ? ಹಾಗೆ ಅವಳು ಅಂದುಬಿಟ್ಟರೆ, ತಾನೂ 'ಹಾಗಾದರೆ ಅವನ ಜೊತೆಗೆ ಹೋಗಿ ಬಿಡು. ಇಲ್ಲಿಗೇಕೆ ಬಂದಿ?' ಎಂದು ಹೇಳಲೇ ಬೇಕಾಗುವುದಲ್ಲ ಎಂದು ಅಸ್ವಸ್ಥಗೊಳ್ಳುತ್ತಾನೆ. ತನ್ನ ಮಾತಿನಂತೆ ಅವಳು ನಿಜಕ್ಕೂ ಹೋಗಿಯೇ ಬಿಟ್ಟರೆ? ಎಂದು ವಿಶ್ವನಾಥ ತಲೆ ಹಿಡಿದುಕೊಂಡು ಕಣ್ಣುಮುಚ್ಚಿ ವಿಚಾರ ಮಾಡತೊಡಗುತ್ತಾನೆ. ವಿಶ್ವನಾಥನ ಬಳಿಯಲ್ಲಿದ್ದ ಎಲ್ಲಾ ಸಿಗರೇಟುಗಳು–ಕರೀ ತಲೆಯ ತುಂಡುಗಳಾಗಿ ಆಶ್ ಟ್ರೇ ತುಂಬಿ ಹೊರ ಸೂಸಿವೆ. ಸಿಗರೇಟಿನ ತುಂಡಿನಂತೆಯೇ ವಿಶ್ವನಾಥನ ಮನದಲ್ಲಿನ ಚಿಂತೆಗಳು

ಅವನನ್ನು ಸುಟ್ಟವೆ. ಆದರೆ ಆ ನಂತರ ಬೂದಿಯಾಗಿವೆ. ತಡವಾಗಿ ಬಂದ ಪದ್ಮಿನಿ "ಇಷ್ಟೊಂದು ಸಿಗರೇಟು ಸೇದಬಾರದು ವಿಶೂ. ಪ್ರಕೃತಿಗೆ ನೆಟ್ಟಗಲ್ಲ ಅದು. ಹೊರಗೆ ಥಂಡಿ ಎಷ್ಟಿದೆ ಗೊತ್ತೇನು? ನಡೆ ಹಾಸಿಗೆಯಲ್ಲಿ ಬೆಚ್ಚಗೆ ಮಲಗೋಣ ಹಾಂ" (ಪು. ೧೮೪) ಎಂದು ಅವನ ತಲೆಯ ಕೂದಲಲ್ಲಿ ಬೆರಳಾಡಿಸಿದಾಗ ವಿಶ್ವನಾಥನಿಗೆ ಹಾಯೆನಿಸುತ್ತದೆ ಹೀಗೆ ತೃಪ್ತ ಕಥೆಯಲ್ಲಿನ ವಿಶ್ವನಾಥನು ತನ್ನ ಹೆಂಡತಿಯ ಅನೈತಿಕ ಮಾರ್ಗಗಳನ್ನು ಕಂಡು ಸಿಡಿಯಬಹುದೇನೋ ಎಂದೆನಿಸಿದರೂ ಕೂಡ ಸಿಡಿಯದೇ ಹಾಗೆ ತಣ್ಣಗಾಗುತ್ತಾನೆ. 'ಜೀವನಕ್ಕೆ ಸರಳ ರೂಪುಗೊಟ್ಟರೆ ಜೀವನದಲ್ಲಿಯ ಸಮಸ್ಯೆಗಳನ್ನೆಲ್ಲ ನಿರ್ನಾಮ ಮಾಡಿ ಬಿಡಬಹುದು? ಹೀಗೆ ನಿರ್ನಾಮ ಮಾಡುವುದರಲ್ಲಿಯೇ ಸುಖವಿದೆ. ಶಾಂತಿಯಿದೆ. ತೃಪ್ತಿಯಿದೆ.' (೧೮೧) ಇದು ಅವನ ಅನುಭವದ ಮಾತು.

ನಾನಾನ ತೀರ್ಥಯಾತ್ರೆ :

ನಾನಾ ಏನೂ ಕೆಲಸವಿಲ್ಲದೆ ಸುಮ್ಮನೆ ಕಾಲ ಕಳೆಯುತ್ತಿದ್ದ ವ್ಯಕ್ತಿ. ಆದರೆ ತನ್ನ ತಮ್ಮ ರಾಮಭಾವು ತನಗೆ ಆಗೀಗ ಹಚ್ಚುತ್ತಿದ್ದ ಲೆಕ್ಕ ತಪಾಸಣೆ ಮಾಡುತ್ತಿರುತ್ತಾನೆ. ಆದರೆ ಅವನಿಗೆ ಆ ಕೆಲಸದಲ್ಲಿಯೂ ಕೂಡ ಆಸಕ್ತಿ ಇರುವುದಿಲ್ಲ. ಅವನ ತಮ್ಮ ರಾಮಭಾವು ದೊಡ್ಡ ದೊಡ್ಡ ಧಂಧೆ ಮಾಡುತ್ತಿರುತ್ತಾನೆ.ಕಿರಾಣಿ ಅಂಗಡಿ, ಗಿರಣಿ ಇಟ್ಟಿರುತ್ತಾನೆ, ಹೊಲವನ್ನು ತೆಗೆದುಕೊಂಡಿರುತ್ತಾನೆ. ಒಮ್ಮೊಮ್ಮೆ ಕಂಟ್ರಾಕ್ಟ್ ಮಾಡುತ್ತಿರುತ್ತಾನೆ. ಆದರೆ ನಾನಾ ಏನೂ ಕೆಲಸ ಇಲ್ಲದೆ ಬರೀ ಕೂತುಕೊಂಡು ತಿನ್ನುತ್ತಿರುತ್ತಾನೆ. ಇದರಿಂದಾಗಿ ಮನೆಯಲ್ಲಿ ರಾಮಭಾವುನ ಹೆಂಡತಿ ತಾರಾಬಾಯಿಗೆ ನಾನಾನನ್ನು ಕಂಡರೆ ಅಷ್ಟಕಷ್ಟೆ. ತಾರಾಬಾಯಿಯ ಸಾಮ್ರಾಜ್ಯದಲ್ಲಿ ಚಹಾ-ಊಟದ ಹೊರತು ಒಳಗೆ ಕಾಲಿಕ್ಕುವುದೆಂದರೆ ಒಂದು ರೀತಿಯ ಅಪರಾಧವಾಗಿರುತ್ತದೆ. ನಾನಾನ ಹೆಂಡತಿ ಸೀತಾ ಒಂದು ಮಗುವಿಗೆ ಜನ್ಮ ನೀಡಿ ಟಿ.ಬಿಯಿಂದ ಹತ್ತು ವರ್ಷಗಳ ಹಿಂದೆಯೇ ಮರಣವನ್ನು ಹೊಂದಿರುತ್ತಾಳೆ. ಹೀಗಾಗಿ ನಾನಾ ತನ್ನ ಮಗಳಾದ ಸುಬ್ಬಿಯೊಂದಿಗೆ ತಮ್ಮ ರಾಮಭಾವುವಿನ ಮನೆಯಲ್ಲಿಯೇ ಇರುತ್ತಾನೆ. ಎಂದಿನಂತೆ ಚಹಾ ಕುಡಿದ ನಾನಾ ತನ್ನ ಮಗಳಾದ ಸುಬ್ಬಿಗೆ ಹೇಳಿ ಮನೆಯಿಂದ ಹೊರಡುತ್ತಾನೆ. ಸುಬ್ಬಿ 'ಭಾಳ ಕುಡಿದು ಬರಬ್ಯಾಡ' ಎಂದು ಹೇಳುವುದರ ಜೊತೆಗೆ "ಲಗು ಬಂದರೆ ಊಟಾ, ಇಲ್ದಿದ್ರ ಹಾಂಗ ಮಲಕೋಬೇಕು ನೋಡು" ಎಂದು ಮನೆಯ ಒಳಗಡೆ ಕಕ್ಕಿಯ ಸಾಮ್ರಾಜ್ಯದತ್ತ ದೃಷ್ಟಿ ಚೆಲ್ಲಿ ಭರಭರ ಹೊರಗೆ ಹೋಗಿಬಿಟ್ಟಳು (ಪು. ೨೦೭). ಇಲ್ಲಿ ಮನೆಯಲ್ಲಿ ನಾನಾನಿದ್ದ ಪರಿಸ್ಥಿತಿಯನ್ನು ಲೇಖಕರು ಸಂಜ್ಞಾತಂತ್ರದ ಮೂಲಕ ಚಿತ್ರಿಸಿದ್ದಾರೆ.

ಮನೆಯಿಂದ ಹೊರಟ ನಾನಾ ರಾಮಭಾವುನಿಂದ ತಪ್ಪಿಸಿಕೊಳ್ಳಲು ಬೇಗ ಬೇಗ ಹೆಜ್ಜೆ ಹಾಕುತ್ತಿರುತ್ತಾನೆ. ರಾಮಭಾವುವಿನ ಮಗನಾದ ಕೃಷ್ಣ ತಾನೂ ಬರುವುದಾಗಿ ಅವನಿಗೆ ಗಂಟು ಬೀಳುತ್ತಾನೆ. ಇದಕ್ಕೆ ಮುಖ್ಯ ಕಾರಣ ನಾನಾ ಕೃಷ್ಣನಿಗೆ ಬುಗುರಿಯನ್ನು ತಂದುಕೊಡುತ್ತೇನೆಂದು ಹೇಳಿ ತಂದುಕೊಡದಿದ್ದುದೇ ಕಾರಣವಾಗಿರುತ್ತದೆ. ಹೇಗೋ ಅವನನ್ನು ಸಮಾಧಾನಪಡಿಸಿದ ನಾನಾ ಹೊರಡುತ್ತಾನೆ. ನಾನಾನ ಕುಡಿತನ ಚಟದ ಬಗ್ಗೆ ಅವನ ಓಣಿಯಲ್ಲಿದ್ದ ಮಕ್ಕಳಾದಿಯಾಗಿ ಎಲ್ಲರಿಗೂ ತಿಳಿದಿರುತ್ತದೆ. ಮಕ್ಕಳು ಕೃಷ್ಣನಿಗೆ ಕೇಳುವಂತೆ "ಬಿಟ್ಟಗಿಟ್ಟೀಲೆ, ಕೃಷ್ಣಾ, ನಿಮ್ಮ ದೊಡ್ಡಪ್ಪನ್ನ ಎಲ್ಲಿ ಹೊರಟಾನ ಗೊತ್ತದಿಲ್ಲೋ?" "ಬಗರೀ ತರಾಕ ಹೊರಟಿಲ್ಲ ಅಂವ, ಬಗರೀ ಆಗಾಕ

ಹೊರಟಾನ!" ತಿರುಗತಾ ತಿರುಗತಾ ಗಟಾರದಾಗ ಬೀಳಾಕ ಹೊರಟಾನ" ಎಂದು ಬಾಯಿಗೆ ಬಂದದ್ದನ್ನು ಹೇಳುತ್ತಾ ಖೊ ಖೊ ಖ್ಯೊ ಖ್ಯೊ ಎಂದು ನಗಲು ಪ್ರಾರಂಭಿಸುತ್ತಾರೆ. ನಾನಾ ಮಕ್ಕಳ ಮೇಲೆ ಹುಸಿ ಸಿಟ್ಟು ತೋರುತ್ತಾನೆ. ಬಂಡ್ಯಾ 'ತಾತ್ಯಾ ನಾವು ಕೂಡ ಬರೋಣೇನು ನಿನ್ನ ಕೂಡ? ನಿನ್ನ ಎತಕೊಂಡು ಬರಾಕ?' ಎಂದು ಕೇಳುತ್ತಾನೆ. ಇದರಿಂದ ನಾನಾನಿಗೆ ಇವನೂ ನನ್ನನ್ನೂ ಚೇಷ್ಟೆ ಮಾಡುತ್ತಿದ್ದಾನಲ್ಲ ಎಂದು ಆಶ್ಚರ್ಯವಾಗುತ್ತದೆ. ಕೊನೆಗೆ ಹುಡುಗರೊಂದಿಗೆ ತಮಾಷೆ ಮಾಡುತ್ತಾ, ಅವರ ಚೇಷ್ಟೆಗಳಿಗೆ ಅಸಹಾಯಕತೆಯಿಂದ ನಗುತ್ತಾ ನಾನಾ ಅಲ್ಲಿಂದ ಜಾರಿಕೊಳ್ಳುತ್ತಾನೆ.ಹಾದಿಯಲ್ಲಿ ಎಲ್ಲಾದರೂ ರಾಮಭಾವು ಭೆಟ್ಟಿಯಾದಾನೆಂದು ಅಡ್ಡದಾರಿ ಹಿಡಿದು ರುಸ್ತುಮಜಿಯ ಸೆರೆ ಅಂಗಡಿಗೆ ಬರುತ್ತಾನೆ. ತನ್ನ ಹತ್ತಿರ ದುಡ್ಡಿಲ್ಲದ್ದರಿಂದ ತಮ್ಮನ ಲೆಖ್ಖದ ಮೇಲೆ ತನ್ನ ತೀರ್ಥಯಾತ್ರೆಯನ್ನು ಪ್ರಾರಂಭಿಸುತ್ತಾನೆ. ಎರಡು ಪೆಗ್ಗುಗಳಾದ ನಂತರ ರುಸ್ತುಮಜಿಯನ್ನು ತನ್ನ ತಮ್ಮನ ಲೆಕ್ಕದಲ್ಲಿಯೇ ಒಂದು ಪೆಗ್ ಕುಡಿಯುವಂತೆ ಒತ್ತಾಯ ಪಡಿಸಿ ಅವರಿಗೂ ಕುಡಿಸುತ್ತಾನೆ. ಕುಡಿದ ಅಮಲಿನಲ್ಲಿ ತಾನು ಜೀವನದಲ್ಲಿ ಎಲ್ಲವನ್ನೂ ಅನುಭವಿಸಿದ್ದು, ಹೆಂಡತಿ ಸತ್ತ ಮೇಲೆ ಕಾಶಿ –ಹರಿದ್ವಾರಗಳ ತೀರ್ಥಯಾತ್ರೆಯನ್ನು ಮಾಡಿರುವುದಾಗಿ ಹೇಳುತ್ತಾನೆ. ಜೀವನದಲ್ಲಿ ತಾನು ಮಾಡದೇ ಉಳಿದಿರುವುದು ಏನೂ ಇಲ್ಲವೆಂದು ಹೇಳುತ್ತಾನೆ.

ಆದರೆ ರುಸ್ತುಮಜಿಯ ಪ್ರಕಾರ ನಾನಾ ತನ್ನ ಜೀವನದಲ್ಲಿ ಯಾರನ್ನಾದರೂ ಕೊಲ್ಲೋವಂತ ಕೆಟ್ಟ ಕೆಲಸವೊಂದನ್ನು ಮಾಡಿರುವುದಿಲ್ಲ. ಇದನ್ನು ಕೇಳಿ ನಾನಾನಿಗೆ ರುಸ್ತುಮಜಿಯ ಮೇಲೆ ಸಿಟ್ಟು ಬರುತ್ತದೆ. "ವಾರಕ್ಕೆರಡು ಸಾರಿ ನದೀಗೆ ಹೋಗಿ ಮೀನು ಹಿಡಿಯುವ ನನಗೆ ಕೊಲ್ಲುವುದು ಗೊತ್ತಿಲ್ಲವೇ.. ಹೆಂಡತಿ ಟಿ.ಬಿಯಿಂದ ಬಳಲುತ್ತಿದ್ದಾಗ ಅವಳಿಗೆ ಮೋಸ ಮಾಡಿ – ಅವಳು ಬಸಿರಾಗಿ ಹಡೆದು ಸಾಯುವಂತೆ ಮಾಡಿ, ತಾರಾಬಾಯಿಯ ಹಂಗಿನ ಜೇಲಿನಿಂದ ಬಿಡುಗಡೆ ಮಾಡಿದೆ. ಹುಂ ನನಗೆ ಕೊಲ್ಲುವ ಅನುಭವವಿಲ್ಲವಂತೆ ...! ಬೇಕಾದರೆ ಇಲ್ಲಿ ಕೂಡ ಎಲ್ಲರನ್ನೂ ಚಾಕುವಿನಿಂದ ಕೊಂದು ತೋರಿಸ್ತೇನೆ" (ಪು. ೨೧೦) ಎಂದು ಆಲೋಚಿಸುವಲ್ಲಿ ನಾನಾನ ಮನದಲ್ಲಿ ಮೂಡಿದ್ದ ಸಂಘರ್ಷವನ್ನು ಗುರುತಿಸಬಹುದು. ಈ ಕಾರಣಕ್ಕಾಗಿಯೇ ಅವನು ರುಸ್ತುಮಜಿಯೊಂದಿಗೆ ಜಗಳವಾಡುತ್ತಾನೆ. ತದ ನಂತರ ಅಲ್ಲಿಗೆ ಬಂದ ತನ್ನ ಬಾಲಮಿತ್ರ ನಾಯ್ಕ ರಾಮುನನ್ನು ಬೈದು ಕಳುಹಿಸುತ್ತಾನೆ. ತೀರ್ಥ ಸೇವನೆ ಜಾಸ್ತಿಯಾದ್ದರಿಂದ ನಾನಾ ಅಲ್ಲಿಯೇ ಪ್ರಜ್ಞೆ ತಪ್ಪಿ ಬೀಳುತ್ತಾನೆ. ಸ್ವಲ್ಪ ಹೊತ್ತಿನ ನಂತರ ಎಚ್ಚರವಾದಾಗ "ಬಿಡಿರಿ, ಬಿಡಿರಿ ನಾ ಹೋಗ್ತೀನಿ ಮನೆಗೆ. ಎಷ್ಟು ಹೊಡೀತು? ಓಹ್ ಹತ್ತು ! ಆಯ್ತು... ನನಗೆ ಮನೆಯಲ್ಲಿ ಇನ್ನು ಊಟ ಸಿಗಲಾರದು. ಇರಲಿ, ಅವರಿಗೆ ಬಡಿದೆಬ್ಬಿಸ್ತೀನಿ. ನಾ ಅಂದರೆ ಯಾರು? ನನಗೆ ನಮ್ಮ ಮನೆಯಲ್ಲಿ ಊಟವಿಲ್ಲವೆಂದರೇನು? ಬಿಡಿರಿ. ಹೋಗುವೆ".. (ಪು. ೨೧೨) ಎಂಬ ಮಾತುಗಳಲ್ಲಿ ನಾನಾ ಮನೆಯಲ್ಲಿ ಎದುರಿಸುತ್ತಿದ್ದ ಸಂಘರ್ಷಗಳನ್ನು ಗುರುತಿಸಬಹುದಾಗಿದೆ. ಅದು ಅವನ ಮನೋವ್ಯಥೆಗೂ ಕೂಡ ಕಾರಣವಾಗಿರುತ್ತದೆ.

ಅಂಗಡಿಯಿಂದ ಮನೆಗೆ ಹೋಗಲೆಂದು ಹೊರಬಿದ್ದ ನಾನಾ ಬೆಳದಿಂಗಳಿನಲ್ಲಿ ತಾನು ನೋಡಿದ್ದ ಗಂಗಾನದಿಯನ್ನು ಕಲ್ಪಿಸಿಕೊಂಡು ಮನೆಯ ಬದಲು ನದಿಯ ದಂಡೆಗೆ ಬರುತ್ತಾನೆ.

ಉಸುಕಿನಲ್ಲಿ ನಡೆದು ನೀರಿನ ಅಂಚಿಗೆ ಬಂದ ನಾನಾನಲ್ಲಿ ವಿಚಿತ್ರ ಸಂವೇದನೆ ಉಂಟಾಗುತ್ತದೆ. ಈ ಕುಡುಕ ಮುದುಕ ಹೇಗೆ ಸ್ಮೃತಿ ತಪ್ಪಿ ಮನೀಗೆ ಹೋಗೋದು ಬಿಟ್ಟು, ನದೀಗೆ ಬಂದು ಬಿಟ್ಟಿದ್ದಾನೆ ಹಾಗೆ ಮರೆತು ಥೇಟ ಹೋಗಿ ನದೀ ಪಾಲಾಗಿ ಬಿಟ್ಟರೆ ಎಂದು ನಾನಾ ತನ್ನನ್ನು ತಾನೇ ಎಚ್ಚರಿಸಿಕೊಳ್ಳುತ್ತಾನೆ. ಆದರೆ ಇದ್ದಕ್ಕಿದ್ದಂತೆ ನಾನಾನಿಗೆ ಮಬ್ಬು ಬಂದಂತಾಗಿ 'ನೀರ ಮ್ಯಾಲೆ ನಡೀಲಿಕ್ಕೆ ಬರ್ತದ' ಎಂದು ಕಾಶಿಯಲ್ಲಿ ಒಬ್ಬ ಸಾಧು ಅವನಿಗೆ ಹೇಳಿದ್ದ ಮಾತು ಇದ್ದಕ್ಕಿದ್ದ ಹಾಗೆ ನೆನಪಾಗುತ್ತದೆ. "ಆದರ ನಾ ನನ್ನ ಶಕ್ತಿಯ ಪ್ರದರ್ಶನ ಎಂದೂ ಮಾಡೋದಿಲ್ಲ. ಥೂ ಅವ ಹೇಡಿ" (೨೧೩) ಎಂದು ಹೇಳಿಕೊಳ್ಳುತ್ತಲೇ ನಾನಾ ನದಿಯಲ್ಲಿ ಮುಳುಗಿ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ತನ್ನ ಸಾಧನೆಯ ಬಗ್ಗೆ ತಾನೇ "ಜನರಿಗೆ ಅನ್ನಿಸ್ತದ ಬಹುಶಃ ನನಗೆ ನಾಚಿಕೆ ಅನಿಸ್ತಿರಬೇಕು ಅಂತ. ನನಗೆ ಮಾತ್ರ ಏನೂ ಕೆಟ್ಟನಿಸೋದಿಲ್ಲ ನೋಡಿ" (ಪು. ೨೦೯) ಎಂದು ಆಲೋಚಿಸುವ ನಾನಾ ಕಥೆಯ ಕೊನೆಯಲ್ಲಿ ತನ್ನ ಈ ದನಿಯನ್ನು ಕಳೆದುಕೊಂಡು, ರುಸ್ತುಮಜಿ ಹೇಳಿದಂತೆ ತನ್ನ ಜೀವನದಲ್ಲಿ ತಾನು ಮಾಡದೇ ಉಳಿದಿದ್ದ ಒಂದೇ ಒಂದು ಕೆಲಸವನ್ನು ತನ್ನ ಆತ್ಮಹತ್ಯೆಯ ಮೂಲಕವೇ ಪೂರೈಸುತ್ತಾನೆ. ಬದುಕಿನಲ್ಲಿ ಅಗಾಧವಾದ ಅನುಭವವನ್ನು ಹೊಂದಿದ್ದ ನಾನಾ ತನ್ನ ಬಾಹ್ಯ ಪ್ರಜ್ಞೆಯನ್ನು ಮರೆತು ತನ್ನ ಪ್ರಾಣವನ್ನು ಕಳೆದುಕೊಳ್ಳುವಲ್ಲಿ ಲೇಖಕರು ಸಂಜ್ಞಾ ಪ್ರವಾಹ ತಂತ್ರವನ್ನು ಬಳಸಿರುವುದು ಮನೋಜ್ಞವಾಗಿದೆ.

೪.೫ ಅಸ್ತಿತ್ವವಾದದೊಡನೆ ಸಂಘರ್ಷ
ಪ್ರಯಾಣ ಹಾಗೂ ಅಂತರ ಕಥೆಗಳ ಹಿನ್ನೆಲೆಯಲ್ಲಿ

ಪ್ರಯಾಣ :

'ಪ್ರಯಾಣ' ದೇಸಾಯಿ ಅವರು ೧೯೭೭ರಲ್ಲಿ ಬರೆದ ಕಥೆಯಾಗಿದ್ದು, ಇದು ೧೯೮೨ ರಲ್ಲಿ ಪ್ರಕಟವಾದ ಅವರ ಐದನೇ ಕಥಾಸಂಕಲನವಾದ 'ಪರಿವರ್ತನೆ'ಯಲ್ಲಿ ಪ್ರಕಟಗೊಂಡಿದೆ. "ಪರಿವರ್ತನೆಯಲ್ಲಿ ಕೆಲವು ಸಾಮಾಜಿಕ ಕಾಳಜಿಗಳು, ಕೆಲವು ವೈಯಕ್ತಿಕ ಸಂದಿಗ್ಧತೆಗಳು ಹೆಚ್ಚಿನ ಪ್ರಕರ್ಷತೆಯಿಂದ ಬಂದಿವೆಯೆಂದೂ, ಕಥನ ಕ್ರಿಯೆಯಲ್ಲಿ ಹೆಚ್ಚಿನ ಪ್ರಬುದ್ಧತೆ ಬಂದಿದೆಯೆಂದೂ ತನ್ನ ಹಲವಾರು ವಿಮರ್ಶಕ ಮಿತ್ರರ ಅಭಿಪ್ರಾಯ" (ಪು. viii) ಎಂದು ದೇಸಾಯಿ ಹೇಳಿದ್ದಾರೆ.

'ಪ್ರಯಾಣ' ಕಥೆಯು ಅಸ್ತಿತ್ವವಾದೀ ನೆಲೆಯನ್ನು ಹಾಗೂ ವೈಯಕ್ತಿಕ ಸಂದಿಗ್ಧತೆಯನ್ನು ಒಳಗೊಂಡ ಕಥೆಯಾಗಿದೆ. ಪ್ರಯಾಣ ಕಥೆಯಲ್ಲಿನ ಕಿಶೋರ ಮುಂಬಯಿಯಲ್ಲಿ ಉದ್ಯೋಗದಲ್ಲಿರುತ್ತಾನೆ. ದೇಶಸ್ಥ ಬ್ರಾಹ್ಮಣನಾದ ಈತ ಜಮಖಂಡಿ ಸಂಸ್ಕೃತಿಯನ್ನು ಹೊಂದಿರುತ್ತಾನೆ. ಇವನ ಹೆಂಡತಿ ಮೇರಿ ಕ್ಯಾಥಲಿಕ್ ಕ್ರಿಶ್ಚಿಯನ್ ಆಗಿದ್ದು, ಮುಂಬಯಿಯಲ್ಲಿ ಬೆಳೆದಿದ್ದರಿಂದ ಅವಳಲ್ಲಿ ಮುಂಬಯಿ ಸಂಸ್ಕೃತಿ ಕಂಡು ಬರುತ್ತದೆ. 'ದೇವಕಿ ನಿನ್ನೆ ರಾತ್ರಿ ೧೧ ಗಂಟೆಗೆ ತೀರಿಕೊಂಡಳು' ಎಂಬ ತಾರು ನೋಡಿದ ಕೂಡಲೇ ಕಿಶೋರನಿಗೆ ನಿಶ್ಚಿಂತೆಯಾಗುತ್ತದೆ. ಏಕೆಂದರೆ ದೇವಕಿಯ ಜೀವನ ಮುಗಿದಿರುತ್ತದೆ! ದೇವಕಿ ಕಿಶೋರನ ಅಕ್ಕನಾಗಿದ್ದು ಜಮಖಂಡಿಯಲ್ಲೇ ವಾಸಿಸುತ್ತಿರುತ್ತಾಳೆ. ಅಕ್ಕನ ಸಾವಿಗೆ ಜಮಖಂಡಿಗೆ ಹೋಗಲು ಕಿಶೋರ ನಿರಾಕರಿಸಿದಾಗ ದೇವಕಿ ಅವನ ಅಕ್ಕನಾಗಿರುವುದರಿಂದ ಕಿಶೋರನು ಜಮಖಂಡಿಗೆ ಹೋಗಬೇಕೆಂದೂ ಮತ್ತು ಅದು ಅವನ ಕರ್ತವ್ಯವೆಂದೂ ಕಿಶೋರನ ಹೆಂಡತಿ ಮೇರಿ ಅಭಿಪ್ರಾಯಪಡುತ್ತಾಳೆ. ಆದರೆ ಕಿಶೋರನಿಗೆ ತನ್ನ ಕರ್ತವ್ಯಗಳ ಬಗ್ಗೆ ಮೇರಿ ಹೇಳುವ ಅವಶ್ಯಕತೆ ಇಲ್ಲವೆಂಬ ಅಭಿಪ್ರಾಯವಿರುತ್ತದೆ. ದೇವಕಿಯನ್ನು ಕರೆ ತಂದು ಮನೆಯಲ್ಲಿ ಇಟ್ಟುಕೊಳ್ಳಬೇಕೆಂದು ಕಿಶೋರ ಎಷ್ಟೋ ಬಾರಿ ಅಂದುಕೊಂಡರೂ ಅದು ಸಾಧ್ಯವಾಗಿರುವುದಿಲ್ಲ. ಇದಕ್ಕೆ ಮೇರಿಯೇ ಕಾರಣ ಎಂಬುದು ಅವನ ಗ್ರಹಿಕೆ ಆಗಿರುತ್ತದೆ (ಪು. ೩೭). ಆದರೆ ಹಾಗೆ ನೋಡಿದರೆ ಮೇರಿಯದೇನೂ ತಪ್ಪಿರಲಿಲ್ಲ. ಕಿಶೋರನ ಆಫೀಸಿನ ವ್ಯವಹಾರವೇ ಬಹಳ ಇರುತ್ತದೆ. ಆ ರೋಗಿಯಾದ ಮುದುಕಿಯನ್ನ–ಹಿಂದೆ ಆತನನ್ನು ತಾಯಿಯಂತೆ ಸಲುಹಿತ್ತಿದ್ದವಳನ್ನು ಅತ್ಯಂತ ಪ್ರೀತಿಯಿಂದ ಅವನ ಎಲ್ಲ ಯಶಸ್ಸನ್ನು ಹರಸಿದ್ದವಳನ್ನು ನೋಡಲು ಹೋಗುವುದಕ್ಕೆ ತನ್ನ ಆಫೀಸಿನ ವ್ಯವಹಾರದ ಒತ್ತಡದಿಂದ ಸಾಧ್ಯವಾಗಿರುವುದಿಲ್ಲ. ಹೀಗಾಗಿ ಆತ ದೇವಕಿಗೆ ಹುಷಾರಿಲ್ಲವೆಂದು ತಿಳಿದಾಗ ಗೋವಿಂದ ಕಾಕಾನಿಗೆ ಹಣ ಕಳುಹಿಸಿ ತನ್ನ ಕರ್ತವ್ಯವನ್ನು ಸ್ವಲ್ಪ ಮಟ್ಟಿಗೆ ಮಾಡಿರುತ್ತಾನೆ.

ಕಿಶೋರನು ಹೋಗಲೇಬೇಕು ಎಂದು ಆಶಿಸಿದ ಮೇಲೆ ಜಮಖಂಡಿಗೆ ಹೊರಡುವಂತೆ ಮೇರಿ ತನ್ನ ಅಧಿಕಾರವಾಣಿಯಿಂದ ಹೇಳುತ್ತಾಳೆ. ಕಿಶೋರ ರಾತ್ರಿಯೇ ಎಲ್ಲವೂ ಮುಗಿದು ಹೋಗಿರುವುದರಿಂದ ಕೂಡಲೇ ಹೊರಡಬೇಕಾದ ಅನಿವಾರ್ಯತೆ ಇಲ್ಲವೆಂದು ಹೇಳುತ್ತಾನೆ. ಅದರೆ ಒಬ್ಬನೇ ಹೋಗಲು ಹಿಂಜರಿದ ಕಿಶೋರ ತನ್ನೊಂದಿಗೆ ಬರುವಂತೆ ಮೇರಿಯನ್ನು

ಕರೆಯುತ್ತಾನೆ. ಮೇರಿ ತನ್ನ ಜೊತೆಗಿದ್ದರೆ 'ತನಗೊಂದು ಆಧಾರ' ಎಂಬುದು ಅವನ ಹಂಚಿಕೆಯಾಗಿರುತ್ತದೆ (ಪು. ೩೭೩). ಕೊನೆಗೆ ಕಿಶೋರ, ಮಗ ರವೀಂದ್ರ ಹಾಗೂ ಮೇರಿ ಮೂವರೂ ಹೊರಡುತ್ತಾರೆ. ಆದರೆ ಮೇರಿಗೆ ತಾವು ಜಮಖಂಡಿಯಲ್ಲಿ ಹೇಗೆ ಎಲ್ಲಿ ಉಳಿದುಕೊಳ್ಳುವುದು ಎಂಬ ಯೋಚನೆ ಶುರುವಾಗುತ್ತದೆ. ಏಕೆಂದರೆ ಮೇರಿಗಾಗಲೀ, ಮಗ ರವೀಂದ್ರನಿಗಾಗಲೀ ಅಲ್ಲಿನ ಉಳಿದವರ ಯಾರ ಪರಿಚಯ ಇರುವುದಿಲ್ಲ. ಹೀಗಾಗಿ ಮೇರಿ ಪ್ರಾರಂಭದಲ್ಲಿ ಸ್ವಲ್ಪ ಹಿಂಜರಿದರೂ ನಂತರ ಕಿಶೋರನೊಂದಿಗೆ ಹೊರಡಲು ಸಿದ್ಧಳಾಗುತ್ತಾಳೆ.

ಗಂಡನನ್ನು ಕಳೆದುಕೊಂಡು ವಿಧವೆಯಾದ ದೇವಕಿ ಜಮಖಂಡಿಗೆ ವಾಪಸ್ಸು ಬಂದಿರುತ್ತಾಳೆ. ತಂದೆ ಇರುವವರೆಗೂ ತಂದೆಯ ಜೊತೆಯಲ್ಲಿ ಇರುತ್ತಾಳೆ. ಕಿಶೋರ ಎಂ.ಎ. ಮಾಡುತ್ತಿದ್ದಾಗ ದೇವಕಿ ಹಿರೇಮಠ ಮಾಸ್ತರರನ್ನು ಪ್ರೀತಿಸತೊಡಗಿರುತ್ತಾಳೆ. ಈ ವಿಚಾರ ಕಿಶೋರನಿಗೆ ಜಗನ್ನಾಥನ ಮೂಲಕ ತಿಳಿಯುತ್ತದೆ. ಹೀಗಾಗಿ ಅಪ್ಪ ಮರಣ ಹೊಂದಿದ ನಂತರ ದೇವಕಿಗೆ ಮನೆಯೇ ಸೆರೆಮನೆಯಾಗುತ್ತದೆ. ಕಿಶೋರ ಪಿಎಚ್.ಡಿ. ಮಾಡುವಾಗ ಮೇರಿ ಡಿಕಾಸ್ಟಳನ್ನು ಪ್ರೀತಿಸಿ, ಮದುವೆಯಾಗಿ ತನ್ನದೇ ಆದ ಒಂದು ಹೊಸ ಜಗತ್ತನ್ನು ನಿರ್ಮಿಸಿಕೊಳ್ಳುತ್ತಾನೆ. ಆದರೆ ಅವನ ತಬ್ಬಲಿ ಅಕ್ಕ ಮಾತ್ರ ಆ ಹಳೇ ಜಗತ್ತಿನ ನರಕದೊಳಗೆ ನೊಂದು ನವೆದು, ಕೊಳೆತು ಸತ್ತು ಹೋಗುತ್ತಾಳೆ. ಅವಳಿಗೆ ಆ ಹಳೆ ಜಗತ್ತಿನಲ್ಲಿ ಉಳಿಯದೇ ಗತ್ಯಂತರವಿರಲಿಲ್ಲ. (ಪು. ೩೭೫) ದೇವಕಿ – ಹಿರೇಮಠ ಮಾಸ್ತರರ ಪ್ರೇಮ ಪ್ರಕರಣ ಗೊತ್ತಾದಾಗ ತಾನು ಈಗಿನಂತೆ ಗಟ್ಟಿಮುಟ್ಟಾದ ಮನುಷ್ಯನಿರಬೇಕಾಗಿತ್ತು ಎಂದು ಕಿಶೋರನಿಗೆ ಈಗ ಅನ್ನಿಸತೊಡಗುತ್ತದೆ. ಆದರೆ ಆಗ ಅವನಿಗೆ ಅದು ಸಾಧ್ಯವಿರಲಿಲ್ಲ. ತನ್ನ ಜವಾಬ್ದಾರಿ ನಿರ್ವಹಿಸಲು ಅವನಿಗೆ ಅನುವೇ ಸಿಗಲಿಲ್ಲ. ಅಂಥ ಯೋಗವೇ ಬರಲಿಲ್ಲ ಎಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಾನೆ. ಈಗಲೂ ಕೂಡ ದೇವಕಿಗೆ ತುಂಬಾ ಹುಷಾರಿಲ್ಲ ಎಂದು ಗೊತ್ತಾದರೂ ಕೂಡ ತನ್ನ ಕೆಲಸದ ಒತ್ತಡದಿಂದಾಗಿ ಹೋಗಿ ಅವಳನ್ನು ನೋಡುವುದಕ್ಕೆ ಆಗಿರುವುದಿಲ್ಲ. ದೇವಕಿಯ ಆಸ್ಪತ್ರೆಯ ವೆಚ್ಚಕ್ಕೆಂದು ಒಂದು ಸಾವಿರ ರೂಪಾಯಿಯ ಚೆಕ್ಕು ಕಳುಹಿಸಿ ಎರಡು ತಿಂಗಳಾಗಿರುತ್ತದೆ. ಅಂತಿಮವಾಗಿ ಅವಳ ಮರಣದ ಸುದ್ದಿಯ ತಾರು ಅವನ ಕೈಗೆ ಸೇರುತ್ತದೆ.

ಜಮಖಂಡಿಗೆ ಹೊರಟ ಕಿಶೋರನ ಮನದಲ್ಲಿ ವಿಚಾರ ಚಕ್ರ ಶುರುವಾಗುತ್ತದೆ. "ಈಗ ಜಮಖಂಡಿಗೆ ಹೋಗಿಯಾದರೂ ಏನು ಮಾಡುವುದಿದೆ? ಆ ಜಗತ್ತಿನ ಕೂಡ ಇದ್ದ-ಬಿದ್ದ ಒಂದು ಸಂಬಂಧ ಅಲ್ಲಿ ಸುಟ್ಟು ಬೂದಿಯಾಗಿದೆ. ಈಗ ಹೋಗಿ ಗೋವಿಂದ ಕಾಕಾ, ಜಗನ್ನಾಥರ ಪೊಳ್ಳು ಸಾಂತ್ವನಕ್ಕೆ ಯಾಕೆ ಬಲಿಯಾಗಬೇಕು? ಅಥವ ತಾನಾದರೂ ಯಾರಿಗೆ ಸಾಂತ್ವನ ಮಾಡಬೇಕಾಗಿದೆ? ಬರೇ ತುಣುಕು ತುಣುಕಾದ ಅರ್ಥಹೀನ ಮಾತುಗಳನ್ನಾಡಲಿಕ್ಕೆ ಮಾತ್ರ ಅಲ್ಲಿಗೆ ಹೋಗಬೇಕೇ?" (ಪು. ೩೭೭) ಜಮಖಂಡಿಯಲ್ಲಿ ಆತನಿಗಾಗಿ ಕಾಯುವವರು ಯಾರೂ ಇಲ್ಲ. ಅಪ್ಪ ಮತ್ತು ಅಕ್ಕನನ್ನು ಕಳೆದುಕೊಳ್ಳುವುದರ ಮೂಲಕ ಆತ ಜಮಖಂಡಿಯಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿರುತ್ತಾನೆ. ಈಗ ಹೋದರೂ ಕೂಡ ಅದು ನಿಜವಾದ ಪ್ರೀತಿ, ವಿಶ್ವಾಸದಿಂದ ಕೂಡಿರದೇ ಕೇವಲ ಲೆಕ್ಕಾಚಾರದ ಪೊಳ್ಳು ಸಂಬಂಧವಾಗಿರುತ್ತದೆ. ಹೀಗಾಗಿಯೇ ಮಾರ್ಗ

ಮಧ್ಯದಲ್ಲಿಯೇ ಜಮಖಂಡಿಗೆ ಹೋಗುವುದನ್ನು ಕ್ಯಾನ್ಸಲ್ ಮಾಡಿದ ಕಿಶೋರ ಮಹಾಬಲೇಶ್ವರಕ್ಕೆ ಹೋಗೋಣ ಎಂದು ನಿರ್ಧರಿಸುತ್ತಾನೆ. ಮೇರಿಯು ಜಮಖಂಡಿಯಲ್ಲಿ ಅವನ ಫ್ಯಾಮಿಲೀ ಮಂದಿ ಕಾಯುತ್ತಿರುವುದಾಗಿ ಹೇಳಿದಾಗ ಕಿಶೋರ ಮೇರಿಯ ಹೆಸರಿನಲ್ಲಿಯೇ "ಕಿಶೋರ ಟೂರ್ ವ್ಯಾಲ ಹೋಗ್ಯಾನ ೧೫ ದಿನ ಬೇಕು ತಿರುಗಿ ಬರಾಕ" ಎಂದು ತಾರು ಕಳುಹಿಸುವುದಾಗಿಯೂ, ೧೦-೧೨ ದಿನಗಳ ನಂತರ ಒಂದು ಪತ್ರವನ್ನು ಬರೆದು ಅದರ ಜೊತೆ ಎರಡು ಸಾವಿರ ರೂಪಾಯಿ ಚೆಕ್ ಕಳುಹಿಸುವುದಾಗಿ ಹೇಳುತ್ತಾನೆ.ಆದರೆ ಕಿಶೋರ ಇಷ್ಟೆಲ್ಲಾ ಸುಳ್ಳು ಏಕೆ ಹೇಳಬೇಕು ಎಂಬ ಪ್ರಶ್ನೆ ಅವಳನ್ನು ಕಾಡುತ್ತದೆ. "ಖರೇ ಅಂದರೆ ನನಗೆ ಹೋಗೋ ಮನಸ್ಸಿಲ್ಲ ಬಸ್! ನೀ ಹೆಚ್ಚಿಗೇನೂ ಮಾತಾಡಬ್ಯಾಡ. ಇದು ನನ್ನ ವೈಯಕ್ತಿಕ ವಿಷಯ ನನ್ನ ಫ್ಯೂನರಲ್!" (ಪು. ೩೭೭) ಎಂದು ಕಿಶೋರ ಹೇಳುವಲ್ಲಿ ಆತ ಜಮಖಂಡಿಯೊಂದಿಗೆ ಹೊಂದಿದ್ದ ಎಲ್ಲಾ ಸಂಬಂಧಗಳೂ ಸುಟ್ಟು ಬೂದಿಯಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿರುವುದು ತಿಳಿದು ಬರುತ್ತದೆ. ಮುಂದೆ ಮೇನ್ ಹಾಯ್‌ವೇ ಬಿಟ್ಟು ವಾಯಿ ಮಹಾಬಲೇಶ್ವರ ರೋಡದತ್ತ ಕಾರು ತಿರುಗಿಸಿದಾಗ ಕಿಶೋರನ ಗಂಟಲು ಬಿಗಿದು ಬಂದು, ಕಣ್ಣು ಮಸುಕಾಗುತ್ತವೆ. (ಪು. ೩೭೮) ಇಲ್ಲಿ ಕಿಶೋರನು ತನ್ನ ಮನದಲ್ಲೇ ನೋವು ಅನುಭವಿಸುವುದನ್ನು ಕಥೆಗಾರರು ಬಹಳ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಅಂತರ :

'ಅಂತರ' ಕಥೆಯು ದೇಸಾಯಿ ಅವರು ೧೯೮೮ರಲ್ಲಿ ಹೊರತಂದ ಅವರ ಆರನೇ ಕಥಾಸಂಕಲನ 'ಕೂರ್ಮಾವತಾರ' ದಲ್ಲಿ ನ ಒಂದು ಕಥೆಯಾಗಿದೆ. ಈ ಕಥಾಸಂಕಲನಕ್ಕೆ ಬರೆದ 'ಎರಡು ಮಾತು'ವಿನಲ್ಲಿ ದೇಸಾಯಿ ಅವರು "ನನ್ನ ಸಂಗ್ರಹಗಳ ಒಂದು ವೈಶಿಷ್ಟ್ಯವೆಂದರೆ ಅವುಗಳಲ್ಲಿ ಆ ಆ ಕಾಲದ. ಆ ಆ ವಯೋಮಾನದ ಮನೋಧಾರಣೆಗಳು ಒಡಮೂಡಿದ್ದು. ಉದಾಹರಣೆಗೆ, 'ಮಂಜುಗಡ್ಡೆ'ಯಲ್ಲಿ ನವ ತಾರುಣ್ಯದ (Adolesence) ಸಮಸ್ಯೆಗಳಿಗೆ ಪ್ರಾಧಾನ್ಯವಿದ್ದರೆ, 'ಕ್ಷಿತಿಜ','ದಂಡೆ', 'ರಾಕ್ಷಸ'ಗಳಲ್ಲಿ ತಾರುಣ್ಯಕ್ಕೆ ಪ್ರಾಧಾನ್ಯ. ಅದೇ ರೀತಿ, 'ಪರಿವರ್ತನೆ'ಯಲ್ಲಿ ಮಧ್ಯಮ ವಯಸ್ಸಿನ ಮನೋಧಾರಣೆಗಳ ಮೇಲೆ ಲಕ್ಷ್ಯ ಕೇಂದ್ರೀಕೃತವಾದರೆ, 'ಕೂರ್ಮಾವತಾರ'ದಲ್ಲಿ ಬಹುಶಃ ಇಳಿವಯಸ್ಸಿನ ಪ್ರಪಂಚ ರೂಪುಗೊಳ್ಳುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಅಂತರ' ಕಥೆಯಲ್ಲಿನ ಡಾ. ಶಂಕರರಾವ್ ಭಾಸ್ಕರ್‌ರಾವ್ ಕುಲಕರ್ಣಿ ಮುಂಬಯಿಯ ಬಾಂದ್ರಾ ಕಾಲೇಜಿನಲ್ಲಿ ಸೋಶಿಯಾಲಜಿ ಡಿಪಾರ್ಟ್‌ಮೆಂಟಿನಲ್ಲಿ ಅಧ್ಯಾಪಕ ವೃತ್ತಿಯಲ್ಲಿರುತ್ತಾನೆ. ಮೂಲತಃ ಯಲ್ಲಾಪುರದವನಾದ ಈತ ಹೆಂಡತಿ ಗೌರಿ ಮುಂಬಯಿಯವಳಾದ್ದರಿಂದ, ಹೆಂಡತಿ ಮತ್ತು ಮಗ ರಮೇಶನೊಂದಿಗೆ ಮುಂಬಯಿಯಲ್ಲಿ ಸುಖವಾಗಿರುತ್ತಾನೆ. ಏನಾದರೂ ಪರೀಕ್ಷೆ, ಸೆಮಿನಾರ್, ಕಾನ್ಫರೆನ್ಸ್ ಇತ್ಯಾದಿ ಕೆಲಸವಿದ್ದರಷ್ಟೆ ಮುಂಬಯಿಯಿಂದ ಹೊರ ಹೋಗುತ್ತಿದ್ದನು. ಒಮ್ಮೆ ಧಾರವಾಡದ ಅವನ ಮಿತ್ರ ಡಾ. ಭದ್ರಾಪುರ ಯುನಿವರ್ಸಿಟಿಯಲ್ಲಿ ಶಂಕರರಾವ್‌ನನ್ನು

ಭೇಟಿಯಾದಾಗ ಸರಸ್ವತಿ ಕೊಲ್ಹಾಪುರದ ಒಬ್ಬ ಶ್ರೀಮಂತ ಉದ್ಯಮಿಯನ್ನು ವಿವಾಹವಾಗಿ ಕೊಲ್ಹಾಪುರದಲ್ಲಿಯೇ ನೆಲೆಸಿದ್ದಾಳೆಂದು ತಿಳಿಸುತ್ತಾನೆ.

ಸರಸ್ವತಿ ಶಂಕರ ಪಿಎಚ್.ಡಿ. ಮಾಡುತ್ತಿದ್ದಾಗ ಧಾರವಾಡದಲ್ಲಿ ಅವನ ಪ್ರೇಯಸಿಯಾಗಿದ್ದವಳು. ಅವರಿಬ್ಬರ ಆಗಿನ ಪ್ರೀತಿ ಚೆಲ್ಲಾಟ ಎಲ್ಲಾ ಲಗ್ನಕ್ಕಿಂತ ಹೆಚ್ಚಾಗಿದ್ದುದನ್ನು ಕಂಡು ಎಲ್ಲರೂ ಕೂಡ ಅವರಿಬ್ಬರೂ ಲಗ್ನ ಆಗ್ತಾರೆ ಎಂತಲೇ ತಿಳಿದುಕೊಂಡಿರುತ್ತಾರೆ. ಇದೇ ವಿಚಾರವನ್ನು ಡಾ.ಭದ್ರಾಪುರ ಪ್ರಸ್ತಾಪಿಸಿದಾಗ "ನಮ್ಮ ಜಾತಿ ಬ್ಯಾರೇ ಬ್ಯಾರೆ ನೋಡಿ. ನಾ ಬ್ರಾಹ್ಮಣ, ಆಕೆ ಜೈನ, ಆಕೀ ಅಪ್ಪ ಪರವಾನಿಗೆ ಕೊಡಲಿಲ್ಲ" (ಪು. ೪೦೧) ಎಂದು ಹೇಳುತ್ತಾನೆ. ಆದರೆ ಶಂಕರ ಮನಸ್ಸು ಮಾಡಿದ್ದರೆ ಸರಸ್ವತಿಯನ್ನು ಮದುವೆ ಮಾಡಿಕೊಳ್ಳಬಹುದಾಗಿತ್ತು. ಆದರೆ ತನ್ನ ಪೊಳ್ಳುತನದಿಂದಾಗಿ ಜಾತಿ ನೆಪದಿಂದ ಆಕೆಯನ್ನು ಬಿಟ್ಟುಕೊಟ್ಟರೂ ಅವಳೊಂದಿಗೆ ತಾನು ಹೊಂದಿದ್ದ ಸಂಬಂಧ ಆತನ ಮನದ ಮೂಲೆಯಲ್ಲಿ ಉಳಿದುಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದ ಸೋಶಿಯಾಲಜಿ ವಿಭಾಗದವರು ನಾಲ್ಕಾರು ಭಾಷಣಗಳನ್ನು ಕೊಡಲು ಆಮಂತ್ರಿಸಿದ ಕೂಡಲೇ ಒಪ್ಪಿಕೊಳ್ಳುತ್ತಾನೆ. ಇದಕ್ಕೆ ಮುಖ್ಯ ಕಾರಣ ಆತ ಸರಸ್ವತಿಯನ್ನು ಭೇಟಿಯಾಗಬಹುದು ಎಂಬುದು.

ಕೊಲ್ಹಾಪುರಕ್ಕೆ ಬಂದ ಶಂಕರ ತನ್ನ ಮುಂಬಯಿಯ ಚಾಲಾಕಿತನದಿಂದ ಸರಸ್ವತಿಯ ಫೋನ್ ನಂಬರನ್ನು ಪತ್ತೆ ಹಚ್ಚುತ್ತಾನೆ. ನಮ್ಮ ಜಾತಿಯ ಅಂತರಕ್ಕಿಂತ ನಮ್ಮ ಸ್ವಭಾವಗಳ ಅಂತರ, ನಮ್ಮ ಸಂವೇದನೆಗಳ ಅಂತರ, ಬೌದ್ಧಿಕ ಪಾತಳಿಗಳ ಅಂತರ ನಮ್ಮ ಲಕ್ಷ್ಯಕ್ಕೆ ಬಂದಿತ್ತು ಎಂದು ತಾನು ಸರಸ್ವತಿಯನ್ನು ತಿರಸ್ಕರಿಸಿದ್ದ ಕಾರಣವನ್ನು ಸಮರ್ಥಿಸಿಕೊಳ್ಳುತ್ತಾ ಮತ್ತೆ ಅವಳೊಡನೆ ಸಂಬಂಧ ಬೆಳೆಸುವ ಇಚ್ಛೆಯನ್ನು ಹೊಂದುತ್ತಾನೆ. ತನ್ನ ಸಮಾಜ ವಿಜ್ಞಾನ ಜ್ಞಾನದ ಹಿನ್ನೆಲೆಯಲ್ಲಿ "ಸಾಮಾಜಿಕ ಸಂಸ್ಕಾರಗಳು ಮನುಷ್ಯನಲ್ಲಿ ಆಳವಾಗಿ ಬೇರೂರಿ ನಿಂತಿರುತ್ತವೆ" ಎಂಬ ನಂಬಿಕೆಯಿಂದ "ಗೌರಿ, ನಿನ್ನ ಮರೆತಿಲ್ಲ, ಆದರೂ ಮನುಷ್ಯ ಅಂದ ಮೇಲೆ ಆತ ದೇವರಲ್ಲ ನೋಡು. ಮೇಲಾಗಿ ಸಮಾಜ ಅತ್ಯಂತ ವೇಗವಾಗಿ ಬದಲಾಗುತ್ತಿದೆ. ಈ ಸಂಕ್ರಮಣ ಕಾಲದಲ್ಲಿ ಎಲ್ಲ ಮಾನವೀಯ ಮೂಲ್ಯಗಳು ಬಿದ್ದು ಒಡೆದು ಚೂರು ಚೂರಾಗಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ನಮ್ಮ ರಾಜಕಾರಣ ಹದಗೆಟ್ಟು ಹೋಗಿದೆ. ನಮ್ಮ ದೇಶದ ನಾಯಕರೆಲ್ಲ ಸತ್ವಹೀನರಾಗಿದ್ದಾರೆ, ಭ್ರಷ್ಟರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಯಃಕಶ್ಚಿತ ಸಮಾಜಶಾಸ್ತ್ರದ ಮಾಸ್ತರನಾದ ನಾನು ಸುಖದ ಜೇನು ಹುಟ್ಟಿಗೆ ಕೈ ಹಾಕಿದರೆ ತಪ್ಪೇನು!" (ಪು. ೪೦೭) ಎಂದು ತನ್ನ ಇಚ್ಛೆಯನ್ನು ಸಮರ್ಥಿಸಿಕೊಳ್ಳುತ್ತಾನೆ. ಸರಸ್ವತಿಯೊಂದಿಗೆ ಫೋನಿನಲ್ಲಿ ಮಾತನಾಡಿದ ಶಂಕರ ಸರಸ್ವತಿಯನ್ನು ಭೇಟಿಯಾಗಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಸರಸ್ವತಿಯ ಆಹ್ವಾನದ ಮೇರೆಗೆ ಅವಳ ಮನೆಗೆ ಹೋದ ಶಂಕರ ಅವಳೊಂದಿಗೆ ಸಲುಗೆಯಿಂದ ವರ್ತಿಸುತ್ತಾನೆ. "ಶಂಕರೂ, ಹುಚ್ಚರಂಗ ಮಾಡಬ್ಯಾಡ. ನಿನ್ನ ಹೆಂಡತಿಗೆ ಯಾರಾದರೂ ಹಿಂಗ ಮುತ್ತುಕೊಟ್ಟರ?"

"ಅಲ್ಲ, ನಾ ಯೇನು ಬರೇ 'ಯಾರಾದರೂ' ಏನು? ನನಗೆ ಸ್ವಲ್ಪೂ ಅಧಿಕಾರ ಇಲ್ಲೇನು? ಇಡಿಯ ಇತಿಹಾಸ ಒರೆಸಿಬಿಟ್ಟಿಯೇನು?"

"ಎಲ್ಲೈದ ಇತಿಹಾಸ? ಇತಿಹಾಸ ಹೋತು ಹಳ್ಳಾ ಹಿಡಿದ... ನದೀ ಹೊರಗ" ಸರಸ್ವತಿಯ ಮಾತಿನಲ್ಲಿ ಬಿರುಸುತನ ಮೂಡಿತು (ಪು. ೪೧೯). ಇಲ್ಲಿ ಸರಸ್ವತಿಯ ವಾಸ್ತವಿಕತೆಯ ಮನೋಭಾವನೆಯನ್ನು ಅಸ್ತಿತ್ವವಾದಿ ದೃಷ್ಟಿಕೋನವನ್ನು ಗುರುತಿಸಬಹುದು. ತನ್ನ ಮನೆಯ ಗೆಸ್ಟ್ ರೂಮಿನಲ್ಲಿ ಉಳಿದುಕೊಳ್ಳುವ ಅಪೇಕ್ಷೆ ವ್ಯಕ್ತಪಡಿಸಿದ ಶಂಕರನಿಗೆ ತಾನೇ ನಾಳೆ ಫೋನ್ ಮಾಡುವುದಾಗಿ ಹೇಳಿ ಅವನನ್ನು ಸಾಗಹಾಕುತ್ತಾಳೆ. ಮಾರನೇ ದಿನ ಫೋನ್ ಮಾಡಿ ಅವನನ್ನು ಭೇಟಿಯಾಗುವುದು ಅಶಕ್ಯವೆಂದು ತಿಳಿಸುತ್ತಾಳೆ. "ಬಟ್, ಆಯ್ ಮಸ್ಟ್ ಮೀಟ್ ಯು, ಸರೂ, ನಿನ್ನ ಭೆಟ್ಟಿಯಾಗಲೇಬೇಕು. ನಿನ್ನ ಭೆಟ್ಟಿಯ ಕನಸ ಕಾಣ್ತಾ ಇದ್ದೀನಿ. ಹಾಂಗ ಕೇಳಿದರೆ ನಿನ್ನ ಭೆಟ್ಟಿಯ ಸಲುವಾಗಿಯೇ ನಾನು ಕೊಲ್ಹಾಪುರಕ್ಕೆ ಬಂದೀನಿ. ಸರೂ, ನನ್ನ ನನ್ನ ಬರೀ ಕೈಲೇ, ಬರೀ ಹೃದಯದಿಂದ ತಿರುಗಿ ಕಳಿಸಬ್ಯಾಡ. ನಮ್ಮ ಕೊನೆಯ ಬೈ ಬೈ ಅಂದರೆ ಹೀಂಗ ಮರುಭೂಮಿಯಲ್ಲಿ ನದೀ ಹರಿದು ಬತ್ತ ಹೋದಾಂಗ ಆಗಬಾರದು. ನಮ್ಮ ಬೀಳ್ಕೊಡುಗೆ ಅಂದರ ಮಹಾಪೂರ ಆಗಬೇಕು. ಮಹಾಪೂರ ಸರೂ..." ಇಲ್ಲಿ ನಾವು ಶಂಕರನ ಅವಕಾಶವಾದಿ ಮನೋಭಾವವನ್ನು ಗುರುತಿಸಬಹುದು. ಆದರೆ ಶಂಕರನನ್ನು ಒಂಟಿಯಾಗಿ ಭೇಟಿಯಾಗುವುದನ್ನು ತಪ್ಪಿಸಿಕೊಂಡ ಸರಸ್ವತಿ ತನ್ನ ಯಜಮಾನರು ಅವನನ್ನು ಭೇಟಿಯಾಗಲು ಬಯಸುತ್ತಿರುವುದರಿಂದ ಊಟಕ್ಕೆ ಬರುವಂತೆ ಆಹ್ವಾನ ನೀಡುತ್ತಾಳೆ. ಆದರೆ ಶಂಕರ ಅದನ್ನು ನಿರಾಕರಿಸಿ ತನ್ನ ಗೆಸ್ಟ್ ಹೌಸಿನಲ್ಲಿಯೇ ಉಳಿಯುತ್ತಾನೆ. ಅವನಿಗೆ ಫೋನ್ ಮಾಡಿದ ಸರಸ್ವತಿ "ಮುಂದಿನ ಸಾರೆ ಬಂದಾಗ ಖಂಡಿತ ಬರಬೇಕು. ವಹಿನಿಯವರನ್ನ ಕರಕೊಂಡು ಬರಬೇಕು. ಅವರಿಗೆ ನನ್ನ ನಮಸ್ಕಾರ ಹೇಳಿರೀ.. ಮುಂದಿನ ಸಾರೆ ನೀವೆಲ್ಲ ಮುದ್ದಾಮ ನಮ್ಮನೀಗೆ ಬರಬೇಕು– ಗೆಸ್ಟ್ ರೂಮು ಹಾಂಗ ಸಾಕಷ್ಟು ದೊಡ್ಡಾದಾಗಿಯೇ ಅದ..." (ಪು. ೪೧೪) ಎಂದು ಹೇಳುವಲ್ಲಿ ಸರಸ್ವತಿಯ ಜವಾಬ್ದಾರಿಯುತ ನಡವಳಿಕೆ ಕಂಡುಬರುತ್ತದೆ. ರೇಲ್ವೆ ಸ್ಟೇಷನ್ನಿಗೆ ಗಂಡ ಹಾಗೂ ಮಗನೊಂದಿಗೆ ಬಂದ ಸರಸ್ವತಿ ಶಂಕರನಿಗೆ ತನ್ನ ಗಂಡನನ್ನು ಪರಿಚಯ ಮಾಡಿಕೊಡುತ್ತಾಳೆ. ಟ್ರೇನು ಹೊರಟಾಗ ಸರೂ ಕೈ ಅಲುಗಾಡಿಸಿ ನಕ್ಕು ತನ್ನ ಜಗತ್ತಿನಲ್ಲಿ ಲೀನಳಾಗುತ್ತಾಳೆ. ತನ್ನ ಅಸ್ತಿತ್ವದ ಸುರಕ್ಷತೆಯ ದೃಷ್ಟಿಯಿಂದ ಸರಸ್ವತಿ ಶಂಕರನಿಂದ ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದನ್ನು ಇಲ್ಲಿ ಕಾಣಬಹುದಾಗಿದೆ. ತನ್ನ ದಿಟ್ಟ ನಿರ್ಧಾರದಿಂದ ಸರಸ್ವತಿ ಪೊಳ್ಳುತನದ ಶಂಕರನನ್ನು ನಯವಾಗಿಯೇ ತಿರಸ್ಕರಿಸುತ್ತಾಳೆ.

೭೪.೬ ಬಂಡಾಯದ ಮನೋಭಾವ

ಚಂದೂ ಹಾಗೂ ಶಿವೂನ ಬಂಡಾಯ ಕಥೆಗಳ ಹಿನ್ನೆಲೆಯಲ್ಲಿ

ಚಂದೂ :

ಚಂದೂ ದೇಸಾಯಿ ಅವರು ನವೆಂಬರ್ ೧೯೫೨ರಲ್ಲಿ ಬರೆದ ಕಥೆಯಾಗಿದ್ದು, ೧೯೫೮ ರಲ್ಲಿ ಹೊರಬಂದ ಅವರ ಮೊದಲ ಕಥಾಸಂಕಲನ 'ಮಂಜುಗಡ್ಡೆ'ಯಲ್ಲಿ ಪ್ರಕಟವಾಗಿದೆ. ದೇಸಾಯಿ ಅವರೇ ಹೇಳುವಂತೆ 'ಮಂಜುಗಡ್ಡೆ'ಯಲ್ಲಿ ನವ ತಾರುಣ್ಯ (adolesence)ದ ಸಮಸ್ಯೆಗಳಿಗೆ ಪ್ರಾಧಾನ್ಯವಿದೆ.

ಹನ್ನೊಂದು ವರ್ಷದವನಾದ ಚಂದೂನನ್ನು ಶ್ಯಾಮಲತ್ತೆ ತನ್ನೊಂದಿಗೆ ಧಾರವಾಡಕ್ಕೆ ಕರೆದೊಯ್ಯುತ್ತೇನೆ ಎಂದು ಅವನ ತಾಯಿಯೊಡನೆ ಹೇಳುವುದರೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಚಂದೂ ಈಗಾಗಲೇ ತನ್ನ ಪ್ರೀತಿಯ ಸುಶೀಲಕ್ಕನಿಗೆ ಅವಳೊಂದಿಗೆ ಜಮಖಂಡಿಗೆ ಬರುತ್ತೇನೆಂದು ಮಾತು ಕೊಟ್ಟಿರುತ್ತಾನೆ "ಧಾರವಾಡದಲ್ಲಿದ್ದ ಆನಂದನೊಡನೆ ಇದ್ದರೆ ಅವನಿಗೆ ಮಜವೇ ಮಜ. ಕಾಲೇಜು ವಿದ್ಯಾರ್ಥಿಯಾಗಿದ್ದ ಆನಂದನ ಜೊತೆ ದಿನಾಲು ತಿರುಗಾಟ–ಮುಂಜಾನೆ ಸಂಜೆ. ಅವನ ಮುಗಿಯಲಾರದ ಮಾತುಕತೆ, ಅವನ ಪ್ರೀತಿ–ಪ್ರೇಮದ ವಿಚಾರ.. ಅವನು ತುಂಬಾ ಜಾಣ. ಅವನ ಹತ್ತಿರ ಎಷ್ಟೊಂದು ಸುಂದರ ಕಥೆಗಳಿವೆ. ಹೌದು ಧಾರವಾಡಕ್ಕೆ ಹೋಗಬೇಕು. ಆನಂದನ ಜೊತೆಯಲ್ಲಿರಬೇಕು... ಆದರೆ ಸುಶೀಲಕ್ಕನಿಗೆ ಹೇಳುವುದು ಹೇಗೆ? ಅವಳಿಗೆ ಇಲ್ಲವೆನ್ನಲಾಗದು.. ಚಂದೂನ ಮನಸ್ಸಿನಲ್ಲಿ ಕೋಲಾಹಲ" (ಪು. ೧೨) ತಾನೇ ಒಂದು ನಿರ್ಧಾರಕ್ಕೆ ಬರುವ ಶಕ್ತಿ ಇಲ್ಲದ ಚಂದೂ ಕೊನೆಗೆ ಸುಶೀಲಕ್ಕನನ್ನೇ ಕೇಳಿ ಅವಳು ಹೇಳಿದಂತೆಯೇ ಮಾಡಲು ನಿರ್ಧರಿಸುತ್ತಾನೆ. ಸುಶೀಲಕ್ಕ ಅವನ ಅಧಿದೇವತೆ, ಎಲ್ಲಾ ವಿಷಯಗಳಲ್ಲೂ ಅವಳು ಹೇಳಿದಂತೆಯೇ ಪಾಲಿಸುತ್ತಿದ್ದ. ಸುಶೀಲಕ್ಕ ತನ್ನ ಬಂಜೆತನದ ಕಾರಣದಿಂದ ನೋವನ್ನು ಅನುಭವಿಸುತ್ತಿದ್ದುದು ಅವನಿಗೆ ತಿಳಿದಿರುತ್ತದೆ. ಹೀಗಾಗಿ ಶ್ಯಾಮಲತ್ತೆ "ಧಾರವಾಡದಲ್ಲಿ ಡಾ.ಬೆಂಗೇರಿಯವರು ಒಳ್ಳೆಯ ಡಾಕ್ಟರರಾಗಿದ್ದು, ಹೆಣ್ಣು ಮಕ್ಕಳ ರೋಗಗಳಲ್ಲಿ ಸ್ಪೆಶ್ಯಾಲಿಸ್ಟರಂತೆ" ಎಂದು ಹೇಳಿದ್ದನ್ನು ಕೇಳಿ ಚಂದೂ ಸುಶೀಲಕ್ಕನನ್ನು ಒಪ್ಪಿಸಿ ಧಾರವಾಡಕ್ಕೆ ಕರೆದೊಯ್ಯುತ್ತಾನೆ. ಧಾರವಾಡದಲ್ಲಿ ಎರಡು ದಿನ ಆನಂದನೊಂದಿಗೆ ಚೆನ್ನಾಗಿ ತಿರುಗಾಡಿದ ಚಂದೂ ಸಂತೋಷದಿಂದ ಇರುತ್ತಾನೆ. ಆದರೆ ಧಾರವಾಡಕ್ಕೆ ಬಂದ ಮೂರನೇ ದಿನದಿಂದ ಒಂದು ವಿಶೇಷವೇನೋ ಸಮನಿಸುತ್ತಿದೆ. ಎಂದು ಚಂದೂನಿಗೆ ಭಾಸವಾಗತೊಡಗುತ್ತದೆ (ಪು. ೧೬). ಸುಶೀಲಕ್ಕನಿಗೆ ಅರಿವೆ ಕೊಂಡುಕೊಳ್ಳಲೆಂದು ಅಂಗಡಿಗೆ ಹೋದಾಗ ಸುಶೀಲಕ್ಕ ಮತ್ತು ಆನಂದ ಇಬ್ಬರಿಂದಲೂ ಚಂದೂ ಅಲಕ್ಷಿಸಲ್ಪಡುತ್ತಾನೆ "ಈ ಸುಶೀಲಕ್ಕ ಕೊಂಚ ಹೊಸಬಳಂತೆ ತೋರತೊಡಗಿದಳು. ಆತನಿಗೆ ಅರಿವೆಗಳನ್ನು ಪ್ರೀತಿಸುವ ಸುಶೀಲಕ್ಕ, ದುಂದಗಾರತಿ ಸುಶೀಲಕ್ಕ, ಮಾತುಗಾರತಿ ಸುಶೀಲಕ್ಕ, ತನ್ನನ್ನು ಅಲಕ್ಷಿಸುವ ಸುಶೀಲಕ್ಕ – ಅವನಿಗೆ ಅಪರಿಚಿತಳಂತೆ ತೋರತೊಡಗಿದಳು... ಆನಂದನ ನಡತೆಯಂತೂ ಅವನ ಮನಸ್ಸಿಗೆ ಹಿಡಿಸಲಿಲ್ಲ. ಆತ ಸುಶೀಲಕ್ಕನಿಗೆ ಪ್ರತಿಯೊಂದರಲ್ಲೂ ನೆರವು ಕೊಡುತ್ತಿದ್ದ. ಆತನಿಗೆ ಸೇರಿದ, ಆತನು ಒಪ್ಪಿದ ಅರಿವೆಗಳನ್ನೇ ಸುಶೀಲಕ್ಕ ಕೊಳ್ಳುತ್ತಿದ್ದಳು.. ಚಂದೂನ ಸಣ್ಣ ಮಿದುಳಿನಲ್ಲಿ ವಿಚಾರದ ಮಿಡಿನಾಗರ ಹಾವು ಸುಳಿದಾಡತೊಡಗಿತು"

(ಪು. ೧೯). ಸುಶೀಲಕ್ಕನ ಅರಿವೆಯ ಗಂಟನ್ನು ಹಿಡಿದುಕೊಳ್ಳುವ ವಿಚಾರದಲ್ಲಿಯೂ ಕೂಡ ಚಂದೂಗೆ ಸೋಲಾಗುತ್ತದೆ. ಚಂದೂನಿಗೆ ಸೋಲಿನ ಮೇಲೆ ಸೋಲು! ಈ ದೊಡ್ಡವರ ಜಗತ್ತಿನ ವಿರುದ್ಧ ಅವನ ಕೋಪ ಉಕ್ಕೇರಿ ಬರುತ್ತದೆ. ಆ ಜಗತ್ತಿನಲ್ಲಿ ಅವನಿಗೆ ಸ್ಥಾನವಿಲ್ಲ. ಅದು ಅವನನ್ನು ಅಣಕಿಸುತ್ತದೆ, ಕಡೆಗಣಿಸುತ್ತದೆ, ಹಿಚುಕ ಹಿಂಡುತ್ತದೆ. ಜೀವನ, ಪ್ರೀತಿಯ ಬಗ್ಗೆ ಸುಶೀಲಕ್ಕನೊಂದಿಗೆ ಮಾತನಾಡುತ್ತಾ, "ಒಬ್ಬರ ಮೇಲೊಬ್ಬರು ಪ್ರೀತಿ ಇಲ್ಲದಿದ್ದರೆ ಯಾಕೆ ಲಗ್ನವಾಗಿ ಸಂಸಾರ ಮಾಡುತ್ತಾರೋ ಈ ಜನ?" "ದೈವ-ದೈವವೆಂದೇ ನಾವು ನಮ್ಮ ಕಾಲ ಮೇಲೆ ಕಲ್ಲು ಹಾಕಿಕೊಳ್ಳುತ್ತೇವೆ. ನಮ್ಮ ಜೀವನವನ್ನು ನಮಗೆ ಬಂದಂತೆ, ತಿಳಿದಂತೆ ಸಾಗಿಸಬೇಕು" ಎಂದು ಆನಂದ ಹೇಳುವ ಮಾತುಗಳು ಬಾಲಕ ಚಂದೂನ ಮನದಲ್ಲಿ ಕೋಲಾಹಲವನ್ನೆಬ್ಬಿಸುತ್ತವೆ. 'ಏನೋ ಅನಾಹುತವೊಂದು ಒದಗಲಿದೆ' ಎಂಬ ಭೀತಿ ಚಂದೂನ ಮನದಲ್ಲಿ ಮೂಡುತ್ತದೆ.

ಸುಶೀಲಕ್ಕನನ್ನು ಆ ಭಯಂಕರ ಅನಾಹುತದಿಂದ ರಕ್ಷಿಸಬೇಕು ಎಂದು ಚಂದೂ ದೃಢ ನಿಶ್ಚಯವನ್ನು ಮಾಡುತ್ತಾನೆ. ಆದರೆ ಆ ರಾತ್ರಿ ಅವನು ಊಹಿಸಿದಂತೆ ಏನೂ ನಡೆಯದೆ ಇದ್ದುದರಿಂದ ಸಮಾಧಾನ ಹೊಂದುತ್ತಾನೆ. ಮರುದಿನ ಸಿನಿಮಾ ನೋಡಲು ಹೋಗುವುದಕ್ಕೆ ಹಿಂದಿನ ದಿನವೇ ಸುಶೀಲಕ್ಕನಿಗೆ ತಾನು ಆಗ್ರಹಿಸಬಾರದಿತ್ತು ಎಂದುಕೊಳ್ಳುವ ಚಂದೂ ಸಿನಿಮಾಕ್ಕೆ ತಮ್ಮೊಂದಿಗೆ ಬರುವಂತೆ ಶ್ಯಾಮಲತ್ತೆಯನ್ನು ಕರೆಯುತ್ತಾನೆ. ಆದರೆ ಶ್ಯಾಮಲತ್ತೆ ತಾನು ಬರುವುದಿಲ್ಲವೆಂದು ಹೇಳಿದಾಗ ಚಂದೂ ಆನಂದನೂ ಸಿನಿಮಾಕ್ಕೆ ಬರದಿರಲಿ. ತಾನೊಬ್ಬನೇ ಸುಶೀಲಕ್ಕನೊಂದಿಗೆ ಸಿನಿಮಾಕ್ಕೆ ಹೋಗುವಂತಾಗಲಿ ಎಂದು ಆಲೋಚಿಸುತ್ತಾನೆ. ಆದರೆ ಅದು ಸಾಧ್ಯವಾಗುವುದಿಲ್ಲ. ಹಿಂದಿನ ದಿನ ಕೊಂಡ ನೀಲಿ ಸೀರೆಯನ್ನುಟ್ಟು ಸಿನಿಮಾಕ್ಕೆ ಹೋಗಲು ತಯಾರಾದ ಸುಶೀಲಕ್ಕನನ್ನು ಆನಂದ ಕಣ್ಣರಳಿಸಿ ನೋಡುವಾಗ ಚಂದೂ ಕಸಿವಿಸಿಗೊಳ್ಳುತ್ತಾನೆ. ಆನಂದ 'ಬ್ರಾಹ್ಮಣ ವೇಷದಲ್ಲಿಯ ರಾವಣ'ನಂತೆ ಚಂದೂವಿಗೆ ಭಾಸವಾಗತೊಡಗುತ್ತಾನೆ. ಸಿನಿಮಾ ನೋಡುತ್ತಿರುವಾಗ ಖುರ್ಚಿಯಲ್ಲಿ ಮುಂದೆ ಕುಳಿತ್ತಿದ್ದ ಚಂದೂ ಹಾಯಾಗಿ ಕುಳಿತುಕೊಳ್ಳಲೆಂದು ಖುರ್ಚಿಯಲ್ಲಿ ಸರ್ರೆಂದು ಹಿಂದಕ್ಕೆ ಸರಿಯುತ್ತಾನೆ. ಆನಂದನು ಗಡಿಬಿಡಿಯಿಂದ ತನ್ನ ಕೈಯನ್ನು ಹಿಂದಕ್ಕೆ ಎಳೆದುಕೊಂಡದ್ದು ಚಂದೂಗೆ ಸ್ಪರ್ಶದ ಮೂಲಕ ತಿಳಿಯುತ್ತದೆ. ಹಿಂದಕ್ಕೆ ಹೊರಳಿ ನೋಡಿದ ಚಂದೂ ಸುಶೀಲಕ್ಕನ ಒಂದು ಕೈ ಖುರ್ಚಿಯ ಮೇಲಿದ್ದುದನ್ನು ಗಮನಿಸುತ್ತಾನೆ. ಸಿನಿಮಾಕ್ಕಿಂತ ಸುಶೀಲಕ್ಕನನ್ನು ಹೆಚ್ಚು ಪ್ರೀತಿಸುತ್ತಿದ್ದ ಚಂದೂ ಮತ್ತೆ ಖುರ್ಚಿಯ ತುದಿಗೆ ಸರಿಯದೇ ಖುರ್ಚಿಯ ಬೆನ್ನಿಗೇ ಒರಗಿ ಕುಳಿತುಕೊಳ್ಳುತ್ತಾನೆ. ರಾತ್ರಿ ಊಟವಾದ ಮೇಲೆ ಹಾಸಿಗೆಯಲ್ಲಿ ಮಲಗಿದ ಚಂದೂಗೆ ವಿಚಾರಗಳ ಕಡಿತ ಇರುವೆಯ ಸಾಲಿನಂತೆ ಸಾಗಿರುತ್ತದೆ. ಸುಶೀಲಕ್ಕನ ಬಗ್ಗೆ ಒಂದು ಬಗೆಯ ವಿಚಿತ್ರ ಉದ್ವೇಗ-ದ್ವೇಷ-ಅಸಮಾಧಾನ ಅವನ ಹೃದಯದಲ್ಲಿ ಮನೆಕಟ್ಟಲಾರಂಭಿಸಿದ್ದವು. ಆದರೂ "ಅವಳನ್ನು ರಕ್ಷಿಸಬೇಕು. ರಕ್ಷಿಸಲೇಬೇಕು ರಾಕ್ಷಸನ ಕೈಗಳಿಂದ" ಎಂಬ ದೃಢ ನಿಶ್ಚಯ ಮಾತ್ರ ಅವನ ಮನಸ್ಸಿನಲ್ಲಿ ಬಂಡೆಗಲ್ಲಿನಂತೆ ನಿಂತಿತ್ತು. ಸುಶೀಲಕ್ಕನ ಬಗ್ಗೆಯೇ ಯೋಚಿಸುತ್ತಿದ್ದ ಚಂದೂ ತನಗೆ ಗೊತ್ತಿಲ್ಲದಂತೆ ನಿದ್ದೆ ಹೋಗುತ್ತಾನೆ. ಆದರೆ ಒಮ್ಮೆಲೆ ಭಯಂಕರ ಸ್ವಪ್ನದಿಂದೆಂಬಂತೆ ಮಧ್ಯರಾತ್ರಿಯಲ್ಲಿ ಎಚ್ಚರಗೊಂಡ ಚಂದೂ ಹಾಸಿಗೆಯಲ್ಲಿ ಕೈಯಾಡಿಸಿದಾಗ ಸುಶೀಲಕ್ಕ ಅಲ್ಲಿ ಇಲ್ಲದ್ದು ಗಮನಕ್ಕೆ ಬರುತ್ತದೆ. ಅಲ್ಲಿ ಏನು ನಡೆದಿರಬಹುದು

ಎಂಬುದನ್ನು ಊಹಿಸದಷ್ಟು ಚಿಕ್ಕವನಲ್ಲದ ಚಂದೂವಿಗೆ ಎಲ್ಲವೂ ಗೊತ್ತಾಗುತ್ತದೆ. ಸರ‍್ರನೆ ಒಂದು ವಿಚಾರ ಅವನಲ್ಲಿ ಮಿಂಚಿನಂತೆ ಸುಳಿದು ಹೋಗುತ್ತದೆ. "ನಾನೇ ಆನಂದನಷ್ಟು ದೊಡ್ಡವನಿದ್ದರೆ... ಸುಶೀಲಕ್ಕ ಆನಂದನ ಕಡೆಗೆ ಹೋಗುತ್ತಿರಲಿಲ್ಲ" ಅವನ ಪ್ರಕಾರ "ಜಗತ್ತೇ ಕೆಟ್ಟದ್ದು... ಜಗತ್ತಿನಲ್ಲಿದ್ದವರೆಲ್ಲರೂ ಕೆಟ್ಟವರು..ಒಬ್ಬರೂ ಪವಿತ್ರವಾಗಿಲ್ಲ – ತಾಯಿ ಮತ್ತು ಶ್ಯಾಮಲತ್ತೆ ಇವರಿಬ್ಬರ ಹೊರತು! .. ಅಯ್ಯೋ. ಸುಶೀಲಕ್ಕನು ಎಷ್ಟು ಒಳ್ಳೆಯವಳಿದ್ದಳಲ್ಲ–ದೇವತೆಯಂತಿದ್ದಳಲ್ಲ" (ಪು. ೨೮). ಚಂದೂ ವಿಚಾರ ಮಾಡಿ ಮಾಡಿ ಯಾವಾಗ ನಿದ್ದೆ ಹತ್ತಿತೆನ್ನುವುದೇ ಅವನಿಗೆ ತಿಳಿಯಲಿಲ್ಲ. ಬೆಳಿಗ್ಗೆ ಚಂದೂ ಎಚ್ಚೆತ್ತು ಕಣ್ತೆರೆದಾಗ ಹೊತ್ತೇರಿರುತ್ತದೆ.

ಸುಶೀಲಕ್ಕನೇ ಅವಳನ್ನು ಎಬ್ಬಿಸುತ್ತಾಳೆ. ಅವಳಿಗೆ ಏನೊಂದು ಉತ್ತರ ನೀಡದೆ "ಮಧ್ಯರಾತ್ರಿಯಲ್ಲಿ ಎಲ್ಲಿಗೆ ಹೋಗಿದ್ದೀ?" ಎಂದು ಕೇಳಬೇಕೆಂದುಕೊಂಡರೂ ಕೂಡ ಅವನು ಅದನ್ನು ತನ್ನಲ್ಲಿಯೇ ನುಂಗಿಕೊಳ್ಳುತ್ತಾನೆ. "ಇನ್ನೇಕೆ ಕೇಳಬೇಕು? ನನಗೂ ಇವಳಿಗೂ ಈಗೇನು ಸಂಬಂಧ?.. ನಾನೇ ಹೋಗಬೇಕು.. ಇವಳಿಂದ ದೂರ–ಮನೆಗೆ–ತಾಯಿಯೆಡೆಗೆ" ಎಂದು ತನಗೆ ಗೊತ್ತಿದ್ದ ಆ ಘೋರ ರಹಸ್ಯದ ಭಾರವನ್ನು ಹೊತ್ತುಕೊಂಡು ಮರಳಿ ಊರಿಗೆ ಹೊರಡಬೇಕೆಂದು ಮನದಲ್ಲೇ ನಿಶ್ಚಯಿಸುತ್ತಾನೆ. ಚಂದೂನ ಬಾಲ್ಯದ ಜಗತ್ತಿನ ಮೇಲೆ ಸುಶೀಲಕ್ಕ– ಆನಂದರ ಪ್ರೌಢ ಜಗತ್ತು ಸಹಿಸಲಾರದ ಆಘಾತವನ್ನು ಉಂಟು ಮಾಡಿರುತ್ತದೆ. ಹೀಗಾಗಿಯೇ ಚಂದೂ ತನ್ನ ಆರಾಧ್ಯ ದೈವವಾಗಿದ್ದ ಸುಶೀಲಕ್ಕನ ವಿರುದ್ಧವೇ ಬಂಡೇಳುತ್ತಾನೆ. ತಾನು ಹಿಂತಿರುಗಿ ಊರಿಗೆ ಹೋಗುವುದಾಗಿ ಹೇಳಿದಾಗ ಸುಶೀಲಕ್ಕ "ನಿನ್ನ ಸುಶೀಲಕ್ಕ ನಿನ್ನನ್ನು ಎಂದೂ ಕ್ಷಮಿಸಲಾರಳು" ಎಂದು ಹೇಳುತ್ತಾಳೆ. ಚಂದೂನ ಸಿಟ್ಟು ನೆತ್ತಿಗೇರಿ "ನಿನ್ನ ಕ್ಷಮೆ ಯಾರಿಗೆ ಬೇಕಾಗಿದೆ? ನಿನ್ನ ಪ್ರೀತಿ ಯಾರಿಗೆ ಬೇಕಾಗಿದೆ?" ಎಂದು ಹೇಳುತ್ತಾನೆ. ಊರಿಗೆ ಹೊರಟ ತನ್ನನ್ನು ತಡೆದ ಸುಶೀಲಕ್ಕ ತನಗೆ ಕೊಡಲು ಬಂದ ಐವತ್ತು ರೂಪಾಯಿಗಳನ್ನು ತೆಗೆದುಕೊಳ್ಳಲು ನಿರಾಕರಿಸಿದ ಚಂದೂ "ಹೋಗು ಆನಂದನಿಗೆ ಕೊಡು ಹೋಗು" (ಪು. ೩೧) ಎಂದು ಹೇಳಿ ಸುಶೀಲಕ್ಕನ ವಿರುದ್ಧ ತಿರುಗಿ ಬೀಳುತ್ತಾನೆ. ಇದನ್ನು ನಿರೀಕ್ಷಿಸಿರದ ಸುಶೀಲಕ್ಕ ಸ್ಥಂಭಿತಳಾದಳು! ಸುಶೀಲಕ್ಕ ತನ್ನ ನಂಬಿಕೆಗೆ ಆಘಾತ ಉಂಟು ಮಾಡಿದ್ದರಿಂದ ಒಂದೇ ದಿನದಲ್ಲಿ, ಒಂದೇ ರಾತ್ರಿಯಲ್ಲಿ ಏನೋ ವಿಚಿತ್ರ ಬೆಳವಣಿಗೆಯಾಗಿದೆ ತನ್ನಲ್ಲಿ ಎಂದೆನಿಸಿತವನಿಗೆ. ಹೃದಯದಲ್ಲಿ ಯಾವುದೋ ಕಲ್ಲಿನಂಥ ಭಾವನೆಯೊಂದು ಕೊನರುತಿರುವಂತೆ ಭಾಸವಾಯಿತವನಿಗೆ. ಸಂಜ್ಞಾ ಪ್ರವಾಹದ ಶೈಲಿಯಿಂದಾಗಿ ಈ ಕಥೆಯು ಚಂದೂನ ಮನದಲ್ಲಿ ಮೂಡುವ ತಲ್ಲಣಗಳನ್ನು, ಬಂಡಾಯ ಪ್ರವೃತ್ತಿಯನ್ನು ಯಶಸ್ವಿಯಾಗಿ ಹಿಡಿದಿಟ್ಟಿದೆ.

ಶಿವೂನ ಬಂಡಾಯ :

ದೇಸಾಯಿ ಅವರು ೧೯೭೩ರಲ್ಲಿ ರಚಿಸಿದ ಈ ಕಥೆಯು ೧೯೮೨ರಲ್ಲಿ ಹೊರತಂದ ಅವರ ಐದನೇ ಕಥಾಸಂಕಲನ 'ಪರಿವರ್ತನೆ'ಯಲ್ಲಿ ಪ್ರಕಟವಾಗಿದೆ. 'ಶಿವೂನ ಬಂಡಾಯ' ಕಥೆಯು ೧೯೭೩ ರ ನವೆಂಬರ್ ತಿಂಗಳಿನ ಮಂಗಳೂರದಲ್ಲಿ ಪ್ರಥಮ ಬಾರಿಗೆ ಪ್ರಕಟವಾಗಿದೆ.

'ಶಿವೂನ ಬಂಡಾಯ' ಕಥೆಗೂ, 'ಚಂದೂ' ಕಥೆಗೂ ವಸ್ತು ಹಾಗೂ ತಂತ್ರಗಳೆರಡರಲ್ಲೂ ಎದ್ದು ಕಾಣುವ ಹೋಲಿಕೆಗಳಿವೆ. ಸುಶೀಲಕ್ಕ ಹಾಗೂ ಆನಂದನ ನಡುವಿನ 'ಲೈಂಗಿಕ ವ್ಯವಹಾರ' ಚಂದೂವಿನಲ್ಲಿ ಆತಂಕವನ್ನು, ದಿಗ್ಭ್ರಮೆಯನ್ನು ಮೂಡಿಸಿದರೆ, ಸಂಗ್ಯಾ ಮತ್ತು ಸರಸೀ ನಡುವಿನ 'ಲೈಂಗಿಕ ವ್ಯವಹಾರ'ವನ್ನು ಶಿವೂ ಸಹಜವೆಂಬಂತೆ ಸ್ವೀಕರಿಸುತ್ತಾನೆ. ಆದರೆ ಇಲ್ಲಿ ಶಿವೂನ ಬಂಡಾಯ ಅವನ ಮನೆಯವರ ವಿರುದ್ಧವೇ ಇರುತ್ತದೆ.

ಶೆಟ್ಟರು ಹಾಗೂ ಅವರ ಹೆಂಡತಿ ಗೌರಮ್ಮ ಗೌರವಸ್ಥ ಕುಟುಂಬದವರಾಗಿದ್ದು ಶಿವೂ ಅವರ ಹತ್ತು ವರ್ಷದ ಮಗ. ಸಂಗ್ಯಾ ಅವರ ಮನೆಯಲ್ಲಿ ಕೆಲಸಕ್ಕೆ ಇರುತ್ತಾನೆ. ಇವನು ವಿಧವೆಯಾಗಿದ್ದ ಅಗಸರ ಸರಸಿಯೊಂದಿಗೆ ಸಂಬಂಧವನ್ನು ಹೊಂದಿರುತ್ತಾನೆ. ಕೆಲಸಕ್ಕೆ ಬರಬೇಕಾಗಿದ್ದ ಸಂಗ್ಯಾ ಹೊತ್ತಾದರೂ ಬಾರದೇ ಇದ್ದದನ್ನು ಕಂಡು ಶೆಟ್ಟರು ಅವನನ್ನು ಕರೆದು ಬರುವಂತೆ ತಮ್ಮ ಮಗನಾದ ಶಿವೂನಿಗೆ ಹೇಳುವ ಮೂಲಕ ಕಥೆ ಪ್ರಾರಂಭವಾಗುತ್ತದೆ. ಗೌರಮ್ಮ "ಸ್ವಲ್ಪ ತಡಾ ಆದ್ರ ಏನಾಯ್ತು? ಬರ್ತಾನೆ ಬಿಡಿ" ಎಂದು ಶೆಟ್ಟರಿಗೆ ಸಮಾಧಾನ ಹೇಳುವ ಪ್ರಯತ್ನ ಮಾಡಿ ಅವರಿಂದ "ಆಳ ಮನುಷ್ಯರಿಗೆ ನಿನ್ನ ಪುಸಲತ್ತು ಬಾಳ ಇರ್ತದ!" ಎಂದು ಬೈಸಿಕೊಳ್ಳುತ್ತಾರೆ. ಶೆಟ್ಟರು ಮಗನಿಗೆ "ಹೋಗೋ ಶಿವೂ, ಹೋಗಿ ಲಗೂ ಬರಾಕ ಹೇಳು" ಎಂದು ಹೇಳಿ, ಅವನು ಎಲ್ಲಿರುತ್ತಾನೆಂದು ಗೊತ್ತಿದೆಯಾ ಎಂದು ಕೇಳುತ್ತಾರೆ. ಶಿವೂ ತನಗೆ ಗೊತ್ತಿದ್ದರೂ ಕೂಡ ಮೊದಲು ಸುಳ್ಳು ಹೇಳುತ್ತಾನೆ. ಆದರೆ ಅಪ್ಪನು ಸಂತೋಷದಿಂದ ಇದ್ದುದನ್ನು ನೋಡಿ 'ಅಗಸರ ಸರಸೀ ಮನ್ಯಾಗ' ಎಂದು ಹೇಳುತ್ತಾನೆ. ಅಪ್ಪನ ಅನುಮತಿಯನ್ನು ಪಡೆದು ಸರಸಿಯ ಮನೆಯಲ್ಲಿದ್ದ ಸಂಗ್ಯಾನನ್ನು ಕರೆಯಲು ಹೋಗುತ್ತಿದ್ದಾಗ ಶಿವೂಗೆ ದಿಗಿಲಾಗುತ್ತದೆ. 'ಸಂಗ್ಯಾನ ಹೆಂಡತಿ ಕಾಣಿಸಲಿಕ್ಕೆ ಇಷ್ಟು ಚಲೋ ಇದ್ದಾಗ, ಅಂವ ಈ ಅಸಡ್ಡಾಳ, ಅರ್ಧಮರ್ಧ ಮುದಿಕಿಯಾದ ಸರಸೀ ಕೂಡ ಹ್ಯಾಂಗಿರ್ತಾನ? ಮತ್ತ, ಆ ಸರಸಿ ಮಗ ಬಾಳ್ಯಾಗ ಇದೆಲ್ಲಾ ಹ್ಯಾಂಗ ಸಹನ ಆಗ್ತಿದ್ದೀತು?' (ಪು. ೩೨೬) ಎಂಬ ಆಲೋಚನೆ ಮೂಡುತ್ತದೆ.

ಕಾಮತರ ಮಗ ಬಂಡ್ಯಾ ಬಾಳ್ಯಾಗ ಏನೇನೋ ಅಂದು ತಾಯಿಯನ್ನು ಬೈದಾಗ ನಡೆದ ದೊಡ್ಡ ರಾದ್ಧಾಂತದಲ್ಲಿ ಸರಸಿಯ ಇಡೀ ಜೀವನ ಬೀದಿಯಲ್ಲಿ ಬಿದ್ದು ದೊಡ್ಡ ರಂಪವಾಗಿರುತ್ತದೆ. ಸರಸಿಯ ವ್ಯವಹಾರ ಜಗಜ್ಜಾಹೀರವಾದರೂ ಶಿವೂನಿಗೆ ಮಾತ್ರ ಸಂಗ್ಯಾ-ಸರಸಿಯರ ಸಂಬಂಧ ದೊಡ್ಡ ಸಮಸ್ಯೆಯಾಗಿ, ಒಡೆಯಲಾರದ ಒಗಟಾಗಿರುತ್ತದೆ. ಅದೇ ಆಲೋಚನೆಯಲ್ಲಿಯೇ ಸರಸಿಯ ಮನೆಗೆ ಬಂದ ಶಿವೂ ಮನೆಯ ಬಾಗಿಲನ್ನು ಬಡಿಯುತ್ತಾನೆ. ಅರ್ಧ ತೆರೆದ ಬಾಗಿಲಿನಿಂದ ಇಣಕಿ ಹಾಕಿದ ಬಾಳ್ಯಾ ಏನು ಬೇಕಾಗಿತ್ತು? ಎಂದು ಕೇಳುತ್ತಾನೆ. ಶಿವೂಗೆ ನೇರವಾಗಿ ಸಂಗ್ಯಾನ ಬಗ್ಗೆ ಕೇಳಲು ಭಯವಾಗಿ ಬಟ್ಟೆಗಳನ್ನು ಕೊಂಡೊಯ್ಯಲು ಯಾವಾಗ ಬರ್ತೀರಿ ಎಂದು ಕೇಳುತ್ತಾನೆ. ತನ್ನ ಅವ್ವ ಮಲಗಿದ್ದಾಳೆ ಎಂದು ಬಾಳ್ಯಾ ಹೇಳಿದಾಗ "ಯಾರ ಕೂಡ" ಎಂದು ಕೇಳಬೇಕೆಂಬ ಇಚ್ಛೆಯಾಗುತ್ತದೆ. ಆದರೆ ಅವನು ತನ್ನ ಕೆನ್ನೆಗೆ ಹೊಡೆದರೆ ತಾನು ಕಟ್ಟೀ ಕಲ್ಲಾಗಿ ಕೂಡಬೇಕಾಗುತ್ತದೆ ಎಂಬ ಭಯ ಮೂಡಿ ಸುಮ್ಮನಾಗುತ್ತಾನೆ. ಆದರೂ ತಾನು ಮೊನ್ನೆ ಒಗೆಯಲಿಕ್ಕೆ ನೀಡಿದ್ದ ಅಂಗಿಯನ್ನು ನೀಡುವಂತೆ ಕೇಳಿ ಬಾಳ್ಯಾ ಮನೆಯ ಒಳಗೆ ಹೋಗುವಂತೆ ಮಾಡುತ್ತಾನೆ. ತದ

ನಂತರ ಕುತೂಹಲ ತಡೆಯಲಾರದೆ ಕೂಡಲೇ ಕದ ತೆಗೆದು ಮನೆಯ ಒಳಗೆ ಹಣಕಿ ಹಾಕಿ ನೋಡುತ್ತಾನೆ. ನಡು ಮನೆಯ ಮೂಲೆಯಲ್ಲಿ ಇಬ್ಬರು ವ್ಯಕ್ತಿಗಳು ಒಂದೆ ಕಂಬಳಿ ಹೊದ್ದು ಮಲಗಿದ್ದುದು ಕಂಡು ಬರುತ್ತದೆ. "ಸಂಗ್ಯಾ" ಎಂದು ಶಿವು ಕೂಗಿದ ಧ್ವನಿಗೆ ಸಂಗ್ಯಾ ಗಡಬಡಿಸಿ ಏಳುತ್ತಾನೆ. ಶಿವೂ ತಾನು ಬಂದಿದ್ದ ವಿಚಾರ ಹೇಳಿ ಸಂಗ್ಯಾನನ್ನು ತನ್ನೊಟ್ಟಿಗೆ ಕರೆದುಕೊಂಡು ಹೊರಡುತ್ತಾನೆ. ದಾರಿಯಲ್ಲಿ ಹೋಗುತ್ತಿರುವಾಗ ಸಂಗ್ಯಾ ತಾನು ಸರಸೀ ಮನೆಯಲ್ಲಿ ಇದ್ದೆನೆಂದು ಹೇಳದೇ ದಾರಿ ಮಧ್ಯದಲ್ಲಿ ಸಿಕ್ಕಿದೆನೆಂದು ಹೇಳಬೇಕೆಂದು ಶಿವೂನಲ್ಲಿ ಬೇಡಿಕೊಳ್ಳುತ್ತಾನೆ.

ಅಂದಿನಿಂದ ಸಂಗ್ಯಾ ಶಿವೂನ ಆತ್ಮೀಯ ಗೆಳೆಯನಾಗುತ್ತಾನೆ. ಅವನ ಮೂಲಕ ಶಿವೂ ಊರಿನ ಎಲ್ಲಾ ವಿಚಾರಗಳನ್ನು, ಎಲ್ಲರ ವಿಷಯಗಳನ್ನು ತಿಳಿದುಕೊಳ್ಳುತ್ತಿರುತ್ತಾನೆ. ಶಿವೂಗೆ ಸಂಗ್ಯಾ ತನ್ನ ಹೆಂಡತಿಯನ್ನು ಬಿಟ್ಟುಬಿಡಬಹುದೇನೋ ಎಂಬ ಭಾವನೆ ಮೂಡುತ್ತದೆ. ಆದರೆ ಸಂಗ್ಯಾ 'ತನ್ನ ಹೆಂಡತಿಗೆ ಗಂಡನ ಜೊತೆ ಹೇಗಿರಬೇಕೆಂದು ತಿಳಿಯದೇ ಇದ್ದರೂ ರಾತ್ರಿ ಅಡುಗೆ ಚಲೋ ಮಾಡದೇ ಇದ್ದರೂ ಕೂಡ ತಾನು ಅವಳನ್ನು ಬಿಡುವುದಿಲ್ಲ'ವೆಂದು ಹೇಳುತ್ತಾನೆ. ಶಿವೂ ಸಹಜವಾಗಿಯೇ "ಸರಸಿ ನಿನಗ ಬಾಳ ಸೇರ್ತಾಳೇನು?" ಎಂದು ಕೇಳುತ್ತಾನೆ. ಏಕೆಂದರೆ ಇತ್ತೀಚೆಗೆ ಶಿವೂಗೂ ಸರಸಿ ಸೇರತೊಡಗಿರುತ್ತಾಳೆ. ಹೀಗಾಗಿ ಅವನು ಅವಳ ಮನೆಗೆ ಹೆಚ್ಚಾಗಿ ಹೋಗಲಿಕ್ಕೆ ಪ್ರಾರಂಭಿಸುತ್ತಾನೆ. ಅವರ ಜೀವನ ಅವನಿಗೆ ರಮ್ಯವೆನಿಸತೊಡಗುತ್ತದೆ. ಒಮ್ಮೆ ಅವರ ಮನೆಗೆ ಹೋದಾಗ ಸರಸೀ ಮತ್ತು ಸಂಗ್ಯಾ ಅಡುಗೆ ಮನೆಯಲ್ಲಿ ಏನೋ ಗುಜು ಗುಜು ಮಾತನಾಡುತ್ತಿರುತ್ತಾರೆ. ಶಿವೂ ಇಸ್ತ್ರಿ ಮಾಡುತ್ತಿದ್ದ ಬಾಳ್ಯಾನಿಗೆ ಅವನ ಅಪ್ಪನ ಬಗ್ಗೆ ವಿಚಾರಿಸುತ್ತಾನೆ. ಆದರೆ ಬಾಳ್ಯಾ ತಾನು ಚಿಕ್ಕವನಿದ್ದಾಗಲೇ ತನ್ನ ತಂದೆ ತೀರಿಕೊಂಡಿದ್ದರಿಂದ ಅವನ ನೆನಪು ಅಷ್ಟಾಗಿಲ್ಲ ಎಂದು ಹೇಳುತ್ತಾನೆ.

ಬಾಳ್ಯಾ ಸಂಗ್ಯಾನನ್ನೇ ತನ್ನ ಅಪ್ಪನೆಂದು ಒಪ್ಪಿಕೊಂಡಿರುತ್ತಾನೆ. ಈ ವಿಚಾರವಾಗಿ ಮಂದಿ ಏನೇ ಹೇಳಿದರೂ ಕೂಡ ಅವನಿಗೆ ಏನೂ ಅನ್ನಿಸುವುದಿಲ್ಲ. ಏಕೆಂದರೆ ಊರಿನ ಬಹುತೇಕ ಜನರು ಅದೇ ರೀತಿಯಲ್ಲಿರುವುದು ಬಾಳ್ಯಾನಿಗೆ ಗೊತ್ತಿರುತ್ತದೆ. ಯಾವಾಗಲೂ ಸರಸೀ-ಸಂಗ್ಯಾ-ಬಾಳ್ಯಾರ ಜೊತೆಯಲ್ಲಿದ್ದ ಶಿವೂನನ್ನು ಅವರಿಂದ ದೂರ ಮಾಡಬೇಕೆಂದು ಶಿವೂನ ತಾಯಿ ಅವನನ್ನು ಮನೆಗೆ ಕೂಡಿಸದಂತೆ ಸರಸಿಗೆ ತಾಕೀತು ಮಾಡಿರುತ್ತಾಳೆ. ಹೀಗಾಗಿ ತನ್ನ ಮನೆಗೆ ಬಂದ ಶಿವೂಗೆ ಸರಸಿ ಮನೆಗೆ ಹೋಗುವಂತೆ ಹೇಳುತ್ತಾಳೆ. ಇದರಿಂದ ಶಿವೂಗೆ ದಿಗ್ಭ್ರಮೆಯಾಗುತ್ತದೆ. ವಾಪಸ್ಸು ಮನೆಗೆ ಬಂದ ಶಿವೂ ಮುಂದೆ ಎಂಟತ್ತು ದಿನಗಳ ಕಾಲ ಅವರ ಮನೆಗೆ ಹೋಗುವುದಿಲ್ಲ. ಆದರೆ ನಾಟಕ ನೋಡಲು ಹೋದಾಗ ಅವರುಗಳ ಭೇಟಿಯಾದಾಗ ಮತ್ತೆ ಅವರ ಮನೆಗೆ ಹೋಗಬೇಕೆಂದೂ, ಅಲ್ಲೇ ಉಳಿದುಕೊಳ್ಳಬೇಕೆಂದೂ ಆಲೋಚಿಸುತ್ತಾನೆ. ಅಷ್ಟರಲ್ಲಿ ಸಂಗ್ಯಾ ಕಠೋರವಾಗಿ ಮಾತನಾಡಿ ಅವನ ಕೋರಿಕೆಯನ್ನು ತಿರಸ್ಕರಿಸುತ್ತಾನೆ. ಇದರಿಂದ ಶಿವೂಗೆ ಒಮ್ಮೆಲೆ ಭಯಂಕರ ಅವಮಾನವಾದಂತಾಗುತ್ತದೆ. ಮನೆಗೆ ಹಿಂದಿರುಗಿದ ಶಿವೂನ ಜೊತೆ ಶೆಟ್ಟರು ಸಿಟ್ಟಿನಿಂದ ವರ್ತಿಸುತ್ತಿರುತ್ತಾರೆ. ನಾಟಕ ನೋಡಲು ಹೋಗುವೆನೆಂದ ಶಿವೂನ ಕೆನ್ನೆಗೆ ಹೊಡೆದ ಶೆಟ್ಟರು ಅವನನ್ನು ಎಲ್ಲಿಗೂ ಕಳುಹಿಸಬಾರದು ಎಂದು ನಿರ್ಧರಿಸುತ್ತಾರೆ. ಇದರಿಂದ ಶಿವೂಗೆ ಮನೆ

ಬಂದೀಖಾನೆಯಂತೆ ಭಾಸವಾಗತೊಡಗುತ್ತದೆ. ಅವನು ಚುಮು ಚುಮು ನಸುಕಿನಲ್ಲಿ ಎದ್ದು ಸರಸೀ ಮನೆಗೆ ಹೋಗಿ ಅಡಗಿಕೊಳ್ಳುತ್ತಾನೆ. ಕೊನೆಗೆ ಸಂಗ್ಯಾ ಅವನನ್ನು ಬಲವಂತವಾಗಿ ಎತ್ತಿಕೊಂಡು ಹೋಗಿ ಶೆಟ್ಟರ ಮನೆಯ ಮುಂದೆ ನಿಲ್ಲಿಸುತ್ತಾನೆ. ಅಂದೇ ರಾತ್ರಿ ಸಂಗ್ಯಾ – ಸರಸೀ–ಬಾಳ್ಯಾ ಊರು ಬಿಟ್ಟು ಹೋಗುತ್ತಿರುವ ವಿಚಾರ ಶಿವೂಗೆ ತಿಳಿಯುತ್ತದೆ. ಸಂಗ್ಯಾ ತನ್ನ ಹೆಂಡತಿಗೆ ಹೊಡೆದು ಅವಳ ಹತ್ತಿರವಿದ್ದ ಬಂಗಾರ –ಪಂಗಾರ ಎಲ್ಲಾನ್ನೂ ಕಿತ್ತುಕೊಂಡು ಹೋಗಿ ಸರಸಿಯ ಮನೆಯಲ್ಲಿ ಅಡಗಿಕೊಂಡಿರುತ್ತಾನೆ. ಆದರೆ ಇದು ಅವನನ್ನು ಹುಡುಕುತ್ತಾ ಹೋದವರಿಗೆ ತಿಳಿಯುವುದಿಲ್ಲ. ಶಿವೂನೇ ಸರಸಿಯ ಮನೆಯಲ್ಲಿದ್ದ ಅಂಬಾರ ಖಾನೆಯಲ್ಲಿ ಹುಡುಕುವಂತೆ ಹೇಳುತ್ತಾನೆ. ಈ ವಿಷಯವನ್ನು ಹೇಳಬಾರದಿದ್ದ ಶಿವೂ ಹೇಳಿಬಿಡುತ್ತಾನೆ (ಪು. ೩೩೫). ಆ ಮೂಲಕ ಸಂಗ್ಯಾನನ್ನು ಹಿಡಿದುಕೊಡಲು ತಾನೇ ಕಾರಣನಾಗುತ್ತಾನೆ. ಆದರೆ ಆ ನಂತರ ಸಂಗ್ಯಾನ ದುಃಖದಲ್ಲಿ ತಾನೂ ಪಾಲ್ಗೊಳ್ಳುತ್ತಾನೆ.

ತಾನು ಸಂಗ್ಯ –ಸರಸೀ–ಬಾಳ್ಯಾರ ಸಹವಾಸ ಮಾಡುವುದಕ್ಕೆ ಮನೆಯವರ ವಿರೋಧವಿದ್ದರೂ ಕೂಡ ಶಿವೂ ಅದನ್ನು ಲೆಕ್ಕಿಸದೆ ತಿರಸ್ಕರಿಸಿ, ಅವರ ಜೊತೆ ಸ್ನೇಹ ಬೆಳೆಸುವುದು ಅವನು ತನ್ನ ತಂದೆ–ತಾಯಿಯ ಬಗ್ಗೆ ಹೊಂದಿದ್ದ ಬಂಡಾಯದ ಮನೋಭಾವನೆಯನ್ನು ತೋರಿಸುತ್ತದೆ. ಸಂಗ್ಯಾ ಎಲ್ಲರಿಗೂ ಕೆಟ್ಟವನಾಗಿದ್ದರೂ ಕೂಡ ಶಿವೂನ ಪ್ರಕಾರ ಒಳ್ಳೆಯವನೇ ಆಗಿರುತ್ತಾನೆ. ತನ್ನ ತಂದೆ ತಾಯಿಗಳ ಮಾತನ್ನು ಧಿಕ್ಕರಿಸುವ ಶಿವೂ ಸಂಗ್ಯಾನ ವಿಚಾರವಾಗಿ ತನ್ನ ತಂದೆ–ತಾಯಿಯನ್ನೇ ವಿರೋಧಿಸುತ್ತಾನೆ.

ಸಮಾಜದ ವಿವಿಧ ಸ್ತರಗಳಲ್ಲಿರುವ ನೈತಿಕ ಮೌಲ್ಯಗಳ ವಿಷಮತೆಯನ್ನು ಕಥೆಗಾರರು ಇಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಗೌರವಸ್ಥ ಕುಟುಂಬಕ್ಕೆ ಸೇರಿದ ಶೆಟ್ಟರು ' ಲೈಂಗಿಕ ವಿಚಾರದಲ್ಲಿ' ನೇರವಾಗಿ ಪಾಲ್ಗೊಳ್ಳುವುದಿಲ್ಲ. ಆದರೆ ಸರಸಿ–ಸಂಗ್ಯಾಗೆ ಆ ವಿಚಾರದಲ್ಲಿ ಯಾವುದೇ ಕಟ್ಟು ಕಟ್ಟಳೆಗಳು ಇರುವುದಿಲ್ಲ. ಈ ವಿಚಾರದಲ್ಲಿ ಅವರುಗಳು ಹೆಚ್ಚು ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. 'ನಾವು ಕೆಟ್ಟ ಜನ, ಹಲಕಟ್ ಜನ, ನಮ್ಮನೀಗೆ ನಿಮ್ಮಂಥವರು ಬರಬಾರದು. ನಾವು ಬಡವರು, ನಮಗೆ ರೀತಿ–ನೀತಿ ಇರೋದಿಲ್ಲ. ನಮಗ ಬುದ್ದೀನೂ ಇರೋದಿಲ್ಲ. ನಾವಂದರ ದನಾ, ಕತ್ತೆಗಳು. ನಾವಂದರ ಹುಳಾ. ಬಿಕ್ಕೇ ಬೇಡುವ ನಾಯಿಗಳು' ಎಂದು ಸಂಗ್ಯಾ ಹೇಳುವ ಮಾತುಗಳು ಅವರ ಸಾಮಾಜಿಕ ಅಂತರವನ್ನು ಚಿತ್ರಿಸುತ್ತವೆ. ಸಂಜ್ಞಾ ತಂತ್ರದ ಮೂಲಕ ದೇಸಾಯಿ ಅವರು ಈ ಕಥೆಯಲ್ಲಿ ಸಮಾಜದ ಒಂದು ವ್ಯವಸ್ಥೆಯನ್ನು, ನೈತಿಕ ಮೌಲ್ಯಗಳಲ್ಲಿರುವ ವಿಷಮತೆಯನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

೪.೭ ಆಧುನಿಕ ಬೆಳವಣಿಗೆ

ನದಿಯ ನೀರು ಹಾಗೂ ಪರಿವರ್ತನೆ ಕಥೆಗಳ ಹಿನ್ನೆಲೆಯಲ್ಲಿ

ನದಿಯ ನೀರು :

'ನದಿಯ ನೀರು' ದೇಸಾಯಿ ಅವರ 'ರಾಕ್ಷಸ' ಕಥಾ ಸಂಕಲನದಲ್ಲಿನ ಕಥೆಯಾಗಿದೆ. ರಾಕ್ಷಸ ಸಂಕೇತವನ್ನು ದೇಸಾಯಿ ಅವರು ಮನುಷ್ಯನ ಮೂಲ ಪ್ರವೃತ್ತಿಗಳ ಸಂಕೇತವನ್ನಾಗಿ ತಮ್ಮ ರಾಕ್ಷಸ ಕಥಾ ಸಂಕಲನದಲ್ಲಿ ಬಳಸಿಕೊಂಡಿದ್ದಾರೆ. ರಾಕ್ಷಸ ಲೈಂಗಿಕತೆಯನ್ನು ಸಂಕೇತಿಸುವ ಸಂಕೇತವಾಗಿ ಕೆಲವು ಕಥೆಗಳಲ್ಲಾದರೆ, ಆಕ್ರಮಣಶೀಲತೆಯ ಸಂಕೇತವಾಗಿ ಕೆಲವು ಕಥೆಗಳಲ್ಲಿ ಬಂದಿದೆ. ಆದರೆ 'ನದಿಯ ನೀರು' ಕಥೆಯು ಇವೆರಡಕ್ಕಿಂತಲೂ ವಿಭಿನ್ನವಾಗಿ ಸಾಮಾಜಿಕ ಯಶಸ್ಸು ಹಾಗೂ ಅದರ ಪರಿಣಾಮಗಳ ಅನ್ವೇಷಣೆಯನ್ನು ನಡೆಸುತ್ತದೆ.

'ನದಿಯ ನೀರು' ಕಥೆಯ ನಾಯಕನಾದ ಗೋಪಿಗೆ ಮೊದಲಿನಿಂದಲೂ ಯಾವುದರಲ್ಲಿಯೂ ಕೂಡ ವಿಶೇಷವಾದ ಆಸ್ಥೆ ಇರುವುದಿಲ್ಲ ಏನೂ ಮಾಡುವುದಕ್ಕೂ ಕೂಡ ಬೇಸರದ ಮನೋಭಾವ. ತನ್ನ ಶಾಲೆಯಲ್ಲಿ, ಊರಿನಲ್ಲಿ ನಡೆದ ಅತಿ ದೊಡ್ಡ ಅನೇಕ ಸಮಾರಂಭಗಳಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳನ್ನು, ವಿದ್ವಾಂಸರನ್ನು, ರಾಷ್ಟ್ರೀಯ ಧುರೀಣರನ್ನು, ಜವಾಹರಲಾಲ ನೆಹರೂರವರನ್ನು ನೋಡಿದ್ದರೂ ಕೂಡ, ದೊಡ್ಡವನಾಗಿ ಮೆರೆಯುವುದರಲ್ಲಿ, ಸತ್ಕಾರ ಮಾಡಿಸಿಕೊಳ್ಳುವುದರಲ್ಲಿ ಅವನಿಗೇನೂ ಪುರುಷಾರ್ಥ ಕಾಣಿಸುತ್ತಿರಲಿಲ್ಲ. ಬದಲಾಗಿ ಅದೆಲ್ಲ ಮೋಜೆನಿಸುತ್ತಿರುತ್ತದೆ (ಪು. ೨೩೭).

ಗೋಪಿಯ ಸ್ನೇಹಿತನಾದ ಪುರುಷೋತ್ತಮ ಒಬ್ಬ ಆದರ್ಶವಾದಿ. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು. ಉನ್ನತವಾದದ್ದನ್ನು, ಅರ್ಥಪೂರ್ಣವಾದದ್ದನ್ನು ಮಾಡಲೇಬೇಕು ಎಂಬ ಹಠ ತೊಟ್ಟಿರುತ್ತಾನೆ. ಅವನ ಪ್ರಕಾರ ಗೋಪಿ ಲಾರ್ಡ್. "ನಿನಗೇನಪ್ಪಾ ಎಲ್ಲಾ ಅದ–ಹೊಲ, ಮನೆ ಇತ್ಯಾದಿ–ಅದಕ್ಕೇ ಇಷ್ಟು ನಿರಾಸಕ್ತನಾಗಿ ಮಾತಾಡ್ತೀ. ನಿನಗ ಆದರ್ಶ ಅನ್ನೋದೇ ಗೊತ್ತಿಲ್ಲ, ಆದರ್ಶದ ರುಚಿ ಗೊತ್ತಿಲ್ಲ, ಅದರ ಶಕ್ತಿ ಗೊತ್ತಿಲ್ಲ, ಅದರ ಅವಶ್ಯಕತೆ ಗೊತ್ತಿಲ್ಲ, ಜೀವನವನ್ನು ಒಂದು ಉಚ್ಚ ಪಾತಳಿಯ ಮೇಲೆ ನಡೆಸಬೇಕೆಂಬ ಹವ್ಯಾಸ ನಿನ್ನಲ್ಲಿಲ್ಲ. ನೀನು ಬರೇ ಉ.ಮ.ಹೇ ಲಾರ್ಡ್!" (ಪು. ೨೩೮)

ಒಮ್ಮೊಮ್ಮೆ ಗೋಪಿಗೂ ತನ್ನ ಬಗ್ಗೆ ತನಗೇ ಕೆಡುಕೆನಿಸುತ್ತಿರುತ್ತದೆ. ತನ್ನಲ್ಲಿ ಯಾವುದೇ ಗುರಿಯಿಲ್ಲ. ಎಲ್ಲರಿಗೂ ಒಂದಿಲ್ಲೊಂದು ಗುರಿಯತ್ತ ಹೋಗುವ ಚಿಂತೆ, ಹವ್ಯಾಸಗಳಿರುವಾಗ ತಾನು ಮಾತ್ರ ಹೀಗೇಕೆ ಎಂದು ಕೊರಗುತ್ತಿರುತ್ತಾನೆ, ಚಿಂತಿಸುತ್ತಿರುತ್ತಾನೆ. ಆದರೆ ಅದ್ಯಾವುದೂ ಅವನಲ್ಲಿ ನಿರಂತರವಾಗಿ ಇರುವುದಿಲ್ಲ. ಇಂತಹ ಗೋಪಿಗೆ ನದಿಯಲ್ಲಿ ಈಸುವುದೆಂದರೆ ಬಹಳ ಸಂತಸದ ವಿಚಾರ. ಹೀಗಾಗಿಯೇ ಒಂದು ಭಾನುವಾರ ತಾನು ನದಿಯಲ್ಲಿ ಈಸಲಿಕ್ಕೆ ಹೋಗುತ್ತೇನೆಂದು ಹೇಳಿದಾಗ, ಪುರುಷೋತ್ತಮ ತನಗೆ ಈಸು ಕಲಿಯಬೇಕಾಗಿರುವುದರಿಂದ ತಾನೂ ಈಸು ಕಲಿಯಲಿಕ್ಕೆ ಬರುತ್ತೇನೆ ಎಂದು ಹೇಳುತ್ತಾನೆ. ಅಂತೆಯೇ ಗೋಪಿ ಪುರುಷೋತ್ತಮನಿಗೆ ಅರ್ಧ ತಾಸು ಈಸು ಕಲಿಸುವ ಪ್ರಯತ್ನ ಮಾಡುತ್ತಾನೆ. ಅಷ್ಟರಲ್ಲಿ ಬೇಸರಗೊಂಡ ಗೋಪಿ

ಪುರುಷೋತ್ತಮನಿಗೆ 'ನಾನು ಸ್ವಲ್ಪ ದೂರ ಈಸಿ ಬರ್ತೀನಿ, ನೀ ಇಲ್ಲೇ ಪ್ರಾಕ್ಟೀಸ್ ಮಾಡು' ಎಂದು ಹೇಳಿ ಮೊಸಳೆಯಂತೆ ಈಸುತ್ತಾ, ದೂರ ಹೋಗಿ ಈಸಾಡಿ ನದಿಯ ದಂಡೆಯಲ್ಲಿ ಶವಾಸನ ಮಾಡಿ ದಣಿವು ತೀರಿಸಿಕೊಳ್ಳುತ್ತಾನೆ. ದಣಿವಾರಿದ ನಂತರ ನೀರಿನಲ್ಲಿ ಜಿಗಿದು ಪುರುಷೋತ್ತಮನಿದ್ದ ಕಡೆಗೆ ಬಂದು ನೋಡುತ್ತಾನೆ.ಆದರೆ ಪುರುಷೋತ್ತಮ ಅಲ್ಲೆಲ್ಲೂ ಕಂಡು ಬರುವುದಿಲ್ಲ. ಪುರುಷೋತ್ತಮ ಈಸಾಡಲು ಪ್ರಯತ್ನಿಸಿ ನೀರಿನಲ್ಲಿ ಮುಳುಗಿರುತ್ತಾನೆ. ಕೊನೆಯದಾಗಿ ಆತನ ಕೈ ಕಂಡು ಬಂದ ಜಾಗದಲ್ಲಿ ಅವನನ್ನು ಹುಡುಕಲು ಹೋದ ಗೋಪಿಗೆ ಅಲ್ಲಿ ನೆಲ ಹತ್ತದೇ ನೀರಿನ ಜೋರು ಸ್ವಲ್ಪ ಹೆಚ್ಚಿದ್ದಂತೆ ಭಾಸವಾಗುತ್ತದೆ.ಹೆದರಿ 'ತಾನೂ ಕೂಡ ಎಲ್ಲಿಯಾದರೂ ಅವನ ಕೂಡೆ ಸತ್ತೇ ಹೋದರೆ' ಎಂಬ ಭಯ ಅವನನ್ನು ಕಾಡಿ ದಂಡೆಗೆ ಹಿಂದಿರುಗುತ್ತಾನೆ (ಪು. ೨೪೨). ನದಿಯ ಕಡೆಗೆ ನೋಡಿದರೆ ಅವನಿಗೆ ಎಲ್ಲಿಯೂ ಪುರುಷೋತ್ತಮನ ಸುಳಿವೇ ಸಿಗುವುದಿಲ್ಲ. ಪುರುಷೋತ್ತಮ ನೀರಿನಲ್ಲಿ ಮುಳುಗಿ ಮರಣವನ್ನು ಹೊಂದಿರುತ್ತಾನೆ. ಪುರುಷೋತ್ತಮ ನೀರಿನಲ್ಲಿ ಮುಳುಗಿ ಸಾಯಲು ತಾನು ಕಾರಣನಲ್ಲದಿದ್ದರೂ, ಪುರುಷೋತ್ತಮನ ಬಗ್ಗೆ ಅವನ ತಂದೆ ವಿಚಾರಿಸಿದಾಗ ತಾನು ಅವನನ್ನು ನೋಡಿಯೇ ಇಲ್ಲವೆಂದು ಸುಳ್ಳು ಹೇಳುತ್ತಾನೆ. ಪೋಲೀಸರು ವಿಚಾರಿಸಿದಾಗಲೂ ಕೂಡ ತನಗೇನು ಗೊತ್ತೇ ಇಲ್ಲವೆಂದು ಹೇಳುತ್ತಾನೆ. ಪೌಜಿದಾರ ಕರೆದೊಯ್ದಾಗಲೂ ಕೂಡ ಗೋಪಿ ಗಿಡಗಳ ಗುಂಪಿನ ಸ್ಥಾನವನ್ನು ತೋರಿಸಿ, ತನಗೇನು ಗೊತ್ತೇ ಇಲ್ಲವೆಂದು ಎಲ್ಲರನ್ನೂ ನಂಬಿಸುತ್ತಾನೆ.

ಆದರೆ ಪುರುಷೋತ್ತಮನ ಮರಣದ ನಂತರ ಗೋಪಿಯಲ್ಲಿ ದೊಡ್ಡ ಬದಲಾವಣೆ ಕಂಡು ಬರುತ್ತದೆ. ಭಯಂಕರ ಅಭ್ಯಾಸ ಮಾಡಿದ ಗೋಪಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಶಾಲೆಗೆ ಮೊದಲಿಗನಾಗುತ್ತಾನೆ. ಮುಂದೆ ಅವನ ಜೀವನ ದೊಡ್ಡದೊಂದು ತಿರುವು ಪಡೆಯುತ್ತದೆ. ತಂದೆಯ ಮಾತನ್ನು ತಿರಸ್ಕರಿಸಿ ಮುಂಬಯಿಗೆ ಓಡಿಹೋದ ಗೋಪಿ ಒಂದು ಕಾರಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡು, ಲೇಥ್ ಕೆಲಸ ಕಲಿತುಕೊಳ್ಳುತ್ತಾನೆ. ಮೋತಿಭಾಯಿಯೊಡನೆ ಪಾರ್ಟ್ನರ್ ಆಗಿ ತನ್ನದೇ ಸಣ್ಣ ಉದ್ದಿಮೆ ಪ್ರಾರಂಭಿಸಿದ ಗೋಪಿ ಕೈ ತುಂಬಾ ಸಂಪಾದಿಸುತ್ತಾನೆ. ಊರಿನಲ್ಲಿ ತನ್ನ ಅಪ್ಪ-ಅಮ್ಮನ ಹೆಸರಿನಲ್ಲಿ ಶಾಲಾ ಕಟ್ಟಡದ ಒಂದು ಭಾಗವನ್ನು ಕಟ್ಟಿಸಿಕೊಡುತ್ತಾನೆ. ಎರಡು ಓನರ್‌ಶಿಪ್ ಫ್ಲ್ಯಾಟು ಕೊಂಡುಕೊಂಡದ್ದಲ್ಲದೆ ಕಾರ್ಖಾನೆಯನ್ನು ಬೆಳೆಸಿ ದೊಡ್ಡ ದೊಡ್ಡ ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾನೆ. 'ಅವನ ಕರ್ತೃತ್ವ ಶಕ್ತಿ, ಅವನ ಜೀವನೋತ್ಸಾಹ, ಅವನ ಶ್ರೀಮಂತಿಕೆ, ಎಲ್ಲವೂ ಅವನನ್ನು ದಂಗುಬಡಿಸುತ್ತವೆ' (ಪು.೨೪೩) ಇಷ್ಟೆಲ್ಲ ಸುಖವನ್ನು ಅನುಭವಿಸಿದ ಗೋಪಿಗೆ ಇದ್ದಕ್ಕಿದ್ದಂತೆ ಎಲ್ಲವೂ ಶೂನ್ಯದಂತೆ ಭಾಸವಾಗತೊಡಗುತ್ತದೆ. ತನ್ನ ಉದ್ಯೋಗದ ಬಗ್ಗೆ ಬೇಸರಗೊಂಡ ಗೋಪಿ ಕಾರ್ಖಾನೆಯನ್ನು ಮೋತಿಭಾಯಿಗೆ ಒಪ್ಪಿಸಿಬಿಡುತ್ತಾನೆ. ಆದರೆ ಹೆಂಡತಿಗೆ "ನೋಡು ನಮ್ಮ ಕಾರ್ಖಾನೆ ಭಯಂಕರ ನಷ್ಟದಲ್ಲಿದೆ, ಇನ್ನಾರು ತಿಂಗಳಿಗೆ ದಿವಾಳಿ ತೆಗೆಯುವ ಪ್ರಸಂಗ ಬಂದರೂ ಬಂತೆ. ಅದಕ್ಕೆ ಅದನ್ನು ಮೋತಿಭಾಯಿಯ ಕೊರಳಿಗೆ ಕಟ್ಟಿದ್ದೇನೆ. ನಮಗೇನು ಕಡಿಮೆಯಾಗಿದೆ? ಮನೆ, ಕಾರು-ಸಾಕಷ್ಟು ಬ್ಯಾಂಕ್ ಬ್ಯಾಲನ್ಸ್... ಹಾಹಾಹಾ. ಇನ್ನು ಕೆಲಸ ಪಲಸ ಎಲ್ಲ ಬಿಟ್ಟು ಆರಾಮವಾಗಿ ಹಾಯಾಗಿ ಇದ್ದುಬಿಡೋಣ" ಎಂದು ಸುಳ್ಳು ಹೇಳಿ ನಂಬಿಸಿರುತ್ತಾನೆ. ಗೋಪಿಯೇ ಹೇಳುವಂತೆ "ಅವನ ಜೀವನದಲ್ಲಿ ಪುರುಷೋತ್ತಮನ ಘಟನೆಯೊಂದೇ

ನಿಜವಾದ ಘಟನೆಯಾಯಿತು" (ಪು. ೨೪೪). ಪುರುಷೋತ್ತಮ ಹೇಳಿದಂತೆ 'ನಾನು ಲಾರ್ಡನಲ್ಲವೇ – ಉ.ಮ. ಹೇ ಲಾರ್ಡ್!... ಅಂದ ಮೇಲೆ, ಹೀಗೇ ನದಿ ಹರಿದಂತೆ ನನ್ನ ಜೀವನ ಹರಿಸುವುದೊಂದೇ ನನ್ನ ಅಂತಿಮ ಗುರಿ. ಹೀಗೆ ಗೋಪಿ ತನ್ನ ಮೂಲ ಅವಸ್ಥೆಗೆ ಹಿಂದಿರುಗುವುದರೊಂದಿಗೆ ಕಥೆ ಮುಕ್ತಾಯಗೊಳ್ಳುತ್ತದೆ. ದೇಸಾಯಿ ಅವರು ನದಿಯ ಸಂಕೇತವನ್ನು ಈ ಕಥೆಯಲ್ಲಿ ಯಶಸ್ವಿಯಾಗಿ ಬಳಸಿದ್ದಾರೆ. ಜೀವನದಲ್ಲಿ ಯಾವುದೇ ಮಹತ್ವದ ಜವಾಬ್ದಾರಿಯನ್ನು, ಗುರಿಯನ್ನು ಹೊಂದಲು ಸಿದ್ಧನಿಲ್ಲದ ಗೋಪಿ ತನ್ನ ಕರ್ತೃತ್ವ ಶಕ್ತಿಯನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುವಲ್ಲಿ ವಿಫಲನಾಗುತ್ತಾನೆ.

ಪರಿವರ್ತನೆ :

ದೇಸಾಯಿ ಅವರು ೧೯೭೬ರಲ್ಲಿ ರಚಿಸಿದ 'ಪರಿವರ್ತನೆ' ಕಥೆಯು ಮೊದಲ ಬಾರಿಗೆ ೧೯೭೬ರ ಉದಯವಾಣಿ ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾಗುತ್ತದೆ. ತದ ನಂತರ ದೇಸಾಯಿ ಅವರ ಐದನೇ ಕಥಾಸಂಕಲನ 'ಪರಿವರ್ತನೆ'ಯಲ್ಲಿ ೧೯೮೨ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ದೇಸಾಯಿ ಅವರೇ ಹೇಳುವಂತೆ ಅವರ ಐದನೇಯ ಕಥಾ ಸಂಗ್ರಹವಾದ 'ಪರಿವರ್ತನೆ'ಯಲ್ಲಿ ಕೆಲವು ಸಾಮಾಜಿಕ ಕಾಳಜಿಗಳು, ಕೆಲವು ವೈಯಕ್ತಿಕ ಸಂದಿಗ್ಧತೆಗಳು ಹೆಚ್ಚಿನ ಪ್ರಕರ್ಷತೆಯಿಂದ ಬಂದಿವೆಯೆಂದೂ, ಕಥನ ಕ್ರಿಯೆಯಲ್ಲಿ ಹೆಚ್ಚಿನ ಪ್ರಬುದ್ಧತೆ ಬಂದಿದೆ ಎಂಬುದು ಅವರ ಹಲವು ವಿಮರ್ಶಕ ಮಿತ್ರರ ಅಭಿಪ್ರಾಯವಾಗಿದೆ.

ಪರಿವರ್ತನೆ ಕಥೆಯ ರಾಜಶೇಖರನ ಸ್ನೇಹಿತ ಚಂದ್ರೂ ಮಧ್ಯರಾತ್ರಿ ಎರಡು ಗಂಟೆಗೆ ರಾಜಶೇಖರನ ಮನೆಗೆ ಬಂದು ಬೆಲ್ಲು ಬಾರಿಸುವುದರೊಡನೆ ಕಥೆ ಪ್ರಾರಂಭವಾಗುತ್ತದೆ. ಮಧ್ಯರಾತ್ರಿಯಲ್ಲಿ ತನ್ನ ಮನೆಯ ಬೆಲ್ಲು ಬಡಿದಾಗ ಬಹುಶಃ ಯಾರಾದರೂ ಸತ್ತುಹೋಗಿರಬಹುದು ಎಂಬ ತತ್‌ಕ್ಷಣದ ಆಲೋಚನೆ ರಾಜಶೇಖರನ ಮನದಲ್ಲಿ ಮೂಡುತ್ತದೆ. ಚಿಂತೆ, ಆತಂಕದಿಂದಲೇ ಬಾಗಿಲು ತೆರೆದ ರಾಜಶೇಖರನಿಗೆ ತನ್ನ ಸ್ನೇಹಿತ ಚಂದ್ರೂವನ್ನು ನೋಡಿ ಗಾಬರಿಯಾಗುತ್ತದೆ. ಮನೆಯ ಒಳಗೆ ಬರುವಂತೆ ಕರೆದರೂ ಕೂಡ ಒಳಗೆ ಹೋಗದೆ ಚಂದ್ರು "ಸ್ವಲ್ಪ ಬೇಬೀ ಸಮಸ್ಯಾ ನಿಂಗೊತ್ತದ ಅಲ್ಲ" ಎಂದು ಹೇಳುತ್ತಾನೆ. ಇದನ್ನು ಕೇಳಿ ರಾಜಶೇಖರ ಬಹುಶಃ ಬೇಬಿ ಆತ್ಮಹತ್ಯೆ ಮಾಡಿಕೊಂಡಿರಬೇಕೇನೋ ಎಂದು ಭಾವಿಸುತ್ತಾನೆ. ಆದರೆ ಸಮಸ್ಯೆ ಅದಾಗಿರದೇ ಅವಳು ತಾನು ಪ್ರೀತಿಸುತ್ತಿದ್ದ ಮಹೇಶನೊಂದಿಗೆ ಮನೆ ಬಿಟ್ಟು ಹೋಗಿರುತ್ತಾಳೆ.ವಿಷಯ ತಿಳಿದ ರಾಜಶೇಖರ ಮತ್ತು ಗೌರಿ ಇಬ್ಬರೂ ಚಂದ್ರೂನ ಮನೆಗೆ ಬರುತ್ತಾರೆ. ಚಂದ್ರೂನ ಹೆಂಡತಿ ಮಂದಕ್ಕ ಈ ಸಮಸ್ಯೆಯನ್ನು ಬಗೆಹರಿಸುವಂತೆ ರಾಜಶೇಖರನಿಗೆ ಕೇಳಿಕೊಳ್ಳುತ್ತಾಳೆ. ರಾಜಶೇಖರ ಮೊದಲು ಸಮಾಜಶಾಸ್ತ್ರದ ಪ್ರಾಧ್ಯಾಪಕನಾಗಿದ್ದು ಈಗ ಎಲ್‌ಆಯಸೀಯಲ್ಲಿ ಒಬ್ಬ ದೊಡ್ಡ ಆಫೀಸರ್ ಆಗಿರುತ್ತಾನೆ. ಅವನ ಪ್ರಕಾರ ಇದು ಬದಲಾಗುತ್ತಿರುವ ಸಮಾಜದ ಯಃಕಶ್ಚಿತ ಸಮಸ್ಯೆ. ಇದನ್ನು ಹೊಸ ರೀತಿಯಿಂದ, ಹೊಸ ಮೌಲ್ಯಗಳ ದೃಷ್ಟಿಯಿಂದ ಬಿಡಿಸಬೇಕೇ ಹೊರತು, ಹಳೇ ಪಾರಂಪರಿಕ ರೀತಿಯಿಂದ ಬಿಡಿಸಬಾರದು (ಪು. ೩೦೬).

ರಾಜಶೇಖರನ ಮನೆಯಿಂದ ಹಿಂದಿರುಗಿ ಬರುವಷ್ಟರಲ್ಲಿ ಬೇಬಿ ಮನೆಗೆ ವಾಪಸ್ಸು ಬಂದಿರುತ್ತಾಳೆ. ಚಂದ್ರೂಗೆ ಅವಳನ್ನು ಕೊಲ್ಲುವಷ್ಟು ಅವಳ ಕಾಲನ್ನು ಮುರಿಯುವಷ್ಟು ಕೋಪ ಬಂದಿರುತ್ತದೆ. ಸಿಟ್ಟಾದ ಚಂದ್ರೂನನ್ನು ರಾಜಶೇಖರ ಸಮಾಧಾನಗೊಳಿಸಿ ಮನೆಯ ಒಳಗೆ ಹೋಗುತ್ತಾನೆ. ಬೇಬಿಯೊಂದಿಗೆ ಮಾತನಾಡಿ ಅವಳಿಗೆ ಬುದ್ಧಿ ಹೇಳಿ, ಅವಳ ಮನಃಪರಿವರ್ತನೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡು ಬೇಬಿಯನ್ನು ತನ್ನ ಮನೆಗೆ ಕರೆತಂದ ರಾಜಶೇಖರ. ಅವಳನ್ನು ಗ್ರ್ಯಾಂಡ್ ಹೋಟೆಲ್ಲಿಗೆ ಕರೆದುಕೊಂಡು ಹೋಗುತ್ತಾನೆ. ಮುಖ್ಯವಾಗಿ ಆತನಿಗೆ ತನ್ನ ಹೆಂಡತಿಯನ್ನು ತಪ್ಪಿಸಿ ಬೇಬಿಯೊಂದಿಗೆ ಏಕಾಂತದಲ್ಲಿ ಮಾತನಾಡಬೇಕಿರುತ್ತದೆ. ಹೋಟೆಲಿನ ರಮ್ಯ ವಾತಾವರಣದಲ್ಲಿ ಮನಃ ಪರಿವರ್ತನೆ ಅತ್ಯಂತ ಸುಲಭವಾಗಿ ಸರಾಗವಾಗಿ ಸಾಧ್ಯವಾದೀತು ಎಂಬುದು ರಾಜಶೇಖರನ ಭಾವನೆಯಾಗಿರುತ್ತದೆ. ಆದರೆ ಬೇಬಿಯ ಪ್ರಕಾರ ತನ್ನ ಮತ್ತು ಮಹೇಶನ ಸಂಬಂಧದಲ್ಲಿ ಎಲ್ಲವೂ ಮುಗಿದಿದ್ದು, ತಾವು ಮದುವೆ ಆಗುವುದು ನಿಶ್ಚಿತವಾಗಿದ್ದರೂ ಕೂಡ ರಾಜಶೇಖರ ವೃಥಾ ತೊಂದರೆಯನ್ನು ತೆಗೆದುಕೊಳ್ಳುತ್ತಿದ್ದಾನೆ ಎಂದು ಭಾವಿಸುತ್ತಾಳೆ. ಹೀಗಾಗಿ ಅವಳು ತಮ್ಮಿಬ್ಬರಿಗೂ ಮದುವೆ ಮಾಡುವಂತೆ ಕೇಳುತ್ತಾಳೆ.

ಆದರೆ ರಾಜಶೇಖರನ ಪ್ರಕಾರ ಚಂದ್ರೂ ಸ್ವಲ್ಪ ಅರ್ಥೋಡಾಕ್ಸ್ ಇರುವುದರಿಂದ ಅವನು ಇದಕ್ಕೆ ಒಪ್ಪಿಕೊಳ್ಳುವುದು ಕಷ್ಟ .ಮಹೇಶ ಲಫಂಗ, ಸಿಗರೇಟು ಸೇದ್ತಾನೆ. ವ್ಹಿಸ್ಕಿ – ರಮ್ ಕುಡೀತಾನೆ ಎಂಬುದರ ಜೊತೆಗೆ ಆತ ಬೇರೆ ಜಾತಿಯವನು ಎಂಬುದು ಮುಖ್ಯವಾಗಿರುತ್ತದೆ. ಬೇಬಿ "ಮಹೇಶ ನೋಡ್ರಿ ಹಾಂಗ ಸ್ವಲ್ಪ ಲಫಂಗನೆ ಅದಾನ್ರಿ, ಆದ್ರ ಈಗಿನ ಕಾಲದಾಗ ಯಾರು ಲಫಂಗ್ ಇಲ್ರಿ"? (ಪು. ೩೦೯) ಎಂದು ಕೇಳುತ್ತಾ ಅದೇ ಕೆಲಸಗಳನ್ನು ಮಾಡುತ್ತಿದ್ದ ರಾಜಶೇಖರನನ್ನೂ ಕೂಡ ಅವಳು ಪರೋಕ್ಷವಾಗಿ ಗುರಿಯಾಗಿಸುತ್ತಾಳೆ. ರಾಜಶೇಖರ ಅವಳ ಮನಃಪರಿವರ್ತನೆ ಮಾಡುವ ಸಲುವಾಗಿ ಅವಳ ಸೌಂದರ್ಯವನ್ನು ಹೊಗಳುತ್ತಾನೆ. ಬೇಬಿಯಲ್ಲಿ ಆಧುನಿಕ ಮನೋಭಾವವಿಲ್ಲ ಎಂದು ಹೇಳುತ್ತಾನೆ. ಅವಳಲ್ಲಿ ಬದಲಾವಣೆ ಆಗಲೆಂದು ಹಿಂದಿನ ತನ್ನ ಪ್ರೇಮ ಪ್ರಕರಣಗಳನ್ನು ಹೇಳುತ್ತಾನೆ. ಚಂದ್ರೂನ ವೈಯಕ್ತಿಕ ಜೀವನದ ಬಗ್ಗೆಯೂ ಮಾತನಾಡುತ್ತಾನೆ. ಆದರೆ ಬೇಬಿ ಯಾವುದನ್ನೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಶೇಕ್ಸ್‌ಪಿಯರ್, ಬರ್ಟ್ರಾಂಡ್ ರಸೆಲ್ ಮುಂತಾದವರ ವ್ಯಾಖ್ಯಾನಗಳನ್ನು ನೀಡುತ್ತಾನೆ. ಅವಳೊಂದಿಗೆ ಡಾನ್ಸ್ ಮಾಡುತ್ತಾನೆ. ಆದರೂ ಕೂಡ ಅವಳು ತನ್ನ ಮನಸ್ಸನ್ನು ಬದಲಾಯಿಸುವುದಿಲ್ಲ. ಬೇಬಿ ಜಿನ್ ಹೆಚ್ಚು ತೆಗೆದುಕೊಂಡಿದ್ದರಿಂದ ಜೋಲಿ ಹೊಡೆದು ಬೀಳುತ್ತಾಳೆ. ರಾಜಶೇಖರ ಅವಳನ್ನು ಟ್ಯಾಕ್ಸಿಯಲ್ಲಿ ಕೂರಿಸುತ್ತಾನೆ. ಅವಳನ್ನು ಸೀದಾ ಹೋಟೆಲ್ಲಿಗೆ ಕರೆದುಕೊಂಡು ಹೋಗಿ ನಾಳೆ ಮುಂಜಾನೆ ಅವಳ ಮನೆಗೆ ಕರೆದುಕೊಂಡು ಹೋಗಬೇಕೆಂಬ ಆಲೋಚನೆ ಕ್ಷಣ ಕಾಲ ಅವನಲ್ಲಿ ಮೂಡುತ್ತದೆ. ಅವನ ಯೋಚನೆಗೆ ಅವನ ತಲೆ ಗಿರ್ರೆಂದು ತಿರುಗುತ್ತದೆ. ಇಲ್ಲಿ ರಾಜಶೇಖರನ ಲಂಪಟತನವನ್ನು ಗುರುತಿಸಬಹುದಾಗಿದೆ. ಟ್ಯಾಕ್ಸಿಯವನಿಗೆ 'ಶಾಸ್ತ್ರಿ ರೋಡ್' ಎಂದು ಚಂದೂನ ಮನೆಯ ವಿಳಾಸವನ್ನು ಹೇಳಿದ ನಂತರ ಡಬ್ ಡಬ್ಬೆಂದು ಹೊಡೆದುಕೊಳ್ಳುತ್ತಿದ್ದ ಅವನ ಹೃದಯ ಶಾಂತವಾಗುತ್ತದೆ. ಯಾವುದೋ ಅಪಘಾತದಿಂದ ಬಚಾವಾದ ಆನಂದವುಂಟಾಗುತ್ತದೆ. (ಪು. ೩೧೨) ತನ್ನ ಈ

ಎಲ್ಲಾ ಪ್ರಯತ್ನದಿಂದ 'ಬೇಬಿ ಮಹೇಶನನ್ನು ತಿರಸ್ಕರಿಸುತ್ತಾಳೆ. ಮಹೇಶನ ಭಾನಗಡಿ ಮುಗಿದಂತೆಯೇ' ಎಂದು ಸಂತೋಷಪಡುತ್ತಾನೆ.

ಆದರೆ ಮತ್ತೆ ರಾತ್ರಿಯೇ ಬೇಬಿ ಚೀಟಿ ಬರೆದಿಟ್ಟು ಮಹೇಶನೊಂದಿಗೆ ಓಡಿ ಹೋದ ಸುದ್ದಿಯನ್ನು ಚಂದ್ರು ತರುತ್ತಾನೆ. 'ಅಂತೂ ಸಮಸ್ಯಾ ಬಗೆಹರೀತಲ್ಲ' ಎಂದು ರಾಜಶೇಖರ ಚಂದ್ರುಗೆ ಹೇಳುವಲ್ಲಿ ರಾಜಶೇಖರನ ಹತಾಶ ಮನಃಸ್ಥಿತಿಯ ಚಿತ್ರಣ ಕಂಡುಬರುತ್ತದೆ. ಕಥೆಯ ಅಂತ್ಯದಲ್ಲಿ ಅವನು ಚಂದ್ರುವಿಗೆ ಹೇಳುವ ಮಾತುಗಳು "ಚಂದ್ರೂ ಇಷ್ಟು ಮನಸ್ಸಿಗೆ ಹಚ್ಚಿಕೊಳ್ಳಬಾರ್ದು-ನಾವು ಮುದುಕರಾದೀವಿ. ಇನ್ನು ನಾವು ಹಳೆ ಫೀಡೀ ಜನ. ನಾವೇ ನಮ್ಮ ಮನಸ್ಸನ್ನ ಬದಲು ಮಾಡಿಕೊಳ್ಳಬೇಕು. ಅಂದರೇನೆ ನಮ್ಮ ಬಾಳುವೀ ಛಂದ. ಚಂದ್ರೂ, ತಗೋ ಇನ್ನೊಂದು! ಜೀವನ ಅಂದರೇನು ಗೊತ್ತದಯೇನ ನಿನಗ? ಹಾ ಹಾ ಹಾ! ಜೀವನಂದರ- ಇದನ್ನ ತಗೋ ಏನಪಾ- ನಾ ಆ ಮ್ಯಾಲ ಹೇಳ್ತೀನಿ" (ಪು. ೩೧೪) ಎಂದು ಹೇಳುವ ಮೂಲಕ ಕಾಲಕ್ಕೆ ತಕ್ಕಂತೆ ಹಿರಿಯರಾದ ತಾವೇ ಬದಲಾವಣೆಗೆ ಒಳಗಾಗಬೇಕು, ಆಧುನಿಕತೆಯನ್ನು ಮೈಗೂಡಿಸಿಕೊಳ್ಳಬೇಕು. ಆಧುನಿಕ ಮನೋಭಾವದ ಮಕ್ಕಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬುದನ್ನು ಲೇಖಕರು ಸೂಕ್ಷ್ಮವಾಗಿ ಹೇಳುತ್ತಾರೆ.

ಹೀಗೆ ನದಿಯ ನೀರು ಮತ್ತು ಪರಿವರ್ತನೆ ಕಥೆಗಳು ದೇಸಾಯಿ ಅವರ ಇತರ ಕಥೆಗಳಿಗಿಂತ ಭಿನ್ನವಾಗಿ ಮೂಡಿ ಬಂದಿವೆ. ಬದಲಾವಣೆ ಎಂಬುದು ಒಂದು ನಿರಂತರ ಪ್ರಕ್ರಿಯೆ ಆಗಿದ್ದರೂ ಸಹ, ಅದನ್ನು ಎದುರಿಸಲು ವಿಫಲರಾಗಿ ತಮ್ಮ ಮೂಲದಲ್ಲಿಯೇ ಉಳಿದುಕೊಳ್ಳಲು ಬಯಸುವುದನ್ನು ಇಲ್ಲಿನ ಗೋಪಿ ಹಾಗೂ ಬೇಬಿ ಇವರ ಮೂಲಕ ಗುರುತಿಸಲಾಗಿದೆ. ಹೊಸ ಬೆಳವಣಿಗೆಗೆ ಹೊಂದಿಕೊಳ್ಳುವಲ್ಲಿ ಮೂಡುವ ಸಂಘರ್ಷಗಳನ್ನು, ಮಾನಸಿಕ ವಿಪ್ಲವಗಳನ್ನು ಇಲ್ಲಿ ಗುರುತಿಸಲಾಗಿದೆ. ಬದಲಾವಣೆಗಿಂತ ಮೂಲದಲ್ಲಿಯೇ, ತಾವು ಸುರಕ್ಷಿತ ಎಂಬುದು ಇಲ್ಲಿನ ಪಾತ್ರಗಳ ಅಭಿಪ್ರಾಯವೂ ಆಗಿದ್ದು, ಮೂಲಕ್ಕೇ ಹಿಂದಿರುಗುವುದನ್ನು ಸಹ ಗುರುತಿಸಲಾಗಿದೆ.

ಆಕರ ಕಥಾಸಂಕಲನಗಳು :

೧. ಮಂಜುಗಡ್ಡೆ, ೧೯೫೮
೨. ಕ್ಷಿತಿಜ, ೧೯೬೬
೩. ದಂಡೆ, ೧೯೭೧
೪. ರಾಕ್ಷಸ, ೧೯೭೭
೫. ಪರಿವರ್ತನೆ, ೧೯೮೨
೬. ಕೂರ್ಮಾವತಾರ, ೧೯೮೮
೭. ಈಚಿನ ಕಥೆಗಳು, ೧೯೯೧ ರಿಂದ ೧೯೯೭ರ ಅವಧಿ
೮. ಸಮಗ್ರ ಕಥೆಗಳ ಸಂಕಲನ, ೨೦೦೧, ೨೦೧೩.

ಅಧ್ಯಾಯ : ಐದು

ದೇಸಾಯಿ ಅವರ ಕಾದಂಬರಿಗಳಲ್ಲಿ ಸಂಘರ್ಷಗಳ ವಿನ್ಯಾಸಗಳು

ಅಧ್ಯಾಯ : ಐದು

ದೇಸಾಯಿ ಅವರ ಕಾದಂಬರಿಗಳಲ್ಲಿ ಸಂಘರ್ಷಗಳ ವಿನ್ಯಾಸಗಳು

ಹಿಂದಿನ ಅಧ್ಯಾಯದಲ್ಲಿ ಶಾಂತಿನಾಥ ದೇಸಾಯಿ ಅವರ ಸಣ್ಣ ಕಥೆಗಳಲ್ಲಿ ಅಭಿವ್ಯಕ್ತವಾಗಿರುವ ವಿಭಿನ್ನವಾದ ಸಂಘರ್ಷದ ವಿನ್ಯಾಸಗಳನ್ನು ಗುರುತಿಸಲಾಗಿದೆ. ಈ ಅಧ್ಯಾಯದಲ್ಲಿ ಅವರ ಕಾದಂಬರಿಗಳಲ್ಲಿ ವ್ಯಕ್ತವಾಗುವ ವಿವಿಧ ಬಗೆಯ ಸಂಘರ್ಷದ ವಿನ್ಯಾಸಗಳನ್ನು ಗುರುತಿಸಲಾಗುವುದು. ದೇಸಾಯಿ ಅವರು ನವ್ಯ ಸಾಹಿತ್ಯದ ಆರಂಭದ ಕಾಲಘಟ್ಟದಿಂದ ತಮ್ಮ ಅಭಿವ್ಯಕ್ತಿ ಸ್ವರೂಪವನ್ನು ಪ್ರಕಟಿಸುತ್ತಾ ಬಂದವರು.ಅವರೊಬ್ಬ ನವ್ಯದ ಅತ್ಯುತ್ತಮ ಲೇಖಕರಾಗಿದ್ದಾರೆ. ಮೊದಲಿನಿಂದಲೂ ಬದುಕು, ಧರ್ಮ, ವಿಚಾರಗಳ ಬಗ್ಗೆ ಅಸ್ತಿತ್ವವಾದಿ ನೆಲೆಯನ್ನು ರೂಪಿಸಿಕೊಂಡವರು. ಅರಂಭದಿಂದಲೂ ಇಂಗ್ಲಿಷ್ ಸಾಹಿತ್ಯ, ಯುರೋಪಿಯನ್ ಸಾಹಿತ್ಯ ಮತ್ತು ದೇಸಿ ಮರಾಠಿ ಸಾಹಿತ್ಯದಿಂದ ಅನೇಕ ಪ್ರಭಾವಗಳನ್ನು ಮತ್ತು ಪ್ರೇರಣೆಗಳನ್ನು ಪಡೆದವರು. ನವ್ಯ ಸಾಹಿತ್ಯದ ಆದ್ಯ ಪ್ರವರ್ತಕರು ವಿ. ಕೃ.ಗೋಕಾಕ ಮತ್ತು ಎಂ.ಗೋಪಾಲ ಕೃಷ್ಣ ಅಡಿಗರು ಎಂದು ಚಾರಿತ್ರಿಕವಾಗಿ ತಿಳಿದಿದೆ. ಆದರೆ ದೇಸಾಯಿ ಅವರು ಅಡಿಗರಿಗಿಂತ ಮನೋಧರ್ಮದಲ್ಲಿ ಭಿನ್ನವಾಗಿ ಗೋಕಾಕರ ಮನೋಧರ್ಮದ ಕಡೆ ವಾಲಿದವರು. ಜೊತೆಗೆ ಎಂ.ಎನ್. ರಾಯ್ ಮತ್ತು ಮಾರ್ಕ್ಸ್‌ವಾದಿ ವಿಚಾರಗಳ ಕಡೆಗೆ ಪ್ರಭಾವಿತರಾದವರು. ದೇಸಾಯಿ ಅವರು ಮಾತುಗಳಲ್ಲೇ ಇದನ್ನು ಹೇಳುವುದಾದರೆ "ನನ್ನದು ಮಾರ್ಕ್ಸ್ ಪ್ರಭಾವಿತವಾದ ಅಸ್ತಿತ್ವವಾದಿ ಮಾನವತಾವಾದ. ನಾನು ಮಾರ್ಕ್ಸ್‌ವಾದವನ್ನು ಸ್ವಲ್ಪ ಇಟ್ಟುಕೊಂಡು, ನವಮಾನವತಾವಾದವನ್ನೂ ಸ್ವೀಕರಿಸಿ, ನನ್ನದೇ ಆದ, ನನ್ನ ಸಂವೇದನೆಯ ಕೇಂದ್ರ ಪ್ರವೃತ್ತಿಯಾದ ಅಸ್ತಿತ್ವವಾದವನ್ನೂ ಬಿಡದೆ– ಜೀವನವನ್ನು ಅನುಭವಿಸುವ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದೇನೆ. ನನ್ನ ಕಾದಂಬರಿಗಳ ಹಿಂದಿನ ಮೂಲ ಪ್ರೇರಣೆ ನನ್ನ ಈ ದೃಷ್ಟಿಕೋನ ಅರ್ಥಾತ್ ನನ್ನ ಸಾಹಿತ್ಯ ವಿಮರ್ಶೆಯಲ್ಲಿಯ ಮಾನದಂಡಗಳೂ ಈ ದೃಷ್ಟಿಕೋನದಿಂದಲೇ ಪ್ರೇರಿತವಾದವುಗಳು" ಎಂದಿದ್ದಾರೆ.

ದೇಸಾಯಿ ಅವರು ಒಬ್ಬ ಅತ್ಯುತ್ತಮ ಕಥನಕಾರ. ಅವರ ಕಥನ ನಿರೂಪಣೆ ಮತ್ತು ಸಂಭಾಷಣೆಯ ಭಾಷೆ ತುಂಬಾ ಶಕ್ತಿಯುತವಾದುದು ಮತ್ತು ವಿಚಾರಪೂರ್ಣವಾದುದು. ಅವರು ಅರವತ್ತರ ದಶಕದಲ್ಲಿ ಬರೆದ 'ಮುಕ್ತಿ' ಕಾದಂಬರಿಯಿಂದ ಹಿಡಿದು ತೊಂಬತ್ತರ ದಶಕದಲ್ಲಿ ಬರೆದ 'ಓಂ ಣಮೊ' ಕಾದಂಬರಿಗಳ ತನಕ ಅವರ ಕಥನದ ವೈವಿಧ್ಯತೆ, ಸಂಭಾಷಣೆಯ ತೀಕ್ಷ್ಣತೆ ಮತ್ತು ಬದುಕಿನ ಸಂಘರ್ಷಗಳು ಸಾಮಾಜಿಕವಾಗಿ ಮತ್ತು ರಾಜಕೀಯ ಪ್ರೇರಿತವಾಗಿ ವಿವಿಧ ಕಾಲಘಟ್ಟಗಳ ಹಿನ್ನೆಲೆಯಲ್ಲಿ ಬದಲಾಗುತ್ತಾ ಹಾಗೂ ಜೀವಪರವಾದ ಬೆಳವಣಿಗೆಯನ್ನು ಪಡೆಯುತ್ತಾ

ಹೋಗಿದೆ. ಈ ಬಗೆಯ ವಿವಿಧ ಸಾಂಸ್ಕೃತಿಕ ಸಂಘರ್ಷಗಳ ವಿನ್ಯಾಸಗಳನ್ನು ಅವರ ಒಟ್ಟು ಕಾದಂಬರಿಗಳ ಮೂಲಕ ಇಲ್ಲಿ ವಿಶ್ಲೇಷಣೆಗೆ ಒಳಗು ಮಾಡುತ್ತಾ ಈ ಅಧ್ಯಾಯವನ್ನು ರೂಪಿಸಲಾಗಿದೆ. ಇಲ್ಲಿ ಅವರ ಕಾದಂಬರಿಗಳ ವಸ್ತು, ಪಾತ್ರ ಚಿತ್ರಣ, ವಿಚಾರಗಳ ಲಹರಿ, ಧಾರ್ಮಿಕ ಹಾಗೂ ಸಾಮಾಜಿಕ ಸಂಘರ್ಷಗಳನ್ನೆಲ್ಲಾ ಸಮಗ್ರವಾಗಿ ಅಧ್ಯಯನಕ್ಕೆ ಗುರಿ ಮಾಡಲಾಗಿದೆ. ಮೊದಲಿಗೆ ಅವರ ಆರಂಭದ 'ಮುಕ್ತಿ' ಕಾದಂಬರಿಯಿಂದಲೇ ಈ ಅಧ್ಯಾಯವನ್ನು ಪ್ರಾರಂಭಿಸಲಾಗುತ್ತಿದೆ.

೫.೧ ಮುಕ್ತಿ : ಮಾನಸಿಕ ಸಂಘರ್ಷ

'ಮುಕ್ತಿ' (೧೯೬೧) ದೇಸಾಯಿಯವರ ಪ್ರಥಮ ಕಾದಂಬರಿ. 'ಮುಕ್ತಿ'ಯು ಕನ್ನಡದ ಪ್ರಥಮ ನವ್ಯ ಕಾದಂಬರಿ ಎಂದೂ ಪರಿಗಣಿತವಾಗಿದೆ. 'ಮುಕ್ತಿ'ಯಲ್ಲಿಯೂ ಕೂಡ ನಾವು ಹಲವಾರು ಸಂಘರ್ಷಗಳನ್ನು ಗುರುತಿಸಬಹುದಾಗಿದೆ. ಮುಖ್ಯವಾಗಿ ಪುರುಷ-ಪುರುಷರ ನಡುವೆ ಸ್ತ್ರೀ-ಸ್ತ್ರೀಯರ ನಡುವೆ, ಪುರುಷ-ಸ್ತ್ರೀಯರ ನಡುವಿನ ಸಂಘರ್ಷಗಳನ್ನು , ಬದುಕಿನ ಅಸ್ತಿತ್ವದ ಹುಡುಕಾಟವನ್ನು ಗುರುತಿಸಬಹುದು.

'ಮುಕ್ತಿ'ಯ ನಾಯಕನಾದ ಗೌರೀಶನ ದಿನಚರಿಯ ರೂಪದಲ್ಲಿ ಕಥೆಯ ಪ್ರಾರಂಭವಾಗುತ್ತದೆ. ಭೂತಕಾಲದ ಭೂತದಿಂದ ಮುಕ್ತನಾಗುವ ಬಗ್ಗೆ ಆತನ ಆಲೋಚನೆ ಸಾಗುತ್ತಿರುತ್ತದೆ. ವಾಸ್ತವದಲ್ಲಿದ್ದುಕೊಂಡು ಭೂತ ಹಾಗೂ ಭವಿಷ್ಯದ ಬಗ್ಗೆ ಆತನ ಆಲೋಚನೆ ಸಾಗುತ್ತಿರುತ್ತದೆ. ಆಫ್ರಿಕಾದ ನೈರೋಬಿಗೆ ಕೆಲಸದ ಮೇಲೆ ತೆರಳಲು ಸಿದ್ಧವಾಗುತ್ತಿರುತ್ತಾನೆ. ಆದರೆ ಹಾಗೆ ನೈರೋಬಿಗೆ ತೆರಳುವ ಮೂಲಕ ಆತ ತನ್ನ ಗತ ಜೀವನದ ಜೊತೆಗಿನ ಸಂಪರ್ಕವನ್ನು ಹಾಗೂ ಎಲ್ಲಾ ಬಂಧನಗಳನ್ನು ಸಂಪೂರ್ಣವಾಗಿ ಕಡಿದುಕೊಳ್ಳುವುದರ ಬಗ್ಗೆ ಆಲೋಚಿಸುತ್ತಿರುತ್ತಾನೆ. ಅಲ್ಲದೇ "ಪರದೇಶದಲ್ಲಿ ಯಾರ ಬಂಧನಕ್ಕೂ ಒಳಗಾಗದೆ ಶುದ್ಧ ಅಪರಿಚಿತನಂತೆ ನಿರ್ವಿಕಾರವಾಗಿ ಬದುಕಲು ಹೋಗಬೇಕಾಗಿದೆ" (ಪು. ೨) ಎಂಬುದು ಅವನ ಅಭಿಪ್ರಾಯ. ಈ ಮೂಲಕ ನಾವು ಗೌರೀಶನ ಮನಸ್ಸಿನಲ್ಲಿ ನಡೆಯುತ್ತಿರುವ ಮಾನಸಿಕ ಸಂಘರ್ಷವನ್ನು ಗುರುತಿಸಬಹುದು.

ಗೌರೀಶ ಬಿಡುಗಡೆಯನ್ನು ಹೊಂದಲು ಬಯಸುತ್ತಿರುವ ಆತನ ಭೂತಕಾಲವನ್ನು ಪ್ರಭಾವಿಸಿದವರಲ್ಲಿ ಇಬ್ಬರು ವ್ಯಕ್ತಿಗಳು ಮುಖ್ಯರಾಗುತ್ತಾರೆ. ಅವರೇ ಶ್ರೀಕಾಂತ, ಕಾಮಿನಿಯರು. ಗೌರೀಶ ಬಿ.ಎಸ್ಸಿ. ಮಾಡಲೆಂದು ಸಿರ್ಸಿಯಿಂದ ಧಾರವಾಡಕ್ಕೆ ಬರುತ್ತಾನೆ. ಅಲ್ಲಿ ಬಿ.ಎ. ಮಾಡುತ್ತಿದ್ದ ಶ್ರೀಕಾಂತನ ಪರಿಚಯ ಸತ್ಯೇಂದ್ರನ ಮುಖಾಂತರ ಗೌರೀಶನಿಗೆ ಆಗುತ್ತದೆ. ಸತ್ಯೇಂದ್ರ ಗೌರೀಶನ ಊರಿನವನೇ ಆಗಿರುತ್ತಾನೆ. ಹೀಗೆ ಪರಿಚಿತನಾದ ಶ್ರೀಕಾಂತನ ಮೂಲಕ ಅವನ ತಂಗಿಯಾದ ಕಾಮಿನಿಯ ಪರಿಚಯವಾಗುತ್ತದೆ. ಈ ರೀತಿಯಾಗಿ ಪರಿಚಯವಾದ ಶ್ರೀಕಾಂತ, ಕಾಮಿನಿಯರು ಗೌರೀಶನ ಮೇಲೆ ತಮ್ಮದೇ ಆದ ವಿಶೇಷ ಪ್ರಭಾವವನ್ನು ಬೀರುತ್ತಾರೆ. ಬಹುಶಃ ಅವರಿಬ್ಬರು ಗೌರೀಶನ ಜೀವನದಲ್ಲಿ ಪ್ರವೇಶಿಸದಿದ್ದರೆ ಗೌರೀಶ ಗೌರೀಶನಾಗಿ ಉಳಿಯುತ್ತಿರಲಿಲ್ಲ. ಶ್ರೀಕಾಂತ ಮತ್ತು ಕಾಮಿನಿಯರು ಗೌರೀಶನ ಗತ ಜೀವನದ ಮಧ್ಯವರ್ತಿ ಬಿಂದುಗಳು, ಗತಜೀವನದ ಪ್ರಮುಖ ಭಾಗವನ್ನು ರೂಪಿಸಿದ ಕರ್ತಾರರು. (ಪು. ೭)

ಸತ್ಯೇಂದ್ರ ಗೌರೀಶನ ಊರಿನವನೇ ಆಗಿರುತ್ತಾನೆ. ಸರಳ ಜೀವಿಯಾದ ಆತ ಯಾವಾಗಲೂ ತಾನಾಯಿತು ತನ್ನ ಕೆಲಸವಾಯಿತು ಎಂಬಂತೆ ಇರುತ್ತಾನೆ. ಯಾವುದೇ ಮೋಹಕ್ಕೂ ಬಲಿ ಬೀಳದೆ ತನ್ನ ಕೆರಿಯರ್‌ನ್ನು ಸಾಧಿಸಿಕೊಂಡು ಎಂಜಿನಿಯರ್ ಆಗಿರುತ್ತಾನೆ. ಇಂತಹ ಸತ್ಯೇಂದ್ರ ಧಾರವಾಡದ ಕಾಲೇಜಿನಲ್ಲಿದ್ದಾಗ ಗೌರೀಶನಿಗೆ ಸತ್ಯೇಂದ್ರನ ಮುಖಾಂತರ ಶ್ರೀಕಾಂತನ ಪರಿಚಯವಾಗುತ್ತದೆ. ಮೊದಲ ನೋಟದಲ್ಲಿಯೇ ಗೌರೀಶ ಶ್ರೀಕಾಂತನ ವ್ಯಕ್ತಿತ್ವಕ್ಕೆ ಮಾರು ಹೋಗುತ್ತಾನೆ. ಶ್ರೀಕಾಂತನ ವ್ಯಕ್ತಿತ್ವದ ಮುಂದೆ ಸತ್ಯೇಂದ್ರನ ವ್ಯಕ್ತಿತ್ವ ಬಾಡುತ್ತದೆ, ನಿರ್ವರ್ಣವಾಗುತ್ತದೆ.

ಶ್ರೀಕಾಂತನ ವಿದ್ಯುಚ್ಛಕ್ತಿಯಂತಹ ಗೂಢವಾದ ಶಕ್ತಿ, ಏಕವಚನ ಪ್ರಯೋಗ ಗೌರೀಶನ ಮನಸ್ಸಿನಲ್ಲಿ ಆತ್ಮೀಯತೆಯ ಭಾವನೆಯನ್ನು ಉಂಟು ಮಾಡುತ್ತದೆ. ಕ್ರಮೇಣ ಇವರಿಬ್ಬರ ಸಂಬಂಧ ಒಂದು ಸಂಕೀರ್ಣ ಸಂಬಂಧವಾಗುತ್ತದೆ. ಶ್ರೀಕಾಂತನ ಪ್ರಕಾರ ಇವರಿಬ್ಬರ ಸ್ನೇಹ 'ಅಂಟದ ನಂಟು'. (ಪು. ೨೪) ಇವರ ಸ್ನೇಹ ಗೆಳೆತನವನ್ನು ಮೀರಿದ ಪ್ರೀತಿಯಾಗಿ ಪರಿಣಮಿಸುತ್ತದೆ. ಗೌರೀಶನ ತೀಕ್ಷ್ಣ ಬುದ್ಧಿಮತ್ತೆ, ಆಳವಾದ ತಿಳುವಳಿಕೆ, ಮತ್ತು ಆತ್ಮದ ಸುಸಂಸ್ಕೃತಿ ಶ್ರೀಕಾಂತನ ಮನಸ್ಸಿನ ಮೇಲೆ ತುಂಬಾ ಪ್ರಭಾವವನ್ನು ಬೀರುತ್ತವೆ. ಅಂತೆಯೇ ಶ್ರೀಕಾಂತನ ಪ್ರಭಾವಶಾಲಿ ವ್ಯಕ್ತಿತ್ವ ಗೌರೀಶನ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆದರೆ ಗೌರೀಶನದ್ದು ದುರ್ಬಲ ಸ್ವಭಾವ, ಸಂಕೋಚ ಪ್ರವೃತ್ತಿ. ಗೌರೀಶನಿಗೆ ಶ್ರೀಕಾಂತನ ಮಾತುಗಳು ಯಾವಾಗಲೂ ಉಜ್ವಲವಾಗಿ ತೋರುತ್ತಿದ್ದವು. ಅವನ ನುಡಿಗಳಲ್ಲಿಯ ಶಕ್ತಿಗೆ ಮಾರು ಹೋಗಿ ಪುಲಕಿತವಾಗುತ್ತಿದ್ದನು. ಗೌರೀಶನಿಗೆ ಇಂಟರ್‌ಸಾಯನ್ಸದಲ್ಲಿ ಚೆನ್ನಾಗಿ ಆಗದೇ ಸೆಕೆಂಡ್ ಕ್ಲಾಸಿನಲ್ಲಿ ಪಾಸಾಗುತ್ತಾನೆ. ಹೀಗಾಗಿ ಆತನಿಗೆ ಎಂಜಿನಿಯರಿಂಗ್‌ಗೆ ಅಡ್ಮಿಶನ್ ದೊರೆಯುವುದಿಲ್ಲ. ಆದರೆ ಇದರಿಂದ ಗೌರೀಶನಿಗೇನೂ ನಿರಾಶೆಯಾಗಲಿಲ್ಲ. ಏಕೆಂದರೆ ಶ್ರೀಕಾಂತನ ಸಹವಾಸದಲ್ಲಿ ಬಿ.ಎಸ್ಸಿ. ಮಾಡಬಹುದೆಂಬ ಸಮಾಧಾನದ ಭಾವನೆಯಿರುತ್ತದೆ.

ಮುಂದೆ ಇವರಿಬ್ಬರಲ್ಲಿಯೂ ಆತ್ಮೀಯ ಭಾವನೆ ಮೂಡಿದ ನಂತರ ಶ್ರೀಕಾಂತನ ಬಿ.ಎ. ಅಭ್ಯಾಸ ಮಾಡಿಸುವ ಭಾರವನ್ನು ಗೌರೀಶನೇ ಹೊರುತ್ತಾನೆ. ರಾತ್ರಿ ೧೨ ಗಂಟೆಯವರೆಗೆ ಅವನನ್ನು ಎಚ್ಚರವಾಗಿರುವಂತೆ ನೋಡಿಕೊಳ್ಳುವುದೂ, ಮುಂಜಾನೆ ಬೇಗ ಎಬ್ಬಿಸುವುದನ್ನೂ ಮಾಡುತ್ತಿದ್ದನು. ಇದರಿಂದಾಗಿ ಶ್ರೀಕಾಂತನಿಗೆ ಬಿ.ಎ. ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸು ದೊರೆಯುವುದರೊಂದಿಗೆ ಯೂನಿವರ್ಸಿಟಿಯ ಒಂದೆರಡು ಬಹುಮಾನಗಳೂ ದೊರೆಯುತ್ತವೆ. ಶ್ರೀಕಾಂತ ಅದರ ಶ್ರೇಯಸ್ಸೆಲ್ಲವನ್ನೂ ಗೌರೀಶನಿಗೇ ಅರ್ಪಿಸುತ್ತಾನೆ.

ಈ ರೀತಿಯಾಗಿ ಇವರಿಬ್ಬರ ಸ್ನೇಹ ಸಾಗುತ್ತಿರುವಾಗಲೇ ಶ್ರೀಕಾಂತನಿಗೆ ಟಿ.ಬಿ.ಕಾಯಿಲೆ ಬಂದಿರುವ ವಿಚಾರ ತಿಳಿಯುತ್ತದೆ. ಗೌರೀಶನಿಗೆ ವಿಷಯ ಗೊತ್ತಾದ ನಂತರ ಅವನು ಶ್ರೀಕಾಂತನ ಆರೈಕೆಗೆಂದು ಉಳಿಯುತ್ತಾನೆ. ಆದರೆ ಕ್ರಮೇಣ ಗೌರೀಶ ಮತ್ತು ಶ್ರೀಕಾಂತರ ನಡುವೆ ಮಾತುಕತೆಗಳು ಕಡಿಮೆಯಾಗತೊಡಗುತ್ತವೆ. ಗೌರೀಶನ ಮಾತುಗಳಿಗೆ ಶ್ರೀಕಾಂತ ಏನನ್ನೋ ಆಲೋಚಿಸುವವನಂತೆ ಮಾತನಾಡತೊಡಗಿದಾಗ ಗೌರೀಶನು ಮನದಲ್ಲೇ ಚಿಂತಿಸತೊಡಗುತ್ತಾನೆ. ಪ್ರಾರಂಭದಲ್ಲಿ ಗೌರೀಶನ ಎಲ್ಲಾ ವಿಚಾರಗಳಿಗೂ ಸಲಹೆ ನೀಡುತ್ತಿದ್ದ ಶ್ರೀಕಾಂತ ಕೊನೆಯ ದಿನಗಳಲ್ಲಿ ಎಲ್ಲವನ್ನೂ ಗೌರೀಶನ ಇಷ್ಟಕ್ಕೆ ಬಿಡುತ್ತಾನೆ. ತನ್ನ ತಂಗಿ ಕಾಮಿನಿಯನ್ನು ಮದುವೆಯಾಗುವುದಾಗಿ ಹೇಳಿದಾಗಲೂ ಕೂಡ "ಕಾಮಿನಿ ನಿನಗೆ ತಕ್ಕ ಹೆಂಡತಿಯಲ್ಲ, ಆಲೋಚಿಸಿ ನೋಡು" (ಪು. ೧೨೨) ಎಂದು ಹೇಳುತ್ತಾನೆ.

ಶ್ರೀಕಾಂತ ಕಾಯಿಲೆಯಿಂದ ಗುಣಮುಖನಾದ ನಂತರ ಅವನನ್ನು ವಾನಲೆಸ್‌ವಾಡಿಯಿಂದ ಧಾರವಾಡಕ್ಕೆ ಗೌರೀಶ ಕರೆತರುತ್ತಿರುತ್ತಾನೆ. ಆಗ ಶ್ರೀಕಾಂತನ ಪ್ರೇಮ ಸಹಾನುಭೂತಿಗಳಲ್ಲಿ ಏನೋ ವ್ಯತ್ಯಾಸವಾಗಿರುವುದು ಗೌರೀಶನ ಗಮನಕ್ಕೆ ಬರುತ್ತದೆ. ಅಲ್ಲದೇ ಕಾಮಿನಿ ಕಮ್ಯೂನಿಸ್ಟ್ ಪಾರ್ಟಿಯನ್ನು

ಸೇರಿದ್ದರ ಬಗ್ಗೆ ಗೌರೀಶ ವಿಷಯ ಪ್ರಸ್ತಾಪಿಸಿದಾಗ "ತನಗೆ ಬೇಕಾದಂತೆ ಮಾಡಲು ಕಾಮಿನಿ ಸ್ವತಂತ್ರಳಿದ್ದಾಳೆ" (ಪು. ೧೬೭) ಎಂದು ಹೇಳುತ್ತಾನೆ. ಶ್ರೀಕಾಂತನಿಂದ ಈ ಉತ್ತರವನ್ನು ನಿರೀಕ್ಷಿಸಿರದ ಗೌರೀಶನಿಗೆ ಆಘಾತವಾಗುತ್ತದೆ.

ಯಾಕೋ ಏನೋ ಬೇರೆಯವರ ಸಮಸ್ಯೆಗಳನ್ನು ತಿಳಿದುಕೊಳ್ಳುವ ಶಕ್ತಿಯೇ ಕಡಿಮೆಯಾಗುತ್ತಿದೆ. ಮೃತ್ಯುವಿನ ಸಾಮಿಪ್ಯ ಎಲ್ಲ ಸಮಸ್ಯೆಗಳನ್ನು ತೃಣೀಕರಿಸುವುದೋ ಏನೋ. "ನಿಮ್ಮ ಸುಖ ದುಃಖದ ಸಮಸ್ಯೆಗಳು ನಿಮ್ಮ ಜೀವಂತ ಜೀವನೋತ್ಸಾಹದ ಪ್ರತೀಕಗಳು. ನಿನಗೆ ಬೇಕಾದ್ದನ್ನು ನೀನು ಮಾಡಪ್ಪ, ಗೌರೀಶ... ಎಲ್ಲದಕ್ಕೂ ನನ್ನ ಆಶೀರ್ವಾದ" ಎಂದು ಶ್ರೀಕಾಂತ ಹೇಳಿದ ಮಾತುಗಳನ್ನು ಕೇಳಿದ ಗೌರೀಶನಿಗೆ ತನ್ನ ಮತ್ತು ಶ್ರೀಕಾಂತನ ನಡುವೆ ಗಾಜಿನ ಗೋಡೆಯೊಂದು ಮೂರ್ತಗೊಳ್ಳುತ್ತಿದೆಯೆಂದು ಅನಿಸತೊಡಗಿತು. (ಪು. ೧೬೮) ಅಲ್ಲದೆ ಗೌರೀಶ ಮುಂಬೈಗೆ ತೆರಳುವ ವಿಚಾರಕ್ಕೆ ಸಲಹೆ ನೀಡುವ ಸಮಯದಲ್ಲಿ ಶ್ರೀಕಾಂತನು ಗೌರೀಶನನ್ನು ಕುರಿತು "ಸತ್ಯೇಂದ್ರನಂಥ ಮಾರ್ಗದರ್ಶಕರು ನಿನಗೆ ಬೇಕು. ನನ್ನಂತ ತಲೆಯನ್ನು ತಿಪ್ಪಿ ಮಾಡುವ ತಲೆ ತಿರುಕರ ಸಂಗತಿಯಿಂದೇನು ಪ್ರಯೋಜನ" (ಪು. ೧೭೨) ಎಂದು ಹೇಳುವ ಮಾತುಗಳು ಶ್ರೀಕಾಂತ ಗೌರೀಶನಿಂದ ಮಾನಸಿಕವಾಗಿ ದೂರವಾಗುವ ಪ್ರಯತ್ನ ನಡೆಸಿದಂತೆ ಕಂಡು ಬರುತ್ತದೆ. ಆದರೂ ಕೂಡ ಗೌರೀಶ ಶ್ರೀಕಾಂತನಿಂದ, ಆತನ ಪ್ರಭಾವದಿಂದ ದೂರವಾಗುವುದು ಸಾಧ್ಯವಾಗುವುದಿಲ್ಲ.

ಈ ರೀತಿಯಾಗಿ ಪ್ರಾರಂಭದ ಹಂತದಲ್ಲಿ ಸ್ನೇಹಿತರಾಗಿದ್ದಂತಹ ಗೌರೀಶ ಮತ್ತು ಶ್ರೀಕಾಂತನ ನಡುವೆ ಅಂತಿಮ ಹಂತದಲ್ಲಿ ತಾತ್ವಿಕ ಸಂಘರ್ಷ ಪ್ರಾರಂಭವಾಗುತ್ತದೆ. ಆದರೂ ಕೂಡ ಗೌರೀಶನಿಗೆ ಶ್ರೀಕಾಂತನಿಂದ ದೂರವಿರುವುದು ಸಾಧ್ಯವಾಗುವುದಿಲ್ಲ. ಶ್ರೀಕಾಂತ ಆತ್ಮಹತ್ಯೆ ಮಾಡಿಕೊಂಡಾಗ ಗೌರೀಶ ಹೇಳುವ "ಅಯ್ಯೋ ಶ್ರೀಕಾಂತ.... ನಾನೂ ಸತ್ತೆ" (ಪು. ೨೧೧) ಎಂಬ ಮಾತುಗಳಿಂದ ನಾವು ಇದನ್ನು ಗುರುತಿಸಬಹುದು.

ಶ್ರೀಕಾಂತನ ತಂಗಿಯಾದ ಕಾಮಿನಿ ಗೌರೀಶನ ಮೇಲೆ ಪ್ರಭಾವ ಬೀರಿದವರಲ್ಲಿ ಪ್ರಮುಖಳು. ಗೌರೀಶ ಕಾಮಿನಿಯನ್ನು ಪ್ರಥಮ ಬಾರಿಗೆ ಭೇಟಿಯಾದಾಗ ಅವಳಿನ್ನೂ ಹಾಯಸ್ಕೂಲಿಗೆ ಹೋಗುತ್ತಿದ್ದ ಹುಡುಗಿ. ಗೌರೀಶನಿಗೆ ಅವಳಿನ್ನೂ ಓರ್ವ ಪ್ರತ್ಯೇಕ ವ್ಯಕ್ತಿಯಾಗಿ ಪರಿಣಮಿಸಿರಲಿಲ್ಲ. ಅವಳು ಶ್ರೀಕಾಂತನ ತಂಗಿ ಮಾತ್ರ. ಇವನಿಗೂ ತಂಗಿಯಂತೆ. ಆದರೆ ಗೌರೀಶ ಜ್ಯೂನಿಯರ ಬಿ.ಎಸ್ಸಿಯಲ್ಲಿ ಇದ್ದಾಗ ಕಾಮಿನಿಯು ಆತನ ಕ್ಷಿತಿಜದಲ್ಲಿ ಸ್ಪಷ್ಟವಾಗಿ ಮೂಡುತ್ತಾಳೆ. ಅವಳ ಎಸ್.ಎಸ್.ಸಿ.ಯ ಅಭ್ಯಾಸದಲ್ಲಿ ಗೌರೀಶ ಸಾಕಷ್ಟು ಸಹಾಯ ಮಾಡುವ ಮೂಲಕ ಅವಳು ಕಾಲೇಜಿಗೆ ಸೇರಲು ಕಾರಣವಾಗುತ್ತಾನೆ. ಈ ಹಂತದಲ್ಲಿಯೇ ಗೌರೀಶನಿಗೆ ಕಾಮಿನಿಯ ಬಗ್ಗೆ ಪ್ರೀತಿಯ ಭಾವನೆ ಮೂಡತೊಡಗುತ್ತದೆ. ಹೀಗಾಗಿಯೇ ಶ್ರೀಕಾಂತನ ಸ್ನೇಹಿತರಾದ ಗುರುನಾಥ, ಗೋಪಾಲರು ಕಾಮಿನಿಯ ಬಗ್ಗೆ ಮಾತನಾಡಿದಾಗ ಕೋಪಗೊಳ್ಳುತ್ತಾನೆ. ಆದರೆ ಶ್ರೀಕಾಂತನ ಜೊತೆಗಿನ ಸ್ನೇಹದ ಕಾರಣದಿಂದಾಗಿ ಗೌರೀಶ ಪ್ರಾರಂಭದಲ್ಲಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿರುವುದಿಲ್ಲ. ಇಲ್ಲಿಯೂ ಕೂಡ ನಾವು ಗೌರೀಶನ ದುರ್ಬಲತೆಯನ್ನು ಗುರುತಿಸಬಹುದಾಗಿದೆ. ಗೌರೀಶನ ಪ್ರೇಮದ

ಪ್ರಾರಂಭದ ಹಂತದಲ್ಲಿ ಆತನ ಮನಸ್ಸು ಸದಾ ಕಾಮಿನಿಗಾಗಿ ಹಂಬಲಿಸುತ್ತಿರುತ್ತದೆ. ಜೋಗ ಜಲಪಾತದ ವೀಕ್ಷಣೆಗೆಂದು ಹೋದಾಗ ಆಕಸ್ಮಿಕವಾಗಿ ಕಾಮಿನಿಗೆ ಚುಂಬನವನ್ನು ನೀಡುತ್ತಾನೆ. ಹೀಗೆ ನೀಡಿದ ಚುಂಬನದ ಬಗ್ಗೆ ಗೌರೀಶ "ನನ್ನ ಜೀವನದಲ್ಲಿಯೇ ಮೊದಲ ಸಲ ನಾನು ಸ್ವತಃ ಸ್ವಂತ ಶಕ್ತಿಯ ಮೇಲೆ ಒಂದು 'ಕಾರ್ಯ' ಮಾಡಿದೆ" (ಪು. ೪೯) ಎಂದು ಅಭಿಪ್ರಾಯಪಡುತ್ತಾನೆ.

ಕಾಮಿನಿಯನ್ನು ಪ್ರೀತಿಸತೊಡಗಿದ ಮೇಲೆ ಗೌರೀಶನ ಮನದಲ್ಲಿ ದ್ವಂದ್ವಗಳು ಮೂಡುತ್ತವೆ. ತನ್ನ ಮತ್ತು ಕಾಮಿನಿಯ ಪ್ರೇಮದ ವಿಚಾರವನ್ನು ಶ್ರೀಕಾಂತನ ಗಮನಕ್ಕೆ ತರುವುದರ ಬಗ್ಗೆ, ತನ್ನ ಮತ್ತು ಕಾಮಿನಿಯ ವಿಚಾರ ಶ್ರೀಕಾಂತನಿಗೆ ತಿಳಿದರೆ ಅವನು ತನ್ನ ಬಗ್ಗೆ ತಪ್ಪು ತಿಳಿಯಬಹುದೆಂಬ ಅಳುಕು ಗೌರೀಶನನ್ನು ಕಾಡುತ್ತದೆ. "ಮಿತ್ರನ ತಂಗಿಯ ಮೇಲೆ ಮೋಹ ಮಾಡಿದ್ದು ಮಿತ್ರದ್ರೋಹವಲ್ಲ. ಆದರೆ ಈ ಸಂಗತಿಯನ್ನು ಆತನಿಂದ ಬಚ್ಚಿಟ್ಟದ್ದು ಮಿತ್ರದ್ರೋಹ" (ಪು. ೫೦) ಎಂದು ಆಲೋಚಿಸುವಲ್ಲಿ ಗೌರೀಶನ ದ್ವಂದ್ವವನ್ನು ಗುರುತಿಸಬಹುದು.

ಗೌರೀಶ ಕಾಮಿನಿಯನ್ನು ಮನದಲ್ಲೇ ಪ್ರೀತಿಸತೊಡಗಿದ ನಂತರ ಅವಳ ಬಗ್ಗೆ ವಿಶೇಷ ಆಸ್ಥೆ ವಹಿಸುತ್ತಾನೆ. ಆತನಲ್ಲಿ ಒಂದು ರೀತಿಯ ಸ್ವಾರ್ಥ ಮನೋಭಾವನೆ ಬೆಳೆಯುತ್ತದೆ. ಹೀಗಾಗಿಯೇ ಕಾಮಿನಿ ಇತರರೊಂದಿಗೆ ಬೆರೆಯುವುದು ಅವನಿಗೆ ಸಹ್ಯವಾಗುವುದಿಲ್ಲ. ಕಾಮಿನಿ ಅವಳ ಶಾಲೆಯ ಡ್ರಾಯಿಂಗ್ ಮಾಸ್ತರರೊಂದಿಗೆ ಮಾತನಾಡುತ್ತಾ ನಿಂತ ವಿಚಾರವನ್ನು ಪ್ರಸ್ತಾಪಿಸುವ ರೀತಿ, ಟ್ಯೂಶನ್ನಿಗೆ ರೊಕ್ಕ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದಾಗ ಗೌರೀಶ "ರೊಕ್ಕ ತೆಗೆದುಕೊಳ್ಳದೆ ಮತ್ತೇನನ್ನು ತೆಗೆದುಕೊಳ್ಳುವನಂತೆ"? (ಪು. ೬೦) ಎಂದು ಕೇಳುವಲ್ಲಿನ ವ್ಯಂಗ್ಯದ ಮೂಲಕ ಇದನ್ನು ಗುರುತಿಸಬಹುದು.

ಕಾಲೇಜಿನ ಹಂತಕ್ಕೆ ಬಂದಾಗ ಕಾಮಿನಿಯು ಎಲ್ಲರೊಂದಿಗೂ ಸಹಜವಾಗಿ ಬೆರೆಯುತ್ತಿರುತ್ತಾಳೆ. ಆದರೆ ಇದನ್ನು ಗೌರೀಶನ ಮನಸ್ಸು ಒಪ್ಪುವುದಿಲ್ಲ. ಏಕೆಂದರೆ ತನ್ನ ಮತ್ತು ಕಾಮಿನಿಯ ನಡುವಿನ ಆದರ್ಶ ಪ್ರೇಮವನ್ನು ದೈಹಿಕ ಮೋಹದಿಂದ ಸ್ವತಂತ್ರವಾಗಿಡಬೇಕು ಎಂದು ಬಯಸುತ್ತಿರುತ್ತಾನೆ. ಅಂತೆಯೇ ಕಾಮಿನಿಯ ಬುದ್ಧಿಯ ಪಾತಳಿಯನ್ನು ಏರಿಸಬೇಕು. ತತ್ವಜ್ಞಾನ, ಕಾವ್ಯ – ವಿಜ್ಞಾನ – ಸಮಾಜಸೇವೆ – ಸಾಮಾಜಿಕ ಕ್ರಾಂತಿ ಮುಂತಾದ ವಿಷಯಗಳಲ್ಲಿ ಅವಳ ಆಸ್ಥೆಯನ್ನು ಹುಟ್ಟಿಸಬೇಕು, ಬೆಳೆಸಬೇಕು ಎಂಬ ಆಲೋಚನೆ ಅವನದ್ದಾಗಿರುತ್ತದೆ. "ಸುಂದರವಾದ ಅನಂತವಾದ ದಿವ್ಯ ಪ್ರೇಮದ ಆದರ್ಶ ನಕ್ಷತ್ರದಂತೆ ನನ್ನ ಹೃದಯದಲ್ಲಿ ಯಾವಾಗಲೂ ಮಿಣುಕುತ್ತಿತ್ತು. ಕಾಮಿನಿಯನ್ನು ಆ ನಕ್ಷತ್ರದ ಬೆಳಕಿನಲ್ಲಿ ನೋಡಲು ನಾನು ಸದೈವ ಹಂಬಲಿಸುತ್ತಿದೆ... ಹಗಲಿನ ಹಳೆ ಬೆಳಕು ನನಗೆ ಸಹಿಸದು – ಕಾಮಿನಿಯ ವಾಸ್ತವ ರೂಪು ನನಗೆ ನೋವನ್ನುಂಟು ಮಾಡುತ್ತಿತ್ತು... ಆದರೂ" (ಪು. ೯೧) ಎಂದು ಹೇಳುವಲ್ಲಿ ಗೌರೀಶನ ಕಲ್ಪನೆಯ ಕಾಮಿನಿ 'ದಿವ್ಯ ಪ್ರೇಮದ ಆದರ್ಶ ನಕ್ಷತ್ರ'. ಆದರೆ ವಾಸ್ತವವಾಗಿ 'ಕೆಟ್ಟ ಹುಡುಗಿ'. ಏಕೆಂದರೆ ಕಾಮಿನಿಯ ಸ್ವೇಚ್ಛಾಚಾರದ ವರ್ತನೆ ಗೌರೀಶನಿಗೆ ಒಪ್ಪಿತವಾಗುವುದಿಲ್ಲ. ಅವಳು ತನ್ನ ಕಾಲೇಜಿನ ಹುಡುಗರೊಂದಿಗೆ ಬೆರೆಯುತ್ತಿದ್ದ ರೀತಿಯ ಬಗ್ಗೆಯೂ ಗೌರೀಶನಿಗೆ ಸಂಶಯವಿರುತ್ತದೆ. ಹೀಗಾಗಿಯೇ ಆತ ತನ್ನ ತರಗತಿಗಳನ್ನು ತಪ್ಪಿಸಿ ಕಾಮಿನಿಯ ಬಗ್ಗೆ ತಿಳಿಯಲು ಪ್ರಯತ್ನಿಸುತ್ತಾನೆ. ಅಲ್ಲದೆ

ಮುಂದೆ ಕಾಮಿನಿ ಕಾಮ್ರೇಡ್ ಆಚಾರ್ಯರೊಂದಿಗಿನ ಸಂಬಂಧ ಎಲ್ಲೆ ಮೀರಿ ಹೋಗಿದೆಯೆಂದು ತಿಳಿದಾಗ ನರಕ ಅನುಭವವನ್ನು ಅನುಭವಿಸುವವನಂತೆ ಯಾತನೆ ಪಡುತ್ತಾನೆ. ಆದರೆ ಇದರ ಬಗ್ಗೆ ಕಾಮಿನಿ ನೀಡಿದ ವಿವರಣೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಯೂ ಅವನಲ್ಲಿರುವುದಿಲ್ಲ.

ಅಂದಿನಿಂದ ಕಾಮಿನಿಯ ಬಗೆಗಿನ ತನ್ನ ಭಾವನೆಗಳನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಧರಿಸುತ್ತಾನೆ "ಕಾಮಿನೀ– ಕೇಂದ್ರವನ್ನು ತನ್ನ ಹೃದಯದೊಳಗಿಂದ ಬೇರು ಸಹಿತ ಕಿತ್ತೊಗೆದು ನಿರ್ನಾಮ ಮಾಡಬೇಕು. ಇನ್ನು ಕಾಮಿನಿ ತನ್ನ ಹೃದಯದ ರಾಣಿಯಲ್ಲ... ಬರೇ ಮಿತ್ರನ ತಂಗಿ ಮಾತ್ರ...". ಅಲ್ಲದೇ ಶ್ರೀಕಾಂತ ಟಿ.ಬಿ.ಯಿಂದಾಗಿ ತನ್ನ ಒಂದು ಪುಪ್ಪುಸವನ್ನೇ ತೆಗೆಯಲು ಆಪರೇಷನ್ ಮಾಡುವವರಿದ್ದಾರೆ ಎಂದು ಬರೆದ ಪತ್ರವನ್ನು ಓದುತ್ತಾ ಗೌರೀಶ ನೀಡುವ "ನನ್ನ ಹೃದಯದ ಒಂದು ಪುಪ್ಪುಸವೂ ಚಪ್ಪಟೆಯಾಗಿತ್ತು, ತೂತು ಬಿದ್ದ ಬಲೂನಿನಂತೆ" (ಪು. ೧೫೨) ಎಂದು ಹೇಳುವಲ್ಲಿ ಕಾಮಿನಿಯ ಬಗೆಗಿನ ಅವನ ಪ್ರೀತಿಯ ಭಾವನೆಗಳು ಬದಲಾಗುತ್ತಾ ಹೋಗುವುದನ್ನು ಗುರುತಿಸಬಹುದು.

ಅಲ್ಲದೇ ಗೌರೀಶ ಕಾಮಿನಿಯ ಎಲ್ಲಾ ವರ್ತನೆಗಳಲ್ಲಿಯೂ ತನ್ನ ಸಂಶಯದಿಂದಾಗಿ ತಪ್ಪುಗಳನ್ನೇ ಹುಡುಕುತ್ತಿರುತ್ತಾನೆ. ಕಾಮಿನಿ ಗಾಂಗಲರ ನಡುವಿನ ಸಂಬಂಧದಿಂದಾಗಿ ಕಾಮಿನಿಗೆ ಬಸಿರು ನಿಂತು ಆಪರೇಷನ್ ಮಾಡಿಸಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಕಾಮಿನಿಯ ಈ ಎಲ್ಲಾ ಪರಿಸ್ಥಿತಿಗೆ ತಾನೂ ಕೂಡ ಕಾರಣವಾಗಿರಬಹುದು ಎಂಬ ಕಲ್ಪನೆ ಗೌರೀಶನಿಗೆ ಬರುವುದೇ ಇಲ್ಲ. ಆದರೆ "ಗೌರೀಶ, ನಿನ್ನ ಪ್ರೇಮದಿಂದಲೇ ಎಲ್ಲ ಶುರುವಾಯಿತು. ನಡುವೆಯೇ ನಡು ನೀರಿನಲ್ಲಿಯೇ ನೀನು ನನ್ನನ್ನು ಬಿಟ್ಟು ಬಿಟ್ವೆ. ನಾನು ನಿನ್ನನ್ನು ಲಗ್ನವಾಗಲು ಸಿದ್ಧಳಾದಾಗ ಕೂಡ ನೀನು ಆಸೆ ತೋರಿಸಿ ಹಿಂಜರಿದೆ, ಕಾಲ್ತೆಗೆದೆ. ನಾನು ಮಾತ್ರ ನಡು ನೀರಿನಲ್ಲಿಯೆ. ನನ್ನೆಡೆಗೆ ಚಾಚಿದ ಕೈಗಳೆಲ್ಲ ಹೊಲಸು ಕೈಗಳಾದವು... ಸ್ವಾರ್ಥಿ, ಪಿಶಾಚಿ, ಘಾತಕಿ... ತಿರುಗಣಿ... ತಿರುಗಣಿ ಮಡುವು, ಯಾಕೆ ಸಾಯಲಿಲ್ಲವೋ ನಾನು? ಗೌರೀಶ, ನನ್ನನ್ನು ಉಳಿಸು, ಗೌರೀಶ..." (ಪು. ೨೩೭) ಎಂದು ಕಾಮಿನಿಯು ಗೌರೀಶನಿಗೆ ಹೇಳುವ ಮಾತುಗಳಲ್ಲಿ ನಾವು ಇದನ್ನು ಗುರುತಿಸಬಹುದು. ಗೌರೀಶನ ದುರ್ಬಲ ವ್ಯಕ್ತಿತ್ವವೇ ಕಾಮಿನಿಯ ಅಧಃಪತನಕ್ಕೆ ಕಾರಣವಾಯಿತು ಎಂದು ಹೇಳಬಹುದು. ಏಕೆಂದರೆ, ಕಾಮಿನಿಯು ತನ್ನ ಪ್ರೀತಿಯನ್ನು ನಿವೇದಿಸಿಕೊಂಡಾಗಲೂ ಕೂಡ ಗೌರೀಶ ಅದನ್ನು ತಿರಸ್ಕರಿಸುತ್ತಾನೆ. ತನ್ನ ಸೇಡಿನ ಭಾವನೆಯಿಂದಾಗಿಯೇ ಕಾಮಿನಿ ತನ್ನನ್ನು ಹುಡುಕಿಕೊಂಡು ಬಂದಾಗಲೂ ಅವಳನ್ನು ತಿರಸ್ಕರಿಸುತ್ತಾನೆ.

ಕಾಮಿನಿಗೆ ತನ್ನನ್ನು ಆಳಬಲ್ಲ, ತನ್ನ ಸ್ವೈರ ವೃತ್ತಿಯನ್ನು ನಿಯಂತ್ರಿಸಬಲ್ಲ ವ್ಯಕ್ತಿ ಬೇಕಾಗಿರುತ್ತದೆ. "ಗೌರೀಶ, ಈಗ ನಿನ್ನಲ್ಲಿ ಸಾಮರ್ಥ್ಯ ಬಂದಿದೆ. ನೀನು ಹೋದಲ್ಲಿ ಬರುವೆ, ನೀನು ಹೇಳಿದ್ದು ಮಾಡುವೆ.... ನಿನ್ನ ದಾಸಿಯಾಗಿ, ನನ್ನನ್ನು ಉಳಿಸು–ಶ್ರೀಕಾಂತನ ಸಲುವಾಗಿಯಾದರೂ..." (ಪು. ೨೩೮) ಎಂದು ಕೇಳಿಕೊಂಡರೂ ಕೂಡ ಗೌರೀಶನು ತನ್ನ ವಸ್ತುನಿಷ್ಠತೆಯನ್ನು ಕಳೆದುಕೊಳ್ಳುತ್ತಾನೆ. ಕಾಮಿನಿಯ ಬಗೆಗಿನ ಸತ್ಯ ಸಂಗತಿಯನ್ನು ಅರಿತುಕೊಳ್ಳುವಲ್ಲಿ ವಿಫಲನಾಗುತ್ತಾನೆ ಎಂದೇ ಹೇಳಬಹುದು.

ಮುಕ್ತಿಯಲ್ಲಿ ಬರುವ ಮತ್ತೊಬ್ಬ ಪ್ರಮುಖ ವ್ಯಕ್ತಿ 'ಡಾಲಿ'. ಗೌರೀಶನ ಜೀವನದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾದ ವ್ಯಕ್ತಿ. ಗೌರೀಶನಿಗೆ ಡಾಲಿಯ ಪರಿಚಯವಾದದ್ದು ಮುಂಬಯಿಯಲ್ಲಿ. ಎಂ.ಎಸ್ಸಿ. ಪರೀಕ್ಷೆಯಲ್ಲಿ ಥರ್ಡ್‌ಕ್ಲಾಸ್ ಬಂದ ನಂತರ ಗೌರೀಶನಿಗೆ ಎಲ್ಲಿಯಾದರೂ ನೌಕರಿ ಹಿಡಿಯುವುದು ಅವಶ್ಯವಾಗುತ್ತದೆ. ಹೀಗಾಗಿ ಸತ್ಯೇಂದ್ರನ ಸಹಾಯದಿಂದ ಮುಂಬೈನ 'ಮಹೇಂದ್ರ ಮತ್ತು ಕಂಪನಿ'ಯಲ್ಲಿ ಸೇಲ್ಸ್ ಆರ್ಗನೈಜರ್ ನೌಕರಿ ದೊರೆತು ಗೌರೀಶ ಮುಂಬಯಿಗೆ ಬರುತ್ತಾನೆ. ಅದೇ ಆಫೀಸಿನಲ್ಲಿ ಟಾಯ್‌ಪಿಸ್ಟ್ ಮತ್ತು ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ಡಾಲಿಯ ಸಹವಾಸ ಅವನಿಗೆ ಅನಾಯಾಸವಾಗಿಯೇ ದೊರೆಯುತ್ತದೆ. ಇವರಿಬ್ಬರ ಪರಿಚಯ ಬೆಳೆದು ಲೈಂಗಿಕ ಸಂಬಂಧದಲ್ಲಿ ಪರಿಣಮಿಸುತ್ತದೆ. "ಇಂಥ ವ್ಯಕ್ತಿಯನ್ನು ಮುಂಬಯಿಯಲ್ಲಲ್ಲದೆ ಮತ್ತೆಲ್ಲಿ ಸಂಧಿಸುವುದು ಶಕ್ಯ?... ಇಂಥ ಸಂಬಂಧ ಮುಂಬಯಿಯಲ್ಲಲ್ಲದೆ ಮತ್ತೆಲ್ಲಿಯೂ ಇಷ್ಟು ಸರಾಗವಾಗಿಯೂ ನಿರಾಗಸವಾಗಿಯೂ, ತಿಳಿಯಾಗಿಯೂ ಸಾಗುವುದು ಶಕ್ಯವಿಲ್ಲ.... ಸಣ್ಣ ಊರುಗಳಲ್ಲಿ ನಮ್ಮ ಸಂಬಂಧದ ವಿಷಯ ಜನರ ಹರಕು ಬಾಯಲ್ಲಿ ಸಿಕ್ಕು ಹೊಲಸಾಗಬಹುದಿತ್ತು..." (ಪು. ೨೮) ಎಂಬ ಗೌರೀಶನ ಮಾತುಗಳಲ್ಲಿ ಇದನ್ನು ನಾವು ಗ್ರಹಿಸಬಹುದು.

ಡಾಲಿಯು ಗೌರೀಶ ಆಫೀಸಿನಲ್ಲಿಯೇ ಕೆಲಸ ಮಾಡುತ್ತಿದ್ದುದರಿಂದ ಇವರಿಬ್ಬರ ನಡುವೆ ಸಹಜವಾಗಿಯೇ ಪರಿಚಯವುಂಟಾಗುತ್ತದೆ. ಯಾವಾಗಲೂ ನಗುಮುಖ ಅವಳ ವೈಶಿಷ್ಟ್ಯವಾಗಿರುತ್ತದೆ. ಆದರೆ ಅವಳಲ್ಲಿ ಸೌಂದರ್ಯ ಕಡಿಮೆಯೇ. ಆದರೆ ಅವಳ ಉಕ್ಕುವ ಉತ್ಸಾಹ ಹಾಗೂ ವಿನೋದೀ ವೃತ್ತಿಯ ಮೂಲಕ ಅವಳಿಗೆ ಸಾಕಷ್ಟು ಗೆಳೆಯ, ಗೆಳತಿಯರಿರುತ್ತಾರೆ.

ಮುಂಬಯಿಗೆ ಬಂದ ಹೊಸತರಲ್ಲಿ ಗೌರೀಶನಿಗೆ "ತನ್ನನ್ನು ತಾನು ಮನಬಂದಂತೆ ಹಳಿದುಕೊಳ್ಳುವುದು ಅಭ್ಯಾಸವಾಗಿರುತ್ತದೆ. ತಾನು ನಿರುಪಯೋಗಿ, ಹೇಡಿ, ಕೈಲಾಗದವ, ಸ್ವಂತ ವಿಚಾರವಿಲ್ಲದವ, ತನ್ನ ಶಕ್ತಿಯ ಮೇಲೆ ಕಾಲೂರಿ ನಿಲ್ಲುವ ಶಕ್ತಿಯಿಲ್ಲದವ" ಎಂಬ ವಿಚಾರಗಳು ಆತನ ಮೆದುಳನ್ನು ಸತತ ಮುತ್ತುತ್ತಿರುತ್ತವೆ. ಅಲ್ಲದೇ ಪರೀಕ್ಷೆಯಲ್ಲಿ ಮೂರನೇ ವರ್ಗ ಬಂದಿದ್ದನ್ನು ಕೂಡ ಆತ ತನ್ನ ಮನೋಶಕ್ತಿಯ ಅವನತಿಯ ಪ್ರತೀಕವೆಂದೇ ಭಾವಿಸಿರುತ್ತಾನೆ. ಶ್ರೀಕಾಂತನ ಆಸರೆಯೂ ತಪ್ಪಿರುತ್ತದೆ. ಎಷ್ಟೋ ಸಲ ಆತ್ಮಹತ್ಯೆಯ ವಿಚಾರವನ್ನೂ ಮಾಡುತ್ತಿರುತ್ತಾನೆ. ಅಲ್ಲದೆ ಆತನಲ್ಲಿ ಎರಡು ವಿರುದ್ಧ ಭಾವನೆಗಳ ತೀಕ್ಷ್ಣ ತಾಕಲಾಟ ಪ್ರಾರಂಭವಾಗಿರುತ್ತದೆ. ತನ್ನ ಹಳೆಯ ಮನೋಗಂಡದ ವಿರುದ್ಧ ಬಂಡು ಹೂಡಿ ಅನಪೇಕ್ಷಿತವಾದ, ಅಸಾಧಾರಣವಾದ ಯಾವುದಾದರೂ ಸಂಗತಿಯನ್ನು ಮಾಡಬೇಕು ಎಂಬ ಸೇಡಿನ ಭಾವನೆ ಒಂದಾದರೆ, ಮತ್ತೊಂದು ಎಲ್ಲವನ್ನೂ ಮರೆಯಲು ತಾಯ ಎದೆ ಬೇಕು, ಸ್ತ್ರೀಯ ಸಹಾನುಭೂತಿ ಬೇಕು ಎಂಬ ಹಂಬಲ, ಕಾತರ.... ಈ ಎರಡು ಭಾವನೆಗಳಿಗೆ ಉತ್ತರ ರೂಪವಾಗಿ ಬಂದವಳು ಡಾಲಿ. ಡಾಲಿಯ ಮುಖಾಂತರ ಗೌರೀಶನ ಬೆಂದ ಹೃದಯಕ್ಕೆ ಸಹಾನುಭೂತಿ ದೊರೆಯುತ್ತದೆ.

ಡಾಲಿಯ ಸಾಮಿಪ್ಯದಲ್ಲಿ ತೃಪ್ತಿಯನ್ನು ಹೊಂದಿದರೂ ಕೂಡ ಡಾಲಿಯು ತನ್ನದೇ ಆದ ಮಗುವನ್ನು ಹೊಂದಬೇಕೆಂದು ಹೇಳಿದಾಗ ಗೌರೀಶನ ಮನದಲ್ಲಿ ಸಂಶಯ- ಭೀತಿಗಳುಂಟಾಗುತ್ತವೆ. "ಇವಳು ನನ್ನನ್ನು ತನ್ನ ಸಾಧನವನ್ನಾಗಿ ಉಪಯೋಗಿಸುತ್ತಿರುವಳೇ? ಅಥವಾ ನನ್ನ ಒಳ್ಳೆತನದ

ಉಪಯೋಗ ತೆಗೆದುಕೊಂಡು ನನ್ನನ್ನು ವಂಚಿಸಿ ಬಲೆಯಲ್ಲಿ ಹಾಕುತ್ತಿರುವಳೇ?" (ಪು. ೮೦) ಎಂಬ ಸಂಶಯ ಮೂಡಿ ತಾನು ಬೇಗ ಆಫ್ರಿಕಾಗೆ ಓಡಿಹೋಗಬೇಕೆಂದು ಆಲೋಚಿಸುತ್ತಾನೆ. ಗತ ಜೀವನದಿಂದ ಓಡಿ ಹೋಗುತ್ತಿರುವಾಗ 'ಜೀವನ'ವು ಮರಳಿ ತನ್ನ ಕಾಲು ಜಗ್ಗಿ ತನ್ನ ಅನಂತ ಜಾಲದಲ್ಲಿ ಹಿಡಿದೊಗೆಯುತ್ತಿದೆಯೇ? ಎಂದು ಆಲೋಚಿಸುತ್ತಾನೆ. ಕಾಮಿನಿಯಿಂದ ಬಿಡುಗಡೆ ಬಯಸಿ ಆಫ್ರಿಕಾಗೆ ಓಡಿಹೋಗುತ್ತಿರುವಾಗ 'ಡಾಲಿ' ಮತ್ತೆಲ್ಲಿ ತನಗೆ ತೊಡಕಾಗುವಳೋ ಎಂಬ ಆಲೋಚನೆ ಆತನಲ್ಲಿರುತ್ತದೆ.ಈ ಸಂದರ್ಭದಲ್ಲಿಯೂ ಕೂಡ ಗೌರೀಶ ಒಬ್ಬ ಪಲಾಯನವಾದಿಯಂತೆ ತೋರುತ್ತಾನೆ.

ಆದರೂ ಕೂಡ ಗೌರೀಶನಿಗೆ ಡಾಲಿಯ ಸಾಮೀಪ್ಯ ಬೇಕಾಗಿರುತ್ತದೆ. ಡಾಲಿಯಿಂದ ಆತನ ವ್ಯಕ್ತಿತ್ವದ ಯಾವುದೋ ಒಂದು ಭಾಗ ಸಂಪೂರ್ಣ ತೃಪ್ತವಾಗುತ್ತದೆ. ಆದರೂ ಅವಳು ತನ್ನ ಮೂಲಭೂತ ಕೇಂದ್ರವನ್ನು ಮುಟ್ಟಲಾರಳೆಂದೆನಿಸುವುದು... ನೀನೇ ಬೇಕು – ನೀನೇ ಬೇಕು. ಎಂದು ಡಾಲಿಗೆ ಅವನ ಆತ್ಮ ಹೇಳಲಾರದು... ಯಾಕೆ?... ಕಾಮಿನಿಯು ಅವನ್ನನ್ನು ತುಳಿದು, ಹರಿದು ಚಿಂದಿ ಮಾಡಿ, ಒಗೆದರೂ ಇನ್ನೂ ಅವಳಿಗೆ "ನೀನೇ ಬೇಕು – ನೀನೇ ಬೇಕು..." ಎಂದು ಹೇಳಬಲ್ಲನು. ಯಾಕೆ? ಬೇಡ! ಏನೂ ಬೇಡ! ಏನೂ ಬೇಡ ನನಗೆ...!

ಏನೂ ಬೇಡವೆಂದೇ ಹೋಗಲಿರುವೆನಲ್ಲವೆ ಆಫ್ರಿಕಾಗೆ (ಪು. ೧೦೨) ಎಂಬ ಗೌರೀಶನ ಮಾತುಗಳಲ್ಲಿ ಆತನ ಮನದಲ್ಲಿ ನಡೆಯುತ್ತಿದ್ದ ಸಂಘರ್ಷವನ್ನು ಗುರುತಿಸಬಹುದು. ಅಲ್ಲದೇ ಗೌರೀಶನು ಡಾಲಿಯೊಡನೆ ಹೊಂದಿದ್ದ ಸಂಬಂಧ ಕಾಮಿನಿಯೊಡನೆ ಹೊಂದಿದ್ದ ಸಂಬಂಧದಷ್ಟು ಸಂಕೀರ್ಣತೆಯಿಂದಾಗಲೀ ಅಥವಾ ದ್ವಂದ್ವಗಳಿಂದಾಗಲೀ ಕೂಡಿರಲಿಲ್ಲವೆಂದು ಹೇಳಬಹುದು. ತಾನು ಆಫ್ರಿಕಾಗೆ ಹೋಗುವ ಮೊದಲು ಡಾಲಿಯಿಂದಲೂ ಕೂಡ ಬಿಡುಗಡೆಯನ್ನು ಹೊಂದಬೇಕೆಂದು ಗೌರೀಶ ಬಯಸುತ್ತಾನೆ. ಆದರೂ ಕೂಡ ಅವನ ಮನಸ್ಸು ಡಾಲಿಗಾಗಿ ಪ್ರಾರ್ಥಿಸುತ್ತಿರುತ್ತದೆ.

ಆದರೆ ಡಾಲಿಯು ವಾಸ್ತವವಾಗಿ ಆಲೋಚಿಸುವ ಹುಡುಗಿ. ಡಾಲಿಯು ಗೌರೀಶನಿಗೆ ತನ್ನ ಸಹಜ ಪ್ರೀತಿಯನ್ನು ನೀಡುತ್ತಾಳೆ. ಕಾಮಿನಿಯ ವಿಚಾರ ಸಂಪೂರ್ಣವಾಗಿ ತಿಳಿದ ನಂತರ ಡಾಲಿಗೆ ಗೌರೀಶ ಕಾಮಿನಿಯನ್ನು ಎಷ್ಟು ಇಷ್ಟಪಡುತ್ತಾನೆ ಎಂಬುದರ ಅರಿವಾಗುತ್ತದೆ. ಕಾಮಿನಿ ಇಲ್ಲದೇ ಅವನ ಜೀವನ ಇರಲಾರದು ಎಂದು ಭಾವಿಸುತ್ತಾಳೆ. ಆದರೆ ಗೌರೀಶ ಅಂತಿಮವಾಗಿ ವಿವರವಾಗಿ ಕಾಮಿನಿಯ ವಿಚಾರವನ್ನು ತಿಳಿಸಿದಾಗ ಅವಳು "ಪಾಪ! ಅಭಾಗಿನಿ... poor girl..." (ಪು. ೨೪೪) ಎಂಬ ಉದ್ಗಾರವನ್ನು ಹೊರಡಿಸುವಲ್ಲಿ ಕಾಮಿನಿಯ ಬಗೆಗಿನ ಅವಳ ಅನುಕಂಪವನ್ನು ಗುರುತಿಸಬಹುದು.

ಡಾಲಿಯ ಮೂಲಕ ಗೌರೀಶ ತನ್ನ ಹೃದಯದ ಅರ್ಥವನ್ನು ಕಂಡುಕೊಳ್ಳುತ್ತಾನೆ. ಆದುದರಿಂದಲೇ ಕಾಮಿನಿ ನನಗೋಸ್ಕರ ಅಲ್ಲ. ನಾನು ಅವಳಿಗೋಸ್ಕರ ಅಲ್ಲ – ಅವಳ ದಾರಿ ಬೇರೆ, ನನ್ನ ದಾರಿ ಬೇರೆ ಎಂಬ ತಿಳುವಳಿಕೆ ಮೂಡುತ್ತದೆ. ಡಾಲಿಯ ಮೂಲಕವೇ – ಅವಳು ಕೊಟ್ಟ ಹೃದಯದ ಸ್ಥಿರತೆಯ ಮೂಲಕವೇ ಕಾಮಿನಿಯ ಬಗ್ಗೆ ಅವನಿಗೆ ಪಾಪವೆನಿಸುತ್ತದೆ, ಕರುಣೆ ಮಿಡಿಯುತ್ತದೆ... ಆದರೆ ಅವಳನ್ನು ಉದ್ಧಾರ ಮಾಡುವ ಕಾರ್ಯ ತನ್ನದಲ್ಲ. ಅವಳ

ಉದ್ಧಾರಕರ್ತ ಬಂದಾನು ಕೆಲವು ದಿನಗಳಲ್ಲಿ – ಯಾರಿಗೆ ಗೊತ್ತು? ಅಥವಾ ಅವಳಲ್ಲಿಯ ವಿಶಿಷ್ಟ ಚೈತನ್ಯ ಅವನನ್ನು ಶೋಧಿಸಿ ತಂದೀತು... ಎಂಬ ಗೌರೀಶನ ಆಲೋಚನೆಗಳಲ್ಲಿ ಅವನು ಕಾಮಿನಿಯಿಂದ ಸಂಪೂರ್ಣವಾಗಿ ವಿಮುಖನಾಗಿ ಡಾಲಿಯನ್ನು ಪ್ರೀತಿಸುತ್ತಿರುವುದನ್ನು ಗುರುತಿಸಬಹುದು. ಅಲ್ಲದೆ ಆತ ಡಾಲಿಯನ್ನು ಕುರಿತು ಮತ್ತೆ "ನೀನು ಆ ಕುರ್ಚಿಯಲ್ಲಿ ನಾನು ಈ ಕುರ್ಚಿಯಲ್ಲಿ – ಮರಳಿ ಕೇಳುತ್ತೇನೆ ಸ್ಪಷ್ಟ ಸ್ಪಷ್ಟ ಶಬ್ದಗಳಲಿ; ಡಾಲಿ, ನನ್ನ ಜೊತೆಗೆ ಬಾ – ನನ್ನ ಹೆಂಡತಿಯಾಗು – ನನ್ನ ಸಹ ಸಂಚಾರಿಯಾಗು – ಹೇಳು – ಬರುವಿಯಾ" (ಪು. ೨೪೫) ಎಂಬ ಮಾತುಗಳು ಕೂಡ ಇದಕ್ಕೆ ಪುಷ್ಟಿಯನ್ನು ನೀಡುತ್ತವೆ. ಅಂತಿಮವಾಗಿ ಗೌರೀಶ ಡಾಲಿಯನ್ನು ವಿವಾಹವಾಗಲು ಒಪ್ಪಿಕೊಳ್ಳುವುದರ ಮೂಲಕ ತನ್ನ ತಳಮಳವನ್ನು ಕೊನೆಗೊಳಿಸಿಕೊಳ್ಳುತ್ತಾನೆ.

೫.೧.೧ ಪುರುಷ ಪಾತ್ರಗಳ ನಡುವಿನ ಸಂಘರ್ಷ :

ಮುಕ್ತಿಯಲ್ಲಿ ಬರುವ ಪುರುಷ ಪಾತ್ರಗಳಲ್ಲಿ ಗೌರೀಶ, ಶ್ರೀಕಾಂತ ಮತ್ತು ಸತ್ಯೇಂದ್ರ ಪ್ರಮುಖರಾಗುತ್ತಾರೆ. ಮುಕ್ತಿ ಗೌರೀಶನ ಆತ್ಮಕತೆ. ದಿನಚರಿಯ ರೂಪದಲ್ಲಿ ಕಥೆ ಸಾಗುತ್ತದೆ. ಇದರಲ್ಲಿ ಬರುವ ಶ್ರೀಕಾಂತ ಮತ್ತು ಸತ್ಯೇಂದ್ರ ಗೌರೀಶನ ಪ್ರಾಣ ಸ್ನೇಹಿತರು. ಸತ್ಯೇಂದ್ರ ಗೌರೀಶನ ಊರಾದ 'ಸಿರ್ಸಿ'ಯವನೇ ಆಗಿದ್ದು, ಧಾರವಾಡದಲ್ಲಿ ಕಾಲೇಜು ಅಭ್ಯಾಸ ಮಾಡುತ್ತಿರುತ್ತಾನೆ. ಕಾಲೇಜು ವಿದ್ಯಾಭ್ಯಾಸಕ್ಕೆಂದು ಧಾರವಾಡಕ್ಕೆ ಬಂದ ಗೌರೀಶನಿಗೆ ಸತ್ಯೇಂದ್ರ ತನ್ನ ಸ್ನೇಹಿತನಾಗಿದ್ದ ಶ್ರೀಕಾಂತನನ್ನು ಪರಿಚಯ ಮಾಡಿಕೊಡುತ್ತಾನೆ. ಶ್ರೀಕಾಂತ ನೇರ ವ್ಯಕ್ತಿತ್ವವನ್ನು ಹೊಂದಿದವನಾಗಿರುತ್ತಾನೆ. ತನ್ನ ಮಾತಿನಿಂದ ಎಲ್ಲರನ್ನೂ ಆಕರ್ಷಿಸಬಲ್ಲವನಾಗಿರುತ್ತಾನೆ. ಅಂತೆಯೇ ಗೌರೀಶ ಕೂಡ ಆತನ ವ್ಯಕ್ತಿತ್ವಕ್ಕೆ ಮಾರುಹೋಗುತ್ತಾನೆ.

ಗೌರೀಶ ಸಂಕೋಚದ ಪ್ರವೃತ್ತಿಯನ್ನು ಹೊಂದಿರುತ್ತಾನೆ. ಅಲ್ಲದೇ ದುರ್ಬಲ ಮನಸ್ಸಿನ ವ್ಯಕ್ತಿಯೂ ಆಗಿರುತ್ತಾನೆ. ಎಲ್ಲಾ ವಿಚಾರಗಳಿಗೂ ತನ್ನನ್ನು ಇತರರೊಂದಿಗೆ ಹೋಲಿಕೆ ಮಾಡಿಕೊಳ್ಳುವುದು ಅಭ್ಯಾಸವಾಗಿರುತ್ತದೆ. ಗೌರೀಶ ಹಾಯಸ್ಕೂಲಿನಲ್ಲಿ ಇದ್ದಾಗ ಸತ್ಯೇಂದ್ರ ಆತನ ಆದರ್ಶವಾಗಿರುತ್ತಾನೆ. ತದ ನಂತರ ಕಾಲೇಜಿಗೆ ಬಂದ ನಂತರ ಶ್ರೀಕಾಂತ ಆತನ ಪಾಲಿನ ಆದರ್ಶ ವ್ಯಕ್ತಿಯಾಗುತ್ತಾನೆ.

ಸತ್ಯೇಂದ್ರ ಗೌರೀಶನ ಊರಾದ ಸಿರ್ಸಿಯವನೇ, ವಿದ್ಯಾಭ್ಯಾಸದ ಸಲುವಾಗಿ ಧಾರವಾಡಕ್ಕೆ ಬಂದಿರುತ್ತಾನೆ. ಯಾವಾಗಲೂ ಅವನು ಸರಳ ಜೀವಿ, ತಾನಾಯಿತು, ತನ್ನ ಕಾರ್ಯವಾಯಿತು. ಬೇರೆ ಯಾವ 'ಫಾಲತೂ' ವಿಷಯಗಳಲ್ಲಿ ಎಂದೂ ಮನಸ್ಸು ಹಾಕಿದವನಲ್ಲ... ಧಾರವಾಡದಲ್ಲಿ ಕೂಡ. ಸತ್ಯೇಂದ್ರ ರಾಜಕಾರಣಕ್ಕಾಗಲೀ, ಅರೆಕ್ಷಣದ ಒಣ ಮೋಹಕ್ಕಾಗಲೀ ಬಿದ್ದವನಲ್ಲ. ಸತ್ಯೇಂದ್ರ ವಾಸ್ತವ ಲೋಕದಲ್ಲಿ ಜೀವಿಸುವವ. ತನ್ನ ವಿದ್ಯಾಭ್ಯಾಸವನ್ನು ಮುಗಿಸಿ ಮುಂಬಯಿಯಲ್ಲಿ ನೌಕರಿಯನ್ನು ಹಿಡಿದು ಜೀವನ ನಡೆಸುತ್ತಿರುತ್ತಾನೆ. ಇವನ ಪ್ರಕಾರ "ಗೌರೀಶ ಮತ್ತು ಕಾಮಿನಿಯರ ನಡುವಿನ ಸಂಬಂಧ ಕೇವಲ ಭಾನಗಡಿಯಾಗಿತ್ತು". (ಪು. ೬)

ಶ್ರೀಕಾಂತ ಸೋಶಿಯಲಿಸ್ಟ್ ಮನೋಭಾವವನ್ನು ರೂಢಿಸಿಕೊಂಡಿರುತ್ತಾನೆ. ಆತನ ಪ್ರಕಾರ "ಪ್ರತಿಯೊಬ್ಬ ಒಳ್ಳೆಯ ತರುಣ ಹುಟ್ಟು ಸೋಶಿಯಲಿಸ್ಟ್‌ನಿರುತ್ತಾನೆ! ಸೂಕ್ಷ್ಮ ಮನಸ್ಸಿನ ತರುಣನಿಗೆ ಸೋಶಿಯಲಿಸ್ಟ್ ತತ್ವಜ್ಞಾನ ಸಹಜವಾಗಿಯೇ ಬರುತ್ತದೆ" (ಪು. ೧೧). ಅವನು ಸದಾ ಚಟುವಟಿಕೆಯಿಂದ, ಜೀವನೋತ್ಸಾಹದಿಂದ ಕೂಡಿದ್ದ ವ್ಯಕ್ತಿಯಾಗಿದ್ದನು. ಕಾಲೇಜಿನ ದಿನಗಳಲ್ಲಿ ಎಲ್ಲರಲ್ಲೂ ಸಂತೋಷದ ಭಾವನೆಗಳನ್ನು ಮೂಡಿಸುತ್ತಿದ್ದನು. "ಎಲ್ಲರೂ ಜೀವನವನ್ನು ಅನುಭವಿಸಿಯೇ ಅರ್ಥ ಮಾಡಿಕೊಳ್ಳಬೇಕು" ಎಂಬುದು ಆತನ ನಿಲುವಾಗಿತ್ತು. ಅಲ್ಲದೇ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ತನ್ನ ವೈಯಕ್ತಿಕ ಅನುಭವದ ಮೇಲೆ ಜೀವನವನ್ನು ರೂಢಿಸಿಕೊಳ್ಳಬೇಕು ಎಂಬ ಮನೋಭಾವನೆಯನ್ನು ಹೊಂದಿರುತ್ತಾನೆ.

ಅಲ್ಲದೇ ಶ್ರೀಕಾಂತ ಮತ್ತು ಸತ್ಯೆಂದ್ರ ಇಬ್ಬರೂ ಕೂಡ ಒಂದೇ ಕಾಲೇಜಿನಲ್ಲಿ ಇದ್ದು ಸ್ನೇಹಿತರಾಗಿದ್ದರೂ ಕೂಡ ಅವರ ಆಲೊಚನೆಗಳು ಭಿನ್ನವಾಗಿರುತ್ತವೆ. ಶ್ರೀಕಾಂತ "ಸೂಕ್ಷ್ಮ ಮನಸ್ಸಿನ ತರುಣನಿಗೆ ಸೋಶಿಯಲಿಸ್ಟ್ ತತ್ವಜ್ಞಾನ ಸಹಜವಾಗಿಯೇ ಇರುತ್ತದೆ" ಎಂದು ಹೇಳಿದಾಗ ಸತ್ಯೇಂದ್ರ ಅದನ್ನು ಪ್ರತಿಭಟಿಸಿ "ಆದರೆ ನಾನೆಲ್ಲಿ ಸೋಶಿಯಲಿಸ್ಟ್ ನಿದ್ದೇನೆ?" ಎಂದು ಕೇಳುತ್ತಾನೆ. ಆಗ ಶ್ರೀಕಾಂತ "ನೀನೊಂದು ಬೇರೆ ಬಗೆಯ ತತ್ತಿ! ಗಟ್ಟಿ ಕಲ್ಲಿನಂತ ತತ್ತಿ – ನಮ್ಮ ಹೊಸ ಸಮಾಜದ ಬುನಾದಿಗಲ್ಲು ನೀನು... ನಾವು ಶಿಲ್ಪಿಗಳು... ಕರ್ಮಕಾರರು!"ಎಂದು ಹೇಳುವ ಮಾತುಗಳಲ್ಲಿ ಇದನ್ನು ಗುರುತಿಸಬಹುದು.

ಆದರೆ ಶ್ರೀಕಾಂತನಿಗೆ ಟಿ.ಬಿ.ಕಾಯಿಲೆ ಪ್ರಾರಂಭವಾಗಿ ಕೊನೆಯ ಹಂತವನ್ನು ತಲುಪಿದಾಗ ಆತ ಜೀವನದ ಬಗ್ಗೆ ಉತ್ಸಾಹವನ್ನು ಕಳೆದುಕೊಳ್ಳುತ್ತಾನೆ. ಜೀವನವನ್ನು ಬಂದಂತೆಯೇ ಅನುಭವಿಸಿ ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುತ್ತಿದ್ದ ವ್ಯಕ್ತಿ ಕೊನೆಗೆ ತನ್ನ ಕಾಯಿಲೆಯಿಂದಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ. ಶ್ರೀಕಾಂತನ ಪ್ರಕಾರ "ಆತನ ರೋಗ ಆತನ ನಾಟಕದ ಖಳನಾಯಕ". ಆತನ ಪ್ರಕಾರ ಸಾವಿನಿಂದಲೇ ವ್ಯಕ್ತಿಯು ಮುಕ್ತಿಯನ್ನು ಹೊಂದುವುದು ಸಾಧ್ಯ. ಹೀಗಾಗಿಯೇ ಶ್ರೀಕಾಂತ ಗೌರೀಶನಿಗೆ ಅವನು ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಬರೆದಿದ್ದ ಪತ್ರದಲ್ಲಿ "ನಾನಂತೂ ಮುಕ್ತನಾದೆ" (ಪು. ೨೧೨) ಎಂಬ ವಾಕ್ಯದ ಮೂಲಕ ಇದನ್ನು ಗುರುತಿಸಬಹುದಾಗಿದೆ.

ಗೌರೀಶ ತನ್ನ ವಿದ್ಯಾಭ್ಯಾಸದ ಅವಧಿಯಲ್ಲಿಯೇ ಶ್ರೀಕಾಂತನ ಆರೋಗ್ಯದ ದೃಷ್ಟಿಯಿಂದ ತಾನು ಮುಂಬಯಿಗೆ ವ್ಯಾಸಂಗಕ್ಕೆ ಹೋಗುವುದನ್ನು ಬಿಟ್ಟು ಧಾರವಾಡದಲ್ಲಿಯೇ ಉಳಿದುಕೊಳ್ಳಲು ನಿರ್ಧರಿಸಿ ಸಲಹೆ ನೀಡುವಂತೆ ಸತ್ಯೇಂದ್ರನಿಗೆ ಪತ್ರ ಬರೆಯುತ್ತಾನೆ. ಅದಕ್ಕೆ ಸತ್ಯೇಂದ್ರ "ನೀನು ಧಾರವಾಡದಲ್ಲಿಯೇ ಇರುವುದು ನಿನ್ನ ಶ್ರೀಕಾಂತರ ಪ್ರೀತಿಯ ದ್ಯೋತಕವೇನೂ ನಿಜ... ಶ್ರೀಕಾಂತನ ಕಾಯಿಲೆಯ ಬಗ್ಗೆ ನಿನ್ನಂತೆ ನನಗೂ ಸಹಾನುಭೂತಿಯಿದೆ... ಆದರೆ ನೀನು ಅಲ್ಲಿ ಇದ್ದು ಏನು ಮಾಡಲಿರುವಿ?... ನಿನ್ನ ಈ ತರಹದ ತ್ಯಾಗದ ಅವಶ್ಯಕತೆ ನನಗೆ ತೋರುವುದಿಲ್ಲ. ...ಹಾಂ, ನೀನು ಹೇಳದಿದ್ದರೂ ನನಗೆ ಗೊತ್ತು, ಇನ್ನೊಂದು ಕಾರಣವಿದೆಯೆಂದು. ಕಾಮಿನಿ... ಹಾಂ, ತುಡುಗಾ ಹೌದೋ ಅಲ್ಲವೋ? ಗೌರೀಶ, ನೀನು ವ್ಯರ್ಥವಾಗಿ ಬೆಂಕಿಯಲ್ಲಿ ಕೈ ಹಾಕಿ

ಸುಡಿಸಿಕೊಳ್ಳುತ್ತಿರುವಿ. ಎಚ್ಚರಿಕೆ!" ಎಂದು ಹೇಳುವ ಮೂಲಕ ಗೌರೀಶನು ಕಾಮಿನಿಯ ವಿಚಾರದಲ್ಲಿ ಮುಂದುವರೆಯದಂತೆ ಸೂಚಿಸುವುದನ್ನು ಗಮನಿಸಬಹುದು.

ಗೌರೀಶನನ್ನು ಹೇಗಾದರೂ ಧಾರವಾಡದಿಂದ ಮುಂಬೈ ಮಹಾನಗರಕ್ಕೆ ಕರೆ ತರುವುದು ಸತ್ಯೇಂದ್ರನ ಮುಖ್ಯ ಯೋಜನೆಯಾಗಿರುತ್ತದೆ. ಅಲ್ಲದೇ ಅವನನ್ನು ಕಾಮಿನಿಯಿಂದ ದೂರ ಮಾಡುವುದು ಅವನ ಮುಖ್ಯ ಉದ್ದೇಶವಾಗಿರುತ್ತದೆ. ಹೀಗಾಗಿಯೇ ಶ್ರೀಕಾಂತನೇ ಗೌರೀಶನಿಗೆ ಮುಂಬಯಿಯಲ್ಲಿ ಒಂದು ನೌಕರಿಯನ್ನು ದೊರಕಿಸುತ್ತಾನೆ.

ಅಲ್ಲದೇ ಗೌರೀಶ ಭೂತವನ್ನೆಲ್ಲಾ ಮರೆತು ಆಫ್ರಿಕಾಗೆ ಹೋಗಬೇಕೆಂದು ನಿರ್ಧರಿಸಿದಾಗ ಸತ್ಯೇಂದ್ರ "ನನ್ನ 'ಜೀವನ'ವನ್ನು, ನನ್ನ 'ಆತ್ಮ'ವನ್ನು ನಾನು ಇಲ್ಲಿಯೇ ಇದ್ದುಕೊಂಡು ಎದುರಿಸಬೇಕು" ಎಂಬ ಅಭಿಮತವನ್ನು ಹೊಂದಿದ್ದವನು. "ಎಲ್ಲಿ ಹೋದರೇನು? ನಿನ್ನ ಆತ್ಮದಿಂದ ನೀನು ದೂರ ಹೋಗಲಾರೆ. ಸ್ಮರಣ ಇರುವ ತನಕ ಆದದ್ದನ್ನು ಮರೆಯುವುದು ಶಕ್ಯವಿಲ್ಲ.... ಯಾವುದನ್ನು ಮರೆಯದೇ ಭೂತಕಾಲವನ್ನು ಅರಗಿಸಿ ಅದರ ಮೇಲೆ ವಿಜಯ ಸಂಪಾದಿಸುವುದರಲ್ಲಿಯೇ ಜೀವನ ಸಾರ್ಥಕ್ಯವಿದೆ.... ಜೀವನವೆಂದ ಮೇಲೆ ಎಲ್ಲ ತರಹದ ಅನುಭವ ಬರತಕ್ಕುವೇ. ಬಂದ ಅನುಭವಗಳನ್ನು ಧೈರ್ಯದಿಂದ ಅಂಗೀಕರಿಸಿ, ನಗುತ್ತಾ ಮುನ್ನಲೆಯುವುದರಲ್ಲಿ ಜಾಣತನವಿದೆ" (ಪು. ೪) ಎಂದು ಹೇಳುವಲ್ಲಿ ನಾವು ಸತ್ಯೇಂದ್ರನ ವಾಸ್ತವ ನಿಲುವನ್ನು ಗುರುತಿಸಬಹುದು.

ದೇಸಾಯಿಯವರ 'ಮುಕ್ತಿ' ಕಾದಂಬರಿಯಲ್ಲಿ ತಂದೆ-ಮಗನ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ. ಸಿರ್ಸಿಯಲ್ಲಿ ವಿದ್ಯಾಭ್ಯಾಸ ಮುಗಿಸಿದ ಗೌರೀಶ ಹೆಚ್ಚಿನ ವ್ಯಾಸಂಗಕ್ಕೆಂದು ಧಾರವಾಡಕ್ಕೆ ಬರುತ್ತಾನೆ. ಅಲ್ಲಿ ಅವನು ಶ್ರೀಕಾಂತನೊಂದಿಗೆ ಸೇರಿ ರಾಜಕೀಯ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಈ ವಿಷಯ ತಿಳಿದ ಗೌರೀಶನ ತಂದೆ "ನಿನ್ನ ಕಾಲೇಜು ಶಿಕ್ಷಣ ಬಂದು ಮಾಡುವೆ..." (ಪು. ೧೭) ಎಂಬ ಬೆದರಿಕೆಯ ಪತ್ರಗಳನ್ನು ಕಳಿಸತೊಡಗುತ್ತಾರೆ.

ಗೌರೀಶನ ಮದುವೆಯ ವಿಚಾರದಲ್ಲಿಯೂ ಕೂಡ ತಂದೆ ಮಗನ ನಡುವೆ ವಾಗ್ವಾದಗಳು ನಡೆಯುತ್ತವೆ. ಗೌರೀಶನ ತಂದೆಗೆ ಗೌರೀಶ ಕಾಮಿನಿಯನ್ನು ಪ್ರೀತಿಸುವ ವಿಚಾರ ಸ್ವಲ್ಪವೂ ಸೇರುವುದಿಲ್ಲ. ಹಾಗಾಗಿ ಮಗ ಧಾರವಾಡವನ್ನು ಬಿಟ್ಟು ಪುಣೆಗೋ ಮುಂಬಯಿಗೋ ಹೋಗುವಂತೆ ಅಥವಾ ಲಗ್ನ ಮಾಡಿಕೊಳ್ಳುವಂತೆ ತಿಳಿಸುತ್ತಾರೆ. "ನಿನ್ನ ಚೆಲ್ಲಾಟ-ಜಿಗಿದಾಟ ಅದೆಲ್ಲ ಹೋರೀ ಹದ! ಕೊರಳಲ್ಲಿ ಗುದ್ದಿ ಕಟ್ಟಿದ ಮೇಲೆಯೇ ಎಲ್ಲ ಹುಚ್ಚು ಇಳಿಯುವುದು, ಬುದ್ಧಿ ಬರುವುದು" (ಪು. ೭೪) ಎಂದು ಹೇಳುವಲ್ಲಿ ಅವರಿಬ್ಬರ ನಡುವಿನ ಸಂಘರ್ಷವನ್ನು ಗುರುತಿಸಬಹುದು. ಆದರೆ ಗೌರೀಶನ ಪ್ರಕಾರ "ಆತನ ತಂದೆಗೆ ಅವನ ಬಗ್ಗೆ ಸಂಪೂರ್ಣ ಅಜ್ಞಾನ", "ಇವರ ಕಾಲ ಬೇರೆ, ನನ್ನ ಕಾಲ ಬೇರೆ! ತಂದೆ ಹೋದಂತೆ ಮಗನು ನಡೆಯುತ್ತಾ ಹೋದರೆ ಪ್ರಗತಿ ಎಲ್ಲಿಂದ ಬಂತು"? "ನನ್ನ ಜೀವನವನ್ನು ನನಗೆ ಕಟ್ಟಲು ಸಂಪೂರ್ಣ ಸ್ವಾತಂತ್ರವಿದೆ ನನಗೆ. ಸ್ವಾತಂತ್ರ್ಯ ಕಳೆದುಕೊಂಡರೆ ಜೀವನವೆಲ್ಲಿಂದ ಬಂತು" (ಪು.೭೪). ಗೌರೀಶನ ಪ್ರಕಾರ ಆತನ ತಂದೆ ತಾಯಿ ಹೇಳುವ ಅಜ್ಞಾನ- 'ವ್ಯವಹಾರ' ಪ್ರೇರಿತ ಹಳೆಯ ದಾರಿಯನ್ನು ತುಳಿಯುವುದು ಮೂರ್ಖತನ, ಹೇಡಿತನ. ಮಗನ 'ಹಿತ', 'ಸುಖ', 'ದುಃಖ' ಅವರಿಗೆ ಗೊತ್ತಿಲ್ಲ. ಇಲ್ಲಿ ಆಧುನಿಕ ಮತ್ತು

ಪರಂಪರಾಗತ ಮನೋಭಾವಗಳ ನಡುವಿನ ಸಂಘರ್ಷವನ್ನು ಗುರುತಿಸಬಹುದು. ಹೀಗಾಗಿಯೇ ಆತ ಮದುವೆಯ ಪ್ರಸ್ತಾಪಕ್ಕೆ ಒಪ್ಪಿಕೊಳ್ಳದೇ ಮುಂಬಯಿಗೆ ಹೋಗಲು ಒಪ್ಪಿಕೊಳ್ಳುತ್ತಾನೆ. ಆದರೂ ಕೂಡ ಅವನ ಮನಸ್ಸಿನಲ್ಲಿ ದ್ವಂದ್ವಗಳು ಮೂಡುತ್ತವೆ. "ಮುಂಬಯಿಗೆ ಹೋಗುವುದೋ ಅಥವಾ ಶ್ರೀಕಾಂತನ ಶುಶ್ರೂಷೆ ಮಾಡುತ್ತಾ ಧಾರವಾಡದಲ್ಲಿ ಅಥವಾ ಅವನಿದ್ದಲ್ಲಿ ಇರಬೇಕೋ" ಎಂಬ ಭಾವನೆಗಳ ತಾಕಲಾಟ ಪ್ರಾರಂಭವಾಗುತ್ತದೆ. ಕೊನೆಗೆ ತಂದೆಗೆ ಮಿತವ್ಯಯದ ಕಾರಣವೊಡ್ಡಿ ಧಾರವಾಡದಲ್ಲಿಯೇ ಉಳಿದುಕೊಳ್ಳುತ್ತಾನೆ. ಆದರೆ ನಿಜ ಸಂಗತಿ ಅವನ ತಂದೆಗೆ ತಿಳಿಯುತ್ತದೆ. ಹೀಗಾಗಿ ಅವರು ಗೌರೀಶ ಸಿರ್ಸಿಗೆ ಬಂದಾಗ ಆತನನ್ನು ವಿಚಾರಿಸುತ್ತಾರೆ. ಧಾರವಾಡದಲ್ಲಿಯೇ ಉಳಿದುಕೊಳ್ಳಲು ಅನುಮತಿ ನೀಡಿದ್ದು ತಪ್ಪಾಯಿತು ಎಂದು ಭಾವಿಸುತ್ತಾರೆ. ಗೌರೀಶ ಕಾಮಿನಿಯನ್ನು ಪ್ರೀತಿಸುವುದನ್ನು ಇನ್ನೂ ಬಿಟ್ಟಿಲ್ಲವೆಂದೇ ಅವರ ಸಂಶಯ. ಹೀಗಾಗಿಯೇ ಅವರು ಮಗನನ್ನು ಕುರಿತು "ಏನಾದರೂ ಭಾನಗಡಿ – ಗೀನಗಡಿ ಮಾಡ್ತೀರಿ ಮತ್ತೆ. ಕಲಿಕಾಲ ಹಾಗೂ ತಾರುಣ್ಯದ ಬಿಸಿ ರಕ್ತ..." (ಪು. ೧೬೧) ಎಂದು ಹೇಳುತ್ತಾರೆ. ಅಲ್ಲದೇ ಅವರಿಗೆ ಗೌರೀಶ ಓದಿದ್ದು ಸಾಕಾಗಿರುತ್ತದೆ. ಮಗ ಊರಿಗೆ ಹಿಂತಿರುಗಿ ತಮ್ಮ ವ್ಯವಹಾರದಲ್ಲಿ ಸಹಾಯ ಮಾಡಲಿ ಎಂದು ಬಯಸುತ್ತಾರೆ. "ಗೌರೀಶ ಇಲ್ಲಿ ನೋಡು, ನಿನ್ನ ಎಂ.ಎಸ್ಸಿ– ಗಿಮ್ಮೆಸ್ಸಿ ಫಾರ್ಸು ಸಾಕು, ಬಾ ತಿರುಗಿ ಸಿರ್ಸಿಗೆ. ಅಂಗಡಿಯಲ್ಲಿ ಕೂತು ದಂಧೆ ಮಾಡು, ರೊಕ್ಕಾ ಮಾಡು, ಲಗ್ನ ಆಗು..." (ಪು. ೧೬೩) ಎಂದು ಹೇಳುವಲ್ಲಿ ಮಗ ಬೇಡದ ವಿಷಯಗಳಲ್ಲಿ ಸಿಕ್ಕಿಹಾಕಿಕೊಳ್ಳುವುದು ಅವರಿಗೆ ಬೇಡವಾಗಿರುವುದನ್ನು ಗುರುತಿಸಬಹುದು.

ಆದರೆ ಗೌರೀಶನ ಪ್ರಕಾರ ಅವರ ಜಗತ್ತೇ ಬೇರೆ, ಇವನ ಜಗತ್ತೇ ಬೇರೆ, ಅವರ ಮೌಲ್ಯಗಳೇ ಬೇರೆ, ಇವನ ಮೌಲ್ಯಗಳೇ ಬೇರೆ. ಇಬ್ಬರ ಮಾತಿನಲ್ಲಿಯ ಅರ್ಥದ ಪಾತಳಿಯೆ ಬೇರೆ ಬೇರೆ. ಒಮ್ಮೊಮ್ಮೆ ಇಬ್ಬರೂ ಒಂದೇ ಶಬ್ದ ಉಪಯೋಗಿಸಿದರೂ ಅರ್ಥಗಳು ಬೇರೆ. ಹೀಗಾಗಿ ಇಬ್ಬರ ನಡುವೆ ಎಲ್ಲವನ್ನೂ, ಕಂಡದ್ದನ್ನೂ, ಕೇಳಿದ್ದನ್ನೂ, ವಿಕೃತಗೊಳಿಸುವ ದಪ್ಪ ಗಾಜಿನ ಗೋಡೆ ಇದ್ದಂತೆ ಭಾಸವಾಗುತ್ತದೆ. ಅಲ್ಲದೆ ಲಗ್ನ, ಪ್ರೇಮ, ಸುಖ, ಸಂಸಾರ ಇವುಗಳ ಕಲ್ಪನೆಗಳ ಬಗ್ಗೆ ಇಬ್ಬರ ನಡುವೆ ಇರುವ ಅಂತರ ಅಗಾಧವಾದದ್ದು. ಅವರ ಮಾನಸಿಕ ಜಗತ್ತು, ನಮ್ಮ ಜಗತ್ತಿನಿಂದ ದೂರವಿದ್ದಾಗ, ಸಂಭಾಷಣೆ ಕೂಡ ಕಠಿಣವಾಗುವುದು. ತಿಳುವಳಿಕೆಯ ಬದಲು ತಪ್ಪು ತಿಳುವಳಿಕೆಗೇ ಹೆಚ್ಚು ಅಸ್ಪದವಾಗುತ್ತದೆ.

೫.೧.೨ ಸ್ತ್ರೀಪಾತ್ರಗಳ ಸಂಘರ್ಷ :

ಮುಕ್ತಿ ಕಾದಂಬರಿಯಲ್ಲಿ ಬರುವ ಕಾಮಿನಿ, ಡಾಲಿ, ಮೇರಿ, ರೋಹಿಣಿ, ಶಶಿಕಲೆ, ಸರಲಾಬಾಯಿ, ಎಲ್ಲರೂ ಕೂಡ ಭಿನ್ನ ವ್ಯಕ್ತಿತ್ವದವರಾದರೂ ಕೂಡ ಕಾದಂಬರಿಯಲ್ಲಿ ಪ್ರಧಾನ ಪಾತ್ರ ವಹಿಸುತ್ತಾರೆ.

ಕಾಮಿನಿ ಮತ್ತು ಡಾಲಿ ಗೌರೀಶನ ಜೀವನದಲ್ಲಿ ಪ್ರಮುಖರಾದ ವ್ಯಕ್ತಿಗಳಾಗಿದ್ದಾರೆ. ಕಾಮಿನಿ ಸ್ವತಂತ್ರ ಮನೋಭಾವನೆಯನ್ನು ರೂಢಿಸಿಕೊಂಡವಳಾಗಿದ್ದು, ಅನುಭವಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದಳು. ಪ್ರಾರಂಭದಲ್ಲಿ ಗೌರೀಶನ ಪ್ರೀತಿಯನ್ನು ಅರ್ಥ ಮಾಡಿಕೊಳ್ಳಲು ವಿಫಲಳಾದ ಕಾಮಿನಿ ಕೊನೆಗೆ ಗೌರೀಶನನ್ನು ತನ್ನನ್ನು ಮದುವೆಯಾಗುವಂತೆ ಕೇಳಿಕೊಳ್ಳುತ್ತಾಳೆ. ಗೌರೀಶನಿಂದ

ತಿರಸ್ಕೃತಳಾದ ಕಾಮಿನಿ ಹಲವಾರು ವ್ಯಕ್ತಿಗಳಿಂದ ಮೋಸಹೋಗುತ್ತಾಳೆ. ಕಾಮಿನಿ ತನ್ನನ್ನು ಸದಾ ಪ್ರಶಂಸಿಸುವ, ತನ್ನೆಲ್ಲ ಆಸೆಗಳನ್ನು ಪೂರೈಸಬಲ್ಲ ಗಂಡನ್ನು ಬಯಸುತ್ತಿರುತ್ತಾಳೆ. ಅವಳ ದೃಷ್ಟಿಯಲ್ಲಿ ಗೌರೀಶ ಶ್ರೀಕಾಂತನ ನೆರಳಿನಲ್ಲಿ ಅವನ ಆಜ್ಞೆಯಂತೆ ನಡೆಯುವ ವ್ಯಕ್ತಿ, ತನ್ನ ಅಣ್ಣನ ನೆರಳಿನಿಂದ ಗೌರೀಶ ಹೊರ ಬರುವುದರ ಬಗ್ಗೆ ಆವಳಿಗೆ ನಂಬಿಕೆಯೇ ಇರುವುದಿಲ್ಲ. ತಾನು ಬಯಸುವಂಥ ಸ್ವತಂತ್ರ ಬಲಶಾಲಿ ವ್ಯಕ್ತಿತ್ವ ಗೌರೀಶನಲ್ಲಿ ಇಲ್ಲದಿರುವುದನ್ನು ಮನಗಾಣುತ್ತಾಳೆ. ಆದರೆ ತಾನಾಗಿ ಗೌರೀಶನ ಪ್ರೀತಿಯನ್ನು ಬಯಸಿ ಹೋದಾಗ ಅವನಿಂದ ತಿರಸ್ಕೃತಳಾಗಿ ಇತರರಿಂದ ಮೋಸಹೋಗುತ್ತಾಳೆ. ತನ್ನ ಈ ಸ್ಥಿತಿಗೆ ಗೌರೀಶನೇ ಕಾರಣ ಎಂಬುದು ಅವಳ ಅಭಿಪ್ರಾಯವಾಗಿರುತ್ತದೆ. ಹೀನ ಸ್ಥಿತಿಗೆ ಬಂದ ಅವಳು ತನ್ನನ್ನು ಉಳಿಸುವಂತೆ ಗೌರೀಶನಲ್ಲಿ ಕೇಳಿಕೊಳ್ಳುತ್ತಾಳೆ. ಅಲ್ಲದೇ ಅಂತಿಮ ಕ್ಷಣಗಳಲ್ಲಿ ಗೌರೀಶನಲ್ಲಿನ ಸಾಮರ್ಥ್ಯವನ್ನು ಗುರುತಿಸುವಲ್ಲಿ ಸಫಲಳಾದರೂ ಗೌರೀಶನ ಪ್ರೀತಿಯನ್ನು ಪಡೆಯುವಲ್ಲಿ ವಿಫಲಳಾಗುತ್ತಾಳೆ. ಆದರೂ ಕೂಡ ಗೌರೀಶನ ಗತಜೀವನ ಪ್ರಮುಖ ವ್ಯಕ್ತಿಯಾಗಿ ಆತನನ್ನು ಕಾಡುತ್ತಿರುತ್ತಾಳೆ.ಗೌರೀಶ ತನ್ನ ಕಲ್ಪನೆಯ ಆದರ್ಶ ನಕ್ಷತ್ರ ಕಾಮಿನಿಯ ನೆನಪಿನಿಂದ ಹೊರಬರಲಾಗದೇ ಚಡಪಡಿಸುತ್ತಾನೆ "ಆಫ್ರಿಕಾಗೆ ಹೋದರೂ ಕೂಡ ತನ್ನ ಭವಿಷ್ಯತ್ತು ಕೂಡ ಅವಳ ಪ್ರಭಾವದಿಂದ ಸ್ವತಂತ್ರವಾಗಲಾರದು" ಎಂದು ಹಪಾಹಪಿಸುವಲ್ಲಿ ಮತ್ತು ಗೌರೀಶನ ಆತ್ಮ "ನೀನೇ ಬೇಕು ಕಾಮಿನಿ" ಎಂದು ಚೀರುವಲ್ಲಿ ಕಾಮಿನಿಯು ಗೌರೀಶನ ಜೀವನದಲ್ಲಿ ಬೀರಿದ ಪ್ರಭಾವವನ್ನು ಗುರುತಿಸಬಹುದಾಗಿದೆ.

ಡಾಲಿ ಮುಂಬೈ ನಗರದಲ್ಲಿ ಬೆಳೆದ ಹುಡುಗಿ. ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ನಗುಮುಖದ ಹುಡುಗಿ. ಅವಳ ಉತ್ಸಾಹ ಹಾಗೂ ವಿನೋದೀ ವೃತ್ತಿಯಿಂದಾಗಿ ಸಾಕಷ್ಟು ಗೆಳೆಯ-ಗೆಳತಿಯರನ್ನು ಹೊಂದಿದ್ದಳು. ಗೌರೀಶನ ಆಫೀಸಿನಲ್ಲಿಯೇ ಕೆಲಸ ಮಾಡುತ್ತಿದುದರಿಂದ ಇಬ್ಬರ ಪರಿಚಯ ಸಹಜವಾಗಿಯೇ ಆಗುತ್ತದೆ. ಕಾಮಿನಿಯಿಂದಾಗಿ ಪ್ರೇಮ ವೈಫಲ್ಯದ ಮನೋಭಾವನೆಯಿಂದ ಮುಂಬೈಗೆ ತೆರಳಿದ್ದ ಗೌರೀಶ ಡಾಲಿಯಲ್ಲಿ ವಿಲಕ್ಷಣವಾದ ಮಾತೃತ್ವವನ್ನು ಗುರುತಿಸುತ್ತಾನೆ. ಆ ಮಾತೃತ್ವದ ಗುಣದಿಂದಾಗಿಯೇ ಅವನು ಡಾಲಿಯೆಡೆಗೆ ಆಕರ್ಷಿತನಾಗುತ್ತಾನೆ. ಡಾಲಿಯು ಯಾವುದೇ ವಿಷಯದಲ್ಲಿಯೂ ಕೂಡ ಸಾಕಷ್ಟು ಆಲೋಚಿಸಿ ತೀರ್ಮಾನವನ್ನು ತೆಗೆದುಕೊಳ್ಳುವ ವ್ಯಕ್ತಿತ್ವದವಳಾಗಿರುತ್ತಾಳೆ. ಹೀಗಾಗಿಯೇ ಗೌರೀಶನ ಪ್ರೇಮ ವೈಫಲ್ಯದ ಬಗ್ಗೆ ತಿಳಿದ ಡಾಲಿ ಅದನ್ನು ಸರಿಪಡಿಸುವ ಪ್ರಯತ್ನವನ್ನು ನಡೆಸುತ್ತಾಳೆ. ಗೌರೀಶನ ಬೆಂದ ಹೃದಯಕ್ಕೆ ಸಹಾನುಭೂತಿಯ ಅನುಭವವನ್ನು ನೀಡುತ್ತಾಳೆ. ಇವರಿಬ್ಬರ ಪರಿಚಯ ಬೆಳೆದು ಲೈಂಗಿಕ ಸಂಬಂಧದಲ್ಲಿ ಪರಿಣಮಿಸುತ್ತದೆ. ಗೌರೀಶನಿಗೆ ತಮ್ಮಿಬ್ಬರ ಸಂಬಂಧದ ಬಗ್ಗೆಯೂ ಅನುಮಾನವಿರುತ್ತದೆ. ಡಾಲಿಯೂ ಕೂಡ ತನ್ನನ್ನು ಉಪಯೋಗಿಸಿಕೊಳ್ಳುತ್ತಿರಬಹುದೇನೋ ಎಂಬ ಅನುಮಾನ ಕಾಡುತ್ತದೆ. ಆದರೆ ಡಾಲಿ ಆ ರೀತಿಯ ಯಾವುದೇ ನಿರೀಕ್ಷೆಗಳನ್ನು ಹೊಂದಿರುವುದಿಲ್ಲ. ಅವಳ ನಿರಪೇಕ್ಷ ಪ್ರೀತಿ ಗೌರೀಶನ ಅನುಮಾನವನ್ನು ಪರಿಹರಿಸುತ್ತದೆ. ಗೌರೀಶನು ತನ್ನ ಮುಕ್ತಿಯ ದಾರಿಯನ್ನು ಡಾಲಿಯಲ್ಲಿಯೇ ಕಂಡುಕೊಳ್ಳುತ್ತಾನೆ. ಡಾಲಿಯು ಅಂತಿಮವಾಗಿ ಗೌರೀಶನೊಂದಿಗೆ ಆತನ ಸಂಗಾತಿಯಾಗಿ ತೆರಳಲು ಒಪ್ಪಿಕೊಳ್ಳುತ್ತಾಳೆ.

ಇನ್ನು ಮೇರಿ ಮತ್ತು ರೋಹಿಣಿಯರು ಶ್ರೀಕಾಂತನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಶ್ರೀಕಾಂತನು ಅಸಹಜ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾನೆ ಎಂಬುದು ಸತ್ಯೇಂದ್ರನ ಆರೋಪವಾಗಿರುತ್ತದೆ. ಆದರೆ ಶ್ರೀಕಾಂತನಲ್ಲಿ ಅಡಗಿದ್ದ 'ಆ ಶಕ್ತಿ'ಯನ್ನು ಎಚ್ಚರಿಸುವಲ್ಲಿ ಮೇರಿ ಪ್ರಮುಖಳಾಗುತ್ತಾಳೆ. ಶ್ರೀಕಾಂತ ವಾನಲೆಸ್‌ವಾಡಿಗೆ ಚಿಕಿತ್ಸೆಗೆಂದು ಹೋಗಿದ್ದಾಗ ಅಲ್ಲಿ ನರ್ಸಾಗಿದ್ದ ಮೇರಿಯ ಪರಿಚಯವಾಗುತ್ತದೆ. ಅವಳ ಪರಿಚಯದ ನಂತರ ಶ್ರೀಕಾಂತನಿಗೆ ಸಹಜ ಲೈಂಗಿಕ ಅನುಭವವಾಗುತ್ತದೆ. (ಪು. ೧೯೧) ಆದರೆ ಅದರಲ್ಲಿ ಜ್ವಲಂತ ಪ್ರಜ್ಞೆಯ ಪ್ರತಿಫಲವಾಗಿ ಶ್ರೀಕಾಂತ ತೀಕ್ಷ್ಣ ಹಾಗೂ ಸೂಕ್ಷ್ಮ ವೇದನೆಯನ್ನು ಅನುಭವಿಸುತ್ತಾನೆ. "ಆದಷ್ಟು ಬೇಗ ಧಾರವಾಡಕ್ಕೆ ಹಿಂದಿರುಗಿ ಹೋಗಿ ತನ್ನ ಕೋಣೆಯ ಅಬಾಧಿತ ಏಕಾಂತತೆಯಲ್ಲಿ ಈ ಹಸಿದ ಹುಲಿಯನ್ನು ಕೊಂದು ಮುಕ್ತನಾಗಬೇಕು" (ಪು. ೧೯೮) ಎಂಬ ಶ್ರೀಕಾಂತನ ಮಾತುಗಳಲ್ಲಿ ನಾವು ಆತನ ಮನಸ್ಥಿತಿಯನ್ನು ತಿಳಿಯಬಹುದಾಗಿದೆ.

ಹೀಗೆ ಜಾಗೃತಗೊಂಡ 'ಆ ಬೇರೊಬ್ಬ'ನ ಪ್ರಭಾವ ಶ್ರೀಕಾಂತನ ಮೇಲೆ ಆಗಿರುತ್ತದೆ. 'ಆ ಬೇರೊಬ್ಬ'ನ ಪ್ರಭಾವ ತನ್ನನ್ನು ಸಂಪೂರ್ಣವಾಗಿ ನುಂಗಿರುವುದು ರೋಹಿಣಿಯ ಮೂಲಕ ಆತನ ಗಮನಕ್ಕೆ ಬರುತ್ತದೆ (ಪು. ೨೧೪). ಆದರೆ ಶ್ರೀಕಾಂತನಿಗೆ 'ಆ ಬೇರೊಬ್ಬ'ನ ಪ್ರಭಾವ ಅಸಹ್ಯವಾದಂತೆನಿಸುತ್ತದೆ. ಹೀಗಾಗಿ ಆತ ತನ್ನ ಜೀವನವನ್ನು ಕೊನೆಗೊಳಿಸಿಕೊಳ್ಳುವ ತೀರ್ಮಾನಕ್ಕೆ ಬರುತ್ತಾನೆ. ಆದರೆ ನಾವು ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮೇರಿ ಮತ್ತು ರೋಹಿಣಿಯರಿಬ್ಬರೂ ಕೂಡ ಶ್ರೀಕಾಂತನಲ್ಲಿ 'ಆ ಇನ್ನೊಬ್ಬ' ನಿದ್ದಾನೆಂಬ ಅರಿವನ್ನು ಮೂಡಿಸುವಲ್ಲಿ ಸಫಲರಾಗುತ್ತಾರೆ.

ಇನ್ನು ಗೌರೀಶನ ತಾಯಿ ತನ್ನ ಮಗ ತನ್ನಿಂದ ಸಂಪೂರ್ಣವಾಗಿ ದೂರವಾಗುತ್ತಾನೆ ಎಂದು ತಿಳಿದ ಮೇಲೆ ತನ್ನ ಜೀವನದ ಬಹುಮುಖ್ಯ ಸಮಸ್ಯೆಯೊಂದನ್ನು ಮಗನ ಮುಂದಿಡುತ್ತಾಳೆ. ಗೌರೀಶನ ತಂದೆಗೆ 'ಚಂದ್ರಿ' ಎಂಬುವವಳೊಂದಿಗೆ ಸಂಬಂಧವಿರುತ್ತದೆ. ಆದರೆ ಜೀವನದಲ್ಲಿ ಒಮ್ಮೆಯೂ ಕೂಡ ಈ ಬಗ್ಗೆ ಮಾತನಾಡದ ಅವಳು ಮಗ ನೈರೋಬಿಗೆ ಹೊರಟು ನಿಂತಾಗ ಅವನ ಗಮನಕ್ಕೆ ಈ ವಿಷಯವನ್ನು ತರುತ್ತಾಳೆ. "ಆ ಮೂಲಕ ಅವಳು ಸಜೀವಳಾದಂತೆ ತೋರುತ್ತಾಳೆ". "ಗೌರಿ ನೀನು ಇಲ್ಲೇ ಎಲ್ಲಾದರೂ ಸಮೀಪದ ಊರಲ್ಲಿ ಇದ್ದಿದ್ದರೆ ನಿನ್ನ ಕಡೆಗಾದರೂ ಬಂದು ಇರಬಹುದಿತ್ತು" (ಪು. ೨೨೮) ಎಂಬ ಮಾತುಗಳಲ್ಲಿ ಗಂಡ, ಹೆಂಡತಿ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ. ಶ್ರೀಕಾಂತನ ತಾಯಿಯಾದ ಸರೂಬಾಯಿ ತನ್ನ ಮಕ್ಕಳು ಮಾಡಿದ ಎಲ್ಲಾ ತಪ್ಪುಗಳನ್ನು ಮನ್ನಿಸುವ ಗುಣವುಳ್ಳವಳು.

ಮುಕ್ತಿ ಕಾದಂಬರಿಯಲ್ಲಿ ಸಾಮಾನ್ಯ ನಗರಗಳು ಮತ್ತು ಮಹಾನಗರಗಳು ವ್ಯಕ್ತಿಯ ಜೀವನದ ಮೇಲೆ ಯಾವ ರೀತಿಯಾಗಿ ತಮ್ಮ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ಗ್ರಹಿಸಬಹುದಾಗಿದೆ. ಸಿರ್ಸಿಯಿಂದ ಧಾರವಾಡಕ್ಕೆ ಬಂದ ಗೌರೀಶನಿಗೆ ಧಾರವಾಡದ ವಾತಾವರಣ ಅಪರಿಚಿತವೆಂದೇನೂ ಅನ್ನಿಸುವುದಿಲ್ಲ. ಏಕೆಂದರೆ ಅಲ್ಲಿ ಅವನಿಗೆ ಸತ್ಯೇಂದ್ರನ ಮೂಲಕ ಕಾಲೇಜಿನಲ್ಲಿ ಹಲವಾರು ವ್ಯಕ್ತಿಗಳ ಪರಿಚಯವಾಗಿರುತ್ತದೆ. ಶ್ರೀಕಾಂತ ಮತ್ತು ಕಾಮಿನಿಯರು ಗೌರೀಶನ ಗತ ಜೀವನವನ್ನು ಸಂಪೂರ್ಣವಾಗಿ ಪ್ರಭಾವಿಸಿರುತ್ತಾರೆ. ಗೌರೀಶನಿಗೆ ತಾನು ಭೂತದ ಅವರ ನೆನಪಿನಿಂದ

ವಿಮುಖವಾಗುವುದು ಸಾಧ್ಯವಾಗುವುದೇ ಇಲ್ಲವೇನೋ ಎಂದು ಆಲೋಚಿಸುತ್ತಿರುತ್ತಾನೆ. ಮುಂಬಯಿಗೆ ಬಂದ ಗೌರೀಶನಿಗೆ ಮುಂಬಯಿಯಲ್ಲಿ ಜೀವನವು ಒಂದು ರೀತಿಯ ಯಾಂತ್ರಿಕತೆಯಿಂದ ಕೂಡಿದಂತೆ ಭಾಸವಾಗುತ್ತದೆ. ಇಲ್ಲಿನ ಜನಸಮುದ್ರ ಗೌರೀಶನ ತಲೆಯಲ್ಲಿ ಬಿರುಗಾಳಿಯನ್ನು ಎಬ್ಬಿಸುತ್ತದೆ. ಮಹಾನಗರಗಳು ಜೀವನವನ್ನು ವಸ್ತುನಿಷ್ಠವಾಗಿ ನೋಡುವ ದೃಷ್ಟಿಯನ್ನು ಕಲಿಸಿಕೊಡುತ್ತದೆ. ಎಲ್ಲಾ ಜನರೂ ಅಲ್ಪರು, ಕ್ಷುಲ್ಲಕರು, ಯಕಶ್ಚಿತರು – ಎಲ್ಲರೂ ಸಮುದ್ರದ ತೆರೆಗಳಂತೆ. ಸಮುದ್ರದ ತೆರೆಗಳನ್ನು ನಿರ್ವಿಕಾರತೆಯಿಂದ ನೋಡುವಂತೆ ಅಲ್ಲಿ ಜನರನ್ನೂ ನಿರ್ವಿಕಾರತೆಯಿಂದ, ನಿರ್ಲಿಪ್ತತೆಯಿಂದ ನೋಡಬೇಕು. ಸಮುದ್ರದ ತೆರೆಗಳಂತೆ ಬರುತ್ತಿರುತ್ತಾರೆ. ಹೋಗುತ್ತಿರುತ್ತಾರೆ. ಅಲ್ಲದೆ ಡಾಲಿ ಮತ್ತು ಗೌರೀಶನ ನಡುವಿನ ಸಂಬಂಧ ಕೇವಲ ಮುಂಬಯಿಯಲ್ಲಿ ಮಾತ್ರ ಸರಾಗವಾಗಿ, ನಿರಾಗಸವಾಗಿ, ತಿಳಿಯಾಗಲು ಸಾಧ್ಯ. ಸಣ್ಣ ಊರುಗಳಲ್ಲಿದ್ದರೆ ಇವರಿಬ್ಬರ ಸಂಬಂಧ ಜನರ ಹರಕು ಬಾಯಿಯಲ್ಲಿ ಸಿಕ್ಕಿ ಹೊಲಸಾಗಬಹುದಿತ್ತು.

ಇನ್ನು ಮುಕ್ತಿಯ ಬಗ್ಗೆ ಹೇಳುವುದಾದರೆ ಮುಕ್ತಿ ಅಂಶಕ್ಕೆ ಒಬ್ಬೊಬ್ಬರ ಅಭಿಪ್ರಾಯವೂ ಭಿನ್ನವಾಗಿದೆ. ಸತ್ಯೇಂದ್ರನ ಪ್ರಕಾರ ಯಾವುದೇ ಒಬ್ಬ ವ್ಯಕ್ತಿ 'ಮುಕ್ತಿ'ಯನ್ನು ಅರಸುತ್ತಾ ಬೇರೆ ಎಲ್ಲಿಗೋ ತೆರಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಜೀವವನ್ನು, ಆತ್ಮವನ್ನು ಇಲ್ಲಿದ್ದುಕೊಂಡೆ ಎದುರಿಸಬೇಕಾಗುತ್ತದೆ. "ಎಲ್ಲಿ ಹೋದರೇನು ನಿನ್ನ ಆತ್ಮದಿಂದ ನೀನು ದೂರ ಹೋಗಲಾರೆ...... ಸ್ಮರಣ ಇರುವ ತನಕ ಆದದ್ದನ್ನು ಮರೆಯುವುದು ಸಾಧ್ಯವಿಲ್ಲ" (ಪು. ೨).

ಆದರೆ ಶ್ರೀಕಾಂತನ ಪ್ರಕಾರ "ಮುಕ್ತಿಯು ಸಾವಿನಲ್ಲಿದೆ" (ಪು. ೨೧೨). ಆದರೆ ಗೌರೀಶನ ಪ್ರಕಾರ ಮುಕ್ತಿ ಸುಲಭವಾದ ಮಾತಲ್ಲ, ನಿಸ್ವಾರ್ಥದ ವಿಷಯವಲ್ಲ. ಮುಕ್ತಿಯ ದಾರಿಯನ್ನು ಶೋಧಿಸಲು ಹೊರಡುವುದರಲ್ಲಿಯೂ ಕೂಡ ಒಂದು ಬಗೆಯ ಸ್ವಾರ್ಥವಿದೆ (ಪು. ೧೮೩). ಅಲ್ಲದೆ ಡಾಲಿಯ ಎದುರಿಗೆ ತಿಳಿಯಾಗಿ, ನಿರರ್ಗಳವಾಗಿ ಹರಿಯುವುದರಲ್ಲಿಯೆ ತನ್ನ ಮುಕ್ತಿ ಇದೆ (ಪು. ೨೪೫) ಎಂದು ಆತ ಪರಿಭಾವಿಸುತ್ತಾನೆ.

ಈ ಹಿನ್ನೆಲೆಯಲ್ಲಿ "ಗೌರೀಶನಿಗೆ ಭೂತದ ಬಂಧನದಿಂದ ಬಿಡುಗಡೆ ಮುಕ್ತಿಯಾದರೆ, ರಕ್ತದ ಸತ್ಯವನ್ನು ಒಪ್ಪದ ಆಧ್ಯಾತ್ಮವಾದಿ ಶ್ರೀಕಾಂತನಿಗೆ ಅದು ಸಾವಿನಲ್ಲಿಯೇ ದೊರಕುವ ಅನುಭವ, ಸತ್ಯೇಂದ್ರ– ಸುಶೀಲೆಯರು, ಜೀವನವನ್ನು ಸರಳಗೊಳಿಸಿ ಬದುಕಿನ ಪ್ರಶ್ನೆಯನ್ನು ಬಗೆಹರಿಸಿಕೊಂಡರೆ, ವೈಚಾರಿಕ ಗೊಂದಲವನ್ನೇ ಅರಿಯದ ಸರಳಾಬಾಯಿ ಸ್ವಭಾವ ಸಹಜವಾದ ಸಹನೆಯಿಂದ ಅದನ್ನು ಸಾಧಿಸುತ್ತಾಳೆ. ಕ್ರಿಶ್ಚಿಯನ್ ನಂಬುಗೆಗಳಿಂದ ಸ್ವಯಂ ಪೂರ್ಣಳಾದ ಡಾಲಿಗೆ ಮುಕ್ತಿ ಪ್ರೀತಿಯಲ್ಲಿ, ಕ್ಷಮೆಯಲ್ಲಿ ಕಂಡು ಬಂದರೆ ತನಗೆ ತಾನೇ ಬಲಿಯಾದ ಕಾಮಿನಿಗೆ ಮುಕ್ತಿಯ ದ್ವಾರಗಳು ತೆರೆಯುವುದೇ ಇಲ್ಲ. ಹೀಗೆ ತನ್ನ ಪ್ರಮುಖ ಪಾತ್ರಗಳ ಮೂಲಕ ಸಾಂಕೇತಿಕತೆಯನ್ನು ಸಾಧಿಸುವ ಮೂಲಕ ಕಾದಂಬರಿ ನಾಯಕನ ಆತ್ಮಕತೆಯಾಗಿಯೂ, ವಸ್ತುನಿಷ್ಠತೆಯನ್ನು ಕಾಯ್ದುಕೊಳ್ಳುತ್ತದೆ" ಎಂದು ಜಿ.ಎಸ್. ಆಮೂರರವರು ತಮ್ಮ 'ಶಾಂತಿನಾಥ ದೇಸಾಯಿ' ಎಂಬ ಕೃತಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

೫.೧.೩ ಮುಕ್ತಿ ಮತ್ತು ದಿವ್ಯ

ಸಮಕಾಲೀನ ಲೇಖಕರೊಂದಿಗೆ ದೇಸಾಯಿಯವರನ್ನು ನೋಡುವ ಸಂದರ್ಭದಲ್ಲಿ ನಾನು ಪ್ರಾಸ್ತಾವಿಕವಾಗಿ ಈ ಲೇಖನದಲ್ಲಿ ಯು.ಆರ್. ಅನಂತಮೂರ್ತಿಯವರ 'ದಿವ್ಯ' (೨೦೦೧) ಮತ್ತು ದೇಸಾಯಿಯವರ 'ಮುಕ್ತಿ' ಕಾದಂಬರಿಗಳನ್ನು ತೆಗೆದುಕೊಂಡಿದ್ದೇನೆ.

ದೇಸಾಯಿ ಮತ್ತು ಅನಂತಮೂರ್ತಿ ಇಬ್ಬರೂ ಕೂಡ ನವ್ಯ ಸಾಹಿತ್ಯದ ಹಿನ್ನೆಲೆಯಲ್ಲಿಯೇ ಬಂದಂತಹವರು. ನವ್ಯ ಸಾಹಿತ್ಯದ ಪ್ರಮುಖ ಅಂಶಗಳಾದ ಪರಕೀಯತೆ, ಪ್ರಾಮಾಣಿಕ ಮತ್ತು ಅಪ್ರಾಮಾಣಿಕ ಅಸ್ತಿತ್ವ, ಬೇಸರ ಮತ್ತು ಆನಂದ, ಮೃತ್ಯು ಪ್ರಜ್ಞೆ, ದೇಹ ಮತ್ತು ಲೈಂಗಿಕತೆ, ಆತಂಕ, ಸ್ವಾತಂತ್ರ್ಯ, ಆಯ್ಕೆ ಮತ್ತು ನಿರ್ಧಾರಗಳ ಹಿನ್ನೆಲೆಯಲ್ಲಿ ದೇಸಾಯಿಯವರ 'ಮುಕ್ತಿ' ಹಾಗೂ ಅನಂತಮೂರ್ತಿ ಯವರ 'ದಿವ್ಯ' ಕಾದಂಬರಿಗಳನ್ನು ವಿಮರ್ಶಿಸುವ ಪ್ರಯತ್ನ ನಡೆಸಿದ್ದೇನೆ.

'ಮುಕ್ತಿ'ಯ ನಾಯಕನಾದ ಗೌರೀಶ ದೂರದ ನೈರೋಬಿಗೆ ಕೆಲಸ ಮೇಲೆ ಹೋಗುತ್ತಿರುವುದಾಗಿ ಹೇಳಿದರೂ ಕೂಡ ಅವನು ಒಂದು ರೀತಿಯಿಂದ ಓಡಿಹೋಗಬೇಕೆಂದು ತೀರ್ಮಾನಿಸಿರುತ್ತಾನೆ. "ದೂರದ ಪರದೇಶದಲ್ಲಿ ಯಾರ ಬಂಧನಕ್ಕೂ ಒಳಗಾಗದೆ ಶುದ್ಧ ಅಪರಿಚಿತನಂತೆ ನಿರ್ವಿಕಾರವಾಗಿ ಬದುಕಲು ಹೋಗಬೇಕಾಗಿದೆ" (ಪು. ೨) ಎಂದು ಹೇಳುವಲ್ಲಿ ಅವನಲ್ಲಿ ಮೂಡಿರುವ ಪರಕೀಯತೆಯ ಭಾವನೆಯನ್ನು ಗುರುತಿಸಬಹುದಾಗಿದೆ. ಅಂತೆಯೇ ಅನಂತಮೂರ್ತಿಯವರ 'ದಿವ್ಯ' ಕಾದಂಬರಿಯಲ್ಲಿ ಮಿಂಗೇಲಿಯ ಪಾತ್ರದಲ್ಲಿ ಗುರುತಿಸಬಹುದು. ಸಾಹುಕಾರ ಮಂಜಯ್ಯನವವರ ಮಗಳು ವಿಮಲಾ ವಿಧವೆಯಾಗಿ ತಂದೆ ಮನೆಗೆ ಹಿಂದಿರುಗಿ ಬಂದ ನಂತರ ಪ್ರೀತಿಸಿ ಮದುವೆಯಾದ ಮಿಂಗೇಲಿ ಮಂಜಯ್ಯನವರ ಕಾರಿನ ಡ್ರೈವರ್ ಆಗಿರುತ್ತಾನೆ. ಮದುವೆಯಾದರೂ ಕೂಡ ಮಂಜಯ್ಯನವರ ಮನೆಯಲ್ಲಿ ಎಲ್ಲಾ ಕಡೆಯೂ ಓಡಾಡುವ ಸ್ವಾತಂತ್ರ್ಯ ಅವನಿಗೆ ಇರುವುದಿಲ್ಲ (ಪು. ೧೨೯). ಮಂಜಯ್ಯನವರು ಮರಣ ಹೊಂದುವವರೆವಿಗೂ ಕೂಡ ಮಿಂಗೇಲಿ ಈ ಪರಕೀಯ ಭಾವನೆಯನ್ನು ಅನುಭವಿಸಬೇಕಾಗಿರುತ್ತದೆ.

ಗೌರೀಶ ಕಾಮಿನಿಯನ್ನು ಮನಸಾರೆ ಪ್ರೀತಿಸುತ್ತಿರುತ್ತಾನೆ. ಆದರೆ ಅವಳು ತನ್ನ ಪ್ರೀತಿಯನ್ನು ತಿರಸ್ಕರಿಸಿದಾಗ ಅವನ ಮನಸ್ಸು ಕಾಮಿನಿಗಾಗಿ ಹಂಬಲಿಸುತ್ತಿರುತ್ತದೆ. 'ನೀನೇ ಬೇಕು' ಎಂದು ಕೂಗಿ ಹೇಳುತ್ತದೆ. ಆದರೆ ಅವನ ಆದರ್ಶದ ಕಲ್ಪನೆಯ ಕಾಮಿನಿ ಒಂದು ಪವಿತ್ರ ನಕ್ಷತ್ರವಾಗಿರುತ್ತಾಳೆ. ಗೌರೀಶನಿಂದ ತಿರಸ್ಕೃತಳಾದ ಕಾಮಿನಿ ಇತರರಿಂದ ಮೋಸಹೋಗುತ್ತಾಳೆ. ತನ್ನ ಈ ಸ್ಥಿತಿಗೆ ಗೌರೀಶನೇ ಕಾರಣ ಎಂದು ಹೇಳಿದಾಗ ಅದನ್ನು ಒಪ್ಪಿಕೊಳ್ಳುವ ಪ್ರಾಮಾಣಿಕ ಮನಸ್ಸು ಗೌರೀಶನದ್ದಾಗಿರುವುದಿಲ್ಲ. ಅಲ್ಲದೆ ಕಾಮಿನಿ ತನ್ನ ತಪ್ಪುಗಳನ್ನು ತಿದ್ದಿಕೊಂಡು "ಗೌರೀಶ, ಈಗ ನಿನ್ನಲ್ಲಿ ಸಾಮರ್ಥ್ಯ ಬಂದಿದೆ. ನೀನು ಹೋದಲ್ಲಿ ಬರುವೆ, ನೀನು ಹೇಳಿದ್ದು ಮಾಡುವೆ.... ನಿನ್ನ ದಾಸಿಯಾಗಿ, ನನ್ನನ್ನು ಉಳಿಸು – ಶ್ರೀಕಾಂತನ ಸಲುವಾಗಿಯಾದರೂ..." ಎಂದು ಕೇಳಿಕೊಂಡಾಗಲೂ ಕೂಡ "ವಿಚಾರ ಮಾಡಬೇಕು" (ಪು. ೨೩೮) ಎಂಬ ನೆಪವನ್ನು ಹೇಳುತ್ತಾನೆ. ಇಲ್ಲಿ ಕಾಮಿನಿಯು ತನಗೆ ಇಷ್ಟವಿಲ್ಲ ಎಂದು ಹೇಳುವ ಪ್ರಾಮಾಣಿಕ ಮನಸ್ಥಿತಿಯನ್ನು ಮರೆಮಾಚುತ್ತಾನೆ. 'ದಿವ್ಯ'ದಲ್ಲಿ ಮಂಜಯ್ಯನವರು ಗಾಂಧೀವಾದಿ, ಶಿಸ್ತಿನ ವ್ಯಕ್ತಿ ಎಂದು

ಹೆಸರಾಗಿರುತ್ತಾರೆ. ಆದರೆ ಗಣಪಯ್ಯನನ್ನು ಆತನ ಮಗಳ ಹತ್ಯೆಯ ಕೇಸಿನಿಂದ ಖುಲಾಸೆಗೊಳಿಸಬೇಕೆಂಬ ಉದ್ದೇಶದಿಂದ ಕೋರ್ಟಿನಲ್ಲಿ ಸುಳ್ಳನ್ನು ಹೇಳುತ್ತಾರೆ. ಆದರೆ ಅದು ತಮ್ಮ ಗಮನಕ್ಕೆ ಬರುತ್ತಿದ್ದಂತೆಯೇ ಕುಸಿದು ಬೀಳುತ್ತಾರೆ. (ಪು. ೧೧೮) ಗಣಪಯ್ಯ ತನ್ನ ಅಪ್ರಾಮಾಣಿಕ ಜೀವನಕ್ಕಾಗಿ ಪ್ರಾಮಾಣಿಕರಾದ ಮಂಜಯ್ಯನವರ ಜೀವನವನ್ನು ಬಲಿ ತೆಗೆದುಕೊಳ್ಳುತ್ತಾನೆ.

'ಮುಕ್ತಿಯಲ್ಲಿ' ಬೇಸರ ಮತ್ತು ಆನಂದದ ಭಾವವನ್ನು ನಾವು ಗೌರೀಶನ ಪಾತ್ರದ ಮೂಲಕ ಗುರುತಿಸಬಹುದಾಗಿದೆ. ಗೌರೀಶ ಕೆಲಸಕ್ಕೆಂದು ಮುಂಬಯಿಗೆ ಬಂದ ಹೊಸತರಲ್ಲಿ ಪ್ರೇಮ ವೈಫಲ್ಯದಿಂದಾಗಿ ಬೇಸರವನ್ನು ಅನುಭವಿಸುತ್ತಿರುತ್ತಾನೆ. ದುಃಖಾಂತ ನಾಟಕದ ನಾಯಕನಂತೆ ವರ್ತಿಸುತ್ತಿರುತ್ತಾನೆ. ನಂತರ ಡಾಲಿಯೊಂದಿಗಿನ ಸ್ನೇಹದಿಂದ, ಲೈಂಗಿಕ ಸಂಪರ್ಕದಿಂದ ತನ್ನ ಬೇಸರವನ್ನು ಮರೆಯುತ್ತಾನೆ. (ಪು. ೩೩) 'ದಿವ್ಯ'ದಲ್ಲಿನ ಗೌರಿಯು ತನಗೆ ಬೇಸರವಾದಾಗಲೆಲ್ಲ ತನ್ನ ಬೇಸರವನ್ನು ಕಳೆಯುವ ಸಲುವಾಗಿ ಗುಡ್ಡಗಳ ಕಡೆಗೆ ತಿರುಗಾಡಲು ಹೋಗುತ್ತಿರುತ್ತಾಳೆ ಆ ಗುಡ್ಡ ಬೆಟ್ಟಗಳ ಹಸಿರು ಸೌಂದರ್ಯವನ್ನು ಸವಿಯುತ್ತಾ ತಾನೇ ಅಲ್ಲಿನ ಸರ್ವಸ್ವವಾಗಿ ಬಿಟ್ಟಂತೆ ಪರಮ ಸಮಾಧಾನವನ್ನು ಹೊಂದುತ್ತಿರುತ್ತಾಳೆ (ಪು. ೫೭).

'ಮೃತ್ಯುಪ್ರಜ್ಞೆ' ದೇಸಾಯಿಯವರ ಮುಕ್ತಿ ಕಾದಂಬರಿಯಲ್ಲಿ ಹೆಚ್ಚು ಕಂಡು ಬರುತ್ತದೆ. ಶ್ರೀಕಾಂತ ಟಿ.ಬಿ ಕಾಯಿಲೆಯಿಂದ ನರಳುತ್ತಿರುತ್ತಾನೆ. ಅವನಿಗೆ ಕಾಯಿಲೆ ಪ್ರಾರಂಭದಾದ ಒಂದೆರಡು ವರ್ಷಗಳ ನಂತರ ಮೇರಿ ಮತ್ತು ರೋಹಿಣಿಯರ ಮೂಲಕ ಆತನಲ್ಲಿದ್ದ 'ಆ ಇನ್ನೊಬ್ಬ' ಜಾಗೃತಗೊಂಡುದನ್ನು ಗುರುತಿಸುತ್ತಾನೆ. ಆ ಮೂಲಕ "ತನ್ನ ವ್ಯಕ್ತಿತ್ವದ ಬಗ್ಗೆ ತಾನೇ ಅಸಹ್ಯ ಪಟ್ಟುಕೊಳ್ಳುತ್ತಾನೆ. ಜೀವನದ ಶೂನ್ಯತೆಗಿಂತ ಮರಣದ ಶೂನ್ಯತೆ ಲೇಸು" (ಪು. ೨೧೫) ಎಂದು ನಿರ್ಧರಿಸಿದ ಆತ ಸ್ಲೀಪಿಂಗ್ ಟ್ಯಾಬ್ಲೆಟ್ಸ್‌ಗಳನ್ನು ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಶ್ರೀಕಾಂತನ ಸಾವು ಗೌರೀಶನನ್ನು ಅಧೀರನನ್ನಾಗಿ ಮಾಡುತ್ತದೆ. 'ದಿವ್ಯ'ದಲ್ಲಿ ಗಂಗೆಯು ಜಿಂಕೆಯಂತೆ ಕಾಣುತ್ತಿದ್ದ ಪ್ರಾಣಿಯನ್ನು ಮನಸ್ಸಿಗೆ ತುಂಬಾ ಹಚ್ಚಿಕೊಂಡಿರುತ್ತಾಳೆ. ಒಂದು ದಿನ ಇದ್ದಕ್ಕಿದ್ದಂತೆ ಆ ಪ್ರಾಣಿ ಮಾಯವಾಗಿ ಹೋಗುತ್ತದೆ. ಇದರಿಂದ ತೀವ್ರ ಆಘಾತಕ್ಕೆ ಒಳಗಾದ ಗಂಗೆ ಊಟ ಬಿಡುತ್ತಾಳೆ. ಎರಡು ದಿನಗಳಲ್ಲೇ ಅವಳ ಕಣ್ಣುಗಳು ಕೆಂಪಾಗಿ ಮೈ ಸುಡತೊಡಗುತ್ತದೆ. ಕೊನೆಗೆ ಏರಿದ ಜ್ವರದಿಂದಾಗಿ ಚೇತರಿಸಿಕೊಳ್ಳದ ಗಂಗೆ ಮರಣವನ್ನು ಹೊಂದುತ್ತಾಳೆ. ಅವಳ ಮರಣ ಗೌರಿಯನ್ನು ಎಲ್ಲರಿಗೂ ಸಮಸ್ಯೆಯಾಗುವಂತೆ ಮಾಡುತ್ತದೆ (ಪು. ೨೧).

ದೇಸಾಯಿಯವರ 'ಮುಕ್ತಿ'ಯಲ್ಲಿ ಲೈಂಗಿಕತೆಯು ಒಂದು ಸಹಜ ಕ್ರಿಯೆಯಾಗಿ ಮೂಡಿ ಬಂದಿದೆ. ಡಾಲಿ ಮತ್ತು ಗೌರೀಶರ ನಡುವಿನ ಸಂಬಂಧವನ್ನು ಉದಾಹರಿಸುವುದಾದರೆ ಗೌರೀಶನು ಡಾಲಿಯ ಪ್ರೀತಿಯಲ್ಲಿ ಅಮೃತತ್ವದ ಅನುಭವವನ್ನು ಪಡೆಯುತ್ತಾನೆ. ಆದರೆ ಅದೇ ಕಾಮಿನಿ ಎಲ್ಲರಿಂದಲೂ ಮೋಸ ಹೋಗುತಾಳೆ. ಆದರೂ ಕೂಡ ತನ್ನ ತಪ್ಪನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. 'ದಿವ್ಯ'ದಲ್ಲಿ ಮಂಜಯ್ಯನವರ ಮಗಳು ವಿಮಲಾ ಮದುವೆಯಾದ ಒಂದು ವರ್ಷದಲ್ಲಿಯೇ ವಿಧವೆಯಾಗಿ ತಂದೆ ಮನೆಗೆ ಹಿಂದಿರುಗುತ್ತಾಳೆ. ಹೀಗೆ ಬಂದ ವಿಮಲಾ ತನ್ನ

ಮನೆಯಲ್ಲಿಯೇ ಡ್ರೈವರ್ ಆಗಿದ್ದ ಮಿಂಗೇಲಿಯನ್ನು ಪ್ರೀತಿಸತೊಡಗುತ್ತಾಳೆ. ಇವರಿಬ್ಬರ ನಡುವಿನ ದೈಹಿಕ ಸಂಘರ್ಷದಿಂದಾಗಿ ವಿಮಲಾ ಗರ್ಭಿಣಿಯಾಗುತ್ತಾಳೆ. ಮಿಂಗೇಲ್ ಅದನ್ನು ತೆಗೆಸುವಂತೆ ಹಠ ಮಾಡುತ್ತಾನೆ. ಆದರೆ ವಿಮಲಾ ತನ್ನ ಅಣ್ಣನ ಸಲಹೆಯ ಮೇರೆಗೆ ಮಗುವನ್ನು ಉಳಿಸಿಕೊಳ್ಳುತ್ತಾಳೆ. ಅಲ್ಲದೇ ತನಗೆ ಹೆರಿಗೆಯಾಗುವವರೆಗೆ ಉನ್ನತ ವಿಧ್ಯಾಭ್ಯಾಸಕ್ಕಾಗಿ ಹೋಗುತ್ತಿರುವುದಾಗಿ ಹೇಳಿ ಊರಿಂದ ಹೊರಡುತ್ತಾಳೆ. ಮಗುವಿನ ಜನನವಾದ ನಂತರ ಯಾರಿಗೂ ಗೊತ್ತಾಗದಂತೆ ಆ ಮಗುವನ್ನು ಅಕ್ಕುವಿನ ಮನೆಯಲ್ಲಿ ಬಿಡುತ್ತಾಳೆ. ಇನ್ನು ಜಲಜಳೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದ ಕರಿಯನನ್ನು ಜಲಜಳ ಗಂಡ ಶೀನಪ್ಪ ಹತ್ಯೆ ಮಾಡುತ್ತಾನೆ. ಗಣಪಯ್ಯನ ವಿಧವಾ ಮಗಳು ಸರಸ್ವತಿ ಶಾಲೆಗೆ ಹೋಗುತ್ತಿರುತ್ತಾಳೆ. ಅಲ್ಲಿಯೇ ಮಾಸ್ತರನಾಗಿದ್ದ ದುರುಗಪ್ಪನ ಮೇಲೆ ಪ್ರೀತಿಯಾಗುತ್ತದೆ. ಇದೇ ಪ್ರೀತಿಯಲ್ಲಿ ಮೈಮರೆತ ಸರಸ್ವತಿ ಗರ್ಭಿಣಿಯಾಗುತ್ತಾಳೆ. ವಿಷಯ ತಿಳಿದ ದುರುಗಪ್ಪ "ಇಬ್ಬರೂ ಸೇರಿ ಊರು ಬಿಡೋಣ"ವೆಂದು ಯೋಜನೆ ಹಾಕುತ್ತಾನೆ. ಆದರೆ ವಿಷಯ ತಿಳಿದ ಗಣಪಯ್ಯ ದುರುಗನನ್ನು ಕೊಲೆ ಮಾಡಿಸುತ್ತಾನೆ. ಈ ರೀತಿಯಾಗಿ 'ದಿವ್ಯ'ದಲ್ಲಿ ಲೈಂಗಿಕತೆಯ ಕಾರಣದಿಂದ ಅನಾಹುತಗಳ ಸರಮಾಲೆಯನ್ನೇ ತಂದಿಡುತ್ತದೆ. ಅನಂತಮೂರ್ತಿಯವರ 'ದಿವ್ಯ' ಕಾದಂಬರಿಯ ಪರಿಸರ ಶಿವಮೊಗ್ಗ, ಸುತ್ತಮುತ್ತಲಿನ ಪರಿಸರವಾದ್ದರಿಂದ ಮೇಲಿನ ಎಲ್ಲಾ ಘಟನೆಗಳಿಂದ ಲೈಂಗಿಕತೆ ಬಗ್ಗೆ ಮುಕ್ತತೆಯನ್ನು ಕಾಣಲಾಗುವುದಿಲ್ಲ. ಆದರೆ ಮುಕ್ತಿಯಲ್ಲಿ ಗೌರೀಶ ಡಾಲಿಯೊಂದಿಗೆ ಸಂಬಂಧ ಹೊಂದಿದಾಗ "ಮುಂಬಯಿಯಲ್ಲಿ ಮಾತ್ರ ಇಂತಹ ಸಂಬಂಧ ಸಾಧ್ಯ. ಸಣ್ಣ ಊರುಗಳಲ್ಲಾಗಿದ್ದರೆ ನಮ್ಮಿಬ್ಬರ ನಡುವಿನ ಸಂಬಂಧ ಜನರ ಬಾಯಿಗೆ ಸಿಕ್ಕು ಹೊಲಸಾಗುತ್ತಿತ್ತೇನೋ" ಎಂದು ಯೋಚಿಸುವ ಮಾತುಗಳು ಇಲ್ಲಿ ಅತ್ಯಂತ ಸೂಕ್ತ ಎನಿಸುತ್ತವೆ.

ಗೌರೀಶ ತನ್ನೆಲ್ಲಾ ಭೂತದ ಬಂಧನಗಳಿಂದ ಮುಕ್ತನಾಗಿ ನೈರೋಬಿಗೆ ಹೋಗಬೇಕೆಂದು ನಿರ್ಧರಿಸಿದಾಗ ತನ್ನ ಗತ ಜೀವನದ ಪ್ರಮುಖ ಕರ್ತಾರರಾದ ಶ್ರೀಕಾಂತ ಮತ್ತು ಕಾಮಿನಿಯರಿಂದ ತನಗೆ ಬಿಡುಗಡೆ ದೊರೆಯುವುದರ ಬಗ್ಗೆ ಅನುಮಾನ ಹಾಗೂ ಆತಂಕದ ಭಾವನೆಗಳಿರುತ್ತವೆ. ಶ್ರೀಕಾಂತನ ಆತ್ಮಹತ್ಯೆ ಗೌರೀಶನನ್ನು ಅಧೀರನನ್ನಾಗಿ ಮಾಡುತ್ತದೆ. ಹೀಗಾಗಿಯೇ ಶ್ರೀಕಾಂತನ ಅಂತಿಮ ಸಂಸ್ಕಾರದ ನಂತರ ಗೌರೀಶನು "ಅಯ್ಯೋ ಶ್ರೀಕಾಂತ, ನಾನು ಸತ್ತೆ" ಎಂದು ಕೂಗಿ ಹೇಳುವಲ್ಲಿ ನಾವು ಇದನ್ನು ಗುರುತಿಸಬಹುದು. ಅಲ್ಲದೇ ಕಾದಂಬರಿಯ ಉದ್ದಕ್ಕೂ ಕೂಡ ಗೌರೀಶನಲ್ಲಿ ಆತಂಕದ ಭಾವನೆಯನ್ನು ಗುರುತಿಸಬಹುದು. 'ದಿವ್ಯ'ದಲ್ಲಿ ಗೌರಿಯ ಬಗ್ಗೆ, ಅವಳ ಭವಿಷ್ಯದ ಬಗ್ಗೆ ಅಕ್ಕುವಿಗೆ ಆತಂಕವಿರುವುದನ್ನು ಗುರುತಿಸಬಹುದಾಗಿದೆ. ಹೀಗಾಗಿಯೇ ಅಕ್ಕು ಯಾವಾಗಲೂ ಗೌರಿಯನ್ನು ಗಮನಿಸುತ್ತಿರುತ್ತಾಳೆ. ಆದರೆ ಗೌರಿ ಇದನ್ನು ಗಮನಿಸಿಯೂ ಗಮನಿಸದಂತಿರುತ್ತಾಳೆ. ಅಲ್ಲದೆ ಗೌರಿಯು ತನಗೆ ಆತಂಕವಾದರೂ ಕೂಡ ಅದನ್ನು ವ್ಯಕ್ತಪಡಿಸದಂತೆ ಸಮಚಿತ್ತದ ಮನೋಭಾವನೆಯನ್ನು ಹೊಂದಿರುತ್ತಾಳೆ.

ದೇಸಾಯಿಯವರ 'ಮುಕ್ತಿ'ಯಲ್ಲಿ ಪ್ರತಿಯೊಬ್ಬರೂ ಕೂಡ ತಮ್ಮ ಜೀವನ ನಡೆಸುವ ಬಗ್ಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಅಲ್ಲದೆ ಅನುಭವದಿಂದಲೇ ಹೆಚ್ಚಿನ ವಿಷಯಗಳು

ತಿಳಿಯಲು ಸಾಧ್ಯ ಎಂಬುದು ದೇಸಾಯಿಯವರ ಮುಕ್ತಿಯ ಅಂಶವಾಗಿದೆ. ಅಲ್ಲದೇ ಪ್ರತಿಯೊಬರಿಗೂ ಕೂಡ ಅವರ ಜೀವನವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿರುತ್ತದೆ. ಆಲೋಚಿಸಿ, ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವ ಜವಾಬ್ದಾರಿ ಹಾಗೂ ಅದರ ಸಾಧಕ- ಬಾಧಕಗಳಿಗೆ ಅವರವರೇ ಹೊಣೆಗಾರರಾಗಿರುತ್ತಾರೆ. ಆದರೆ ದಿವ್ಯದಲ್ಲಿ ಈ ರೀತಿಯ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆಗಳು ಕಡಿಮೆ. ಉದಾ. ವಿಮಲಾ ತನ್ನ ಮಗುವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯ ಸಂದರ್ಭದಲ್ಲಿ ತನ್ನ ಅಣ್ಣ ಘನಶ್ಯಾಮನ ಸಲಹೆಯಂತೆ ನಡೆದುಕೊಳ್ಳುತ್ತಾಳೆ. ಗೌರಿಯ ಮದುವೆಯ ವಿಚಾರದಲ್ಲಿ ಅಕ್ಕು ಶಾಸ್ತ್ರಿಗಳ ಸಲಹೆಯನ್ನು ಕೇಳಿ ಅದರಂತೆ ನಡೆದುಕೊಳ್ಳುತ್ತಾಳೆ.

ದೇಸಾಯಿಯವರ ಕಾದಂಬರಿಯಲ್ಲಿ ಪ್ರಮುಖವಾದ ಅಂಶವೆಂದರೆ ಡೈರಿ (ದಿನಚರಿ). ವರ್ತಮಾನದೊಂದಿಗೆ ಅವರು ದಿನಚರಿಯ ಮೂಲಕ ಭೂತವನ್ನು ಒಟ್ಟೊಟ್ಟಿಗೆ ತರುತ್ತಾರೆ. ಗೌರೀಶ ತನ್ನ ಜೀವನದ ಪ್ರಮುಖ ಸಂಗತಿಗಳನ್ನು ತನ್ನ ದಿನಚರಿಯ ಮೂಲಕ ಪ್ರಸ್ತುತಪಡಿಸುತ್ತಾನೆ. ಅಲ್ಲದೇ 'ಮುಕ್ತಿ' ಕಾದಂಬರಿ ಪ್ರಾರಂಭವಾಗುವುದೇ ಗೌರೀಶ ತಾನು ನೈರೋಬಿಗೆ ತೆರಳುತ್ತಿರುವುದರ ಕುರಿತು ಬರೆಯುವುದರ ಬಗ್ಗೆಯೇ ಆಗಿದೆ. ಅಲ್ಲದೆ ಶ್ರೀಕಾಂತ ಟಿ.ಬಿಯಿಂದಾಗಿ ಆತ್ಮಹತ್ಯೆ ಮಾಡಿಕೊಂಡ ವಿಚಾರ ಎಲ್ಲರಿಗೂ ತಿಳಿದದ್ದೇ. ಆದರೆ ಅವನ ದಿನಚರಿಯಿಂದ ಅವನ ಆತ್ಮಹತ್ಯೆಯ ನಿಖರ ಕಾರಣ ಗೌರೀಶನಿಗೆ ತಿಳಿಯುತ್ತದೆ.

ವ್ಯಕ್ತಿಯ ಮಾನಸಿಕ ಸಂಘರ್ಷಗಳನ್ನು ತಿಳಿಯುವಲ್ಲಿ ದಿನಚರಿ ಪ್ರಮುಖ ಅಂಶವಾಗುತ್ತದೆ. ಮೇಲ್ನೋಟಕ್ಕೆ ಎಲ್ಲರಂತೆ ನಗು ನಗುತ್ತಾ ಸಂತೋಷದಿಂದ ಇರುವ ಮನಸ್ಸು ಎಂತಹ ವೇದನೆಯನ್ನು, ಹಿಂಸೆಯನ್ನು, ನೋವನ್ನು, ತಾಕಲಾಟವನ್ನು ಅನುಭವಿಸುತ್ತಿರುತ್ತದೆ ಎಂಬುದನ್ನು ತಿಳಿಯುವಲ್ಲಿ 'ದಿನಚರಿ' ಮುಖ್ಯವಾಗುತ್ತದೆ. ಶ್ರೀಕಾಂತನು ಕೂಡ ತನ್ನ ಕಾಯಿಲೆಯಿಂದಾಗಿ ತಾನು ನೋವನ್ನು ಅನುಭವಿಸುತ್ತಿದ್ದರೂ ಕೂಡ ತನ್ನ ಮಾನಸಿಕ ಸಂಘರ್ಷ ತನ್ನ ಅತ್ಯಂತ ಆತ್ಮೀಯ ಮಿತ್ರನಾದ ಗೌರೀಶನಿಗೂ ಕೂಡ ತಿಳಿಯದಂತೆ ವರ್ತಿಸುತ್ತಿರುತ್ತಾನೆ. "ತನ್ನ ದುಃಖದ ಝಳ ಅವರಿಗೇಕೆ" ಎಂಬುದು ಅವನ ಭಾವನೆಯಾಗಿರುತ್ತದೆ. ಆದರೆ ಶ್ರೀಕಾಂತ ತನ್ನ ಮರಣದ ನಂತರ ಗೌರೀಶನು ತನ್ನನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲಿ ಎಂದು "ನನ್ನ ಬಗ್ಗೆ ವೃಥಾ ತೊಂದರೆಗೆ ಈಡಾಗಬಾರದು ನೀನು..... ಅಸ್ಪಷ್ಟ ಕಲ್ಪನೆ ತಪ್ಪು ತಿಳುವಳಿಕೆಗಳಿಂದ ಉಂಟಾಗಬಹುದಾದ ಮನೋವ್ಯಥೆ ನಿನಗಾಗಬಾರದು ಎಂಬ ಚಿಂತೆಯಿಂದ ನಾನು ಈ ಹರಕು ಮುರುಕು ದಿನಚರಿಯನ್ನು ನಿನಗೆ ಅರ್ಪಿಸುತ್ತಿರುವೆ..." (ಪು. ೨೧೨) ಪತ್ರದಲ್ಲಿ ಹೇಳುವ ಮಾತುಗಳು ದಿನಚರಿಯ ಮಹತ್ವವನ್ನು ತಿಳಿಸುತ್ತದೆ. ಇನ್ನು ಎರಡು ಮೂರು ವರ್ಷಗಳ ಕಾಲ ಬದುಕಬಹುದಾಗಿದ್ದ ಶ್ರೀಕಾಂತ " 'ಆ ಬೇರೊಬ್ಬ'ನ ದಾಳಿ ಆದುದರಿಂದ ನಾನು ಇನ್ನೂ ನಾನಾಗಿರುವಾಗಲೇ ಜೀವನದ ರಂಗಭೂಮಿಯಿಂದ ನಿಷ್ಕ್ರಮಣ ಮಾಡುತ್ತಿರುವೆ" (ಪು. ೨೧೪) "ನನಗೆ ಜೀವನ್ಮರಣ ಅಸಹ್ಯವಾಗಿದೆ. 'ಆ ಬೇರೊಬ್ಬ'ನ ಪ್ರಭಾವ ಅಸಹ್ಯವಾಗಿದೆ... ಜೀವನದ ಶೂನ್ಯತೆಗಿಂತ ಮರಣದ ಶೂನ್ಯತೆ ಲೇಸು. ಮೊದಲನೆಯದರಲ್ಲಿ ವೇದನೆಯಿದೆ. ಎರಡನೆಯದರಲ್ಲಿ

ಮುಕ್ತಿಯಿದೆ. ವೇದನೆ ಸಾಕಾಗಿದೆ... ವೇದನೆಯನ್ನು ಅಮೃತಗೊಳಿಸುವ ಚೈತನ್ಯ ಇಲ್ಲದಾಗಿದೆ..." (ಪು. ೨೧೫) ಎಂದು ತನ್ನ ಆತ್ಮಹತ್ಯೆಯ ನಿಜವಾದ ಕಾರಣವನ್ನು ನೀಡುತ್ತಾನೆ. ಈ ಸತ್ಯ ಸಂಗತಿ ಅವನ ದಿನಚರಿಯ ಮುಖಾಂತರ ಕೇವಲ ಗೌರೀಶನಿಗೆ ಮಾತ್ರ ತಿಳಿಯುತ್ತದೆ.

ಅಲ್ಲದೇ ಕಾಲದ ಬಗ್ಗೆ ದೇಸಾಯಿಯವರು ಗೌರೀಶನ ಮೂಲಕ ಹೇಳಿಸುವ "ನನ್ನ ಈ ಇತಿಹಾಸದಲ್ಲಿ ಭೂತ ಮತ್ತು ವರ್ತಮಾನ ಕಾಲಗಳು, ಸಮುದ್ರದ ತೆರೆಗಳಂತೆ, ಒಂದರೊಳಗೊಂದು ಬೆರೆಯುತ್ತಾ ಸಾಗಿವೆ.... ಕಾಲನದಿಯು ಒಮ್ಮೆ ಹರಿದಿದೆ– ಈಗಲೂ ಹರಿಯುತ್ತಿದೆ. ಆದರೆ ಎಲ್ಲಿ ಬೇಕಾದಲ್ಲಿ ಬೊಗಸೆಯೊಡ್ಡಿ ನೀರು ಕುಡಿಯುವ ಸ್ವಾತಂತ್ರ್ಯ ಮನಸ್ಸಿಗಿದೆಯಷ್ಟೆ!" ಮಾತುಗಳಲ್ಲಿ ಕಾಲವನ್ನು ದೇಸಾಯಿ ಸಂಜ್ಞಾ ಪ್ರವಾಹದ ರೀತಿಯಲ್ಲಿ ಬಳಸಿದ್ದಾರೆ.

ಒಟ್ಟಾರೆಯಾಗಿ ದೇಸಾಯಿಯವರ'ಮುಕ್ತಿ' ಕಾದಂಬರಿಯು ತನ್ನ ಸಂಜ್ಞಾ ಪ್ರಜ್ಞೆಯ ಮೂಲಕ ನವ್ಯ ಸಾಹಿತ್ಯದ ಪ್ರಥಮ ಕಾದಂಬರಿ ಎಂದು ಗುರುತಿಸಲ್ಪಟ್ಟದ್ದು ಅತ್ಯಂತ ಸಮಂಜಸವಾದುದಾಗಿದೆ ಎಂದು ಹೇಳಬಹುದಾಗಿದೆ. ಸಂಜ್ಞಾ ಪ್ರಜ್ಞೆಯಿಂದಲೇ ಮುಕ್ತಿಯ ಮೂಲಕ ದೇಸಾಯಿಯವರು ಉಳಿದ ನವ್ಯ ಲೇಖಕರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ.

೫.೨ ವಿಕ್ಷೇಪ : ಯುವಜನತೆಯ ಮಾನಸಿಕ ವಿಕ್ಷಿಪ್ತತೆಯ ಸಂಘರ್ಷ

ಪ್ರಸ್ತುತ ಶಾಂತಿನಾಥ ದೇಸಾಯಿ ಅವರ 'ವಿಕ್ಷೇಪ' (೧೯೭೧) ಕಾದಂಬರಿಯಲ್ಲಿನ ರಾಹುಲನ ಪಾತ್ರದ ವಿಕ್ಷಿಪ್ತತೆ, ಆ ಮೂಲಕ ಯುವ ಜನತೆಯ ಮಾನಸಿಕ ಸಂಘರ್ಷಗಳನ್ನು, ಕೌಟುಂಬಿಕ ಸಂಘರ್ಷಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇವುಗಳ ಜೊತೆಗೆ ಸ್ತ್ರೀ ಪಾತ್ರಗಳ ಸ್ವತಂತ್ರ ವ್ಯಕ್ತಿತ್ವ, ತಂದೆ–ಮಕ್ಕಳ ನಡುವಿನ ಸಂಘರ್ಷ, ರಾಜಕೀಯ ಅಂಶಗಳು ಇತ್ಯಾದಿ ವಿಷಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ವಿಕ್ಷೇಪ ಕಾದಂಬರಿಯ ನಾಯಕನಾದ ರಾಹುಲನು ಆಯ್.ಎ.ಎಸ್, ಪಾಸಾಗಿ, ಎಮ್.ಎ.ಯನ್ನು ಮುಗಿಸಿಕೊಂಡು ಇಂಗ್ಲೆಂಡಿಗೆ ಹೋಗಿ, ತನಗಾಗಿ ಒಂದು ಉದ್ಯೋಗವನ್ನು ದೊರಕಿಸಿಕೊಳ್ಳಬೇಕೆಂಬ ಆಲೋಚನೆಯಲ್ಲಿರುತ್ತಾನೆ. ರಾಹುಲನು ತನ್ನ ಸೌಂದರ್ಯದ ಬಗ್ಗೆ, ತನ್ನ ಬುದ್ಧಿಮತ್ತೆಯ ಬಗ್ಗೆ, ತನ್ನ ವ್ಯಕ್ತಿತ್ವದ ಬಗ್ಗೆ ಅಸ್ಮಿತೆ, ಅಭಿಮಾನವನ್ನು ಹೊಂದಿರುತ್ತಾನೆ. ಇದಕ್ಕೆ ಕಾರಣ ಅವನ ಜೀವನದಲ್ಲಿ ಅವನು ದೊರಕಿಸಿಕೊಂಡ ಫಸ್ಟ್ ಕ್ಲಾಸುಗಳು, ವಕ್ತೃತ್ವ ಸ್ಪರ್ಧೆಯಲ್ಲಿ ದೊರೆತ ಕಪ್ಪುಗಳು, ಹುಂ ಅನ್ನುವುದೇ ತಡ ಅವನಿಗೆ ಅಂಟಿಕೊಂಡ, ಅಂಟಿಕೊಳ್ಳಲೆಳಸುವ ಹೆಣ್ಣುಗಳು ಎಲ್ಲ ಅವನ ಪ್ರಬಲ ವ್ಯಕ್ತಿಮತ್ವದ ದ್ಯೋತಕಗಳಾಗಿರುತ್ತವೆ. ಅವನ ಪಾಲಿಗೆ ಬಂದ ಜೀವನದ ಉತ್ತಮ ಟ್ರಾಫಿಗಳಲ್ಲಿ ಮಾಧವಿ–ಟ್ರಾಫಿ ಎಲ್ಲಕ್ಕೂ ಹಿರಿದಾದದ್ದು, ಅಮೂಲ್ಯವಾದದ್ದು.

ಮಾಧವಿ ರಾಹುಲನ ಕಾಲೇಜಿನಲ್ಲಿಯೇ ಬಿ.ಎ. ಅಭ್ಯಾಸ ಮಾಡುತ್ತಿರುತ್ತಾಳೆ. ಅವರಿಬ್ಬರೂ ಪರಸ್ಪರ ಪ್ರೀತಿಸುತ್ತಿರುತ್ತಾರೆ. ಆದರೆ ಅವಳನ್ನು ಮದುವೆಯಾಗುವ ವಿಚಾರದಲ್ಲಿ ರಾಹುಲ ದ್ವಂದ್ವತೆಯನ್ನು ಹೊಂದಿರುತ್ತಾನೆ. ಮಾಧವಿಯನ್ನು ರಾಹುಲನಿಗೆ ಮದುವೆ ಮಾಡಿಕೊಡಲು ಮಾಧವಿಯ ಮನೆಯವರು ಒಪ್ಪಿಕೊಂಡಿರುತ್ತಾರೆ. ಲಗ್ನದ ವಿಚಾರವನ್ನು ಮಾತನಾಡಲು ಬರುವಂತೆ ಮಾಧವಿಯು ರಾಹುಲನಿಗೆ ಹೇಳುತ್ತಾಳೆ. ಆಗ ರಾಹುಲನಿಗೆ ಈ ಲಗ್ನದ ಭಾನಗಡಿ ಶುರುವಾದದ್ದಾದರೂ ಹೇಗೆ? ಎಂಬ ದ್ವಂದ್ವದ ಜೊತೆಗೆ ಇವೆಲ್ಲವೂ ಒಂದು ಫೇರಿ ಕತೆಯಂತೆ ಅವನಿಗೆ ತೋರುತ್ತಿರುತ್ತದೆ. ಒಬ್ಬರಿಗೊಬ್ಬರು ಪರಿಚಯವೇ ಇಲ್ಲದಿದ್ದ ಅವರಿಬ್ಬರೂ ಒಮ್ಮಿಂದೊಮ್ಮೆಲೆ ಕೂಡಿ, ಆಡಾಡ್ತಾ ಓಪನ್ ಸೆಸೇಮ್ ಎಂದೊಡನೆ ಗವಿ ಹೋಗಿ ಲಗ್ನದ ಅರಮನೆಯಾಯಿತಲ್ಲ ಎಂಬ ಉದ್ವಿಗ್ನತೆ ಅವನನ್ನು ಕಾಡುತ್ತಿರುತ್ತದೆ.

ಅಲ್ಲದೆ ತಾನೇನೂ ಬಿಜಿನೆಸ್‌ಮನ್ನಲ್ಲ, ಆಯೇಯಸ್ ಅಧಿಕಾರಿಯಲ್ಲ, ಲಕ್ಷಾಧೀಶನ ಮಗನಲ್ಲ, ತನ್ನ ಸ್ನೇಹಿತನಾದ ರಣಜಿತನಂತೆ ವಿಲೀನಗೊಂಡ ತುಂಡು ಸಂಸ್ಥಾನದ ಮಹಾರಾಜನ ಎಂಥ ಮಗನೂ ಅಲ್ಲ, ಮೊಮ್ಮಗನೂ ಅಲ್ಲ. ತನ್ನಂತಹ ಕಾರವಾರಿಗೆ ಜಾತಿ–ಗೀತಿ ಏನೂ ನೋಡದೆ ಮಾಧವಿಯನ್ನು ಕೊಡಲು ಒಪ್ಪಬೇಕೆಂದರೆ–ಎಂಬ ದ್ವಂದ್ವ ಭಾವನೆ ಅವನನ್ನು ಕಾಡುತ್ತಿರುತ್ತದೆ.ತಮ್ಮ ಮುಂದಿನ ಜೀವನದ ಬಗೆಗಿನ ಮಾಧವಿಯ ಯೋಜನೆಗಳನ್ನು ತಿಳಿದ ರಾಹುಲನಿಗೆ ತಾನು ಅವರ ಔದಾರ್ಯಕ್ಕೆ ನಿಜವಾಗಿಯೂ ಅರ್ಹನೇ? ಎಂಬ ಸಂಘರ್ಷ ಅವನಲ್ಲಿ ಮೂಡುತ್ತದೆ.

ಮಾಧವಿಯ ಕರೆಯ ಮೇರೆಗೆ ರಾಹುಲನು ಅವಳ ತಾಯಿ ಹಾಗೂ ಅವಳ ಕಕ್ಕನನ್ನು ಭೇಟಿಯಾಗಲು ಅವರ ಮನೆಗೆ ತೆರಳುತ್ತಾನೆ. ಆದರೆ ಅವಳ ತಾಯಿಯ ಬಣ್ಣದ ನಟನೆ, ಅವಳ ಕಕ್ಕನ ಕೃತಕ ಸಭ್ಯತೆಗಳು ಯಾಕೋ ಏನೋ ರಾಹುಲನಿಗೆ ಜೀವ ಹಿಸುಕಿದಂತಾಗುತ್ತದೆ. ಕಣ್ಣಿಗೆ ಹೊಡೆಯುವ ಅವರ ಶ್ರೀಮಂತಿಕೆ ಅವನು ಫ್ಲ್ಯಾಟಿನಲ್ಲಿ ಕಾಲಿಟ್ಟೊಡನೆಯೇ ಅವನ ಮನಸ್ಸನ್ನು ಅಸ್ವಸ್ಥಗೊಳಿಸುತ್ತದೆ. ಎಲ್ಲವನ್ನೂ ಅತ್ಯಂತ ಚೊಕ್ಕಟವಾಗಿ, ಓರಣವಾಗಿ ಪ್ರದರ್ಶನಕ್ಕಿಟ್ಟಂಥ ಜಾಗರೂಕತೆ ಅವನಲ್ಲಿ ಒಂದು ಬಗೆಯ ಉದಾಸೀನತೆಯನ್ನು ಉಂಟು ಮಾಡುತ್ತದೆ. ಅಲ್ಲದೇ ಮಾಧವಿಯ ತಾಯಿಯ ಹಿಂದಿ ಮಿಶ್ರ ಇಂಗ್ಲೀಷಂತೂ ರಾಹುಲನು ಜೋಪಾನವಾಗಿ ಬೆಳೆಸಿದ್ದ ಅವನ ಇಂಗ್ಲೀಷ್ ಭಾಷಾ ಪ್ರೇಮಕ್ಕೆ ದೊಡ್ಡ ಆಘಾತವನ್ನೇ ಮಾಡುತ್ತದೆ. ಮಾಧವಿಯ ಮನೆಯಲ್ಲಿನ ಸೇವಕನ ಕೆಂಪು ಮುಖವನ್ನು ರಾಹುಲನು ಮತ್ತೆ ಮತ್ತೆ ನಿರುಕಿಸಿ ನೋಡಿದ್ದ. ಪಾನು ತೆಗೆದುಕೊಳ್ಳಲು ಬೇಕೆಂತಲೇ ಒಂದು ನಿಮಿಷ ತಡ ಮಾಡಿ ಆ ಕೆಂಪು ಮುಖದ ಕರಿಗಣ್ಣಿನಲ್ಲಿ ಇಣುಕುತ್ತಾನೆ. ಆ ಸೇವಕನ ಮುಖವಾಡದ ಹಿಂದಿನ ರಹಸ್ಯದಲ್ಲಿ ತನ್ನ ಭವಿಷ್ಯವು ಎಲ್ಲಿಯೋ ಅಡಗಿ ನಿಂತಿದೆ ಎಂಬ ಅಸ್ಪಷ್ಟ ಕಲ್ಪನೆ ಅವನ ಮನಸ್ಸನ್ನು ಮುಟ್ಟಿ ಹೋಗುತ್ತದೆ. ಮಾಧವಿಯ ಮನೆಯಿಂದ ಹಿಂತಿರುಗಿ ಬಂದ ರಾಹುಲನಿಗೆ ತಾನು ನಿಜವಾಗಿಯೂ ಮಾಧವಿಯನ್ನು ಮದುವೆಯಾಗಬೇಕೇ ಎಂಬ ಪ್ರಶ್ನೆ ಮೂಡುತ್ತದೆ. ಇಲ್ಲಿ ರಾಹುಲನ ಮನದ ಸಂಘರ್ಷವನ್ನು ಗುರುತಿಸಬಹುದಾಗಿದೆ.

ರಾಹುಲನ ಪ್ರಕಾರ ಮನುಷ್ಯನಿಗೂ ಅವನಿದ್ದ ಪರಿಸರಕ್ಕೂ ಅತ್ಯಂತ ನಿಕಟವಾದ ಸಂಬಂಧವಿರುತ್ತದೆ. ರಾಹುಲನು ತಾನು ಬೆಳೆದು ಬಂದ ಹಿನ್ನೆಲೆಯಲ್ಲಿ ಸಮಾಜದ ಬಗ್ಗೆ ಆತ್ಮೀಯತೆಯನ್ನು ಹೊಂದಿರುವುದಿಲ್ಲ. ಅವನ ಅನುಭವದ ಸ್ವರೂಪವೇ ಬೇರೆಯಾಗಿರುತ್ತದೆ. ಅದಕ್ಕೆಂದೇ ಆತ ಮಾಧವಿಯನ್ನು ಆಕೆ ಆಧುನಿಕ, ಸುಶಿಕ್ಷಿತ, ಸುಸಂಸ್ಕೃತ, ಅ–ಸರಳ ಹುಡುಗಿ ಎಂದು ತಿಳಿದು ಅವಳಲ್ಲಿ ಸಹ ಜೀವನ ಬಯಸುತ್ತಾನೆ. ಆದರೆ ಅವನಿಗೆ ಇದ್ದಕ್ಕಿದ್ದಂತೆ ಮಾಧವಿ ತನಗೆ ನಿರುಪಯೋಗಿಯಾದಂತೆ ಭಾಸವಾಗತೊಡಗುತ್ತಾಳೆ. ಇಲ್ಲಿ ರಾಹುಲನ ಮಾನಸಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ. ಅಲ್ಲದೇ ರಾಹುಲನು ತನ್ನ ಸ್ನೇಹಿತನಾದ ಅರವಿಂದನೊಡನೆ "ಅರವಿಂದ, ನಾನು ನಿಜಕ್ಕೂ ಅವಳನ್ನು ಪ್ರೀತಿಸಲಿ ಬಿಡಲಿ–ಮಾಧವಿಯನ್ನು ಲಗ್ನವಾಗಬೇಕೆಂದಿರುವೆ. ಹೀಗೆ ಅವಳು ಒಳ್ಳೆಯ ಹುಡುಗಿ–ಮುಂದೇನಾದರೂ ನಮ್ಮ ಸಂಬಂಧಕ್ಕೆ ಕೆಟ್ಟ ಹುಳ ಹತ್ತಿದರೆ ಸರಿ–ಕತ್ತರಿಸಿ ಬಿಟ್ಟರಾಯಿತು. ಘಟಸ್ಫೋಟ!" (ಪು. ೩೩) ಎಂದು ಹೇಳುವ ಮಾತುಗಳಲ್ಲಿ ರಾಹುಲನ ವಿಕ್ಷಿಪ್ತತೆಯನ್ನು ಗುರುತಿಸಬಹುದಾಗಿದೆ.

ರಾಹುಲನು ತಮ್ಮಿಬ್ಬರ ಮದುವೆಯ ವಿಚಾರವನ್ನು ಪ್ರೊಫೆಸರ್ ವಿಲಿಯಮ್ಸ್ ಹಾಗೂ ಮಿಸೆಸ್ ವಿಲಿಯಮ್ಸ್‌ರ ಮುಂದೆ ಚರ್ಚಿಸುತ್ತಾನೆ. ಪ್ರೊಫೆಸರ್ ವಿಲಿಯಮ್ಸ್‌ರ ಮುಂದೆ ಒಂದು ಗಂಭೀರ ಸಮಸ್ಯೆ–ತೊಡಕು. ಆದರೆ ಅದಕ್ಕೆ ಹೃದಯದ ತೊಡಕೆಂದು ಅನ್ನಬೇಕೇ ಬೇಡವೇ ಎಂಬುದೇ ತೊಡಕಾಗಿದೆ ಎಂದು ಹೇಳುವಲ್ಲಿ ಅವನ ಮನದ ದ್ವಂದ್ವವನ್ನು ಗುರುತಿಸಬಹುದಾಗಿದೆ. ಅಲ್ಲದೇ ತಾನು ಮಾಧವಿ ನಿಹಲಾನಿಯವರ ಮನೆಗೆ ಹೋಗಿದ್ದಾಗ ಅವರ ಮನೆಯ ಕೇಂದ್ರ 'ಹಣ' ಎಂಬುದನ್ನು ಗುರುತಿಸಿರುವುದಾಗಿ ಹೇಳುತ್ತಾನೆ. ಅಲ್ಲದೇ ತಾನು ಮಾಧವಿಯನ್ನು ಲಗ್ನವಾದರೆ

ನನ್ನ ಉದ್ಧಾರವಾಗುವುದೇ ಎಂಬ ಪ್ರಶ್ನೆಯನ್ನು ವಿಲಿಯಮ್ಸ್ ರಿಗೆ ಕೇಳುತ್ತಾನೆ. ಮಾಧವಿಯನ್ನು ಪ್ರೀತಿಸುತ್ತಿದ್ದರೂ ಕೂಡ ರಾಹುಲನ ಮನದ ದ್ವಂದ್ವವನ್ನು ಇಲ್ಲಿ ಗುರುತಿಸಬಹುದಾಗಿದೆ.

ತಮ್ಮಿಬ್ಬರ ಮದುವೆ ನಿರ್ಧಾರದ ಹಿನ್ನೆಲೆಯಲ್ಲಿ ರಾಹುಲ ಒಂದು ಪಿಕ್ನಿಕ್ ಪಾರ್ಟಿಯನ್ನು 'ಮಡ್ ದ್ವೀಪ'ದಲ್ಲಿ ವ್ಯವಸ್ಥೆ ಮಾಡಿರುತ್ತಾನೆ. ಆದರೆ ಪಾರ್ಟಿಗೆ ಹೋಗುವ ಮೊದಲು ಎರಡು-ಮೂರು ದಿನಗಳ ವಿಚಾರ ಸಂಘರ್ಷಣದಿಂದ ಅವನ ಮನಸ್ಸು ಮಾಧವಿಯ ವಿಷಯದಲ್ಲಿ ಮೊದಲಿನ ಸರಳತೆಯನ್ನು ಕಳೆದುಕೊಂಡು ಟೀಕಾತ್ಮಕವಾದ ವಕ್ರತೆಯನ್ನು ತಳೆದಿರುತ್ತದೆ. ಇದೇ ಕಾರಣದಿಂದ ಮಾಧವಿಯತ್ತ ನೋಡುವ ಅವನ ದೃಷ್ಟಿಯಲ್ಲಿ ತೀಕ್ಷ್ಣತೆ, ಅವಳೊಡನೆ ಆಡುವ ಮಾತಿನಲ್ಲಿ ಒಗರು ಬಂದಿರುತ್ತದೆ. ಅವನ ಪ್ರಕಾರ ಮಾಧವಿ ಡೇಂಜರಸ್ ಆಗಿದ್ದಳು. ಮಾಧವಿಯ ಆತ್ಮ ಪ್ರೀತಿ, ಅತ್ಮ ಸಂತುಷ್ಟಿಯ ಲಠ್ಠ ನಿತಂಬಗಳಲ್ಲಿ ತನ್ನ ಪುರುಷ ವ್ಯಕ್ತಿತ್ವವನ್ನೂ ಮೂದಲಿಸಿ, ಮೂಗು ಮುರಿಯುವ ಶಕ್ತಿಯಿದೆ ಎಂದು ಭಾವಿಸುತ್ತಾನೆ. ಲಗ್ನದ ನಿಶ್ಚಯದ ಸೆಲೆಬ್ರೇಷನ್ನಿಗೆಂದೇ ಪಿಕ್ನಿಕ್ ವ್ಯವಸ್ಥೆ ಮಾಡಿದ ರಾಹುಲನು, ಪಿಕ್ನಿಕ್ ದಿನ "ನಮ್ಮ ನಿಶ್ಚಯ ಇನ್ನೂ ಬಹಳ ದೂರವಿದೆ, ಲಗ್ನ ಎಂದೋ ಏನೋ, ಅದಕ್ಕೂ ಈ ಪಿಕ್ನಿಕ್ಕಿಗೂ ಸಂಬಂಧ ಹಚ್ಚಬೇಡಿರಿ... ಏನೋ ಹಾಗೇ ಯಾವದೋ ಒಂದು ವೇಳೆಯಲ್ಲಿ ಪಿಕ್ನಿಕ್ಕು ಮಾತ್ರ ನಿಶ್ಚಯವಾಯಿತು. ಅದರಂತೆ ನಾವೆಲ್ಲ ಇಲ್ಲಿ ಬಂದಿದ್ದೇವೆ. ಇಷ್ಟೇ ! ಇದಕ್ಕೂ ಲಗ್ನ ನಿಶ್ಚಯದ ಸೆಲೆಬ್ರೇಷನಕ್ಕೂ ಸಂಬಂಧವಿಲ್ಲವೆಂದು ಮೊದಲೇ ಹೇಳಿಬಿಡುವೆ. ಆದುದರಿಂದ ಆ ವಿಷಯದ ಬಗ್ಗೆ ಚೇಷ್ಟೆ ಇನ್ನು ಮೇಲೆ ಬಂದ್" (ಪು. ೫೮) ಎಂದು ಹೇಳುವಲ್ಲಿ ಅವನ ಮಾನಸಿಕ ವಿಕ್ಷಿಪ್ತತೆಯನ್ನು ಗುರುತಿಸಬಹುದಾಗಿದೆ.

ಮಡ್‌ದ್ವೀಪದಲ್ಲಿ ಎಲ್ಲರದ್ದೂ ಊಟವಾದ ನಂತರ ರಾಹುಲನು ಒಂದು ಯೋಜನೆಯನ್ನು ಹೂಡುತ್ತಾನೆ. ಅದೆಂದರೆ ಒಂದು ತಾಸಿನವರೆಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಜೋಡಿ ಬದಲಾಯಿಸಿ ತಿರುಗಾಡಿ ಬರಬೇಕೆಂಬುದಾಗಿರುತ್ತದೆ.ಅದರಂತೆ ಅವನು ಅರವಿಂದನ ಜೋಡಿಯಾದ ವೈದೇಹಿಯ ಜೊತೆಗೆ, ರಣಜಿತ ಮಾಧವಿಯ ಜೊತೆಗೆ, ಅರವಿಂದ ರಣಜಿತನ ಜೋಡಿಯಾದ ಶೀರೀನಳ ಜೊತೆಗೆ ಹೋಗಬೇಕೆಂದು ನಿರ್ಧರಿಸುತ್ತಾನೆ. ಇದಕ್ಕೆ ಮುಖ್ಯ ಕಾರಣ ಪಿಕ್ನಿಕ್‌ಗೆ ಹೋಗುತ್ತಿರುವಾಗ ರಾಹುಲನಿಗೆ ವೈದೇಹಿಯ ದಗ್ಧ ದೇಹದ, ಪರಿಣತಮತಿಯ, ಅನುಭವಪೂರ್ಣ ವ್ಯಕ್ತಿತ್ವದ ಆಕರ್ಷಣೆ ಬಲವತ್ತರವಾಗಿ, ಅರವಿಂದನ ಬಗ್ಗೆ ನಿಷ್ಕಾರಣ ಅಸೂಯೆ ಉಂಟಾಗಿರುತ್ತದೆ.

ವೈದೇಹಿಯೊಡನೆ ಸುತ್ತಾಡಲು ಹೊರಟ ರಾಹುಲನು ತಾನು ಮಾಧವಿಯ ಜೊತೆಯಲ್ಲಿ ಲಗ್ನವಾಗಬಾರದೆಂದು ನಿಶ್ಚಯಿಸಿರುವುದಾಗಿ ಹೇಳುತ್ತಾನೆ. ತನ್ನದು ನಿರಾಶೆ ತುಂಬಿದ ಅ-ಸಹಜ ಹೃದಯವಾಗಿದ್ದು, ಅಂತಹ ಹೃದಯಕ್ಕೆ ಮಾಧವಿಯಂತಹ ಸುಖವಸ್ತು ಜೀವ ಉಪಯೋಗವಿಲ್ಲ. ಅಲ್ಲದೇ ಅವನ ಪ್ರಕಾರ ಮಾಧವಿ ಇನ್ನೂ ಅನನುಭವಿ ತರಳೆಯಾಗಿದ್ದು, ಮೆತ್ತನ್ನ ಸೋಫಾ ಮೇಲೆ ಕೂತು 'ಅಬ್ದುಲ್, ಚಾಯ್ ಲಾವ್' ಎಂದು ಕೀರುಧ್ವನಿಯಲ್ಲಿ ಒದರಿ, ಮೆತ್ತನ್ನ ಕಾರುಗಳಲ್ಲಿ ಓಡಾಡಿ, ಮೆತ್ತನ್ನ ಹಾಸಿಗೆಯಲ್ಲಿ ಹರಿದಾಡುವ ಚಿಕ್ಕ ಕೂಸು. ಆದರೆ ತನಗೆ ತನ್ನನ್ನು ತಾಯಿಯಂತೆ ಸಲಹುವ, ಪರಿಣತಮತಿಯಾದ, ಅನುಭವದಿಂದ ಮಾಗಿದ, ಜೀವನದ ಆಘಾತಗಳಿಂದ ಹದಗೊಂಡ ಹೆಣ್ಣು ಜೀವ, ತನ್ನ ಇಡಿಯ ಅಂತಃಸತ್ವವನ್ನೇ ಎದೆಗವಚಿ ನಿಲ್ಲುವಂತಹ ಹೆಣ್ಣು ದೇಹ ಬೇಕಾಗಿದೆ

ಎಂದು ಪರೋಕ್ಷವಾಗಿ ವೈದೇಹಿಯ ಬಗ್ಗೆಯೇ ಹೇಳತೊಡಗುತ್ತಾನೆ. ಇಲ್ಲಿ ನಾವು ರಾಹುಲನ ದ್ವಂದ್ವ ವ್ಯಕ್ತಿತ್ವವನ್ನು ಗುರುತಿಸಬಹುದಾಗಿದೆ. ಅಲ್ಲದೇ ವೈದೇಹಿಯನ್ನು ಅವಳ ನಡು ಹಿಡಿದು ಕಲ್ಲು ಬಂಡೆಯ ಮೇಲೆ ಹತ್ತಿಸುವ ಸಮಯದಲ್ಲಿ ಆತ ಹಿಂದೆಂದೂ ಅನುಭವಿಸದ ಒಂದು ಬಗೆಯ ಸೂಕ್ಷ್ಮ ಕೋಮಲತೆ ಅವನಲ್ಲಿ ಮಿಂಚಿನಂತೆ ಆಡುತ್ತದೆ. ಒಂದು ವೇಳೆ ಅರವಿಂದ ಹಾಗೂ ವೈದೇಹಿಯವರ ಲಗ್ನ ಕೂಡಿ ಬರದಿದ್ದರೆ ತಾನು ಅವಳನ್ನು ಲಗ್ನವಾಗಲು ಸಿದ್ಧನಿರುವುದಾಗಿಯೂ ಹೇಳುತ್ತಾನೆ. ಇಲ್ಲಿ ರಾಹುಲನ ವಿಕ್ಷಿಪ್ತ ಮನಸ್ಥಿತಿಯನ್ನು ಗುರುತಿಸಬಹುದಾಗಿದೆ. ಅಲ್ಲದೆ ಶೀರಿನಳ ಜೊತೆಯಲ್ಲಿಯೂ ಕೂಡ ರಾಹುಲನು ತಾನು ಮಾಧವಿಯನ್ನು ಲಗ್ನವಾಗಬಾರದೆಂದೂ ಹಾಗೂ ಇನ್ನು ಎಂಟ್ಹತ್ತು ವರ್ಷ ಲಗ್ನದ ಮಾತೇ ಬೇಡವೆಂದು ನಿಶ್ಚಯಿಸಿರುವುದಾಗಿಯೂ ಹೇಳುತ್ತಾನೆ.

ಪಿಕ್ನಿಕ್ಕಿನ ಸಮಯದಲ್ಲಿ ಮಾಧವಿಯು ತನ್ನ ಬಗ್ಗೆ ಏನೆನ್ನಿಸುವುದು ಎಂದು ಕೇಳಿದಾಗ ರಾಹುಲನು ಪ್ರಾಮಾಣಿಕವಾಗಿ ಹೇಳಬೇಕಾದರೆ ಅದೇ ತನಗೆ ಗೊತ್ತಿಲ್ಲ. ಉದಾ:ಗೆ ಒಂದು ಸಲ ನೀನು ಚೆನ್ನಾಗಿದ್ದಿ ಎಂದೆನಿಸಿದರೆ, ಮತ್ತೊಮ್ಮೆ ಶಿರೀನ್ ಚೆನ್ನಾಗಿದ್ದಾಳೆ ಎಂದೆನಿಸುವುದು. ಮಗದೊಮ್ಮೆ ವೈದೇಹಿ ಉತ್ಕೃಷ್ಟವಾಗಿದ್ದಾಳೆಂದೆನಿಸುವುದು. ಆದರೆ ನಿನ್ನೊಡನೆ ಸಂಬಂಧ ಬೆಳೆಸುವಾಗ ನಾ ಮೊದಲಿನಿಂದಲೂ ಬಹಳ ಸೀರಿಯಸ್ಸಾಗಿರುವೆ. ಹಿಂದಿನ ಬರೇ ಮಜಾ ಮಾಡುವ ವೃತ್ತಿಯಲ್ಲ. ಹಾಗಿದ್ದರೆ ಬರೇ ಫ್ಲರ್ಟೇಶನ್ನೇ ಬೇಕಾಗಿದ್ದರೆ ನಾನು ಬರೇ ನಿನ್ನ ಮೈ ಸುಖ ಬಯಸಬಹುದಾಗಿತ್ತು. ನಿನ್ನ ಲಗ್ನದ ಯೋಜನೆಯನ್ನೇ ದೂರೀಕರಿಸಬಹುದಾಗಿತ್ತು ಎಂದು ಹೇಳುತ್ತಾನೆ. ಅಲ್ಲದೇ ತಮ್ಮಿಬ್ಬರ ಸಂಬಂಧದ ನಿಜ ಸ್ವರೂಪ ತಿಳಿಯಬೇಕೆಂದರೆ ತಾವಿಬ್ಬರೇ ಎಲ್ಲಿಯಾದರೂ ಹೋಗಿ ಇದ್ದು ಬರೋಣವೆಂದು ಹೇಳುತ್ತಾನೆ. ತನಗೆ ಅಂತಹ ಪ್ರಯೋಗದ ಅವಶ್ಯಕತೆ ಇಲ್ಲವೆಂದು ಮಾಧವಿಯು ಹೇಳಿದಾಗ ತನಗೆ ಹುಚ್ಚು ಹಿಡಿಯುವ ಪ್ರಸಂಗ ಬಂದಿದ್ದು, ಎಲ್ಲವೂ ತಿಳಿಯಾಗಿ, ಖಚಿತವಾಗಿ ಇಲ್ಲದ್ದರಿಂದಲೇ ತಾನು ಹುಚ್ಚನಂತೆ ಎಲ್ಲರ ಜೊತೆಯಲ್ಲಿಯೂ ತಮ್ಮ ಮದುವೆಯ ಬಗ್ಗೆ ಚರ್ಚಿಸುತ್ತಿರುವುದಾಗಿ ಹೇಳುತ್ತಾನೆ. ಅಲ್ಲದೆ ತನ್ನಲ್ಲಿ ರಾಡಿಯ ಸಮುದ್ರವೇ ಇದ್ದು ನಿನಗೆ ನಿಜಕ್ಕೂ ಸುಖ ಬೇಕೆಂದಿದ್ದರೆ ತನ್ನನ್ನು ಬಿಟ್ಟು ಅವಳ ತಾಯಿ ಹೇಳಿದ ಶಂಕರ ಅಜ್ವಾನಿಯನ್ನು ಮದುವೆಯಾಗುವಂತೆ ಹೇಳುತ್ತಾನೆ. ರಾಡಿಯ ಸಮುದ್ರದಲ್ಲಿ ತಮ್ಮ ಸಂಸಾರದ ದೋಣಿ ಸಾಗುವುದು ಕಠಿಣವಾದದ್ದು ಎಂಬ ಅಭಿಪ್ರಾಯವು ಅವನ ಮಾನಸಿಕ ವಿಕ್ಷಿಪ್ತತೆಯನ್ನು ಸೂಚಿಸುತ್ತದೆ. ತನ್ನೊಳಗಿನ ರಾಡಿಯಲ್ಲಿ ಒಬ್ಬ ರಾಕ್ಷಸ ವಾಸವಾಗಿದ್ದಾನೆಂದು ಹೇಳುವಲ್ಲಿ ಅವನ ದ್ವಂದ್ವ ವ್ಯಕ್ತಿತ್ವವನ್ನು ಗುರುತಿಸಬಹುದಾಗಿದೆ.

ಪಿಕ್ನಿಕ್ಕಿನ ಸಮಯದಲ್ಲಿ ಉದ್ವಿಗ್ನಗೊಂಡಿದ್ದ ರಾಹುಲನನ್ನು ಸಮಾಧಾನ ಪಡಿಸುವ ಸಲುವಾಗಿ ಮಾಧವಿಯು ಅವನ ಕೋರಿಕೆಯಂತೆ ಅವನ ಪರೀಕ್ಷೆ ಮುಗಿದ ನಂತರ ಅವನೊಂದಿಗೆ ಮಲಗಲು ಸಿದ್ಧಳಿರುವುದಾಗಿ ಹೇಳುತ್ತಾಳೆ. ಮಾಧವಿಯು ನಿಜವಾಗಿಯೂ ತನ್ನನ್ನು ಪ್ರೀತಿಸುತ್ತಿದ್ದರೆ ತನ್ನೊಂದಿಗೆ ಮಲಗುವ ಮೂಲಕ ಅದನ್ನು ಸಿದ್ಧ ಮಾಡಿ ತೋರಿಸುವಂತೆ ರಾಹುಲ ಹೇಳುತ್ತಾನೆ. ಅದರಂತೆ ರಾಹುಲನು ಸಾಂತಾಕ್ರೂಜದ ಗಂಗೋತ್ರಿ ಹೋಟೆಲಿನಲ್ಲಿ ಮಿಸ್ಟರ್ ಮತ್ತು ಮಿಸೆಸ್ ಮಾಥೂರರೆಂದು

ಹೇಳಿ ರೂಮೊಂದನ್ನು ರಿಝರ್ವ್ ಮಾಡಿರುತ್ತಾನೆ. ಆದರೆ ಮಾಧವಿಯು ತನ್ನ ಅನಾರೋಗ್ಯದ ಕಾರಣದಿಂದ ತಮ್ಮ ಆಳು ಮನುಷ್ಯ ಅಬ್ದುಲ್ ಕೈಯಲ್ಲಿ ತನಗೆ ಅನಾರೋಗ್ಯವಾಗಿರುವ ಕಾರಣದಿಂದ ತಾನು ಬರುವುದಕ್ಕೆ ಸಾಧ್ಯವಿಲ್ಲವೆಂದೂ, ಮಾರನೇ ದಿನ ೧೧ ರಿಂದ ೧೧.೧೫ ರ ವರೆಗೆ ವ್ಹಿಯನೆಲಿಯಲ್ಲಿ ಕಾಯಬೇಕೆಂದೂ ಚೀಟಿಯನ್ನು ಕಳುಹಿಸುತ್ತಾಳೆ. ಇದರಿಂದ ರಾಹುಲನು ಒಂದೆಡೆ ಮಾಧವಿಯ ಜೊತೆ ಸಾಂತಾಕ್ರೂಜಿಗೆ ಹೋಗಲಾಗದ್ದಕ್ಕೆ ನಿರಾಶೆಯನ್ನೂ, ಮತ್ತೊಂದೆಡೆ ಅವಳ ಸಂಬಂಧದ ಜವಾಬ್ದಾರಿತನದಿಂದ ಪಾರಾದೆನೆಂಬ ನಿಶ್ವಾಸವನ್ನು ಹೊಂದುತ್ತಾನೆ. ಇಲ್ಲಿ ರಾಹುಲನ ದ್ವಂದ್ವ ವ್ಯಕ್ತಿತ್ವವನ್ನು ಗುರುತಿಸಬಹುದು ಹಾಗೂ ಜವಾಬ್ದಾರಿಯಿಂದ ವಿಮುಖನಾಗುವ ಅವನ ಮನೋಭಾವವನ್ನು ಗುರುತಿಸಬಹುದು.

ಆದರೆ ಮಾರನೇ ದಿನ ಮಾಧವಿಯು ತನ್ನನ್ನು ಹುಡುಕಿಕೊಂಡು ಹೋಟೆಲಿಗೆ ಬರುತ್ತಿರುವಾಗ ದೂರದಿಂದಲೇ ಅವಳನ್ನು ಗಮನಿಸಿದ ರಾಹುಲನು ತನ್ನ ಮುಖದ ಮೇಲೆ ಒಂದು ನಗೆಯನ್ನು ತಂದುಕೊಂಡು 'ಪಾಪ, ಈಗ ಇಷ್ಟು ಗಂಭೀರಳಾಗಿ, ಸ್ಮಾರ್ಟಾಗಿ ಬರುತ್ತಿರುವ ಈ ಹೆಣ್ಣು ಇಂದು ಮನೆಗೆ ತಿರುಗಿ ಹೋಗುವಾಗ ಹೇಗೆ ಕಾಣಿಸುವುದೋ, ಕೆದರಿದ ಕೂದಲು, ನೀರು ಸುರಿವ ಕಣ್ಣುಗಳು, ವಕ್ರವಾದ ತುಟಿಗಳು, ಹುಚ್ಚಿಯಂತೆ ... ?' ಎಂದು ಆಲೋಚಿಸುತ್ತಾನೆ. ಅವಳು ತಾನಿದ್ದಲ್ಲಿಗೆ ಬಂದಾಗ ಅವಳೆಡೆಗೆ ಒಂದು ವಕ್ರವಾದ ನಗೆಯನ್ನು ಬೀರಿ ಅವಳನ್ನು ಸ್ವಾಗತಿಸುತ್ತಾನೆ. ರಾಹುಲನ ಮಾತುಗಳಲ್ಲಿಯೇ ಆತನು ತನ್ನ ಮಾತುಗಳಲ್ಲಿ ವಿಶ್ವಾಸವನ್ನು ಹೊಂದಿಲ್ಲವೆಂಬುದು ಮಾಧವಿಗೆ ತಿಳಿಯುತ್ತದೆ. ರಾಹುಲನನ್ನು ಕುರಿತು ಈಗಿಂದೀಗಲೇ ಹೋಗಿ ತಮ್ಮ ಲಗ್ನವನ್ನು ರಿಜಿಸ್ಟರ್ಡ ಮಾಡಿ ಬಿಡೋಣ ಎಂದು ಹೇಳುತ್ತಾಳೆ. ಆದರೆ ಇದಕ್ಕೆ ಕೋಪಗೊಂಡ ರಾಹುಲನು ಮಾಧವಿಯನ್ನು ಕುರಿತು ನಿನಗಿನ್ನೂ ನನ್ನ ಮೇಲೆ ಸಂಪೂರ್ಣ ವಿಶ್ವಾಸವಿಲ್ಲ, ನಿನ್ನನ್ನು ಸೂರೆಗೊಂಡ ನಂತರ ಓಡಿ ಬಿಟ್ಟರೆ ಎಂಬ ಸಂಶಯ ನಿನ್ನದು. ಆದರೆ ನಿನಗೆ ಕೈ ಕೊಡಬೇಕೆಂದರೆ ಮೊದಲು ಲಗ್ನವಾಗಿ, ನಂತರ ಸಾಕಷ್ಟು ಸುಲಿಗೆ ಮಾಡಿದ ನಂತರವೂ ನಿನ್ನನ್ನು ಬಿಟ್ಟುಕೊಟ್ಟು ಹೋಗಲಿಕ್ಕಾಗುವುದಿಲ್ಲವೇ ಎಂದು ಹೇಳುವಲ್ಲಿ ಆತನ ಮಾನಸಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ.

ಇನ್ನು ಮುಂದೆ ಯಾವುದೇ ಭಾನಗಡಿ, ತೊಡಕು, ಸಮಸ್ಯೆ, ಜವಾಬ್ದಾರಿ, ಲಗ್ನ, ಬಂಧನ, ಕಾಯ್ದೆ, ಕಟ್ಟಳೆ ಎಲ್ಲವನ್ನು ಬಿಟ್ಟು ಬರೇ ಗೆಳೆಯರಾಗಿ ಇದ್ದು ಬಿಡಬೇಕು. ಅಲ್ಲದೇ ಮಾಧವಿಗೆ ಒಳ್ಳೆಯ ಗಂಡನ ಅವಶ್ಯಕತೆ ಇದ್ದು, ಅವಳನ್ನು ಹೂವಿನಂತೆ ನೋಡಿಕೊಳ್ಳುವ, ಕಲ್ಲಿನಂತೆ ಗಟ್ಟಿಯಾದ, ಅಚಲನಾದ ಶ್ರೀಮಂತ ದೊಡ್ಡ ಮನುಷ್ಯನ ಅವಶ್ಯಕತೆಯಿದೆ. ಅವಳಿಗೆ ಬೇಕಾದವನು ಒಂದು ಪಿತೃ ಮೂರ್ತಿ. ತಾನೋ ಬರೀ ಪಿಷ್ಟ-ಮೂರ್ತಿ. ಕಾಣಿಸಲು ಚಂದ, ಆದರೆ ತನ್ನಲ್ಲಿ ನಿಜವಾದ ಸತ್ವವಿಲ್ಲ, ಶಕ್ತಿಯಿಲ್ಲ, ಜೀವವಿಲ್ಲ. ಅವಳ ಒಂದು ದೈವಶಕ್ತಿಯೇ, ಅವಳನ್ನು ಕಾಯುವ ಒಂದು ದೇವತೆಯೇ, ಅವಳನ್ನು ಅವನ ಜೊತೆಗೆ ಹೋಗಗೊಟ್ಟಿಲ್ಲ ಎಂಬುದು ಅವನ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ರಾಹುಲನು ಮಾಧವಿಯನ್ನು ಕುರಿತು "ನನ್ನನ್ನು ಹೇಗಾದರೂ ಮಾಡಿ ಮರೆತು ಬಿಡು, ಮಾಧವಿ. ಇಷ್ಟು ದಿನಗಳ ಗೆಳೆತನಕ್ಕಾಗಿ ಥ್ಯಾಂಕ್ಸ್" (ಪು. ೪೯) ಎಂದು ಹೇಳುವಲ್ಲಿ ರಾಹುಲನ ಮಾನಸಿಕ ವಿಕ್ಷಿಪ್ತತೆ ಹಾಗೂ ಸಂಘರ್ಷಗಳನ್ನು ಗುರುತಿಸಬಹುದಾಗಿದೆ.

ಅಲ್ಲದೇ ರಾಹುಲನು ತನ್ನಲ್ಲಿ ಜವಾಬ್ದಾರಿ ಹೊರುವ ಶಕ್ತಿ ಇಲ್ಲದೇ ಇರುವುದರಿಂದ, ತಾನು ಹೇಡಿ, ಕೈಲಾಗದವನಾಗಿದ್ದರಿಂದ, ಅವಳ ಮೇಲೆಯೇ ತಪ್ಪು ಹೊರಿಸಿ ಪಾರಾಗಲು ಯತ್ನಿಸುತ್ತಾನೆ. ಆದರೆ ಯಾವುದೋ ಅಜ್ಞಾತ ಭೀತಿ ಅವನನ್ನು ಮಾಧವಿಯಿಂದ ದೂರ ಎಳೆದೊಯ್ದಿತ್ತು. ತನ್ನ ವ್ಯಕ್ತಿತ್ವದ ನಗ್ನ ದರ್ಶನ ಅವಳಿಗಾದರೆ ಮುಂದೆ ತನಗೆ ಉಳಿಗಾಲವಿಲ್ಲವೆಂಬ ಅಂಜಿಕೆಯಾದ್ದರಿಂದ ಬೇಕಂತಲೇ ಅವಳ ನಗ್ನತೆಯನ್ನು ಯಾಚಿಸಿ, ಅವಳ ಆತ್ಮವನ್ನು ಅವಮಾನಗೊಳಿಸಿ, ತನ್ನ ಕತ್ತಲೆಯಲ್ಲಿ ಓಡಿ ಹೋಗಿ ಅಡಗಿಕೊಂಡಿದ್ದನು.

ರಾಹುಲನು ತನ್ನ ತಾರುಣ್ಯದ ಮೊದಲ ಅವಸ್ಥೆಯಲ್ಲಿ ರೋಜಿ ವರ್ಗೀಸಳ ಬೆನ್ನ ಹಿಂದೆ ಹುಚ್ಚನಂತೆ ಅಡ್ಡಾಡುತ್ತಿರುತ್ತಾನೆ. ಪ್ರೇಮ ವೀರನಂತೆ ನಟಿಸುತ್ತಿರುತ್ತಾನೆ. ಆದರೆ ಅವಳ ಮೇಲೆ ಏನೇನೋ ಕತೆ ಕಟ್ಟಿ, ಸುಳ್ಳು ಹೇಳಿ ಅವಳಿಂದಲೂ ಕೂಡ ದೂರವಾಗಿರುತ್ತಾನೆ. ಇಲ್ಲೂ ಕೂಡ ನಾವು ರಾಹುಲನ ವಿಕ್ಷಿಪ್ತ ಮನಃಸ್ಥಿತಿಯನ್ನು ಗುರುತಿಸಬಹುದಾಗಿದೆ.

ತನ್ನ ತಂದೆಯ ಮರಣ ಕಾಲದಲ್ಲಿ ಕಾರವಾರಕ್ಕೆ ಬಂದ ರಾಹುಲನಿಗೆ 'ಕುಂದಾ ಶಿರೋಡಕರಳ' ಪರಿಚಯವಾಗುತ್ತದೆ. ಕುಂದಾ ಶಿರೋಡಕರ ರಾಹುಲನ ಮನಸ್ಸನ್ನು ಕಟ್ಟಾಡಿಸುತ್ತಿರುತ್ತಾಳೆ. ಅವಳ ಹೊಸದಾಗಿ ತುಂಬಿದ ದೇಹದಲ್ಲಿ ನಲಿದಾಡುತ್ತಿರುವ ತಾರುಣ್ಯ ಅವಳ ಮಾತುಗಳಲ್ಲಿ, ಕಣ್ಣುಗಳಲ್ಲಿ, ಅಂಗವಿನ್ಯಾಸದಲ್ಲಿ ಜಾಲದಂತೆ ಹರಡಿ ನಿಂತ ಕಾಮುಕತೆ, ರಾಹುಲನಲ್ಲಿ ಅವಳು ತೋರಿಸುವ ವಿಶೇಷ ಅಸ್ಥೆ, ಆದರ, ಕುತೂಹಲ, ಮುಚ್ಚುಮರೆಯಿಲ್ಲದಂತೆ ಹರಡಿ ನಿಂತ ದಿಟ್ಟಿಸಿ ನೋಡುವ ಕಣ್ಣುಗಳಲ್ಲಿ ಹಾಗೂ ಬಿರಿದು ನಿಂತ ತುಟಿಗಳಲ್ಲಿ, ನೇರವಾದ ಆಹ್ವಾನ–ಇವೆಲ್ಲ ರಾಹುಲನನ್ನು ಆಟವಾಡಿಸುತ್ತಿರುತ್ತವೆ. ಅಂತೆಯೇ ಅವನೂ ಕೂಡ ವೇಳೆ ಹೋಗಲೆಂದು ಸ್ವಲ್ಪ ಆಟವಾಡುತ್ತಿರುತ್ತಾನೆ. ಕುಂದಾಳಿಗೆ ತಾನೇ ಏಕೆ ಜೀವನಾನುಭವನ್ನು ಕೊಡಬಾರದು ಎಂದು ಆಲೋಚಿಸುತ್ತಾನೆ. ಕುಂದಾಳ ಜೊತೆ ಸಲುಗೆ ಬೆಳೆಸಿದ ರಾಹುಲನು ಅವಳೊಂದಿಗೆ ದೈಹಿಕ ಸಂಪರ್ಕವನ್ನೂ ಹೊಂದುತ್ತಾನೆ. ಅವಳನ್ನು ಅವಳ ಮನೆಗೆ ಮುಟ್ಟಿಸಲೆಂದು ಹೊರಟಾಗ ಕುಂದಾಳ ಮಾತಿನಿಂದ ಕುಂದಾಳು ರಾಹುಲನ ಬಗ್ಗೆ ಆಪ್ತತೆಯ ಭಾವನೆಗಳನ್ನು ಮೂಡಿಸಿಕೊಳ್ಳುವಲ್ಲಿ ತನ್ನ ಮಾಂಶಿಯ ಸಂಚು ಇದೆ ಎಂಬುದನ್ನು ತಿಳಿದು ದಿಙ್ಮೂಢನಾಗುತ್ತಾನೆ. ಅಲ್ಲಿಯವರೆವಿಗೂ ರಾಹುಲನು ಕುಂದಾಳನ್ನು ಬರೇ ಒಬ್ಬ ಫ್ಲರ್ಟ, ಪಾತರಗಿತ್ತಿಯಂತೆ ಸೊಗಸುಗಾರ್ತಿ ಎಂದು ತಿಳಿದಿರುತ್ತಾನೆ. ಆದರೆ ಈ ಮೂರ್ಖ ಮಾಂಸದ ಮುದ್ದಿ ತನ್ನ ಸಲುವಾಗಿ ಯೋಜಿಸಲ್ಪಟ್ಟ ವಧು ಎಂಬುದು ತಿಳಿದು ಸಿಟ್ಟಾಗುತ್ತಾನೆ. ತಾನು ಅವಳೊಡನೆ ಆಟವಾಡಲೆಂದು ಅವಳನ್ನು ಹುಚ್ಚುಚ್ಚಾರ ಪ್ರಶಂಸಿದ್ದನ್ನೂ, ಅವಳನ್ನು ಉತ್ತೇಜಿತಗೊಳಿಸಲು ತಾನು ಆಡಿದ ಮುದ್ದಾಟವನ್ನೂ ನೆನೆಸಿದಾಗ ರಾಹುಲನಿಗೆ ನಾಚಿಕೆಯಾಗುತ್ತದೆ. ಅಲ್ಲದೇ ರಾಹುಲನು ತಾನು ಆ ಸನ್ನಿವೇಶಕ್ಕೆ ತಕ್ಕಂತೆ ಆಡಿದ್ದ ಮಾತುಗಳಿಗೆ ಆ ಸನ್ನಿವೇಶದ ಹೊರಗೆ ಯಾವುದೇ ಅರ್ಥವೂ ಇರಲಿಲ್ಲ. ಆದರೆ ಕುಂದಾಳ ಮಾತುಗಳಿಂದ ತನ್ನ ಮಾತುಗಳಿಗೆ ಅರ್ಥ ಉಂಟಾಗಿದ್ದನ್ನು ನೋಡಿ ಅವನು ಗೊಂದಲದಲ್ಲಿ ಬೀಳುತ್ತಾನೆ. ತನಗೆ ಗೊತ್ತಾಗದೇ ತನ್ನಿಂದ ಆದ ಪ್ರಮಾದಕ್ಕೆ ಜವಾಬ್ದಾರಿಯೊಂದು ತನ್ನ ಮೈ ಮೇಲೆ ಬಂದುದಕ್ಕೆ ರಾಹುಲ ಕಸಿವಿಸಿಗೊಳ್ಳುತ್ತಾನೆ.

ಕುಂದಾಳ ವಿಚಾರದಲ್ಲಿ ರಾಹುಲನು ಬೇರೆ ಯಾವುದೇ ತೊಡಕು, ಸಂಬಂಧ, ಜವಾಬ್ದಾರಿಗಳಿಲ್ಲದೆ ಸ್ವತಂತ್ರವಾಗಿರಬೇಕು. ಬೆಳಗಾವಿಗೆ ಬಂದಾಗ ಒಂದು ಇಂಟರೆಸ್ಟು ಇರಲಿ ಎಂಬಂತೆ ತೀರಾ ಆತ್ಮ ನಿಷ್ಠವಾಗಿ, ಆತ್ಮ ಕೇಂದ್ರಿತವಾಗಿ ಯೋಜನೆಯನ್ನು ರೂಪಿಸಿಕೊಂಡಿರುತ್ತಾನೆ. ಆದರೆ ಕುಂದಾ, ಅವಳ ಮನೆಯವರು, ಅವನ ಮಾಂಶಿ ಎಲ್ಲರ ಪ್ರೇರಣೆ, ಯೋಜನೆ ಹಾಗೂ ಅವರು ಹೆಣೆದ ಬಲೆಯಲ್ಲಿ ಸಿಕ್ಕ ನಿರಪರಾಧಿ ನೊಣ ರಾಹುಲ! ಕುಂದಾಳ ವಿಚಾರದಲ್ಲಿ ರಾಹುಲನ ಆತ್ಮಗೌರವಕ್ಕೆ ತಗುಲಿದಷ್ಟು ಧಕ್ಕೆ ಹಿಂದೆಂದೂ ತಗಲಿರಲಿಲ್ಲ. ಅಲ್ಲದೇ ತನ್ನ ಬಗ್ಗೆ ಯೋಜನೆ ಹೂಡಲು ಇತರರಿಗೇನು ಅಧಿಕಾರ ಎಂದು ತನ್ನ ಮಾಂಶಿಯ ಬಗ್ಗೆಯೂ ಸಿಟ್ಟುಗೊಳ್ಳುತ್ತಾನೆ. ಆದರೆ ತನ್ನ ಸಿಟ್ಟು ಇಳಿದ ನಂತರ ತನ್ನ ಮಾಂಶಿಯು ತನ್ನ ಒಳ್ಳೆಯದನ್ನೇ ಬಯಸುತ್ತಾಳೆ ಎಂದು ಆಲೋಚಿಸುತ್ತಾನೆ.

ಮಾಧವಿಯಂತಹ ಕಲಿತ, ಸುಸಂಸ್ಕೃತ, ಸುಂದರ, ಸೋಫಿಸ್ಟಿಕೇಟೆಡ್ ಹುಡುಗಿಯನ್ನು ಬಿಟ್ಟ ನಂತರ ಮರಳಿ ಹುಡುಗಿಯರ ಭಾನಗಡಿಯಲ್ಲಿ ತಾನೇಕೆ ಬೀಳಬೇಕಿತ್ತು ಎಂದು ಆಲೋಚಿಸುತ್ತಾ ರಾಹುಲ ತನ್ನ ಹೊಣೆಗೇಡಿತನ, ಕುರುಡುತನದ ಬಗ್ಗೆ ತನ್ನನ್ನೇ ಹಳಿದುಕೊಳ್ಳುತ್ತಾನೆ. ಕೆಲವು ವರ್ಷವಾದರೂ ಯಾವ ತೊಡಕಿಲ್ಲದೇ, ಯಾವ ಬಂಧನವಿಲ್ಲದೇ, ಸ್ವತಂತ್ರವಾಗಿ, ಸ್ವಚ್ಛಂದವಾಗಿ, ಜೀವನಕ್ಕೊಂದು ದಿಕ್ಕು ಸಿಗುವತನಕ, ಜೀವಕ್ಕೊಂದು ಬೇರು ಮೊಳಕೆಯೊಡೆಯುವವರೆಗೆ ಯಾರ ಗೊಡವೆಯೂ ಇಲ್ಲದೇ, ಯಾವ ಪರಿವೆಯೂ ಇಲ್ಲದೇ ತನ್ನಷ್ಟಕ್ಕೆ ತಾನು ನಿಶ್ಚಿಂತೆಯಿಂದ ಜಗತ್ತನ್ನೆಲ್ಲಾ ತಿರುಗುತ್ತಾ, ದೇಶ ದೇಶಗಳನ್ನೆಲ್ಲಾ ನೋಡುತ್ತಾ, ತರತರದ ಅನುಭವಗಳನ್ನು ಸಂಗ್ರಹಿಸಬೇಕೆಂದು ನಿರ್ಧರಿಸಿರುತ್ತಾನೆ. ಹುಚ್ಚು-ಸಂಬಂಧ ಹುಟ್ಟಿಸುವ, ಬೆಳೆಸುವ, ತೊಡಕಾಗಿಸುವ, ಕೈ-ಕೈಯಾಟ, ಮೈ-ಮೈಯಾಟ ಆಡುವ ಹುಚ್ಚು ಹಂಬಲದಲ್ಲಿ ಸಿಕ್ಕಿಕೊಂಡು ಅವರುಗಳ ಯೋಜನೆಗೆ ಸ್ವಲ್ಪವೂ ಅವಕಾಶ ಕೊಡಬಾರದು ಎಂದು ರಾಹುಲನು ಯೋಚಿಸುವಲ್ಲಿ ಅವನ ಮಾನಸಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ.

ರಾಹುಲನು ಜವಾಬ್ದಾರಿಯಿಂದ ವಿಮುಖನಾಗಬೇಕೆಂದು ಆಲೋಚಿಸಿದ್ದರೂ ಕೂಡ ತನ್ನ ಮಾಂಶಿಯ ಮಾತಿನಂತೆ ಕುಂದಾಳನ್ನು ವಿವಾಹವಾಗಲು ಸಿದ್ಧನಾಗುತ್ತಾನೆ. ಆದರೂ ಕೂಡ ತನ್ನ ಜೀವನದಲ್ಲಿ ಮಾಧವಿ ಒಂದು ತಪ್ಪಾಗಿದ್ದರೆ-ಕುಂದಾ ಇನ್ನೊಂದು ತಪ್ಪು. ಬೆಂಕಿಯಿಂದ ಜಿಗಿದು ಸುಡುವ ಎಣ್ಣೆಯಲ್ಲಿ ಬಿದ್ದಂತೆ...! ಅಲ್ಲದೆ ಕುಂದಾ ರಾಹುಲನೆಂಬ ಬ್ರಹ್ಮ ರಾಕ್ಷಸನ ಜೊತೆಯಲ್ಲಿ ಇರುವ ಮಹಾಪಾಪವನ್ನು ಮಾಡುವವಳಿದ್ದಾಳೆ. ತಾನೊಬ್ಬ ಸುಂದರವಾದ ಮುಖವಾಡ ಧರಿಸಿರುವ ಹೃದಯಹೀನ ರಾಕ್ಷಸ. ಕುಂದಾಳಿಗೆ ಮೋಸ ಮಾಡಿ ಒಳಗೊಳಗೇ ನಗುತ್ತಿರುವ ಕಪಟ ಕೃಷ್ಣ. ಕುಂದಾ ಜಾಣೆಯಾಗಿದ್ದರೆ ತನ್ನನ್ನು ಬಿಟ್ಟು ಹೋಗಬೇಕೆಂದು ಆಲೋಚಿಸುತ್ತಾನೆ. ಅವಳನ್ನು ಬೆಚ್ಚಗೆ ಗುಟುಕು ಹಾಕಿ ಸಾಕಿ ಸಲಹುವ ಅವಳದೇ ಜಾತಿಯ ಒಂದು ಗಂಡು ಹಕ್ಕಿಯೊಂದಿಗೆ ಹಾಯಾಗಿ ತತ್ತಿ ಹಾಕುತ್ತಾ ಕೂತಿದ್ದರೆ ಅವಳ ಜೀವನ ಉದ್ಧಾರವಾಗುವುದು. ತಾನೂ ಕೂಡ ಸ್ವತಂತ್ರನಾಗಬಹುದು ಎಂದು ಆಲೋಚಿಸುವಲ್ಲಿ ಅವನ ದ್ವಂದ್ವ ವ್ಯಕ್ತಿತ್ವವನ್ನು ಗುರುತಿಸಬಹುದು. ಜೊತೆಗೆ ವಸ್ತುಸ್ಥಿತಿಯನ್ನು ಎದುರಿಸುವಂತಹ ಧೈರ್ಯ ಅವನಲ್ಲಿ ಇಲ್ಲದೇ

ಇರುವುದನ್ನು ಗುರುತಿಸಬಹುದಾಗಿದೆ. ಅಂತಿಮವಾಗಿ ಮಾಂಶಿಯ ಇಚ್ಛೆಯಂತೆಯೇ ಕುಂದಾಳೊಂದಿಗೆ ವಿವಾಹವಾಗಲು ಸಿದ್ಧನಾಗಿದ್ದ ರಾಹುಲನಿಗೆ ಲಗ್ನ ಸಮಾರಂಭವೆಂದರೆ ಶನಿಕಾಟವಾಗಿತ್ತು. ಲಗ್ನದ ಮರುದಿನವೇ, "ನನಗೆ ಎಲ್ಲಿಯಾದರೂ ಓಡಿಹೋಗಬೇಕೆನ್ನಿಸುತ್ತದೆ, ಮಾಂಶೀ" (ಪು. ೨೦೦) ಎಂದು ಪಂಜರದಲ್ಲಿ ಸಿಕ್ಕ ಹುಲಿಯಂತೆ ಘರ್ಜಿಸುವಲ್ಲಿ ರಾಹುಲನ ಮಾನಸಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ.

ವಿವಾಹವಾದ ಕೆಲ ದಿನಗಳ ನಂತರ ಕುಂದಾಳ ತಾಯಿ, ತಂದೆ ಹಾಗೂ ನೆರೆ ಮನೆಯ ರಾಮ ಸುಂಠಣಕರ ಬೆಳಗಾವಿಯಿಂದ ಮುಂಬಯಿಗೆ ಕುಂದಾಳನ್ನು ನೋಡಲೆಂದು ಬಂದಿರುತ್ತಾರೆ. ಅವರ ಮಾತುಕತೆಗಳು, ಆ ಸಮಯದಲ್ಲಿ ಕುಂದಾಳ ಉಪದೇಶಗಳಿಂದ ರಾಹುಲನಿಗೆ ತನ್ನ ಮನೆಯಲ್ಲಿಯೇ ತಾನು ಪರಕೀಯನಾಗಿದ್ದಂತೆ ಅನಿಸತೊಡಗುತ್ತದೆ. ಇಲ್ಲಿ ನಾವು ರಾಹುಲನ ಪರಕೀಯ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ. ಅವರುಗಳ ಮಾತುಕತೆಗಳಿಂದಾಗಿ ರಾಹುಲನ ಮನಸ್ಸು ಅಸ್ವಸ್ಥವಾಗಿ, ಉದ್ವಿಗ್ನಗೊಂಡಿರುತ್ತದೆ. ಏನೇನೋ ಕತೆ ಹೇಳಿ ನಗಿಸುತ್ತಿದ್ದ ರಾಮ ಸುಂಠಣಕರನ ಮೇಲೆ ರಾಹುಲ ಸಿಟ್ಟುಗೊಳ್ಳುತ್ತಾನೆ. ಕುಂದಾ ತನ್ನನ್ನು ಮದುವೆಯಾಗದೇ ತನ್ನ ಬ್ಯಾಡ್‌ಮಿಂಟನ್ ಪಾರ್ಟ್ನರ್ ರಾಮ ಸುಂಠಣಕರನನ್ನೇ ವಿವಾಹವಾಗಿದ್ದರೆ ಅವರೆಲ್ಲರಿಗೂ ಹರಟೆ ಹೊಡೆಯಲು ಒಳ್ಳೆಯ ಅವಕಾಶವಾಗುತ್ತಿತ್ತು. ತಾನೂ ಸ್ವತಂತ್ರವಾಗಿ ತನ್ನ ಬೆಂಕಿಯ ಸಮುದ್ರದಲ್ಲಿ ತೇಲಿ ಹೋಗಬಹುದಿತ್ತು ಎಂದು ಆಲೋಚಿಸುವಲ್ಲಿ ರಾಹುಲನ ಮಾನಸಿಕ ಸಂಘರ್ಷಗಳು, ತೊಳಲಾಟಗಳು ಕಂಡು ಬರುತ್ತವೆ.

ರಾಹುಲನು ಕಂಪನಿಯ ಕೆಲಸದ ಮೇರೆಗೆ ಇಂಗ್ಲೆಂಡಿಗೆ ಒಂದು ವರ್ಷದ ಮಟ್ಟಿಗೆ ಹೊರಟಿರುತ್ತಾನೆ. ಇಂಗ್ಲೆಂಡಿಗೆ ಹೋಗುವವರೆಗೂ ಕುಂದಾಳೊಂದಿಗೆ ಸಂತೋಷದಿಂದ ಇರಬೇಕೆಂದು ಬಯಸುತ್ತಾನೆ. ಆದರೆ ಕುಂದಾಳನ್ನು ಮಾತ್ರ ಇಂಗ್ಲೆಂಡಿಗೆ ಕರೆದೊಯ್ಯಲು ಸಿದ್ಧನಿರುವುದಿಲ್ಲ. ಅವಳನ್ನು ಅಲ್ಲಿಗೆ ಕರೆದೊಯ್ಯುವ ಬದಲು ತಾನು ಹಿಂತಿರುಗಿ ಬರುವುದೇ ಒಳ್ಳೆಯದೆಂದು ಆಲೋಚಿಸುತ್ತಾನೆ. ಅಲ್ಲದೇ ಅವನು ತನ್ನ ಸ್ನೇಹಿತನಾದ ಅರವಿಂದನೊಡನೆ "ನನಗೆ ನಾನಾಗಿ ಜೀವಿಸಬೇಕಾಗಿದೆ. ಹಾಗೆ ಜೀವಿಸಲಿಕ್ಕೆ ಇಲ್ಲಿ ನನಗೆ ಅಸಾಧ್ಯವಾದ ಮಾತಾಗಿದೆ... ಹಾಗೇ ಈಗಿದ್ದಂತೆ ನನ್ನ ಜೀವನವನ್ನು ಸೀಮಿತಗೊಳಿಸಿ ಒಂದು ನಿರ್ದಿಷ್ಟ ವರ್ತುಳದಲ್ಲಿ ಇದ್ದು ಬಿಡಬಹುದು ನಿಜ– ಹಾಗೆ ಎಷ್ಟೋ ಸಾವಿರಾರು ಜನ ಇರುತ್ತಾರೆ ನಿಜ. ಆದರೆ ನನಗೆ ಆ ಭಾಗ್ಯವಿಲ್ಲ.ನನ್ನದು ಶಾಪಗ್ರಸ್ತ ಆತ್ಮ– ಅದಕ್ಕೆ ತಕ್ಕಂತೆ ಪರಿಸರ ಸಿಕ್ಕರೆ ಮಾತ್ರ ಅದು ವಿಕ್ಷೇಪದಿಂದ ಮುಕ್ತವಾಗಿ ಸುಖ ಸಾಯಲಿ, ಸಮಾಧಾನ ಸಾಯಲಿ, ಕನಿಷ್ಠ ಒಂದು ರೀತಿಯ ಶಾಂತಿಯನ್ನಾದರೂ ಅನುಭವಿಸಬಹುದು. ನನ್ನ ಈ ಆತ್ಮಕ್ಕೆ ಬೇಕಾದಾಗ ನಿರ್ಲಿಪ್ತತೆಯಿಂದ, ಬೇಕಾದಾಗ ಆಸಕ್ತಿಯಿಂದ, ಬೇಕಾದಾಗ ಒಳಗೆ, ಬೇಕಾದಾಗ ಹೊರಗೆ, ಬೇಕಾದಾಗ ಕತ್ತಲಲ್ಲಿ, ಬೇಕಾದಾಗ ಬೆಳಕಿನಲ್ಲಿ– ಒಟ್ಟಿನ ಮೇಲೆ ಏಕಾಂತದಲ್ಲಿ ಇರಲು ಸಾಧ್ಯವಾಗುವ ಪರಿಸರ ಬೇಕು" (ಪು. ೨೫೭) ಎಂದು ಹೇಳುವಲ್ಲಿ ಅವನೊಳಗಿನ ಸಂಘರ್ಷವನ್ನು, ವಿಕ್ಷಿಪ್ತತೆಯನ್ನು ಗುರುತಿಸಬಹುದಾಗಿದೆ.

ರಾಹುಲನ ಪ್ರಕಾರ ಆತನೊಬ್ಬ ಜಿಪ್ಸಿ–ಊರಿಂದ ಊರಿಗೆ, ದೇಶದಿಂದ ದೇಶಕ್ಕೆ, ಸಂಸ್ಕೃತಿಯಿಂದ ಸಂಸ್ಕೃತಿಗೆ, ಹೆಣ್ಣಿನಿಂದ ಹೆಣ್ಣಿಗೆ ತಿರುಗುವ ಜಿಪ್ಸಿ. ಆತನಿಗೆ ಬೇರೆಂಬುದು

ಇಲ್ಲದೇ ಇದ್ದುದರಿಂದ ಹೃದಯವೂ ಇಲ್ಲ – ತಳವೂ ಇಲ್ಲ – ಬುಡವೂ ಇಲ್ಲ. ಹಾಗೇ ಚಕ್ರದಂತೆ ದಿಕ್ಕು ಕಂಡ ಕಡೆಗೆ ಉರುಳುವುದೇ ಆತನ ಆತ್ಮದ ನಿಯಮದಂತೆ ತೋರುತ್ತಿರುತ್ತದೆ. ಇಲ್ಲಿ ನಾವು ಮುಖ್ಯವಾಗಿ ರಾಹುಲನ ವಿಕ್ಷಿಪ್ತ ಮನಸ್ಥಿತಿಯನ್ನು ಗುರುತಿಸಬಹುದಾಗಿದೆ. ತಾನು ಇಂಗ್ಲೆಂಡಿಗೆ ತೆರಳುವ ಮುನ್ನ ರಾಹುಲನು ಕುಂದಾಳಿಗೆ ಬರೆದ ಪತ್ರದಲ್ಲಿ ನಿನ್ನ ದಾರಿ ಬೇರೆ, ನನ್ನ ದಾರಿ ಬೇರೆ ಕುಂದಾ... ಆದುದರಿಂದ ನೀನು ಧೈರ್ಯದಿಂದ, ಸ್ಥೈರ್ಯದಿಂದ ನಿನ್ನ ದಾರಿಯನ್ನು ಕಂಡುಕೊಳ್ಳಲು ಯತ್ನಿಸು. ನಿನ್ನ ಜೀವನ ಮುರಿಯಿತು, ಹಾಳಾಯಿತು ಎಂದೆಣಿಸಬೇಡ. ನಿಜವಾಗಿ ನೋಡಿದರೆ ನಮ್ಮ ಸಂಬಂಧದ ವರ್ತುಲದಲ್ಲಿಯೇ ನಾನು ನೀನೂ ಕೂಡಿಯೇ ಹಾಳಾಗುತ್ತ ನಡೆದಿದ್ದೇವೆ. ಅದಕ್ಕಿಂತ ಮೊದಲು ತೀವ್ರ ದುಃಖವಾದರೂ ಜೀವನವೇ ಅಸಹ್ಯವೆಂದೆನಿಸಿದರೂ ನಾವು ಒಬ್ಬರನ್ನೊಬ್ಬರು ಅಗಲುವುದು ಲೇಸು. ನನ್ನ ವ್ಯಕ್ತಿತ್ವದ ನಿಯಮದ ಪ್ರಕಾರ ನನ್ನತನ ಶೋಧಿಸ ಬೇಕಾಗಿರುವುದರಿಂದ ನಾನು ಹೋಗುತ್ತಿರುವೆ.. ನೀನು ನನ್ನನ್ನು ಮುಕ್ತ ಹೃದಯದಿಂದ ಕ್ಷಮಿಸಬೇಕು.. ಜೀವನದಲ್ಲಿ ಎಷ್ಟೋ ಅಪಘಾತಗಳಾಗುತ್ತವೆ. ನನ್ನ ವಿಮಾನ ಆಕಾಶದಲ್ಲಿ ಮಾಯವಾದೊಡನೆ ನನ್ನ ಪ್ರಾಣವೂ ಹಾರಿಹೋಯಿತೆಂದು ಭಾವಿಸಿ ಬಿಡು. ನಾನು ಅಕಸ್ಮಾತ್ತಾಗಿ ವಿಮಾನ–ಅಪಘಾತದಲ್ಲಿ ನಾಶವಾಗಿಬಿಟ್ಟೆ, ನಿರ್ನಾಮವಾದೆ ಅಂತ ಭಾವಿಸಿಬಿಡು" (ಪು. ೨೫೫) ಎಂಬ ಮಾತುಗಳು ರಾಹುಲನ ವಿಕ್ಷಿಪ್ತ ಮನಃಸ್ಥಿತಿಯ ಪ್ರತೀಕಗಳಾಗಿವೆ.

೫.೨.೧ ತಂದೆ–ಮಕ್ಕಳ ನಡುವಿನ ಸಂಘರ್ಷ :

ದೇಸಾಯಿ ಅವರ ಇತರ ಕಾದಂಬರಿಗಳಲ್ಲಿ ಕಂಡು ಬರುವಂತೆ 'ವಿಕ್ಷೇಪ' ಕಾದಂಬರಿಯಲ್ಲಿಯೂ ಕೂಡ ನಾವು ತಂದೆ–ಮಕ್ಕಳ ಸಂಘರ್ಷವನ್ನು ಗುರುತಿಸಬಹುದಾಗಿದೆ.

ರಾಹುಲನ ತಂದೆ ಕಾರವಾರದಲ್ಲಿ ಒಂದು ಬಟ್ಟೆ ಅಂಗಡಿಯನ್ನು ನಡೆಸುತ್ತಿರುತ್ತಾನೆ. ಬಹಳ ಬೇಗ ಹೆಂಡತಿಯನ್ನು ಕಳೆದುಕೊಂಡ ಆತ ಮತ್ತೊಂದು ಮದುವೆಯನ್ನು ಆಗಿರುತ್ತಾನೆ. ಇದು ರಾಹುಲನ ಮೇಲೆ ವಿಪರೀತವಾದ, ಕಠಿಣವಾದ, ಪ್ರಭಾವವನ್ನು ಬೀರುತ್ತದೆ. ಆಗ ರಾಹುಲನಿಗೆ ಕೇವಲ ಎಂಟು ವರ್ಷಗಳಾಗಿರುತ್ತದೆ. ಅಲ್ಲಿಂದ ಆತ ತನ್ನ ಮಾಂಶಿಯ ಬಳಿಯಲ್ಲಿಯೇ ಬೆಳೆದಿರುತ್ತಾನೆ. ಹೀಗಾಗಿ ರಾಹುಲನಿಗೆ ತನ್ನ ತಂದೆಯನ್ನು ನೋಡಲು ಹೋಗಬೇಕು ಎಂದು ಅನ್ನಿಸುತ್ತಿರಲೇ ಇಲ್ಲ. ತಾನು ಅಲ್ಲಿಗೆ ಹೋದರೆ ಪರದೇಶದಲ್ಲಿ ಸಿಕ್ಕಿ ಬಿದ್ದ ಅಪರಿಚಿತನಂತೆ ತನ್ನ ಪಾಡಾಗಿರುತ್ತದೆ ಎಂದು ಯೋಚಿಸುತ್ತಿರುತ್ತಾನೆ. ಏಕೆಂದರೆ ರಾಹುಲನಿಗೆ ತನ್ನ ತಂದೆಯೊಡನೆ ಯಾವುದೇ ಸಂಪರ್ಕವಾಗಲೀ, ಸುಸ್ಪರ್ಶವಾಗಲಿ ಇರುವುದಿಲ್ಲ. ಮೊದಲೆಲ್ಲ ವರ್ಷಕ್ಕೆ ಮೂರು ನಾಲ್ಕು ದಿನ ಸೂಟಿಯಲ್ಲಿ ಹೋಗಿ, ಹುಡುಗರೊಂದಿಗೆ ಒಂದೆರಡು ಮಾತುಗಳನ್ನಾಡಿ, ತಂದೆಯವರ ಕೂಡ ಕೇಳಿದ ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರದ ಹೊರತಾಗಿ ಏನೂ ಮಾತನಾಡದೆ, ಮಲತಾಯಿಯ ಕೂಡ ದೂರದಿಂದ, ಆದರದಿಂದ, ವಿನಯದಿಂದ ವರ್ತಿಸಿ, ಮನೆಯಲ್ಲಿ ಇರುವ ಶಾಸ್ತ್ರ ಮಾಡಿ ಏನಾದರೊಂದು ಕುಂಟ ಕಾರಣವನ್ನು ಮಾಂಶಿಗೆ ಹೇಳಿ ಮರಳಿ ಬೆಳಗಾಂವಿಗೆ ಓಡಿಹೋಗುತಿದ್ದನು. ತಂದೆಯಿಂದ ರೊಕ್ಕ ಇಸಗೊಳ್ಳುವ ಕೆಲಸವನ್ನೂ ಕೂಡ ತನ್ನ ಮಾಂಶಿಗೆ ಬಿಟ್ಟು ಬಿಟ್ಟಿದ್ದನು. ಅದಕ್ಕಿಂತಲೂ ಮುಖ್ಯವಾಗಿ ಸಂಪರ್ಕ, ಸಂಸ್ಪರ್ಶ ರಾಹುಲನ ಸಮಸ್ಯೆಗಳಾಗಿರುತ್ತದೆ. ತಂದೆಯ

ಜೊತೆಯಲ್ಲಿಯೂ ಕೂಡ ಹೋದ ಮೂರು-ನಾಲ್ಕು ವರ್ಷಗಳಿಂದ ಯಾವುದೇ ವಿಶೇಷವಾದ ಪತ್ರ ವ್ಯವಹಾರವೂ ಇರುವುದಿಲ್ಲ. ತಂದೆಗೆ ರಾಹುಲನ ವ್ಯಕ್ತಿತ್ವದ ಬಗ್ಗೆ ಸ್ವಲ್ಪವೂ ಸಹಾನುಭೂತಿ ಇರುವುದಿಲ್ಲ. ರಾಹುಲನ ಬಗ್ಗೆ ತಿಳುವಳಿಕೆಯೂ ಇರುವುದಿಲ್ಲ. ಹಾಗಿದ್ದಾಗ ಅವರೊಂದಿಗೆ ವಿಶೇಷ ಸಂಬಂಧವನ್ನಾದರೂ ಏಕೆ ಹೊಂದಬೇಕು ಎಂಬುದು ಅವನ ಆಲೋಚನೆಯಾಗಿರುತ್ತದೆ. ಇಲ್ಲಿ ತಂದೆ ಮಕ್ಕಳ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ.

ತಾನು ಸ್ವತಂತ್ರವಾಗಿ ತನ್ನ ಸ್ವಂತ ಬುದ್ಧಿಮತ್ತೆಯ, ತನ್ನ ವ್ಯಕ್ತಿತ್ವದ ಶಕ್ತಿಯ ಮೇಲೆ ಕಾಲೂರಿ ನಿಲ್ಲಬೇಕು. ರೊಕ್ಕ ಕೊಟ್ಟರೆ ಕೊಡಲಿ ಇಲ್ಲ. ಬಿಡಲಿ, ತಾನಂತೂ ತನ್ನ ನಿರ್ಧಾರದಂತೆಯೇ ನಡೆಯಬೇಕು ಎಂಬುದು ರಾಹುಲನ ಹಠ. ಮಾಂಶಿಯ ರಾಜಕಾರಣದಿಂದ ಅಪ್ಪ ಕೊಡಲು ಒಪ್ಪಿದ ೨೫೦ ರೂ ಗಳ ಸಂಪರ್ಕದ ಹೊರತು ಅವರಿಬ್ಬರ ನಡುವೆ ಯಾವುದೇ ಸಂಪರ್ಕವಿರಲಿಲ್ಲ. ತಂದೆ ಎಂದಾದರೊಮ್ಮೆ ತಮ್ಮ ಮೋಹನನಿಂದ ಪತ್ರ ಬರೆಸುತ್ತಿದ್ದ. ರಾಹುಲನೂ ಎಂದಾದರೊಮ್ಮೆ ಒಂದು ಕಾರ್ಡಿನಲ್ಲಿ ಉತ್ತರ ಗೀಚಿ ಬರೆಯುತ್ತಿದ್ದ. ತೀರ ಔಪಚಾರಿಕ ಹಾಗೂ ದಿನಬಳಕೆಯ ವಿಷಯಗಳನ್ನು ಬಿಟ್ಟರೆ ಮತ್ತೇನನ್ನೂ ಬರೆಯುತ್ತಿರಲಿಲ್ಲ.

ಈಗ ಮೂರು-ನಾಲ್ಕು ವರ್ಷಗಳ ನಂತರ ತನ್ನ ತಂದೆಯ ಪ್ರಕೃತಿ ಸ್ವಲ್ಪ ಚಿಂತಾಜನಕ ಪರಿಸ್ಥಿತಿಯಲ್ಲಿರುವಾಗ ರಾಹುಲನು ತನ್ನ ತಂದೆಯ ಭೇಟಿಗೆ ಬಂದಿದ್ದಾನೆ. ಬಂದ ದಿನ ಸತೀಶನ ಜೊತೆಗೆ ತಂದೆಯ ರೂಮಿಗೆ ಹೋದ ರಾಹುಲ ಸುಮ್ಮನೆ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾನೆ. ತಲೆಯಲ್ಲಿ ಕಲ್ಪಿಸಿಟ್ಟ ಪ್ರಶ್ನೆಗಳು ಅವನ ಬಾಯಿಯಿಂದ ಹೊರಡುವುದೇ ಇಲ್ಲ. . ಸತೀಶ ಮಾತನಾಡಲು ತೊಡಗಿದ್ದರಿಂದ ರಾಹುಲನ ಮೌನ ಅನರ್ಥಕ್ಕೆ ಎಡೆಕೊಡಲಿಲ್ಲ. ಕೆಲವು ಔಪಚಾರಿಕ ಮಾತುಕತೆಗಳಾದ ನಂತರ "ತಾನು ಇನ್ನು ಹಾಸಿಗೆಯಿಂದ ಸೀದಾ ಅಲ್ಲಿಗೆ ಹೋಗುವುದರಿಂದ ನೀನೇನು ಮಾಡಬೇಕೆಂದಿರುವೆ" ಎಂದು ತಂದೆಯು ರಾಹುಲನನ್ನು ಪ್ರಶ್ನಿಸುತ್ತಾನೆ. ಅಂದರೆ ಅಂಗಡಿ, ಮನೆ, ಆಸ್ತಿಗಳ ಬಗ್ಗೆ, ತಮ್ಮ-ತಂಗಿಯರ ಬಗ್ಗೆ ಏನು ವ್ಯವಸ್ಥೆ ಮಾಡಬೇಕೆಂದಿರುವೆ ಎಂದು ಕೇಳಿದಾಗ ರಾಹುಲ ಅದನ್ನು ಅವರೇ ಮಾಡಬೇಕೆಂದು ಹೇಳುತ್ತಾನೆ. ತಂದೆ ಕೇಳಿದ "ನಿನಗೆ ಅಂಗಡಿ ನೋಡಿಕೊಳ್ಳುವುದಾಗುವುದೇ?" (ಪು. ೧೩೫) ಎಂಬ ಪ್ರಶ್ನೆಯಿಂದ ರಾಹುಲನಿಗೆ ಅಪಮಾನವಾಗುತ್ತದೆ. ತನ್ನ ಯೋಗ್ಯತೆಯೇನು, ತನಗೆ ಅಂಗಡಿಕಾರನಾಗುವಿಯಾ ಎಂದು ಕೇಳುವುದೆಂದರೇನು ಎಂದು ಒಮ್ಮೆಲೆ ಇಬ್ಬರ ನಡುವೆ ಜೇಲಿ ನಿರ್ಮಾಣವಾಗುತ್ತದೆ. ಲಗ್ನ ಕುರಿತು ತಂದೆ ಕೇಳಿದ ಪ್ರಶ್ನೆಗೆ, ಅದರ ಬಗ್ಗೆ ಕಾಳಜಿ ಮಾಡಬೇಡಿ ಎಂದು ರಾಹುಲನು ಉತ್ತರಿಸುತ್ತಾನೆ. ಇದರಿಂದ ಒಮ್ಮೆಲೆ ತಂದೆಯವರ ರಕ್ತದ ಒತ್ತಡ ಏರುತ್ತದೆ. ಕಾಳಜಿ ಮಾಡಬೇಡಿರಿ. ಕಾಳಜಿ ಮಾಡಬೇಡಿರಿ ಎಂದರೇನು? ನಾನು ಹಡೆದ ತಂದೆ ಎಂದ ಮೇಲೆ ಕಾಳಜಿ ಮಾಡಬಾರದೆಂದರೇನು? "ನೀನು ಬೇಗ ಮದುವೆ ಮಾಡಿಕೊಂಡು ಅಂಗಡಿ ನೋಡಿಕೊಳ್ಳಬೇಕು ಮೋಹನನ ಶಿಕ್ಷಣ ಮುಗಿಯುವ ತನಕ. ಆಮೇಲೆ ಆತ ಅಂಗಡಿಯನ್ನೊಪ್ಪಿಸಿಕೊಂಡರೆ ಚೆನ್ನಾಯಿತು. ಇಲ್ಲದಿದ್ದರೆ ಇಬ್ಬರೂ ಕೂಡಿ ಅಂಗಡಿ ಮಾರಿ ಹಾಳು ಬಾಂವಿ ಬಿದ್ದು ಬಿಡಿರಿ-ನನಗೇನು ಅಂಗಡಿ-ಮನೆಗಳೆಲ್ಲವನ್ನು ನಿಮಗೆ ಹೇಗೆ ಬೇಕೋ ಹಾಗೆ ಪಾಲು ಮಾಡಿಕೊಳ್ಳಿ, ಇಲ್ಲದಿದ್ದರೆ ಎಲ್ಲವೂ ಕೂಡಿಯೇ ನಡೆಯಲಿ ಎಂದು ನಿನ್ನ ಇಚ್ಛೆ ಇದ್ದರೆ, ನಿನ್ನ ಮಾಂಶಿಯ ಇಚ್ಛೆ ಇದ್ದರೆ

– ಕೂಡಿ ನಡೆಯಲಿ ಮುಂದಿನ ಎಲ್ಲ ವಿಷಯಕ್ಕೂ ನೀನೇ ಜವಾಬ್ದಾರ, ನಿನ್ನದೇ ಹೊಣೆಗಾರಿಕೆ" ಎಂದು ಹೇಳುತ್ತಾರೆ. ಆದರೆ ತಾನೇನಾದರೂ ಇಂಗ್ಲೆಂಡ್-ಅಮೇರಿಕ ಎಲ್ಲಿಯಾದರೂ ಹೋದರೇ? ಎಂಬ ರಾಹುಲನ ಪ್ರಶ್ನೆಗೆ ಎರಡು ಮೂರು ವರ್ಷ ತಡೆದು ಹೋಗು. ಮೊದಲು ಲಗ್ನ ಮಾಡಿಕೊಂಡು ಇಲ್ಲಿ ಬೇರೂರಿ ನಿಂತ ಮೇಲೆ ಅಂಗಡಿ-ಆಸ್ತಿಯ ವ್ಯವಸ್ಥೆಯನ್ನು ಯಾರಿಗಾದರೂ ಮಾಡಲು ಹೇಳಿ ಹೋಗು. ರಾಹುಲ, ನೀನು ಮೊದಲು ಇಲ್ಲಿ ನೆಲೆಯೂರಿ ನಿಲ್ಲಬೇಕು. ನಮ್ಮ ವಂಶ-ನಮ್ಮ ಕುಟುಂಬ ಹಾಯಾಗಿ ನೆಲೆಸಬೇಕು. ಆ ನಂತರ ನೀನು ಎಲ್ಲಿಯಾದರೂ ಹೋಗು' ಎಂದು ಹೇಳಿದ ಮಾತುಗಳನ್ನು ಕೇಳಿ ರಾಹುಲನಿಗೆ ತನ್ನ ವಿಚಾರ ಪಾತಳಿಯೇ ಬೇರೆ, ತಂದೆಯ ವಿಚಾರ ಪಾತಳಿಯೇ ಬೇರೆ. ಹೀಗಿದ್ದಾಗ ತಿಳುವಳಿಕೆ, ವಾದ, ಚರ್ಚೆ, ಮಾತುಕತೆ ಮುಂತಾದವುಗಳಿಗೆ ಅವಕಾಶವೇ ಇಲ್ಲವೆಂಬ ಮನದಟ್ಟಿನಿಂದ ರಾಹುಲ ಮರಗಟ್ಟಿ ಕೂರುತ್ತಾನೆ. ನಂತರದ ಎರಡು ದಿನಗಳಿಂದ ತಂದೆಯ ಪ್ರಕೃತಿ ಬಿಘಡಾಯಿಸಿದ್ದರಿಂದ ಅವನೊಡನೆ ಮಾತನಾಡುವ ಪ್ರಸಂಗವೇ ರಾಹುಲನಿಗೆ ಬರುವುದಿಲ್ಲ. ಅರ್ಧಾಂಗ ವಾಯುವಿನ ವಿಕಾರ ಪ್ರಾರಂಭವಾಗಿ ರಾಹುಲನ ತಂದೆ ಕೊನೆಗೂ ಚೇತರಿಸಿಕೊಳ್ಳಲಾಗದೇ ಮರಣ ಹೊಂದುತ್ತಾನೆ. ಕೊನೆಗೂ ಕೂಡ ತಂದೆ-ಮಕ್ಕಳ ನಡುವಿನ ಭಿನ್ನಾಭಿಪ್ರಾಯಗಳು, ಸಂಘರ್ಷಗಳು ಹಾಗೆಯೇ ಉಳಿದುಕೊಳ್ಳುತ್ತವೆ.

೫.೨.೨ ರಾಜಕೀಯ ಸಂಘರ್ಷಗಳು :

ಶಾಂತಿನಾಥ ದೇಸಾಯಿಯವರ 'ವಿಕ್ಷೇಪ' ಕಾದಂಬರಿಯಲ್ಲಿ ರಾಜಕೀಯ ಸಂಘರ್ಷವನ್ನು ಕಾಣಬಹುದಾಗಿದೆ. ರಣಜಿತ ಗಾಯಕವಾಡ ಸಂಸ್ಥಾನವೊಂದರ ಮನೆತನಕ್ಕೆ ಸೇರಿದವನಾಗಿರುತ್ತಾನೆ. ಸಂಸ್ಥಾನದ ವಿಲಿನೀಕರಣ ಪ್ರಾರಂಭವಾಗುವ ಮೊದಲು ಸಂಸ್ಥಾನದ ರಾಜ ಮನೆತನದವರು ಬಹಳ ಅದ್ದೂರಿಯಾದ ಜೀವನವನ್ನು ನಡೆಸುತ್ತಿರುತ್ತಾರೆ. ಆದರೆ ಸಂಸ್ಥಾನದ ವಿಲಿನೀಕರಣದಿಂದಾಗಿ ಅವರೆಲ್ಲರ ಜೀವನ ಶೈಲಿಯೇ ಬದಲಾಗುತ್ತದೆ. ರಣಜಿತನು ತಾನು ಒಂದು ಕಾದಂಬರಿಯನ್ನು ಬರೆಯಬೇಕೆಂದಿದ್ದು ತನ್ನ ಕತೆಯನ್ನೇ ಮುಚ್ಚುಮರೆಯಿಲ್ಲದೇ ಬರೆಯುವುದಾಗಿ ತಿಳಿಸುತ್ತಾನೆ. ಸಂಸ್ಥಾನದ ವಿಲಿನೀಕರಣದ ನಂತರ ರಣಜಿತನ ತಂದೆ, ಅಂದರೆ ಮಹಾರಾಜರು ಮುಂಬೈಗೆ ಬರುವರು. ಅಲ್ಲಿ ಅವರ ಮೂರನೆಯ ಮಗನಾದ ರಣಜಿತ ಮೊದಲು ಚಿಕ್ಕಂದಿನಿಂದಲೂ ರಾಜ ವೈಭವವನ್ನುಂಡ ಸೂಕ್ಷ್ಮ ಮನಸ್ಸಿನ ರಾಜಕುಮಾರ. ಈಗ ಮುರಾರಜಿಯವರ ಔದಾರ್ಯದ ಮೇಲೆ ತಿಂಗಳ ನಾಲ್ಕು ನೂರು ರೂಪಾಯಿಗಳ ಮೇಲೆ ಜೀವಿಸುವ ಟ್ರ್ಯಾಜಿಕ್ ವ್ಯಕ್ತಿ. ಅವನ ಹಿಂದಿನ, ಈಗ ಬರೇ ಕನಸಾದ ಜೀವನ ಹಾಗೂ ಅವನ ಇಂದಿನ ಒಬ್ಬ ಯಃಕಶ್ಚಿತ್ ಭಿಕಾರಿಯ ಜೀವನ. ನಾಟ್ಯಮಯ ವ್ಯತ್ಯಾಸ, ಅವನತಿಯ ಸ್ಪಷ್ಟ ಚಿತ್ರ, ತಂದೆ ಮುದುಕ ಮಹಾರಾಜ, ಕುಡುಕ. ಅವನಿಗೆ ಸಿಗುವ ತಿಂಗಳಾ ನಾಲ್ಕು ಸಾವಿರ ರೂಪಾಯಿ ಅವನಿಗೆ, ಅವನ ಇಂಗ್ಲೀಷ್ ಮಡದಿಗೆ ಸಾಕಾಗುವುದಿಲ್ಲ. ಯುವರಾಜ ಇಂಗೆಂಡಿನಲ್ಲಿ.. ಮಹಾರಾಜನ ರಾಣಿಯರು-ರಂಡೆಯರು, ಯುವರಾಜನ ಲೈಂಗಿಕ ವೈಪರೀತ್ಯ, ಯುವರಾಜನ ಹೆಂಡತಿಯ ಪ್ರೇಮ ಸಣ್ಣ ಮೈದುನನ ಮೇಲೆ..ಹಹಹ.. ಶಿಕಾರಿ,ಸಂಸ್ಥಾನದಲ್ಲಿ ಸ್ವರಾಜ್ಯ ಚಳುವಳಿ, ಗೋಳಿಬಾರು, ಇವೆಲ್ಲವುಗಳಿಂದಾಗಿ ಅವರೆಲ್ಲರೂ ರಾತ್ರೋರಾತ್ರಿ ಮುಂಬಯಿಗೆ ಓಡಿ ಬರುತ್ತಾರೆ.

ಇಲ್ಲಿ ರಾಜಕೀಯ ಸಂಘರ್ಷಕ್ಕೆ ಒಳಗಾದ ರಾಜ ಮನೆತನವೊಂದರ ಪರಿಸ್ಥಿತಿಯನ್ನು ವಿಶ್ಲೇಷಿಸಬಹುದಾಗಿದೆ. ವಿಠ್ಠಲಗಡ ಸಂಸ್ಥಾನದ ರಾಜಮನೆತನಕ್ಕೆ ಸೇರಿದ ರಣಜಿತ್ ಫ್ರೆಂಚ್ ಸಾಹಿತ್ಯವನ್ನು ಅಭ್ಯಾಸ ಮಾಡಿರುತ್ತಾನೆ. ಫ್ರಾನ್ಸಿಗೆ ಹೋಗಬೇಕೆಂಬುದು ಅವನ ಅಭಿಲಾಷೆ ಯಾಗಿರುತ್ತದೆ. ಫ್ರೆಂಚ್ ಹುಡುಗಿಯನ್ನು ಲಗ್ನವಾದರೆ ತನ್ನ ಸ್ವಾತಂತ್ರ್ಯಕ್ಕೆ ಯಾವುದೇ ಆತಂಕವೂ ಇರಲಾರದು ಎಂಬುದು ಅವನ ಅಭಿಪ್ರಾಯವಾಗಿರುತ್ತದೆ. ತನಗೆ ಬರುತ್ತಿದ್ದ ತಿಂಗಳ ಮಾಸಿಕ ಹಣದಲ್ಲಿ ತನ್ನ ಜೀವನವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ. ಎಲ್ಲದಕ್ಕೂ ಒಂದು ಮೇರೆ,ಗೆರೆ ಇದೆ ಅನ್ನುವುದೇ ಅವನಿಗೆ ತಿಳಿದಿರಲಿಲ್ಲ. ಸದಾ ಕಾಲ ಆಳು ಮಕ್ಕಳಿಂದ ಸೇವೆ ಮಾಡಿಸಿಕೊಳ್ಳುವ ಮನೋಭಾವ ಹೊಂದಿರುತ್ತಾನೆ. ಅಲ್ಲದೆ ಜೀವನ ಎಂದರೆ ಫರ್ಸ್ಟ್ ಕ್ಲಾಸ್ ಊಟ, ಫರ್ಸ್ಟ್‌ಕ್ಲಾಸ್ ಡ್ರಿಂಕ್ಸ್, ಫರ್ಸ್ಟ್‌ಕ್ಲಾಸ್ ಹುಡುಗಿಯರು ಎಂಬಂತೆ ಇರುತ್ತಾನೆ. ಇಂತಹ ಮನೋಭಾವದ ರಣಜಿತ ತನ್ನಲ್ಲಿ ಹಣವಿಲ್ಲದೇ ಇತರರಿಂದ ಬೇಡಿ ಬದುಕುವ ಸ್ಥಿತಿಯನ್ನು ತಲುಪುತ್ತಾನೆ.

ವಿಕ್ಷಿಪ್ತ ಮನಸ್ಸಿನ ರಣಜಿತ ಇದ್ದಕ್ಕಿಂದಂತೆ ಅನುಮಾನಾಸ್ಪದವಾಗಿ ಮರಣ ಹೊಂದಿದ್ದಾನೆಂಬ ವಿಷಯ ರಾಹುಲನಿಗೆ ತಿಳಿಯುತ್ತದೆ. ಪ್ರೊ.ವಿಲಿಯವನ್ಸ್‌ರ ಪ್ರಕಾರ ಆತ ನಾರ್ಮಲ್ ಮನುಷ್ಯನಾಗಿರಲಿಲ್ಲ. ಯಾವುದೋ ಒಂದು ಗುಂಡಾ ಜನರ ರ್‍ಯಾಕೆಟ್ಟಿನಲ್ಲಿ ಸೇರಿಕೊಂಡು ಯಾರದೋ ಗುಂಡಿಗೆ ಆಹುತಿಯಾಗಿರುತ್ತಾನೆ. ಆದರೆ ಶಿರೀನ್ ಆತ ಆತ್ಮಹತ್ಯೆಯನ್ನು ಮಾಡಿಕೊಂಡಿರಬೇಕೆಂದು ಅಭಿಪ್ರಾಯಪಡುತ್ತಾಳೆ. ಅವನು ಮರಣ ಹೊಂದುವ ಕೆಲವು ದಿನಗಳ ಹಿಂದೆ ಶಿರೀನ್‌ಳನ್ನು ಭೇಟಿಯಾಗಿದ್ದ ರಣಜಿತ ಅವಳ ಮನೆಯಲ್ಲಿ ಗುಪ್ತವಾಗಿ ಏಳೆಂಟು ದಿನಗಳು ಇರಲು ಅವಕಾಶವನ್ನು ಕೇಳುತ್ತಾನೆ. ಆ ಕ್ಷಣದಲ್ಲಿ ಆತ ಯಾವುದೋ ಮಹಾ ಸಂಕಟದಲ್ಲಿದ್ದಂತೆ, ಮಹಾ ಗುನ್ಹೆ ಮಾಡಿದವನಂತೆ ವಿಕಾರವಾಗಿ ಕಂಡು ಬಂದಿದ್ದ. ಶಿರೀನ್ ಅವನಿಗೆ ಕಠೋರವಾಗಿ ಬೈಯ್ದು ಹೋಗದಿದ್ದರೆ ಪೊಲೀಸರಿಗೆ ಫೋನು ಮಾಡುವೆನೆಂದು ಹೇಳುತ್ತಾಳೆ. ಪೊಲೀಸರೆಂದ ಕೂಡಲೇ ರಣಜಿತನು ಪ್ಲೀಜ್ ಅಂಥದೇನೂ ಮಾಡಬೇಡ– ನಾನೇ ಸ್ವಖುಷಿಯಿಂದ ಹೋಗುವೆ... ಹಾಗೂ ಇನ್ನೆಂದಿಗೂ ನಾನು ನಿನ್ನ ಹತ್ತಿರ ಬರುವುದಿಲ್ಲ... ಬಹುಶಃ ಅಮೇರಿಕೆಗೆ ಹೋಗಿ ಬರುವೆ (ಪು. ೨೯೯) ಎಂದು ಏನೇನೋ ಬಡಬಡಿಸುತ್ತಾ ಹೊರಟು ಹೋಗಿರುತ್ತಾನೆ. ಶಿರೀನ್ ರಣಜಿತ ಏನಾದರೂ ಲೈಂಗಿಕ ಅನಾಹುತ ಮಾಡಿಕೊಂಡಿರಬೇಕೆಂದು ಭಾವಿಸುತ್ತಾಳೆ. ಶಿರೀನ್ ರಣಜಿತನ ಸಾವಿನಿಂದ ತನಗೆ ಒಂದು ಕಾಟ ತಪ್ಪಿತು ಎಂದು ಅಂದುಕೊಳ್ಳುತ್ತಾಳೆ. ಆದರೆ ಮರಾಠಿ ವರ್ತಮಾನ ಪತ್ರಿಕೆಯ ಪ್ರಕಾರ ಒಬ್ಬ ರಾಜಕುಮಾರನ ಕೊಲೆ. ಸಾವಿರಾರು ರೂಪಾಯಿ ಕಿಮ್ಮತ್ತಿನ ಹಶೀಶನ್ನು ತನ್ನ ಸಾಥೀದಾರರಿಂದ ಅಪಹರಿಸಿ ಓಡಿಹೋಗಲೆತ್ನಿಸಿದ್ದಕ್ಕೆ ಎಂದು ವರದಿಯಾಗಿರುತ್ತದೆ. ಪೊಲೀಸರ ಪ್ರಕಾರ ರಣಜಿತ ಗಾಯಕವಾಡ ಒಂದು ಸ್ಮಗ್ಲಿಂಗ್ ಗುಂಪಿನ ಸದಸ್ಯ... ಆ ಹಿನ್ನೆಲೆಯಲ್ಲಿಯೇ ಅವರು ರಣಜಿತನ ಸಾವಿನ ಸಂಬಂಧ ಎಲ್ಲರನ್ನೂ ತನಿಖೆಗೆ ಒಳಗು ಮಾಡುತ್ತಿರುತ್ತಾರೆ. ಈ ರೀತಿಯಾಗಿ ರಣಜಿತನು ದಾರುಣ ಅಂತ್ಯವನ್ನು ಕಾಣುತ್ತಾನೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯಾ ನಂತರದ ರಾಜಮನೆತನಗಳಲ್ಲಿನ ಸಂಘರ್ಷಗಳು, ವಿಕ್ಷಿಪ್ತತೆಗಳು, ರಾಜಮನೆತನಗಳ ಅವನತಿಯನ್ನು ರಣಜಿತನ ಪಾತ್ರದ ಮೂಲಕ ಇಲ್ಲಿ ವಿಶ್ಲೇಷಿಸಲಾಗಿದೆ.

೫.೨.೩ ಪುರುಷ ಪಾತ್ರಗಳ ಸಂಘರ್ಷ :

'ವಿಕ್ಷೇಪ' ಕಾದಂಬರಿಯಲ್ಲಿ ಪ್ರಮುಖವಾಗಿ ರಾಹುಲ, ಅರವಿಂದ ದೇಶಮುಖ, ರಣಜಿತ, ಪ್ರೊ.ವಿಲಿಯಮ್ಸ್ ಪಾಲ ಪುರುಷ ಪಾತ್ರಗಳು ಬರುತ್ತವೆ. ರಾಹುಲ, ಅರವಿಂದ ಮತ್ತು ರಣಜಿತರು ಪರಸ್ಪರ ಗೆಳೆಯರಾಗಿರುತ್ತಾರೆ. ರಾಹುಲ ಮತ್ತು ರಣಜಿತರು ವಿಕ್ಷಿಪ್ತ ಮನಸ್ಥಿತಿಯನ್ನು ಹೊಂದಿರುತ್ತಾರೆ. ಇವರಿಬ್ಬರೂ ಕೂಡ ಯಾವುದೇ ಜವಾಬ್ದಾರಿಗಳಿಲ್ಲದೇ. ಯಾವುದೇ ಬಂಧನಗಳಿಗೆ ಒಳಗಾಗದೇ ಜೀವನವನ್ನು ನಡೆಸಬೇಕು ಎಂಬ ಮನೋಭಾವನೆಯನ್ನು ಹೊಂದಿರುತ್ತಾರೆ. ದ್ವಂದ್ವ ಮನೋಭಾವದವರಾದ ಇವರು ಸ್ವಚ್ಛಂದ ಜೀವನ ನಡೆಸಬೇಕೆಂಬ ಮನೋಭಿಲಾಷೆಯನ್ನು ಹೊಂದಿರುತ್ತಾರೆ. ರಾಹುಲ ಮಾಧವಿಯನ್ನು ಪ್ರೀತಿಸಿ ಅವಳನ್ನೇ ಮದುವೆಯಾಗಬೇಕು ಎಂದು ಆಲೋಚಿಸಿರುತ್ತಾನೆ. ಆದರೆ ಆತನಿಗೆ ಮದುವೆಯಾದರೆ ಅದು ತನಗೊಂದು ಸೆರೆ ಎಂದು ಪರಿಭಾವಿಸುತ್ತಾನೆ. ಆದರೆ ಮದುವೆಗೇ ಮುನ್ನವೇ ಮಾಧವಿಯಿಂದ ದೈಹಿಕ ಸುಖವನ್ನು ಬಯಸುತ್ತಾನೆ. ಆದರೆ ಮಾಧವಿಯು ಇದಕ್ಕೆ ನಿರಾಕರಿಸಿದಾಗ ಆತ ಮಾಧವಿಯ ಮೇಲೆ ವೃಥಾ ಆರೋಪವನ್ನು ಹೊರಿಸಿ ಅವಳಿಂದ ದೂರವಾಗುತ್ತಾನೆ. ಅಲ್ಲದೆ ತನ್ನ ಭಾನಗಡಿಗಳೆಲ್ಲ ಎಲ್ಲಿ ಮಾಧವಿಗೆ ತಿಳಿದು ಬಿಡುತ್ತವೋ ಎಂಬ ಆತಂಕವೂ ಅವನಲ್ಲಿರುತ್ತದೆ.

ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು, ತಂದೆ ಮತ್ತೊಂದು ಮದುವೆಯಾದ್ದರಿಂದ ರಾಹುಲನು ತನ್ನ ಮಾಂಶಿಯ ಮನೆಯಲ್ಲಿಯೇ ಉಳಿದಿರುತ್ತಾನೆ. ಹೀಗಾಗಿ ಸಹಜ ಸಂಬಂಧಗಳು ತನ್ನಿಂದ ಅಸಾಧ್ಯವಾದದ್ದು ಎಂಬ ಭಾವನೆ ರಾಹುಲನಲ್ಲಿ ಬಲವಾಗಿರುತ್ತದೆ. ಇದೇ ಕಾರಣಕ್ಕಾಗಿ ಆತ ತನ್ನ ತಂದೆಯೊಂದಿಗೆ ಸಂಘರ್ಷವನ್ನು ಹೊಂದಿರುತ್ತಾನೆ. ತನ್ನ ತಂದೆಯೊಂದಿಗೂ ಕೂಡ ಕೇವಲ ಔಪಚಾರಿಕವಾದ ಮತುಕತೆಯನ್ನಷ್ಟೇ ಹೊಂದಿರುತ್ತಾನೆ. ತನ್ನ ತಂದೆಯ ಬಗ್ಗೆ ಕಠಿಣವಾದ ಭಾವನೆಯನ್ನು ಹೊಂದಿದ್ದ ರಾಹುಲನು ತನ್ನ ತಂದೆಯ ಅಂತ್ಯ ಕಾಲದಲ್ಲಿಯೂ ಕೂಡ ತನ್ನ ಸಂಘರ್ಷವನ್ನು ಮುಂದುವರಿಸುತ್ತಾನೆ. ತಂದೆ ಮಕ್ಕಳ ಸಂಘರ್ಷ ಕೊನೆಗೊಳ್ಳುವುದೇ ಇಲ್ಲ.

ಕಾರವಾರದಲ್ಲಿ ಪರಿಚಯವಾದ ಕುಂದಾಳ ಜೊತೆಗೂ ಕೇವಲ ಆಟವಾಡುತ್ತಾ, ಕಾಲ ಕಳೆಯಬೇಕೆಂದುಕೊಂಡಿದ್ದ ರಾಹುಲನು ಕುಂದಾ, ಅವಳ ಮನೆಯವರು ಹಾಗೂ ತನ್ನ ಮಾಂಶಿ ಹೂಡಿದ ಯೋಜನೆಯಿಂದ ಅವಳನ್ನು ವಿವಾಹವಾಗುತ್ತಾನೆ. ಆದರೆ ತಾನು ಕೆಲಸದ ನಿಮಿತ್ತ ಕಂಪನಿಯ ಕಡೆಯಿಂದ ಇಂಗ್ಲೆಂಡಿಗೆ ಹೊರಟಾಗ ತಾನು ಹಿಂತಿರುಗಿ ಬರಲೇಬಾರದೆಂದು ನಿರ್ಧರಿಸುತ್ತಾನೆ. ಕುಂದಾಳಿಗೆ ಪತ್ರ ಬರೆದು ಸ್ವತಂತ್ರ ಜೀವನ ನಡೆಸುವಂತೆ ಸೂಚಿಸುತ್ತಾನೆ. ಆದರೆ ಕುಂದಾ ಗಲಾಟೆ ಮಾಡಿದಾಗ ಏನೋ ಒಂದು ವಿಚಾರ ಬಂದಿದ್ದರಿಂದಾಗಿ ಅದನ್ನು ಬರೆದಿರುವುದಾಗಿಯೂ, ಅದಕ್ಕಾಗಿ ಅವಳು ತಲೆ ಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲವೆಂದೂ, ತಾನು ಹಿಂತಿರುಗಿ ಬರುವುದಾಗಿಯೂ ಹೇಳುತ್ತಾನೆ. ಇಲ್ಲಿ ನಾವು ರಾಹುಲನ ವಿಕ್ಷಿಪ್ತತೆ, ದ್ವಂದ್ವತೆ ಹಾಗೂ ಬಂಧನಗಳಿಂದ ಬಿಡುಗಡೆಯನ್ನು ಬಯಸುವ ಅವನ ಮನಸ್ಥಿತಿಯನ್ನು ಗುರುತಿಸಬಹುದಾಗಿದೆ.

ರಣಜಿತ ಗಾಯಕವಾಡ ವಿಠ್ಠಲವಾಡದ ರಾಜ ಮನೆತನಕ್ಕೆ ಸೇರಿದ ರಾಜಕುಮಾರ. ಸ್ವಾತಂತ್ರ್ಯ ನಂತರ ಸಂಸ್ಥಾನಗಳ ವಿಲೀನೀಕರಣ ನಡೆದಾಗ ಅವರ ಸಂಸ್ಥಾನವೂ ಕೂಡ ವಿಲೀನಗೊಳ್ಳುತ್ತದೆ. ಅವನ ತಂದೆಗೆ ೪೦೦೦, ಅವನಿಗೆ ೪೦೦ ರೂ.ಗಳ ತಿಂಗಳ ವೇತನ ಸರ್ಕಾರದ ಕಡೆಯಿಂದ ಸಿಗುತ್ತಿರುತ್ತದೆ. ಆದರೆ ಅದು ಅವನಿಗೆ ಅವನ ಯಾವ ಖರ್ಚುಗಳಿಗೂ ಕೂಡ ಸಾಕಾಗುತ್ತಿರುವುದಿಲ್ಲ. ಅಲ್ಲದೇ ಅವನು ಚಿಕ್ಕಂದಿನಿಂದಲೂ ಕೂಡ ದುಂದು ಜೀವನವನ್ನು ನಡೆಸಿರುತ್ತಾನೆ. ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವಲ್ಲಿ ಅವನು ಸಂಘರ್ಷವನ್ನು ಎದುರಿಸುತ್ತಾನೆ. ಆದರೂ ಕೂಡ ಆತ ತನ್ನ ವಿಲಾಸೀ ಜೀವನವನ್ನು ಬಿಟ್ಟುಕೊಟ್ಟಿರುವುದಿಲ್ಲ. ತನ್ನ ದುಂದು ವೆಚ್ಚಗಳ ನಿರ್ವಹಣೆಗೆ ಆತ ಕೊನೆಗೆ ಸ್ಮಗ್ಲಿಂಗ್ ವ್ಯವಹಾರದಲ್ಲಿ ತೊಡಗಿಸಿಕೊಳ್ಳುತ್ತಾನೆ. ಆ ವ್ಯವಹಾರದಲ್ಲಿ ತೊಂದರೆಯಾಗಿ ಆತ ಅನುಮಾನಾಸ್ಪದ ಸಾವನ್ನು ಹೊಂದುತ್ತಾನೆ. ಅರಮನೆಯ ಹಳೇ ಐಶ್ವರ್ಯವನ್ನೂ, ಐಶಾರಾಮವನ್ನು ಕಳಕೊಂಡ ಆತ ಬಹುಶಃ ಒಮ್ಮೆಲೆ ಶ್ರೀಮಂತನಾಗುವ ಕನಸು ಕಂಡಿರಬೇಕು ಅಥವಾ ಸ್ಮಗ್ಲರಾಗಿ ಒಂದು ರೋಮಾಂಚಕಾರಿ ಜೀವನವನ್ನು ನಡೆಸಲು ಯತ್ನಿಸಿರಬೇಕು ಅಥವಾ ಆತ ಬೇಕೆಂತಲೇ ವಾಸ್ತವವನ್ನು ಎದುರಿಸಲಾಗದೇ ಆತ್ಮಹತ್ಯೆಯ ದಾರಿಯನ್ನು ತುಳಿದಿರಬೇಕು. ಒಟ್ಟಾರೆಯಾಗಿ ವಾಸ್ತವವನ್ನು ಎದುರಿಸಲಾಗದೇ ಹೇಡಿಯಂತೆ ಬದುಕಿನಿಂದಲೇ ಪಲಾಯನ ಮಾಡುತ್ತಾನೆ.

ಅರವಿಂದ ದೇಶಮುಖ ರಾಹುಲನ ಗೆಳೆಯನಾಗಿದ್ದು, ಯುನಿವ್ಹರ್ಸಿಟಿಯಲ್ಲಿ ಲಾಯಬ್ರೇರಿಯನ್ನಾಗಿರುತ್ತಾನೆ. ರಾಹುಲನ ಪ್ರಕಾರ ಆತನಲ್ಲಿ ಸಾಕಷ್ಟು ಸಹಾನುಭೂತಿ ಇದೆ, ಬುದ್ಧಿ ಮತ್ತೆಯಿದೆ. ಅವನ ವ್ಯಕ್ತಿತ್ವಕ್ಕೆ ರಾಹುಲನಿಗಿನ್ನೂ ತಿಳಿಯದ ಒಂದು ಶಕ್ತಿಯುತವಾದ ಕೇಂದ್ರವಿದೆ. ಅವನಲ್ಲಿ ಯಾವುದೇ ಮಹತ್ವಾಕಾಂಕ್ಷೆ ಇರುವುದಿಲ್ಲ. ರಾಹುಲನು ತನ್ನ ಮತ್ತು ಮಾಧವಿಯ ವಿವಾಹದ ವಿಷಯವನ್ನು ಪ್ರಸ್ತಾಪಿಸಿದಾಗ ಅರವಿಂದನಿಗೆ ಆಶ್ಚರ್ಯವಾಗುತ್ತದೆ. ರಾಹುಲನು ಬೇಗ ಮದುವೆಯಾಗುವುದು ಸಾಧ್ಯವಿಲ್ಲ ಎಂಬುದು ಅವನ ಅನಿಸಿಕೆಯಾಗಿರುತ್ತದೆ. ಅಲ್ಲದೆ ರಾಹುಲನ ಇತಿಹಾಸದಿಂದ ಮಾಧವಿಯೂ ಕೂಡ ಬಹಳ ದಿನ ರಾಹುಲನೊಂದಿಗೆ ಇರುವುದಿಲ್ಲವೆಂಬುದು ಅವನ ಊಹೆಯಾಗಿರುತ್ತದೆ. ಹಾಗಾಗಿಯೇ ರಾಹುಲನು ತನ್ನ ಮತ್ತು ಮಾಧವಿಯ ವಿವಾಹದ ಬಗ್ಗೆ ಅವನ ಅಭಿಪ್ರಾಯವನ್ನು ಕೇಳಿದಾಗ ಅರವಿಂದನು "ಅದೆಲ್ಲ ನಿಮ್ಮಿಬ್ಬರ ಮೇಲೆ ಅವಲಂಬಿಸಿದೆ. ಒಳ್ಳೆಯ ಸಂಗೀತಕ್ಕೆ ಒಳ್ಳೆಯ ವಾದ್ಯವೂ ಬೇಕು, ಒಳ್ಳೆಯ ವಾದಕನೂ ಬೇಕು" ಎಂದು ಹೇಳುವ ಅವನ ಮಾತುಗಳು ಅವನ ಪ್ರಬುದ್ಧತೆಯನ್ನು ತೋರಿಸುತ್ತವೆ.

ಅರವಿಂದನ ಪ್ರಕಾರ ರಾಹುಲನದ್ದು ವಿಪರೀತ ಸಂಶಯ. ಮಾಧವಿಯ ತಾಯಿಯ ಕುರಿತಾದ ರಾಹುಲನ ಸಂಶಯ ಅರ್ಥವಿಲ್ಲದ್ದು. ಅಲ್ಲದೇ ರಾಹುಲನು ಜಾತಿ–ಪಂಥ–ನೀತಿ–ನಡತೆಗಳಲ್ಲಿ ವಿಶ್ವಾಸವಿಲ್ಲದವನಾಗಿದ್ದರಿಂದ ಅದನ್ನೆಲ್ಲಾ ತೆಗೆದುಕೊಂಡು ಮಾಡುವಂತಹದ್ದು ಏನೂ ಇರುವುದಿಲ್ಲ. ಅಲ್ಲದೇ ರಾಹುಲನಿಗೆ ಪ್ರೀತಿಯೆಂದರೇನು ಗೊತ್ತಿಲ್ಲ ಹಾಗೂ ಪ್ರೀತಿ ಮಾಡಲು ಬೇಕಾದ ಮನೋಧರ್ಮವೂ ಕೂಡ ಅವನಲ್ಲಿರುವುದಿಲ್ಲ. ಹಾಗಾಗಿ ರಾಹುಲ ಪ್ರೇಮಿಸುವುದೇ ಅಶಕ್ಯ ಎಂಬುದು ಅರವಿಂದನ ಅಭಿಮತವಾಗಿರುತ್ತದೆ. ಇಲ್ಲಿ ನಾವು ಅರವಿಂದನ ವಾಸ್ತವವಾದಿ

ದೃಷ್ಟಿಕೋನವನ್ನು ಗುರುತಿಸಬಹುದಾಗಿದೆ. ರಾಹುಲನು ಮಡ್‌ದ್ವೀಪದ ಪಿಕ್ನಿಕ್ಕಿನಲ್ಲಿ ವೈದೇಹಿಯ ಬಗ್ಗೆ ಆಡಿದ ಮಾತುಗಳೆಲ್ಲವೂ ಅರವಿಂದನಿಗೆ ವೈದೇಹಿಯಿಂದ ತಿಳಿದು ಅವನು ಆಘಾತಗೊಳ್ಳುತ್ತಾನೆ.

ಅರವಿಂದನು ರಾಹುಲನ ಎಷ್ಟೋ ವೈಪರೀತ್ಯಗಳನ್ನು, ವಿಕ್ಷಿಪ್ತತೆಯನ್ನು ಅಲಕ್ಷಿಸಿ ಆತನಲ್ಲಿಯ ಒಳ್ಳೆ ಗುಣಗಳ ಮೇಲೆ, ಆತನ ಚಾರ್ಮ್, ಪ್ರಾಮಾಣಿಕತೆ, ಸೂಕ್ಷ್ಮತೆ, ಬುದ್ಧಿವಂತಿಕೆ ಇವುಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಿ ಅವನ ಬಗ್ಗೆ, ಅವನ ಬುದ್ಧಿಮತ್ತೆಯ ಬಗ್ಗೆ, ಅವನ ವ್ಯಕ್ತಿತ್ವದ ಬಗ್ಗೆ ಆದರವನ್ನು ಹೊಂದಿರುತ್ತಾನೆ. ಆದರೆ ರಾಹುಲನು ತಾನು ವೈದೇಹಿಯನ್ನು ಮದುವೆಯಾಗಲು ಸಿದ್ಧವಿರುವುದಾಗಿ ಹೇಳಿದುದನ್ನು ಕೇಳಿ ಒಮ್ಮೆಲೆ ತನ್ನ ಕುತ್ತಿಗೆಯನ್ನು ಕೊಯ್ಯುವ ಹವ್ಯಾಸ ಮಾಡಿದ್ದಾನೆಂಬ ಭಾವನೆ ಮೂಡುತ್ತದೆ. ಆದರೆ ಅರವಿಂದನು ತನ್ನ ಕನಸು ಮನಸಿನಲ್ಲಿಯೂ ಇದನ್ನು ಎಣಿಸಿರುವುದಿಲ್ಲ. ರಾಹುಲನ ಈ ಸ್ವಚ್ಛಂದ ಪ್ರವೃತ್ತಿ ಅರವಿಂದನ ಸರಳ ಮನಸ್ಸನ್ನು ಘಾಸಿಗೊಳಿಸುತ್ತದೆ. ಬಹುಶಃ ವೈದೇಹಿಯ ಕಾರಣಕ್ಕಾಗಿಯೇ ರಾಹುಲನು ಮಾಧವಿಯ ಸಂಬಂಧವನ್ನು ಕಡಿದು ಕೊಂಡಿರಬೇಕೆಂದು ಅರವಿಂದನು ಆಲೋಚಿಸುತ್ತಾನೆ.

ಅರವಿಂದನು ಮುಂದೆ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯನಾಗಿ ಸೇರಿಕೊಳ್ಳುತ್ತಾನೆ. ಇದಕ್ಕೆ ಅರವಿಂದನ ಅಣ್ಣನು ಕಮ್ಯುನಿಸ್ಟ್ ಪಾರ್ಟಿಗೆ ಸೇರಿದ್ದರೂ ಕೂಡ ಎಲ್ಲವನ್ನೂ ಸಂಪೂರ್ಣವಾಗಿ ತಿಳಿದುಕೊಂಡಿರುವುದಿಲ್ಲ. ಸಮಾಜದಲ್ಲಿ ಕ್ರಾಂತಿಯಾಗದ ಹೊರತು ಗತ್ಯಂತರವಿಲ್ಲ ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ. ಸ್ವಾತಂತ್ರ್ಯದ ವಿಚಾರದಲ್ಲಿ ರಾಹುಲ ಮತ್ತು ಅರವಿಂದನ ನಡುವೆ ಸಂಘರ್ಷಗಳು ಏರ್ಪಡುವುದನ್ನು ನಾವು ಗುರುತಿಸಬಹುದಾಗಿದೆ. ಬದುಕಿನ ಬಗ್ಗೆ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುವ ರಾಹುಲ ಮತ್ತು ಅರವಿಂದ ತಮ್ಮೊಳಗಿನ ಬೌದ್ಧಿಕ ಸಂಘರ್ಷಗಳ ನಡುವೆಯೇ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.

ಪ್ರೊ. ವಿಲಿಯಮ್ಸ್‌ರ ಪ್ರಕಾರ ರಾಹುಲನೆಂದರೆ ದಿಕ್ಕುಗಾಣದೆ ತೊಳಲಾಡುತ್ತಿರುವ, ಭಾರತದ ತರುಣರ ಸುಂದರ ಪ್ರತೀಕ, ಸಂಪ್ರದಾಯ-ಸಂಪ್ರದಾಯಗಳ ತಿಕ್ಕಾಟದಲ್ಲಿ, ಪೂರ್ವ-ಪಶ್ಚಿಮಗಳ ಸಂಕರದಲ್ಲಿ ಮತಿಗೆಟ್ಟ ಸಂವೇದನಾಶೀಲ ಬುದ್ಧಿಜೀವಿ (ಪು. ೪೬). ವೈಯಕ್ತಿಕವಾಗಿ, ಒಬ್ಬ ಆಕರ್ಷಕ, ಸುಂದರವಾಗಿ ಇಂಗ್ಲೀಷ್ ಮಾತನಾಡುವ, ಎಲ್ಲರಿಗೂ ಬೇಕಾದ, ಪ್ರತಿ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ದೊರಕಿಸಿ ಕಾಲೇಜಿಗೆ ಕೀರ್ತಿ ತರುವ ವಿದ್ಯಾರ್ಥಿ. ಆದುದರಿಂದ ಅವರ ಮನೆಯ ಬಾಗಿಲು ರಾಹುಲನಿಗೆ ಯಾವಾಗಲೂ ತೆರೆದದ್ದೇ. ಅಭ್ಯಾಸದಲ್ಲಿಯ ಸಮಸ್ಯೆಗಳ ಜೊತೆಗೆ ಅವನ ವೈಯಕ್ತಿಕ ಸಮಸ್ಯೆಗಳನ್ನೂ ಅತ್ಯಂತ ಆತ್ಮೀಯತೆಯಿಂದ ಚರ್ಚಿಸುತ್ತಿದ್ದರು. ಆತನಿಗೆ ಉಪದೇಶ ನೀಡುವುದರ ಜೊತೆಗೆ ಎಂಥ ಸಹಾಯ ಮಾಡಲೂ ಸಿದ್ಧರಿದ್ದರು. ರಾಹುಲನು ತನ್ನ ಮತ್ತು ಮಾಧವಿಯ ಮದುವೆಯ ವಿಚಾರವನ್ನು ಒಂದು ತೊಡಕು ಎಂದು ಹೇಳಿದಾಗ ಪ್ರೊ. ವಿಲಿಯಮ್ಸ್‌ರು ಅದನ್ನು ಮನಸ್ಸಿನ ತೊಡಕು ಎಂದು ಹೇಳುತ್ತಾರೆ.

ರಾಹುಲನು ಧರ್ಮದ ವಿಚಾರಗಳನ್ನು ಮಾತನಾಡುತ್ತಾ ಸಾವಕಾಶವಾಗಿ ಮಾಧವಿಯನ್ನು ಮದುವೆಯಾದರೆ ತಾನು ಉದ್ಧಾರವಾಗಬಲ್ಲೆನೇ ಎಂದು ಕೇಳಿದಾಗ ವಿಲಿಯಮ್ಸ್‌ರು ಲಗ್ನಕ್ಕೂ

ಉದ್ಧಾರಕ್ಕೂ ಸಂಬಂಧ ಹಚ್ಚಬೇಕಿಲ್ಲ. ನಿನ್ನ ಉದ್ಧಾರ ನಿನ್ನ ಕೈಯಲ್ಲಿದೆ. ಲಗ್ನ ಅದಕ್ಕೆ ಸಹಾಯ ನೀಡಬಹುದು. ಒಮ್ಮೊಮ್ಮೆ ಸಹಾಯದ ಬದಲು ಆತಂಕವನ್ನು ಒಡ್ಡಬಹುದು ಎಂದು ಹೇಳುತ್ತಾರೆ. ವಿಲಿಯಮ್ಸ್‌ರ ಪ್ರಕಾರ ರಾಹುಲನದು ಬಹಳ ಅಸ್ವಸ್ಥ ಮನಸ್ಸು– ಬೇರಿಲ್ಲದ ಜೀವ. ಮನುಷ್ಯನ ಪ್ರತ್ಯಕ್ಷ ಜೀವನದಲ್ಲಿ ಪ್ರಯೋಗ ಉಚಿತವಲ್ಲ. ಇಬ್ಬರ ಸಂಬಂಧದ ಪ್ರಶ್ನೆಯಿದ್ದಾಗ ಪ್ರಯೋಗಕ್ಕಾಗಿ ಪ್ರಯೋಗ ಸ್ವಲ್ಪ ಅಪಾಯಕಾರಿಯಾಗಿರುತ್ತದೆ. ಒಬ್ಬರ ಆತ್ಮ ಪ್ರೀತಿ ಮತ್ತೊಬ್ಬರ ಆತ್ಮ ಪ್ರೀತಿಯ ಕಕ್ಷೆಯನ್ನು ಬಲಾತ್ಕಾರದಿಂದ ಸೇರಬಾರದು. ರಾಹುಲನ ಪ್ರಯೋಗಕ್ಕೆ ಮಾಧವಿ ಗಿನಿಪಿಗ್ಗಾಗಬಾರದು ಎಂಬ ಮನೋಭಾವನೆಯನ್ನು ಹೊಂದಿರುತ್ತಾರೆ.

ಪಾಲ ವಾಡೇಕರ ವಿಲಿಯಮ್ಸ್ ದಂಪತಿಗಳ ದತ್ತಕ ಪುತ್ರ, ಇತಿಹಾಸ ವಿಷಯದಲ್ಲಿ ಎಂ.ಎ. ಮಾಡಿ ನಂತರ ಮಿಶನ್ ಸ್ಕಾಲರ್‌ಶಿಪ್ಪಿನ ಮೇಲೆ ಸ್ಕಾಟಲಂಡಿಗೆ ಹೋಗಿ ಬಂದಿದ್ದ, ವಿಲ್ಸನ್ ಕಾಲೇಜಿನಲ್ಲಿಯೇ ಲೆಕ್ಚರರ್ ಆಗಿದ್ದ ಪಾಲ ಕಟ್ಟಾ ಕ್ರಿಶ್ಚಿಯನ್ ಆಗಿರುತ್ತಾನೆ. ಪಾಲನ ಜೊತೆ ಕ್ರಿಶ್ಚಿಯನ್ ಧರ್ಮದ ಬಗ್ಗೆ ಚರ್ಚೆ ಮಾಡುವುದೆಂದರೆ ರಾಹುಲನಿಗೆ ಒಂದು ಬಗೆಯ ವಿಪರೀತ ಆನಂದ. ಅವನ ಸರಳ ಮನಸ್ಸನ್ನು ತನ್ನ ತೀಕ್ಷ್ಣ ಬುದ್ಧಿಯ ತ್ರಿಶೂಲದಿಂದ ಚುಚ್ಚುವುದೆಂದರೆ ವಿಪರೀತ ಉತ್ಸಾಹ. ಪಾಲ ರಾಹುಲನಿಗೆ "ಸೂಕ್ಷ್ಮ ಬುದ್ಧಿಯ ಮೆಫಿಸ್ಟೊಫೆಲಿಸ್" ಎಂದು ಹೆಸರಿಟ್ಟಿರುತ್ತಾನೆ.

ರಾಹುಲನು ಪಾಲನ ಜೊತೆ ನಿಬಂಧದ ಒಂದು ವಿಷಯವಾದ ಭಾರತದ ವಿದೇಶಿ ನೀತಿಯ ಬಗ್ಗೆ, ತಾನು ಓದುತ್ತಿದ್ದ ಬರ್ಟ್ರಂಡ್ ರಸೆಲನ "ವಿವಾಹ ಮತ್ತು ನೀತಿ" ಎಂಬ ಪುಸ್ತಕದ ಬಗ್ಗೆ ಒಂದು–ಒಂದೂವರೆ ತಾಸು ಹರಟೆ ಹೊಡೆಯುತ್ತಾನೆ. ರಸೆಲನ ದೃಷ್ಟಿಯಲ್ಲಿ ರೋಮ್ಯಾಂಟಿಕ ಪ್ರೇಮಕ್ಕೆ ಸ್ಥಾನವಿದೆಯಾದರೂ ಲಗ್ನವೆಂದರೆ ಅಷ್ಟೊಂದು ಅವಶ್ಯಕವಾದ ಸಂಸ್ಥೆಯಲ್ಲ; ಮಕ್ಕಳ ಬೆಳವಣಿಗೆಗೆ ಸರಿಯಾದ ವಾತಾವರಣ ಕಲ್ಪಿಸಲು ಮಾತ್ರ ವಿವಾಹದ ಅವಶ್ಯಕತೆ ಇದೆ– ಆದರೆ ಈ ವಿಚಾರ ನಿಜಕ್ಕೂ ದುಷ್ಟವಾದದ್ದೆಂದು ಪಾಲ್ ವಾದಿಸುತ್ತಾನೆ. ಆದರೆ ರಾಹುಲನಿಗೆ ಇದರಲ್ಲಿ ತಿಲ ಮಾತ್ರವೂ ದುಷ್ಟತನ ಕಾಣಿಸುವುದಿಲ್ಲ. ರಸೆಲ್‌ನ ವಿಚಾರಗಳು ತೀರ ತರ್ಕಬದ್ಧವಾದ ವಿಚಾರಗಳು. 'ನೀತಿ' ಎಂದರೇನು? ನೀತಿಯನ್ನು ಬುದ್ಧಿವಾದದ ಮೇಲೆ ಸಮರ್ಥಿಸುವುದು ಸಾಧ್ಯವೇ ಅಥವಾ ನೀತಿಯು ತಳಹದಿ ದೇವರ ಅಸ್ತಿತ್ವವನ್ನು ಅವಲಂಬಿಸಿದೆಯೇ ಎಂಬ ಪ್ರಶ್ನೆಗಳ ಚರ್ಚೆಯಾಗುತ್ತದೆ. ನೀತಿಯನ್ನು ಮಾನವನ ನೈಸರ್ಗಿಕ ಪ್ರವೃತ್ತಿಗಳಿಗೆ ಜೋಡಿಸಲು ಸಾಧ್ಯ ಎಂದು ರಾಹುಲ ವಾದಿಸಿದರೆ, ಹಾಗೆ ಜೋಡಿಸಲು ಸಾಧ್ಯವಿದ್ದರೂ ನೀತಿಯಲ್ಲಿಡಬೇಕಾದ ವಿಶ್ವಾಸ, ದೇವರ ಮೇಲಿನ ವಿಶ್ವಾಸವನ್ನು ಅವಲಂಬಿಸಿದೆ, ದೇವರಿಲ್ಲದಿದ್ದರೆ ನೀತಿಯಿಲ್ಲ ಎಂದು ಪಾಲ್ ವಾದಿಸುತ್ತಾನೆ. ಇವರಿಬ್ಬರ ವಾದದಿಂದ ಅವರಿಬ್ಬರ ನಡುವಿನ ಬೌದ್ಧಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ.

೪.೨.೪ ಸ್ತ್ರೀ ಪಾತ್ರಗಳು : ಆತ್ಮವಿಶ್ವಾಸ ಹಾಗೂ ವಾಸ್ತವಿಕತೆಯ ಪ್ರತೀಕ

'ವಿಕ್ಷೇಪ' ಕಾದಂಬರಿಯಲ್ಲಿ ಪ್ರಮುಖವಾಗಿ ಮಾಧವಿ, ವೈದೇಹಿ, ಶಿರೀನ್, ಕಮಲಾಬಾಯಿ, ರೋಜಿ ಪಾತ್ರಗಳು ಬರುತ್ತವೆ. ಮಾಧವಿ ಸಿಂಧೀ ಕುಟುಂಬಕ್ಕೆ ಸೇರಿದ ಬುದ್ಧಿವಂತೆ. ಬಿ.ಎ. ದಲ್ಲಿ

ಓದುತ್ತಿದ್ದ ಮಾಧವಿ ರಾಹುಲನನ್ನು ಪ್ರೀತಿಸಿ, ಅವನನ್ನೇ ಮದುವೆಯಾಗಬೇಕೆಂದು ನಿರ್ಧರಿಸಿರುತ್ತಾಳೆ. ರಾಹುಲನು ಮಾಧವಿಯ ಮನೆಗೆ ಹೋಗುವವರೆವಿಗೂ ಆತನೂ ಕೂಡ ಮಾಧವಿಯನ್ನು ಲಗ್ನವಾಗಲು ನಿರ್ಧರಿಸಿರುತ್ತಾನೆ. ತಮ್ಮಿಬ್ಬರ ಲಗ್ನದ ವಿಚಾರವಾಗಿ ಮಾತನಾಡಲು ಮಾಧವಿ ರಾಹುಲನನ್ನು ತನ್ನ ಮನೆಗೆ ಕರೆದೊಯ್ಯುತ್ತಾಳೆ. ತನ್ನ ಮನೆಯ ವಾತಾವರಣದಿಂದ ಅಸ್ವಸ್ಥಗೊಂಡ ರಾಹುಲನನ್ನು ಮಾಧವಿಯೇ ತಿಳಿಗೊಳಿಸುತ್ತಾಳೆ. ಮಾಧವಿಯು ವಾಸ್ತವ ಮನಃಸ್ಥಿತಿಯನ್ನು ಹೊಂದಿರುತ್ತಾಳೆ. ರಾಹುಲನು ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಒಂದು ವ್ಯವಸ್ಥಿತವಾದ ನೆಲೆಯಲ್ಲಿ ನಿಲ್ಲಬೇಕೆಂಬುದು ಅವಳ ಆಲೋಚನೆಯಾಗಿರುತ್ತದೆ. ಮದುವೆಗೆ ಮುಂಚೆ ತಮ್ಮಿಬ್ಬರ ನಡುವೆ ಯಾವುದೇ ಅಚಾತುರ್ಯ ನಡೆಯಬಾರದೆಂಬ ಎಚ್ಚರಿಕೆಯ ನಡೆ ಅವಳದ್ದಾಗಿರುತ್ತದೆ. ರಾಹುಲನ ಆತ್ಮ ವಿಶ್ಲೇಷಣೆಯ ಮಾತುಗಳು ಮಾಧವಿಯಲ್ಲಿ "ಆಹ್, ಜಗತ್ತಿನ ಮಹಾ ದೊಡ್ಡ ದುಃಖವೊಂದನ್ನು ಅರಗಿಸಿಕೊಂಡ ಒಬ್ಬ ಸುಂದರ ದೊಡ್ಡ ವ್ಯಕ್ತಿ ತನ್ನ ಉಡಿಯಲ್ಲಿ ಬಿದ್ದನಲ್ಲ" ಎಂದು ಸಂತೋಷ ಮೂಡಿಸುವುದರ ಜೊತೆಗೆ, ಇಂಥ ವಿಲಕ್ಷಣ ಮೇಧಾವಿ ಅಥವಾ ಪ್ರತಿಭಾವಂತನ ಜೊತೆಗೆ ನನ್ನ ಜೀವನ ಬಹಳ ಇಂಟರೆಸ್ಟಿಂಗ್ ಅಗುವುದಲ್ಲವೇ ಎಂಬ ಆತ್ಮ ಸಂತುಷ್ಟಿ ಮನೋಭಾವನೆಯನ್ನು ಹೊಂದಿರುತ್ತಾಳೆ. ಮಡ್‌ದ್ವೀಪದ ಪಿಕ್ನಿಕ್ಕಿನಲ್ಲಿ ರಾಹುಲನ ವಿಚಿತ್ರ ಅಸ್ವಸ್ಥತೆಯನ್ನು ಗುರುತಿಸಿದ ಮಾಧವಿಗೆ ರಾಹುಲನು ನಿಜಕ್ಕೂ ತನ್ನನ್ನು ಪ್ರೀತಿಸುತ್ತಿದ್ದಾನೆಯೇ ಎಂಬ ಸಂಶಯ ಕಾಡತೊಡಗುತ್ತದೆ.

ರಾಹುಲನು ತಮ್ಮಿಬ್ಬರ ಪ್ರೀತಿ ನಿಜವಾದದ್ದೆಂದು ತಿಳಿಯಬೇಕಾದರೆ ಮಾಧವಿಯು ತಾನು ಇದ್ದ ಸ್ಥಿತಿಯಲ್ಲಿಯೇ ತನ್ನೊಡನೆ ತಾನು ಹೇಳಿದ ಜಾಗಕ್ಕೆ ಬರಬೇಕೆಂದು ಹಠ ಮಾಡುತ್ತಾನೆ. ಆದರೆ ಮಾಧವಿಗೆ ಅದೊಂದು 'ಪ್ರಯೋಗ'ದಂತೆ ಕಂಡು ಬಂದು ತಮ್ಮಿಬ್ಬರ ನಡುವೆ ಅಂತಹ ಯಾವುದೇ ಪ್ರಯೋಗದ ಅವಶ್ಯಕತೆ ಇಲ್ಲವೆಂದು ಹೇಳುತ್ತಾಳೆ (ಪು. ೭೦). ಅಲ್ಲದೇ ರಾಹುಲನು ತನ್ನನ್ನು ದೈಹಿಕವಾಗಿ ಬಯಸಿದಾಗ ತಮ್ಮಿಬ್ಬರ ಮದುವೆ ಆಗುವವರೆಗೂ ಅದು ಸಾಧ್ಯವಿಲ್ಲವೆಂಬುದನ್ನು ಪರೋಕ್ಷವಾಗಿ ರಾಹುಲನಿಗೆ ತಿಳಿಸುತ್ತಾಳೆ. ಇದರಿಂದ ಕೋಪಗೊಂಡ ರಾಹುಲನು ಮಾಧವಿಯ ಮೇಲೆ ವೃಥಾ ಆರೋಪಗಳನ್ನು ಹೊರಿಸಿ ಅವಳಿಂದ ದೂರವಾಗುತ್ತಾನೆ. ಆದರೆ ಇದರಿಂದ ವಿಚಲಿತಳಾಗದ ಮಾಧವಿ ಕೆಲವು ದಿನಗಳ ಕಾಲ ರಾಹುಲನಿಗೆ ಕಾಯುತ್ತಾಳೆ. ಆದರೆ ರಾಹುಲ ಹಿಂತಿರುಗಿ ಬರದೇ ಇರುವುದನ್ನು ಕಂಡ ಮಾಧವಿ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಾಳೆ.ತನ್ನ ವಿದ್ಯಾಭ್ಯಾಸ ಮುಗಿದ ಕೂಡಲೇ ತನ್ನ ದೂರದ ಸಂಬಂಧಿಯಾದ ಶಂಕರ ಅಜ್ಜಾನನೊಂದಿಗೆ ವಿವಾಹವಾಗುತ್ತಾಳೆ. ಹೀಗೆ ತನ್ನ ಜೀವನದಲ್ಲಿ ಬಂದ ರಾಹುಲ ಎಂಬ ಸಮಸ್ಯೆಯಿಂದ ಪಾರಾಗುತ್ತಾಳೆ.

ವೈದೇಹಿ ಬಿ.ಎ. ಓದುತ್ತಿದ್ದು ಅರವಿಂದನಿಗೆ ಅವನ ಲಾಯಬ್ರರಿಯಲ್ಲಿ ಪರಿಚಯವಾಗುತ್ತಾಳೆ. ವೈದೇಹಿಗೆ ಅವಳು ೧೮ ವರ್ಷದವಳಿದ್ದಾಗ ಲಗ್ನವಾಗಿರುತ್ತದೆ. ಗಂಡ ೧೦೦೦ ರೂಪಾಯಿ ಪಗಾರದ ಎಂಜಿನಿಯರಾಗಿರುತ್ತಾನೆ. ಲಗ್ನವಾಗಿ ಎರಡು ವರ್ಷಗಳಲ್ಲೇ ಅವನಿಗೆ ಟಿಟೆನಸ್ಸಾಗಿ ಆತ ತೀರಿಕೊಳ್ಳುತ್ತಾನೆ. ವೈದೇಹಿಯ ಅಣ್ಣ ಡಾಕ್ಟರರಾಗಿದ್ದರಿಂದ ಅವಳನ್ನು ಮತ್ತೆ ಕಾಲೇಜಿಗೆ ಹೋಗುವಂತೆ ಪ್ರೋತ್ಸಾಹಿಸಿ ಅವಳನ್ನು ಕಾಲೇಜಿಗೆ ಕಳುಹಿಸುತ್ತಿರುತ್ತಾನೆ. ವೈದೇಹಿಯು

ಲಾಯಬ್ರರಿಯಲ್ಲಿ ಲಾಯಬ್ರರಿಯನ್ ಆಗಿದ್ದ ಅರವಿಂದ ದೇಶಮುಖನ ಕಡೆಗೆ ಆಕರ್ಷಿತಳಾಗುತ್ತಾಳೆ. ಅವರಿಬ್ಬರೂ ಪರಸ್ಪರ ಪ್ರೀತಿಸತೊಡಗಿರುತ್ತಾರೆ. ಮಡ್‌ದ್ವೀಪದ ಪಿಕ್ನಿಕ್ಕಿನಲ್ಲಿ ಅವಳನ್ನು ಮೊದಲ ಬಾರಿಗೆ ನೋಡಿದ ರಾಹುಲನು ಅವಳ ಕಡೆಗೆ ಆಕರ್ಷಿತನಾಗುತ್ತಾನೆ. ಆದರೆ ಅವನ ಕೋರಿಕೆಯನ್ನು ವೈದೇಹಿಯು ನಯವಾಗಿಯೇ ತಿರಸ್ಕರಿಸುತ್ತಾಳೆ. ಕ್ರಾಂತಿಯಾಗದ ಹೊರತು ಗತ್ಯಂತರವಿಲ್ಲ ಎಂಬ ನಿರ್ಧಾರಕ್ಕೆ ಬಂದ ವೈದೇಹಿಯು ಕಮ್ಯುನಿಸ್ಟ್ ಪಾರ್ಟಿಯ ಸದಸ್ಯಳಾಗುತ್ತಾಳೆ. ಇದಕ್ಕೆ ಅವಳ ಅಣ್ಣ ಹಾಗೂ ಅರವಿಂದನ ಅಣ್ಣ ಇಬ್ಬರೂ ಕಮ್ಯೂನಿಸ್ಟ್ ಪಾರ್ಟಿಗೆ ಸೇರಿದ್ದೂ ಒಂದು ಕಾರಣವಾಗಿರುತ್ತದೆ. ಅಲ್ಲದೆ ಅವಳ ಪ್ರಕಾರ ಎಲ್ಲ ವಿಷಯಗಳಲ್ಲೂ ಒಂದು ರೀತಿಯ ಸ್ವಾತಂತ್ರ್ಯದ ಅನುಭವ ಉಂಟಾಗುತ್ತದೆ. ಹೌದು, ಆದರೆ ಪಾರ್ಟಿ ಎಂದರೆ ಒಂದು ಶಿಸ್ತನ್ನು ಅನುಸರಿಸಬೇಕಾಗುವುದು. ಹೆಚ್ಚಾಗಿ ಆ ಶಿಸ್ತು, ಆ ಧ್ಯೇಯ ಅವರಿಗೆ ಹಿಡಿಸಿದ್ದರಿಂದ ಇನ್ನು ಮುಂದೆ ಜಾಗತಿಕ ಕ್ರಾಂತಿಯ ಕಾರ್ಯದಲ್ಲಿ ಹೊಸ ಸಮಾಜ ನಿರ್ಮಾಣದ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಿರುತ್ತದೆ. ಇದೊಂದು ಸುಂದರವಾದ ಕನಸಾಗಿದ್ದು, ಆ ಕನಸನ್ನು ನನಸನ್ನಾಗಿ ಮಾಡುವ ದಾರಿಯಲ್ಲಿಯೇ ಜೀವನದ ಸಾರ್ಥಕತೆ ಇದೆ ಎಂದು ಹೇಳುವ ಅವಳ ಮಾತುಗಳಲ್ಲಿ ಅವಳ ಬದಲಾದ ಜೀವನದ ಧ್ಯೇಯಗಳನ್ನು ಗುರುತಿಸಬಹುದಾಗಿದೆ.

ಶಿರೀನ್ ಸ್ವಚ್ಛಂದ ವೃತ್ತಿಯ ಸ್ವತಂತ್ರ ಮನೋಭಾವವನ್ನು ಹೊಂದಿದ್ದ ಯುವತಿ. ತನ್ನ ಗೆಳೆಯರೊಂದಿಗೆ ನಡೆದುಕೊಳ್ಳುವುದರ ಅವಳ ತೀಕ್ಷ್ಣತೆ, ಅವಳ ಆತ್ಮವಿಶ್ವಾಸ, ಎಲ್ಲ ತೊಡಕಿನ ಪೇಚಾಟಗಳನ್ನು ಯಶಸ್ವಿಯಾಗಿ ದೂರವಿಡುವ ಅವಳ ಕಲಾವಂತಿಕೆ, ಅವಳ ನಿರ್ಲಿಪ್ತತೆ ಇವೆಲ್ಲವುಗಳಿಂದಾಗಿ ಜನರ ದೃಷ್ಟಿಯಲ್ಲಿ ಶಿರೀನ್ ಬಹಳ ಡೇಂಜರಸ್ ಹುಡುಗಿ. ಶಿರೀನ್‌ಳ ನಿರ್ಲಿಪ್ತತೆ, ಸ್ವಚ್ಛಂದ ವೃತ್ತಿ, ಜೀವನೋತ್ಸಾಹಗಳ ಹಿಂದೆ 'ಧೈರ್ಯಗುಂದದೆ ಜೀವಿಸಿದರೆ ಸಾಕು, ಜೀವನ, ಅನುಭವ ಎಲ್ಲ ಕಲಿಸುವವು' ಎಂಬ ಅನುಭವದ ಮಾತಿದೆ. ಜೊತೆಗೆ ಅವಳ ಈ ಬೆಳವಣಿಗೆಯಲ್ಲಿ ಅವಳ ತಂದೆಯ ಪಾತ್ರವೂ ಬಹಳ ಪ್ರಮುಖವಾಗಿದೆ. ಆತ ಶಿರೀನಳಿಗೆ ಮೇಲಿಂದ ಮೇಲೆ ಶಿರೀನ್ ನಗ್ತಾ ಇರು, ನೀ ನಕ್ಕರೆ ಜಗ ನಗ್ತದೆ, ಅತ್ತರೆ ಜಗ ಅಳ್ತದೆ, ಆದದ್ದಾಗುತ್ತದೆ, ಹೋದದ್ದು ಹೋಗ್ತದೆ.. ಯಾವುದಕ್ಕೂ ಜಿಗಣೆಯಂತೆ ಅಂಟಿಕೊಂಡಿರಬಾರದು. ಅಂಟಿಕೊಂಡೆಯೇ ಬಂತು ತೊಡಕು–ದುಃಖ–ನೋವು' ಎಂದು ಹೇಳಿದ್ದ ಮಾತುಗಳು ಕಾರಣವಾಗಿರುತ್ತವೆ.

ರಣಜಿತನನ್ನು ತನ್ನ ಸ್ನೇಹಿತನನ್ನಾಗಿ ಮಾಡಿಕೊಂಡಿದ್ದ ಶಿರೀನ್ ಆತನ ಕಾಟಕ್ಕೆ ಬೇಸರಗೊಂಡಿರುತ್ತಾಳೆ. ಆತನಿಗೆ ಮತ್ತೊಬ್ಬ ಹುಡುಗಿಯನ್ನು ಗಂಟು ಹಾಕಬೇಕೆಂದು ಆಲೋಚಿಸುತ್ತಾಳೆ. ಆದರೆ ಒಮ್ಮೊಮ್ಮೆ ಆತನ ಬಗ್ಗೆ ಕನಿಕರವನ್ನು ತೋರಿಸುತ್ತಾಳೆ. ಅವಳ ಪ್ರಕಾರ ಜೀವನಕ್ಕೆ ಒಂದು ಮೇರೆ ಇದೆ. ಒಂದು ಗೆರೆ ಇದೆ. ಪ್ರತಿಯೊಬ್ಬರೂ ಅದನ್ನು ತಿಳಿದೇ ಜೀವನ ನಡೆಸಬೇಕು. ಸುಮ್ಮನೆ ಬೇರೆಯವರಿಗೆ ತೊಂದರೆ ಕೊಡಬಾರದು. ಪ್ರಬುದ್ಧಳಾಗಿ, ಪ್ರೌಢಿಮೆಯಿಂದ ವರ್ತಿಸುವ ಶಿರೀನ್ ಆಧುನಿಕ ಮಹಿಳೆಯರ ಪ್ರತೀಕವಾಗಿದ್ದಾಳೆಂದು ಹೇಳಬಹುದು. ರಣಜಿತನ ಮರಣದ ವಿಚಾರವನ್ನು ತಿಳಿದ ಆಕೆ ಅವನು ಬಹುಶಃ ಆತ್ಮಹತ್ಯೆಯನ್ನು ಮಾಡಿಕೊಂಡಿರಬೇಕೆಂದು ಭಾವಿಸುತ್ತಾಳೆ. ಬಹುಶಃ ಅವನ ಸಾವಿಗೆ ಆತ ಮಾಡಿರಬಹುದಾದ ಯಾವುದಾದರೂ ಲೈಂಗಿಕ

ಅನಾಹುತ ಕಾರಣವಾಗಿರಬಹುದು ಎಂಬುದು ಅವಳ ಅನಿಸಿಕೆಯಾಗಿರುತ್ತದೆ. ಆತನ ಮರಣದಿಂದ ತನಗೆ ಒಂದು ಕಾಟ ತಪ್ಪಿತು ಎಂದು ಆಲೋಚಿಸುವ ಶಿರೀನ್, "ಆತ ಇರಬೇಕಿತ್ತು ಅವನಿಲ್ಲದೆ ಜೀವನ ಸ್ವಲ್ಪ ಹೆಚ್ಚು ಒಣ ಒಣವಾಗಿ ಭಣ ಭಣವಾಗಿ ಕಾಣಬಹುದು... ಆದರೂ- ಎಂದಾದರೂ ಒಮ್ಮೆ ಸಾಯಲೇಕಾದವ. ಸ್ವಲ್ಪ ಬೇಗ ಸತ್ತ. ಇನ್ನೇನು ಸತ್ತ ಜೀವ ತಿರುಗಿ ಬರುವುದೇ?.. ವೆಲ್ ವೆಲ್-ನಾವೆಲ್ಲ ಒಂದು ಗೇಮ್ ಆಡಿದರೆ ಹೇಗೆ ?" ಎಂದು ರಾಹುಲನಿಗೆ ಹೇಳುವ ಮಾತುಗಳಲ್ಲಿ ಅವಳ ವಾಸ್ತವವಾದಿ ಪ್ರಜ್ಞೆಯನ್ನು, ಆಧುನಿಕ ಮನೋಭಾವನೆಯನ್ನು ಹೊಂದಿರುವುದನ್ನು ಗುರುತಿಸಬಹುದು.

ಕಮಲಾಬಾಯಿ ರಾಹುಲನ ಮಾಂಶಿ. ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ರಾಹುಲನನ್ನು ಮಾಂಶಿಯು ತನ್ನ ಬಳಿಯೇ ಬೆಳಸುತ್ತಾಳೆ. ಹೀಗಾಗಿ ರಾಹುಲನಿಗೂ ಕೂಡ ಮಾಂಶಿಯನ್ನು ಕಂಡರೆ ಪ್ರೀತಿ ಗೌರವವಿರುತ್ತದೆ. ತಂದೆ ಮಕ್ಕಳ ನಡುವಿನ ಸಂಘರ್ಷದ ಬಗ್ಗೆ ಗೊತ್ತಿದ್ದ ಮಾಂಶಿಯು ರಾಹುಲನ ತಂದೆಯ ಅಂತ್ಯಕಾಲದಲ್ಲಿ ರಾಹುಲನು ತನ್ನ ತಂದೆಯನ್ನು ನೋಡುವಂತೆ, ಅವರ ಜೊತೆಯಲ್ಲಿ ಮಾತನಾಡುವಂತೆ ಮಾಡುತ್ತಾಳೆ. ಒಂದು ಪರಿಪೂರ್ಣ ಮಾತೃ ಹೃದಯದ ಮಾಂಶಿಯು ರಾಹುಲನಿಗೆ ಕುಂದಾಳ ಜೊತೆಯಲ್ಲಿ ವಿವಾಹವಾಗುವಂತೆ ಮಾಡಿ ಅವನ ಬದುಕನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಮಾಡುತ್ತಾಳೆ. ರಾಹುಲನಿಗೆ ಅವನ ಜವಾಬ್ದಾರಿಗಳ ಬಗ್ಗೆ ತಿಳಿಸಿಕೊಡುತ್ತಾ ತಾನೂ ಕೂಡ ಅವನ ಬೆಂಬಲಕ್ಕೆ ನಿಲ್ಲುತ್ತಾಳೆ. ಅವನ ಹುಡುಗುತನ ಕಡಿಮೆಯಾಗುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಮಾತೃ ಹೃದಯದ ಪ್ರತೀಕವಾಗಿ ನಾವು ಮಾಂಶಿಯನ್ನು ಗುರುತಿಸಬಹುದಾಗಿದೆ.

ಈ ರೀತಿಯಾಗಿ ಒಟ್ಟಾರೆಯಾಗಿ ದೇಸಾಯಿ ಅವರು ತಮ್ಮ ಈ ಕಾದಂಬರಿಯಲ್ಲಿ ವಿವಿಧ ಪಾತ್ರಗಳ ಮೂಲಕ ಸ್ತ್ರೀಯ ವಿವಿಧ ಮುಖಗಳನ್ನು ಚಿತ್ರಿಸುತ್ತಾ. ಸ್ತ್ರೀ ಕಾದಂಬರಿಯ ಕೇಂದ್ರದಲ್ಲಿಯೇ ಉಳಿಯುವಂತೆ ಮಾಡಿರುವುದನ್ನು ಇಲ್ಲಿ ಗುರುತಿಸಲಾಗಿದೆ.

೫.೩ ಸೃಷ್ಟಿ : ಸೃಜನಶೀಲತೆಯ ಸಂಘರ್ಷ

ಒಂದು ಸೃಜನಶೀಲ ಕೃತಿಯ ಸೃಷ್ಟಿಯ ಸಂದರ್ಭದಲ್ಲಿ ಒಬ್ಬ ಬರಹಗಾರನು ಎದುರಿಸುವ ಸಂಘರ್ಷಗಳನ್ನು, ಒಂದು ಜೀವ ಸೃಷ್ಟಿ ಪ್ರಕ್ರಿಯೆಯಲ್ಲಿ ಉಂಟಾಗುವ ಸಂಘರ್ಷಗಳನ್ನು, ರಾಜಕೀಯ ಸಂಘರ್ಷಗಳನ್ನು, ವ್ಯಕ್ತಿಗಳ ನಡುವಿನ ಸಂಘರ್ಷಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಶಾಂತಿನಾಥ ದೇಸಾಯಿ ಅವರು 'ಸೃಷ್ಟಿ' ಕಾದಂಬರಿಯನ್ನು ಬರೆಯಲು ಪ್ರಾರಂಭ ಮಾಡಿದ್ದು ೧೯೭೧-೭೨ ರಲ್ಲಾದರೂ, ಇದು ಸಂಪೂರ್ಣಗೊಂಡು ಮೊದಲ ಬಾರಿಗೆ 'ಕಾದಂಬರಿ' ಪತ್ರಿಕೆಯ ೧೯೭೮ ರ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾಯಿತು. ೧೯೭೯ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಗೊಂಡಾಗ ಅದಕ್ಕಾಗಿ ಬರೆದ 'ಎರಡು ಮಾತು'ಗಳಲ್ಲಿ ದೇಸಾಯಿ ಅವರು ಹೀಗೆ ಹೇಳಿದ್ದಾರೆ. "ಈ ಕಾದಂಬರಿ ಬರೆಯಲು ಸುರು ಮಾಡಿದ್ದು ೧೯೭೧-೭೨ರಲ್ಲಿ ಅದರಲ್ಲಿ ನನ್ನ ಆಸ್ಥೆ ಕಡಿಮೆಯಾದಾಗ ನನ್ನನ್ನು ಹುರಿದುಂಬಿಸಿದವರು ಹಲವಾರು ಮಿತ್ರರು... ಡಾ. ಗುರುರಾಜ ಆಮೂರ ಅವರು, 'ನಾನೀಗ ಓದಿದಷ್ಟು ಛಲೋ ಅದ' ಎಂದು ಭರವಸೆ ತುಂಬಿ ಕಾದಂಬರಿಗೆ 'ಸೃಷ್ಟಿ' ಎಂದು ನಾಮಕರಣ ಮಾಡಿದರು ; ಮುಂದೆ 'ಸೃಷ್ಟಿ' ಪದದ ಬೇರೆ ಬೇರೆ ಅರ್ಥವಿನ್ಯಾಸಗಳು ಕಾದಂಬರಿಯಲ್ಲಿ ತಾವೇ ತಾವಾಗಿ ಸೇರಿಕೊಂಡವು"... ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಕಾದಂಬರಿಯು ಒಳಗೊಂಡಿರುವ ವಿವಿಧ ಅರ್ಥವಿನ್ಯಾಸಗಳನ್ನು ಕೂಡ ಅಧ್ಯಯನ ಮಾಡಲಾಗಿದೆ.

೫.೩.೧ ಸೃಜನಶೀಲತೆಯ ಸಂಘರ್ಷ :

ಸೃಷ್ಟಿ ಕಾದಂಬರಿಯು ಪ್ರಾರಂಭವಾಗುವುದೇ ಕಲ್ಪಿತ ಓದುಗ ಹಾಗೂ ಕಾದಂಬರಿಕಾರನ ನಡುವಣ ಸಂಭಾಷಣೆಯಿಂದ. ಈ ಸಂಭಾಷಣೆಯ ಮೂಲಕ ಈ ಕಾದಂಬರಿಯು ಸೃಜನಶೀಲತೆಯನ್ನು ತನ್ನ ಪ್ರಮುಖ ವಸ್ತುವನ್ನಾಗಿ ಆಯ್ದುಕೊಂಡಿರುವುದು ತಿಳಿದು ಬರುತ್ತದೆ. ಕಲ್ಪಿತ ಓದುಗ ಕಾದಂಬರಿಕಾರನನ್ನು ಕುರಿತು ಇತ್ತೀಚಿನ ಬರವಣಿಗೆ ಏನೂ ಆಗಿಲ್ಲವೆಂದು ಕೇಳುವ ಮೂಲಕ ಕಾದಂಬರಿ ಪ್ರಾರಂಭವಾಗುತ್ತದೆ. ಯಾವುದೇ ಒಬ್ಬ ಸೃಜನಶೀಲ ಲೇಖಕನ ಬಗ್ಗೆ ಸಹೃದಯನ ನಿರೀಕ್ಷೆಗಳು ಇರುತ್ತವೆ ಎಂಬುದು ಇದರಿಂದ ತಿಳಿಯುತ್ತದೆ. ತಾನು ಬರೆಯಬೇಕಾಗಿದೆ. ಆದರೆ ಸದ್ಯಕ್ಕೆ ಏನೂ ಬರೆದಿಲ್ಲ ಎಂದು ಕಾದಂಬರಿಕಾರ ಹೇಳುತ್ತಾನೆ. "ಓದುಗ ಬರಿಬೇಕಾಗೇದ? ಸರಿ ಏನು ಬರೀತಿ?" ಎಂದು ಕೇಳಿದಾಗ ಏನೆಂದರೆ? "ಕಾದಂಬರಿ" ಎಂದು ಕಾದಂಬರಿಕಾರ ಹೇಳುತ್ತಾನೆ. ಕಾದಂಬರಿಗೆ ಸದ್ಯ ಮಾರ್ಕೆಟ್ ವ್ಯಾಲ್ಯೂ ಬಹಳ ಇರುವುದರಿಂದ ಕಾದಂಬರಿಯನ್ನು ಬರೆಯುವಂತೆ ಹೇಳುವ ಓದುಗ "ಕಾದಂಬರಿಗೆ ಹೆಸರೇನಾದರೂ ಇಟ್ಟಿಯೇನು?" ಎಂದು ಕೇಳುತ್ತಾನೆ. ಕಾದಂಬರಿಕಾರ "ಹೆಸರಿಟ್ಟೇ ಕೂಸು ಹಡಿತಾರೇನು?" ಎಂದು ಕೇಳುತ್ತಾನೆ. ಆಗ ಓದುಗ "ಕೆಲವು ಮಂದಿ ಹೆಸರಿಟ್ಟೇ ಬರೆಯುವುದರಿಂದ ಹಾಗೆ ಕೇಳಿದೆ" ಎಂದು ಹೇಳುತ್ತಾ ಕಾದಂಬರಿಯ ವಸ್ತು ಏನು ಎಂದು ಕೇಳುತ್ತಾನೆ. ಕಾದಂಬರಿಕಾರ ಇನ್ನೂ ಹುಡುಕುತ್ತಿರುವುದಾಗಿ ಹೇಳುತ್ತಾನೆ. ಕಾದಂಬರಿ ಎಂದರೆ ಯಾವುದಾದರೂ ಒಂದು ಸಮಸ್ಯೆ ಇರಲೇಬೇಕು ಎಂಬುದು ಓದುಗನ ಅಭಿಪ್ರಾಯ. ವಸ್ತು ಹುಡುಕಿದರೆ ಸಮಸ್ಯೆ ಹುಟ್ಟುತ್ತದೆ, ವಸ್ತುವಿಗೆ ತಕ್ಕಂತ ಪಾತ್ರಗಳು ಹುಟ್ಟುತ್ತವೆ. ಆದರೆ "ಕಾದಂಬರಿಕಾರ ಹುಟ್ಟಿಸಿದ್ರೆ ಮಾತ್ರ ಹುಟ್ಟತಾವ" ಎಂಬುದು ಓದುಗನ ಅಭಿಪ್ರಾಯವಾಗಿದೆ. ಆದರೆ "ಅವೇನು ತಮ್ಮಿಂದ ತಾವೇ ಸ್ವಯಂ ಭೂ

ಬ್ರಹ್ಮನಂಗ ಹುಟ್ಟುವುದಿಲ್ಲ. ಅಲ್ಲದೆ ಕುಂತ ಕುಂತಲ್ಲೇ ಹುಟ್ಟಿಸಲು ತಾನೇನು ವರ್ಜಿನ್ ಮೇರಿ ಅಲ್ಲ" (ಪು. ೧೦) ಎಂಬುದು ಕಾದಂಬರಿಕಾರನ ಆಲೋಚನೆಯಾಗಿರುತ್ತದೆ.

ಕಾದಂಬರಿ ಪ್ರಾರಂಭ ಮಾಡುವ ಮೊದಲು ಕುಳಿತು ಚೆನ್ನಾಗಿ ಆಲೋಚನೆ ಮಾಡಬೇಕು. ಪಾತ್ರಗಳು, ವಸ್ತು, ಸಮಸ್ಯೆ, ಕಥೆಯ ಹಂದರ, ತಂತ್ರ, ಶೈಲಿ ಇವೆಲ್ಲವುಗಳ ಬಗ್ಗೆ ಚರ್ಚೆ ನಡೆಸಬೇಕು ಎಂಬುದು ಓದುಗನ ಅಭಿಮತವಾದರೆ, "ಚರ್ಚಾ ಪರ್ಚಾ ಆಮ್ಯಾಲೆ, ಮೊದಲು ಬರಿಲಿಕ್ಕಂತೂ ಸುರು ಮಾಡ್ತೀನಿ" ಎಂದು ಕಾದಂಬರಿಕಾರ ಹೇಳಿದಾಗ "ಏನೂ ಸ್ಪಷ್ಟ ವಿಚಾರವಿಲ್ಲದೇ ಸುರು ಮಾಡ್ತೀ" ಎಂಬುದು ಓದುಗನ ಪ್ರಶ್ನೆ. ಕಾದಂಬರಿಕಾರ 'ಹೂಂ' ಎಂದು ಹೇಳುತ್ತಾನೆ. ಕಾದಂಬರಿಕಾರನಿಗೆ ತಾನು ಕಾದಂಬರಿಯನ್ನು ರಚಿಸಬೇಕೆಂಬ ಹಂಬಲವಿದೆ. ಆದರೆ ಕಾದಂಬರಿಯ ವಸ್ತುವಿನ ಬಗ್ಗೆಯಾಗಲೀ, ತಂತ್ರದ ಬಗ್ಗೆಯಾಗಲೀ, ಪಾತ್ರಗಳ ಬಗ್ಗೆಯಾಗಲೀ ಯಾವುದೇ ನಿರ್ದಿಷ್ಟ ಆಲೋಚನೆ ಇರುವುದಿಲ್ಲ. ಕಾದಂಬರಿಯ ರಚನೆ ಸೃಜನಶೀಲ ಸೃಷ್ಟಿಯು ಸಹಜವಾಗಿ ಆಗಬೇಕು. ಯಾವುದೇ ನಿರ್ದಿಷ್ಟ ಕಟ್ಟುಪಾಡುಗಳಾಗಲೀ, ಪೂರ್ವ ಕಲ್ಪಿತ ವಿಚಾರಗಳಾಗಲೀ ಅವಶ್ಯವಿರುವುದಿಲ್ಲ. ತಾನು ಬರೆದಿದ್ದೆಲ್ಲವೂ ಕಾದಂಬರಿಯಾಗುತ್ತದೆಯೋ ಗೊತ್ತಿಲ್ಲ. ಆದರೆ ತಾನು ಮಾತ್ರ ಕಾದಂಬರಿ ಎಂದು ಕರೆಯುವುದರಿಂದ ಅದು ಕಾದಂಬರಿ ಆಗುತ್ತದೆ. ಮಂದಿಯ ಪೈಕಿ ತಾನೂ ಒಬ್ಬನಾಗಿ ತಾನು ತನ್ನ ಕಾದಂಬರಿಯನ್ನು ಬರೆಯುವುದಾಗಿಯೂ ಉಳಿದವರು ಅದನ್ನು ಏನು ಬೇಕಾದರೂ ಅನ್ನಬಹುದು. ತಾನು ಬರೆದ ಕಾದಂಬರಿಯನ್ನು ಮೊದಲು ತಾನು, ತದ ನಂತರ ತನ್ನ ಕಲ್ಪಿತ ಓದುಗ ಓದಬೇಕು. ಉಳಿದವರು ಓದಬೇಕು ಅಂತೇನಿಲ್ಲ. ಅವರು ಓದಿದರೂ ತಪ್ಪಿಲ್ಲ. ಓದದಿದ್ದರೂ ತಪ್ಪಿಲ್ಲ. ಓದಿದ ಮ್ಯಾಲ ಅದನ್ನು ಕಸದ ಬುಟ್ಯಾಗ ಒಗೆದರೂ ತಪ್ಪಿಲ್ಲ. ಅದಕ್ಕ ಬೆಂಕಿ ಹಚ್ಚಿದರೂ ತಪ್ಪಿಲ್ಲ ಆದರ ತನ್ನ ಓದುಗ ಮಾತ್ರ ಓದಲೇಬೇಕು ಎಂಬಲ್ಲಿ ನಿಜವಾದ ಓದುಗರು ಓದಿನಿಂದ ವಿಮುಖರಾಗುವುದಿಲ್ಲ ಎಂಬ ನಿಲುವು ಕಾದಂಬರಿಕಾರನದ್ದಾಗಿದೆ.

ಆದರೆ ಕಾದಂಬರಿ ಹೇಗೆ ಸುರುವಾಗಬಹುದು ಎಂಬ ಕುತೂಹಲ ಓದುಗನಿಗೆ ಇರುತ್ತದೆ. ಆದರೆ ಕಾದಂಬರಿಕಾರನಿಗೆ ಯಾವುದೆ ಊಹೆ ಇರುವುದಿಲ್ಲ. ಪತ್ರಿಕೆ ಓದುವ ಮೂಲಕವಾದರೂ ಏನಾದರೂ ವಸ್ತು ಸಿಗಬಹುದು ಎಂಬ ಓದುಗನ ಅಭಿಮತಕ್ಕೆ ಕಾದಂಬರಿಕಾರ ಹೇಳುವ 'ನಾಟ್ ಎ ಬ್ಯಾಡ್ ಆಯ್ಡಿಯಾ ! ಮುಂದ ಅದು ತನ್ನ ಅಂತಃಸತ್ವದಿಂದ ಹೊಟ್ಟ್ಯಾಗ ಕೂಸು ಬೆಳೆದಾಂಗ ಬೆಳೆದೀತು ಅಂತ ಅಂತಿಯೇನು?' ಎಂಬ ಮಾತು ಸಾಹಿತ್ಯ ಎಂಬುದು ಅಂತಃಸತ್ವದಿಂದ ಮೂಡುವಂತಹದ್ದು ಎಂಬುದನ್ನು ತಿಳಿಸುತ್ತದೆ. ಓದುಗನ "ಏನಂದಿ? ಕೂಸೋ? ಹೂಂಸೋ?" ಎಂಬ ಪ್ರಶ್ನೆಗೆ ಕಾದಂಬರಿಕಾರನು "ಯಾವುದಾದರೂ ಸರಿ! ಹೊರಗ ಬರೋದು ಮುಖ್ಯ ಅಲ್ಲ?" ಎಂದು ಹೇಳುತ್ತಾನೆ.ಹೀಗೆ ಕಲ್ಪಿತ ಓದುಗ ಮತ್ತು ಕಾದಂಬರಿಕಾರನ ನಡುವೆ ನಿರಂತರ ಸಂಘರ್ಷವೇರ್ಪಡುವುದನ್ನು ಗುರುತಿಸಬಹುದು. ಕಾದಂಬರಿಯು ಬೆಳೆಯುತ್ತಾ ಹೋದಂತೆಲ್ಲ ಇವರಿಬ್ಬರ ನಡುವಿನ ಸಂಘರ್ಷ ಮುಂದುವರೆಯುತ್ತಾ ಹೋಗುತ್ತದೆ.

ಪತ್ರಿಕೆಯೊಂದರಲ್ಲಿ ಬಂದ ಕ್ರಿಕೆಟ್‌ನ ವರದಿಯನ್ನು ಆಧರಿಸಿ ಕಾದಂಬರಿಯನ್ನು ಬರೆಯಲು ಪ್ರಾರಂಭಿಸಿದಾಗ ತಾನು ಕ್ರಿಕೆಟ್‌ನ ವಿಜಯವನ್ನು ಕುರಿತು ಬರೆಯುತ್ತಿಲ್ಲವೆಂದು ಕಾದಂಬರಿಕಾರ ಸ್ಪಷ್ಟಪಡಿಸುತ್ತಾನೆ. ಅದರಲ್ಲಿ ಬರುವ ಪಾತ್ರಗಳನ್ನು ಮುಂದುವರಿಸುವ ಬಗ್ಗೆ ಮತ್ತೆ ಓದುಗ ಹಾಗೂ ಕಾದಂಬರಿಕಾರರ ನಡುವೆ ಸಂಘರ್ಷವೇರ್ಪಡುತ್ತದೆ. ಕಾದಂಬರಿಕಾರನ ಪ್ರಕಾರ "ಸೃಷ್ಟಿಯ ನಿರಂತರ ಕೆಲಸಾ ಕೈಗೊಳ್ಳೋ ದರಿದ್ರ ಹಾಸ್ಯಾಸ್ಪದವಾದ ಮಾತಲ್ಲ". ಬೆಕ್ಕು,ನಾಯಿಗಳೂ ಮರಿ ಹಾಕುತ್ತವೆ ಎಂಬ ಓದುಗನ ಪ್ರಶ್ನೆಗೆ "ಬೆಕ್ಕು ನಾಯಿಗಳೆಂದ್ರೆ ಹೀನ, ಮನುಷ್ಯ ಮಾತ್ರ ಉಚ್ಚ ಅಂತ ಹೇಳಿದವರ್‍ಯಾರು? ಮನುಷ್ಯಾನ – ಹೌದಲ್ಲೋ? ತಡಿ ತೋರಿಸ್ತಿನಿ" (ಪು. ೩೫) ಎಂದು ಉತ್ತರಿಸುತ್ತಾನೆ. ಸೃಷ್ಟಿ ಕ್ರಿಯೆ ಒಂದು ಅತ್ಯಂತ ಜವಾಬ್ದಾರಿಯುತವಾದ ಕೆಲಸ. ಯಾವುದೇ ವರ್ಗದ ಸೃಷ್ಟಿ ಆದರೂ ಕೂಡ ತನ್ನದೇ ಆದ ಮಹತ್ವವನ್ನು ಹೊಂದಿರುತ್ತದೆ. ಸಿಕ್ಕ ಸಿಕ್ಕ ಕುದುರೀ ಹತ್ತಿ ಹೋದರೆ ಕಾದಂಬರಿಗೆ ಆರ್ಗ್ಯಾನಿಕ್ ಯುನಿಟ, ಸೇಂದ್ರಿಯ ಐಕ್ಯತೆ ಬರುವುದಿಲ್ಲ ಎಂಬುದು ಓದುಗನ ಅಭಿಪ್ರಾಯವಾದರೆ 'ಕುದುರಿ ಬ್ಯಾರೆ ಬ್ಯಾರೆ ಇದ್ದರೂ ಹತ್ತುವ ಮನುಷ್ಯಾ ಮಾತ್ರ ನಾನೊಬ್ಬನೇ ಅಲ್ಲ?' ಎಂಬುದು ಕಾದಂಬರಿಕಾರನ ಅಭಿಮತ. "ಎಷ್ಟು ಅಹಂಕಾರ ನಿನಗ! ನಿನ್ನ ಕೂಡ ನಾನು ಇದ್ದೀನಿ ಅನ್ನೋದನ ಮರೆತ ಬಿಟ್ಟಿಯೇನು?" (ಪು. ೩೮) ಎಂಬಲ್ಲಿ ಕಾದಂಬರಿಕಾರನು, ಓದುಗನನ್ನು ಮರೆತರೆ ಸಂಘರ್ಷವೇರ್ಪಡುವುದನ್ನು ಗುರುತಿಸಬಹುದು.

"ಒಮ್ಮೆ ಕಾದಂಬರಿ ಪ್ರಾರಂಭವಾದರೆ ಮುಕ್ತಾಯ ಆಗೇ ಆಗುತ್ತದೆ" ಎಂದು ಕಾದಂಬರಿಕಾರ ಅಭಿಪ್ರಾಯ ಪಟ್ಟರೆ, "ಕಾದಂಬರಿಗೆ ಮುಖ ಬೇಕು" ಎಂದು ಓದುಗ ಪ್ರತಿಕ್ರಿಯೆ ನೀಡುತ್ತಾನೆ. ಅಲ್ಲದೇ ಬೇಕಾಬಿಟ್ಟಿಯಾಗಿ ಕಾದಂಬರಿಯನ್ನು ಬರೆಯುವ ಬದಲು ಕೆಲವು ನಿರ್ದಿಷ್ಟ ಸಂದರ್ಭಗಳನ್ನು ನಿರ್ಮಿಸಿ ಕಾದಂಬರಿಯನ್ನು ಬೆಳೆಸಬೇಕು. ಇಲ್ಲದಿದ್ದರೆ ಕಾದಂಬರಿಯನ್ನು ಹರಿದು ಹಾಕುವುದಾಗಿ ಹೇಳುವ ಓದುಗನ ಮಾತುಗಳಲ್ಲಿ, ಓದುಗ ಕಾದಂಬರಿಯ ವಸ್ತು ವಿಷಯವಾಗಿ ಕಾದಂಬರಿಕಾರನೊಂದಿಗೆ ಸಂಘರ್ಷಕ್ಕೆ ಇಳಿಯುವುದನ್ನು ಕಾಣುತ್ತೇವೆ. ಕಾದಂಬರಿಯಲ್ಲಿ ಬರುವ ಪಾತ್ರಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿರಬೇಕು ಎಂಬುದು ಓದುಗನ ಅಭಿಮತವಾಗಿದೆ. ಕಾದಂಬರಿಕಾರನ ಪ್ರಕಾರ 'ಸಂಬಂಧ ಜೋಡಿಸುವವ ಓದುಗ'. ಪಾತ್ರಗಳ ಬಗ್ಗೆ ಬರೀತಾ ಎಕ್ಸ್‌ಪ್ಲೋರ್ ಮಾಡುವುದು ಕಾದಂಬರಿಕಾರನ ಮನದಿಚ್ಛೆ, ಆದರೆ ಮೊದಲಿದ್ದರ ಮಾತ್ರ ಎಕ್ಸ್‌ಪ್ಲೋರ್ ಮಾಡಲಿಕ್ಕ ಬರ್‍ತಾದ. ಕೊಲಂಬಸ್ ಮೊದಲ ಇದ್ದ ಅಮೇರಿಕಾನ ಎಕ್ಸ್‌ಪ್ಲೋರ್ ಮಾಡಿದ ಎಂಬುದು ಓದುಗನ ಅಭಿಮತ.

ಓದುಗನಿಗೆ ಕಾದಂಬರಿಕಾರ ತನ್ನ ಕಾದಂಬರಿಯೊಳಗೆ ಜೀವನದ ವಿಮರ್ಶೆ ಮಾಡುತ್ತಿರಬೇಕಾ? ಅಥವಾ ಮೌಲ್ಯಗಳ ಅನ್ವೇಷಣೆ ನಡೆಸುತ್ತಿರಬಹುದಾ? ಅಥವಾ ಜೀವನದ ಒಂದು ವೈಯಕ್ತಿಕ ದರ್ಶನ ರೂಪಿಸುತ್ತಿರಬಹುದಾ? ಅಥವ ಬರೇ ಮನರಂಜನೆಗಾಗಿ ಕಥೆ ಕಟ್ಟುತ್ತಿರಬಹುದಾ ? ಎಂಬ ಕುತೂಹಲಗಳು ಮೂಡುತ್ತವೆ. ಓದುಗನಲ್ಲಿ ಮೂಡುವ ಈ ಎಲ್ಲಾ ಪ್ರಶ್ನೆಗಳಿಗೆ ಅವನು ಸಾಹಿತ್ಯ ವಿಮರ್ಶೆಯನ್ನು ಓದಿರುವುದೇ ಮುಖ್ಯ ಕಾರಣವಾಗಿರುತ್ತದೆ. ಆದರೆ ಕಾದಂಬರಿಕಾರನಿಗೆ ಕಾದಂಬರಿ ಬರಿಯುವುದಷ್ಟೇ ಮುಖ್ಯ ಕೆಲಸ. ಅದರಾಗ ಏನಿದೆ, ಏನಿಲ್ಲ, ಅದರ ಉದ್ದೇಶ

ಏನದ, ಏನದಾವ, ಏನಿರಬೇಕಿತ್ತು ಇತ್ಯಾದಿ ಕೊರೆಯುತ್ತಾ ಕೂಡುವುದು ಓದುಗನಂಥವರ ಕೆಲಸ. ಆದರೆ ಒಂದು ಹಂತದಲ್ಲಿ ಕಾದಂಬರಿಕಾರ ಹೇಳುವ "ಒಂದು ದೃಷ್ಟಿಯಿಂದ ಈ ಕಾದಂಬರಿಯನ್ನ ನಾನು ನೀನೂ ಕೂಡೇ ಬರೀಲಿಕ್ಕೆ ಹತ್ತೀವಿ" ಎಂಬ ಮಾತು ಓದುಗ ಮತ್ತು ಕಾದಂಬರಿಕಾರರ ನಡುವಿನ ಸಂಘರ್ಷದ ಜೊತೆಗೆ ಇಬ್ಬರ ಜವಾಬ್ದಾರಿಯನ್ನೂ ಸೂಚಿಸುತ್ತದೆ. "ಬರೆಯೋದು ಒಂದು ಹೊಣೆಗಾರಿಕೆಯ ಕೆಲಸ, ಹೌದು. ಆದರೆ ನಾನು ಯಾರಿಗೆ ಹೊಣೆಯಾಗಿದ್ದೇನೆ ಅನ್ನೋದೇ ನನಗೆ ಗೊತ್ತಿಲ್ಲ" ಎಂಬ ಕಾದಂಬರಿಕಾರನ ಅಭಿಪ್ರಾಯಕ್ಕೆ "ಅದಕ್ಕೆ ನೀನು ನಿನ್ನ ಹೊಣೆಯನ್ನು ತಿಳಿಗಣ್ಣಿನಿಂದ ಹೊರಬೇಕು-ಹೊತ್ತು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ನಡೆಯಬೇಕು. ಅಂದಾಗಲೇ ನಿನ್ನ ಸೃಷ್ಟಿಗೆ ಒಂದು ಅರ್ಥ ಬಂದೀತು, ಒಂದು ರೂಪ ಬಂದೀತು..." ಎಂಬಲ್ಲಿ ಓದುಗ ಕಾದಂಬರಿಕಾರನ ಬಗ್ಗೆ ನಿಶ್ಚಿತವಾದ ಧೋರಣೆ ಹೊಂದಿರುತ್ತಾನೆ.

ಕಾದಂಬರಿಕಾರನು ತನ್ನ ಕಾದಂಬರಿಯನ್ನು ಒಂದು ವಿಶಿಷ್ಟವಾದ ರೀತಿಯಲ್ಲಿ ಬರೆಯುವ ಉದ್ದೇಶವನ್ನು ಹೊಂದಿರುವುದರಿಂದ ಆಗಾಗ ಆತ ಓದುಗನೊಡನೆ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ. ಓದುಗನ ನಂಬಿಕೆಯ ಶಾಶ್ವತ ಮೌಲ್ಯಗಳಲ್ಲಿ ಕಾದಂಬರಿಕಾರನಿಗೆ ಆಸ್ಥೆಯಿರುವುದಿಲ್ಲ. "ಜೀವನದ ನಿಜ ಸ್ವರೂಪ ಅದರ ವಿಪರೀತ ವೈವಿಧ್ಯದಲ್ಲಿ ಅದ, ಅದರ ಕೋಟ್ಯಾವಧಿ ವಿವರಗಳಲ್ಲಿ ಅದ, ಅದರ ಭಯಂಕರ ಸಾಧ್ಯತೆಗಳಲ್ಲಿ ಅದೆ. ಸಾಹಿತ್ಯದ ಮೂಲ ನಂಬಿಕೆ ಅಂದರ ಇದು. ಸಾಹಿತ್ಯ ಜೀವನದ ಈ ವೈವಿಧ್ಯತೆಯನ್ನು, ಸಾಧ್ಯತೆಗಳನ್ನು ಹಿಡಿದಿಡುವ, ನಿರೂಪಿಸುವ ಕೆಲಸ ಮಾಡ್ತಾನ ಇರ್ತಾದ. ಹುಚ್ಚು ವಿಮರ್ಶಕರು ಬರೇ ಶಾಶ್ವತ ಮೌಲ್ಯಗಳು, ಸಾರ್ವತ್ರಿಕ ಸತ್ಯಗಳು ಅಂತ ಬಡಕೋತಾವ; ಮುಂದ ಬ್ಯಾಸರಾದರ ಬರೇ ಕಲಾತ್ಮಕ ಮೌಲ್ಯಗಳು ಮುಖ್ಯ ಅಂತ ಕೊರೀತಾವ" (ಪು. ೩೭) ಎಂಬ ಮಾತುಗಳು ಜೀವನದ ನಿಜ ಸ್ವರೂಪದ ಜೊತೆ ಕಾದಂಬರಿಕಾರರು ಸಂಘರ್ಷಗಳಿಗೆ ಒಳಗಾಗಿ ಹೇಗೆ ಸಮಸ್ಯೆಗಳನ್ನು ಎದುರಿಸುವಂತಾಗುತ್ತದೆ ಎಂಬುದನ್ನು ಮತ್ತು ವಿಮರ್ಶಕರುಗಳ ಜವಾಬ್ದಾರಿಯನ್ನು ಸೂಚಿಸುತ್ತವೆ.

೫.೩.೨. ಜೀವ ಸೃಷ್ಟಿಯ ಸಂಘರ್ಷಗಳು :

'ಸೃಷ್ಟಿ' ಕಾದಂಬರಿಯಲ್ಲಿ ಜೀವ ಸೃಷ್ಟಿಯ ಸಂದರ್ಭದ ಸೃಜನದ ವಿನ್ಯಾಸ ಒಂದು ಸಂಕೇತದ ಮೂಲಕ ರೂಪುಗೊಳ್ಳುತ್ತದೆ. ಪ್ರಕೃತಿಯಲ್ಲಿ ಜೀವ ಸೃಷ್ಟಿ ಪ್ರಕ್ರಿಯೆಯು ತಡೆ ಇಲ್ಲದಂತೆ ನಡೆಯುತ್ತಿರುತ್ತದೆ. ಮಕ್ಕಳ ಹಡೆಯೋದು, ಸೃಷ್ಟಿಯ ನಿರಂತರ ಕೆಲಸಾ ಕೈಗೊಳ್ಳೋದು ಅಂದ್ರ ಅದು ಹಾಸ್ಯಾಸ್ಪದದ ಮಾತಲ್ಲ. ಬೆಕ್ಕು-ನಾಯಿಗಳೆಂದರೆ ಹೀನ, ಮನುಷ್ಯ ಅಂದರ ಉಚ್ಚ ಎಂಬ ಅಭಿಪ್ರಾಯವು ಜೀವ ಸೃಷ್ಟಿ ಪ್ರಕ್ರಿಯೆಯಲ್ಲಿ ಬರುವುದಿಲ್ಲ. ಏಕೆಂದರೆ ಪ್ರತಿಯೊಂದು ಜೀವಕ್ಕೂ ಕೂಡ ಅದರ ಅಸ್ತಿತ್ವವೇ ಮುಖ್ಯವಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಕಾದಂಬರಿಕಾರ ಒಂದು ಘಟನೆಯನ್ನು ಉದಾಹರಿಸಿದ್ದಾರೆ.

ಚಿಕ್ಕ ಬಸುವಿನ ಮನೆಯ ಹಿಂದಿನ ಪೇರಲ ಗಿಡದ ಕೆಳಗಿದ್ದ ಮುರುಕು ಪೆಟ್ಟಿಗೆಯಲ್ಲಿ ಏನೋ ಸಪ್ಪಳವಾಗುತ್ತದೆ. ಚಿಕ್ಕ ಬಸು ಹೋಗಿ ನೋಡುತ್ತಾನೆ. ಮೊನ್ನೆ ಮೊನ್ನೆ ಹೊಟ್ಟೆ ದೊಡ್ಡದಾಗಿ ಮಾಡಿಕೊಂಡು ಅಡ್ಡಾಡುತ್ತಿದ್ದ ಅವರ 'ಕಾಳಿ' ಮುಖ ಮೇಲೆ ಮಾಡಿಕೊಂಡು ಹಾಯಾಗಿ

ಮಲಗಿರುತ್ತದೆ. "ಏ! ಕಾಳಿ ಏಳಲ್ಲಿಂದ" ಎಂದು ಒದರುವಷ್ಟರಲ್ಲಿ ಕುಯಿಂವ್, ಕುಯಿಂವ್ ಎಂಬ ಸಪ್ಪಳ ಕೇಳಿ ಬರುತ್ತದೆ. ಕುತೂಹಲ ತಡೆಯಲಾರದ ಬಸು ಮತ್ತಷ್ಟು ಬಗ್ಗಿ ನೋಡುತ್ತಾನೆ. ಕಾಳಿಯ ಹೊಟ್ಟೆಯ ಹತ್ತಿರ ಅದರ ಮೊಲೆ ಕುಡಿಯಲು ಯತ್ನಿಸುತ್ತಿದ್ದ, ಕಣ್ಣು ಮುಚ್ಚಿದ್ದ ನಾಲ್ಕು ಸುಂದರ ಕುನ್ನಿಗಳಿರುತ್ತವೆ. ಸಂತೋಷ ತಡೆಯಲಾರದೇ ತನ್ನ ತಾಯಿಯನ್ನು ಕೂಗುತ್ತಾನೆ. ಆದರೆ ತಾಯಿ ಅದಕ್ಕೆ ಏನೂ ಉತ್ತರ ಕೊಡುವುದಿಲ್ಲ. ಬಸು ಕೂಡ ಅತ್ತ ಲಕ್ಷ್ಯ ವಹಿಸದೆ 'ಕಾಳಿ'ಯನ್ನು ಪ್ರೀತಿಯಿಂದ ಕರೆಯುತ್ತಾನೆ. ಆಗ ಕಾಳಿಯು ಅವನ ಕಡೆ ದೈನ್ಯದಿಂದ ನೋಡುತ್ತಿರುತ್ತದೆ. ಒಂದು ಮರಿಯನ್ನೆತ್ತಿ ಕಾಳಿಯ ಮುಖದ ಮುಂದೆ ಹಿಡಿಯುತ್ತಾನೆ. ಕಾಳಿ ಕುನ್ನಿಯನ್ನು ನೆಕ್ಕುತ್ತಿರುತ್ತದೆ. ಅಷ್ಟರಲ್ಲಿ ಬಸು "ಹೂಂ ಬಿಡು, ಎಲ್ಲಾದರೂ ತಿಂದು ಗಿಂದೀ!" ಎಂದು ಹೇಳಿ ಕುನ್ನಿಯನ್ನು ಮೇಲಕ್ಕೆತ್ತಿ ಪೆಟ್ಟಿಗೆಯ ಹೊರಗೆ ನೆಲದ ಮೇಲಿಡುತ್ತಾನೆ. ಕುಂಯಿ್ ಕುಂಯ್ ಎಂದು ಅದು ಒದರಿದರೂ ಬಿಡದೇ ಅದರ ಕಣ್ಣನ್ನು ತೆರೆದು ಒಳಗೇನಿದೆ ಎಂದು ನೋಡುತ್ತಾನೆ. ಅದು ಚೆನ್ನಾಗಿದೆಯೋ, ಇಲ್ಲವೋ ಎಂದು ನೋಡಲು ಅದರ ಒಂದು ಕಿವಿ ಹಿಡಿದು ಮೇಲಕ್ಕೆತ್ತುತ್ತಾನೆ. ಆಗ ಕುನ್ನಿ ಜೋರಾಗಿ ಕುಂಯ್ಗುಡತೊಡಗುತ್ತದೆ. ಕಾಳಿ ಎದ್ದು ನಿಂತು ಚಿಕ್ಕ ಬಸುನನ್ನು ಅತ್ಯಂತ ಭೀತಿಯಿಂದ ನೋಡತೊಡಗುತ್ತದೆ. ಕುನ್ನಿಯನ್ನು ಕೈಯಲ್ಲಿ ಹಿಡಿದುಕೊಂಡು ಪೇರಲ ಮರದ ಟೊಂಗೆಯ ಮೇಲೆ ಕೂರಿಸಲು ಪ್ರಯತ್ನಿಸುತ್ತಾನೆ.

ಇದರಿಂದ ಸಿಟ್ಟಾದ 'ಕಾಳಿ' ಗುರ್ರೆನ್ನುತ್ತದೆ. "ಕಾಳೀ, ಸುಮ್ನಿರು ನಿನ್ನ ಕುನ್ನಿಗೆ ನಾ ಏನೂ ಮಾಡೋದಿಲ್ಲ" ಎಂದು ಬಸು ಕೂಗಿದ ಕೂಡಲೇ ಕಾಳಿ ಜೋರಿನಿಂದ ಬೊಗಳತೊಡಗುತ್ತದೆ. ಅತ್ಯಂತ ಸಿಟ್ಟಿನಿಂದ ಕ್ರೂರವಾಗಿ ಅವನ ಕಡೆಗೆ ನೋಡತೊಡಗುತ್ತದೆ. ಇದರಿಂದ ಹೆದರಿದ ಬಸು "ತಗೋ ನಿನ್ನ ಹೊಲಸು ಕುನ್ನಿ" ಎಂದು ಕುನ್ನಿಯನ್ನು ಜೋರಾಗಿ ಚೆಂಡನ್ನು ಒಗೆದಂತೆ ಪೆಟ್ಟಿಗೆಯಲ್ಲಿ ಒಗೆಯುತ್ತಾನೆ. ಕುನ್ನಿಯು ನೋವಿನಿಂದ 'ಕುಂಯಿ್ ಕುಂಯಿ್' ಎಂದು ಒದ್ದಾಡತೊಡಗಿದಾಗ ಕಾಳಿ ಗುರ್ ಗುರ್ರೆಂದು ತನ್ನ ಕುನ್ನಿಯ ಮೈ ನೆಕ್ಕತೊಡಗುತ್ತದೆ. (ಪು. ೩೬) ಪ್ರತಿಯೊಂದು ಜೀವಿಯೂ ಕೂಡ ತನ್ನ ಹಾಗೂ ತನ್ನವರ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಅಸ್ತಿತ್ವತೆಯನ್ನು ಕಾಪಾಡಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತದೆ. ತನ್ನ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ಪ್ರತಿಭಟನೆಗೆ ತೊಡಗುತ್ತವೆ. ಅಂತೆಯೇ 'ಕಾಳಿಯು ತನ್ನ ಮರಿಯ ಜೀವಕ್ಕೆ ತೊಂದರೆ ಉಂಟಾಗುತ್ತದೆ' ಎಂದು ತಿಳಿದಾಗ ತನ್ನನ್ನು ಸಾಕಿದವರ ವಿರುದ್ಧವೇ ತಿರುಗಿ ಬೀಳುತ್ತದೆ. ತನ್ನ ಮರಿಯನ್ನು ಉಳಿಸಿಕೊಳ್ಳಲು ಬಸುವಿನ ವಿರುದ್ಧ ಸಂಘರ್ಷಕ್ಕಿಳಿಯುತ್ತದೆ. ಮನುಷ್ಯನು ತನ್ನ ಅಸ್ತಿತ್ವಕ್ಕಾಗಿ ಹೋರಾಡುವಂತೆ, ಶ್ರಮಿಸುವಂತೆ ಪರಿಸರದಲ್ಲಿನ ಪ್ರತಿಯೊಂದು ಜೀವಿಯೂ ಕೂಡ ತನ್ನ ಅಸ್ತಿತ್ವಕ್ಕಾಗಿ ಸಂಘರ್ಷವನ್ನೆದುರಿಸಬೇಕಾಗುತ್ತದೆ.

'ಸೃಷ್ಟಿ' ಕಾದಂಬರಿಯಲ್ಲಿ ಬರುವ ಗೌರಿಯ ಬಸಿರು ಸಮಾಜದ ದೃಷ್ಟಿಯಿಂದ ಅನೈತಿಕವಾದದ್ದು. ಆದರೆ ಡಾ.ದೇವಧರನು ಗೌರಿಗೆ "ನೀ ಏನೂ ತಪ್ಪು ಮಾಡಿಲ್ಲ ಮನುಷ್ಯನಿಗೆ ಸಹಜವಾದ ಪ್ರವೃತ್ತಿಗೆ ನೀ ಅನುವು ಕೊಟ್ಟೆ" ಎಂದು ಹೇಳುವಲ್ಲಿ ಅವನು ಅದನ್ನು ಸಹಜವೆಂಬಂತೆ ಸ್ವೀಕರಿಸುತ್ತಾನೆ. ಜೀವ ಸೃಷ್ಟಿ ಸಹಜವಾದದ್ದು. ಹೀಗಾಗಿಯೇ ಅವನು ಗೌರಿಗೆ ಗರ್ಭಪಾತ ಮಾಡಿಸಲು

ನಿರಾಕರಿಸುತ್ತಾನೆ. ಅವಳನ್ನುಮುಂಬಯಿಯಲ್ಲಿ ತನ್ನ ಸ್ನೇಹಿತರ ಮನೆಯಲ್ಲಿ ಉಳಿಸಿ ಆಕೆ ಮಗುವಿಗೆ ಜನ್ಮ ನೀಡುವಂತೆ ಮಾಡುತ್ತಾನೆ. ಗೌರಿ ಮುಂಬಯಿಯಲ್ಲಿ ಇದ್ದಾಗ ಅವಳಿಗೆ ಬರೆದ ಪತ್ರದಲ್ಲಿ 'ಪ್ರತಿಯೊಂದು ಜೀವ ಅತ್ಯಂತ ಮಹತ್ವವಾದದ್ದು. ಅತ್ಯಂತ ಪವಿತ್ರವಾದದ್ದು ಅದರ ಪೋಷಣೆ, ಅದರ ಪಾಲನೆ ಮನುಷ್ಯನ ಕರ್ತವ್ಯ...' (ಪು. ೯೮) ಎಂದು ಹೇಳುವ ಮಾತುಗಳು ಜೀವನದ ಸೃಷ್ಟಿ ಹಿನ್ನೆಲೆಯಲ್ಲಿ ಮಹತ್ವವಾಗುತ್ತವೆ. ಗೌರಿಯ ಪ್ರಕಾರ 'ಗಂಡು –ಹೆಣ್ಣಿನ ಆಟಕ್ಕೆ ಒಂದೇ ಕೊನೆ, ಬೀಜ ಅಂಕುರ– ಇನ್ನೊಂದು ಜೀವದ ಸೃಷ್ಟಿ!" ಹೀಗೆ ಗೌರಿಯು ಸಮಾಜದ ಸಂಘರ್ಷಗಳನ್ನು ಎದುರಿಸಿ ಮಗುವಿಗೆ ಜನ್ಮ ನೀಡುವ ಮೂಲಕ ಸೃಷ್ಟಿಯ ಮಹತ್ಕಾರ್ಯದಲ್ಲಿ ಪಾಲ್ಗೊಂಡ ಸಾರ್ಥಕತೆಯನ್ನು ಪಡೆಯುತ್ತಾಳೆ.

೫.೩.೩. ದೇವಧರನ ಅಸ್ತಿತ್ವದ ಹೋರಾಟದ ಸಂಘರ್ಷ :

ದೇಸಾಯಿ ಅವರ ಉಳಿದ ಎಲ್ಲಾ ಕಾದಂಬರಿಗಳಿಗಿಂತ ಭಿನ್ನವಾದ ತಂತ್ರವನ್ನು, ಕಥಾ ಹಂದರವನ್ನು ನಾವು 'ಸೃಷ್ಟಿ' ಕಾದಂಬರಿಯಲ್ಲಿ ಕಾಣುತ್ತೇವೆ. 'ಸೃಷ್ಟಿ' ಕಾದಂಬರಿಯಲ್ಲಿನ ಪಾತ್ರಗಳು ಎರಡು ಹಂತಗಳನ್ನು ಒಳಗೊಂಡಿದ್ದು, ಮೊದಲ ಹಂತದ ವ್ಯಕ್ತಿಗಳು ಎರಡನೇ ಹಂತದಲ್ಲಿ ಪರಿಸರ ಭಿನ್ನತೆಯಿಂದಾಗಿ ಬದಲಾಗುತ್ತಾರೆ. ಮೊದಲ ಹಂತದಲ್ಲಿ ಕಾದಂಬರಿಕಾರ, ಓದುಗ, ಸುರೇಶ, ಪ್ರೊ. ದೇವಧರ, ಗೌರಿ ಮತ್ತು ಶಕುಂತಲೆ ಬರುತ್ತಾರೆ. ಇಲ್ಲಿ ಸುರೇಶ ಆಧುನಿಕ ತರುಣ ಪೀಳಿಗೆಯ ಪ್ರತಿನಿಧಿ, ಪ್ರೊ. ದೇವಧರ ತತ್ವಜ್ಞಾನದ ಆಧ್ಯಾಪಕ, ಶಕುಂತಲೆ. ದೇವಧರನನ್ನು ಪ್ರೀತಿಸುವ ಹಾಗೂ ತತ್ವಜ್ಞಾನದ ವಿದ್ಯಾರ್ಥಿನಿ, ಭಾಟಿಯಾ ತತ್ವಜ್ಞಾನದ ವಿದ್ಯಾರ್ಥಿ. ಗೌರಿ ಸುರೇಶನ ಪ್ರೇಯಸಿ. ಎರಡನೇ ಹಂತದಲ್ಲಿ ಸುರೇಶ ಸಾಳಗಾಂವಕರ ಕಂಟ್ರ್ಯಾಕ್ಟ, ಸ್ಮಗ್ಲಿಂಗ್ ಮಾಡಿ ಶ್ರೀಮಂತನಾಗಿ ಕೃಷ್ಣಾಪುರದಲ್ಲಿ ಅತ್ಯಂತ ಪ್ರತಿಷ್ಠಿತ, ಪ್ರಭಾವಿ ವ್ಯಕ್ತಿಯಾಗಿ ಮೆರೆಯುತ್ತಿರುತ್ತಾನೆ. ಶಕುಂತಲ ಈತನ ಪತ್ನಿ, ಆದರೆ ಅನಾರೋಗ್ಯದಿಂದ ಬಳಲುತ್ತಿರುತ್ತಾಳೆ. ಗೌರಿ ಸುರೇಶನ ಪ್ರೇಮ ಪಾಶದಲ್ಲಿ ಸಿಲುಕಿ ಬಸಿರಾಗುತ್ತಾಳೆ. ಆದರೆ ಗರ್ಭಪಾತ ಮಾಡಿಸಿಕೊಳ್ಳಲು ಬಯಸದೇ ಮಗುವಿಗೆ ಜನ್ಮ ನೀಡುತ್ತಾಳೆ.

ಪ್ರೊ. ದೇವಧರ ಇಲ್ಲಿ ಡಾ.ದೇವಧರನಾಗಿ ಬದಲಾಗುತ್ತಾನೆ. ಇದಕ್ಕೆ ಪೂರಕವಾಗಿ "ಬ್ಯಾರೇ ವ್ಯಕ್ತಿತ್ವ ಹುಟ್ಟಸೋ ಮಾತ ಹೇಳಾಕತ್ತಿಲ್ಲ ನಾ. ಇದ್ದ ವ್ಯಕ್ತಿತ್ವ ಬದಲಿಸೋ ಮಾತ ಹೇಳಾಕತ್ತೇನಿ. ಪರಿಸ್ಥಿತಿಯ ಒತ್ತಡದ ಮೂಲಕ ಮನಸ್ಯಾ ಸ್ವಲ್ಪ ಬದಲಾಗ್ತಾನ – ಹೌದಲ್ಲೋ? ಒಂದು ಮಗು ತಾಯಿಯ ಸಾನಿಧ್ಯದಾಗ ಒಂದು ರೀತಿ ಬೆಳೀತದ; ತಾಯಿ ಸತ್ತು ಮಲತಾಯಿ ಬಂದರ ಮತ್ತೊಂದು ರೀತಿ ಬೆಳೀತದ... ಬಡವರ ಮನ್ಯಾಗ ಹುಟ್ಟಿದರ ಒಂದು ರೀತಿ ಬೆಳೀತದ, ಅದ ಶ್ರೀಮಂತರ ಮನ್ಯಾಗ ಹುಟ್ಟಿದರ ಮತ್ತೊಂದು ರೀತಿ ಬೆಳೀತದ... ಒಂದು ಹಳ್ಳ್ಯಾಗ ಬೆಳೆದರ ಒಂದು ರೀತಿ ಬೆಳೀತದ, ಮತ್ತ ಅದ ಒಂದು ದೊಡ್ಡ ಪಟ್ಟಣದಾಗ ಹುಟ್ಟಿ ಬೆಳೆದರ ಮತ್ತೊಂದು ರೀತಿ ಬೆಳೀತದ.. ಹೀಂಗ ಪರಿಸ್ಥಿತಿಗೂ ವ್ಯಕ್ತಿತ್ವದ ಬೆಳವಣಿಗೆಗೂ ಭಾಳ ಹತ್ತಿರದ ಸಂಬಂಧ ಅದ" (ಪು. ೬೦) ಎಂದು ಕಾದಂಬರಿಕಾರ ಓದುಗನಿಗೆ ಹೇಳುವ ಮಾತುಗಳು ಇಲ್ಲಿ ಪಾತ್ರಗಳು ತಮ್ಮ ವ್ಯಕ್ತಿತ್ವವನ್ನು ಬದಲಾಯಿಸಿರುವುದನ್ನು ತಿಳಿಸುತ್ತವೆ.

ಕಾದಂಬರಿಯ ಪ್ರಾರಂಭದಲ್ಲಿ ಬರುವ ಸುರೇಶ ಆಧುನಿಕ ತರುಣ ಪೀಳಿಗೆಯ ಪ್ರತಿನಿಧಿಯಾಗಿದ್ದು ಮುಂಬಯಿಯಲ್ಲಿ ಯಾವುದೋ ಒಂದು ಕಂಪನಿಯಲ್ಲಿ ಕ್ಲಾರ್ಕ್ ಕಮ್ ಪಿ.ಎ. ಆಗಿರುತ್ತಾನೆ. ಮೂಲತಃ ಕೃಷ್ಣಾಪುರದವನಾದ ಈತ ಬೆಳಗಾವಿಯಲ್ಲಿ ಬಿ.ಎ. ಆದ ನಂತರ ತನ್ನೂರಿಗೆ ಹಿಂದಿರುಗಿ ಅಪ್ಪನ ಆಸ್ತಿಯನ್ನು ನೋಡಿಕೊಂಡು, ಊರಿನ ಶಾಲೆಯಲ್ಲಿಯೇ ಮಾಸ್ತರಿಕೆಯನ್ನು ಮಾಡಿಕೊಂಡು ಬೇಸರವಾದರೆ ಊರಿನಲ್ಲಿ ರಾಜಕೀಯವನ್ನು ಸೇರಿ ಏನೇನೋ ಮಾಡಬಹುದಿತ್ತು. ಆದರೆ ಅದನ್ನು ಬಿಟ್ಟು ತಾನು ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು, ಲಕ್ಷಾಧೀಶನಾಗಬೇಕು, ಪ್ರೇಮ ವಿವಾಹ ಮಾಡಿಕೊಳ್ಳಬೇಕು, ಜೀವನದ ವೈವಿಧ್ಯತೆಯನ್ನು ಅನುಭವಿಸಬೇಕು, ಜಗತ್ತನ್ನು ಗೆಲ್ಲಬೇಕು ಎಂಬ ಹಂಬಲದಲ್ಲಿ ಮುಂಬಯಿಗೆ ಬಂದಿರುತ್ತಾನೆ. ಇಲ್ಲಿ ನಾವು ಸುರೇಶನ ಮಾನಸಿಕ ಸಂಘರ್ಷಗಳನ್ನು ಗುರುತಿಸಬಹುದಾಗಿದೆ.ಆಫೀಸಿಗೆ ಹೊರಟ ಸುರೇಶನು ದಾರಿಯಲ್ಲಿ ವಾಡೇಕರನನ್ನು ನೋಡುವ ಸಲುವಾಗಿ ನಿಲ್ಲುತ್ತಾನೆ. ಜನ ಜಂಗುಳಿಯ ಮಧ್ಯದಲ್ಲಿ ಗುಜರಾತೀ ಹೆಣ್ಣು ಮಗಳು ಸುರೇಶನ ಎಡ ತೋಳಿಗೆ ತನ್ನ ಪುಷ್ಟ ಮಾಂಸಲ ಎದೆಯನ್ನೊತ್ತಿ ಹಿಡಿದಿರುತ್ತಾಳೆ. ಎಡತೋಳಿನಿಂದ ಹೊರಟ ಎಲೆಕ್ಟ್ರಿಕ್ ಕರೆಂಟು ಟೊಂಕದ ಕೆಳಗೆ ಸುಳಿದಂತಾಗಿ ಸುರೇಶನ ಮೈ ಬಿಸಿಯಾಗುತ್ತದೆ. "ಇದು ಮುಂಬಯಿ–ಇಲ್ಲಿ ಏನೂ ಬೇಕಾದರೂ ನಡೆದೀತು– ನೋಡೋನ ಈ ಹೆಣ್ಣಿನ ಮನಸ್ಸಿನಲ್ಲಿ ಏನಿದೆಯೋ– ಇಲ್ಲಿ ಈ ಕ್ಷಣ ಒಂದು ಸಾಹಸೀ ಪರಾಕ್ರಮದ ಪ್ರಾರಂಭವಿರಬೇಕು–ಒಂದು ವಿಚಿತ್ರ ಸಂಬಂಧದ ಬೀಜವಿರಬೇಕು– ಯಾರಿಗೆ ಗೊತ್ತು ಕಾಲದ ಗರ್ಭದಲ್ಲಿ ಏನಿದೆಯೋ ಏನೋ–ಮನುಷ್ಯ ಭವಿಷ್ಯದ ಬಾಗಿಲನ್ನು ಯಾವಾಗಲೂ ತಟ್ಟಲು ಸಿದ್ಧನಿರಬೇಕು–ಯಾರಿದ್ದರೇನು? ಇವಳು ಹೆಣ್ಣು–ತಾನು ಗಂಡು– ಯಥಾ ಕಾಷ್ಠಂ ಚ ಕಾಷ್ಠಂ ಚ" (ಪು. ೧೪) ಎಂದು ಸುರೇಶ ಆಲೋಚಿಸುವಲ್ಲಿ ತರುಣರ ಮಾನಸಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ.

ಹಾಗೆ ಪ್ರಯತ್ನ ನಡೆಸಿ ಆಕೆಯಿಂದ ಅವಮಾನಿತನಾದ ಸುರೇಶ ಅಲ್ಲಿಂದ ಹೊರಡುತ್ತಾನೆ. ದಾರಿಯಲ್ಲಿ ತನ್ನ ಕಾಲನ್ನು ತಾನೇ ನೆಕ್ಕುತ್ತ ನಿಂತ ಬೀದಿ ನಾಯಿಯೊಂದನ್ನು ಸಿಟ್ಟಿನಿಂದ ಝಾಡಿಸಿ ಒದ್ದು, ಅದು ಕುಂಡೆಯಲ್ಲಿ ಬಾಲ ಹಾಕಿಕೊಂಡು ಕುಂಯಿಗುಡುತ್ತಾ ಹೋಗುವುದನ್ನು ಕ್ರೂರವಾಗಿ ನೋಡಿ, ಮನದಲ್ಲಿಯೇ ಆ ನಾಯಿಗೆ ಬೈಯ್ದುಕೊಳ್ಳುತ್ತಾ ತನ್ನ ಆಫೀಸಿನ ದಾರಿ ಹಿಡಿಯುತ್ತಾನೆ. ಇಲ್ಲಿ ಸುರೇಶನ ಮಾನಸಿಕ ಉದ್ವೇಗವನ್ನು ಗುರುತಿಸಬಹುದಾಗಿದೆ. ಖನ್ನಾನ ಕ್ಲರ್ಕ್ ಕಮ್ ಪಿ.ಎ. ಆಗಿದ್ದ ಸುರೇಶ ತನ್ನ ಕರ್ತೃತ್ವ ಶಕ್ತಿ, ಝಟಪಟ ನಿರ್ಣಯ ತೆಗೆದುಕೊಳ್ಳುವ ಚುರುಕುತನ, ವ್ಯಾಪಾರಿಗಳನ್ನು ಬಲೆಯಲ್ಲಿ ಹಾಕುವ ಮಾತಿನ ವೈಖರಿ ಇತ್ಯಾದಿಗಳಿಂದ ಖನ್ನಾನ ಬಿಜಿನೆಸ್ಸು ಸಾಕಷ್ಟು ಊರ್ಜಿತವಾಗುವಂತೆ ನೋಡಿಕೊಳ್ಳುತ್ತಾನೆ. ಇದರಿಂದ ಖನ್ನಾ ಗತ್ಯಂತರವಿಲ್ಲದೆ ಸುರೇಶನನ್ನು ತನ್ನ ೨೦ ಪೈಸೆ ಪಾರ್ಟನರ್‌ನನ್ನಾಗಿ ಮಾಡಿಕೊಳ್ಳುತ್ತಾನೆ. ಬಂಡವಾಳ ಇಲ್ಲದೆ ಬರೇ ತನ್ನ ವೈಶಿಷ್ಟ್ಯಪೂರ್ಣ ಗುಣಗಳ ಮೇಲೆ ಸಿಕ್ಕ ಈ ಪಾರ್ಟನರ್‌ಶಿಪ್ಪೆಂದರೆ ಸುರೇಶನಿಗೆ ತನ್ನ ಭಾವೀ ಉತ್ಕರ್ಷೆಯ ಜೀವನದ ದ್ಯೋತಕವಾಗಿರುತ್ತದೆ.

ಕ್ಲರ್ಕ್ ಕಂ ಪಿ.ಎ. ಆಗಿದ್ದ ಸುರೇಶ ಅದೇ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ 'ಗೌರಿ' ಎಂಬ ಹುಡುಗಿಯನ್ನು ಪ್ರೀತಿಸುತ್ತಿರುತ್ತಾನೆ. ಅವರಿಬ್ಬರ ಪ್ರೀತಿಯ ಪ್ರತಿಫಲವೆಂಬಂತೆ ಗೌರಿಯು ಬಸಿರಾಗಿರುತ್ತಾಳೆ.ಖನ್ನಾನ ಪಾರ್ಟನರ್ ಅಗುವವರೆವಿಗೂ ಗೌರಿಯನ್ನು ಪ್ರೀತಿಸುತ್ತಿದ್ದ ಸುರೇಶ ಪಾರ್ಟನರ್ ಆದ ನಂತರ ಗೌರಿಯ ಮೇಲಿನ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. "ಅವಳ ಚಿಕ್ಕ ಸಪಾಟ ದೇಹ, ಅವಳ ಸಾದಗಪ್ಪು ಬಣ್ಣ, ಅವಳ ಮೊಂಡ ಮೂಗು, ಈಗ ಕಂಪನಿಯ ಬಾಸ್ ಆದ ಸುರೇಶನ ಡಾಜ್ ಕಾರಿಗೆ ಶೋಭಿಸಲಾರವು" ಎಂಬುದು ಅವನ ಅಭಿಪ್ರಾಯವಾಗಿರುತ್ತದೆ. ಹೀಗಾಗಿಯೇ ಅಂದು ಸಂಜೆ ಗೌರಿಯನ್ನು ಸಿನಿಮಾಕ್ಕೆ ಕರೆದೊಯ್ಯುತ್ತಾನೆ. ಗೌರಿ ತಮ್ಮಿಬ್ಬರ ಮದುವೆಯ ವಿಚಾರ ಮಾತನಾಡಿದಾಗ ಸುರೇಶನು ಇಷ್ಟು ಬೇಗ ಗಡಿಬಿಡಿಯಲ್ಲಿ ಲಗ್ನ ಆಗಬೇಕೆಂದರೆ ಅದು ಸಾಧ್ಯವಿಲ್ಲ. ಆದ್ದರಿಂದ 'ಅದನ್ನು ಹೊರಗೆ ಹಾಕಿಸುವುದು' ಒಂದೇ ಮಾರ್ಗ ಎಂದು ಹೇಳುತ್ತಾನೆ. ಗೌರಿಯು ಸುರೇಶನಿಗೆ "ಇಂದೇನೋ ನೀ ಬ್ಯಾರೆ ಯಾರೋ ಅನ್ಯರಂತೆ ಮಾತಾಡ್ತಾ ಇದ್ದೀ... ಈ ಸಮಸ್ಯಾ ಬರೇ ನನ್ನದು, ನಿನಗೇನೂ ಸಂಬಂಧವಿಲ್ಲ ಅನ್ನೋ ಹಾಗೆ ಮಾತಾಡ್ತಾ ಇದ್ದೀ... ನೀ ಹಾಂಗ ಸ್ಪಷ್ಟ ಹೇಳಿ ಬೇಕು-ನಾ ಹೋಗಿ, ಆ ಬರೋ ಟ್ರೇನಿನ ಕೆಳಗ ಬಿದ್ದು ಜೀವಾ ಕೊಟ್ಟು ಬಿಡ್ತೀನಿ" (ಪು. ೪೬) ಎಂದು ಹೇಳುವಲ್ಲಿ ಅವರಿಬ್ಬರ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ.

ಸುರೇಶ ತನ್ನ ತಂದೆಯೊಂದಿಗೆ ಜಗಳ ಮಾಡಿಕೊಂಡು ಮನೆಯನ್ನು ಬಿಟ್ಟು ಮುಂಬಯಿಗೆ ಬಂದಿರುತ್ತಾನೆ. ಸುರೇಶ ಮುಂಬಯಿಯಲ್ಲಿ ತಾನೊಂದು ಹೊಸ ಕಾರನ್ನು ಕೊಂಡು ಕೃಷ್ಣಾಪುರಕ್ಕೆ ಹೋದಂತೆ ಕನಸು ಕಾಣುತ್ತಿದ್ದಾಗ... ಮನೆಯಲ್ಲಿ ಅಪ್ಪ ಗದ್ಗದಿತನಾಗಿ ಹೇಳುತ್ತಾನೆ! 'ಸುರೇಶ,ನೀನು ಮನೀ ಬಿಟ್ಟು ಓಡಿ ಹೋದಿ, ಖರೆ. ಅದಕ್ಕ ನಾನೇ ಕಾರಣ-ಹೌದು. ನಿನ್ನ ಆಂತರಿಕ ಸತ್ವದ ಕಲ್ಪನಾ ನನಗಾಗ ಇದ್ದಿಲ್ಲ: ನೀನೊಬ್ಬ ಉಡಾಳ ಹುಡುಗ, ಕೆಲಸಕ್ಕೆ ಬಾರದವ, ತಂದೆ-ತಾಯಿಗಳ ಮಾತು ಕೇಳದವ- ಎಂದು ನಿನ್ನನ್ನು ಹಳಿಯುವುದನ್ನು ಬಿಟ್ಟು ನಾನೇನೂ ಮಾಡಲಿಲ್ಲ... ಹೌದು. ಆದರೆ ನಾನು ಅಷ್ಟು ಕಠೋರ ಇದ್ದುದರಿಂದಲೇ ನೀನು ಮುಂಬಯಿಗೆ ಹೋದಿ, ನಿನ್ನ ಕರ್ತೃತ್ವ ಶಕ್ತಿಯಿಂದ ಮ್ಯಾಲ ಬಂದಿ... ನನ್ನ ಹಿಂದಿನ ಕಠೋರ ನಡತೆಗೆ ನೀನು ಕ್ಷಮಿಸಬೇಕಪ್ಪಾ" (ಪು. ೪೨) ಎಂಬ ಮಾತುಗಳಲ್ಲಿ ತಂದೆ-ಮಕ್ಕಳ ನಡುವಿನ ಸಂಘರ್ಷವನ್ನು ಗುರುತಿಸಬಹುದು.

ಪ್ರೊ. ದೇವಧರನಿಗೆ ತನ್ನ ವಿದ್ಯಾರ್ಥಿಗಳಾದ ಭಾಟಿಯಾ ಮತ್ತು ಶಕುಂತಲೆ ಇಬ್ಬರಲ್ಲಿ ಶಕುಂತಲೆಯ ಬಗ್ಗೆ ವಿಶೇಷವಾದ ಪ್ರೀತಿ ಇರುತ್ತದೆ. ತರಗತಿಯ ವಿಚಾರಗಳಿಗೆ ಸಂಬಂಧಿಸಿದಂತೆ ಕ್ಯಾಂಟೀನಿನಲ್ಲಿ ಚರ್ಚಿಸುವ ಸಂದರ್ಭದಲ್ಲಿ ಶಕುಂತಲೆಯತ್ತ ಕಣ್ಣರಳಿಸಿ ನೋಡುವ ದೇವಧರನಿಗೆ ಭಾಟಿಯಾನ ಪ್ರಶ್ನೆಗಳಿಗೆ ಉತ್ತರ ಕೊಡಲು ಬೇಸರವಿರುತ್ತದೆ. ಭಾಟಿಯಾ ಸೂಕ್ತವಾದ, ಸಮಂಜಸವಾದ ಮಾತುಗಳನ್ನು ಹೇಳಿದರೂ ಕೂಡ ಅವುಗಳ ಬಗ್ಗೆ ದೇವಧರನ ಆಸಕ್ತಿ ಇರುವುದಿಲ್ಲ. ಭಾಟಿಯಾ ತಾನು ಕಾರ್ಲ್‌ಮಾರ್ಕ್ಸ್ ಬಗ್ಗೆ ಅಭ್ಯಾಸ ಮಾಡಬೇಕು ಎಂದು ಅಂದುಕೊಂಡಿರುವುದರಿಂದ "ಮೊದಲು ಯಾವ ಪುಸ್ತಕ ಓದಬೇಕು" ಎಂದು ಕೇಳುತ್ತಾನೆ. ಆಗ ದೇವಧರನು "ಮೊದಲು ಥಲೋತಂಗ ಅಭ್ಯಾಸ ಮಾಡಿ ಫಸ್ಟ್ ಕ್ಲಾಸ್ ತಗಾ. ಆ ಮಾತೆಲ್ಲ

ಸೂಟ್ಯಾಗ. ನಿನ್ನ ಮಾರ್ಕ್ಸ್ ಪಾರ್ಕ್ಸ ಓದೀಯಂತ" ಎಂದು ಹೇಳುತ್ತಾ ಭಾಟಿಯಾನ ಉತ್ಸಾಹಕ್ಕೆ ಸೂಜಿ ಚುಚ್ಚುತ್ತಾನೆ.

ಇಲ್ಲಿ ದೇವಧರನು ಭಾಟಿಯಾನ ಬಗ್ಗೆ ಸ್ವಲ್ಪ ತಾತ್ಸಾರ ಭಾವನೆ ಹೊಂದಿದ್ದು ಅವರಿಬ್ಬರ ನಡುವಿನ ಸಂಘರ್ಷವನ್ನು ಗುರುತಿಸಬಹುದು. ಇದಕ್ಕೆ ಮುಖ್ಯ ಕಾರಣ ಭಾಟಿಯಾ ಶಕುಂತಲೆಯನ್ನು ಪ್ರೀತಿಸುತ್ತಿದ್ದುದೇ ಆಗಿರುತ್ತದೆ. ಅಲ್ಲದೇ ಶಕುಂತಲೆ ಒಮ್ಮೊಮ್ಮೆ –ಬಹುಶಃ ಮಾತ್ರ ಹೃದಯದ ಮೂಲಕ ಭಾಟಿಯಾನಲ್ಲಿ ಆಸ್ಥೆ ತೋರಿಸುತ್ತಾಳೆಂದು ಮತ್ತಷ್ಟು ಸಿಟ್ಟಿರುತ್ತದೆ. ಹೀಗಾಗಿಯೇ ಶಕುಂತಲೆ ತನಗೆ ಪ್ಲೇಟೋನ ಬಗೆಗಿನ ನೋಟ್ಸ್ ತೆಗೆದುಕೊಳ್ಳಲು ನಿಮ್ಮ ಮನೆಗೆ ಯಾವಾಗ ಬರಲಿ ಎಂದು ಕೇಳಿದಾಗ ದೇವಧರ ಬೇಕಂತಲೇ ಭಾಟಿಯಾನ ಕಡೆ ನೋಡುತ್ತಾ ಈಗಲೇ ನಡಿ ಎಂದು ಹೇಳುತ್ತಾನೆ.

ಇದರಿಂದ ಭಾಟಿಯಾ ಕೋಪಗೊಳ್ಳುತ್ತಾನೆ. ಕೋಪದಿಂದಾಗಿ ಅವನ ಕಿವಿಗಳು ಕೆಂಪಾಗಿರುತ್ತವೆ. ಕ್ಯಾಂಟೀನ್ ಬಿಲ್ಲನ್ನು ಕೊಡಲು ಭಾಟಿಯಾ ಮುಂದಾದಾಗ ದೇವಧರ ಬೇಕಂತಲೇ "ಭಾಟಿಯಾ ಇಲ್ಲಿ ತಾ ಬಿಲ್ಲು. ನೀ ಬಾಳ ಶ್ರೀಮಂತ ಅದಿ ಅನ್ನೋದಿ ಎಲ್ಲರಿಗೂ ಗೊತ್ತದ. ಆದರ ಇದ್ದವರಲ್ಲಿ ಹಿರಿಯ ಅಂದರ ನಾನು" (ಪು. ೨೧) ಎಂದು ಹೇಳುವ ಮಾತುಗಳು ಭಾಟಿಯಾನನಿಗೆ ನೋವನ್ನು ಉಂಟು ಮಾಡುವ ಉದ್ದೇಶವನ್ನೇ ಹೊಂದಿರುತ್ತವೆ. ಹೋಟಲಿನಿಂದ ಹೊರ ಬಂದ ಮೇಲೆ ಭಾಟಿಯಾ ಮುಖ ಒಣಗಿಸಿಕೊಂಡು ಹೊರಟು ಹೋಗುತ್ತಾನೆ. ಶಕುಂತಲ ದೇವಧರನ ಮನೆಗೆ ಬಂದಾಗ ನೆರೆ ಮನೆಯ ಜಮುನಾ ಕಾದಂಬರಿಯನ್ನು ತೆಗೆದುಕೊಳ್ಳುವ ನೆಪದಲ್ಲಿ ಬಂದು ಹೋಗುತ್ತಾಳೆ. ಭಾಟಿಯಾ ಈ ಮೊದಲೇ ಶಕುಂತಲೆಗೆ ಜಮುನಾಳ ಬಗ್ಗೆ ತಿಳಿಸಿರುತ್ತಾನೆ. ಶಕುಂತಲೆ ಎಲ್ಲಾ ವಿಚಾರಗಳೂ ಭಾಟಿಯಾನಿಂದ ನನಗೆ ತಿಳಿದಿವೆ ಎಂದು ಹೇಳಿದಾಗ 'ಗೊತ್ತಾತ ಬಿಡು. ಅವ ಬಂದಾಗ ಜಮುನಾ ಇಲ್ಲಿ ಇರ್ತಾಳಂತ ಹೌದಲ್ಲೋ? ಮೊನ್ನೆ ಮೊನ್ನೆ ಕಣ್ಣು ಬಿಟ್ಟ ಕೋತೀ ಮರಿ ಆತ. ಜೀವನಂದರ ಅಷ್ಟೆಲ್ಲ ಸುಲಭವಾಗಿ ತಿಳಿಯುವಂತಿದ್ದರೆ ಇರಲಿ' ಎಂಬ ದೇವಧರ ಹೇಳುವ ಮಾತುಗಳಲ್ಲಿ ಅವನು ಭಾಟಿಯಾನ ಬಗ್ಗೆ ಅನುಮಾನವನ್ನು ಕೋಪವನ್ನು ಹೊಂದಿರುವುದು ಕಂಡು ಬರುತ್ತದೆ.

ದೇವಧರ ಶಕುಂತಲೆಯ ಬಗ್ಗೆ ಹೊಂದಿದ್ದ ವಿಶೇಷ ಆಸ್ಥೆಯಿಂದ ಶಕುಂತಲೆ ದೇವಧರ ತನ್ನನ್ನು ಮದುವೆ ಆಗಬಹುದು ಎಂದುಕೊಂಡಿರುತ್ತಾಳೆ. ಹೀಗಾಗಿ ಶಕುಂತಲೆ ದೇವಧರನಿಗೆ ನೀವು ಸುಮ್ಮನೆ ನನ್ನಲ್ಲಿ ಆಸೆಯನ್ನು ಹುಟ್ಟಿಸಿದಿರಿ ಎಂದು ಹೇಳಿದಾಗ, ದೇವಧರ "ನಾನೆಲ್ಲಿ ನಿನಗ ಹೇಳೀನಿ–ನಿನ್ನ ಮ್ಯಾಲ – ನಿನ್ನನ್ನು ಲಗ್ನ– ನೀನು ಘೋರ ತಪ್ಪು ತಿಳುವಳಿಕೆ ಮಾಡಿಕೊಂಡಿದ್ದೀಯೆ. ನನ್ನದೇನೊ ಸ್ವಲ್ಪ ತಪ್ಪಾಗಿರಬೇಕು. ಅದಕ್ಕಾಗಿ ನನ್ನ ಕ್ಷಮಿಸಬೇಕು ಪ್ಲೀಜ್. ಮುಂದೆಂದಾದರೂ ನಾ ಲಗ್ನ ಆಗೋ ವಿಚಾರ ಮಾಡಿದರ – ಆಗ" – "ಶಕುಂತಲಾ, ಪ್ಲೀಜ್, ಕ್ಷಮಿಸು, ನೀನು ನಿಜಕ್ಕೂ ಒಳ್ಳೆ ಹುಡುಗಿ. ನಾನು–ನಾ–ಹೊಣೆಗೇಡಿ–ಬೇಕಾದರ ಘಟಿಂಗ ಅನ್ನು, ನಿನ್ನಲ್ಲಿ ನನ್ನ ಬಗ್ಗೆ ಪ್ರೀತಿ ಭಾವನೆ ಹುಟ್ಟೋ ಹಾಂಗ ನಡಕೊಂಡು ಈಗ ಜಾರಿಕೋತಿದೀನಿ. ನನ್ನ ಜೀವನದಾಗ ಹಿಂಗ್ಯಾಕಾಗ್ತದೋ ನಾ ಕಾಣೆ. ನಾ ಹುಟ್ಟಿಸಿದಷ್ಟು ತಪ್ಪು ತಿಳುವಳಿಕೆ ಮತ್ತ್ಯಾರೂ

ಹುಟ್ಟಿಸಿರಲಿಕ್ಕಿಲ್ಲ" (ಪು. ೨೭) ಎಂದು ಹೇಳುವ ಮಾತುಗಳು ಆತನ ಹೊಣೆಗೇಡಿತನವನ್ನು ಹಾಗೂ ಬೇಜವಾಬ್ದಾರಿತನವನ್ನು ತಿಳಿಸುತ್ತವೆ.

ಆತನಿಗೆ ಕೇವಲ ಒಂದು ಹೆಣ್ಣು ಬೇಕಾಗಿರುತ್ತದೆ. ಹೆಣ್ಣಿನ ವಾಸನೆ, ಅವಳ ಅಂಗಾಂಗಗಳು, ಅವಳ ಗುಟ್ಟು ಇವುಗಳನ್ನು ಕಲ್ಪಿಸುತ್ತಾ ನಿದ್ದೆಗೇಡಿಯಾಗುತ್ತಿದ್ದನು. ಒಮ್ಮೊಮ್ಮೆ ಅವೆಲ್ಲ ಸಿಕ್ಕಾಗ ದಿಗ್ಭ್ರಮೆಗೊಳ್ಳುತ್ತಿದ್ದನು. ಅವನಿಗೆ ಕೇವಲ ಆ ಕ್ಷಣದ ಕ್ಷಣಿಕ ಸುಖ ಬೇಕಾಗಿರುತ್ತದೆಯೇ ಹೊರತು ಜವಾಬ್ದಾರಿಗಳಲ್ಲ. ಇಲ್ಲಿ ದೇವಧರನ ಮಾನಸಿಕ ಸಂಘರ್ಷ ಕಂಡುಬರುತ್ತದೆ. ಹೀಗಾಗಿಯೇ ಆತ ತನ್ನ ನೆರೆಮನೆಯ ಜಮುನಾಳ ಬಗ್ಗೆ ಮನದಲ್ಲೆ ಆಲೋಚಿಸುತ್ತಿರುತ್ತಾನೆ. ಆಕೆಯಂತೆಯೇ ಕಾಣುವ ಒಂದು ಹೆಣ್ಣಿನ ಚಿತ್ರವನ್ನು ಕಾಗದದಲ್ಲಿ ತೆಗೆದಿರುತ್ತಾನೆ. ಜಮುನಾ ತನ್ನ ಏಕಾಕಿತನದಿಂದ ಹೊರ ಬರುವ ಸಲುವಾಗಿ ದೇವಧರನ ಹತ್ತಿರ ಪುಸ್ತಕಗಳನ್ನು ತೆಗೆದುಕೊಳ್ಳುತ್ತಿರುತ್ತಾಳೆ. ದೇವಧರನ ವಿನಯ, ವಿಶ್ವಾಸ, ಆತ್ಮೀಯತೆ, ಮಾತಿನ ಎಂದೂ ಮುಗಿಯದ ಪ್ರವಾಹ ಇವೆಲ್ಲವುಗಳಿಂದ ಜಮುನಾ ದೇವಧರನ ಬಗ್ಗೆ ಆತ್ಮೀಯತೆಯ ಭಾವನೆಯನ್ನು ಹೊಂದಿರುತ್ತಾಳೆ. ಎಲ್ಲರಂತೆ ಅವಳೂ ಕೂಡ ದೇವಧರನನ್ನ ಅತ್ಯಂತ ಒಳ್ಳೆಯ ಮನುಷ್ಯ ಎಂದುಕೊಂಡಿರುತ್ತಾಳೆ. ಹೀಗಾಗಿಯೇ ಒಮ್ಮೆ ದೇವಧರನ ಮನೆಗೆ ಪುಸ್ತಕ ಒಂದನ್ನು ಹಿಂತಿರುಗಿಸಲೆಂದು ಹೋದ ಜಮುನಾ ದೇವಧರನ ಟೇಬಲಿನ ಮೇಲೆ ಗುಜರಾತಿ ರೀತಿಯಲ್ಲಿ ಸೀರೆಯನ್ನು ಹುಟ್ಟಿದ್ದ ತನ್ನನ್ನೇ ಹೋಲುವಂತಹ ಹೆಂಗಸಿನ ಚಿತ್ರವೊಂದು ಇದ್ದುದನ್ನು ಗಮನಿಸುತ್ತಾಳೆ. ಇದರಿಂದ ಅವಳಿಗೆ ದೇವಧರ ತನ್ನನ್ನು ಇಷ್ಟ ಪಡುತ್ತಿರಬಹುದೇ ಎಂಬ ಅನುಮಾನ ಬರುತ್ತದೆ. ಆದರೂ ಕೂಡ ದೇವಧರ ಒಳ್ಳೆಯವನೆಂಬುದು ಅವಳ ಅಭಿಪ್ರಾಯವಾಗಿರುತ್ತದೆ. ಅಲ್ಲದೆ ಅಂದು ತನ್ನ ಯಜಮಾನರು ಇನ್ನೂ ಮನೆಗೆ ಬರದೇ ಇದ್ದುದರಿಂದ ಅವರು ಬರುವವರೆಗೆ ದೇವಧರನ ಮನೆಯಲ್ಲಿಯೇ ಇರುವುದಾಗಿ ಹೇಳುತ್ತಾಳೆ. ಆಗ ದೇವಧರ ರಾತ್ರಿಯಾಗಿರುವುದರಿಂದ ಯಾರಾದರೂ ಬಂದರೆ ಎಂಬ ಅನುಮಾನ ವ್ಯಕ್ತಪಡಿಸಿದಾಗ ಜಮುನಾ ಅವರ ಹೊರತಾಗಿ ಮತ್ತೆ ಯಾರೂ ಬರುವುದಿಲ್ಲ ಅಥವಾ ಬಂದರೂ ದೇವಧರ ಒಳ್ಳೆಯವರೆಂಬುದು ಎಲ್ಲರಿಗೂ ತಿಳಿದಿದೆ ಎಂದು ಹೇಳುತ್ತಾಳೆ. ದೇವಧರ ತಾನು ಜಮುನಾ ತಿಳಿದುಕೊಂಡಿರುವಷ್ಟು ಒಳ್ಳೆಯವನಲ್ಲ ಎಂದು ಹೇಳಿದಾಗ ಜಮುನಾ ತನ್ನ ಮನೆಗೆ ಹೊರಡುತ್ತಾಳೆ.

ಹೀಗೆ ಹೊರಟ ಜಮುನಾಳ ಮೇಲೆ ದೇವಧರ ಹುಲಿಯಂತೆ ಎರಗಿ ತನ್ನ ತೋಳುಗಳಲ್ಲಿ ಅವಳನ್ನು ಗಟ್ಟಿಯಾಗಿ ಹಿಡಿದು ಅವಳ ಕಿವಿಯ ಹತ್ತಿರ ಮುತ್ತು ಕೊಡುತ್ತಾನೆ. ಅಷ್ಟರಲ್ಲಿ ಜಮುನಾ "ಅವರು ಬಂದರೆಂದು ಕಾಣಿಸ್ತದ" ಎಂದು ಅದೇ ಅವನ ಸಡಿಲಾದ ತೋಳ್ಸೆರೆಯಿಂದ ಜಾರಿ ತನ್ನ ಪ್ಲಾಟಿನತ್ತ ಓಡುತ್ತಾಳೆ.. ಅವಳು ಹೋದ ನಂತರ ದೇವಧರ "ಆ ನವನೀತ ಪೆದ್ದ ಬೇಗ ಬರಲಿ; ಇಲ್ಲದಿದ್ದರೆ ಏನೋ ಆಗಿ ಬಿಡಬಹುದು..." ಎಂದು ಯೋಚಿಸತೊಡಗುತ್ತಾನೆ. ಆನಂದ, ಭೀತಿ, ಆಶೆ, ಅನಾಸಕ್ತಿ, ಇಚ್ಛೆ, ಜುಗುಪ್ಸೆ ಎಲ್ಲ ಒಂದರ ಹಿಂದೊಂದು ಅವನ ಮನಸ್ಸನ್ನು ಮುತ್ತಿ ಅವನ ವಿಚಾರ ಶಕ್ತಿಯನ್ನು ಮಂಕುಗೊಳಿಸುತ್ತವೆ. "ಇನ್ನು ಈ ಮನೆಯಲ್ಲಿ ಆತ ಏನೂ ಮಾಡಲೂ ಆತ ಅಶಕ್ತ. ಇಲ್ಲಿಂದ ಬೇಗ ಓಡಿ ಹೋಗಬೇಕು – ಇಲ್ಲದಿದ್ದರೆ ಅನುಭವದ

ಆಘಾತಕ್ಕೆ ಬತ್ತಲಾಗಿ ನಿಲ್ಲಬೇಕು! ಆದರೆ ತನ್ನ ತಂದೆಯ ಮಗನಾದ ಆತನಿಗೆ, ತನ್ನ ವಂಶದ ಸಂಸ್ಕಾರದ ಕೂಸಾದ ಆತನಿಗೆ ಬತ್ತಲಾಗುವುದು ಶಕ್ಯವೇ?.... ಸುಮ್ಮನೆ ಮೊದಲು ಶಕುಂತಲೆಯನ್ನು ಈಗ ಜಮುನಾಳನ್ನು ಪ್ರಚೋದಿಸಿ, ಪ್ರೇರೇಪಿಸಿ, ತೊಂದರೆಗೀಡು ಮಾಡಿ ಕೊನೆಗೆ ಪಲಾಯನ ಗೈಯುವುದೊಂದೇ ಅವನ ಅನಿವಾರ್ಯ ಹಾದಿ! ಛೇ, ಇದು ಹೇಡಿತನ ! ಇದು ಮೂರ್ಖತನ. ಅನುಭವ ಬಾಯೆಂದು ಕೈ ಮಾಡಿ ಕರೆಯುತ್ತಿರುವಾಗ ಕೈಗೆ ಸಿಕ್ಕಷ್ಟು ತಿಂದುಂಡು ಎಷ್ಟು ಜೀರ್ಣವಾಗುವುದೋ ನೋಡಬೇಕು. ಇಲ್ಲಿ ದೇವಧರನ ಹೊಣೆಗೇಡಿತನ ಹಾಗೂ ಮಾನಸಿಕ ದ್ವಂದ್ವತೆ ಕಂಡು ಬರುತ್ತದೆ. ಜೊತೆಗೆ ತನಗೆ ಅಮೆರಿಕೆಯ ಫುಲ್ ಬ್ರೈಟ್ ಸ್ಕಾಲರ್ ಶಿಪ್ಪು ದೊರೆತಿದ್ದು, ಹೆಚ್ಚಿನ ವ್ಯಾಸಂಗಕ್ಕೆ ಅಮೇರಿಕಾಗೆ ಹೋಗುತ್ತಿರುವುದರಿಂದ ಹೆದರಬೇಕಾದ ಅವಶ್ಯಕತೆ ಇಲ್ಲ ಎಂಬುದು ಅವನ ಧೋರಣೆಯಾಗಿರುತ್ತದೆ.

ಅಮೇರಿಕಾದ ಕೋಲಂಬಿಯಾ ಯುನಿವರ್ಸಿಟಿಯಲ್ಲಿ ಪಿಎಚ್.ಡಿ. ಅಧ್ಯಯನಕ್ಕೆಂದು ತೆರಳಿದ್ದ ದೇವಧರನಿಗೆ ಗ್ಲೋರಿಯಾನಾ ಎಂಬಾಕೆಯ ಪರಿಚಯವಾಗಿ, ಇಬ್ಬರೂ ತುಂಬಾ ಆತ್ಮೀಯರಾಗಿರುತ್ತಾರೆ. ದೇವಧರ ಭಾರತದಲ್ಲಿ ಇದ್ದಾಗ ಯಾವುದಕ್ಕಾಗಿ ಹಂಬಲಿಸುತ್ತಿದ್ದನೋ 'ಅದು' ಗ್ಲೋರಿಯಾನಾಳ ಮೂಲಕ ಜಗತ್ತಿನ ಮತ್ತೊಂದು ಮಗ್ಗುಲಲ್ಲಿ, ಸಂಸ್ಕೃತಿಯ ಇನ್ನೊಂದು ವರ್ತುಲದಲ್ಲಿ ಬಹಳ ಸುಲಭವಾಗಿ, ಅನಾಯಾಸವಾಗಿ ಸಿಕ್ಕಿ ಬಿಡುತ್ತದೆ. ತನ್ನ ಪಿಎಚ್.ಡಿ. ಅಧ್ಯಯನ ಸಾಧ್ಯವಾಗಲಿಕ್ಕೆ ಗ್ಲೋರಿಯಾನಾಳ ಸಹಕಾರವೂ ಮುಖ್ಯವಾಯಿತು ಎಂಬುದು ದೇವಧರನ ಅಭಿಪ್ರಾಯ. ಗ್ಲೋರಿಯಾನಾಳ ಮೂಲಕ ತನ್ನ ಬಯಕೆಗಳನ್ನು ಈಡೇರಿಸಿಕೊಂಡ ದೇವಧರ ಅವಳಿಗೆ ಕೃತಜ್ಞನಾಗಿದ್ದರೂ ಕೂಡ ಭಾರತದಲ್ಲಿ ತನ್ನ ಹೆಂಡತಿ ಇರುವುದರಿಂದ ಭಾರತಕ್ಕೆ ಹಿಂತಿರುಗಬೇಕೆಂದು ಬಯಸುತ್ತಾನೆ. ಆಕೆಯನ್ನು ಪ್ರೀತಿಸದಿದ್ದರೂ ಕೂಡ ತಾನು ಭಾವನೆಯ ಗುಲಾಮನಲ್ಲದಿದ್ದರೂ ತನ್ನ ಹೆಂಡತಿಯು ತನ್ನ ಜವಾಬ್ದಾರಿ. ಏನಿದ್ದರೂ ಅವನದೇ ಜವಾಬ್ದಾರಿಯಾದ್ದರಿಂದ "ನನ್ನ ಕ್ರಾಸ್ – ನಾನೇ ಹೊರಬೇಕು" ಎಂಬ ನಿರ್ಧಾರ ಅವನದ್ದಾಗಿರುತ್ತದೆ. ಹೀಗೆ ಇಲ್ಲೂ ಕೂಡ ಗ್ಲೋರಿಯಾನಾಳನ್ನ ತನ್ನ ಅವಶ್ಯಕತೆಗೆ ಎಷ್ಟು ಬೇಕೋ ಅಷ್ಟು ಮಾತ್ರ ಉಪಯೋಗಿಸಿಕೊಳ್ಳುತ್ತಾನೆ. ಒಟ್ಟಾರೆಯಾಗಿ ಇಲ್ಲಿ ದೇವಧರ ಅಸ್ಥಿರ ಮನಃಸ್ಥಿತಿಯನ್ನು ಹೊಂದಿದವನಾಗಿದ್ದಾನೆ "ಇವ ಖರೇ ಅಂದರ ತನ್ನ ಬೇರು ಕಳಕೊಂಡವ. ಹೊರಗೆ ಇವನ ಸುತ್ತ ಒಂದು ಪ್ರಭಾವಲಯ ಇದ್ದರೂ ಒಳಗೆ ಆತ ಅತ್ಯಂತ ಏಕಾಕಿ – ಹಿಮದ ಮುದ್ದಿ" (ಪು. ೩೪) ತನ್ನ ಸುತ್ತ ಇರುವ ಪ್ರಭಾವಲಯದಲ್ಲಿ ತನ್ನನ್ನು ತಾನು ಸಮರ್ಥವಾಗಿ ತೆರೆದುಕೊಳ್ಳಲಾರದ ವ್ಯಕ್ತಿತ್ವವಾಗಿಯೇ ಉಳಿಯುತ್ತಾನೆ.

ಕಾದಂಬರಿಯು ಎರಡನೇ ಹಂತದಲ್ಲಿ ಕಾದಂಬರಿಕಾರರು ದೇವಧರನನ್ನು ಅವನು ತನ್ನ ತಂದೆಯ ಇಚ್ಛಾದ ವಿರುದ್ಧ ಮೊದಲು ಆರ್ಟ್ಸ್ ತಗೊಂಡು, ನಂತರ ಎಲ್ಲಾ ಬಿಟ್ಟು ತತ್ವಜ್ಞಾನ ತಗೊಂಡು, ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳೋ ಹಟಾ ತೊಡದ– ಆಗದೀ ಆಜ್ಞಾಧಾರಕ ಮಗನ್ಹಂಗ ಸಾಯನ್ಸ ತಗೊಂಡು ಡಾಕ್ಟರನಾಗಿ ತಮ್ಮ ಊರಿಗೆ ಮರಳಿ ಹೋಗಿ 'ಜನಸೇವಾ' ದೊಳಗೆ ತೊಡಗಿದಂತೆ ಚಿತ್ರಿಸುವುದಾಗಿ ಸುರೇಶನನ್ನು ಅವನು ಮುಂಬಯಿಗೆ ಹೋಗಿ ಎಕ್ಸ್‌ಪೋರ್ಟ್

ಇಂಪೋರ್ಟ್ ದಂದೇದಾಗ ಸಿಕ್ಕಾಪಟ್ಟೆ ರೊಕ್ಕಾ ಮಾಡೋದರ ಬದಲು ಆತ ತನ್ನೂರಿನ್ಯಾಗ ಕಂಟ್ರಾ ್ಯಕ್ಟ-ಗಿಂಟ್ರಾ ್ಯಕ್ಟ ಮಾಡಿ, ಸ್ಮಗ್ಲಿಂಗ್ - ಗಿಗ್ಲಿಂಗ್ ಮಾಡಿ, ಸಿಕ್ಕಾಪಟ್ಟೆ ಹಣ ಗಳಿಸಿ, ದೊಡ್ಡ ಅರಮನೆಯಂತ ಮನಿ ಕಟ್ಟಿಸಿ, ಊರಿನಲ್ಲಿ ಅತ್ಯಂತ ಪ್ರತಿಷ್ಠಿತ, ಪ್ರಭಾವೀ ವ್ಯಕ್ತಿಯಾಗಿ ಮೆರೀತಾನ ಅಂತ ಚಿತ್ರಿಸುವುದಾಗಿ ಅಂತೆಯೇ ಶಕುಂತಲೆಯ ಅಪ್ಪನನ್ನು ಒಬ್ಬ ಜಾಗಿರದಾರ್‍ನ ಮಾಡಿ, ಸುರೇಶ ಶ್ರೀಮಂತ ಆಗೋದಕ್ಕಿಂತ ಮುಂಚೇ ಶಕುಂತಲೆಯ ಅಪ್ಪ ಬಾಳಾ ಶ್ರೀಮಂತ ಇದ್ದುದರಿಂದ ಅವಳೊಂದಿಗೆ ಲಗ್ನ ಮಾಡಿಕೊಂಡಂತೆ ಚಿತ್ರಿಸುವುದಾಗಿ ಕಲ್ಪಿತ ಓದುಗನೊಂದಿಗೆ ಚರ್ಚಿಸುತ್ತಾ ಗೌರಿ ಪಾತ್ರದ ಬಗ್ಗೆ ಸ್ಪಷ್ಟ ವಿಚಾರ ಮೂಡದೇ ಇರುವುದರಿಂದ, ಆಕೆಯ ಪಾತ್ರವನ್ನು ಬರೆಯೋ ಮುಂದೆ, ಬರೀತಾನೆ ಎಕ್ಸ್‌ಪ್ಲೋರ್ ಮಾಡುವುದಾಗಿ ಹೇಳುತ್ತಾನೆ. ನವನೀತ-ಜಮುನಾರನ್ನು, ನವನೀತ ದಿವಾಳಿ ತಗದ ಮೇಲೆ ಅವರ್‍ನ ಈಸ್ಟ್ ಆಫ್ರಿಕೆಗೆ ವ್ಯಾಪಾರಕ್ಕೆ ಕಳಿಸಿಬಿಡ್ತೀನಿ ಅಥವಾ ದೇವಧರ- ಸುರೇಶರ ಊರಾದ ಕೃಷ್ಣಪುರಕ್ಕೆ ಕಳಿಸಿಬಿಡ್ತೀನಿ; ಗುಜರಾತಿಗಳು ವ್ಯಾಪಾರಕ್ಕೆಂತ ಬೇಕಾದಲ್ಲಿ ಹೋಗಲಿಕ್ಕೆ ತಯಾರಿರ್‍ತಾರ. ನಾ ಅವರ್‍ನ ಎಲ್ಲಿ ಕಳಿಸಿದರೂ ನಡೀತದ... ಹೀಗೆ ಕಾದಂಬರಿಕಾರ ಕಾದಂಬರಿಯ ಎರಡನೇ ಹಂತದಲ್ಲಿ ತನ್ನ ಪಾತ್ರಗಳ ವ್ಯಕ್ತಿತ್ವಗಳು ಬದಲಾವಣೆಗೊಳ್ಳುವುದನ್ನು ವಿಶ್ಲೇಷಿಸುತ್ತಾನೆ.

ಉತ್ತರ ಕರ್ನಾಟಕದ ಒಂದು ಊರು ಕೃಷ್ಣಪುರ. ಇಲ್ಲಿನ ಸುಭಾಷ ರೋಡಿನಲ್ಲಿ ಡಾ॥ ಬಿ.ಎಸ್. ದೇವಧರ, ಎಂ.ಬಿ.ಬಿ.ಎಸ್.ಗೆ ಸೇರಿದ ಒಂದು ಹಳೆಯದಾದರೂ ಪ್ರಶಸ್ತ ಮನೆ. ಮನೆ ದೇವಧರನ ಅಜ್ಜ ಕಟ್ಟಿಸಿದ್ದು. ದೇವಧರನ ಅಜ್ಜ ನೂರಾರು ಎಕರೆ ಜಮೀನಿನ ಮಾಲೀಕನಾಗಿದ್ದನು. ದೇವಧರನ ಅಪ್ಪನ ಜೀವನವೆಲ್ಲಾ ಸಾಲದಲ್ಲಿ, ಕೋರ್ಟಿನಲ್ಲಿ, ಜಮೀನು ಕಳೆದುಕೊಳ್ಳುವುದರಲ್ಲಿ ಕಳೆದು ಹೋಗಿರುತ್ತದೆ. ದೇವಧರನನ್ನು ಬೆಳಗಾಂವಿಯ ಕಾಲೇಜಿಗೆ, ನಂತರ ಎಂ.ಬಿ.ಬಿ.ಎಸ್. ಮಾಡಲು ಮುಂಬಯಿಗೆ ಕಳುಹಿಸಿ ಅವನ ಖರ್ಚು ತೀರಿಸುವುದೇ ಅವರಿಗೆ ಒಂದು ದೊಡ್ಡ ಹೋರಾಟವಾಗಿತ್ತು. ದೇವಧರ ಎಂಬಿ.ಬಿ.ಎಸ್. ಕೊನೆಯ ವರ್ಷದಲ್ಲಿರಬೇಕಾದರೆ ಅಪ್ಪ ಹಾರ್ಟ್ ಅಟ್ಯಾಕಿನಿಂದ ಏಕಾಏಕಿ ತೀರಿಕೊಳ್ಳುತ್ತಾರೆ. ಜೀವನ ಪೂರ್ತಿ ಸಂಘರ್ಷಗಳನ್ನೇ ಎದುರಿಸಿದವರು ಏಕಾಏಕಿ ತೀರಿಕೊಂಡಾಗ ದೇವಧರ ಕೃಷ್ಣಪುರಕ್ಕೆ ಮರಳಿ ಅಲ್ಲೇ ದವಾಖಾನೆ ತೆರೆಯುವುದು ಅನಿವಾರ್ಯವಾಗುತ್ತದೆ. ಗಾಂಧೀ ಯುಗದಲ್ಲಿ ಬೆಳೆದ ದೇವಧರನಿಗೆ ಜನಸೇವೆ ಮಾಡಬೇಕೆಂಬ ಆದರ್ಶವಾದಿತ್ವ ಮೊದಲಿನಿಂದಲೂ ಇರುತ್ತದೆ. ಹೀಗಾಗಿಯೇ ಆತ 'ದಕ್ಷ, ದಯಾಳು, ದೇವರಂಥ ಡಾಕ್ಟರ್' ಎಂದು ಹೆಸರು ಮಾಡಿರುತ್ತಾನೆ. ತನ್ನ ನಿಷ್ಠುರವಾದ ಸಮಾಜವಾದೀ ವಿಚಾರಗಳ ಮೂಲಕ ಕೃಷ್ಣಪುರದಲ್ಲಿ ಬಡಜನರ ಹಾಗೂ ಯುವಜನರ ಆಶಾ ಕೇಂದ್ರವಾಗಿದ್ದ ದೇವಧರ ಜನಪ್ರಿಯನೂ ಆಗಿರುತ್ತಾನೆ. ಅವನಿಗೇ ಗೊತ್ತಿಲ್ಲದಂತೆ ಆತನು ಆ ಊರಿನ ರಾಜಕೀಯದಲ್ಲಿ ಒಂದು ಶಕ್ತಿಯಾಗುತ್ತಾ ನಡೆದಿರುತ್ತಾನೆ.

ಆದ್ದರಿಂದ ಅವನಿಗೆ ಆಗದವರು ಅವನ ವಿರುದ್ಧವಾಗಿ 'ತನ್ನ ದವಾಖಾನೆಯಲ್ಲಿದ್ದ ನರ್ಸಬಾಯಿಯ ಜೊತೆ ಅವನಿಗೆ ಸಂಬಂಧ ಇದೆ ಎಂತಲೂ, ಮುಂಬಯಿಯಲ್ಲಿ ಯಾರನ್ನೋ ಇಟ್ಟಿರುವುದರಿಂದ ಮೇಲಿಂದ ಮೇಲೆ ಮುಂಬಯಿಗೆ ಹೋಗುತ್ತಾನೆಂದೂ, ಕೆಲವು ಬಡವರಿಗೆ

ಪುಕ್ಕಟೆಯಾಗಿ ಔಷಧ ನೀಡುವುದು ಕೇವಲ ಶೋ ಎಂದೂ, ಆತನು ಫೀಜು ಜಾಸ್ತಿ ತೆಗೆದುಕೊಳ್ಳುವುದರಿಂದ ಎರಡು ಮೂರು ಲಕ್ಷ ಗಂಟು ಮಾಡಿಕೊಂಡಿದ್ದಾನೆಂದೂ, ಇನ್ನೂ ಸ್ವಲ್ಪ ಹಣ ಸಂಪಾದಿಸಿಕೊಂಡು ಬೆಳಗಾಂವಿಗೋ, ಮುಂಬಯಿಗೋ, ಫಾರಿನ್ನಿಗೋ ಹೋಗುವ ಸಂಚನ್ನು ಮಾಡಿದ್ದಾನೆ' (ಪು. ೬೬) ಎಂದೂ ಅಪಪ್ರಚಾರವನ್ನು ಮಾಡುತ್ತಿರುತ್ತಾರೆ. ದೇವಧರನು ತನ್ನ ಸುತ್ತಲಿನ ಸಮಾಜದ ನಿಂದನೆ, ಅನುಮಾನವನ್ನು ಎದುರಿಸಬೇಕಾಗಿರುತ್ತದೆ.

ಸುರೇಶ ಕೃಷ್ಣಪುರದಲ್ಲಿ ಒಬ್ಬ ಕಂಟ್ರಾಕ್ಟರನಾಗಿರುತ್ತಾನೆ. ತಾತ್ಯಾ ಸಾವಂತ ಹಿಂದಿನ ಕಾಲದ ಇಂಟರ್ ಆರ್ಟ್ಸ್ ಪಾಸಾಗಿ, ಲಾ ಡಿಗ್ರಿ ಮುಗಿಸಿ, ವಕೀಲಿ ನಡೆಯದೆ ಮುನಿಸಿಪಾಲಿಟಿಯಲ್ಲಿ ಚೀಫ್ ಆಫೀಸರ್ ಕೆಲಸ ಗಿಟ್ಟಿಸಿಕೊಂಡಿರುತ್ತಾನೆ. ಇವನು ಸುರೇಶ ಸಾಳಗಾಂವಕರನ ಜಿಗರೀ ದೋಸ್ತಾಗಿದ್ದು, ಊರಿನ ಮುನಿಸಿಪಾಲಿಟಿ ಕಂಟ್ರಾಕ್ಟ್‌ಗಳೆಲ್ಲ ಸುರೇಶನಿಗೆ ಸಿಗುವಂತೆ ನೋಡಿಕೊಳ್ಳುತ್ತಿರುತ್ತಾನೆ. ದಿನಾಲೂ ಸಂಜೆ ಸುರೇಶನ ಮನೆಗೆ ಹೋಗಿ ಲೆಕ್ಕ ಪತ್ರಗಳನ್ನು ನೋಡುವ ಕೆಲಸವನ್ನೂ ಮಾಡುತ್ತಿರುತ್ತಾನೆ. ತಾತ್ಯಾ ಸಾವಂತನಿಗೆ ಒಬ್ಬಳು ಹೆಣ್ಣು ಮಗಳಿರುತ್ತಾಳೆ. ಅವಳೇ ಗೌರಿ. ಗೌರಿಗೆ ಒಮ್ಮೆ ಸುರೇಶನ ಹೆಂಡತಿ ಶಕುಂತಲೆಯ ಗುರುತಾಗುತ್ತದೆ. ಗುರುತು ಗೆಳೆತನವಾಗುತ್ತದೆ. ಶಕುಂತಲೆಗೆ ಟಿ.ಬಿ. ಕಾಯಿಲೆ ಇದ್ದು, ಅದಕ್ಕೆ ಡಾ॥ ದೇವಧರನೇ ಔಷಧಿಯನ್ನು ನೀಡುತ್ತಿರುತ್ತಾನೆ. ಹೀಗಾಗಿ 'ಶಕುಂತಲೆ ಎಂದರೆ ಬಂಗಾರದ ಪಂಜರದೊಳಗಿನ ಗಿಳಿ'. ಶಕುಂತಲೆಯ ಮೇಲಿನ ಸ್ನೇಹಕ್ಕೆ ಗೌರಿ ಹೀಗೆ ಸುರೇಶನ ಮನೆಗೆ ಹೋಗುತ್ತಿರುತ್ತಾಳೆ. ಸುರೇಶನ ಲಕ್ಷ್ಯ ಗೌರಿಯತ್ತ, ಗೌರಿಯ ತಾರುಣ್ಯದತ್ತ ಹೊರಳುತ್ತದೆ. ಹೀಗಾಗಿ ಅವರಿಬ್ಬರ ನಡುವೆ ದೈಹಿಕ ಸಂಪರ್ಕ ಏರ್ಪಟ್ಟು ಗೌರಿ ಗರ್ಭಿಣಿಯಾಗುತ್ತಾಳೆ. ಗೌರಿಗೆ ಗರ್ಭಪಾತ ಮಾಡಿಸಬೇಕು ಎಂಬುದು ತಾತ್ಯಾ ಸಾವಂತ ಹಾಗೂ ಸುರೇಶ ಇವರಿಬ್ಬರ ಅಭಿಮತವಾಗಿರುತ್ತದೆ.

ಹೀಗಾಗಿ ತಾತ್ಯ ಸಾವಂತ ಡಾ॥ ದೇವಧರನ ಸಹಾಯವನ್ನು ಯಾಚಿಸುತ್ತಾನೆ. ಆದರೆ ಮಹಾತ್ಮಗಾಂಧಿ, ಜವಾಹರಲಾಲ ನೆಹರೂ, ಲಾಲಬಹದ್ದೂರ ಶಾಸ್ತ್ರಿ ಇವರುಗಳನ್ನು ತನ್ನ ದೈವತಗಳೆಂದು, ಆದರ್ಶದ ಸಲುವಾಗಿ ಜೀವನವನ್ನು ಮುಡುಪಾಗಿಡಬೇಕೆಂದುಕೊಂಡೇ ಬೆಳೆದಿದ್ದ ವಿದ್ಯಾಧರನಿಗೆ ಇದು ಅಸಾಧ್ಯದ ಮಾತಾಗುತ್ತದೆ. ಗೌರಿಯ ವಿಚಾರದಲ್ಲಿ ಅವನಿಗೆ ನೈತಿಕ ಸಮಸ್ಯೆ ಉದ್ಭವವಾಗುತ್ತದೆ. ಸುರೇಶನ ಮೇಲೆ ಇದ್ದಕಿದ್ದಂತೆ ಭಯಂಕರ ಸಿಟ್ಟು ಬರುತ್ತದೆ. ಅವನ ಅನೈತಿಕತೆಯನ್ನೂ, ಹೊಣೆಗೇಡಿತನವನ್ನೂ, ಬುದ್ಧಿಗೇಡಿತನವನ್ನೂ ಬಯಲಿಗೆಳೆಯಬೇಕು ಎಂದು ರೊಚ್ಚು ಮೂಡಿತ್ತು ತನ್ನ ಹೊಸ ಐಶ್ವರ್ಯದ ಮದದಲ್ಲಿ ತಾನೇನು ಮಾಡಿದರೂ ನಡೆದೀತು, ಏನು ಮಾಡಿದರೂ ದಕ್ಕಿಸಿಕೊಂಡೇನು ಎಂಬ ಭಾವದಲ್ಲಿ ತನ್ನ ಹೊಸ ಶಕ್ತಿಯನ್ನು, ತನ್ನ ಹೊಸ ಪ್ರಭಾವವನ್ನು ಒರೆಗೆ ಹಚ್ಚಿ ನೋಡುವ ಹವ್ಯಾಸದಲ್ಲಿ ಆತ ಇಂಥ ಲೈಂಗಿಕ ಸಾಹಸಕ್ಕೂ ಕೈ ಹಾಕಿರಬೇಕು ಎಂದು ಆಲೋಚಿಸಿದನು. ದೇವಧರನಿಗೆ ಸುರೇಶನೆಂದರೆ ತನ್ನ 'ನಿಜವಾದ ಪ್ರತಿದ್ವಂದ್ವಿ' ಎಂದೆನಿಸಿತು. ಸುರೇಶನ ಜೀವನದ ರೀತಿಯನ್ನು, ಅವನ ಜೀವನ ಮೂಲ್ಯಗಳನ್ನು ಧಿಕ್ಕರಿಸಿ ಅವುಗಳಿಗೆ ಪ್ರತ್ಯುತ್ತರವೆಂಬಂತೆ ತಾನು ಜೀವಿಸಬೇಕು, ಈ ಊರಿನ ನೈತಿಕ–ಕೇಂದ್ರವಾಗಿ, ಸೃಜನಶಕ್ತಿಯ ಪ್ರಮುಖ ಬುಗ್ಗೆಯಾಗಿ, ತನ್ನ ಜೀವನ–ಸಾರ್ಥಕತೆಯನ್ನು ಪಡೆಯಬೇಕು. ಆದರ್ಶ ಪ್ರಾಯವಾಗಿ

ಧ್ರುವ ನಕ್ಷತ್ರದಂತೆ ಬೆಳಗಬೇಕು ಎಂಬ ಆಲೋಚನೆಯಿಂದಾಗಿ ಅವನಲ್ಲಿ ಹೊಸ ಉತ್ಸಾಹ ಚಿಮ್ಮುತ್ತದೆ. ಅದೇ ಸಮಯಕ್ಕೆ ಸರಿಯಾಗಿ ಸುರೇಶನು ತನ್ನ ಮನೆಗೆ ಬರುವಂತೆ ದೇವಧರನಿಗೆ ಕರೆ ಕಳುಹಿಸಿರುತ್ತಾನೆ. "ಅಂತೂ ಯೋಗ ಬಂದಿದೆ-ಇನ್ನು ಯುದ್ಧ ಸುರುವಾಗಬೇಕು" (ಪು. ೮೦) ಎಂದು ದೇವಧರ ಆಲೋಚಿಸುವಲ್ಲಿ ಅವನು ಸುರೇಶನ ವಿರುದ್ಧ ಸಂಘರ್ಷಕ್ಕಿಳಿದಿರುವುದನ್ನು ಗುರುತಿಸಬಹುದು.

ತನ್ನ ಮನೆಗೆ ಬಂದ ದೇವಧರನೊಂದಿಗೆ ಸುರೇಶ ಮಾತನಾಡುತ್ತಾ ತನ್ನ ಮನೆಗೆ ತಾತ್ಯಾ ಸಾವಂತ ಮುಂಜಾನೆ ಬಂದಿದ್ದು, ಆತನಿಗೆ ಸಹಾಯವನ್ನು ಮಾಡಬೇಕಾಗಿದೆ ಎಂದು ಹೇಳುತ್ತಾನೆ. ಆಗ ದೇವಧರ "ಸಹಾಯ? ಎಂಥ ಸಹಾಯ? ಯಾರ ಮಾಡಬೇಕಾಗೇದ?" ಎಂದು ಕೇಳಿದಾಗ ಸುರೇಶ "ಹಾಂಗೆಲ್ಲಾ ಏನೂ ಗೊತ್ತಿಲ್ಲದ ಸಂಭಾವಿತನಂತೆ ಪ್ರಶ್ನೆ ಕೇಳಬ್ಯಾಡ" ಎಂದು ಹೇಳಿದಾಗ"ಸಂಭಾವಿತ? ನಾನೋ ನೀವೋ?" (ಪು.೮೪) ಎಂದು ದೇವಧರ ಒಮ್ಮೆಲೆ ಉರಿದೇಳುತ್ತಾನೆ. ಇಲ್ಲಿ ಅವರಿಬ್ಬರ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ.

ಸುರೇಶನ ಮಾತಿಗೆ ದೇವಧರನು ತಾನು ಸಾವಂತನಿಗೆ ಬದಲಾಗಿ ಅವನ ಮಗಳಿಗೆ ಸಹಾಯ ಮಾಡುವುದಾಗಿ ಹೇಳುತ್ತಾನೆ. ಅದಕ್ಕೆ ಸುರೇಶ "ಅಂದರ- ಅವಳ ಕೂಡ ಲಗ್ನ ಮಾಡಿಕೊಳ್ಳೀ ಏನು?" ಎಂದು ಕೇಳಿದಾಗ ದೇವಧರನು "ಪ್ರಸಂಗ ಬಂದರೆ ಲಗ್ನಾನೂ ಮಾಡಬೇಕಾಗ್ತದ" ಎಂದು ಹೇಳುವ ಮಾತುಗಳು, ದೇವಧರನು ಸುರೇಶನ ಬಗ್ಗೆ ಹೊಂದಿದ್ದ ಕೋಪವನ್ನು ಸೂಚಿಸುತ್ತವೆ. ಸುರೇಶ "ಇಲ್ಲಿ ನೋಡು, ಡಾಕ್ಟರ್, ಏನೋ ತಪ್ಪಾಗಿ ಬಿಟ್ಟೇತಿ... ಮುಖ್ಯ ಹೆಂಡತಿ ಸೀಕು-ಅಶಕ್ತ-ಹೌದ? ಮತ್ತು ವ್ಹಿಸ್ಕಿಯ ಅಮಲು, ಹೌದ? ಆ ಹುಡುಗೀ ಚಲ್ಲಾಟ - ನಾನೂ ಮನುಷ್ಯಾನ - ಅದು ಹೇಳಿ ಕೇಳಿ ತಾರುಣ್ಯ ಬುಸುಗುಡುವ ಹುಡುಗಿ, ಹೌದ? ಆದದ್ದು ಆಗಿ ಹೋಗೇತಿ. ಅದರ ಬಗ್ಗೆ ಬಾಳ ಚರ್ಚಾ ಮಾಡಿ ಉಪಯೋಗವಿಲ್ಲ: ನನ್ನದೇ ತೊಂಭತ್ತೈದು ಪರ್ಸೆಂಟ್ ತಪ್ಪು ಅಥವಾ ಎಪ್ಪತ್ತೈದು ಪರ್ಸೆಂಟ್ ಅನ್ನು. ಅದಕ್ಕೆ ಎಷ್ಟು ದಂಡ ಬೇಕಾದರೂ ಕೊಡಲಿಕ್ಕೆ ನಾ ತಯಾರಾ" ಎಂದು ಹೇಳುತ್ತಾನೆ. ಸುರೇಶನ ಮಾತುಗಳನ್ನು ಕೇಳಿ ದೇವಧರ ಎದ್ದು ಹೊರಡಲಿಕ್ಕೆ ತಯಾರಾಗುತ್ತಾನೆ.

ಅಷ್ಟರಲ್ಲಿ ಸುರೇಶ.. ದೇವಧರ ಕೂಡಲೇ ಕೂಡ್ರು... ನಿನಗ ಏನು ಹೇಳಬೇಕಾಗೇದಲ್ಲಾ ಅದೆಲ್ಲಾ ನನಗ ಗೊತ್ತದ. ನೀ ಮಹಾ ನೀತಿ ನಿಷ್ಠ, ಮಹಾತ್ಮ ಅನ್ನೋದು ನನಗೆ ಗೊತ್ತದ. ನಾ ತೀರ ನೀತಿಗೆಟ್ಟ, ಭ್ರಷ್ಟ ಹಲಕಟ್ ಮುಠ್ಠಾಳ ಅನ್ನೋದು ಜಗತ್ತಿಗೇ ಗೊತ್ತದ. ಪಾಪ, ನನ್ನ ದಸಿಂದ ಆ ಚಿಕ್ಕ ಮುಗ್ಧ ಹುಡುಗಿ ಯಾಕ ಶಿಕ್ಷಾ ಭೋಗಿಸಬೇಕು? ಸ್ವಲ್ಪ ಅದೇನೋ ಅಂತಾರಲ್ಲ. ಮಾನವೀಯ ದೃಷ್ಟಿಯಿಂದ ವಿಚಾರ ಮಾಡಿದರ, ಪ್ರಶ್ನೆ ತನ್ನಿಂದ ತಾನೇ ಬಗೀಹರೀತದ. ಕೆಲವೊಂದು ಸಂದರ್ಭದಲ್ಲಿ ಗರ್ಭಪಾತ ಗುನ್ಹೆ ಅಲ್ಲ ಅನ್ನೋದು ನನಗೂ ಗೊತ್ತು, ನಿನಗೂ ಗೊತ್ತು ಹಾಂಗ ಮುಂಬಯಿಗೋ ಪುಣೆಗೋ ಕಳಿಸಿ ಎಲ್ಲಾ ಬಗಿಹರಿಸಬಹುದು. ಆದರೆ ಸಾವಂತನಿಗೆ ಊರಾಗಿಂದ ಊರಾಗೇ ಗಪ್ ಚಿಪ್ ಮಾಡಿ ಮುಗಿಸಬೇಕಂತ ವಿಚಾರ ಬಂದದ.. ಹೋಗಲಿ, ಭಾಳ ವಿಚಾರ ಮಾಡಬ್ಯಾಡ, ದೇವಧರ. ಇದು ನಮ್ಮ ಸಮಸ್ಯಾ. ನೀ ಒಲ್ಲೆ ಅಂದರೆ ಬಿಡು.

ಜಗತ್ತು ಭಾಳ ದೊಡ್ಡದದ... ಎಂದು ಹೇಳುವ ಸುರೇಶನ ಮಾತುಗಳಲ್ಲಿ ಸಮಸ್ಯೆ ಬೇಗ ಬಗೆಹರಿಯಲಿ ಎಂಬ ಅಭಿಪ್ರಾಯ ವ್ಯಕ್ತವಾದರೆ, "ನಿಮಗೇನು ಬೇಕೋ ಅದನ್ನ ಮಾಡಲಿಕ್ಕೆ ಸ್ವತಂತ್ರ ಇದ್ದೀರಿ. ನಾ ಹೋಗ್ತೀನಿ" (ಪು. ೮೬) ಎಂಬ ದೇವಧರನ ಮಾತುಗಳಲ್ಲಿ ಅವರಿಬ್ಬರ ನಡುವಿನ ನೈತಿಕ ಸಂಘರ್ಷವನ್ನು ಗುರುತಿಸಬಹುದು.

ಹೀಗೆ ಹೇಳಿ ಬಂದು ಒಂದು ದಿನ ಕಳೆದರೂ ಡಾ॥ ದೇವಧರನ ತಲೆಯಲ್ಲಿ ಸುರೇಶ, ಸಾವಂತ, ಗೌರಿ ಒಮ್ಮೊಮ್ಮೆ ಶಕುಂತಲಾ ಇವರೆಲ್ಲಾ ವಕ್ರ ವಕ್ರವಾಗಿ ಸುಳಿಯುತ್ತಿರುತ್ತಾರೆ. ನೆನ್ನೆಯಿಂದ ಸುಳಿಯುತ್ತಿದ್ದ ಈ ಜನರ ಬಗ್ಗೆ ದೇವಧರನಿಗೆ ವಿಪರೀತ ಸಿಟ್ಟು ಬರುತ್ತದೆ. "ಸಾಯಲಿ ಅವರ ಸಮಸ್ಯೆ ಅವರಿಗೆ– ನೀನ್ಯಾಕೆ ತಲೆ ಕೆಡಿಸಿಕೊಳ್ಳಬೇಕು!" ಎಂದು ತನಗೆ ತಾನೇ ಹೇಳಿಕೊಳ್ಳುತ್ತಾನೆ. "ನೀ ಒಬ್ಬ ಡಾಕ್ಟರ್. ಜನರ ದೇಹಕ್ಕೆ ಅಂಟಿಕೊಳ್ಳುವ ರೋಗ ರುಜಿನಗಳನ್ನು ಓಡಿಸುವ ಕೆಲಸ ನಿನ್ನದು. ಸಾಮಾಜಿಕ ರೋಗ–ರುಜಿನಗಳು ನಿನ್ನ ಕಕ್ಷೆಯ ಹೊರಗಿನವು–ದೇಶದ ಅಥವಾ ಅಂತರ್ದೇಶದ ಸಮಸ್ಯೆ ಸಂಭವಿಸುವುದು ಬರೇ ಈ ಕಾಗದದ ಮೇಲೆ... ಸುಮ್ಮನೆ ತಲೆಕೆಡಿಸಿಕೊಳ್ಳುವುದರಲ್ಲಿ ಯಾವ ಅರ್ಥವಿದೆ ?" ಎಂದು ಆಲೋಚಿಸುವ ದೇವಧರನು ಮಾನಸಿಕ ಸಂಘರ್ಷವನ್ನು ಎದುರಿಸುತ್ತಿರುತ್ತಾನೆ.

ಗೌರಿ ರಾತ್ರೋ ರಾತ್ರಿ ತನ್ನ ಮನೆ ಬಿಟ್ಟು ಡಾ. ದೇವಧರನ ಮನೆಗೆ ಬಂದು ತಾನು ದೇವಧರನನ್ನೇ ನಂಬಿ ಬಂದಿರುವುದಾಗಿ ಹೇಳುತ್ತಾಳೆ. ಹೀಗಾಗಿ ಡಾ.ದೇವಧರ ಗೌರಿಯನ್ನು ಮುಂಬಯಿಗೆ ಕರೆದುಕೊಂಡು ಹೋಗಿ ತನ್ನ ಸ್ನೇಹಿತರಾದ ಡಾ. ರಾಮಸರನಾಯಕ, ಡಾ.ಮಿಸೆಸ್ ಶಾಲಿನಿ ಸರನಾಯಕ ಇವರ ಮನೆಯಲ್ಲಿರಿಸಿ ಬರುತ್ತಾನೆ. ಬಂದ ನಂತರ ಕೃಷ್ಣಪುರದಲ್ಲಿ ಡಾ.ದೇವಧರ ಮತ್ತು ಸುರೇಶರ ನಡುವಿನ ವೈಯಕ್ತಿಕ ಸಂಘರ್ಷ ರಾಜಕೀಯ ಸಂಘರ್ಷದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಸುರೇಶ ಕಾಂಗ್ರೆಸ್ ಸತ್ತೆಯ ಪ್ರತಿನಿಧಿಯಾದರೆ, ಡಾ. ದೇವಧರ ಸರ್ವೋದಯ ಚಳುವಳಿಯ ಪ್ರತಿನಿಧಿಯಾಗುತ್ತಾನೆ. ಇವರಿಬ್ಬರ ನಡುವಿನ ಸಂಘರ್ಷದ ಪರಿಣಾಮವಾಗಿ ಯಾರೊ ದೇವಧರನ ದವಾಖಾನೆಯನ್ನು ಸುಟ್ಟು ಹಾಕಿರುತ್ತಾರೆ. ತನ್ನ ದವಾಖಾನೆಗೆ ಬೆಂಕಿ ಬಿದ್ದಿರುವ ಸುದ್ದಿಯೂ ಕೂಡ ಆತನಿಗೆ ಬಹಳ ತಡವಾಗಿ ಅಂದರೆ ಎರಡು ಮೂರು ತಾಸು ಕಳೆದು ತಲುಪುತ್ತದೆ. ಹೀಗಾಗಿ ಆತ ತನ್ನ ಮನೆಯಲ್ಲಿಯೇ ದವಾಖಾನೆಯನ್ನು ಪ್ರಾರಂಭ ಮಾಡಿರುತ್ತಾನೆ. ಆದರೆ ಅವನ ಹತ್ತಿರಕ್ಕೆ ಬರುವ ಪೇಶಂಟ್ ಜನ ದಿನಕ್ಕೆ ಮೂರೋ ನಾಲ್ಕೋ ಆಗಿರುತ್ತಾರೆ. ಗೌರಿ ವಿಚಾರವಾಗಿ ಯಾರೂ ಅವನ ಹತ್ತಿರ ನೇರವಾಗಿ ಏನನ್ನೂ ಕೇಳದೇ ಇದ್ದರೂ, ಊರಿನಲ್ಲಿ ಏನೋ ಗುಜ ಗುಜು ನಡೆದಿರುತ್ತದೆ. ಅವನ ದವಾಖಾನೆಯಲ್ಲಿ ನರ್ಸ್ ಕೆಲಸ ಮಾಡುತ್ತಿದ್ದ ಹುಡುಗಿ ಹೇಳದೆ, ಕೇಳದೆ ಮಾಯವಾಗಿ ಬಿಡುತ್ತಾಳೆ. ಕಂಪೌಂಡರ್ ರಾಗಣ್ಣ ಕೆಲಸಕ್ಕೆ ಬರುತ್ತಿದ್ದರೂ ಕೂಡ ಬಾಯಿ ಮುಚ್ಚಿಕೊಂಡೇ ಇರತೊಡಗುತ್ತಾನೆ. ಪೇಟೆಯಲ್ಲಿ ಯಾರೋ ಒಬ್ಬ ಹೊಸದಾಗಿ ಎಮ್.ಬಿ.ಬಿ.ಎಸ್. ಆದ ಡಾಕ್ಟರು ದವಾಖಾನೆ ತೆರೆಯಲಿದ್ದು, ಅವನಿಗೆ ದವಾಖಾನೆ ತೆಗೆಯಲು ಬೇಕಾಗುವ ಹಣದ ವ್ಯವಸ್ಥೆಯನ್ನೆಲ್ಲ ಸುರೇಶ ಸಾಳಗಾಂವಕರನೇ ಮಾಡಿದ್ದಾನೆ ಎಂಬ ಸುದ್ದಿ ದೇವಧರನಿಗೆ ತಿಳಿಯುತ್ತದೆ.

ದೇವಧರ ತನ್ನ ಗೆಳೆಯರಿಗೆ ನಡೆದಿರುವ ಸತ್ಯ ಸಂಗತಿಯನ್ನು ಹೇಳಿದಾಗ, ಸಹಾನುಭೂತಿಯಿಂದ ಕೇಳಿದರೂ ಕೂಡ ಅವರೆಲ್ಲ "ನಿನಗ್ಯಾರು ಅಂಥಾ ಕೆಲಸ ಮಾಡಲಿಕ್ಕೆ ಹೇಳಿದ್ದರು? ನೀ ಬಾಳ ದೊಡ್ಡ ತಪ್ಪು ಮಾಡಿದಿ", "ನೀ ಆ ಸಾವಂತ ಸುರೇಶನ ಬಲ್ಯಾಗ ಯಾಕ ಬಿದ್ದೀ?" "ಬಲೆಯಲ್ಲದೇ ಮತ್ತೇನು? ಅವರಿಗೇನು ಬೇಕಾದರೆ ಗೌರಿನ್ನ ಗಪ್ಪ ಚಿಪ್ಪಾಗಿ ಎಲ್ಲ್ಯಾದರೂ ಕರಕೊಂಡು ಹೋಗಿ ಎಲ್ಲಾ ಮುಗಿಸಿ ಬರ್ತಿದ್ದರು... ಈಗ ನಿನ್ನ ಕೊರಳಾಗ ಆಕೀನ್ನ ಕಟ್ಟಿ ಬಿಟ್ಟರು. ಮತ್ತ ನಿನ್ನ ಹೆಸರ ಕೆಡಿಸಿ ನಿನಗ ಇಲ್ಲಿಂದ ಓಡಿಸಿ ಬಿಡ್ತಾರೀಗ" (ಪು. ೧೧೩) ಎಂದು ಹೇಳುವ ಮಾತುಗಳು ದೇವಧರ ಊರಿನಲ್ಲಿ ಎದುರಿಸಬೇಕಾಗಿ ಬಂದ ಸಂಘರ್ಷಗಳನ್ನು, ದಾರುಣ ಪರಿಸ್ಥಿತಿಯನ್ನು ತಿಳಿಸುತ್ತವೆ. ಊರಿನ ಕೆಟ್ಟ ರಾಜಕೀಯವನ್ನು ಎದುರಿಸಲಾರದ ಡಾ. ದೇವಧರ ಅಂತಿಮವಾಗಿ ಕೃಷ್ಣಪುರವನ್ನು ತೊರೆದು ಘಟಪ್ರಭಾದ ಮಿಶನ್ ಹಾಸ್ಪಿಟಲ್ ಸೇರಿಕೊಳ್ಳುತ್ತಾನೆ. ಇಲ್ಲಿ ಡಾ.ದೇವಧರ ಪಲಾಯನವಾದಕ್ಕೆ ಶರಣಾದರೂ ಕೂಡ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ, ತನ್ನ ಜನಸೇವಾ ಕಾರ್ಯವನ್ನು ಮುಂದುವರಿಸಲು ಮಿಶನ್ ಹಾಸ್ಪಿಟಲ್‌ಗೆ ಸೇರಿಕೊಳ್ಳುವ ಮೂಲಕ ತನ್ನ ಆಶಯಗಳನ್ನು ಈಡೇರಿಸಿಕೊಳ್ಳುತ್ತಾನೆ. ಕಾಂಗ್ರೆಸ್ ಪಕ್ಷದ ವತಿಯಿಂದ ಅಸೆಂಬ್ಲಿ ಎಲೆಕ್ಷನ್ನಿಗೆ ಟಿಕೆಟು ಪಡೆದುಕೊಂಡ ಸುರೇಶ ಗೆದ್ದು ಎಂ.ಎಲ್.ಎ. ಆಗಿ ರಾಜ್ಯ ಮಂತ್ರಿಯಾಗುತ್ತಾನೆ. ಶಕುಂತಲೆಗಿದ್ದ ಟಿ.ಬಿ. ಖಾಯಿಲೆ ಉಲ್ಬಣಗೊಂಡಿದ್ದರಿಂದ ಸುರೇಶ ಅವಳನ್ನು ಘಟಪ್ರಭಾದ ಮಿಶನ್ ಆಸ್ಪತ್ರೆಗೆ ದಾಖಲಿಸುತ್ತಾನೆ. ಡಾ.ಟೇಲರ್ ಅವರು ನಡೆಸಿದ ಶಸ್ತ್ರ ಚಿಕಿತ್ಸೆಯಿಂದಾಗಿ ಶಕುಂತಲಾ ಆರೋಗ್ಯವಂತಳಾಗುತ್ತಾಳೆ.

ಎರಡು ವರ್ಷಗಳ ಅಂತರದಲ್ಲಿ ದೇವಧರ ಶಕುಂತಲಾಳನ್ನು ಪ್ರೀತಿಸತೊಡಗಿರುತ್ತಾನೆ. ಅವಳಲ್ಲಿ ಹೊಸ ಚೈತನ್ಯವನ್ನು, ಹೊಸ ಜೀವನವನ್ನು ನಿರ್ಮಿಸುವುದು ಅವನ ಉದ್ದೇಶವಾಗಿರುತ್ತದೆ. ಮೃತ್ಯು ಮುಖವಾಗಿ ನಡೆದ ಅವಳ ಜೀವನಕ್ಕೆ ಅಣೆಕಟ್ಟು ಹಾಕಿ, ಅದಕ್ಕೆ ಒಂದು ಹೊಸಾ ಸೃಜನಶಕ್ತಿ ಕೊಡೋ ಪ್ರಯತ್ನ ಮಾಡುತ್ತಿರುತ್ತಾನೆ. ಅದಕ್ಕೆಂದೇ ಒಂದು ದಿನ ಘಟಪ್ರಭೆಯ ಆಣೆಕಟ್ಟಿನ ಗೆಸ್ಟ್ ಹೌಸಿನಲ್ಲಿ ಇಬ್ಬರೂ ಉಳಿದುಕೊಳ್ಳುವ ಯೋಜನೆ ಮಾಡುತ್ತಾರೆ. ಆದರೆ ಶಕುಂತಲಾ ಅಲ್ಲಿ ಉಳಿಯಲು ಬಯಸದೆ ಸುರೇಶನ ಕಾರಣವನ್ನು ನೀಡುತ್ತಾಳೆ. ಶಕುಂತಲಾ ತನ್ನನ್ನು ಪ್ರೀತಿಸುತ್ತಿರುವುದು ಡಾ.ದೇವಧರನಿಗೆ ಗೊತ್ತಿರುತ್ತದೆ. ಆದರೆ ಶಕುಂತಲೆ ಅದನ್ನು ಬರೇ ಲೈಂಗಿಕ ಹಸಿವು ಎಂದು ತಿಳಿದುಕೊಂಡು ಹೆದರಿ ದೂರ ಸರಿಸುತ್ತಿದ್ದಾಳೆ ಎಂಬುದು ದೇವಧರನ ಅಭಿಪ್ರಾಯವಾಗಿರುತ್ತದೆ. "ಶಕುಂತಲಾ ನನಗೆ ಗೊತ್ತಿತ್ತು– ಇದು ಭಾಳ ಕಠಿಣ ಕೆಲಸ ಅಂತ... ರೋಗ ಗುಣ ಮಾಡಬಹುದು. ಸಹಾನುಭೂತಿ –ಪ್ರೀತಿ ನಿರ್ಮಾಣ ಮಾಡಬಹುದು. ಆದರೆ ಹೊಸ ಜೀವನ–ವಿಧಾನದ ನಿರ್ಮಿತಿ, ಹೊಸ ಮೂಲ್ಯಗಳ ನಿರ್ಮಿತಿ ಅಸಾಧ್ಯವಾದ ಮಾತು ಅನ್ನೋದು ನನಗೂ ಗೊತ್ತಿತ್ತು..." (ಪು. ೧೧೮) ಎಂಬ ದೇವಧರನ ಮಾತುಗಳು ಹೊಸತನದ ನಿರ್ಮಿತಿಯಲ್ಲಿ ಎದುರಿಸುವ, ಎದುರಿಸಬೇಕಾದ ಸಂಘರ್ಷಗಳನ್ನು ಕುರಿತು ತಿಳಿಸುತ್ತವೆ.

ಬದಲಾವಣೆ ಎಂಬುದು ಏಕಾಏಕಿ ಸಂಭವಿಸುವಂತಹದ್ದಲ್ಲ. ಅಂತಿಮವಾಗಿ ಅವರಿಬ್ಬರೂ ಗೆಸ್ಟ್ ಹೌಸಿನಲ್ಲಿ ರಾತ್ರಿ ಉಳಿದುಕೊಂಡು ಸಂತಸದ ಕ್ಷಣಗಳನ್ನು ಅನುಭವಿಸುತ್ತಾರೆ. ಆದರೆ

ಮಾರನೇ ದಿನ ಬೆಳಿಗ್ಗೆ ನಸುಕಿನಲ್ಲಿಯೇ ಶಕುಂತಲೆ ಘಟಪ್ರಭೆಯ ನೀರಿನ ಕಾಲುವೆ ಧಬಧಬೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡುಬಿಡುತ್ತಾಳೆ. ಡಾ. ದೇವಧರ ವೈದ್ಯನಾಗಿ ಶಕುಂತಲೆಯನ್ನು ಉಳಿಸಿಕೊಂಡರೂ ಕೂಡ ಸ್ನೇಹಿತನಾಗಿ ಅವಳನ್ನು ಉಳಿಸಿಕೊಳ್ಳುವಲ್ಲಿ ವಿಫಲನಾಗುತ್ತಾನೆ. ಶಕುಂತಲೆಯ ಮೃತದೇಹವನ್ನು ನೋಡಿದ ಕೂಡಲೇ ಆಘಾತಕ್ಕೆ ಒಳಗಾಗಿ ದೊಪ್ಪೆಂದು ಬೀಳುತ್ತಾನೆ. ಹೀಗೆ ಡಾ. ದೇವಧರ ಬದಲಾದ ತನ್ನ ವ್ಯಕ್ತಿತ್ವದಲ್ಲಿ ಸಂಘರ್ಷಗಳನ್ನು ನಿರಂತರವಾಗಿ ಎದುರಿಸಬೇಕಾಗಿ ಬರುತ್ತದೆ.

೫.೩.೪ ಸ್ತ್ರೀ ಪಾತ್ರಗಳು : ಕರ್ತೃತ್ವ ಶಕ್ತಿಯ ಜೊತೆ ನಡೆಸುವ ಸಂಘರ್ಷಗಳು

'ಸೃಷ್ಟಿ' ಕಾದಂಬರಿಯಲ್ಲಿ ಮುಖ್ಯವಾಗಿ ಗೌರಿ, ಶಕುಂತಲಾ, ಲಕ್ಷ್ಮೀಬಾಯಿ ಇವರುಗಳನ್ನು ಗುರುತಿಸಬಹುದು. ಕಾದಂಬರಿಯ ಮೊದಲ ಹಂತದಲ್ಲಿ ಗೌರಿಯು ಮುಂಬಯಿಯಲ್ಲಿ ಸುರೇಶನನ್ನು ಪ್ರೀತಿಸುತ್ತಿರುತ್ತಾಳೆ. ಅವರಿಬ್ಬರ ಪ್ರೀತಿಯ ಬಗ್ಗೆ ಅವರ ಮನೆಯಲ್ಲಿಯೂ ತಿಳಿದಿರುತ್ತದೆ. ಸುರೇಶ ತಾನು ಖನ್ನಾನ ಎಕ್ಸ್‌ಪೋರ್ಟ್ – ಇಂಪೋರ್ಟ್ ಕಂಪನಿಯಲ್ಲಿ ಸಿ.ಎ. ಕಮ್ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದಾಗ ಗೌರಿಯನ್ನು ಪ್ರೀತಿಸುತ್ತಿರುತ್ತಾನೆ. ಆದರೆ ಖನ್ನಾನ ಪಾರ್ಟನರ್ ಆಗುವ ಅವಕಾಶ ಸಿಕ್ಕ ನಂತರ ಆತ ಗೌರಿಯನ್ನು ತನ್ನಿಂದ ದೂರ ಮಾಡಿಕೊಳ್ಳಬೇಕೆಂದು ಬಯಸುತ್ತಾನೆ. ಏಕೆಂದರೆ ಅವಳ ಚಿಕ್ಕ ಸಪಾಟ ದೇಹ, ಸಾದಗಪ್ಪು ಬಣ್ಣ, ಮೊಂಡ ಮೂಗು ಕಂಪನಿಯ ಬಾಸ್ ಆದ ತನ್ನ ಡಾಜ್ ಕಾರಿಗೆ ಶೋಭಿಸುವುದಿಲ್ಲ ಎಂಬುದು ಅವನ ಅಭಿಪ್ರಾಯವಾಗಿರುತ್ತದೆ. ಹೀಗಾಗಿ ಗೌರಿಯನ್ನು ಸಿನೇಮಾಕ್ಕೆಂದು ಕರೆದೊಯ್ದು ಸುರೇಶ ಅವಳೊಂದಿಗೆ ಧಿಮಾಕಿನಿಂದ ಮಾತನಾಡುತ್ತಾನೆ. ಸುರೇಶನ ಹೊಸ ಧಿಮಾಕು ಅವಳಲ್ಲಿ ದಿಗಿಲನ್ನು ಉಂಟು ಮಾಡುತ್ತದೆ. ತನ್ನ ತಾಯಿಗೆ ಏನೋ ಸಂಶಯ ಬಂದ ಹಾಗಿರುವುದರಿಂದ ತಾವಿಬ್ಬರೂ ಆದಷ್ಟು ಬೇಗ ಮದುವೆ ಮಾಡಿಕೊಳ್ಳಬೇಕು ಎಂಬುದು ಗೌರಿಯ ಅಭಿಪ್ರಾಯ. ಆದರೆ ಇದಕ್ಕೆ ನಿರಾಕರಿಸುವ ಸುರೇಶ ತಾನು ತನ್ನ ಬಿಸಿನೆಸ್ಸು ಗಟ್ಟಿಯಾಗಿ ನಿಂತು ತನ್ನದೇ ಹಣದಿಂದ ಒಂದು ಮನೆಯನ್ನು ಕೊಂಡುಕೊಳ್ಳುವಷ್ಟು ಹಣ ಮಾಡಿದ ನಂತರ ತನ್ನ ಮದುವೆಯ ವಿಚಾರ ಎಂಬುದಾಗಿ ಹೇಳುತ್ತಾನೆ. ಹಾಗಾಗಿ ಗೌರಿಯೂ ಕೂಡ ಅವನಿಗಾಗಿ ಕಾಯಬೇಕೆಂಬುದು ಆತನ ಅಭಿಪ್ರಾಯ. ಹೀಗಾಗಿ ಗೌರಿ "ಅಂದರ ಸದ್ಯ ತಾನು ಒಂದು ಹತ್ಯೆ ಮಾಡಬೇಕಿದೆ" ಎಂದು ಹೇಳುತ್ತಾಳೆ. ಸುರೇಶ 'ಮುಂಬೈದಾಗ ಅಂಥವು ದಿನಾಲು ಸಾವಿರಾರು ನಡೆದಿರ್ತಾವ' ಎಂದು ಹೇಳಿದಾಗ ಗೌರಿ "ನಮಗೆ ಅದರ ಅಗತ್ಯ ಅದ ಏನು?– ಇದು ನಿನ್ನ ಕೂಸು !" ಎಂದು ಹೇಳುವ ಮೂಲಕ ಸುರೇಶನ ಮಾತನ್ನು ತಿರಸ್ಕರಿಸುವುದನ್ನು ಕಾಣುತ್ತೇವೆ.

ಕಾದಂಬರಿಯ ಎರಡನೇ ಹಂತದಲ್ಲಿ ಗೌರಿಯು ತಾನು ಸುರೇಶ ಸಾಳಗಾಂವಕರನಿಂದಾಗಿ ಗರ್ಭಿಣಿ ಆಗಿದ್ದರಿಂದ ಮೃತ್ಯುವನ್ನು ಎದುರಿಸಬೇಕೆಂದು ತೀರ್ಮಾನಿಸಿರುತ್ತಾಳೆ. ಆದ್ದರಿಂದಲೇ ತನ್ನನ್ನು ಪರೀಕ್ಷಿಸಲು ಬಂದ ಡಾ.ದೇವಧರನಿಗೆ ತನಗೇನಾದರೂ ಒಂದೇ ಪೆಟ್ಟಿಗೆ ನಿರ್ನಾಮ ಮಾಡೋವಂಥ ಔಷಧ – ವಿಷ–ಇಂಜೆಕ್ಷನ್ ಏನಿದ್ದರೂ ಅದನ್ನು ಕೊಟ್ಟು ಬಿಡುವಂತೆ ಕೇಳಿಕೊಳ್ಳುತ್ತಾಳೆ. ಆದರೆ ಡಾ. ದೇವಧರ ಗೌರಿಯನ್ನು ಕುರಿತು "ನೀ ಏನೂ ತಪ್ಪು ಮಾಡಿಲ್ಲ;

ಮನುಷ್ಯನ ಸಹಜ ಪ್ರವೃತ್ತಿಗೆ ಅನುವು ಮಾಡಿಕೊಟ್ಟೆ" ಎಂದು ಹೇಳುತ್ತಾ ಅವಳ ಸಮಸ್ಯೆಯನ್ನು ತಾನು ಪರಿಹರಿಸುವುದಾಗಿ ಹೇಳುತ್ತಾನೆ. ಡಾ.ದೇವಧರ ಗೌರಿಗೆ ಗರ್ಭಪಾತ ಮಾಡಿಸಲು ಒಪ್ಪದೇ ಇದ್ದಾಗ ಅವಳನ್ನು ಬೆಳಗಾಂವಿಗೋ, ಎಲ್ಲೋ ಒಯ್ದು ಕೆಲಸ ಮುಗಿಸಿಕೊಂಡು ಬರುವ ಯೋಜನೆಯನ್ನು ಅವಳ ತಂದೆ-ತಾಯಿ ಹೂಡಿರುತ್ತಾರೆ. ಇದನ್ನು ತಿಳಿದ ಗೌರಿ ರಾತ್ರೋ ರಾತ್ರಿ ಮನೆ ಬಿಟ್ಟು ದೇವಧರನ ಮನೆಗೆ ಬರುತ್ತಾಳೆ. ಗೌರಿಗೂ ಕೂಡ ಗರ್ಭಪಾತ ಮಾಡಿಸಿಕೊಳ್ಳಲು ಇಷ್ಟವಿರುವುದಿಲ್ಲ. ಹೀಗಾಗಿ ದೇವಧರ ಅವಳನ್ನು ಮುಂಬೈನಲ್ಲಿ ತನ್ನ ಸ್ನೇಹಿತರ ಮನೆಯಲ್ಲಿ ಇರಿಸಿ, ಅವಳ ಮುಂದಿನ ಜೀವನಕ್ಕೆ ಮಾರ್ಗದರ್ಶಕನಾಗುತ್ತಾನೆ. ದೇವಧರನ ನೆರವಿನಿಂದ ಮಗನಿಗೆ ಜನ್ಮ ನೀಡಿದ ಗೌರಿ ಮಗನಿಗೆ 'ಅಂಕುರ' ಎಂದು ಹೆಸರಿಡುತ್ತಾಳೆ. ತನ್ನ ಮತ್ತು ಸುರೇಶನ ನಡುವಿನ ಸಂಬಂಧದಿಂದಾಗಿ ತಾನು ದೇವಧರನೊಂದಿಗೆ ಪ್ರೀತಿಯ ಸಂಬಂಧವನ್ನು ಹೊಂದುವುದು ಅಶಕ್ಯ ಎಂಬುದು ಗೌರಿಗೆ ತಿಳಿದಿರುತ್ತದೆ. ಆಲ್ಡಸ್ ಹಕ್ಸಲೀಯ ಕಾದಂಬರಿಗಳನ್ನು ಓದುವ ಮೂಲಕ ಅವಳು ತನ್ನ ಜೀವನವನ್ನು ಸಹ್ಯವಾಗಿಸಿಕೊಳ್ಳತೊಡಗುತ್ತಾಳೆ. ಜೀವನದ ಬಗ್ಗೆ ವಸ್ತುನಿಷ್ಠತೆಯ ಮನೋಭಾವವನ್ನು ರೂಢಿಸಿಕೊಂಡಿರುತ್ತಾಳೆ. "ಗಂಡಸರೆಲ್ಲ ಒಂದು ಬಗೆಯ ಆಟಿಕೆಗಳು, ಸೂತ್ರದ ಗೊಂಬೆಗಳು ಎಂದು ಒಮ್ಮೊಮ್ಮೆ ಅನಿಸುತ್ತದೆ- ಆದರೆ ನಮ್ಮಲ್ಲಿ ಜಾಣ್ಮೆ, ತಾಳ್ಮೆ, ನಿಯಂತ್ರಣವಿದ್ದರೆ ಮಾತ್ರ ! ಒಮ್ಮೆ ಅವರ ಕೈಯಲ್ಲಿ ಸಿಕ್ಕೆವೋ ಮುಗಿಯಿತು-ನಾವು ಆಜನ್ಮದಾಸಿಗಳಾಗಬೇಕಾಗುತ್ತದೆ" (ಪು. ೧೦೯) ಎಂದು ಆಲೋಚಿಸುವಲ್ಲಿ ಅವಳ ವಾಸ್ತವ ದೃಷ್ಟಿಕೋನವನ್ನು ಗುರುತಿಸಬಹುದಾಗಿದೆ.

ಮುಂಬೈನ ಏಕಾಕಿತನ ಗೌರಿಯಲ್ಲಿ ಬೇಸರವನ್ನು ಮೂಡಿಸಿರುತ್ತದೆ. ಅವಳಿಗೆ ಒಂದು ಗಂಡಸು ಬೇಕಾಗಿರುತ್ತದೆ. ಗಂಡಸಿನ ರಾಕ್ಷಸತ್ವ ಬೇಕಾಗಿರುತ್ತದೆ. ಒಮ್ಮೊಮ್ಮೆ ಕನಸಿನಲ್ಲಿ ಸುರೇಶ ಥೈ ಥೈ ಎಂದು ಕುಣಿದು ಮೈ ಮೇಲೆರಗಿ ಅವಳನ್ನು ಹಿಂಡಿ ಹಿಪ್ಪೆ ಮಾಡುತ್ತಿರುತ್ತಾನೆ. ಹೀಗಾಗಿ ಅವಳಿಗೆ ಯಾರಾದರೂ ಬೇಕಾಗಿರುತ್ತಾರೆ. "ಮೈಯೆಲ್ಲ ನೀರಡಿಸಿ ನಿಂತಿದೆ. ನೆಲವೆಲ್ಲ ಒಣಗಿ ಬಿರುಕು ಬಿಟ್ಟಿದೆ. ರಾತ್ರಿ ಹೊರಳಾಡಿ ಹೊರಳಾಡಿ ಎಷ್ಟೋ ಸಲ ಕಣ್ಣೀರು ಸುರಿಸುತ್ತೇನೆ. ಕಾದ ಹಂಚಿನ ಮೇಲೆ ನೀರಿನ ಹನಿ ಸಿಂಪಡಿಸುತ್ತೇನೆ.. ಯಾರನ್ನಾದರೂ ಹಿಡಿಯಬೇಕು. ಆದರೆ ಮೋಸ ಮಾಡಿ ಅಲ್ಲ. ಎಲ್ಲ ಸತ್ಯ ಹೇಳಿ. ದಿನೇಶ ಎದುರಿಸಬಹುದೇ-ಸತ್ಯವನ್ನು, ನನ್ನ ಸತ್ಯದ ಬೆಂಕಿಯನ್ನು?... ಅಥವಾ ಇನ್ನಿಷ್ಟು ಹಾದಿ ಕಾಯ್ದರೆ- ಸಿಕ್ಕೀತೇ ನನ್ನ ಆಕಾಶದ ನಕ್ಷತ್ರ?.. ದೇವಧರ ಪಾಪ, ಸಂಪೂರ್ಣ ಬೆಳಕಿನ ಪ್ರಾಣಿ! (ಪು. ೧೧೦) ಎಂಬ ಗೌರಿಯ ಆಲೋಚನೆಯಲ್ಲಿ ಅವಳ ಮುಂದಿನ ಜೀವನದ ಆಯ್ಕೆಯನ್ನು ಕುರಿತಂತೆ ಅವಳಲ್ಲಿ ದ್ವಂದ್ವ, ಅನಿಶ್ಚಿತತೆ ಇದ್ದರೂ ಸಮಸ್ಯೆಗಳನ್ನು ದಿಟ್ಟತನದಿಂದ ವಾಸ್ತವ ನೆಲೆಯಲ್ಲಿಯೇ ಎದುರಿಸುವುದನ್ನು ಕಾಣಬಹುದು.

ಕಾದಂಬರಿಯ ಪ್ರಾರಂಭದಲ್ಲಿನ ಶಕುಂತಲ ಪ್ರೊ.ದೇವಧರನನ್ನು ಪ್ರೀತಿಸುತ್ತಿರುತ್ತಾಳೆ. ಆದರೆ ಪ್ರೊ. ದೇವಧರನಿಗೆ ಯಾವುದೆ ಜವಾಬ್ದಾರಿಗಳು ಬೇಕಾಗಿರುವುದಿಲ್ಲ. ಹೀಗಾಗಿ ಶಕುಂತಲೆ ದೇವಧರ ತನ್ನನ್ನು ಮದುವೆಯಾಗುವುದಿಲ್ಲವೆಂದು ತಿಳಿದಾಗ ನಿರಾಶೆ ಅನುಭವಿಸುತ್ತಾಳೆ. ಆದರೂ ಸಹ ದೇವಧರ ತನ್ನ ಜೊತೆ ಮಾತನಾಡುತ್ತಿದ್ದ ರೀತಿ, ತನ್ನನ್ನು ನೋಡುತ್ತಿದ್ದ ರೀತಿ, ತನಗೆ ತೋರಿಸುತ್ತಿದ್ದ

ಆಸ್ಥೆ ಎಲ್ಲವೂ ಕೇವಲ ನಾಟಕೀಯ ಸಂಗತಿಗಳಾಗಿದ್ದವೇ ಎಂಬ ಅನುಮಾನ ಮೂಡುತ್ತದೆ. ದೇವಧರ ಶಕುಂತಲೆಯೇ ತನ್ನ ಬಗ್ಗೆ ತಪ್ಪು ತಿಳುವಳಿಕೆ ಮೂಡಿಸಿಕೊಂಡಿದ್ದಾಳೆಂದು ಹೇಳುತ್ತಾನೆ. ಆಗ ಶಕುಂತಲೆಯು ಹೇಳುವ "ತಪ್ಪು ತಿಳುವಳಿಕೆ? ಒಳ್ಳೇದಾತು. ಅಂತೂ ಸ್ವಲ್ಪ ಲಗೂನ ಬುದ್ಧಿ ಕಲಿಸಿದಿರಿ. ನಿಮ್ಮದೇನು ತಪ್ಪು! ಎಲ್ಲಾ ತಪ್ಪು ನಂದ. ಇದಕ್ಕಿಂತ ಹೆಚ್ಚು ತಪ್ಪು ಮಾಡಿಲ್ಲ ಅನ್ನೋದ ಒಂದು ಸಮಾಧಾನ" (ಪು. ೨೬) ಎಂದು ಹೇಳುವ ಮಾತುಗಳು ಅವಳ ವಾಸ್ತವ ಪ್ರಜ್ಞೆಯನ್ನು ಸಾಕ್ಷೀಕರಿಸುತ್ತವೆ. ಪ್ರೊ. ದೇವಧರನಿಂದ ತಿರಸ್ಕೃತಳಾದರೂ ಕೂಡ ಶಕುಂತಲೆ ಆತ್ಮಹತ್ಯೆಯ ಯೋಚನೆ ಮಾಡುವುದಿಲ್ಲ. ಅವಳ ಎರಡು ವರ್ಷದ ಕನಸು ಮಣ್ಣು ಮುಕ್ಕುತ್ತದೆಂದು ಅವಳಿಗೆ ಅನ್ನಿಸಿದ್ದಾಗ, ಅವಳನ್ನು ಅವಳು ಎಚ್ಚರಿಸಿಕೊಂಡಿರುತ್ತಾಳೆ. ಆದರೆ ತನ್ನನ್ನು ತಾನು ನಿಯಂತ್ರಿಸಿಕೊಂಡಿರುವುದಿಲ್ಲ. ಅವಳ ಸ್ಥಾನದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಬಹುಶಃ ಆತ್ಮಹತ್ಯೆ ಮಾಡಿಕೊಳ್ಳಬಹುದಿತ್ತೇನೋ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಉತ್ಕಟತೆ ಅವಳಲ್ಲಿ ಇರುವುದಿಲ್ಲ.

ದೇವಧರನಿಂದ ನಿರಾಕರಿಸಲ್ಪಟ್ಟ ಅವಳಿಗೆ "ಜೀವನಕ್ಕೆ ಕೇಂದ್ರವೇ ಇರಲಾರದು, ಅದಕ್ಕೆ ಹರಿಯುವುದೊಂದೇ ಗತಿ! ಇಂದು ದೇವಧರ, ನಾಳೆ ಭಾಟಿಯಾ, ನಾಡಿದ್ದು ಇನ್ನಾರೋ– ಇಂದು ಪರೀಕ್ಷೆ, ನಾಳೆ ಟ್ರಿಪ್ಪು, ನಾಡಿದ್ದು ಮದುವೆ– ಇಂದು ಗಂಡ, ನಾಳೆ ಮಗು, ನಾಡಿದ್ದು ಮೊಮ್ಮಗ–ಇಂದು ಸಂಗೀತ, ನಾಳೆ ಅಳುವು, ನಾಡಿದ್ದು ಗೊರಕೆ– ಇಂದು ಧಬೆಧಬೆ, ನಾಳೆ ವಿದ್ಯುತ್ತು, ನಾಡಿದು ಸಾಗರ... ಕೊನೆಗೆ ಕಣ್ಣ ಮುಂದೆ ನಿಲ್ಲುವುದು ಪ್ರಶ್ನೆ ಚಿನ್ಹೆ! ಇನ್ನು ಮೇಲೆ ಬರೇ ಅಭ್ಯಾಸ– ಪರೀಕ್ಷೆ –ನಂತರ ದೈವ ತಂದ ಗಂಡಿನೊಡನೆ ಸಂಸಾರ! ಸಂಸಾರದ ಆಟ!! ಇನ್ನು ಮೇಲೆ ಬರೇ ಆಟ!" (ಪು. ೫೬) ಎಂದು ಆಲೋಚಿಸುತ್ತಾ ಬರೆಯುತ್ತಿದ್ದ ಶಕುಂತಲೆಗೆ ಅಳಬೇಕೆಂದರೂ ಕಣ್ಣಿನಲ್ಲಿ ನೀರೇ ಬರುವುದಿಲ್ಲ. ಹೀಗೆ ಆಲೋಚಿಸುತ್ತಾ ಶಕುಂತಲೆ ತನ್ನ ಮುಂದಿನ ಜೀವನದ ಬಗ್ಗೆ ದಿಟ್ಟವಾದ ನಿರ್ಧಾರ ತೆಗೆದುಕೊಳ್ಳುವುದು ಜೀವನದ ಬಗೆಗಿನ ಅವಳ ವಾಸ್ತವತೆಯನ್ನು ಚಿತ್ರಿಸುತ್ತದೆ. ನಿರಾಶಾವಾದಿಯಾಗದೇ ಬದುಕಿನಲ್ಲಿ ಬರುವುದನ್ನು ಸಹಜವಾಗಿ ಸ್ವೀಕರಿಸಿ ಬದುಕನ್ನು ಮುನ್ನಡೆಸುತ್ತಾಳೆ. ಅವಳಲ್ಲಿ ಮಾನಸಿಕ ಸಂಘರ್ಷವೇರ್ಪಟ್ಟರೂ ಕೂಡ ದಿಟ್ಟತನದಿಂದ ಸಮಸ್ಯೆಯಿಂದ ಹೊರ ಬರುವ ಮೂಲಕ ಆಧುನಿಕ ಮನೋಭಾವದ ಪ್ರತೀಕವಾಗಿ ನಿಲ್ಲುತ್ತಾಳೆ.

ಆದರೆ ಕಾದಂಬರಿಯ ಎರಡನೇ ಹಂತದ ಶಕುಂತಲೆಗೆ ಎಸ್.ಎಸ್.ಸಿ ಮುಗಿಯುತ್ತಿದ್ದಂತೆ ಸುರೇಶ ಸಾಳಗಾಂವಕರನೊಂದಿಗೆ ವಿವಾಹವಾಗಿರುತ್ತದೆ. ಆದರೆ ಅದು ಬಲವಂತದ ವಿವಾಹವಾದ್ದರಿಂದ ವೈವಾಹಿಕ ಬದುಕಿನ ಬಗ್ಗೆ ಅವಳಿಗಿದ್ದ ಆಸ್ಥೆ ಅಷ್ಟಕ್ಕಷ್ಟೆ ಆಗಿರುತ್ತದೆ. ವಿವಾಹ ಆದ ನಂತರ ಅತ್ತೆಯ ಕಾಟ–ಸುರೇಶನ ವಿಚಿತ್ರ ವ್ಯವಹಾರಗಳು, ಅವನ ಹುಕುಮಶಾಹಿ ವೃತ್ತಿ, ದುರಭಿಮಾನ, ಆತ್ಮವಿಶ್ವಾಸ, ಸಿಟ್ಟು–ಸೆಡವು ಇವುಗಳಿಂದಾಗಿ ಹಾಗೂ ಅವಳಿಗೆ ಟಿ.ಬಿ. ಕಾಯಿಲೆ ಬಂದಿದ್ದರಿಂದ ಶಕುಂತಲೆಗೆ "ಜೀವನ ಅಂದರೆ ಒಂದು ಕಾರಾಗೃಹವಾಗಿರುತ್ತದೆ" (ಪು. ೧೨೦). ಆದರೆ ಡಾ. ದೇವಧರನ ಆಗಮನದಿಂದಾಗಿ ಶಕುಂತಲೆ ಸ್ವಲ್ಪ ಮಟ್ಟಿಗೆ ಉಲ್ಲಸಿತಳಾಗಿರುತ್ತಾಳೆ.

ಕೆಲವೊಮ್ಮೆ ದೇವಧರನನ್ನು ಕಾಣಲೆಂದೇ ಸೀಕು ಬೀಳುತ್ತಿರುತ್ತಾಳೆ. ಡಾ.ದೇವಧರನನ್ನು ಪ್ರೀತಿಸಲು ಪ್ರಾರಂಭಿಸಿರುತ್ತಾಳೆ. ಅವಳ ಟಿ.ಬಿ. ಕಾಯಿಲೆ ಉಲ್ಬಣಗೊಂಡು ಶಸ್ತ್ರ ಚಿಕಿತ್ಸೆಗೆ ಒಳಗಾದಾಗ ಡಾ.ದೇವಧರನೇ ಅವಳ ಆರೈಕೆಯನ್ನು ಮಾಡುತ್ತಾನೆ.

ಹೀಗಾಗಿ ದೇವಧರ ತನಗೆ ಜೀವದಾನ ಮಾಡಿ ಅಮೃತವನ್ನು ಕೊಟ್ಟಿದ್ದರಿಂದಲೇ ತಾನು ಬದುಕಿದ್ದೀನೆಂಬ ಭಾವನೆ ಶಕುಂತಲೆಯಲ್ಲಿರುತ್ತದೆ. ದೇವಧರನನ್ನು ಪ್ರೀತಿಸುತ್ತಿದ್ದರೂ ಸಹ ಅವಳು ತನ್ನ ಹಳೇ ಬಂಧನ–ಶತ ಶತಮಾನಗಳಿಂದ ಬಂದಂಥ ಸಂಸ್ಕಾರದ ಬಂಧನವನ್ನು ಹರಿಯಲಿಕ್ಕೆ ಅವಳಿಗೆ ಹೆದರಿಕೆ ಇರುತ್ತದೆ. ಸಾಂಪ್ರದಾಯಿಕ ನೈತಿಕತೆಯ ವಿರುದ್ಧ ಬಂಡೇಳುವ ಸಾಮರ್ಥ್ಯ ಅವಳಲ್ಲಿರುವುದಿಲ್ಲ. ಹೀಗಾಗಿಯೇ ದೇವಧರ ಅವಳಲ್ಲಿ ಹೊಸ ಚೈತನ್ಯ, ಹೊಸ ಜೀವನ ನಿರ್ಮಿಸಿ ಮೃತ್ಯುಮುಖವಾಗಿ ನಡೆದ ಅವಳ ಜೀವನಕ್ಕೆ ಅಣೆಕಟ್ಟು ಹಾಕಿ ಅದಕ್ಕೆ ಒಂದು ಹೊಸಾ ಸೃಜನಶಕ್ತಿ ಕೊಡಲು ತಾನು ಮಾಡಿರುವ ಪ್ರಯತ್ನವನ್ನು ವಿವರಿಸಿ, ಅವಳಿಗೆ ಅರ್ಥ ಮಾಡಿಸುವ ಪ್ರಯತ್ನ ಮಾಡುತ್ತಾನೆ. ಅದರಂತೆ ಶಕುಂತಲೆ ದೇವಧರನನ್ನು ಕೂಡುತ್ತಾಳೆ. ಆದರೆ ಆ ಅನುಭವದ ತೀವ್ರತೆಯನ್ನಾಗಲೀ, ಹೊಣೆಗಾರಿಕೆಯನ್ನಾಗಲೀ ಹೊರಲು ಶಕ್ತಳಾಗದೇ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾಳೆ. ಕಾದಂಬರಿಯ ಪ್ರಾರಂಭದಲ್ಲಿದ್ದ ದಿಟ್ಟ ಮನಸ್ಸಿನ ಶಕುಂತಲಾ ಬದಲಾದ ವ್ಯಕ್ತಿತ್ವದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ದುರ್ಬಲ ಮನಃಸ್ಥಿತಿಯನ್ನು ಹೊಂದಿದವಳಾಗಿಬಿಡುತ್ತಾಳೆ.

ಡಾ. ದೇವಧರನ ತಾಯಿಯಾದ ಲಕ್ಷ್ಮೀಬಾಯಿಗೆ ಕೃಷ್ಣಪುರದಲ್ಲಿಯ ಜನರು ಯಾರು, ಹೇಗೆ ಅನ್ನುವುದು ಗೊತ್ತಿರುತ್ತದೆ. ಹಾಗೂ ಅವರುಗಳ ಬಗ್ಗೆ ಸ್ಪಷ್ಟ ಅಭಿಪ್ರಾಯ, ಅನುಮಾನ,ಭೀತಿಗಳನ್ನು ಹೊಂದಿರುತ್ತಾಳೆ. ಅವಳ ನಿಷ್ಠುರ, ಸರಳ ಮನೋವೃತ್ತಿಯಿಂದ ದೇವಧರನು ಚಿಕ್ಕವನಿದ್ದಾಗ, ಅವನಿಗೆ ಬಹಳ ತೊಂದರೆ ಆಗುತ್ತಿರುತ್ತದೆ. ಆದರೆ ಈಗ ಮಾತ್ರ ಆತನಿಗೆ ಮೋಜೆನಿಸುತ್ತಿರುತ್ತದೆ. ಸಾವಂತ ತನ್ನ ಮನೆಗೇ ಬರುವಂತೆ ದೇವಧರನಿಗೆ ಕರೆದು ಹೋದ ಮೇಲೆ ಲಕ್ಷ್ಮೀಬಾಯಿಗೆ ಗೌರಿಯ ಆರೋಗ್ಯದ ಬಗ್ಗೆ ಅನುಮಾನ ಬರುತ್ತದೆ. ಹಾಗೆಂದೇ ಅವಳು ತನ್ನ ಮಗನೊಂದಿಗೆ "ನನಗೇನೋ ಸಂಶಯ ಬರ್ತದ, ಆಕಿ ಸುರೇಶನ ಮನೀಗೆ ಇತ್ತಿತ್ತಲಾಗ ಬಾಳ ಹೋಗೀ ಬಂದೂ ಮಾಡ್ತಿದ್ದಳಂತ ಕೇಳೀನಿ" (ಪು. ೭೦) ಎಂದು ಹೇಳುವಲ್ಲಿ ಅವಳ ಅನುಮಾನವನ್ನು ಗುರುತಿಸಬಹುದು. ಆಕೆಯ ಅನುಮಾನದಂತೆಯೇ ಗೌರಿಯಲ್ಲಿ ಗಡಿಬಿಡಿ ಉಂಟಾಗಿರುತ್ತದೆ. ಗೌರಿ ಮನೆ ಬಿಟ್ಟು ಬಂದಾಗ ದೇವಧರ ಅವಳನ್ನು ಮುಂಬಯಿಗೆ ಕರೆದುಕೊಂಡು ಹೋಗುವುದಕ್ಕೆ ತನ್ನ ತಾಯಿಯ ಆಶೀರ್ವಾದವನ್ನು ಬೇಡುತ್ತಾನೆ. ಆಗ ಲಕ್ಷ್ಮೀಬಾಯಿ "ಬಾಳೂ, ನೀ ಏನೂ ತಪ್ಪು ಮಾಡೋದಿಲ್ಲ ಅನ್ನೋದು ನನಗ ಖಾತ್ರಿ ಅದ... ಕರೀ ಆಕೇನ್ನ... ಮ್ಯಾಲೇ ಯಾಕ ಕೂತಾಳ?" ಎಂದು ಹೇಳುವ ಮಾತುಗಳು ಅವಳ ಸರಳ ಮನಃಸ್ಥಿತಿಯನ್ನು ಸೂಚಿಸುತ್ತವೆ. ಅದರೆ ಇದರಿಂದ ಮುಂದೆ ಬೇರೆ ಪರಿಣಾಮಗಳು ಉಂಟಾಗಬಹುದು ಭೀತಿ ಅವಳನ್ನು ಕಾಡುತ್ತದೆ.

ಅಂತೆಯೇ ಡಾ. ದೇವಧರ ಮತ್ತು ಸುರೇಶರ ನಡುವಿನ ಸಂಘರ್ಷಗಳು ತಾರಕಕ್ಕೇರಿ ದೇವಧರನ ದವಾಖಾನೆಗೆ ಬೆಂಕಿ ಹಾಕಿ ಸುಟ್ಟು ಹಾಕುತ್ತಾರೆ. ದೇವಧರ ಹಾಗೂ ಗೌರಿಯ ನಡುವಿನ ಸಂಬಂಧದ ಬಗ್ಗೆ ಮಾತುಗಳು ಕೇಳಿ ಬರುತ್ತವೆ. ಇವನ್ನೆಲ್ಲಾ ತಿಳಿದ ಲಕ್ಷ್ಮೀಬಾಯಿ

ಮಗನಿಗೆ "... ಊರು ಹಾಳು ಭಾವಿ ಬೀಳಲಿ– ಇಲ್ಲಿ ಇದ್ದುಕೊಂಡು ಈ ಕೆಟ್ಟ ಮಂದೀ ಕೂಡ ಯುದ್ಧ ಮಾಡ್ತಾ ಕೂಡೋದಾದ್ರ ಜೀವಕ್ಕ ಒಂದು ಕೆಟ್ಟ ಸಂಕಟಾ ಇದ್ದಾಂಗ.. ಸುಮ್ನ ಬೆಳಗಾಂವಿಗೆ ಹೋಗೋಣ... ಅಲ್ಲಿ ಪ್ರಾಕ್ಟೀಸ್ ಮಾಡು– ಅಲ್ಲಿ ಬೇಕಾದರ ನಿನ್ನ ಸಮಾಜಕಾರ್ಯ–ಪಾರ್ಯ ಮಾಡಿಯಂತ..." (ಪು. ೧೧೪) ಎಂದು ಸಲಹೆ ನೀಡುವಲ್ಲಿ ಅವಳ ಅನುಭವ ಮತ್ತು ವಾಸ್ತವದ ಚಿಂತನೆಯನ್ನು ಗುರುತಿಸಬಹುದು. ತಾವು ತುಂಬಾ ತೊಂದರೆ ತೆಗೆದುಕೊಂಡು ಎಂ.ಬಿ.ಬಿ.ಎಸ್. ಕಲಿಸಿರುವುದರಿಂದ ಪ್ರಾಕ್ಟೀಸು ಮಾಡೋದು ಬೇಸರಾಗೇದ ಎಂಬ ಮಾತು ಮಗನಿಂದ ಬರಬಾರದು ಎಂಬುದು ಅವಳ ಕಾಳಜಿ. ಡಾ.ದೇವಧರ ತಾನು ಸ್ವಂತ ಪ್ರಾಕ್ಟೀಸು ಬಿಟ್ಟು ಯಾವುದಾದರೂ ಮಿಶನ್ ಹಾಸ್ಪಿಟಲ್ ಸೇರಿ ಜನಸೇವೆ ಮಾಡುವುದಾಗಿ ಹೇಳಿದಾಗ "ಮೊದಲು ಒಂದು ಲಗ್ನ ಮಾಡಿಕೊಂಡು ತದ ನಂತರ ಹಳ್ಳಿಗಾದರೂ ಹೋಗು, ದಿಲ್ಲಿಗಾದರೂ ಹೋಗು" ಎಂದು ಹೇಳುವಲ್ಲಿ ಮಗನ ಹಿತವನ್ನು ಕಾಯುವುದರ ಜೊತೆಗೆ ಮುಂದೆ ಅವನಿಗೆ ಯಾವ ತೊಂದರೆಗಳು ಉಂಟಾಗಬಹುದು ಎಂಬುದನ್ನು ಸೂಕ್ಷ್ಮವಾಗಿ ಮಗನಿಗೆ ತಿಳಿಸುವ ಪ್ರಯತ್ನ ನಡೆಸುತ್ತಾಳೆ. ಜೊತೆಗೆ ತನ್ನ ಮಗನನ್ನು ರಕ್ಷಿಸಿಕೊಳ್ಳುವ ಮಾತೃ ಹೃದಯವನ್ನು ನಾವಿಲ್ಲಿ ಕಾಣಬಹುದು. ಅಮ್ಮ ಮತ್ತು ಮಗನ ನಡುವೆ ಭಿನ್ನಾಭಿಪ್ರಾಯಗಳು ಕಂಡು ಬಂದರೂ ಕೂಡ ಅವು ವಿಕೋಪಕ್ಕೆ ಹೋಗದೆ ಸರಳವಾಗಿ ಬಗೆಹರಿಯುವುದನ್ನು ಗುರುತಿಸಬಹುದು.

ದೇಸಾಯಿ ಅವರ ಇತರ ಕಾದಂಬರಿಗಳಂತೆ ನಾವು ಇಲ್ಲಿಯೂ ಕೂಡ ರಾಜಕೀಯ ಸಂಘರ್ಷಗಳನ್ನು ಗುರುತಿಸಬಹುದು. ಊರಿನ ರಾಜಕಾರಣದ ಬಗ್ಗೆ ಸಾವಂತ ಮಾಮಾನೊಡನೆ ಡಾ.ದೇವಧರ ಚರ್ಚೆ ನಡೆಸುತ್ತಿರುತ್ತಾನೆ. ದೇವಧರ ಇನ್ನೂ ಸಣ್ಣವನಿರುವುದರಿಂದ ಊರಿನ ರಾಜಕಾರಣದಲ್ಲಿ ಕೈ ಹಾಕುವುದು ವ್ಯರ್ಥ. ಏಕೆಂದರೆ ಗಾಂಧಿ–ನೆಹರೂ ಕಾಲದಾಗ ಇದ್ದ ಮೌಲ್ಯಗಳೆಲ್ಲ ಈಗ ಕಣ್ಮರೆಯಾಗಿವೆ. ಈಗಿನ ದಿನಗಳಲ್ಲಿ ಏನಿದ್ದರೂ ದುಡ್ಡೇ ದೊಡ್ಡಪ್ಪ. ರಾಜಕಾರಣ ಮಾಡಬೇಕೆಂದರೆ ಮೊದಲು ಸಾಕಷ್ಟು ದುಡ್ಡು ಸಂಪಾದಿಸಬೇಕು. ಬಂಗ್ಲೆ ಕಟ್ಟಿಸಬೇಕು. ಕಾರು ಇಟ್ಟಿರಬೇಕು. ಸದಾ ನಾಲ್ಕು ಮಂದಿ ಹಿಂದೆ ಮುಂದೆ ಇರಬೇಕು. ವಿದೇಶಕ್ಕೆ ಹೋಗಿ ದೊಡ್ಡದೊಂದು ಡಿಗ್ರಿ ಮಾಡಿ, ಬೆಳಗಾಂವಿಯಲ್ಲಿ ದೊಡ್ಡ ದವಾಖಾನೆ ತೆಗೆದು ಲಕ್ಷಗಟ್ಟಲೆ ರೊಕ್ಕ ಮಾಡಬೇಕು. ಆ ನಂತರ ಬೇಕಾದರೆ ಮಂತ್ರಿ ಅಥವಾ ಖಾಸದಾರ ಆಗಬಹುದು. ಆಗ ಅವನನ್ನು ಕೇಳುವವರು ಯಾರೂ ಇರುವುದಿಲ್ಲ. ಅವೆಲ್ಲ ಏನೂ ಇಲ್ಲದೆ ರಾಜಕಾರಣ ಮಾಡಿದರೆ ಅಪಯಶ ಕಟ್ಟಿಟ್ಟದ್ದೇ. ಭ್ರಷ್ಟಚಾರ– ಬುವಾಬಾಜೀ ಎಲ್ಲವೂ ನಮ್ಮ ದೇಶದಲ್ಲಿ ಇರುವುದು ಖರೇ. ಇದು ನಮ್ಮ ದೇಶದ ಸತ್ಯ ಪರಿಸ್ಥಿತಿ. ಅದಕ್ಕಾಗಿ ಮೊದಲು ಎಲ್ಲರೂ ಶ್ರೀಮಂತರಾಗಬೇಕು, ದೇಶ ಶ್ರೀಮಂತವಾಗಬೇಕು. ನಂತರ ನಾವೆಲ್ಲಾ ಸುಶಿಕ್ಷಿತರಾಗಬೇಕು–ಅಂದಾಗ ಮಾತ್ರ ಡೆಮೋಕ್ರಸಿ, ಸೋಶಿಯಾಲಿಜಮ್ಮು ಇತ್ಯಾದಿ. ಗರೀಬಿ ಹಟಾವ್! ನಾವೆಲ್ಲಾ ನಮ್ಮ ನಮ್ಮ ಗರೀಬಿ ಹ್ಯಾಂಗಾದರೂ ಮಾಡಿ ಹಟಾಯಿಸಬೇಕು. ಅದರ ಹೊರತಾಗಿ ನಮ್ಮ ದೇಶದಲ್ಲಿ ಏನೂ ಸಾಧ್ಯವಿಲ್ಲ" ಎಂಬುದು ಸಾವಂತನ ಸ್ಪಷ್ಟ ಅಭಿಪ್ರಾಯವಾಗಿರುತ್ತದೆ. ಅಂತೆಯೇ ದೇವಧರನು ತನ್ನ ಊರಿನ ಭ್ರಷ್ಟ ವ್ಯವಸ್ಥೆಯೊಂದಿಗೆ ನಡೆಸುವ ಹೋರಾಟ ದುರಂತಮಯವಾಗುತ್ತದೆ. ಕೊನೆಗೆ ತನ್ನ ಊರನ್ನೇ ಬಿಟ್ಟು ಹೋಗಬೇಕಾದ

ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹಣ, ಅಧಿಕಾರದ ಮದದ ವಿರುದ್ಧ ಅವನು ನಡೆಸುವ ಹೋರಾಟ ವ್ಯರ್ಥವಾಗುತ್ತದೆ.

ಹೀಗೆ ಸೃಷ್ಟಿ ಕಾದಂಬರಿಯು ತನ್ನೊಳಗೆ ಎರಡೆರಡು ವ್ಯಕ್ತಿತ್ವಗಳನ್ನು ಒಳಗೊಂಡಿದ್ದು ದೇಸಾಯಿ ಅವರ ಕಾದಂಬರಿಗಳಲ್ಲಿ ವಿಭಿನ್ನವಾದ ಸ್ಥಾನವನ್ನು ಪಡೆದಿದೆ. "ದೇವಧರನ ಎರಡು ಅವತಾರಗಳ ನಡುವಿನ ಅಂತರ 'ಸೃಷ್ಟಿ'ಗಿಂತ ಮೊದಲು ಬಂದ 'ವಿಕ್ಷೇಪ'ದ ಹಾಗೂ ನಂತರ ಬಂದ 'ಬೀಜ'ಗಳ ನಡುವಿನ ಅಂತರವನ್ನು ಸೂಚಿಸುವುದರಿಂದ ದೇಸಾಯಿಯವರ ಕಾದಂಬರಿಗಳ ಅಂತಃ ಸಂಬಂಧಗಳನ್ನು ಅರಿತುಕೊಳ್ಳುವಲ್ಲಿ ಸಹಾಯ ಮಾಡುತ್ತದೆ" ಎಂಬ ಜಿ.ಎಸ್. ಅಮೂರ ಅವರ ಅಭಿಪ್ರಾಯ (ಶಾಂತಿನಾಥ ದೇಸಾಯಿ ಪುಸ್ತಕದಲ್ಲಿ) ಸಮಂಜಸವಾದುದಾಗಿದೆ.

೫.೪ ಸಂಬಂಧ : ಮನುಷ್ಯ ಸಂಬಂಧಗಳ ಸಂಘರ್ಷ

ನವ್ಯ ಸಾಹಿತ್ಯದ ಅಂಶಗಳಾದ ಅಂತರಂಗಕ್ಕೆ ಸಂಬಂಧಿಸಿದ ವಸ್ತು, ಕಥೆಯ ಗೌಣತೆ, ಕಥಾನಾಯಕನ ಆತ್ಮ ನಿವೇದನೆ(ವಿಶ್ಲೇಷಣೆ), ಈ ನಿವೇದನೆಯಲ್ಲಿ ಅಡಕಗೊಂಡ ಮೌಲ್ಯ ಪರೀಕ್ಷೆ–ಮುಖ್ಯ, ಪ್ರಜ್ಞೆ ತೆರೆದುಕೊಳ್ಳುವ ರೀತಿ, ಅನುಭವವನ್ನು ಸ್ವೀಕರಿಸುವ ಬಿಚ್ಚು ಮನಸ್ಸಿನ ಆಸ್ಥೆ ಇವುಗಳ ಹಿಂದೆ ಕೆಲಸ ಮಾಡುವ ಅಸ್ತಿತ್ವವಾದೀ ತತ್ವ ಪ್ರಣಾಲಿಗಳನ್ನು ನಾವು ದೇಸಾಯಿಯವರ ಕಥಾ ಸಾಹಿತ್ಯದಲ್ಲಿ ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ನೋಡಿದಾಗ ಅವರ ಸಂಬಂಧ (೧೯೮೨) ಕಾದಂಬರಿಯಲ್ಲಿ ಪ್ರಮುಖವಾಗಿ ಸ್ತ್ರೀ ಸ್ವಾತಂತ್ರ್ಯವನ್ನು ಗುರುತಿಸಬಹುದಾಗಿದೆ. ಈ ಅಧ್ಯಯನಕ್ಕೆ ಇದರ ೨೦೦೫ರ ಮುದ್ರಣ ಅವೃತ್ತಿಯನ್ನು ಬಳಸಲಾಗಿದೆ.

'ಸಂಬಂಧ' ಕಾದಂಬರಿಯಲ್ಲಿನ ರಾಧಿಕೆ ಒಬ್ಬ ವಿಧವೆ, ವೈಧವ್ಯ ಬಂದ ಮೇಲೆ ಕಾಲೇಜಿಗೆ ಹೋಗಿ ಬಿ.ಎ ಮಾಡಿದವಳು. ಅತ್ಯಂತ ಹುಷಾರಿನ ಹಾಗೂ ಜೀವನೋತ್ಸಾಹವಿದ್ದ ಹುಡುಗಿ. ಅವಳ ತಾಯಿ ಹುಬ್ಬಳ್ಳಿಯವರು, ತಂದೆ ಶ್ರೀಮಂತ ಕಾಂಟ್ರ್ಯಾಕ್ಟರ್, ಜೈನ. ಸ್ವಲ್ಪ ಮಾತುಗಾರ್ತಿಯಾಗಿದ್ದ ಆಕೆ ಗಿಡಗಳನ್ನೂ ಮಾತನಾಡಿಸುವ ಪ್ರವೃತ್ತಿಯನ್ನು ಹೊಂದಿದ್ದವಳು.

ಶೀತಲಕುಮಾರ ಕೊಲ್ಹಾಪುರಕ್ಕೆ ತನ್ನ ಸ್ನೇಹಿತರಾದ ಪೊಮ್ಮಣ್ಣನವರ ಮನೆಗೆ ಬಂದಾಗ ರಾಧಿಕೆಯ ಪರಿಚಯವಾಗುತ್ತದೆ, ರಾಧಿಕೆಯನ್ನು ಗಮನಿಸುತ್ತಿದ್ದ ಶೀತಲಕುಮಾರರಿಗೆ ರಾಧಿಕೆ ಆತ್ಮವಿಶ್ವಾಸದ, ಹೆಮ್ಮೆ ಅನಿಸಬಹುದಾದ ವರ್ತನೆಗಳನ್ನು ಹೊಂದಿರುವಂತೆ ಕಂಡುಬರುತ್ತಾಳೆ.

ರಾಧಿಕೆಯ ತಂದೆ ಭೂಪಾಲರಾಯರು ಒಬ್ಬ ಶ್ರೀಮಂತ ಕಂಟ್ರಾಕ್ಟರ್‌ರಾಗಿದ್ದರಿಂದ ಅವರ ಕೆಲಸಗಳನ್ನು ನೋಡಿಕೊಳ್ಳುವ ಸಲುವಾಗಿ ಶ್ರೀಧರ ಎಂಬ ಹುಡುಗನು ದಿವಾನ್‌ಜಿಯ ಕೆಲಸಕ್ಕಾಗಿ ಬರುತ್ತಾನೆ. ಆಗ ಎಸ್.ಎಸ್.ಎಲ್.ಸಿ.ಯಲ್ಲಿದ್ದ ರಾಧಿಕೆಯ ಅಭ್ಯಾಸವನ್ನು ಕೂಡ ನೋಡಿಕೊಳ್ಳುತ್ತಿರುತ್ತಾನೆ. ಶ್ರೀಧರನೇ ಎಲ್ಲಾ ಉಜಳಣಿಯನ್ನು ತೆಗೆದುಕೊಂಡಿದ್ದರಿಂದ ರಾಧಿಕ ಪಾಸಾದರೂ ಕೂಡ, ಅವಳ ಅಪ್ಪ ಕಾಲೇಜಿಗೆ ಹೋಗಲು ಬಿಡಲಿಲ್ಲ. ಕಾಲೇಜಿಗೆ ಹೋಗಬೇಕೆಂಬ ತನ್ನ ಆಸೆಯನ್ನು ವ್ಯಕ್ತಪಡಿಸಿದಾಗ 'ನಿನ್ನ ಲಗ್ನಾ ಆದಮ್ಯಾಲ ನಿನ್ನ ಗಂಡ ಹೋಗೆಂದರೆ ಹೋಗು' (ಪು. ೩೫) ಎಂದು ಹೇಳುತ್ತಾರೆ. ಇಲ್ಲಿಂದ ತಂದೆ – ಮಗಳ ಸಂಬಂಧದ ನಡುವೆ ಸಂಘರ್ಷಗಳು ಪ್ರಾರಂಭವಾಗುವುದನ್ನು ಗುರುತಿಸಬಹುದು.

ಇಷ್ಟರಲ್ಲಾಗಲೇ ರಾಧಿಕ ಶ್ರೀಧರನನ್ನು ಪ್ರೀತಿ ಮಾಡಲು ಸುರು ಮಾಡಿರುತ್ತಾಳೆ. ಅವಳ ಅರಿವಿಗೆ ಬರುವಷ್ಟರಲ್ಲಾಗಲೇ ಆಕೆ ಶ್ರೀಧರನ 'ರಾಧೆ'ಯಾಗಿರುತ್ತಾಳೆ (ಪು. ೩೫). ಆ ವಯಸ್ಸಿನ ಪ್ರೀತಿಯಲ್ಲಿ ಒಂದು ರೀತಿಯ ದಿವ್ಯ ಹುಚ್ಚು, ಲೈಂಗಿಕತೆಯ ಅಂಶ ಕಡಿಮೆ ಎಂಬುದು ರಾಧಿಕೆಯ ಅಭಿಪ್ರಾಯವಾಗಿತ್ತು. ಆದರೆ ಇವರಿಬ್ಬರ ಪ್ರೀತಿಯನ್ನು ರಾಧಿಕೆಯ ಅಣ್ಣನಾದ ರತ್ನಾಕರ ಗುರುತಿಸಿ ತನ್ನ ತಾಯಿಯ ಗಮನಕ್ಕೆ ತರುತ್ತಾನೆ. ತಾಯಿ ಈ ವಿಚಾರದ ಬಗ್ಗೆ ಮ್ಯಾಲಿಂದ ಮ್ಯಾಲೆ ಎಚ್ಚರಿಕೆ ಕೊಡಲಿಕ್ಕೆ ಸುರುಮಾಡುತ್ತಾಳೆ. ತಂದೆಗೂ ವಿಚಾರ ತಿಳಿದು ಶ್ರೀಧರನ ಮೇಲೆ ಕಂಟ್ರೋಲ್ ಇಡುತ್ತಾರೆ. ಆತನನ್ನು ಒಮ್ಮೆಲೆ ಹೊರಗೆ ಹಾಕಲು ಮನಸ್ಸಾಗದೇ ಅವನನ್ನು ದೂರದ ಕೆಲಸದ ಮೇಲೆ ಹೊರಗೆ ಕಳುಹಿಸಲು ಪ್ರಾರಂಭಿಸುತ್ತಾರೆ. ಆದರೆ ಅತ ತಿರುಗಿ ರಾಧಿಕೆಯ ಮನೆಗೆ ಬರಲೇಬೇಕಾಗಿರುತ್ತದೆ. ಹೀಗೆ ಹಿಂತಿರುಗಿ ಬಂದಾಗ ಅವರ ಪ್ರೀತಿ ಪಂಚ ಗಂಗಾಧಂಗ ಹರಿಯ ತೊಡಗಿತ್ತು. ಇದು ಮುಂದುವರಿದಂತೆ ಮನೆಯಲ್ಲಿ ಸುಳ್ಳು ಹೇಳಿ ದೂರದ ಹೋಟೆಲುಗಳಲ್ಲಿ ಉಳಿದುಕೊಳ್ಳತೊಡಗುತ್ತಾರೆ.

ಇದರ ಪರಿಣಾಮವಾಗಿ ಗಡಿಬಿಡಿ ಉಂಟಾಗುತ್ತದೆ. ಇದರಿಂದ ಮನೆಯಲ್ಲಿನ ಘರ್ಷಣೆಗಳು ಮತ್ತಷ್ಟು ಹೆಚ್ಚಾಗುತ್ತವೆ. ತಂದೆ ಈ ವಿಚಾರವಾಗಿ ಏನನ್ನೂ ಹೇಳುವುದಿಲ್ಲ. ತಂದೆ ಪುಣೆಗೋ ಮುಂಬಯಿಗೋ ಹೋದಾಗ ಅವ್ವ ರಾಧಿಕಾಳನ್ನು ಒಬ್ಬ ಲೇಡಿ ಡಾಕ್ಟರನ ಹತ್ತಿರ ಕರೆದೊಯ್ದು, ಎಲ್ಲಾ ಹಕೀಕತ್ತು ಹೇಳಿ, ಅವಳಿಂದ ಎಲ್ಲಾ ವ್ಯವಸ್ಥೆಯಾಗುವಂತೆ ಮಾಡುತ್ತಾಳೆ.ಇದರ ಪರಿಣಾಮವಾಗಿ ರಾಧಿಕಾ ಎರಡು ದಿನ ಹಾಸ್ಪೆಲಿನಲ್ಲಿರಬೇಕಾಗಿತ್ತು. ಇಷ್ಟೆಲ್ಲಾ ಅವಾಂತರಗಳಾದ ನಂತರವೂ ರಾಧಿಕಾಳ ವರ್ತನೆಯಲ್ಲಿ ಬದಲಾವಣೆಯಾಗುವುದಿಲ್ಲ. ಆದ್ದರಿಂದ ಕೊನೆಗೆ ಅವರ ಮನೆಯವರು ಶ್ರೀಧರನಿಗೆ ಬಲವಂತವಾಗಿ ಬೇರೆ ಯುವತಿಯೊಂದಿಗೆ ಮದುವೆಯನ್ನು ಮಾಡಿಸಿಬಿಡುತ್ತಾರೆ. ಇತ್ತ ರಾಧಿಕೆಗೂ ಕೂಡ ಒಬ್ಬ ಬೆಳಗಾಂವೀ ಹುಡುಗನನ್ನು ಹುಡುಕಿ ಮದುವೆ ಮಾಡುತ್ತಾರೆ. ರಾಧಿಕೆ ತನ್ನ ಸ್ವತಂತ್ರ ವ್ಯಕ್ತಿತ್ವದಿಂದಾಗಿ ತನ್ನ ಗಂಡನಿಗೆ ಮದುವೆಗೆ ಮುಂಚಿನ ತನ್ನ ಮತ್ತು ಶ್ರೀಧರನ ನಡುವಿನ 'ಸಂಬಂಧ'ದ ಬಗ್ಗೆ ತಿಳಿಸುತ್ತಾಳೆ. ಇದರಿಂದ ಅವರಿಬ್ಬರ ಮಧ್ಯೆ ಘರ್ಷಣೆ ಪ್ರಾರಂಭವಾಗುತ್ತದೆ.

ಹೀಗೆ ವಿಷಯ ತಿಳಿಸುವ ಸಮಯದಲ್ಲಿ ರಾಧಿಕೆ ಮತ್ತೆ ತಿರುಗಿ ತನ್ನ ತಂದೆಯ ಮನೆಗೆ ಹೋಗುವುದಕ್ಕೆ ತಯಾರಾಗಿರುತ್ತಾಳೆ. ಏಕೆಂದರೆ ಆಗ ರಾಧಿಕಾ – ರಮೇಶನ ನಡುವೆ ಪ್ರೀತಿ–ಗೀತಿ ಏನೂ ಇರುವುದಿಲ್ಲ. ಒಂದಿಷ್ಟು ಲೈಕಿಂಗ್ ಇರುತ್ತದೆ. ಹಾಗಾಗಿಯೇ ರಮೇಶನನ್ನು ಬಿಟ್ಟು ಹೊರಡಲು ತಯಾರಿದ್ದ ರಾಧಿಕಾ ಎಲ್ಲಾ ವಿಷಯವನ್ನು ತಿಳಿಸುವ ಧೈರ್ಯ ಮಾಡುತ್ತಾಳೆ. ರಮೇಶನಿಗೆ ಮೊದಲೇ ವಾರ್ನಿಂಗ್ ಕೊಟ್ಟು ತನ್ನ ಇಡೀ ಕಥೆಯನ್ನು ಹೇಳಿದ ರಾಧಿಕಾ ತನ್ನ ಎಲ್ಲಾ ತಪ್ಪುಗಳನ್ನು ಒಪ್ಪಿಕೊಳ್ಳಲು ತಯಾರಾಗಿರುವುದಾಗಿಯೂ, ಅದಕ್ಕಾಗಿ ಏನು ಪ್ರಾಯಶ್ಚಿತ್ತ ಭೋಗಿಸಬೇಕೋ ಅದನ್ನ ಭೋಗಿಸುವುದಕ್ಕೆ ತಾನಂತೂ ತಯಾರಾಗಿರುವುದಾಗಿಯೂ ತಿಳಿಸುತ್ತಾಳೆ (ಪು. ೪೯). ಇಲ್ಲಿ ನಾವು ರಾಧಿಕೆಯ ನಿರ್ಭೀತ, ಸ್ವತಂತ್ರ ವ್ಯಕ್ತಿತ್ವವನ್ನು ಗುರುತಿಸಬಹುದಾಗಿದೆ. ಅಲ್ಲದೆ ದೇಸಾಯಿಯವರ ಸಾಹಿತ್ಯದ ಪ್ರಮುಖ ಅಂಶವೂ ಕೂಡ ಇದೇ ಆಗಿದೆ.

ಎಲ್ಲಾ ವಿಷಯ ತಿಳಿದ ರಮೇಶನು ರಾಧಿಕೆಯನ್ನು ಕೊಲ್ಹಾಪುರಕ್ಕೆ ಹೋಗಗೊಡುವುದಿಲ್ಲ. ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದ ರಮೇಶ ಮುಂದೆ ಆರು ವರ್ಷಗಳಲ್ಲಿ ಒಂದು ಮನೆಯನ್ನು ಕಟ್ಟಿಸುತ್ತಾನೆ. ಈ ನಡುವೆ ಇವರಿಬ್ಬರ ನಡುವೆ ಮೋಹ ಶುರುವಾಗುತ್ತದೆ. ರಾಧಿಕೆ ತನ್ನನ್ನು ತಾನು ಸಂಪೂರ್ಣವಾಗಿ ರಮೇಶನಿಗೆ ಸಮರ್ಪಿಸಿಕೊಳ್ಳುತ್ತಾಳೆ. ಹೀಗೆ ಇಬ್ಬರೂ ಪ್ರೀತಿಯಿಂದ ಮುಂದುವರಿಯುತ್ತಿರುವಾಗಲೇ ರಮೇಶ ಆ್ಯಕ್ಸಿಡೆಂಟಿನಲ್ಲಿ ತೀರಿಕೊಳ್ಳುತ್ತಾನೆ. ರಮೇಶನೇ ಕಾರು ಹೊಡೀತಿದ್ದು, ವೇಗದಿಂದ ಹೊಡೆಯುವಾಗ ಮುಂದೆ ಅಷ್ಟೇ ಜೋರಿನಿಂದ ಬರುವ ಟ್ರಕ್ಕಿಗೆ ಅವನ ಕಾರು ಢಿಕ್ಕಿ ಹೊಡೆಯುತ್ತದೆ. ಯಾರ ತಪ್ಪೋ ದೇವರೇ ಬಲ್ಲ. ರಮೇಶನ ದೇಹ ಹೊರಗೆ ತೆಗೆಯುವುದು ಮಹಾಕಷ್ಟದ ಕೆಲಸವಾಗುತ್ತದೆ (ಪು. ೫೯). ಇವರಿಬ್ಬರ ಪ್ರೀತಿಯ ಫಲವಾಗಿದ್ದ ಮಗುವೂ ಕೂಡ ರಾಧಿಕೆಯ ಹೊಟ್ಟೆಯಲ್ಲಿಯೇ ಸತ್ತು ಹೋಗಿರುತ್ತದೆ. ಮಗು ಸತ್ತು ಹೋಗಿದ್ದು ಕೂಡ ಒಂದು ರೀತಿಯಲ್ಲಿ ತನ್ನ ಸ್ವಂತ ಮೃತ್ಯುನೇ (ಪು. ೬೦) ಎಂದು ರಾಧಿಕೆ ವ್ಯಕ್ತ ಪಡಿಸುವ ಅಭಿಪ್ರಾಯದಲ್ಲಿ ಅವಳು ಜೀವನದ ಬಗ್ಗೆ ನಿರಾಸಕ್ತಿಯ ಭಾವನೆಯನ್ನು ತಳೆಯುವುದನ್ನು ಕಾಣಬಹುದು.

ತನ್ನ ಗಂಡನನ್ನು ಕಳೆದುಕೊಂಡು ಕೊಲ್ಹಾಪುರಕ್ಕೆ ಹಿಂದಿರುಗಿದ ರಾಧಿಕೆಯನ್ನು ಅಪ್ಪ–ಅವ್ವ ಇಬ್ಬರೂ ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಾರೆ. ಮತ್ತೆ ಶ್ರೀಧರನ ಆಗಮನವಾಗುತ್ತದೆ. ರಾಧಿಕೆ ಸಂಪೂರ್ಣ ಗುಣವಾಗುವವರೆಗೆ ರಾಧಿಕೆಯ ಅಪ್ಪ–ಅವ್ವ, ಅಣ್ಣ–ವಹಿನಿ ಯಾರೂ ಈ ವಿಚಾರವಾಗಿ ಏನೂ ಅನ್ನುವುದಿಲ್ಲ. ಶ್ರೀಧರ ಇರಲಿಲ್ಲವೆಂದರೆ ರಾಧಿಕೆ ಜೀವಂತ ಇರೋದೇ ಶಕ್ಯವಿದ್ದಿಲ್ಲ ಎಂಬ ಅಭಿಪ್ರಾಯ ಎಲ್ಲರದ್ದೂ ಆಗಿರುತ್ತದೆ. ಮುಂದೆ ರಾಧಿಕೆ ಸಂಪೂರ್ಣವಾಗಿ ಗುಣಮುಖವಾದ ನಂತರ ರಾಧಿಕೆಯ ತಂದೆ ಮತ್ತು ಅಣ್ಣ ಶ್ರೀಧರನಿಗೆ ಹಣ ಕೊಟ್ಟು ಸ್ವತಂತ್ರ ದಂಧೆ ಪ್ರಾರಂಭ ಮಾಡುವಂತೆ ಹೇಳುತ್ತಾರೆ. ಇದಕ್ಕೆ ಒಪ್ಪಿದ ಶ್ರೀಧರ ತನ್ನದೇ ಆದ ದಂಧೆಯನ್ನು ಪ್ರಾರಂಭ ಮಾಡುತ್ತಾನೆ. ಈ ಮಧ್ಯೆ ಶ್ರೀಧರನ ಹೆಂಡತಿಯೂ ಬೆಂಕಿ ಹಚ್ಚಿಕೊಂಡು ಸತ್ತು ಹೋಗುತ್ತಾಳೆ. ಶ್ರೀಧರನೇ ಹೇಳುವಂತೆ "ಚಹಾ ಮಾಡಲಿಕ್ಕೆ ಹೋಗಿದ್ದಳು. ಅವಳು ಉಟ್ಟಿದ್ದು ನೈಲೋನ್ ಸೀರೆ, ನಾ ನೋಡಿದಾಗ ಅವಳಿಗೆ ಬೆಂಕಿ ಹತ್ತಿಬಿಟ್ಟಿತ್ತು." "ಮೃತ್ಯು ಹೀಗೆ ಬರಬಾರದು. ಹ್ಯಾಗೆ ಬಂದರೇನು – ಒಂದಿಲ್ಲ ಒಂದು ದಿನ ಮೃತ್ಯು ಬರುವುದೇ! ಅಂತೂ ಅವಳು ಅದೇ ದಿನ ರಾತ್ರಿ ತೀರಿಕೊಳ್ಳುತ್ತಾಳೆ" (ಪು. ೮೨). ಆದರೆ ಇದಕ್ಕೆ ಇವರಿಬ್ಬರ ನಡುವಿನ ಸಂಬಂಧವೇ ಕಾರಣ ಎಂಬ ಮಾತುಗಳು ಕೇಳಿ ಬರುತ್ತವೆ. ಶ್ರೀಧರ ರಾಧಿಕೆಯನ್ನು ಮದುವೆಯಾಗಲು ಬಯಸುತ್ತಾನೆ. 'ರಾಧಾ' ಈ ಮನ್ಯಾಗ ನಿನಗ ಇರಲಿಕ್ಕೆ ಶಕ್ಯದ ಏನು? ಅಥವಾ ಇದನ್ನ ಮಾರಿ ಬ್ಯಾರೇದ ಒಂದು ಕಟ್ತೋಣೇನು?. ಎಂಬ ಶ್ರೀಧರ ಮಾತುಗಳಲ್ಲಿ ಇದನ್ನು ಗುರುತಿಸಬಹುದು. ಆದರೆ ಇದನ್ನು ಖಡಾಖಂಡಿತವಾಗಿ ತಿರಸ್ಕರಿಸಿದ ರಾಧಿಕೆ 'ನಿನ್ನ ಎರಡೂ ಮಕ್ಕಳನ್ನು ನೋಡಿಕೊಳ್ಳುವಂಥ ಸ್ವಲ್ಪ ಪ್ರಬುದ್ಧ ಹುಡುಗೀ ನೋಡಿ ಲಗ್ನಾ ಮಾಡಿಕೊ' ಎಂದು ಶಾಂತವಾಗಿ ನೀಡಿದ ಉಪದೇಶದಿಂದ ರಾಧಿಕೆಯ ದೃಢತೆಯನ್ನು ಗುರುತಿಸಬಹುದಾಗಿದೆ.

ತದ ನಂತರ ಶೀತಲಕುಮಾರರ ಪರಿಚಯದ ಮುಖಾಂತರ ಸಿನಿಮಾ ಕ್ಷೇತ್ರಕ್ಕೆ ಬಂದ ರಾಧಿಕೆಗೆ ಶೀತಲಕುಮಾರರ ಸ್ನೇಹಿತನಾದ ಶೇಖರನ ಪರಿಚಯವಾಗುತ್ತದೆ. ಸ್ವಚ್ಛಂದ

ಪ್ರವೃತ್ತಿಯವನಾದ ಶೇಖರ ರಾಧಿಕೆಯನ್ನು ಮದುವೆಯಾಗುವುದಾಗಿ ನಂಬಿಸುತ್ತಾನೆ. ಅವನ ಮಾತುಗಳನ್ನು ಸಂಪೂರ್ಣವಾಗಿ ನಂಬಿದ ರಾಧಿಕೆ ತನ್ನನ್ನು ಸಂಪೂರ್ಣವಾಗಿ ಆತನಿಗೆ ಸಮರ್ಪಿಸಿಕೊಳ್ಳುತ್ತಾಳೆ. ಇದರ ಪರಿಣಾಮವಾಗಿ ರಾಧಿಕೆ ಗರ್ಭಿಣಿಯಾಗುತ್ತಾಳೆ. ಆದರೆ ಜವಾಬ್ದಾರಿಯಿಂದ ವಿಮುಖನಾಗಲು ಬಯಸಿದ ಶೇಖರ ಅವಳನ್ನು ಕರೆದುಕೊಂಡು ಹೋಗಿ ಮಗುವನ್ನು ತೆಗೆಸಿಕೊಂಡು ಕರೆದುಕೊಂಡು ಬರುತ್ತಾನೆ. ಇದರಿಂದ ನೊಂದ ರಾಧಿಕೆ ಶೇಖರನನ್ನು ಮದುವೆಯಾಗುವ ನಿರ್ಧಾರದಿಂದ ಹಿಂದೆ ಸರಿಯುತ್ತಾಳೆ. ಜೀವನದಲ್ಲಿ ಯಾವುದೇ ಸಮಸ್ಯೆಗಳು ಬಂದಾಗಲೂ ಕೂಡ ರಾಧಿಕೆಯು ಸ್ವತಂತ್ರ ತೀರ್ಮಾನವನ್ನು ತೆಗೆದುಕೊಳ್ಳುವುದನ್ನು ಕಾಣುತ್ತೇವೆ.

ರಾಧಿಕೆಯ ತಂದೆಯಾದ ಭೂಪಾಲರಾಯರು ತನ್ನ ಮಗಳ ಬಗ್ಗೆ ಶೀತಲಕುಮಾರರ ಹತ್ತಿರ ಹೇಳುವ "ಆಕೀ ತಲ್ಯಾಗ ಒಂದು ವಿಷಯ, ಒಂದು ಭಾವನಾ ಬಂದ್ರ ಮುಗದ ಹೋತ ನೋಡ್ರಿ- ಯಾವ ದೇವರು ಬಂದರೂ ಅದನ್ನು ತಗೀಲಿಕ್ಕೆ ಅಥವಾ ಬದಲಿಸಲಿಕ್ಕೆ ಶಕ್ಯಿಲ್ಲ" ಎಂಬ ಮಾತುಗಳು ರಾಧಿಕೆಯ ದೃಢ ನಿರ್ಧಾರದ ವ್ಯಕ್ತಿತ್ವವನ್ನು ಸೂಚಿಸುತ್ತವೆ. ಅಂತೆಯೇ ರಾಧಿಕೆಯೂ ಕೂಡ ತನ್ನ ಗಂಡನನ್ನು ಕಳೆದುಕೊಂಡ ನಂತರ ಹಠ ಮಾಡಿ ಕಾಲೇಜಿಗೆ ಹೋಗಿ ಬಿ.ಎ. ಪದವಿಯನ್ನು ಪಡೆಯುತ್ತಾಳೆ. ತದ ನಂತರ ತಂದೆ ಎಂ.ಎ. ಮಾಡು ಎಂದು ಹೇಳಿದರೆ ಅದಕ್ಕೆ ಒಪ್ಪದೆ ಸಾಲ್ಯಾಗ ಹೋಗಿ ಮಾಸ್ತರಿಣಿ ಆಗ್ತೀನಿ ಎಂದು ಹಠ ಮಾಡುತ್ತಿರುತ್ತಾಳೆ. ಅಂತಿಮವಾಗಿ ಒಂದು ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾಳೆ.

ಅಲ್ಲದೆ ಶೇಖರನಿಂದ ಮೋಸ ಹೋದ ನಂತರ ರಾಧಿಕೆಯು ಹಿಂತಿರುಗಿ ಕೊಲ್ಹಾಪುರಕ್ಕೆ ತೆರಳುವ ತೀರ್ಮಾನಕ್ಕೆ ಬರುತ್ತಾಳೆ. ಆದರೆ ಹಾಗೆ ತೆರಳುವಾಗ ತನಗಾಗಿ ಒಂದು ಮಗು ಬೇಕು ಎಂದು ಹಂಬಲಿಸಿ, ಶೀತರಕುಮಾರ-ಕಮಲಮ್ಮ ದಂಪತಿಗಳ ಮುಖಾಂತರ ಒಂದು ಗಂಡು ಮಗುವನ್ನು ದತ್ತು ತೆಗೆದುಕೊಳ್ಳುತ್ತಾಳೆ. ಗಂಡು ಮಗುವನ್ನೇ ತೆಗೆದುಕೊಳ್ಳಲು ಕಾರಣ ತನ್ನ ಸ್ವಂತ ಮಗನನ್ನು ಕಳೆದುಕೊಂಡಿದ್ದುದು. ಶೀತಲಕುಮಾರರು "ನಿನಗೆ ಬೇಕೆ ಬೇಕಂದ್ರೆ ನಾ ಹೋಗಿ ಬೆಂಗಳೂರೆಲ್ಲಾ ತಿರುವಿ ಹಾಕಿ ತಂದು ಕೊಡಲೇಬೇಕಲ್ಲ... ಗಂಡು ಮಗು ಬೇಕೋ ಹೆಣ್ಣು ಮಗು?" ಎಂದು ಕೇಳಿದಾಗ ರಾಧಿಕೆ ನೀಡುವ ಉತ್ತರ "ನನಗಾಗ ಗಂಡುಮಗು ಆಗಿತ್ತು- ಗಂಡು ಮಗೂನೇ ಬೇಕು" (ಪು. ೧೩೫) ಎಂದು ಹೇಳುವಲ್ಲಿ, ಅಂತೆಯೇ ಮಗುವನ್ನು ಸ್ವೀಕರಿಸುವುದರಲ್ಲಿಯೂ ಅವಳ ಸ್ವತಂತ್ರ ವ್ಯಕ್ತಿತ್ವದ ಪರಿಚಯವಾಗುತ್ತದೆ.

ಶಾಂತಿನಾಥ ದೇಸಾಯಿಯವರ ಇತರ ಕೃತಿಗಳಂತೆ ನಾವು ಇಲ್ಲಿಯೂ ಕೂಡ ತಂದೆ-ಮಕ್ಕಳ ನಡುವೆ ನಡೆಯುವ ಭಾವನಾತ್ಮಕ ಸಂಘರ್ಷವನ್ನು ಗುರುತಿಸಬಹುದಾಗಿದೆ. ರಾಧಿಕೆಯು ವಿಧವೆಯಾಗಿ ಮನೆಗೆ ಹಿಂದಿರುಗಿದ ನಂತರ ಅವಳ ಸಂಪೂರ್ಣ ಜವಾಬ್ದಾರಿ ಭೂಪಾಲರಾಯರದ್ದಾಗಿರುತ್ತದೆ. ಆದರೆ ಅವರು ಹೇಳಿದಂತಹ ಬದುಕಿನ ತೀರ್ಮಾನವನ್ನು ರಾಧಿಕೆ ತೆಗೆದುಕೊಳ್ಳುವುದಿಲ್ಲ. ಇಬ್ಬರ ವಿಚಾರಗಳಲ್ಲೂ ಸಾಕಷ್ಟು ಭಿನ್ನಾಭಿಪ್ರಾಯಗಳಿರುತ್ತವೆ. ರಾಧಿಕೆಯು ವಿಧವೆಯಾಗಿ ಮನೆ ಸೇರಿದ ನಂತರ ಅವಳ ಹಠದಂತೆಯೇ ಅವಳನ್ನು ಬಿ.ಎ. ಓದಿಸುತ್ತಾರೆ. ಆದರೆ ಮುಂದೆ ತಂದೆಯು ಎಂ.ಎ. ಮಾಡು ಎಂದು ಹೇಳಿದರೆ, ಅವಳು

ಶಾಲೆಯಲ್ಲಿ ಶಿಕ್ಷಕಿಯಾಗುವ ಬಯಕೆಯನ್ನು ವ್ಯಕ್ತಪಡಿಸುತ್ತಾಳೆ. ಆದರೆ ಅವಳ ತಂದೆಗೆ ಇದರ ಅಗತ್ಯ ಕಂಡು ಬರುವುದಿಲ್ಲ. ಅವಳು ನೋಕರಿ ಮಾಡಿ ಹಣಗಳಿಸಬೇಕಾದ ಅನಿವಾರ್ಯತೆ ಅವರಿಗೆ ಕಂಡುಬರುವುದಿಲ್ಲ. ವ್ಯವಹಾರದ ಮನುಷ್ಯನಾದ ರಾಧಿಕೆಯ ತಂದೆಗೆ ರಾಧಿಕಾಳಿಗೆ ಸಾಕಷ್ಟು ಹಣವಿರುವುದರಿಂದ ಅವಳು ಕೆಲಸಕ್ಕೆ ಹೋಗಬೇಕಾದ ಅನಿವಾರ್ಯತೆ ಕಂಡುಬರುವುದಿಲ್ಲ.

ಆದರೆ ರಾಧಿಕೆಯ ಪ್ರಕಾರ ಸುಖದ ಬಗೆಗಿನ ಅವಳ ಕಲ್ಪನೆಯೇ ಬೇರೆ. ಅವರ ತಂದೆಯ ಕಲ್ಪನೆಯೇ ಬೇರೆ. ಇದನ್ನು ರಾಧಿಕೆಯು ತನ್ನ ತಂದೆಗೆ ಹೇಳುವ "ನಿಮ್ಮ ಸುಖದ ಕಲ್ಪನೆ ಬೇರೆ ನನ್ನ ಸುಖದ ಕಲ್ಪನೆ ಬ್ಯಾರೆ. ಸುಖ ಅಂತ ಸುಖ! ಮುಗೀತಲ್ಲ. ನೀವು ನನಗೆ ಕೊಟ್ಟ ಸುಖದ ಸಂಸಾರ, ಗಂಡ ಸತ್ತ, ಮಗು ಸತ್ತಿತು. ಅದರ ಕೂಡ ನಿಮ್ಮ ಸುಖದ ಕಲ್ಪನಾನೂ ಸತ್ತಿತು (ಪು. ೨೬) ಎಂದು ಹೇಳುವ ಮಾತುಗಳು ಅವರಿಬ್ಬರ ನಡುವಿನ ತಾತ್ವಿಕ ಸಂಘರ್ಷವನ್ನು ಸೂಚಿಸುತ್ತವೆ.

ಅಲ್ಲದೆ ತನ್ನ ಮನೆಯ ಕೆಲಸದಾಕೆಯೊಂದಿಗೆ ತನ್ನನ್ನು ತಾನು ಹೋಲಿಸಿಕೊಳ್ಳುವ ರಾಧಿಕೆ "ಮನೆಯ ಕೆಲಸದಾಕೆಯನ್ನು ನೋಡು, ಅವಳು ದಿನಾ ಬಂದು ನಿರ್ವಿಕಾರವಾಗಿ ಕೆಲಸವನ್ನು ಮುಗಿಸಿ ಹೋಗುತ್ತಾಳೆ. ನಾವು ಮಾತ್ರ ಸದಾ ಕೆಲಸಿಲ್ಲದೆ ಬೊಗಸಿಲ್ಲದೆ, ನಿರ್ಜೀವವಾಗಿ ಜೀವನಾ ಹೊದ್ದುಕೊಂಡು ಮಲಗಿಬಿಡ್ತೀವಿ. ಅಪ್ಪಾ, ನನಗಂತೂ ಬಾಳ ಬ್ಯಾಸರ ಬಂದಿದೆ. ಎಲ್ಲಾದರೂ ಓಡಿಹೋಗಬೇಕಂತ ಅನಿಸ್ಯದ–ತಿರುಕಳಾಗಿ ಜಗತ್ತಿನ ತುಂಬ ತಿರುಗಿ ಬರಬೇಕಂತನಿಸ್ತದ" ಎಂದು ಹೇಳುವಲ್ಲಿ ರಾಧಿಕೆ ಪಲಾಯನವಾದಿಯಾದಳೇನೋ ಎಂದು ಕ್ಷಣಕಾಲ ಭಾಸವಾಗುತ್ತದೆ. ಆದರೆ ಮುಂದುವರಿದು "ಅಪ್ಪಾ ನನ್ನ ದಾರೀ ನಾ ನೋಡಿಕೋತೀನಿ, ಉಳಿದವರಿಗೆ ಯಾಕೆ ಅದರ ತೊಂದರೆ" ಎಂದು ಹೇಳುವಲ್ಲಿ ಅವಳ ದೃಢ ತೀರ್ಮಾನವನ್ನು ಗುರುತಿಸಬಹುದು. ಅಲ್ಲದೆ ತನ್ನ ತಂದೆಯೊಂದಿಗೆ ಮಾತನಾಡುವಾಗ ಆಕೆ ಒಂದು ರೀತಿಯ ವಿಚಿತ್ರ ಆವೇಶದಿಂದ ಉರಿಯುತ್ತಿದ್ದುದು ಕಂಡು ಬರುತ್ತದೆ (ಪು. ೨೮). ತಂದೆಯ ಬಹುತೇಕ ತೀರ್ಮಾನವನ್ನು ಖಂಡಿಸುತ್ತಿರುತ್ತಾಳೆ. ಹೀಗಾಗಿ ಅಪ್ಪ–ಮಕ್ಕಳ ನಡುವೆ ಕೊನೆಯಲ್ಲಿ ಸಂಘರ್ಷದ ವಾತಾವರಣವಿರುತ್ತದೆ. ಆದರೂ ಕೂಡ ರಾಧಿಕೆಯು ಇವೆಲ್ಲವನ್ನು ಸಹಿಸುತ್ತಾಳೆ. ಅಲ್ಲದೇ ತನ್ನ ಮನಸ್ಸಿಗೆ ಸರಿಯನಿಸಿದ್ದನ್ನು ತಕ್ಷಣವೇ ಮಾಡುತ್ತಿದ್ದಳು. ಅವಳು ಅವಳ ತಂದೆಯಿದ್ದಾಗಲೇ ಸ್ವತಂತ್ರವಾಗಿ, ಶಕ್ಯವಾಗಿದ್ದಳು. ತನ್ನ ತಂದೆಯ ಮರಣದ ನಂತರ ಅವಳು ನಿರಾಧಾರಳಾಗಿರುತ್ತಾಳೆ. ಎಲ್ಲರ ಜವಾಬ್ದಾರಿಯನ್ನೂ ಆಕೆಯೇ ನಿಭಾಯಿಸುತ್ತಾಳೆ.

ರಾಧಿಕೆ ಎಷ್ಟೇ ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿದ್ದರೂ ಕೂಡ ತನ್ನ ತಂದೆಯ ಮಾತುಗಳನ್ನು ಧಿಕ್ಕರಿಸುವುದಿಲ್ಲ. ತನ್ನ ತಂದೆಯ ಇಷ್ಟದಂತೆಯೇ ಅವರೇ ನೋಡಿದ ಹುಡುಗನನ್ನು ಮದುವೆಯಾಗುತ್ತಾಳೆ. ಆದರೆ ಅವಳ ತಂಗಿಯಾದ ತ್ರಿಶಲೆ ಇದಕ್ಕೆ ವಿರುದ್ಧವಾಗಿರುತ್ತಾಳೆ. ಕಾಲೇಜಿಗೆ ಹೋಗಲು ಪ್ರಾರಂಭಿಸಿದಾಗ ಮರಾಠಿ ಹುಡುಗ ತೋಫಖಾನೆಯವರ ಧೋಂಡಿರಾಮನನ್ನು ಪ್ರೀತಿಸಿ ಮನೆ ಬಿಟ್ಟು ಹೊರಟು ಹೋಗುತ್ತಾಳೆ. ಇಲ್ಲಿ ಅವಳ ಹಾದಿ ಸರಳವಾಗಿರುತ್ತದೆ. ಆದರೆ ರಾಧಿಕೆ ಅಪ್ಪನ ಮನಸ್ಸಿನಂತೆಯೇ ನಡೆಯಲು ಪ್ರಯತ್ನಿಸಿ ಆಘಾತಗಳ ಮೇಲೆ ಆಘಾತಗಳನ್ನು

ಎದುರಿಸುತ್ತಾಳೆ. ಅಂತಿಮವಾಗಿ ತ್ರಿಶಲೆ ಧೋಂಡಿರಾಮನೊಂದಿಗೆ, ಆತನ ಕುಟುಂಬದವರೊಂದಿಗೆ ಹೊಂದಿಕೊಳ್ಳಲಾಗದೇ ತವರಿಗೆ ಹಿಂದಿರುಗುತ್ತಾಳೆ. ಧೋಂಡಿರಾಮನೊಂದಿಗೆ ಹೊಂದಿಕೊಳ್ಳಲಾಗದೆ ಹೋಗುವುದು, ಅವಳು ತನ್ನ ಆಹಾರ ಪದ್ಧತಿ ಮತ್ತು ಧಾರ್ಮಿಕ ಪದ್ಧತಿಗಳ ನಡುವೆ ಹೊಂದಾಣಿಕೆ ಮಾಡಿಕೊಳ್ಳದೇ ಇರುವುದನ್ನು ಇಲ್ಲಿ ಗುರುತಿಸಬಹುದು. ಪ್ರೇಮದ ಉನ್ಮಾದ, ಪ್ರೇಮ ವೈಫಲ್ಯ ಮತ್ತು ಧಾರ್ಮಿಕ ಸಂಘರ್ಷಗಳನ್ನು ಇಲ್ಲಿ ಕಾಣುತ್ತೇವೆ. ಹೀಗೆ ರಾಧಿಕೆ ತನ್ನ ಜೀವನದ ಎಲ್ಲಾ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಿ ಅವುಗಳಿಗೆಲ್ಲಾ ಒಂದು ಪರಿಹಾರವನ್ನು ಕಂಡು ಕೊಳ್ಳುವಲ್ಲಿ ಕೆಲವೊಮ್ಮೆ ದ್ವಂದ್ವಕ್ಕೆ ಗುರಿಯಾದರೂ, ಅಂತಿಮವಾಗಿ ತನಗೆ ಸರಿ ಕಂಡಿದ್ದನ್ನು ಮಾಡುವ ಸ್ವತಂತ್ರ ವ್ಯಕ್ತಿತ್ವದವಳಂತೆ ಕಂಡು ಬರುತ್ತಾಳೆ.

ಈ ಕಾದಂಬರಿಯಲ್ಲಿ ಬರುವ ಪುರುಷ ಪಾತ್ರಗಳು ಅಂತಿಮದವರೆಗೂ ದ್ವಂದ್ವ ವ್ಯಕ್ತಿತ್ವಗಳಾಗಿಯೇ ಕಂಡು ಬರುತ್ತವೆ. ಶೀತಲಕುಮಾರನಾಗಲಿ, ಪ್ರೊ. ಪೊಮ್ಮಣ್ಣನಾಗಲೀ, ಶ್ರೀಧರನಾಗಲೀ, ಶೇಖರನಾಗಲೀ ಒಂದೇ ಖಚಿತ ನಿಲುವಿಗೆ ಬದ್ಧರಾಗಿರುವುದು ಕಂಡು ಬರುವುದಿಲ್ಲ. ಶೀತಲಕುಮಾರ ಒಬ್ಬ ಬರಹಗಾರನಾಗಿದ್ದು ಪೊಮ್ಮಣ್ಣನ ಸ್ನೇಹಿತನಾಗಿರುತ್ತಾರೆ. ಪ್ರೊ. ಪೊಮ್ಮಣ್ಣನವರ ಆಹ್ವಾನದ ಮೇರೆಗೆ ಕೊಲ್ಹಾಪುರಕ್ಕೆ ಬಂದ ಅವರಿಗೆ ಅಲ್ಲಿ ರಾಧಿಕೆಯ ಪರಿಚಯವಾಗುತ್ತದೆ. ರಾಧಿಕೆ ಸಾಹಿತ್ಯದ ಅಭಿಮಾನಿಯಾಗಿದ್ದರಿಂದ ಇಬ್ಬರ ನಡುವೆಯೂ ಸ್ನೇಹ ಬೆಳೆಯುತ್ತದೆ. ರಾಧಿಕೆಯನ್ನು ಭೇಟಿಯಾದ ಹೊಸದರಲ್ಲಿ ಶೀತಲಕುಮಾರ್ ದೈಹಿಕವಾಗಿಯೂ ಅವಳತ್ತ ಆಕರ್ಷಿತನಾಗುತ್ತಾನೆ. ಆದರೆ ಈ ಆಕರ್ಷಣೆಯ ಸ್ವರೂಪ ಅಸ್ಪಷ್ಟವಾಗಿರುತ್ತದೆ. ರಾಧಿಕೆ ರಹಸ್ಯಮಯವಾದ ವ್ಯಕ್ತಿಯಾಗಿದ್ದರಿಂದಲೇ ಶೀತಲಕುಮಾರರಿಗೆ ಅವಳಲ್ಲಿ ಆಸ್ಥೆ, ಪ್ರೀತಿ ಕೂಡ. ಆದರೆ ರಾಧಿಕ ತನಗೆ ವಿರಾಮ ದೊರೆತಾಗಲೆಲ್ಲಾ ತನ್ನ ಗತ ಜೀವನದ ಬಗ್ಗೆ ಶೀತಲಕುಮಾರನೊಂದಿಗೆ ಹಂಚಿಕೊಳ್ಳುತ್ತಾ ತನ್ನ ಎಲ್ಲಾ ಸಂಬಂಧಗಳ ಮೇಲೂ ಮಾನಸಿಕ ಪ್ರಭುತ್ವ ದೊರಕಿಸಿಕೊಳ್ಳುತ್ತಾಳೆ.

ಶೀತಲಕುಮಾರ್ ಪ್ರೈಮರಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿದ್ದ ಕಮಲ ಎಂಬುವವರನ್ನು ಮದುವೆಯಾಗಿರುತ್ತಾನೆ. ಶೀತಲ ಕುಮಾರನೇ ಪ್ರಾರಂಭದಲ್ಲಿ ಹೇಳುವಂತೆ ಅವರಿಬ್ಬರ ನಡುವಿನ ಸಂಬಂಧ ಕೇವಲ 'ಕಂಪ್ಯಾನಿಯನ್‌ಶಿಪ್' – ಸಹವಾಸದ ಸಲುವಾಗಿ ಮದಿವೀ (ಪು. ೧೨). ಆದರೆ ಶೀತಲಕುಮಾರ–ರಾಧಿಕೆಯ ನಡುವಿನ ಸ್ನೇಹ ಬೆಳೆದಂತೆ, ರಾಧಿಕಾ ಸಿನಿಮಾದಲ್ಲಿ ನಟಿಸುವ ಸಲುವಾಗಿ ಬೆಂಗಳೂರಿಗೆ ಬಂದು ತನ್ನ ಮನೆಯಲ್ಲಿಯೇ ಉಳಿದುಕೊಂಡಾಗ ಈ ಸಂಬಂಧದಲ್ಲಿ ತೊಡಕು ಉಂಟಾಗುತ್ತದೆ. ಶೇಖರ–ರಾಧಿಕಾರ ನಡುವಿನ ಸಂಬಂಧ ಬೆಳೆದಂತೆ ಈ ಸಂಬಂಧದ ಬಗ್ಗೆ ಶೀತಲಕುಮಾರನಲ್ಲಿ ಒಂದು ರೀತಿಯ ಅಸಹನೆ, ಅಸೂಯೆ ಹುಟ್ಟಿಕೊಳ್ಳುತ್ತದೆ. ಶೀತಲಕುಮಾರ ರಾಧಿಕೆಗೆ ಹೇಳುವ "ಶೇಖರನಲ್ಲಿ ನೀನು ಅಷ್ಟೊಂದು ಆಸ್ಥೆ ತೋರಿಸಬಾರದು ಎಂದೆನಿಸುವುದು" ಮತ್ತು "ನೀನು ನನ್ನವಳು, ರಾಧಾ ನನ್ನವಳು, ಅಂದರೆ ದೈಹಿಕ ದೃಷ್ಟಿಯಿಂದಲ್ಲಾ" (ಪು. ೧೦೯) ಎಂದು ಹೇಳುವಲ್ಲಿ ಇದನ್ನು ಗುರುತಿಸಬಹುದು.

ಅಲ್ಲದೆ ರಾಧಿಕ ಬೆಂಗಳೂರಿಗೆ ಬಂದ ನಂತರ ಅವಳ ಸಂಪೂರ್ಣ ಜವಾಬ್ದಾರಿ ಶೀತಲಕುಮಾರನ ಮೇಲೆಯೇ ಇರುತ್ತದೆ. ಇದರಿಂದಾಗಿ ಶೇಖರನ ಪ್ರವೃತ್ತಿಗೆ ಪ್ರತಿಕ್ರಿಯೆ ನೀಡಲು,

ರಾಧಿಕೆಯ ಮೇಲೆ ಬೆಂಗಳೂರಿನಲ್ಲಿ ಏನಾದರೂ ಸಂಕಟ ಬಂದರೆ ಅವಳನ್ನು ರಕ್ಷಿಸಬೇಕಾಗುತ್ತದೆ. ಇದಕ್ಕಾಗಿ ತನ್ನ ನೈತಿಕತೆಯನ್ನು ಶುದ್ಧವಾಗಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅಲ್ಲದೆ ಜವಾಬ್ದಾರಿಯ ಹೊರೆ ಆತನನ್ನು ರಾಧಿಕೆಯ ತಂದೆಯ ಸ್ಥಾನದಲ್ಲಿ ಇರಿಸುವುದನ್ನು ಗಮನಿಸಬಹುದಾಗಿದೆ. ಅಲ್ಲದೆ ಈ ವಿಚಾರವಾಗಿ ಶೀತಲಕುಮಾರನ ಮನಸ್ಸಿನಲ್ಲಿ ತುಮುಲಗಳು, ಗೊಂದಲಗಳು ಮೂಡುವುದನ್ನು ಗಮನಿಸಬಹುದು.

ರಾಧಿಕೆ ಶೇಖರನೊಂದಿಗೆ ನಂದಿಹಿಲ್ಸ್, ರಂಗನತಿಟ್ಟುಗಳಿಗೆ ಹೋದ ನಂತರ ಶೀತಲಕುಮಾರನಿಗೆ ರಾಧಿಕೆಯಿಲ್ಲದ ಮನೆ ಭಣಭಣವೆನಿಸತೊಡಗುತ್ತದೆ. ನನಗೊಬ್ಬ ಮಗಳಿದ್ದರೆ ಎಂಬ ಹಪಾಹಪಿ ಆತನಲ್ಲಿ ಮೂಡುತ್ತದೆ. ಇದೇ ಹಿನ್ನೆಲೆಯಲ್ಲಿ ಆತ ತನ್ನ ಹೆಂಡತಿಯಾದ ಕಮಲಳನ್ನು ನೋಡಿಕೊಳ್ಳುವ ದೃಷ್ಟಿಯಲ್ಲಿ ಗುಣಾತ್ಮಕ ಬದಲಾವಣೆಗಳಾಗಿರುವುದನ್ನು ಗಮನಿಸುತ್ತಾನೆ. ಮೊದ ಮೊದಲು ಅಡಿಗೆಯವಳು, ನರ್ಸ್ ಹೆಚ್ಚೆಂದರೆ ಗೆಳತಿಯಾಗಿ ಕಂಡವಳು ಈಗ ಅವನ ಬರವಣಿಗೆಗೆ ಸಕ್ರಿಯವಾಗಿ ಸ್ಪಂದಿಸುವ 'ಸಹಧರ್ಮಿಣಿ'ಯಾಗಿ ಪರಿವರ್ತನೆಗೊಳ್ಳುತ್ತಾಳೆ.

ಶ್ರೀಧರ ಪ್ರಾರಂಭದಲ್ಲಿ ರಾಧಿಕೆಯನ್ನು ಮನಸಾರೆ ಇಷ್ಟಪಟ್ಟಿದ್ದರೂ ಕೂಡ ಪರಿಸ್ಥಿತಿಯನ್ನು ಎದುರಿಸಲಾರದೆ ತನ್ನ ಕಾಕ ತೋರಿಸಿದ ಹುಡುಗಿಯನ್ನು ಮದುವೆಯಾಗುತ್ತಾನೆ. ತನಗೆ ರಾಧಿಕೆಯನು ಮದುವೆ ಮಾಡದೇ ಇರಲು ಕಾರಣ ತಾನು ಲಕ್ಷಾಧೀಶನಲ್ಲ ಎಂಬ ಭಾವನೆ ಆತನಲ್ಲಿರುತ್ತದೆ. ಹೀಗಾಗಿ ಕಾಂಟ್ರ್ಯಾಕ್ಟ ದಂಧೆಯ ಬಗ್ಗೆ, ಅದರ ಸೂಕ್ಷ್ಮತೆಗಳ ಬಗ್ಗೆ ಸಾಕಷ್ಟು ಕಲಿತಿರುವುದಾಗಿ, ತಾನೂ ಕೂಡ ಲಕ್ಷಾಧೀಶನಾಗುವ ಬಗ್ಗೆ ರಾಧಿಕೆಗೆ ಬರೆದ ಪತ್ರದಲ್ಲಿ ತಿಳಿಸುತ್ತಾನೆ. ರಾಧಿಕೆ ತನ್ನ ಜೀವನಕ್ಕೆ ದೊಡ್ಡ ಸ್ಫೂರ್ತಿ, ತನ್ನಲ್ಲಿ ಆತ್ಮವಿಶ್ವಾಸದ ಭಾವನೆಯನ್ನು ತುಂಬಿದವಳು. ತಾನು ಸಮಾಜದಲ್ಲಿ ಗಳಿಸಿದ ಸ್ಥಾನ–ಮಾನಗಳೆಲ್ಲವೂ ಕೂಡ ಅವಳಿಂದಲೇ ಎಂಬ ಭಾವನೆ ಇದ್ದರೂ ಕೂಡ ಅವಳನ್ನು ಮದುವೆಯಾಗುವ ವಿಚಾರದಲ್ಲಿ ಮಾತ್ರ ದುರ್ಬಲ ಮನಸ್ಸಿನವನಾಗುತ್ತಾನೆ. ದುಡ್ಡಿನ ಆಮಿಷಕ್ಕಾಗಿ ಬೇರೆ ಹುಡುಗಿಯನ್ನು ಮದುವೆಯಾಗುವ ಮೂಲಕ ಅವನು ಒಬ್ಬ ಪಲಾಯನವಾದಿಯಂತೆ ಕಂಡು ಬರುತ್ತಾನೆ. ರಾಧಿಕೆ ವಿಧವೆಯಾದ ನಂತರ ಅವಳನ್ನು ಮರು ಮದುವೆಯಾಗಲು ಬಯಸುತ್ತಾನೆ. ಆದರೆ ಆಕಸ್ಮಿಕವಾಗಿ ಆತನ ಹೆಂಡತಿ ಚಂದ್ರಾ ಬೆಂಕಿ ಹಚ್ಚಿಕೊಂಡು ಮರಣ ಹೊಂದಿದ ನಂತರ ಆತ ರಾಧಿಕೆಯನ್ನು ಮದುವೆಯಾಗಲು ಬಯಸುವುದಿಲ್ಲ. ಬದಲಾಗಿ "ನಮ್ಮ ಪ್ರೀತಿ ಹಾಂಗೇ ಇರಲಿ–ಲಗ್ನಾ ಬ್ಯಾಡ ಅಂತ" ಎಂದು ರಾಧಿಕೆಗೆ ಸ್ಪಷ್ಟವಾಗಿ ಹೇಳುವಲ್ಲಿ ಆತ ಕೇವಲ ರಾಧಿಕೆಯ ಪ್ರೀತಿಗಾಗಿ ಹಂಬಲಿಸುವುದನ್ನು ಗುರುತಿಸಬಹುದು.

ಶೇಖರನೂ ಕೂಡ ತನ್ನ ಫಿಲ್ಮಿನ ಸಲುವಾಗಿ ರಾಧಿಕೆಯನ್ನು ನೋಡಿದಾಗ ಆಕೆಯನ್ನು ಇಷ್ಟ ಪಡುತ್ತಾನೆ. ಆದರೆ ಆತನದು ನೀತಿ– ಅನೀತಿಗಳನ್ನು ಮೀರಿದ ವ್ಯಕ್ತಿತ್ವ ವೈದ್ಯರ ಮಗನಾಗಿದ್ದ ಆತನಿಗೆ ತಾಯಿಯೆಂದರೆ ದೇವರು. ಅಲ್ಲದೆ ಆತ ಮೊದಲಿನಿಂದಲೂ ಕ್ರಾಂತಿಕಾರಿ. ಸೈನ್ಸ್ ಎಂದರೆ ಒಣ ವಿಷಯ ಎಂದುಕೊಂಡು ಆರ್ಟ್ಸ್ ತೆಗೆದುಕೊಂಡು ಬಿ.ಎ. ಪಾಸಾಗಿರುತ್ತಾನೆ. ತಂದೆಯ ಮರಣದ ನಂತರ ಹಣ ಕೈಗೆ ಬರುವುದೇ ತಡ, ಫಿಲ್ಮ್ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ.

ಪ್ರಾರಂಭದಲ್ಲಿ ರಾಧಿಕೆಯನ್ನು ಇಷ್ಟಪಟ್ಟಿದ್ದ ಶೇಖರ್ ಅವಳೊಂದಿಗೆ ವಿವಾಹವಾಗಲು ತೀರ್ಮಾನಿಸಿರುತ್ತಾನೆ. ಇದಕ್ಕೆ ರಾಧಿಕೆಯೂ ಕೂಡ ತನ್ನ ಸಹಮತವನ್ನು ನೀಡಿರುತ್ತಾಳೆ. ಆದರೆ ರಾಧಿಕೆಗೆ ನಿಧಾನವಾಗಿ ಶೇಖರನ ವ್ಯಕ್ತಿತ್ವದ ಪರಿಚಯವಾಗುತ್ತದೆ. ಇದರಿಂದಾಗಿ ಆತನ ಆಕರ್ಷಣೆಯನ್ನು ಮೀರಿ ಅತನನ್ನು ಮದುವೆಯಾಗುವ ನಿರ್ಧಾರದಿಂದ ಹಿಂದೆ ಸರಿಯುತ್ತಾಳೆ. ಆದರೆ ಅವಳ ಈ ನಿರ್ಧಾರ ಶೇಖರನಿಗೆ ಆಘಾತವನ್ನುಂಟು ಮಾಡುತ್ತದೆ. ಅವನು ಸಿಟ್ಟಿನಿಂದ ಶೀತಲಕುಮಾರನೊಂದಿಗೆ ಹೇಳಿದ "ಶೀ ಇಜ್ ಅ ಬಿಚ್। ಬಿಚ್ ಕಣಯ್ಯಾ ಅವಳು। ನನ್ನ ಮೂಗಿಗೆ ತುಪ್ಪ ಹಚ್ಚಿ ನನ್ನನ್ನು ಫೂಲ್ ಮಾಡಿ" ಮತ್ತು "ಖರೆ ಹೇಳಲೇನು? ನಾನು ಅವಳನ್ನು ಉಪಯೋಗಿಸುವುದಕ್ಕಿಂತ ಅವಳೇ ನನ್ನನ್ನು ಉಪಯೋಗಿಸಿದ್ದಾಳೆ" (ಪು. ೧೩೮) ಎಂಬ ಮಾತುಗಳಿಂದ ಇದು ವ್ಯಕ್ತವಾಗುತ್ತದೆ. ಆದರೆ ಅದೇ ಸಮಯದಲ್ಲಿ ಶೀತಲಕುಮಾರ್ ಹೇಳುವ "ಶೇಖರ ಖರೆ ಹೇಳು, ಈಗ ಸದ್ಯ ನಿನಗೆ– ಅವಳು ನಿನ್ನ ಬಿಟ್ಟಿದ್ದರಿಂದ ನಿನಗೆ ಸ್ವಲ್ಪ ಒಳಗೊಳಗೆ ಖುಷಿಯಾಗೇದ ಹೌದಲ್ಲೋ–ಖುಷಿ ಅನ್ನೋದಕ್ಕಿಂತ ಸ್ವಲ್ಪ ರಿಲೀಫ್ ಸ್ವಲ್ಪ ಹಾಯೆನಿಸಿದೆಯೋ ಇಲ್ಲೋ". "ನೀನು ಯಾರನ್ನೂ ಪ್ರೀತಿಸೋದು ಶಕ್ಯವಿಲ್ಲ" ಎಂಬ ಮಾತುಗಳು ಶೇಖರನ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ತೆರೆದಿಡುತ್ತವೆ ಎಂದು ಹೇಳಬಹುದು.

ದೇಸಾಯರ ಉಳಿದ ಕಾದಂಬರಿಗಳಂತೆ ನಾವು ಇಲ್ಲಿಯೂ ಕೂಡ ಧಾರ್ಮಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ. ಜೈನ ಹುಡುಗಿ ತ್ರಿಶಲಾ ಮರಾಠ ಹುಡುಗ ತೋಫಖಾನೆಯ ಧೋಂಡಿರಾಮನನ್ನು ಪ್ರೀತಿಸಿ ಮದುವೆಯಾಗುತ್ತಾಳೆ. ಆದರೆ ತ್ರಿಶಲಾಗೆ ಅಲ್ಲಿ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ರಾಧಿಕೆ ಶೀತಲಕುಮಾರರಿಗೆ ಬರೆದ ಪತ್ರದ ಮೂಲಕ ನಾವು ಇದನ್ನು ಗುರುತಿಸಬಹುದು. "ಮನೀ ಒಳಗಾದರೂ ಎಲ್ಲಿದೆ ಸುಖ? ಮಟನ್ ಮಾಡಿದ ದಿನ ತ್ರಿಶಲಾ ಅಟ್ಟ ಬಿಟ್ಟು ಕೆಳಗಿಳಿಯುವುದಿಲ್ಲವಂತೆ. ಆಗ ಅತ್ತೆಗೆ ಭಯಂಕರ ಸಿಟ್ಟು ಬರುವುದಂತೆ. ಒಂದು ದಿನ ರಾತ್ರಿ ಗಂಡ ಧೋಂಡೂ ಮನೆಗೆ ಬರಲಿಲ್ಲವಂತೆ. ತ್ರಿಶಲಾ ಪಾಪ, ಮಾರನೇ ದಿನ ಸಿಟ್ಟು ಸೆಡವು ತೋರಿಸಿದರೆ ಅವಳ ಅತ್ತೆಗೆ ಸಿಟ್ಟು ಬಂತಂತೆ. 'ಗಂಡ ಅಂದರೆ ನಿನ್ನ ಕೈಯಾಗಿನ ಗೊಂಬಿಯೇನು? ನಾವು ಗಂಡಂದಿರು ನಾಲ್ಕು ನಾಲ್ಕು ದಿನ ಬರದಿದ್ರೂ ಪಿಟಕ್ಕಂತಿದ್ದಿಲ್ಲ. ಗಂಡಸರು ಬ್ಯಾಟೀಗೆ ಹೋಗ್ತಾರ. ವಸೂಲಿಗೆ ಹೋಗ್ತಾರ, ದಂಧೇಕ್ಕ ಹೋಗ್ತಾರ. ಅವರ ಜಗತ್ತೇ ಬ್ಯಾರೆ. ನಮ್ಮ ಹೆಣ್ಣು ಮಕ್ಕಳ ಜಗತ್ತೆ ಬ್ಯಾರೆ. ಈ ಜೈನರ ಹುಡಿಗೇರು ಬಾಳ ನರಮ್ ಮಂದಿ–ಯಾವ ಉಸಾಬರಿಯಿಲ್ಲದೆ ಥಣ್ಣಗ ಜೀವನಾ ಮಾಡತಾವ ಅಂತ ಧೋಂಡೂನ ಜಿಗದಾಟಕ್ಕೆ ನಾ ಹೂ ಅಂದೆ. ಆದರೆ ಈ ಹುಡುಗಿ ಅಂದರ ತೀರ ಲಂಡನ್ನಿನ್ಯಾಗಿಂದ ಸೀದಾ ಇಲ್ಲೇ ಇಳಿದಾಂಗ ಮಾಡ್ತಾಳ' (ಪು. ೮೫) ಎಂಬ ಮಾತುಗಳು ಕೇವಲ ಅತ್ತೆ–ಸೊಸೆ ನಡುವಿನ ಸಂಘರ್ಷವನ್ನು ಮಾತ್ರವಲ್ಲದೆ ಧಾರ್ಮಿಕ ಸಂಘರ್ಷವನ್ನು ಎತ್ತಿ ತೋರುತ್ತಿರುವಂತೆ ಕಂಡುಬರುತ್ತದೆ.

ಒಟ್ಟಾರೆಯಾಗಿ "ಎಲ್ಲಾ ಸಂಬಂಧಗಳಲ್ಲಿಯೂ ಉಪಯುಕ್ತತೆ, ಹಾನಿಕಾರಕತೆ ಇವು ಇದ್ದೇ ಇರ್ತಾವೆ... ಒಂದು ಸಂಬಂಧ ಅಂದರೆ ಒಂದು ಸಂಕೀರ್ಣ ಪ್ರಕ್ರಿಯೆ" ಎಂದು ಶೀತಲಕುಮಾರ ಹೇಳುವ ತಿಳುವಳಿಕೆಯ ಮಾತುಗಳು ಹೆಚ್ಚು ಮಹತ್ವಪೂರ್ಣ ಎನಿಸುತ್ತವೆ. ಶೀತಲಕುಮಾರ–

ರಾಧಿಕಾ ಸಂಬಂಧ ಇಬ್ಬರಿಗೂ ಫಲದಾಯಕವೆನಿಸಿದರೂ ರಾಧಿಕಾ-ಶ್ರೀಧರರ ಸಂಬಂಧದ ಬಗ್ಗೆ ಮತ್ತು ರಾಧಿಕಾ-ಶೇಖರರ ಬಗ್ಗೆ ಹೇಳಲು ಬರುವುದಿಲ್ಲ. ಏಕೆಂದರೆ ಇವರಿಬ್ಬರಲ್ಲಿ ಯಾರು – ಯಾರನ್ನು ಹೆಚ್ಚು ಉಪಯೋಗಿಸಿಕೊಂಡರು ಎಂದು ನಿರ್ಧರಿಸುವುದು ಕಠಿಣ. ಒಟ್ಟಾರೆಯಾಗಿ 'ಸಂಬಂಧ'ಗಳಲ್ಲಿ ಯಾವುದನ್ನು ಕೂಡ ಹಾಗೆಯೇ, ಇಷ್ಟೆಯೇ ಎಂದು ನಿರ್ಧರಿಸುವುದು ಕಷ್ಟವಾಗುತ್ತದೆ.

'ಸಂಬಂಧ' ಕಾದಂಬರಿಯ ಮೂಲಕ ದೇಸಾಯಿಯವರು ತಮ್ಮ ಬದುಕನ್ನು ಕಟ್ಟಿಕೊಡುವ ಪ್ರಯತ್ನವನ್ನು ನಡೆಸಿರುವಂತೆ ಭಾಸವಾಗುತ್ತದೆ. ಲೇಖಕರು ಪೊಮ್ಮಣ್ಣನ ಮೂಲಕ ಹೇಳಿಸುವಂತಹ "ನಾನು ಇವುಗಳನ್ನೆಲ್ಲಾ ಅಂದರೆ ಕುಟುಂಬ ಕೊಡುವ ಸವಲತ್ತುಗಳನ್ನೆಲ್ಲಾ ಕಳಕೊಂಡಂಥ ವ್ಯಕ್ತಿ. ತಂದೆ-ತಾಯಿ ನನ್ನ ಬಾಲ್ಯದಲ್ಲೇ ತೀರಿಕೊಂಡರು. ಧಾರವಾಡದಲ್ಲಿ ನನ್ನ ಕಕ್ಕನ ಮನೆಯಲ್ಲಿ ಅತಿಥಿಯಂತಿದ್ದು ಹೇಗಾದರೂ ಮಾಡಿ ಬಿ.ಎ ತನಕ ಓದಿದವ. ನಂತರ ಹುಬ್ಬಳ್ಳಿಯಲ್ಲಿ, ಅನಂತರ ಬೆಂಗಳೂರಲ್ಲಿ ಪತ್ರಿಕೆಗಳ ವಿಶ್ವದಲ್ಲಿ ಇನ್ನಿಷ್ಟು ನನ್ನತನವನ್ನು ಕಳಕೊಂಡಂಥ ವಿಕ್ಷಿಪ್ತ ಮನುಷ್ಯ ನಾನು. ಈಗ ಕಥೆ – ಕಾದಂಬರಿಗಳ ಮುಖಾಂತರ ತನ್ನ ವ್ಯಕ್ತಿತ್ವವನ್ನು ಮಾನವೀಕರಣ ಮಾಡುವ ಪ್ರಯತ್ನದಲ್ಲಿದ್ದಂಥ, ನನಗೆ ಕಂಡ ಜೀವನದಲ್ಲಿ, ನನ್ನನ್ನು ಶೋಧಿಸುತ್ತ ಹೋಗುವಂಥ, ಮುಖ್ಯವಾಗಿ ಬೇರಿಲ್ಲದ ಮನುಷ್ಯ ನಾನು. ಈ ಕುಟುಂಬದಲ್ಲಿರುವ ಜನರಿಗೆ ನಿತ್ಯ ಜೀವನವೇ ಒಂದು ಕಾದಂಬರಿಯಾಗಿರುತ್ತದೆ. ನನ್ನಂಥವರಿಗೆ ಮಾತ್ರ ಕಾದಂಬರಿಯಲ್ಲಿಯ ಪಾತ್ರಗಳ ಮುಖಾಂತರ ನಿತ್ಯದ ಜೀವನ ಜೀವಿಸಬೇಕಾಗುತ್ತದೆ..." (ಪು.೨೮) ಮಾತುಗಳ ಮೂಲಕ ನಾವು ಗುರುತಿಸಬಹುದಾಗಿದೆ. ದೇಸಾಯಿಯವರೇ ಹೇಳಿಕೊಂಡಿರುವಂತೆ ಅವರು ಉತ್ತರ ಕನ್ನಡದಿಂದ ಬೆಳಗಾಂಗೆ ದತ್ತಕ ಹೋಗುವುದು, ಮುಂಬಯಿ ಮಹಾನಗರಿಯಲ್ಲಿ ತಮ್ಮ ವೃತ್ತಿ ಬದುಕನ್ನು ಕಂಡುಕೊಂಡಿದ್ದು, ಮಾನವತಾವಾದಿ ಅಂಶವನ್ನು ಅವರ ಸಾಹಿತ್ಯ ಒಳಗೊಂಡಿರುವ ಹಿನ್ನೆಲೆಯಲ್ಲಿ ಇದನ್ನು ಗುರುತಿಸಬಹುದು. ಇವರ ಕಾದಂಬರಿಗಳಲ್ಲಿ ತಮ್ಮ ಮೂಲದ ಬೇರುಗಳ ಹುಡುಕಾಟವನ್ನು ಮತ್ತೆ ಮತ್ತೆ ನಡೆಸುವುದು ಕಂಡುಬರುತ್ತದೆ.

ರಾಧಿಕೆ ದತ್ತು ತೆಗೆದುಕೊಳ್ಳುವ ಮೂಲಕ ಮಕ್ಕಳ ಪಡೆಯುವಿಕೆಗೆ ತನ್ನ ಧರ್ಮದಲ್ಲಿ ಅವಕಾಶವಿರುವ ಪರ್ಯಾಯ ಅಂಶವನ್ನು ಕಂಡುಕೊಳ್ಳುತ್ತಾಳೆ. ಮಕ್ಕಳನ್ನು ಪಡೆಯಲು ಗಂಡನೇ ಬೇಕಿಲ್ಲ ಎಂಬ ಅಂಶವೂ ಇಲ್ಲಿ ಕಂಡುಬರುತ್ತದೆ. ಅಲ್ಲದೇ ರಾಧಿಕೆ ದತ್ತು ತೆಗೆದುಕೊಳ್ಳುವ ಅಂಶದ ಮೂಲಕ ದೇಸಾಯಿಯವರು ದತ್ತಕ ಹೋದ ವಿಷಯವನ್ನು ಪರೋಕ್ಷವಾಗಿ ಸೂಚಿಸಿದಂತೆ ಅನಿಸುತ್ತದೆ.

'ಸಂಬಂಧ' ಕಾದಂಬರಿಯನ್ನು ಕುರಿತಂತೆ ಡಾ. ಟಿ.ಸುಬ್ರಹ್ಮಣ್ಯಂ ಮತ್ತು ಜಿ.ಎಸ್.ಆಮೂರರವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. "ಅಸ್ತಿತ್ವವಾದದ ಪ್ರಭಾವದ ದೃಷ್ಟಿಯಿಂದ 'ಸಂಬಂಧ' ಒಂದು ಮುಖ್ಯವಾದ ಕೃತಿ. ಎರಿಕ್ ಫ್ರಾಮ್‌ನ ಕೆಲವು ವಿಚಾರಗಳು ಈ ಕಾದಂಬರಿಯ ಮೇಲೆ ಪ್ರಭಾವ ಬೀರಿದೆ. ನಿಜವಾದ ಪ್ರೀತಿ, ಸೃಜನಶೀಲತೆಯ ಅಭಿವ್ಯಕ್ತಿಯೂ ಹೌದು. ಈ ನಿಜವಾದ ಪ್ರೀತಿಯಲ್ಲಿ ಕಾಳಜಿ, ಗೌರವ, ಹೊಣೆಗಾರಿಕೆ ಮತ್ತು ಅರಿವು ಕೂಡಿರುತ್ತದೆ. ಈ

ಕಾದಂಬರಿಯ ಕೇಂದ್ರ ಪಾತ್ರವಾದ ಶೀತಲಕುಮಾರ ಮತ್ತು ರಾಧಿಕೆಯ ನಡುವೆ ಬೆಳೆಯುವ ಸಂಬಂಧಗಳು ಹಲವು ಸಾಧ್ಯತೆಗಳನ್ನು ಸೂಚಿಸುತ್ತದೆ. ಗೆಳತಿ, ತಂಗಿ, ಮಗಳು, ಪ್ರೇಯಸಿ- ಹೀಗೆ ಏನಾದರೂ ಆಗಬಹುದಾದ ಸಾಧ್ಯತೆಗಳ ಸಂಬಂಧವನ್ನು ಈ ಕೃತಿ ಶೋಧಿಸುತ್ತದೆ" ಎಂದು ಡಾ. ಟಿ.ಸುಬ್ರಹ್ಮಣ್ಯಂ ತಮ್ಮ 'ಶಾಂತಿನಾಥ ದೇಸಾಯಿ' ಎಂಬ ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ದೇಸಾಯಿಯವರಿಗೂ ಸಂಬಂಧದ ಕಾದಂಬರಿಕಾರ ಶೀತಲಕುಮಾರನಿಗೂ ಸಾಮ್ಯಗಳಿವೆ. ಆದರೆ ಉದ್ದೇಶಪೂರ್ವಕವಾಗಿ ಅವರು ಅವನಿಂದ ಅಂತರವನ್ನೂ ಕಲ್ಪಿಸಿಕೊಂಡಿದ್ದಾರೆ. ಒಂದು ರೀತಿಯಿಂದ ಸಾಮ್ಯತೆಗಿಂತ ಈ ಅಂತರವೇ ಹೆಚ್ಚು ಮಹತ್ವದ್ದೆಂದು ಹೇಳಬಹುದು. ಕಾದಂಬರಿಯಲ್ಲಿ ಶೀತಲಕುಮಾರ ರಾಧಿಕಾ ಸಂಬಂಧ ಇಬ್ಬರಿಗೂ ಫಲದಾಯಕ ಎನಿಸುತ್ತದೆ. ಆದರೆ ರಾಧಿಕಾ - ಶ್ರೀಧರರ ಸಂಬಂಧದ ಬಗ್ಗೆ ಈ ಮಾತನ್ನು ಯಾವ ಅಡ್ಡಿ ಆತಂಕಗಳಿಲ್ಲದೆ ಹೇಳುವಂತಿಲ್ಲ. ಇವರಿಬ್ಬರಲ್ಲಿ ಯಾರು - ಯಾರನ್ನು ಹೆಚ್ಚು ಉಪಯೋಗಿಸಿಕೊಂಡರು ಎನ್ನುವುದನ್ನು ನಿರ್ಧರಿಸುವುದು ಕಠಿಣ. ತ್ರಿಶಲಾ - ಧೋಂಡಿರಾಮರ ಸಂಬಂಧವಂತೂ ತ್ರಿಶಲಾಳ ವ್ಯಕ್ತಿತ್ವವನ್ನೇ ದುರ್ಬಲಗೊಳಿಸುತ್ತದೆ. ಕಾದಂಬರಿಯಲ್ಲಿ ಬರುವ ಉಳಿದ ಸಂಬಂಧಗಳಲ್ಲಿ ಸಹಜತೆ ಇದ್ದರೂ ಇಂಥ ರಹಸ್ಯಮಯತೆ ಇಲ್ಲವೆಂದೇ ಹೇಳಬೇಕು ಎಂದು ಜಿ.ಎಸ್.ಆಮೂರರು ತಮ್ಮ 'ಶಾಂತಿನಾಥ ದೇಸಾಯಿ' ಎಂಬ ಕೃತಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆಯಾಗಿ ದೇಸಾಯಿಯವರ 'ಸಂಬಂಧ' ಕಾದಂಬರಿಯಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಂಘರ್ಷಗಳ ಜೊತೆಗೆ ಪ್ರಧಾನವಾಗಿ ಸ್ತ್ರೀ ಸ್ವಾತಂತ್ರ್ಯದ ಸಂಘರ್ಷದ ಸಂಕೀರ್ಣತೆಯನ್ನು ಕಾಣುತ್ತೇವೆ.

೫.೫ ಬೀಜ : ಮನುಷ್ಯನ ಅಸ್ತಿತ್ವದ ಸಂಘರ್ಷ

'ಬೀಜ' ಕಾದಂಬರಿಯು ದೇಸಾಯಿ ಅವರ ಐದನೇ ಕಾದಂಬರಿಯಾಗಿದ್ದು ೧೯೮೩ರಲ್ಲಿ ಪ್ರಥಮ ಬಾರಿಗೆ ಪ್ರಕಟಗೊಂಡಿತು. ಇದರ ೨೦೦೨ ಆಗಸ್ಟ್‌ರ ಮುದ್ರಣ ಪ್ರತಿಯನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

'ಬೀಜ' ಕಾದಂಬರಿಯು ಆರಂಭವಾಗುವುದು ಶ್ರೇಯಾಂಶನ ತಂದೆಯಾದ ಅಪ್ಪಾ ಸಾಹೇಬ ಪಾಟೀಲರ ನಿಧನದ ಸಂಗತಿಯ ಹಿನ್ನೆಲೆಯಲ್ಲಿ. ಶ್ರೇಯಾಂಸನು ತನ್ನ ತಂದೆ ಚೆನ್ನಾಗಿದ್ದಾಗಲೇ, ಸರಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ ತನ್ನ ಗ್ರಾಮವಾದ ಕೃಷ್ಣಾಪುರವನ್ನು ಬಿಟ್ಟು ಮುಂಬಯಿಯಲ್ಲಿ ನೆಲೆಸಿರುತ್ತಾನೆ. ತಾನು ಇನ್ನೆಂದೂ ಗ್ರಾಮಕ್ಕೆ ಹಿಂದಿರುಗುವುದಿಲ್ಲವೆಂಬ ಭಾವನೆಯನ್ನು ಹೊಂದಿದ್ದವನು ತನ್ನ ತಂದೆಗೆ ಅತ್ಯಂತ ಸೀರಿಯಸ್ ಎಂಬ ಸುದ್ಧಿಯನ್ನು ಕೇಳಿದ ಕೂಡಲೇ, ಬಹುಶಃ ತನ್ನ ತಂದೆಯ ಅಂತ್ಯವಾಗಿರಬಹುದೆಂಬ ಸೂಚನೆಯ ಮೇರೆಗೆ ಮುಂಬೈಯಿಂದ ಕೃಷ್ಣಾಪುರಕ್ಕೆ ಬರುತ್ತಾನೆ. ಮನೆಯ ಸುತ್ತಲಿನ ವಾತಾವರಣದ ಮೇಲಿಂದಲೇ ಆತನಿಗೆ ಸತ್ಯ ತಿಳಿಯುತ್ತದೆ.

ಹಾಗೆ ನೋಡಿದರೆ ಶ್ರೇಯಾಂಸ ಮುಂಬಯಿಗೆ ಓಡಿ ಹೋಗಲು ಕಾರಣವಾದ ಅಂಶವೇ ತಂದೆ ಮತ್ತು ಮಗನ ನಡುವಿನ ಸಂಘರ್ಷವಾಗಿದೆ. ಶ್ರೇಯಾಂಸನು ಧಾರವಾಡದಲ್ಲಿ ಬಿ.ಎಸ್ಸಿ. ಫೈನಲ್ ಓದುತ್ತಿದ್ದಾಗ ರೇವತಿಯನ್ನು ಮನಸಾರೆ ಪ್ರೀತಿಸುತ್ತಿರುತ್ತಾನೆ. ಆದರೆ ರೇವತಿ ಕೆಳಜಾತಿಯ ಹುಡುಗಿ, ಅಲ್ಲದೇ ಬಡವರಾಗಿದ್ದರು. ಶ್ರೇಯಾಂಸ ಬೇರೆ ಜಾತಿಯವ, ಆತ ಪ್ರತಿಷ್ಠಿತ ಮನೆತನದ, ಅಷ್ಟೊಂದು ಶ್ರೀಮಂತನಲ್ಲದಿದ್ದರೂ ಇದ್ದುಳ್ಳಂಥ ಕುಟುಂಬದ ಒಬ್ಬನೇ ಮಗ. ಹೀಗಾಗಿ ಆತನು ಮನೆಯಲ್ಲಿ ರೇವತಿಯನ್ನು ಮದುವೆಯಾಗುವ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಮನೆಯಲ್ಲಿ ದೊಡ್ಡ ಗಲಾಟೆಯೇ ನಡೆಯುತ್ತದೆ. ಅಪ್ಪಾ ಸಾಹೇಬರು "ನೀ ನನ್ನ ಪಾಲಿಗೆ ಸತ್ತಿ ಅಂತಾ ತಿಳಕೊಂಡು ಶ್ರಾದ್ಧ ಮಾಡ್ತೀನಿ, ನಿನಗ ಒಂದು ದಮಡಿ ಕೊಡೋದಿಲ್ಲ ನಾನು . ಇದು ನನ್ನ ಆಸ್ತಿ" ಎಂದು ಹೇಳಿದಾಗ ಶ್ರೇಯಾಂಸನೂ ಕೂಡ ಸಿಟ್ಟಿಗೆದ್ದು "ಕೋರ್ಟಿಗೆ ಹೋಗಿ ನನ್ನ ಪಾಲಿನ ಆಸ್ತಿಯನ್ನು ತೆಗೆದುಕೊಳ್ಳುತ್ತೇನೆ" ಎಂದು ವಾದಿಸುತ್ತಾನೆ. ಅದಕ್ಕೆ ಅಪ್ಪ "ಕೋರ್ಟಿಗೆ ಹೋಗ್ತಾನಂತ ಮಗ, ಕೋರ್ಟಿಗೆ, ! ಹೋಗೋ ಹೋಗು – ನಿನಗ ಜನ್ಮಕ್ಕ ಹಾಕಿ ಇಷ್ಟು ದೊಡ್ಡವನನ್ನಾಗಿ ಮಾಡಿ, ಸಂರಕ್ಷಣಾ ಮಾಡಿ. ಶಿಕ್ಷಣ ಕೊಟ್ಟು, ನಮ್ಮ ಮ್ಯಾಲೇ ಕೈ ಮಾಡಾಕ ಬರ್ತಾನ, ನಮ್ಮನ್ನ ಕೋರ್ಟಿಗೆ ಎಳಿತಾನಂತ ಕೋರ್ಟಿಗೆ, ನಿನ್ನ–ನಿನ್ನ, ಕೊಂದೇಬಿಡ್ತೀನಿ ತಡಿ" ಎಂದು ಮೂಲೆ ಮೂಲೆಯಲ್ಲಿ ಏನೋ ಹುಡುಕಿ ಹೊಡೆಯಲು ಮುಂದಾದಾಗ ದೇವೇಂದ್ರ ಕಾಕಾ ಓಡಿ ಬಂದು ಅವರಿಬ್ಬರ ನಡುವಿನ ಜಗಳವನ್ನು ಬಿಡಿಸಿದ್ದನು (ಪು. ೨೨). ಇದರಿಂದ ಬೇಸರಗೊಂಡ ಶ್ರೇಯಾಂಸ ಮುಂಬಯಿಯ ಹಾದಿಯನ್ನು ಹಿಡಿಯುತ್ತಾನೆ.

ಮುಂಬಯಿಯನ್ನು ಸೇರಿದ ಶ್ರೇಯಾಂಸ ಎಂ.ಎಸ್ಸಿ ಮಾಡಿ, ಪಿಹೆಚ್.ಡಿ ಸಂಶೋಧನೆ ಮುಗಿಸಿ ಫೆಲೋ ಆಗಿ ಒಂದು ಕಾಲೇಜಿಗೆ ಸೇರುತ್ತಾನೆ. ಅಲ್ಲಿದ್ದ ಪ್ರೊ.ಪಾಲರು ಅವನ ಸಿನ್ಸಿಯಾರಿಟಿಯನ್ನು ನೋಡಿ ಅವನನ್ನು ಸೆಕ್ರೆಟರಿಯನ್ನಾಗಿ ಮಾಡಿಕೊಳ್ಳುತ್ತಾರೆ. ಆಗಲೇ ಅವನಿಗೆ

ಲಿಝಿಯ ಪರಿಚಯವಾಗುತ್ತದೆ. ಅಗ ಅವಳು ಬಿ.ಎ. ಓದುತ್ತಿರುತ್ತಾಳೆ. ಅವಳನ್ನು ಮದುವೆಯಾಗಲು ತೀರ್ಮಾನಿಸಿ ತನ್ನ ತಂದೆಗೆ ಒಂದು ಪತ್ರವನ್ನು ಬರೆದು, ತನ್ನ ಮತ್ತು ಲಿಝಿಯ ಮದುವೆಯ ವಿಚಾರವನ್ನು ತಿಳಿಸುತ್ತಾನೆ. ಅಲ್ಲದೇ 'ಇಲ್ಲಿಗೆ ನನ್ನ–ನಿಮ್ಮ ಬಂಧ ಮುಗಿದಂತೆ' ಎಂದು ಬರೆಯುತ್ತಾನೆ. ಅಲ್ಲದೇ ಮುಂದುವರೆದು "ನನ್ನ–ನಿಮ್ಮ ನಡುವಿನ ವಿಚಿತ್ರ ಸಂಘರ್ಷಕ್ಕೆ ಫ್ರಾಯ್ಡ್ 'ಈಡಿಪಸ್ ಕಾಂಪ್ಲೆಕ್ಸ್' ಎಂದು ಹೆಸರಿಟ್ಟಿದ್ದಾನೆ. ಅಪ್ಪ–ಮಗ ಇವರ ನಡುವೆ ಯಾವಾಗಲೂ ಒಂದು ಹೋರಾಟ ಇರುತ್ತದೆ – ತಾಯಿಗೋಸ್ಕರ, ಅಂತೇ ನನಗೆ ಚಿಕ್ಕವನಿದ್ದಾಗಿನಿಂದಲೂ ನಿಮ್ಮ ಯಾವ ಕೃತಿಯೂ ಸೇರುತ್ತಿರಲಿಲ್ಲ. ನೀವು ಅತ್ಯಂತ ಸ್ವಾರ್ಥಿ, ಅತ್ಯಂತ ಅಹಂಕಾರಿ, ಅತ್ಯಂತ ದುರಾಗ್ರಹಿ ಎಂದೇ ನಾನು ತಿಳಿದಿದ್ದೆ. ಅದಕ್ಕೆಲ್ಲ ಒಂದು ಹಾದಿಯಿತ್ತು. ಮನೆಯಿಂದ ದೂರ ಓಡಿ ಹೋಗುವುದು".

"ಮೊದಮೊದಲು ನೀವು ನನ್ನನ್ನು ಅಷ್ಟು ದ್ವೇಷಿಸುತ್ತಿರಲಿಲ್ಲ ನಿಜ. ನನ್ನನ್ನು ಒಂದು ರೀತಿಯ ದರ್ಪದ ಬಂಧನದಲ್ಲಿಟ್ಟಿದ್ದಿರಿ. ನಂತರ ನಾನು ನಿಮ್ಮ ವ್ಯಕ್ತಿತ್ವದ ವಿರುದ್ಧ ಹೋರಾಟ ಸುರು ಮಾಡಿದೆ–ನಾನು ಮಾರ್ಕ್ಸವಾದಿಯಾದೆ, ಸೋಶಿಯಲಿಸ್ಟಾದೆ, ಬುದ್ಧಿವಾದಿಯಾದೆ , ನಾಸ್ತಿಕನಾದೆ, ಮೊದಲು ಬೇರೆ ಜಾತಿಯ ಹುಡುಗಿಯೊಡನೆ ಸಂಬಂಧ ಬೆಳೆಸಿದೆ. ರೇವತಿಯ ಮೇಲೆ ಪ್ರೀತಿ ಮಾಡಿದ್ದು ನಿಜವಾಗಿಯೂ ನಿಮ್ಮ ಮನಸ್ಸಿಗೆ ಶಾಕ್ ಕೊಡಲಿಕ್ಕೆಂದು–ನಿಮ್ಮ ವ್ಯಕ್ತಿತ್ವಕ್ಕೆ ಆಳವಾದ ನೋವು ಮಾಡಲೆಂದು. ಕೊನೆಗೆ ನಿಮ್ಮ ಇಡೀ ಸರಂಜಾಮೀ ಮೌಲ್ಯಗಳ ವ್ಯವಸ್ಥೆಯನ್ನು ತೊರೆದು ವಿಜ್ಞಾನದ ವಿದ್ಯಾರ್ಥಿಯಾದೆ – ಅನಂತರ ನಿಮ್ಮ ಜಾತಿ–ಪಾತಿ ಎಲ್ಲ ತೊರೆದು ಈಗ ಜಾತಿಯ ಹೊರಗೆ– ಲಗ್ನವಾಗಿದ್ದೇನೆ. ಇನ್ನು ನನ್ನ ಬಂಡಾಯ ಮುಗಿಯಿತು" (ಪು. ೪೮) ಎಂದು ಹೇಳುವ ಮಾತುಗಳಿಂದ ತಂದೆ–ಮಗನ ನಡುವೆ ದ್ವೇಷ, ವೈಷಮ್ಯ ಶುರುವಾಗುವುದೇ ಪ್ರೀತಿ, ಮದುವೆ, ಅನ್ಯ ಜಾತಿಯ ಸಂಘರ್ಷದಿಂದ. ಆತ ಲಿಝಿಯನ್ನು ಮದುವೆಯಾಗಿದ್ದು, ಕೂಡ ತನ್ನ ತಂದೆಯ ಮೇಲಿನ ಬಂಡಾಯದಿಂದಲೇ ಎಂದು ಹೇಳಬಹುದಾಗಿದೆ.

ತಂದೆ ಮಗನ ಮಧ್ಯೆ ದ್ವೇಷವಿದ್ದರೂ ಕೂಡ ಆ ದ್ವೇಷದ ಹೊಟ್ಟೆಯಲ್ಲಿ ಪ್ರೀತಿಯೂ ಇತ್ತು. 'ತನ್ನ– ಅಪ್ಪನ ಸಂಬಂಧ ಈಗ ಸುಮಾರು ಇಪ್ಪತ್ತು ವರ್ಷಗಳಿಂದ ಕಡಿದು ಹೋಗಿದ್ದರೂ ಅದು ಹಾಗೆ ನಿಜಕ್ಕೂ ಕಡಿದಿರಲಿಲ್ಲ ಅನ್ನುವ ಸತ್ಯ. ತಂದೆಯನ್ನು ದ್ವೇಷಿಸಿದರೂ ಆ ದ್ವೇಷದ ಹೊಟ್ಟೆಯಲ್ಲಿ ಪ್ರೀತಿಯೂ ಇತ್ತು ಎನ್ನುವ ಒಳಸತ್ಯ ಅವನ ಬೀಜದಿಂದ ಹುಟ್ಟಿದ ತಾನು ಅವನಿಗೆ ಎಂದೆಂದೂ ಬಂಧಿತನಾಗಿಯೇ ಇದ್ದೇನೆ ಎನ್ನುವ ಸತ್ಯಾತೀತ ಭಾವನೆ' ಎಂಬ ಶ್ರೇಯಾಂಸನ ಮಾತುಗಳಲ್ಲಿ ಆತನಲ್ಲಿದ್ದ ಗೊಂದಲಗಳನ್ನು, ತುಮುಲಗಳನ್ನು ಗುರುತಿಸಬಹುದಾಗಿದೆ. ಅಲ್ಲದೇ ಶ್ರೇಯಾಂಸನು ತನ್ನ ಮತ್ತು ತನ್ನ ತಂದೆಯ ನಡುವಿನ ಹರಿದು ಹೋದ ಸೂತ್ರವನ್ನು ಮರಳಿ ಒಂದು ಅವ್ಯಕ್ತವಾದ ರೀತಿಯಲ್ಲಿ ಜೋಡಿಸಿ ಕಟ್ಟುವ ಪ್ರಯತ್ನವನ್ನು ಅಂತಿಮ ಬಾರಿಗೆ ಪ್ರಯತ್ನಿಸಿದರೂ ಅದಕ್ಕೆ ಅವಕಾಶ ಲಭಿಸುವುದಿಲ್ಲ. ಹೀಗಾಗಿ ಅಪ್ಪ ಮಗನ ನಡುವಿನ ಸಂಘರ್ಷ ಅಪ್ಪನ ಸಾವಿನ ಅಂತಿಮ ಕ್ಷಣದವರೆಗೂ ಮುಂದುವರಿದುದನ್ನು ಗುರುತಿಸಬಹುದಾಗಿದೆ.

ಅಪ್ಪಾ ಸಾಹೇಬನ ಮರಣಾ ನಂತರ ಆಸ್ತಿಯ ವಿಚಾರವಾಗಿ ನಡೆಯುವ ಸಂಘರ್ಷ ಮತ್ತೊಂದು ಬಗೆಯದ್ದಾಗಿದೆ. ತನ್ನ ತಂದೆಯ ನಿಧನದ ನಂತರ ಮುಂಬೈನಿಂದ ಕೃಷ್ಣಾಪುರಕ್ಕೆ

ಬಂದ ಶ್ರೇಯಾಂಸ ಇಲ್ಲಿಯೇ ಉಳಿಯುವ ತೀರ್ಮಾನಕ್ಕೆ ಬರುತ್ತಾನೆ. ಆದರೆ ಇದು ಆತನ ಚಿಕ್ಕಪ್ಪನಾದ ದೇವೇಂದ್ರ ಕಾಕಾನಿಗೆ ಇಷ್ಟವಾಗುವುದಿಲ್ಲ. ಇದರಿಂದ ಶ್ರೇಯಾಂಸ ಹಾಗೂ ದೇವೇಂದ್ರ ಕಾಕಾನ ನಡುವೆ ಇನ್ನೊಂದು ರೀತಿಯ ಸಂಘರ್ಷ ಉಂಟಾಗುತ್ತದೆ. ದೇವೇಂದ್ರ ಕಾಕಾ ಸಂಚಿನಿಂದ ರಾಮುನ ಮೇಲೆ ಹಲ್ಲೆ ಮಾಡಿಸುತ್ತಾನೆ. ಇದಕ್ಕೆ ಅವನಿಗೆ ವಿಠ್ಠಲ್‌ರಾವ್‌ನ ಕುಮ್ಮಕ್ಕಿರುತ್ತದೆ. ಅಲ್ಲದೇ ಶ್ರೇಯಾಂಸನ ಮೇಲೆಯೂ ಕೂಡ ಹಲ್ಲೆ ನಡೆಯುತ್ತದೆ. ಆದರೆ ಈ ಹಲ್ಲೆಯನ್ನು ಯಾರು ಮಾಡಿದರು, ಯಾರು ಮಾಡಿಸಿದರು ಎಂಬುದು ತಿಳಿಯುವುದಿಲ್ಲ. ಇದರ ಉದ್ದೇಶ ಶ್ರೇಯಾಂಸ ಊರನ್ನು ಬಿಟ್ಟು ಮುಂಬಯಿಗೆ ತೆರಳಲಿ ಎಂಬುದಾಗಿರುತ್ತದೆ. ದಾಯಾದಿ ಕಲಹಕ್ಕೆ ಆಸ್ತಿ ಮುಖ್ಯ ಕಾರಣವಾಗುವುದನ್ನು ಇಲ್ಲಿ ಗುರುತಿಸಬಹುದಾಗಿದೆ. ಸಂಬಂಧಗಳು ಬಿರುಕು ಬಿಡುವುದಕ್ಕೆ ಪ್ರಾರಂಭವಾಗುತ್ತವೆ. ದೇವೇಂದ್ರ ಕಾಕಾನಿಗೆ ಶ್ರೇಯಾಂಸನು ಇಲ್ಲಿರುವುದು ಇಷ್ಟವಾಗದೇ ಇದ್ದರೂ ಕೂಡ ಅದನ್ನು ನೇರವಾಗಿ ವ್ಯಕ್ತಪಡಿಸುವುದಕ್ಕೆ ಆತನಿಗೆ ಸಾಧ್ಯವಾಗುವುದಿಲ್ಲ.

ಇನ್ನು ದೇಸಾಯಿಯವರ ಹಲವು ಕಥೆ–ಕಾದಂಬರಿಗಳಲ್ಲಿ ಕಂಡುಬರುವಂತೆ ಇಲ್ಲಿಯೂ ಕೂಡ ಧಾರ್ಮಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ. ಶ್ರೇಯಾಂಸನ ಹೆಂಡತಿ ಲಿಝಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವಳು. ಮುಂಬಯಿಯ ಕಾಲೇಜೊಂದರಲ್ಲಿ ಫೆಲೋ ಆಗಿ ಕೆಲಸ ಮಾಡುತ್ತಿದ್ದ ಶ್ರೇಯಾಂಸ ಬಿ.ಎ ಓದುತ್ತಿದ ಲಿಝಿಯನ್ನು ಪ್ರೀತಿಸಿ ಮದುವೆಯಾಗಿರುತ್ತಾನೆ. ಲಿಝಿಯು ಸಂಪೂರ್ಣವಾಗಿ ಮುಂಬಯಿಯ ವಾತಾವರಣದಲ್ಲಿ ಬೆಳೆದಿದ್ದರಿಂದ ಎಲ್ಲವೂ ಪದ್ಧತಿಯ ಪ್ರಕಾರ, ಒಂದು ಸ್ಥಿರವಾದ ವ್ಯವಸ್ಥೆಯ ಚೌಕಟ್ಟಿನೊಳಗೆ, ಸಂಭವಿಸಬೇಕು ಎಂದು ಅಪೇಕ್ಷಿಸುವ ವ್ಯಕ್ತಿತ್ವ ಅವಳದ್ದಾಗಿರುತ್ತದೆ. ಲಿಝಿಗೆ ಕೃಷ್ಣಾಪುರದ ಅನುಭವ ತೀರಾ ಅನಪೇಕ್ಷಿತವಾಗಿತ್ತು. ಏಕೆಂದರೆ ಅವಳು ಕೃಷ್ಣಾಪುರಕ್ಕೆ ಬರಬೇಕಾದ ಸನ್ನಿವೇಶವನ್ನು ನಿರೀಕ್ಷೆಯೇ ಮಾಡಿರಲಿಲ್ಲ. ಅಲ್ಲದೇ ಶ್ರೇಯಾಂಸ ಕೃಷ್ಣಾಪುರದಲ್ಲಿಯೇ ಉಳಿಯುವ ನಿರ್ಧಾರವೂ ಕೂಡ ಲಿಝಿಗೆ ಪ್ರಾರಂಭದಲ್ಲಿ ಇಷ್ಟವಿರಲಿಲ್ಲ. ಲಿಝಿಯು ಕೃಷ್ಣಾಪುರದಿಂದ ಮುಂಬಯಿಗೆ ಹಿಂದಿರುಗಿದ ನಂತರ ಅವಳ ಮನಸ್ಸಿನ ಸಂಘರ್ಷವು ಅವಳ ನಡೆ–ನುಡಿಗಳಲ್ಲಿ ವ್ಯಕ್ತಗೊಳ್ಳತೊಡಗುತ್ತದೆ. ಅವಳಿಗೆ ಬಾಹ್ಯ ಜಗತ್ತು ಎಂದರೆ, ಹೊಸ ಅಪರಿಚಿತ ಅನುಭವವೆಂದರೆ ಅತ್ಯಂತ ಭೀತಿ. ಒಂದು ನಿರ್ದಿಷ್ಟ ಚೌಕಟ್ಟಿನ ಹೊರಗಿನ ಅನುಭವ ಅವಳಿಗೆ ಯಾವಾಗಲೂ ವರ್ಜ್ಯವಾಗಿತ್ತು.

ಶ್ರೇಯಾಂಸನನ್ನು ಲಗ್ನವಾದ ನಂತರ ಅವಳು ಕೇವಲ ಅವನ ಬಾಹ್ಯ ವ್ಯಕ್ತಿತ್ವಕ್ಕೆ ಅಂಟಿಕೊಂಡಂಥವಳು. ಅವನ ಮನಸ್ಸಿನ ಆಳಕ್ಕೆ ಇಳಿದು ನೋಡುವ ಕುತೂಹಲಕ್ಕೆ ಅವಳು ಅವಕಾಶವನ್ನೇ ನೀಡಿರುವುದಿಲ್ಲ. ತನ್ನ ಗಂಡನ ಈ ಇನ್ನೊಂದು ವಿಶ್ವವನ್ನು ಮೊದಲಿನಿಂದಲೂ ದೂರವಿಟ್ಟಿದ್ದರಿಂದ ಅದರ ಬಗ್ಗೆ ಒಂದು ರೀತಿಯ ಭೀತಿ ಅವಳ ಮನಸ್ಸಿನಲ್ಲಿ ಮನೆ ಮಾಡತೊಡಗುತ್ತದೆ. ಈ ವಿಶ್ವ ಎಲ್ಲಿ ತನ್ನ ಗಂಡನನ್ನು ನುಂಗಿ ಬಿಡುವುದೋ ಎಂದು ಹೆದರಿದ್ದಳು. ಪ್ರೇಯಸಿ ಆಕೆ ಅವನ ಹಿಂದಿನ ರೇವತಿಯನ್ನು ಭೇಟಿಯಾದ ಅನಂತರ ಶ್ರೇಯಾಂಸನ ಹೃದಯದ ಬಗ್ಗೆಯೂ ಲಿಝಿಗೆ ಖಾತ್ರಿ ಇಲ್ಲದಂತೆ ಭಾಸವಾಗುತ್ತದೆ. ಆತನ ಹೃದಯ ತೀರಾ ಸಂಕೀರ್ಣ; ಅದರಲ್ಲಿ ತನಗೆ ಗೊತ್ತಿಲ್ಲದ ಸಂಗತಿಗಳು, ಪ್ರವೃತ್ತಿಗಳು ಇವೆಯೋ ಏನೋ ಎಂದು ಅವಳಿಗೆ

ಸಂಶಯ ಮೂಡತೊಡಗಿ, ಶ್ರೇಯಾಂಸನೇ ಪರಕೀಯನಂತೆ ಭಾಸವಾಗತೊಡಗುತ್ತಾನೆ. ಈ ಎಲ್ಲ ಆಲೋಚನೆಗಳಿಂದ ಜರ್ಝರಿತಳಾದ ಲಿಝಿ ಶ್ರೇಯಾಂಸನನ್ನು ವಾಪಸ್ಸು ಮುಂಬಯಿಗೆ ಕರೆದುಕೊಂಡು ಹೋಗಿ, ತನ್ನ ವಿಶ್ವದಲ್ಲಿ ಅವನನ್ನು ಸಂಪೂರ್ಣವಾಗಿ ಮುಳುಗಿಸಬೇಕು ಎಂದು ಆಲೋಚನೆ ಮಾಡುತ್ತಿರುತ್ತಾಳೆ. ಆದರೆ ಈ ವಿಚಾರದಲ್ಲಿ ಲಿಝಿಯು ಅತ್ಯಂತ ಖಿನ್ನಳಾಗಿರುತ್ತಾಳೆ, ಮಾನಸಿಕ ಸಂಘರ್ಷದಲ್ಲಿ ಸಿಲುಕಿರುತ್ತಾಳೆ.

ಆದರೆ ಲಿಝಿ ತನ್ನ ವಿಚಾರವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ. ಅಲ್ಲದೆ ಅವಳಿಗೆ ಅವಳದೇ ಆದ ಧರ್ಮ ತತ್ವಗಳಿರುತ್ತವೆ. ಅವಳು ಕ್ರಿಶ್ಚಿಯನ್ ಧರ್ಮವನ್ನು ಬಿಟ್ಟು ಬೇರೆ ಧರ್ಮಕ್ಕೆ ಹೊಂದಿಕೊಂಡಿರುವುದಿಲ್ಲ. ಹೀಗಾಗಿ ಶ್ರೇಯಾಂಸನು ಕೃಷ್ಣಾಪುರದಲ್ಲಿಯೇ ಉಳಿದುಕೊಳ್ಳುತ್ತೇನೆ ಎಂದಾಗ ಲಿಝಿಯು ಆಡುವ ಮಾತುಗಳು "ಶ್ರೇಯ್, ನೀ ಮುಂಬಯಿಗೆ ಬಂದರೆ ಭಾಳ ಒಳ್ಳೇದು. ಆದರೆ ನೀವಿಲ್ಲಿಯೇ ಇರಲು ನಿರ್ಧರಿಸಿದರೆ ಅದಕ್ಕೂ ನನ್ನ ಒಪ್ಪಿಗೆ.. ಆದರೆ ನಾನೀಗಲೇ ಬರಲು ಸಾಧ್ಯವಿಲ್ಲ ನನಗೆ ಒಳಗಿನಿಂದ ಅನಿಸಿದಾಗ–ನನ್ನ ದೇವರು ನನಗೆ ಹೋಗೆಂದು ಹೇಳಿದಾಗ– ನಾ ಬರುವೆ" (ಪು. ೨೧೧) ಮತ್ತು "ಕ್ರೈಸ್ತನೇ ಈ ಜೀವನದ ಕೇಂದ್ರ ಬಿಂದು" (ಪು. ೧೮೩) ಎಂದು ಹೇಳುವ ಮಾತುಗಳು ಅವರಿಬ್ಬರ ದಾರಿಗಳೂ ಬೇರೆ ಬೇರೆ ಎಂಬ ಅಂಶವನ್ನು ಒತ್ತಿ ಹೇಳುತ್ತವೆ. ಅಲ್ಲದೇ ಶ್ರೇಯಾಂಸ ಕೃಷ್ಣಾಪುರದಿಂದ ಸ್ವಲ್ಪ ದಿನಗಳ ಮಟ್ಟಿಗೆ ಮುಂಬಯಿಗೆ ಹೋಗಿದ್ದಾಗ ಲಿಝಿಯ ಬಗ್ಗೆಯೇ ಆತನಿಗೆ ಅಸಹ್ಯದ ಭಾವನೆಗಳು ಹುಟ್ಟುತ್ತವೆ. ಈ ಮೂಲಕ ಅವರಿಬ್ಬರಲ್ಲಿ ಧಾರ್ಮಿಕ ಸಂಘರ್ಷ ಬೆಳೆಯುತ್ತಾ ಹೋಗುವುದನ್ನು ಕಾಣುತ್ತೇವೆ.

ಶ್ರೇಯಾಂಸ ಮತ್ತು ಲಿಝಿಯ ಮಗಳಾದ ಕಲ್ಪನಾ ಕೃಷ್ಣಾಪುರಕ್ಕೆ ಹೋಗಿ ತನ್ನ ಬೇರುಗಳನ್ನು ಗುರುತಿಸುವ ಆಲೋಚನೆ ಮಾಡುತ್ತಾಳೆ. ಕಲ್ಪನಾ ಎಂದರೆ ಮಹಾನಗರ ಬೆಳೆಸುತ್ತಿರುವ, ರೂಪಿಸುತ್ತಿರುವ ಆಧುನಿಕ, ತರುಣ–ತರುಣಿಯರ ಪ್ರತಿನಿಧಿ. ಅವಳಿಗೆ ಯಾವ ಇನ್ಹಿಬಿಶನ್ನು ಇಲ್ಲ–ಬೇಕು–ಬೇಡಗಳ , ಸರಿ–ತಪ್ಪುಗಳ , ನೀತಿ–ಅನೀತಿಗಳ ಬೇರೆ ಬೇರೆ ಕಂಪಾರ್ಟ್‌ಮೆಂಟ್ಸ್ ಅವಳಿಗಿಲ್ಲ. ಅವಳ ನೀತಿ–ನಡತೆಗಳು ಒಂದು ರೀತಿಯಿಂದ ಮುಕ್ತವಾದವು. ಅದರರ್ಥ ಅವಳು ಕೆಟ್ಟವಳು ಎಂದಲ್ಲ. ಒಂದು ರೀತಿಯಿಂದ ಅವಳು ಮುಕ್ತ, ನಿರಾಗಸ ಮನಸ್ಸಿನವಳು. ಚಿಕ್ಕ ಮಕ್ಕಳ ಮನಸ್ಸಿರುವುದಿಲ್ಲವೋ ಹಾಗೆ. ಜೀವನೋತ್ಸಾಹ ಬಹಳ, ಅನುಭವದ ಹಸಿವು ಬಹಳ, ಚಲೋ–ಕೆಟ್ಟದ್ದು ಯಾವುವು ಎಂಬುದನ್ನು ಸ್ವಂತ ಅನುಭವದ ಮೇಲೆಯೇ, ಸ್ವಂತ ಅನಿಸಿಕೆಯ ಮೇಲೆ ನಿರ್ಧರಿಸುವುದು. ಅಪ್ಪ, ಅವ್ವ, ಅಜ್ಜ, ಗುರು, ಇತ್ಯಾದಿ ಹಿರಿಯರು ಹೇಳಿದ ಮಾತ್ರಕ್ಕೆ ಯಾವುದೂ ಒಳ್ಳೆಯದಲ್ಲ, ಯಾವುದೂ ಕೆಟ್ಟದ್ದಲ್ಲ. ಅದರರ್ಥ ಅವಳಿಗೆ ನೈತಿಕ ಪ್ರಜ್ಞೆ ಇಲ್ಲವೆಂದಲ್ಲ. ಅದಂತೂ ಅತ್ಯಂತ ತೀಕ್ಷ್ಣವಾಗಿದೆ. ಅದರ ಬೇಸಿಸ್ಸು ಅವಳ ಸ್ವಂತ ಮಾನವೀ ಭಾವನೆಗಳು, ಸ್ವಂತ ಮಾನವೀ ವಿಚಾರಗಳು. ಅಂತೆಯೇ ಅವಳು ತನ್ನ ಅಮೂರ್ತ ಭಾವನೆಗಳಿಗೆ ಮೂರ್ತತ್ವ ಕೊಡಲು ಪೇಂಟಿಂಗ್‌ನ್ನು ಅವಲಂಬಿಸಿರುತ್ತಾಳೆ.

ಕಲ್ಪನಾಳಿಗೆ ತನ್ನ ತಂದೆಯ ಊರಾದ ಕೃಷ್ಣಾಪುರದ ಬಗ್ಗೆ ನಿಜಕ್ಕೂ ಕುತೂಹಲವಿರುತ್ತದೆ. ಅಪ್ಪನ ಅಪ್ಪ ಎಂಥವನಿದ್ದ? ಆತನ ಅವ್ವ ಎಂಥವಳು? ಕಾಕಾ ಎಂಥವ? ಅಪ್ಪನ ಮೂಲ ಪರಿಸರ ಯಾವುದು? ಅವನ ಗೆಳೆಯರು, ಗೆಳತಿಯರು? ಅವನು ಹೇಳುವ ಗಲ್ಲಿಗಳು, ಹೊಂಡಗಳು, ಹೊಲಗಳು, ಕಿಲ್ಲೆ-ದಿನ್ನೆಗಳು, ಅರಣ್ಯ-ಪರ್ವತಗಳು, ಇವುಗಳನ್ನೆಲ್ಲಾ ಒಮ್ಮೆ ನೋಡಬೇಕು. ಕೃಷ್ಣಾಪುರದ ಕೆಲವಾದರೂ 'ಜೀನ್ಸ್' ತನ್ನಲ್ಲಿ ಸೇರಿವೆಯಲ್ಲ-ಅವುಗಳ ಸ್ವಲ್ಪವಾದರೂ ಪರಿಚಯ ಬೇಡವೇ ತನಗೆ? (ಪು. ೬೬) ಎಂಬ ಕುತೂಹಲದಲ್ಲಿಯೇ ಕೃಷ್ಣಾಪುರಕ್ಕೆ ಹೊರಡುತ್ತಾಳೆ. ಕೃಷ್ಣಾಪುರ ತಲುಪಿದಾಗ ಊರ ಹೊರಗಿನ ಹೋಟೇಲ್‌ನಲ್ಲಿ ತನ್ನ ತಂದೆ ಶ್ರೇಯಾಂಸನ ಮನೆಯ ವಿಳಾಸ ಕೇಳಿದಾಗ ನಡೆದ ಘಟನೆ ಅವಳಲ್ಲಿ ಮೋಜನ್ನು ಉಂಟು ಮಾಡುತ್ತದೆ. ಈ ಊರಿನಲ್ಲಿ ಎಲ್ಲವೂ ಓಪನಿದ್ದ ಬಳಿಕ ಸಂಕೋಚವೇಕೆ, ನಾಚಿಕೆಯೇಕೆ, ಭೀತಿಯೇಕೆ ಎಂಬ ಭಾವನೆ ಆಕೆಯಲ್ಲಿ ಮೂಡುತ್ತದೆ. ಕಲ್ಪನಾ ಶ್ರೇಯಾಂಸನ ಮನೆಯನ್ನು ತಲುಪಿದ ಕೂಡಲೇ ಸೀದಾ ಒಳಗೆ ಹೋಗಿ ನಡು ಮನೆಗೆ ಕಾಲಿಡುತ್ತಾಳೆ. ಒಳಗೆ ಯಾರು ಯಾರೋ ಗಂಡಸರು ಕೂತಿದ್ದರಿಂದ ಅವಳು ಒಳಗೆ ನಡೆದು ಬಿಡುತ್ತಾಳೆ. ತನ್ನ ತಂದೆ ಬರುವ ಮೊದಲೇ ಮನೆಯ ಸದಸ್ಯರ ಪರಿಚಯ ಮಾಡಿಕೊಳ್ಳುವ ಆಕೆ ತನ್ನ ಅಜ್ಜಿಯನ್ನೂ ಕೂಡ ಸಮಾಧಾನಪಡಿಸುವ ಪ್ರಯತ್ನ ಮಾಡುತ್ತಾಳೆ.

ಕಲ್ಪನಾ ಕೃಷ್ಣಾಪುರದಲ್ಲಿ ಇದ್ದಷ್ಟೂ ದಿನವೂ ತನ್ನ ಮೂಲದ ಅಂಶಗಳನ್ನು ತಿಳಿಯುವ ಕುತೂಹಲ ಮತ್ತು ಪ್ರಯತ್ನ ನಡೆಸುತ್ತಿರುತ್ತಾಳೆ. ಊರಿನ ಪರಿಸರವೂ ಕೂಡ ಅವಳನ್ನು ಗಾಢವಾಗಿ ಸೆಳೆಯುತ್ತದೆ. ತನ್ನ ತಂದೆ ಪೂರ್ವದ ದಿನಗಳನ್ನು ಕಳೆದಿರಬಹುದಾದ ಬಗ್ಗೆ ಆಕೆಗೆ ಕುತೂಹಲ ಮೂಡುತ್ತದೆ. ಕೃಷ್ಣಾಪುರ "ತನ್ನ ಊರು, ತನ್ನ ಡ್ಯಾಡಿಯ ಊರು, ಇಲ್ಲಿ ತನಗೆ ಯಾವುದೇ ತೊಂದರೆಯೂ ಇಲ್ಲ" ಎಂಬ ಅಂಶವು ಆಕೆಗೆ ಮನವರಿಕೆಯಾಗುತ್ತದೆ. ಅಲ್ಲದೇ ತನ್ನ ತಂದೆಯ ವ್ಯಕ್ತಿತ್ವದ ಬೇರುಗಳು ಕೃಷ್ಣಾಪುರದಲ್ಲಿಯೇ ಇರುವುದನ್ನು ಆಕೆ ಗುರುತಿಸುತ್ತಾಳೆ. ಈ ಹಿನ್ನೆಲೆಯಲ್ಲಿಯೇ ಆಕೆ ತನ್ನ ತಂದೆಗೆ ಕೃಷ್ಣಾಪುರದಲ್ಲಿಯೇ ಉಳಿಯಬೇಕೆಂಬ ಸಲಹೆಯನ್ನು ನೀಡುತ್ತಾಳೆ.

ನಂತರ ಈ ವಿಚಾರಗಳ ಬಗ್ಗೆ ತಂದೆ-ತಾಯಿ-ಮಗಳ ನಡುವೆ ಘರ್ಷಣೆ ಪ್ರಾರಂಭವಾಗುತ್ತದೆ. ಕಲ್ಪನಾ ಕೃಷ್ಣಾಪುರಕ್ಕೆ ಬರುವ ಮೊದಲು ಪ್ಯಾರಿಸ್‌ಗೆ ಹೋಗಬೇಕೆಂದು ತೀರ್ಮಾನಿಸಿರುತ್ತಾಳೆ. ಆದರೆ ಕೃಷ್ಣಾಪುರಕ್ಕೆ ಭೇಟಿ ನೀಡಿದ ನಂತರ ತನ್ನ ಬೇರುಗಳು ಅಲ್ಲಿಯೇ ಇರುವುದನ್ನು ಗುರುತಿಸುತ್ತಾಳೆ. ಆ ಮೂಲಕ ಮುಂಬಯಿಯಲ್ಲಿ ಉಳಿದುಕೊಳ್ಳುವ ಮೂಲಕ ಅವಳು ತನ್ನ ಬೇರುಗಳನ್ನು ಬಿಟ್ಟು ಹೋಗುವುದಿಲ್ಲ. 'ಬೀಜ' ಕಾದಂಬರಿಯ ಪ್ರಮುಖ ಆಶಯವೂ ಕೂಡ ಇದೇ ಆಗಿದೆ. ಲಿಖಿ ಶ್ರೇಯಾಂಸನ ಕೈ ಹಿಡಿದಿದ್ದರೂ ಕೂಡ ಅವಳು ತನ್ನ ಕ್ರಿಶ್ಚಿಯನ್ ಧರ್ಮವನ್ನು ಬಿಟ್ಟು ಹೊರಬರುವುದಿಲ್ಲ. ಆದರೆ ಕಲ್ಪನಾ ಕೃಷ್ಣಾಪುರದಲ್ಲಿ ಬಂದು ಸಹಜವಾಗಿ ಇರುತ್ತಾಳೆ. ಅಲ್ಲಿಯ ಎಲ್ಲಾ ಜನರೊಂದಿಗೂ ಆಕೆ ಮುಕ್ತವಾಗಿ, ಸಹಜವಾಗಿ ಬೆರೆಯುತ್ತಾಳೆ. ಅವಳಲ್ಲಿ ಯಾವುದೇ ರೀತಿಯ ಸಂಕೋಚಗಳಾಗಲೀ, ಬಿಗುಮಾನಗಳಾಗಲೀ ಕಂಡುಬರುವುದಿಲ್ಲ. ಮುಂಬೈ ನಗರದ ಆಧುನಿಕತೆಯ ಲೋಕದಲ್ಲಿ ಬೆಳೆದ ಹುಡುಗಿ ಆಕೆ. ಆದರೆ ಲಿಖಿ ಹಾಗಲ್ಲ. ಎಲ್ಲದಕ್ಕೂ ಅವಳದ್ದು ಸಂಕೋಚದ ಸ್ವಭಾವ. ಅವಳು ಎಲ್ಲರೊಂದಿಗೂ ಹೀಗಾಗಿ ಸಹಜವಾಗಿ ಬೆರೆಯಲು

ಸಾಧ್ಯವಾಗುವುದಿಲ್ಲ. ಮೇಲಾಗಿ ಲಿಝಿಯು ಕೃಷ್ಣಾಪುರದ ಬಗ್ಗೆ ಸಹಜವಾದ ಒಲವನ್ನಾಗಲೀ, ಪ್ರೀತಿಯನ್ನಾಗಲೀ ಹೊಂದಿರುವುದಿಲ್ಲ. ಇದರಿಂದ ಅವರ ನಡುವೆ ಧಾರ್ಮಿಕ ಸಂಘರ್ಷ ಕಾಣಿಸಿಕೊಳ್ಳುತ್ತದೆ.

ದೇಸಾಯಿಯವರ ಸಾಹಿತ್ಯದ ಮತ್ತೊಂದು ಪ್ರಮುಖವಾದ ಅಂಶವೆಂದರೆ ಗಂಡು–ಹೆಣ್ಣುಗಳ ನಡುವಿನ ಸಂಘರ್ಷವಾಗಿದೆ. ಈ ಪೈಪೋಟಿಯಲ್ಲಿ ಸರ್ವೇಸಾಮಾನ್ಯವಾಗಿ ಹೆಣ್ಣುಗಳೇ ಜಯಶಾಲಿಗಳಾಗುತ್ತಾರೆ. ಅಂತೆಯೇ 'ಬೀಜ' ಕಾದಂಬರಿಯಲ್ಲಿಯೂ ಕೂಡ ನಾವು ಈ ಅಂಶವನ್ನು ಗುರುತಿಸಬಹುದು. ಶ್ರೇಯಾಂಸ ಮುಂಬಯಿಗೆ ಹೊರಡುವ ಮುನ್ನ ರೇವತಿ ಎಂಬ ಹುಡುಗಿಯನ್ನು ಪ್ರೀತಿಸುತ್ತಿರುತ್ತಾನೆ. ಮನೆಯಲ್ಲಿ ತನ್ನ ತಂದೆಯಿಂದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಶ್ರೇಯಾಂಶನು ಅವಳನ್ನು ಬಿಟ್ಟು ಮುಂಬಯಿಗೆ ತೆರಳುತ್ತಾನೆ. ಕೆಲವು ದಿನಗಳ ನಂತರ ಅಲ್ಲಿಂದಲೇ ರೇವತಿಗೆ ಪತ್ರ ಬರೆದು ಯಾರನ್ನಾದರೂ ಮದುವೆಯಾಗುವಂತೆ ಸಲಹೆ ನೀಡುತ್ತಾನೆ. ಅಲ್ಲದೇ ಮುಂಬಯಿಗೆ ಬಂದ ನಂತರ ತನಗೆ ಸುಮಾರು ಹೆಣ್ಣುಗಳ ಪರಿಚಯವಾಗಿದ್ದು, ತಾನು ಅತ್ಯಂತ ಸಂತೋಷವಾಗಿ ಇರುವುದಾಗಿ ತಿಳಿಸುತ್ತಾನೆ. ಶ್ರೇಯಾಂಸನ ಪತ್ರದ ಈ ಅಂಶವನ್ನು ನಿಜವೆಂದು ನಂಬಿದ ರೇವತಿಯು ಬ್ಯಾಂಕಿನ ಒಬ್ಬ ಉದ್ಯೋಗಿಯನ್ನು ಮದುವೆಯಾಗಿ ಬೆಂಗಳೂರಿಗೆ ಬರುತ್ತಾಳೆ. ಅವಳಿಗೆ ಒಬ್ಬ ಮಗನೂ ಇರುತ್ತಾನೆ. ಆದರೆ ಅನಿರೀಕ್ಷಿತವಾಗಿ ಆಕೆಯ ಗಂಡನಿಗೆ ಹೃದಯಾಘಾತವಾಗಿ ಮರಣ ಹೊಂದುತ್ತಾನೆ. 'ಅಪ್ಪನ ಮಗ'ನಾಗಿದ್ದ ಮಗನೂ ಕೂಡ ಮನೆಯನ್ನು ಬಿಟ್ಟು ಹೊರಟು ಹೋಗುತ್ತಾನೆ. ಇವೆಲ್ಲದರಿಂದ ಖಿನ್ನಗೊಂಡ ರೇವತಿ ಊರಿಗೆ ಮರಳಿ ತನ್ನ ಅಣ್ಣ ವಸಂತನ ಮನೆಯನ್ನು ಸೇರಿಕೊಳ್ಳುತ್ತಾಳೆ.

ಹೀಗೆ ಅಣ್ಣನ ಮನೆಗೆ ಬಂದ ರೇವತಿ ಇಲ್ಲಿಯೂ ಕೂಡ ಹಲವು ರೀತಿಯ ಸಮಸ್ಯೆಗಳನ್ನು ಅನುಭವಿಸುತ್ತಾಳೆ. ರೇವತಿಯ ಅತ್ತಿಗೆಯಾದ ನಿರ್ಮಲಾ ರೇವತಿಯನ್ನು ಅತ್ಯಂತ ಕಠಿಣ ರೀತಿಯಲ್ಲಿ ನಡೆಸಿಕೊಳ್ಳುತ್ತಾಳೆ. ವಸಂತನಿದ್ದಾಗ ಏನೂ ಮಾತನಾಡದ ಆಕೆ ವಸಂತ ಇಲ್ಲದೆ ಇದ್ದ ಸಂದರ್ಭದಲ್ಲಿ ರೇವತಿಗೆ ಮಾನಸಿಕ ಕಿರುಕುಳ ನೀಡುತ್ತಿರುತ್ತಾಳೆ. ರೇವತಿಯು ಆಗ ಕೆಲವೊಮ್ಮೆ ಆತ್ಮಹತ್ಯೆಯ ಆಲೋಚನೆಯನ್ನೂ ಮಾಡುತ್ತಾಳೆ. ಆದರೆ ಎಲ್ಲವನ್ನೂ ದೃಢತೆಯಿಂದ ಎದುರಿಸಬೇಕೆಂಬ ತೀರ್ಮಾನಕ್ಕೆ ಬರುತ್ತಾಳೆ.

ತನ್ನ ತಂದೆಯ ಮರಣಾನಂತರ ಶ್ರೇಯಾಂಸನು ಕೃಷ್ಣಾಪುರಕ್ಕೆ ಹಿಂದಿರುಗಿದ ನಂತರ, ಆತನಿಗೆ ಮತ್ತೆ ರೇವತಿಯ ಮೇಲೆ ಮನಸ್ಸಾಗುತ್ತದೆ. ಆದರೆ ರೇವತಿಯು ಶ್ರೇಯಾಂಸನ ಈ ಪ್ರೀತಿಯನ್ನು ಅತ್ಯಂತ ನಯವಾಗಿಯೇ ತಿರಸ್ಕರಿಸುತ್ತಾಳೆ. ಅಲ್ಲದೆ ತಾನು ಈಗಾಗಲೇ ಪ್ರಬುದ್ಧಳಾಗಿರುವುದರ ಜೊತೆಗೆ ಜೀವನದಲ್ಲಿ ಹಲವಾರು ನೋವುಗಳನ್ನು ಅನುಭವಿಸಿರುವುದರಿಂದ ಮತ್ತೆ ನೋವುಗಳನ್ನು ಅನುಭವಿಸಲು ಸಾಧ್ಯವಿಲ್ಲವೆಂಬ ನಿರ್ಣಯಕ್ಕೆ ಬಂದಿರುತ್ತಾಳೆ. ಅದರ ಬಗ್ಗೆ ಆಕೆ ಆತನಿಗೆ "ನನಗೆ ಮರಳಿ ಉರಿದು ಉರಿದು ಇದ್ದಲಿಯಾಗುವ ಇಚ್ಛೆಯಿಲ್ಲ. ಅದಕ್ಕಿಂತ ಹೆಚ್ಚಾಗಿ ನನಗೆ ಅಷ್ಟು ತಾಕತ್ತಿಲ್ಲಾ, ನನ್ನ ಜೀವನವೆಲ್ಲಾ ಮುಗಿದು ನಾನೊಂದು ಮೃತ್ಯು – ಪೂರ್ವದ ವಿಚಿತ್ರ ಸ್ಥಿತಿಯಲ್ಲಿದ್ದೇನೆ. ನನ್ನ ಶಕ್ತಿಯೆಲ್ಲವೂ ಹಿಂಗಿ ಹೋಗಿದೆ" ಎಂದು ಹೇಳುವಲ್ಲಿ,

ಮತ್ತು "ಈಗ ನನ್ನ ಜೀವನದಲ್ಲಿ ವೇಳೆ ಕಳೆಯುವ ಕೆಲಸ ಮಾತ್ರ ಉಳಿದಿದೆ. ಅದಕ್ಕೆ ಪೇಂಟಿಂಗು ಒಳ್ಳೆಯ ಸಾಧನ. ಶ್ರೇಯಾಂಸ ನನ್ನ ಚಿತ್ರಗಳ ಬಗ್ಗೆ ದಯವಿಟ್ಟು ಮುಂಬಯಿಯಲ್ಲಿ ಯಾರ ಜೊತೆಯಲ್ಲಿಯೂ ಮಾತನಾಡಬೇಡ ಕಲ್ಪನೆಗಂತೂ ಹೇಳಲೇ ಬೇಡ" (ಪು. ೧೮೦) ಎಂದು ತನ್ನ ಅಭಿಪ್ರಾಯ ವ್ಯಕ್ತಪಡಿಸುವಲ್ಲಿ ಆಕೆಯ ದೃಢ ನಿರ್ಧಾರ ವ್ಯಕ್ತವಾಗುತ್ತದೆ. ಅಲ್ಲದೆ, ಶ್ರೇಯಾಂಸ ಕೃಷ್ಣಾಪುರಕ್ಕೆ ಹಿಂದಿರುಗಿದ ನಂತರ ಜನತೆ ರೇವತಿ – ಶ್ರೇಯಾಂಸನ ಸಂಬಂಧದ ಬಗ್ಗೆ ಮತ್ತೆ ಮಾತನಾಡಲಿಕ್ಕೆ ಪ್ರಾರಂಭ ಮಾಡಿರುವುದು ರೇವತಿಯ ಕಿವಿಗೆ ಬಿದ್ದಿರುತ್ತದೆ. ಹೀಗಾಗಿ ಕೃಷ್ಣಾಪುರದಲ್ಲಿಯೇ ಉಳಿದು ಮತ್ತಷ್ಟು ಟೀಕೆಗಳಿಗೆ ಗುರಿಯಾಗುವುದು ಅವಳಿಗೆ ಇಷ್ಟವಿರುವುದಿಲ್ಲ.

ರೇವತಿ ತಾನು ವಿಧವೆಯಾಗಿ ಮನೆಗೆ ಹಿಂದಿರುಗಿದ ನಂತರ ತನ್ನ ಅತ್ತಿಗೆಯು ತನ್ನ ಜೊತೆಯಲ್ಲಿ ನಡೆದುಕೊಳ್ಳುತ್ತಿದ್ದ ರೀತಿಯು, ಅವಳ ಮನಸ್ಸಿಗೆ ತುಂಬಾ ನೋವನ್ನು ಉಂಟು ಮಾಡಿರುತ್ತದೆ. ಆದಷ್ಟು ಬೇಗ ಈ ಎಲ್ಲಾ ತೊಂದರೆಗಳಿಂದ ಬಿಡುಗಡೆ ಪಡೆಯಬೇಕೆಂದು ಬಯಸಿದ್ದ ಆಕೆ ಬೆಳಗಾಂಗೆ ಹೋಗಿ ಅಲ್ಲಿ ಒಬ್ಬಳೇ ಪ್ರತ್ಯೇಕ ಜೀವನ ನಡೆಸಲು ತೀರ್ಮಾನಿಸುತ್ತಾಳೆ. ಅಲ್ಲದೇ ಬೆಳಗಾಂನಲ್ಲಿ ತನ್ನ ಕಲೆಯ ಸೃಜನಶೀಲತೆಗೆ ಉತ್ತಮ ಅವಕಾಶ ಸಿಗಬಹುದೆಂಬ ನಿರೀಕ್ಷೆಯೂ ಅವಳದ್ದಾಗಿರುತ್ತದೆ.

ಇನ್ನು ಶ್ರೇಯಾಂಸ ಕೃಷ್ಣಾಪುರಕ್ಕೆ ಹೋಗಿ ಅಲ್ಲಿಯೇ ಉಳಿದುಕೊಳ್ಳಬೇಕೆಂಬ ಮನಸ್ಸನ್ನು ಮಾಡಿದರೆ ಅದನ್ನು ವಿರೋಧಿಸಲು ಲಿಝಿಗಾಗಲೀ, ಕಲ್ಪನಾಳಿಗಾಗಲೀ ಅಥವಾ ಡಾ॥ ಪಾಲ್‌ರಿಗಾಗಲೀ ಸಾಧ್ಯವಿರಲಿಲ್ಲ. ಈ ಸಂದರ್ಭದಲ್ಲಿ ಶ್ರೇಯಾಂಸ ಎದುರಿಸುವ ಮಾನಸಿಕ ಸಂಘರ್ಷ ಅತ್ಯಂತ ಮಹತ್ವವಾದದ್ದಾಗಿದೆ. ಶ್ರೇಯಾಂಸನು ತನ್ನ ಅಸ್ತಿತ್ವವನ್ನು ಹೇಗೆ ಉಳಿಸಿಕೊಳ್ಳುವುದು ಎಂಬ ಗೊಂದಲಕ್ಕೆ ಬಿದ್ದಿರುತ್ತಾನೆ.

ಕೃಷ್ಣಾಪುರದಲ್ಲಿ ಹೋಗಿ ಉಳಿಯಲು ನಿರ್ಧರಿಸಿದ ಶ್ರೇಯಾಂಸನಿಗೆ ಕೆಲವು ದಿನಗಳಲ್ಲೇ ದಿಗ್ಭ್ರಮೆಯುಂಟಾಗುತ್ತದೆ. ಜೀವನ ಒಮ್ಮೆಲೆ ಹೇಗೆ ಗೊಂದಲಮಯವಾಗಬಹುದು ಎಂಬುದನ್ನು ಆತ ಅನುಭವಿಸಿದ್ದನು. ಇದ್ದಕ್ಕಿದ್ದಂತೆ ಮಾನವ ಮನಸ್ಸುಗಳಲ್ಲಿ ಮಂಥನ ಹೇಗೆ ಪ್ರಾರಂಭವಾಗಬಹುದು ಎಂದು ನೋಡಿದ್ದನು. ಕಿಲ್ಲೆಯಲ್ಲಿ ತಿರುಗಾಡುವಾಗ ಕಲ್ಲುಗೋಡೆಗಳ ಮೇಲೆ ಚಿತ್ರ ವಿಚಿತ್ರವಾದ ಬಳ್ಳಿಗಳು–ಹಾವಸೆಯೂ ಹೇಗೆ ಹುಟ್ಟಿರಬೇಕು ಎಂದು ಯೋಚಿಸುತ್ತಿದ್ದನು. ಆ ಕಲ್ಲು ಬಂಡೆಗಳಿಗೂ ಆ ಮಾನವೀ ಮನಸ್ಸುಗಳಿಗೂ ಎಲ್ಲಿಯೋ ಸಾಮ್ಯವಿದೆ. ನಾನಾ ತರಹದ ಬೀಜಗಳು ಅವು ಎಲ್ಲಿ ಹೇಗೆ ಮೊಳೆತು, ಹೇಗೆ ಬೆಳೆಯುತ್ತವೆ ಎಂಬುದೇ ಒಂದು ವಿಚಿತ್ರ. ಕೊನೆಗೆ ಕೃಷ್ಣಾಪುರದಲ್ಲಿ ಹುಟ್ಟಿದ ಶ್ರೇಯಾಂಸ ಮುಂಬಯಿಯಲ್ಲಿ ತನ್ನ ವ್ಯಕ್ತಿತ್ವವನ್ನು ನಿರ್ಮಿಸಿಕೊಂಡು ಮತ್ತೆ ಕೃಷ್ಣಾಪುರಕ್ಕೆ ಹಿಂದಿರುಗುವ ಮನಸ್ಸು ಮಾಡುತ್ತಾನೆ. ಕೃಷ್ಣಾಪುರಕ್ಕೆ ಹಿಂದಿರುಗಲು ನಿರ್ಧರಿಸುವ ವೇಳೆಗಾಗಲೇ ಶ್ರೇಯಾಂಸನ ಮನಸ್ಸು ಪ್ರಬುದ್ಧಗೊಂಡಿರುತ್ತದೆ. ಆದರೆ ತೀರ್ಮಾನ ತೆಗೆದುಕೊಳ್ಳುವ ವೇಳೆಯಲ್ಲಿ ಮಾತ್ರ ಆತನಲ್ಲಿ ಗೊಂದಲವಿರುತ್ತದೆ.

ಮುಂಬಯಿಯಲ್ಲಿ ಹೊರ ಜಗತ್ತಿನ ಸಂಕೀರ್ಣತೆಯ ಜೊತೆ ಗುದ್ದಾಡುವತನಕ ದಿನದ ಇಡೀ ಸಮಯ ಹೋಗಿ ಬಿಡುತ್ತದೆ. ಇಲ್ಲಿ ಮುಂಜಾನೆ ಕಣ್ಣು ತೆರೆದು ರಾತ್ರಿ ಕಣ್ಣು ಮುಚ್ಚುವವರೆಗೆ

ನಾನಾ ತರದ ಮಾನವೀ ಮನಸ್ಸುಗಳ ಪರಸ್ಪರ ತಾಕಲಾಟ, ಇಂಟರ್ ಆ್ಯಕ್ಷನ್ ಆಗುತ್ತದೆ. ಇದು ಶ್ರೇಯಾಂಸನಿಗೆ ಮೊದ ಮೊದಲು ಬಹಳ ಎಕ್ಸೈಟಿಂಗ್ ಅನಿಸಿದರೂ ಈ ಕ್ರಿಯೆ-ಪ್ರತಿಕ್ರಿಯೆಯಲ್ಲಿ ಒಂದು ಅಪಾಯವೂ ಇದೆ ಎಂಬುದನ್ನು ಆತ ಕಂಡುಕೊಳ್ಳುತ್ತಾನೆ. ಆದರೂ ಒಂದು ರೀತಿಯಿಂದ ಮುಂಬಯಿ ಸುರಕ್ಷಿತ. ಕೃಷ್ಣಾಪುರದಲ್ಲಿ ಮಕ್ಕಳ-ಮೊಮ್ಮಕ್ಕಳ ಬೀಜಗಳವರೆಗೆ ಎಲ್ಲವೂ ಚಲನಶೀಲವಾಗಿರುತ್ತವೆ. ಆದ್ದರಿಂದ ಇಲ್ಲಿರಲು ಬೇರೆ ರೀತಿಯ ಪ್ರಜ್ಞೆ ಬೇಕು. ಅದು ಆತನಲ್ಲಿ ಇಲ್ಲವೆಂದಲ್ಲ. ಲಿಝಿ, ಕಲ್ಪನಾರಲ್ಲಿ ಇದ್ದದ್ದು ಸಂಪೂರ್ಣ ನಗರ ಪ್ರಜ್ಞೆ. ಆದರೆ ಶ್ರೇಯಾಂಸನಲ್ಲಿ ಮೂಲತಃ ಹಳ್ಳಿಯ ಅಂಶವಿದ್ದುದರಿಂದ ಆತ ಎರಡೂ ರೀತಿಯಲ್ಲಿ ಯೋಚಿಸುತ್ತಿರುತ್ತಾನೆ. ಅಲ್ಲದೇ ಕೃಷ್ಣಾಪುರದಲ್ಲಿ ಶ್ರೇಯಾಂಸನ ಕರ್ತವ್ಯಗಳು ಬೇಗ ಮುಗಿಯುವಂತಹದ್ದಾಗಿರಲಿಲ್ಲ. ಏಕೆಂದರೆ ಆತನ ಕುಟುಂಬದ ಆಸ್ತಿ-ಮತ್ತೆ ವಾಸ್ತವ್ಯಗಳ ಸಮಸ್ಯೆಗಳು ದೈತ್ಯಾಕಾರ ತಾಳುತ್ತಿದ್ದವು. ಆತ ದೇವೇಂದ್ರ ಕಾಕನೊಡನೆ ಒಂದು ಶಾರ್ಟ್‌ಟರ್ಮ್/ಲಾಂಗ್ ಟರ್ಮ್ ಒಪ್ಪಂದಕ್ಕೆ ಬರಬೇಕಾಗಿತ್ತು. ತನ್ನ ತಾಯಿಯೊಡನೆ ಇನ್ನೂ ಸರಿಯಾದ ಪ್ರೊಡಕ್ಟೀವ್ಹ್ ಆದ ಸಂಬಂಧ ಶುರುವಾಗಿಲ್ಲ ಎನ್ನುವುದೊಂದು ಬೇಸರವಾಗಿತ್ತು. ಅಂಬುಜಕ್ಕನ ಬಗ್ಗೆ ತಾನು ಮಾಡಿದ ತೀರ್ಮಾನ ಸರಿಯಾಗಿದೆ ಎಂದೆನಿಸಿದರೂ ಅದರ ಪರಿಣಾಮದ ಬಗ್ಗೆ ಅವನಲ್ಲಿ ಸ್ಪಷ್ಟತೆ ಇರುವುದಿಲ್ಲ. ರೇವತಿ ಅವನ ಹೃದಯದ ಆಳವನ್ನು ತಲುಪಿ ಅದನ್ನು ಅಸ್ಪಷ್ಟಗೊಳಿಸಿರುತ್ತಾಳೆ. ಹೀಗಾಗಿ ಕೃಷ್ಣಾಪುರದೊಡನೆ ಇಷ್ಟು ಬೇಗ ಬಂಧ ಹರಿಯಲು ಶಕ್ಯವಿಲ್ಲ.

ಹೀಗೆ ಅನಿವಾರ್ಯ ಪರಿಸ್ಥಿತಿಯಲ್ಲಿ ಕೃಷ್ಣಾಪುರಕ್ಕೆ ಹಿಂದಿರುಗಿದ ಶ್ರೇಯಾಂಸ ಇಲ್ಲಿಯ ಚಟುವಟಿಕೆಗಳಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ಹಲವಾರು ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾನೆ. ಸಕ್ಕರೆ ಕಾರ್ಖಾನೆಗೆ ಹೋಗಿ ಕಬ್ಬಿನ ಸಿಪ್ಪೆಯಿಂದ ಮುಂದೆ ಪೇಪರ್ ಹೇಗೆ ತಯಾರಿಸಬಹುದೆಂದು ಹೇಳುವ ಮೂಲಕ ತನ್ನ ಕೆಮಿಸ್ಟ್ರಿ ಜ್ಞಾನದ ಲಾಭವನ್ನು ನೀಡುತ್ತಾನೆ. ಡಾ॥ ಶರ್ಮರವರು ಒಂದು ಮೋಫತ್ ಚಿಕಿತ್ಸಾಲಯವನ್ನು ತೆರೆಯುವಂತೆ ಹುರಿದುಂಬಿಸುತ್ತಾನೆ. ಅಂಬುಜಾಬಾಯಿಗೆ ತನ್ನ ತಂದೆ ನೀಡಿದ್ದ ಒಂದು ಹೊಲವನ್ನು ಮಾಡಿಸಲು ಹೇಳುತ್ತಾನೆ.

ಪ್ರಾರಂಭದಲ್ಲಿ ಇವೆಲ್ಲವೂ ಅವನಿಗೆ ಬಹಳ ಸುಲಭ ಎಂದು ಅನಿಸಿದ್ದರೂ ಕೂಡ ಕಾಲ ಕ್ರಮೇಣ ತೊಂದರೆಗಳು ಪ್ರಾರಂಭವಾಗುತ್ತವೆ. ಸ್ವತಃ ಶ್ರೇಯಾಂಸನ ತಂದೆಯ ಆಪ್ತರಾದ ಕಲ್ಯಾಣ ಶೆಟ್ಟರೇ ಶ್ರೇಯಾಂಸನ ವಿಚಾರಧಾರೆಗಳನ್ನು ತಿರಸ್ಕರಿಸಿ ಪರೋಕ್ಷ ಎಚ್ಚರಿಕೆಯನ್ನು ನೀಡುತ್ತಾರೆ. "ರೈತರ ಸಂಘ ಕಟ್ಟೋದು ಕಮ್ಯುನಿಸ್ಟರು ಮಾಡೋ ಕೆಲಸ. ಮಾಡಿಕೊಳ್ಳಲಿ ನಮಗ ಗೊತ್ತು, ನಮ್ಮ ನಮ್ಮ ರೈತರನ್ನು ಹ್ಯಾಂಗ ಕಂಟ್ರೋಲ್ ಮಾಡಬೇಕು ಅನ್ನೋದನ್ನ. ನೀ ಅದರಾಗ ಕೈ ಹಾಕಬ್ಯಾಡ, ಹೇಳತೀನಿ" ಎಂದು ಹೇಳುವಲ್ಲಿ ಮತ್ತು "ನಿನಗ ಇಲ್ಲೀ ವಿಷಯ ಭಾಳ ಗೊತ್ತಿಲ್ಲ, ನೀ ಮುಂಬಯಿ ಮನುಷ್ಯ. ಮ್ಯಾಗ ಏನೇನೋ ದೊಡ್ಡ ದೊಡ್ಡ ವಿಚಾರ ಇರ್ತಾವ. ಆದರ ಇಲ್ಲೀ ರಾಜಕಾರಣ ಬ್ಯಾರೇ" ಎಂದು ಹೇಳುವಲ್ಲಿ ಊರಿನವರ ವಿರುದ್ಧ ಆತನಿಗೆ ಸಂಘರ್ಷಕ್ಕೆ ಇಳಿಯುವುದು ಕಷ್ಟವಾಗುತ್ತದೆ.

ಅಂತೆಯೇ ಊರಿನ ರಾಜಕಾರಣ ಶ್ರೇಯಾಂಸನ ಎಲ್ಲಾ ಆಲೋಚನೆ ಹಾಗೂ ಯೋಜನೆಗಳನ್ನು ಕುಂಠಿತಗೊಳಿಸುತ್ತವೆ. ಶ್ರೇಯಾಂಸನಿಗೆ ಏಕಾಕಿ ಭಾವ ಕಾಡತೊಡಗುತ್ತದೆ. ಅವನ ಕ್ರಿಯಾಶೀಲತೆಗೆ ಕಠಿಣವಾದ ಆಹ್ವಾನ ನಿರ್ಮಾಣಗೊಳ್ಳುತ್ತದೆ. ಆಗ ಆತ ಆಲೋಚಿಸುತ್ತಾ 'ಕೊನೆಗೆ ಕೈಗೆ ಹತ್ತುವುದು ಬರಿ ಬೂದಿಯೇ' ಎಂದು ಆತ ಹೇಳುವ ಮಾತುಗಳು ಮುಂದೆ ಆತನ ಅಂತ್ಯವನ್ನು ಸೂಚಿಸುತ್ತದೆಯೇನೋ ಎಂದು ಭಾಸವಾಗುತ್ತದೆ. ಊರಿನ ರಾಜಕಾರಣದಿಂದ ಬೇಸರಗೊಂಡ ಶ್ರೇಯಾಂಸ ತಾನು ಹಿಂತಿರುಗಿ ಮುಂಬಯಿಗೆ ಹೋಗಿಬಿಡಲೇ ಎಂದೂ ಆಲೋಚಿಸುತ್ತಾನೆ. ಅಲ್ಲದೇ ಆತ ಪ್ರಾರಂಭಿಸಿದ ವೈಚಾರಿಕ ಕ್ಲಬ್ಬು 'ರಸೆಲ್ ಕ್ಲಬ್' ಬಗ್ಗೆಯೂ ಕೂಡ ಜನರಿಂದ ಏನೇನೋ ಮಾತುಗಳು ಕೇಳಿಬರುತ್ತವೆ. 'ಆತನ ಕ್ಲಬ್ಬು ಕಮ್ಯುನಿಸ್ಟರ ಕ್ಲಬ್ಬು ಆಗಲಿಕ್ಕೆ ಹತ್ತೇದ' ಎಂದು ಮಾತನಾಡತೊಡಗುತ್ತಾರೆ. ಈ ವಿಚಾರವಾಗಿ ದೇವೀಮಠರವರು ಶ್ರೇಯಾಂಸನಿಗೆ ಸೂಕ್ಷ್ಮವಾಗಿ ತಿಳಿಸುತ್ತಾರೆ. ಅಲ್ಲದೇ ಎಲ್ಲ ವಿಚಾರವಾಗಿಯೂ ಶ್ರೇಯಾಂಸ ಅತ್ಯಂತ ಹುಷಾರಾಗಿರಬೇಕು ಎಂಬ ಎಚ್ಚರಿಕೆಯನ್ನೂ ನೀಡುತ್ತಾರೆ. ಎಲ್ಲಾ ವಿಚಾರಗಳನ್ನು ತಿಳಿದ ಶ್ರೇಯಾಂಸ ಅಸಹಾಯಕನಾಗಿ ನಿಜವಾಗಿಯೂ ತಣ್ಣಗಾಗುತ್ತಾನೆ.

ಮುಂದೆ ಶ್ರೇಯಾಂಸನ ಮೇಲೆ ನಡೆದ ಹಲ್ಲೆಯು ಈ ಎಲ್ಲಾ ಅಂಶಗಳಿಗೆ ಸಾಕ್ಷಿಯಾಗುತ್ತದೆ. ಆದರೆ ಹಲ್ಲೆ ನಡೆಸಿದವರು ಯಾರು ಎಂಬುದು ತಿಳಿಯುವುದಿಲ್ಲ. ನಡೆದ ಈ ಎಲ್ಲಾ ಘಟನೆಗಳಿಂದ ಶ್ರೇಯಾಂಸ ಸೋತು ಹೋಗುತ್ತಾನೆ. ಎಲ್ಲಾ ವಿಚಾರಗಳನ್ನು ಆಲೋಚನೆ ಮಾಡಿದ ಶ್ರೇಯಾಂಸ ತದನಂತರ ಗೊಂದಲಕ್ಕೀಡಾಗುತ್ತಾನೆ. ತಾನು ಹಿಂತಿರುಗಿ ಮುಂಬಯಿಗೆ ಹೋಗುವುದೋ ಅಥವಾ ಇಲ್ಲಿಯೇ ಇದ್ದು ಊರನ್ನು ಒಳ್ಳೆಯ ರೀತಿಯಲ್ಲಿ ಅಭಿವೃದ್ಧಿಗೊಳಿಸುವುದೋ ಎಂಬ ಗೊಂದಲದಲ್ಲಿಯೇ ಇರುತ್ತಾನೆ. ಕೃಷ್ಣಾಪುರವೋ, ಮುಂಬಯಿಯೋ ಎಂಬ ದ್ವಂದ್ವ, ಗೊಂದಲಗಳಿಗೆ ಗುರಿಯಾಗುತ್ತಾನೆ. ಕೊನೆಗೆ ತಾನು ಏನೇ ಮಾಡಿದರೂ ಏಕಾಂಗಿಯಾಗಬೇಕಾಗುತ್ತದೆ ಎಂಬ ಅಂಶವು ಅವನಿಗೆ ಗೋಚರವಾಗತೊಡಗುತ್ತದೆ. ಆದರೂ ಅಂತಿಮವಾಗಿ ಆತನು 'ತನ್ನ ಅಸ್ತಿತ್ವವಿರುವುದು ಕೃಷ್ಣಾಪುರದಲ್ಲಿಯೇ ಹೊರತು ಮುಂಬಯಿಯಲ್ಲಿ ಅಲ್ಲ' ಎಂಬ ತೀರ್ಮಾನಕ್ಕೆ ಬರುತ್ತಾನೆ. ಈ ಹಂತದಲ್ಲಿ ಆತನ ಮನಸ್ಸು ಪ್ರಕ್ಷುಬ್ಧಗೊಂಡಿರುತ್ತದೆ. ಈ ಸಂದರ್ಭದಲ್ಲಿ ಮಗಳು ಕಲ್ಪನಾ ತನ್ನ ತಂದೆಯ ಬೇರು ಕೃಷ್ಣಾಪುರದಲ್ಲೇ ಇರುವುದನ್ನು ಗುರುತಿಸುತ್ತಾಳೆ. ಆದ್ದರಿಂದ ಅವಳು ತನ್ನ ತಂದೆಗೆ ನೀಡುವ ಸಲಹೆ ಅತ್ಯಂತ ಮಾರ್ಮಿಕವಾಗಿದೆ: "ಡ್ಯಾಡಿ ನೀ ಇಲ್ಲೇ ಇರಬೇಕು. ಇದೇ ನಿನ್ನ ಕರ್ಮಭೂಮಿ" (ಪು. ೨೧೧).

ಕೇವಲ ಸಾಂಸ್ಕೃತಿಕ, ಸಾಮಾಜಿಕ ಕೃತಿ ಮಾತ್ರವೇ ಬದಲಾವಣೆ ತರಲು ಸಾಧ್ಯವಿಲ್ಲ. ರಾಜಕೀಯ ಕೃತಿಯೇ ನಿಜವಾಗಿ ಜೀವನವನ್ನು ಪರಿವರ್ತಿಸುವ ಕೃತಿ ಎಂದು ತೀರ್ಮಾನಿಸುವ ಮೂಲಕ ಕೃಷ್ಣಾಪುರದಲ್ಲಿಯೇ ಉಳಿಯುವ ತೀರ್ಮಾನಕ್ಕೆ ಶ್ರೇಯಾಂಸ ಬರುತ್ತಾನೆ. ಆದರೆ ಪಾಲ್ ಹೇಳುವಂತೆ "ಶ್ರೇಯಾಂಸನ ಸಾಫಲ್ಯವಿರುವುದು ಕೃಷ್ಣಾಪುರದಲ್ಲಲ್ಲ. ಅವನ ಆಧುನಿಕ ವ್ಯಕ್ತಿತ್ವಕ್ಕೆ ಯೋಗ್ಯವಾದ ನೆಲ, ನೀರು ಮುಂಬಯಿಯಲ್ಲಿ ಮಾತ್ರ ಅಥವಾ ಅಂತಹ ಮಹಾನಗರಗಳಲ್ಲಿ ಮಾತ್ರ, ಇಲ್ಲಿಲ್ಲ. ಸಮಸ್ಯೆಗಳನ್ನು ತನ್ನ ಹತ್ತಿರದ ಸಂಬಂಧಿಕರಿಗೆ ಬಿಟ್ಟುಕೊಡುವುದು ಲೇಸು. ಶ್ರೇಯಾಂಸ ಕೃಷ್ಣಾಪುರದಲ್ಲಿ ಟ್ರಾಜಿಕ್ ಹೀರೋ".

ಶ್ರೇಯಾಂಸನ ಕಾರ್ಯ ಯೋಜನೆಗಳೆಲ್ಲವೂ ಅನುಷ್ಠಾನಗೊಳ್ಳುವಲ್ಲಿ ಅವನಿಗೆ ತನ್ನ ಹಿತೈಷಿಗಳೇ ಅಡ್ಡಿಯಾಗಿರುವುದರಿಂದ ನಿಜಕ್ಕೂ ಆತ ದುರಂತ ನಾಯಕನಾಗುತ್ತಾನೆ. ಅಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಆತ ತುಂಬಾ ಶ್ರಮಿಸಬೇಕಾಗುತ್ತದೆ.

ಒಟ್ಟಾರೆಯಾಗಿ 'ಬೀಜ' ಕಾದಂಬರಿಯಲ್ಲಿ ಮನುಷ್ಯ ಮನುಷ್ಯ ಸಂಬಂಧಗಳ, ಧಾರ್ಮಿಕ, ಸಾಮಾಜಿಕ, ಗಂಡು-ಹೆಣ್ಣುಗಳ ನಡುವಿನ ಸಂಘರ್ಷಗಳನ್ನು ಹಾಗೂ ಅಸ್ತಿತ್ವದ ಪ್ರಶ್ನೆಯನ್ನು ದೇಸಾಯಿಯವರು ವೈಚಾರಿಕವಾಗಿ ಮತ್ತು ಕಲಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಅವರು ಕನ್ನಡ ಕಾದಂಬರಿಗಳ ಸಾಲಿನಲ್ಲಿ ಇದೊಂದು ಮಹತ್ವದ ಕಾದಂಬರಿಯನ್ನಾಗಿ ಕಡೆದು ನಿಲ್ಲಿಸಿದ್ದಾರೆ.

೫.೬ ಅಂತರಾಳ : ಭೂತ ಮತ್ತು ವರ್ತಮಾನಗಳ ಸಂಘರ್ಷಗಳು

'ಅಂತರಾಳ'ಕಾದಂಬರಿಯು ಶಾಂತಿನಾಥ ದೇಸಾಯಿ ಅವರ ೬ ನೇ ಕಾದಂಬರಿಯಾಗಿದ್ದು ೧೯೯೩ ರಲ್ಲಿ ಪ್ರಥಮ ಬಾರಿಗೆ ಪ್ರಕಟಗೊಂಡಿತು. ಇಲ್ಲಿನ ಅಧ್ಯಯನಕ್ಕಾಗಿ ನವೆಂಬರ್ ೨೦೦೧ ರ ಪ್ರತಿಯನ್ನು ಬಳಸಿಕೊಳ್ಳಲಾಗಿದೆ.

ಶಾಂತಿನಾಥ ದೇಸಾಯಿ ಅವರ 'ಅಂತರಾಳ' ಕಾದಂಬರಿಯಲ್ಲಿ ಅಂತರ್‌ಜಾತಿಯ ಹಾಗೂ ಅಂತರ್‌ಧರ್ಮಿಯ ವಿವಾಹದ ಸಂಘರ್ಷಗಳ ಸ್ವರೂಪ, ಜೊತೆಗೆ ಕೌಟುಂಬಿಕ ಸಂಘರ್ಷಗಳನ್ನು ಮತ್ತು 'ಲಿವಿಂಗ್ ಟುಗೆದರ್' ಜೀವನಕ್ರಮದಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇವುಗಳ ಜೊತೆಗೆ, ಈ ಕಾದಂಬರಿಯಲ್ಲಿ ರಾಜಕೀಯ ಸಂಘರ್ಷ ಮತ್ತು ಗಾಂಧಿ, ನೆಹರು ಯುಗದ ತತ್ವಗಳ ಪರಿಶೀಲನೆ, ಸ್ವಾವಲಂಬಿ ಜೀವನಕ್ರಮ, ಹಿಂಸೆ ಹಾಗೂ ಅಹಿಂಸೆಯ ಮಾರ್ಗಗಳ ಸಂಘರ್ಷ, ತಂದೆ-ಮಕ್ಕಳ ನಡುವಿನ ಸಂಘರ್ಷ, ಪುರುಷ ಮತ್ತು ಸ್ತ್ರೀಪಾತ್ರಗಳ ಅಸ್ಮಿತೆ, ಸಾಮಾಜಿಕ ಸ್ಥಿತ್ಯಂತರಗಳು ಔದ್ಯೋಗಿಕರಣದ ಪ್ರಭಾವಗಳು ಹಾಗೂ ವ್ಯಕ್ತಿತ್ವಗಳ ಛಿದ್ರೀಕರಣ - ಇತ್ಯಾದಿ ವಿಷಯಗಳನ್ನು ಕುರಿತು ಚರ್ಚಿಸಲಾಗಿದೆ.

ಅಂತರಾಳ ಕಾದಂಬರಿಯು ಭೂತಕಾಲದ ನೆನಪುಗಳೊಂದಿಗೆ ವರ್ತಮಾನದಲ್ಲಿ ಸಾಗುತ್ತದೆ. ಕಾದಂಬರಿಯ ನಾಯಕನೇ ಹೇಳುವಂತೆ ಈ ಕಾದಂಬರಿಯು ನಾಯಕನ ಆತ್ಮ ನಿವೇದನೆಯಾಗಿದೆ (ಪು. ೩). ಒಮ್ಮೆ ಅನಾರೋಗ್ಯದ ನಿಮಿತ್ತ ಒಬ್ಬ ಸಕ್ಯಾಯೆಟ್ರಿಸ್ಟಿನ ಹತ್ತಿರ ಹೋಗಿದ್ದ ವಿಕ್ರಮ, ಅವರ ಸಲಹೆ ಮೇರೆಗೆ ತನ್ನ ಆತ್ಮ ನಿವೇದನೆಯನ್ನು ಬರೆಯಲು ಪ್ರಾರಂಭಿಸುತ್ತಾನೆ. ಆದರೆ ವೃತ್ತಿಯಲ್ಲಿ ಎಂಜಿನಿಯರ್ ಆದ ವಿಕ್ರಮನು ಪ್ರಾರಂಭದಲ್ಲಿ ತನ್ನ ಬರವಣಿಗೆ ಬಗ್ಗೆ ತಾನೆ ಆಶ್ಚರ್ಯಗೊಳ್ಳುತ್ತಾನೆ.

ವಿಕ್ರಮನೇ ಹೇಳುವಂತೆ ಅವನ ಜೀವನವೇನು ಬಹಳ ವೈಶಿಷ್ಯ ಪೂರ್ಣವಾದದ್ದು ಎಂದು ಅನಿಸುವುದಿಲ್ಲ. ಅವನೇನೂ ದೊಡ್ಡ ಮನುಷ್ಯನೂ ಅಲ್ಲ, ಪ್ರಸಿದ್ಧಿಯನ್ನು ಗಳಿಸಿದವನೂ ಅಲ್ಲ. ಆದರೆ ಪ್ರಾಮಾಣಿಕವಾಗಿ ಜೀವಿಸಲು ಯತ್ನಿಸಿದ ಮನುಷ್ಯ ಅವನ ಜೀವನದಲ್ಲಿ ಬಂದಂಥ ಅನುಭವಗಳು ಬಹಳ ಜನರಿಗೆ ಬಂದಿರಬಹುದು- ಬಂದಿರಲೇಬೇಕು, ಆದರೆ ಅಂತಹ ಅನುಭವಗಳನ್ನು ಸ್ಪಷ್ಟವಾಗಿ, ತಿಳಿಯಾಗಿ ನೋಡುವ ದೃಷ್ಟಿ ಮಾತ್ರ ಬಹಳ ಜನರಲ್ಲಿರುವುದಿಲ್ಲ. ಅದರರ್ಥ ನನ್ನಲ್ಲಿ ಆ ದೃಷ್ಟಿ ಇದೆಯೆಂದಲ್ಲ. ಆ ದೃಷ್ಟಿಯನ್ನು ಪಡೆಯುವ ಪ್ರಯತ್ನ ಮಾತ್ರ ಇಲ್ಲಿದೆ ಎಂದು ಹೇಳುವಲ್ಲಿ ಕಾದಂಬರಿಕಾರರ ವಾಸ್ತವವಾದಿ ದೃಷ್ಟಿಕೋನವನ್ನು ಗುರುತಿಸಬಹುದಾಗಿದೆ.

ವಿಕ್ರಮ ರಾಣೆ ಮನೆತನಕ್ಕೆ ಸೇರಿದ ವ್ಯಕ್ತಿ. ದಾಂಡೇಲಿಯಲ್ಲಿ ನೆಲೆಸಿದ್ದ ಅವನ ಅಜ್ಜ, ದೊಡ್ಡಪ್ಪ, ತಂದೆ ಎಲ್ಲರೂ ಮರದ ದಂಧೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಅವನ ಚಿಕ್ಕಪ್ಪ ಕೂಡ ಮುಂಬಯಿಯಲ್ಲಿ ಕಟ್ಟಿಗೆಯ ವ್ಯಾಪಾರ ಮಾಡಿ ಸಾಕಷ್ಟು ಹಣ ಗಳಿಸಿರುತ್ತಾರೆ. ವಿಕ್ರಮನ ತಂದೆ ಧಾರವಾಡದಲ್ಲಿ ಒಂದು ಗ್ಯಾರೇಜ್‌ನ್ನು ನಡೆಸುತ್ತಿರುತ್ತಾರೆ. ಇದಕ್ಕೆ ಮುಖ್ಯ ಕಾರಣ ಧಾರವಾಡದಲ್ಲಿ ಮನೆ ಮಾಡಿದರೆ ಬೆಳಗಾವಿ ಶಹರಿನಲ್ಲಿ ಬೆಳೆದಿದ್ದ ತನ್ನ ಹೆಂಡತಿಗೆ

ಸಂತೋಷವಾಗುವುದು ಎಂಬುದರ ಜೊತೆಗೆ ಹುಡುಗರಿಗೆ ಶಾಲೆ-ಕಾಲೇಜುಗಳಿಗೆ ಹೋಗಲು ಅನುಕೂಲವಾಗುತ್ತದೆ ಎಂಬುದು ಆತನ ಆಲೋಚನೆಯಾಗಿರುತ್ತದೆ.

ವಿಕ್ರಮನ ತಾಯಿ ಬೆಳಗಾವಿಯವಳಾಗಿದ್ದು, ಶುದ್ಧ ಮರಾಠಿ ಮಾತನಾಡುತ್ತಿದ್ದಳು. ಆದರೆ ಅಪ್ಪನ ಮರಾಠಿ ತೀರ ಅಶುದ್ಧ, ಕನ್ನಡ ಮಾತ್ರ ಅತ್ಯಂತ ನಿರರ್ಗಳವಾಗಿರುತ್ತದೆ. ವಿಕ್ರಮ ಶಾಲೆಯಲ್ಲಿ ಕಲಿತದ್ದು ಕನ್ನಡ, ಮನೆಯಲ್ಲಿ ಮರಾಠಿ-ಕನ್ನಡ. ಅವ್ವನ ಕೂಡ ಮರಾಠಿ, ಅಪ್ಪನ ಕೂಡ ಅರ್ಧಮರ್ಧ ಕನ್ನಡವಾಗಿರುತ್ತದೆ. ರಾಣೆ ಮನೆತನದಲ್ಲಿ ಶಿಕ್ಷಣವೆಂದರೆ ಹೊಸ ಸಂಗತಿಯಾಗಿರುತ್ತದೆ. ಅದರೂ ಕೂಡ ವಿಕ್ರಮನ ತಂದೆ ಶಿಕ್ಷಣ ಪ್ರೇಮಿಯಾದ್ದರಿಂದ ವಿಕ್ರಮನು ಶಾಲೆ-ಕಾಲೇಜುಗಳಿಗೆ ಹೋಗುವುದು ಸಾಧ್ಯವಾಗುತ್ತದೆ. ಅಲ್ಲದೇ ಇದಕ್ಕೆ ಅವನ ಬೆಳಗಾವಿಯ ತಾಯಿಯ ಪ್ರೋತ್ಸಾಹವೂ ತುಂಬಾ ಇರುತ್ತದೆ.

ವಿಕ್ರಮನ ತಂದೆ ತನ್ನ ಮಕ್ಕಳು ಬ್ರಾಹ್ಮಣ ಹುಡುಗರ ದೋಸ್ತಿಯನ್ನು ಮಾಡಬೇಕೆಂದು ಅಪೇಕ್ಷಿಸುತ್ತಿರುತ್ತಾನೆ. "ಬ್ರಾಹ್ಮಣ ಹುಡುಗರ ಕೂಡ ಗೆಳೆತನ ಮಾಡಿದರೇನೇ ಸ್ವಲ್ಪ ವಿದ್ಯಾ-ಗಿದ್ಯಾ ಬಂದೀತು; ಶಿಸ್ತು- ಸಂಸ್ಕೃತಿ ಬಂದಾವು. ಇಲ್ಲದಿದ್ದರೆ ದನ ಕಾಯೋ, ಹೊಲ ಮಾಡೋ ಕೆಲ್ಸಾನೆ ನಿಂಗೆ ಕಟ್ಟಿಟ್ಟದ್ದು" ಎಂದು ಮೇಲಿಂದ ಮೇಲೆ ವಿಕ್ರಮನಿಗೆ ಹೇಳುತ್ತಿರುತ್ತಾನೆ. ಜೊತೆಗೆ ತಮ್ಮ ಗ್ಯಾರೇಜಿಗೆ ಬರುತ್ತಿದ್ದ ಆಯುರ್ವೇದ ಔಷಧಿ ಕೊಡುವುದರಲ್ಲಿ ಅತ್ಯಂತ ಪ್ರಸಿದ್ಧ ವೈದ್ಯರಾಗಿದ್ದ ಡಾ॥ ಜೋಶಿಯವರ ಬೆನ್ನು ಹತ್ತಿ, ಅವರ ಮಗನಾದ ಗೋವಿಂದನೊಡನೆ ವಿಕ್ರಮನು ಅಭ್ಯಾಸ ಮಾಡಲು ಅವರ ಪರವಾನಗಿಯನ್ನು ದೊರಕಿಸಿ ಕೊಟ್ಟಿರುತ್ತಾನೆ. ಗೋವಿಂದನ ಬಿಳಿ ಬಣ್ಣ, ಅವನ ಹೊಳೆಯುವ ದೊಡ್ಡದೊಡ್ಡ ಕಣ್ಣುಗಳು, ಅವನ ಉದ್ದ 'ನಾನಾ ಫಡಣೀಸ ಮೂಗು, ಅವನ ಚುರುಕು ಬುದ್ಧಿ, ಅವನ ಓರಣ, ಕ್ಲಾಸಿನಲ್ಲಿ ಯಾವಾಗಲೂ ಮೊದಲನೇ ನಂಬರ್ ಗಿಟ್ಟಿಸುವ ಅವನ ಚಾತುರ್ಯ ಇತ್ಯಾದಿಗಳಿಂದಾಗಿ ವಿಕ್ರಮನ ತಂದೆಗೆ ಗೋವಿಂದ ಆದರ್ಶ ವ್ಯಕ್ತಿಯಾಗಿರುತ್ತಾನೆ. ಹೀಗಾಗಿ ಗೋವಿಂದನ ಮನೆಗೆ ಹೋಗಲು ವಿಕ್ರಮ ಸ್ವಲ್ಪ ತಕರಾರು ಮಾಡಿದರೆ ದನಾ ಕಾಯುವವನೇ ಎಂದು ಬೈದು ಒತ್ತಾಯ ಮಾಡಿ ಅವರ ಮನೆಗೆ ಕಳುಹಿಸುತ್ತಿರುತ್ತಾನೆ. ಮುಂದೆ ಇದೇ ವಿಕ್ರಮನ ಜೀವನದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗುತ್ತದೆ. ಗೋವಿಂದನ ತಂಗಿಯಾದ ಯಶೋದೆ ಮತ್ತು ವಿಕ್ರಮ ಇಬ್ಬರೂ ಪರಸ್ಪರ ಪ್ರೀತಿಸಿ ವಿವಾಹವಾಗುತ್ತಾರೆ.

ದೇಸಾಯಿಯವರ ಕಾದಂಬರಿಗಳಲ್ಲಿ, ಕಥೆಗಳಲ್ಲಿ ಕಂಡು ಬರುವ ಅಂತರ್‌ಜಾತಿಯ, ಅಂತರ್ ಧರ್ಮೀಯ ವಿವಾಹದ ಅಂಶವನ್ನು ನಾವು ಈ ಕಾದಂಬರಿಯಲ್ಲಿಯೂ ಗುರುತಿಸಬಹುದಾಗಿದೆ. ವಿಕ್ರಮನು ಕ್ಷತ್ರಿಯ ವಂಶದ ರಾಣೀ ಮನೆತನಕ್ಕೆ ಸೇರಿದವನು. ಯಶೋದೆ ಬ್ರಾಹ್ಮಣ ಮನೆತನಕ್ಕೆ ಸೇರಿದವಳು. ಇದು ವಿಕ್ರಮನ ಕುಟುಂಬದಲ್ಲಿ ಸಂಘರ್ಷಕ್ಕೆ ಕಾರಣವಾಗುತ್ತದೆ.

ದಾಂಡೇಲಿಯಲ್ಲಿದ್ದ, ವಿಕ್ರಮನ ದೊಡ್ಡಪ್ಪ ವಿಕ್ರಮನ ಮದುವೆ ವಿಚಾರವಾಗಿ ಒಂದು ದೊಡ್ಡ ರಾದ್ಧಾಂತವನ್ನೇ ಮಾಡುತ್ತಾರೆ. 'ವಿಕ್ರಮ್ ನೀನೇನೋ ಒಬ್ಬ ಬ್ರಾಹ್ಮಣರ ಹುಡುಗೀನ್ನ ಲಗ್ನಾ ಆಗಬೇಕು ಅಂತೀಯಂತೆ. ಅದೆಲ್ಲ ನಡೆಯೋದಿಲ್ಲ' ನಮ್ಮನ್ಯಾಗ, ನೆನಪಿರಲಿ ಎಂದು ದೊಡ್ಡಪ್ಪ

ಹೇಳಿದಾಗ, ವಿಕ್ರಮನು ಕೂಡ ಅಷ್ಟೇ ಗಟ್ಟಿಯಾಗಿ 'ಬಡೇಕಾಕ, ಈಗ ಅದರ ಬಗ್ಗೆ ಚರ್ಚೆಯೇ ಸಾಧ್ಯವಿಲ್ಲ. ಅದೆಲ್ಲ ಯಾವಾಗಲೋ ಫಿಕ್ಸ್ ಆಗೇದ' ಎಂದು ಹೇಳುತ್ತಾನೆ. 'ನನ್ನ ಮತ್ತು ಯಶೋದೆಯ ಮದುವೆ ಫಿಕ್ಸ್ ಆಗೇದ' ಎಂದು ವಿಕ್ರಮ ಹೇಳಿದಾಗ 'ಯಾರು ಫಿಕ್ಸ್ ಮಾಡಿದರು? ನಿಮ್ಮಪ್ಪನೇ, ನಿಮ್ಮವ್ವನೇ ಯಾರು?' ಎಂದು ದೊಡ್ಡಪ್ಪ ಗುಡುಗುತ್ತಾನೆ. ವಿಕ್ರಮ್ ಅತ್ಯಂತ ಶಾಂತವಾಗಿ' ನಾನು ಮತ್ತು ಅವಳು' ಎಂದು ಉತ್ತರ ಕೊಡುತ್ತಾನೆ. ಅದಕ್ಕೆ ಅವನ ದೊಡ್ಡಪ್ಪ 'ನಮ್ಮ ರಾಣೇ ಘರಾಣೆದೊಳಗ ಇದೆಲ್ಲ ನಡೆಯೋದಿಲ್ಲ. ಒಳ್ಳೊಳ್ಳೆಯ ಮನೆತನದ ಹೆಣ್ಣು ಕೇಳಿ ಬಂದಾವು. ಅವುಗಳಲ್ಲಿ ನಾಲ್ಕಾರು ಆರಿಸಿ, ಹೋಗಿ ನೋಡಿ ಬರೋಣಂತ' ಎಂದು ಹೇಳಿದಾಗ ವಿಕ್ರಮ ಅದಕ್ಕೆ ಒಪ್ಪುವುದಿಲ್ಲ. 'ನಾ ಅವಳನ್ನೇ ಮಾಡಿಕೋತೀನಿ ಅಂತ ಹಟ ಹಿಡಿದ್ರ' ಎಂದು ಕೇಳುತ್ತಾನೆ. 'ಹಟಾ ಹಿಡಿದ್ರ ಮನಿ ಬಿಟ್ಟು ದಾರೀ ಹಿಡಿ ಅಂತೇವಿ' ಎಂದು ಹೇಳುತ್ತಾನೆ (ಪು. ೯೭). ಇಲ್ಲಿ ತಲೆಮಾರುಗಳ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ.

ವಿಕ್ರಮ ತನ್ನ ಮತ್ತು ಯಶೋದೆಯ ಲಗ್ನಕ್ಕೆ ತನ್ನ ತಂದೆಯೇ ಪರವಾನಿಗೆ ನೀಡಿದ್ದಾನೆ ಎಂದು ಹೇಳಿದಾಗ, ವಿಕ್ರಮನ ದೊಡ್ಡಪ್ಪ ವಿಕ್ರಮನ ತಂದೆಯಾದ ರಾಜರಾಮನ ವಿರುದ್ಧ ಸಿಟ್ಟಿಗೇಳುತ್ತಾರೆ. 'ಇಲ್ನೋಡು ರಾಜರಾಮ, ನೀ ಏನಾದ್ರೂ ನಿನ್ನ ಮಗನ ಹಠಕ್ಕೆ ಬಲಿ ಬಿದ್ದು ಹೂಂ ಅಂದಿ ಅಂತಂದ್ರ ನೀ ಬ್ಯಾರೇ ಆಗಬೇಕು. ಹೇಳಿಡ್ತೀನಿ, ಹಾಂ! ನಮ್ಮ ರಾಣೆ ಮನೆತನದ ಒಂದು ಭಾಗ ಭ್ರಷ್ಟಾಗಿ ಹೋತು ಅಂತ ತಿಳಕೋತೀನಿ. ಹೋತು ಅಂತ ನೀರ ಬಿಡ್ತೀನಿ.ತಿಳಿತಿಲ್ಲೋ' ಎಂದು ಹೇಳುತ್ತಾರೆ. ಆದರೆ ವಿಕ್ರಮನ ತಂದೆ ತನ್ನ ಮೌನವನ್ನು ಬಿಡದೇ ಇದ್ದಾಗ, ಏಳೆಂಟು ದಿನಗಳ ನಂತರ ರಾಣೆ ಬಂಧುಗಳಲ್ಲಿ ವಾಟಣಿಯಾಗುತ್ತದೆ. ಹೀಗೆ ವಿಕ್ರಮ ಮತ್ತು ಯಶೋದೆಯ ಸಂಬಂಧದ ಮೂಲಕ ಅಪ್ಪ ಮಗನ ಸಂಬಂಧ ಗಟ್ಟಿಯಾದರೂ ಅವರ ಹಾಗೂ ದೊಡ್ಡಪ್ಪನ ಸಂಬಂಧ ಅವರಿಗೆ ನಂಟಾಗಿಯೂ ಹರಿದಂತಾಗುತ್ತದೆ.

ಅಂತರಾಳ ಕಾದಂಬರಿಯಲ್ಲಿಯೂ ಕೂಡ ಕೌಟುಂಬಿಕ ಸಂಘರ್ಷಗಳನ್ನು ಗುರುತಿಸಬಹುದಾಗಿದೆ. ವಿಕ್ರಮ ಮತ್ತು ಯಶೋದ ಪ್ರೀತಿಸಿ ವಿವಾಹವಾದರೂ ಕೂಡ ಕಾಲ ಕ್ರಮೇಣ ಅವರಿಬ್ಬರ ಮಧ್ಯೆ ಮನಸ್ತಾಪಗಳು ಉಂಟಾಗುತ್ತವೆ. ವಿಕ್ರಮನು ತನ್ನ ಎಕ್ಸಿಕ್ಯೂಟೀವ್ ಎಂಜಿನಿಯರ್ ಕೆಲಸಕ್ಕೆ ರಾಜೀನಾಮೆ ನೀಡಿದಾಗ ಯಶೋದೆಗೆ ಭಯಂಕರ ಸಿಟ್ಟು ಬರುತ್ತದೆ. 'ಯಾಕೆ ಹೀಗೆ ಒಮ್ಮೆಲೆ ಹುಚ್ಚರಂಗೆ ರಾಜೀನಾಮೆ ಕೊಟ್ಟಿರಿ – ನನಗೆ ಕೇಳಬೇಕೆಂದೆನಿಸಲಿಲ್ಲವೇ? ನಾನೇನು ಸತ್ತಿದ್ದೆನೆಯೇ?' ಎಂದು ಕೇಳುವಲ್ಲಿ ಯಶೋದೆಯ ಅಸಮಾಧಾನವನ್ನು ಗುರುತಿಸಬಹುದಾಗಿದೆ. ಅಲ್ಲದೇ ವಿಕ್ರಮನು ಯಶೋದೆಯನ್ನು ಕುರಿತು 'ಯಶೂ ನಿನ್ನ ಮೂಲ್ಯಗಳು – ತೀರ ಬೂರ್ಜ್ವಾ ಆಗ್ಯಾವ...' ಎಂದು ಹೇಳಿದಾಗ ಯಶೋದೆ 'ನಾನು ವಾಸ್ತವವಾದಿ ಆಗೇನಿ– ನಿನ್ನ ತಲೆಯಲ್ಲೇ ಹುಟ್ಟು ಆದರ್ಶವಾದ ಅದ' (ಪು. ೧೬೮) ಎಂದು ಹೇಳುವಲ್ಲಿ ಅವಳ ವಾಸ್ತವವಾದಿ ದೃಷ್ಟಿಕೋನವನ್ನು ಕಾಣುತ್ತೇವೆ.

ಮಗಳು ವಸುಂಧರೆ ಹುಟ್ಟುವಷ್ಟರಲ್ಲಾಗಲೇ ತಮ್ಮಿಬ್ಬರ ಮಧ್ಯೆ ಏನೋ ಅಸ್ಪಷ್ಟ ಮಂಜಿನ ಗೋಡೆ ಬೆಳೆಯುತ್ತಿದೆ ಎಂಬುದರ ಅರಿವು ವಿಕ್ರಮನಿಗಾಗುತ್ತದೆ. ಈ ಗೋಡೆಯ ಹಿಂದೆ ಜಾತಿ,

ಸಂಸಾರ, ಇತ್ಯಾದಿ ಇವೆಯೋ ಅಥವಾ ಸ್ವಭಾವಗಳ ಭಿನ್ನತೆಯಿದೆಯೋ ಅಥವಾ ತಮ್ಮಿಬ್ಬರ ಮೌಲ್ಯಗಳಲ್ಲಿಯೇ ಬಹಳ ಅಂತರವಿದೆಯೇ ಅಥವಾ ಇವೆಲ್ಲವುಗಳ ಅಂಶಗಳು ಈಗ ಇಕ್ಕಟ್ಟಾಗಿ ಕೂಡಿಕೊಂಡಿವೆಯೇ ಎಂದು ಆಲೋಚಿಸುವಷ್ಟರ ಮಟ್ಟಕ್ಕೆ ಅವರಿಬ್ಬರಲ್ಲಿ ಬದಲಾವಣೆಯಾಗಿತ್ತು.

ಅಲ್ಲದೇ ವಸುಂಧರೆಯ ಜನನ ಅವರಿಬ್ಬರ ನಡುವಿನ ಸೇತುವೆಗೆ ಬಿರುಕು ಬಿಟ್ಟಂತಾಗುತ್ತದೆ. ಮಗಳು ಹುಟ್ಟಿದಳೆಂದು ಇಬ್ಬರಿಗೂ ಸಂತೋಷವಾಗಿದ್ದು ನಿಜವಾದರೂ ಕೂಡಾ ಯಶೋದೆಯ ಸಿಡಿಮಿಡಿತನ ಜಾಸ್ತಿಯಾಗುತ್ತದೆ. ವಿಕ್ರಮನು ಮಗಳ ಮೇಲೆ ಪ್ರೀತಿಯನ್ನು ತೋರಿಸಿದರೆ ವ್ಯಂಗ್ಯಾತ್ಮಕವಾಗಿ ಮಾತಾಡಿ ವಿಕ್ರಮನ ಮನಸ್ಸನ್ನು ಚುಚ್ಚುತ್ತಿದ್ದಳು. 'ಇನ್ನು ಮೇಲೆ ನೀವು ನಿಮ್ಮ ಮಗಳು– ನನಗೆ ಸ್ಥಾನವಿಲ್ಲ' ಎನ್ನುತ್ತಿದ್ದಳು. "ನಿನಗೆ ನಿನ್ನ ಮಗನಿದ್ದಾನಲ್ಲ" ಎಂದು ವಿಕ್ರಮ್ ಹೇಳಿದರೆ "ಅಂದರೆ ಫ್ರಾಯ್ಡ್ ಮಹಾಶಯ ಹೇಳುವಂತೆ ಇನ್ನು ಮೇಲೆ ಮನೆಯಲ್ಲಿ ಶೀತಲ ಯುದ್ಧವೇ?" ಎಂದು ಕೇಳುವ ಜೊತೆಗೆ "ಹಾಗಿದ್ದರೆ ಈಗಲೇ ಹೇಳಿರಿ – ನಾನು ನನ್ನ ತಂದೆಯ ಮನೆಯಲ್ಲಿಯೇ ಇದ್ದು ಬಿಡುವೆ.. ನೀವು ಹೋಗಿ ನಿಮ್ಮ ಹೊಸ ಮನೆಯಲ್ಲಿ ರಾಣೀ ನಿವಾಸದಲ್ಲಿ– ಇದ್ದು ಬಿಡಿರಿ– ಬೇಕಾದರೆ ನಿಮ್ಮ ಮಗಳನ್ನು ಒಯ್ದು ನೀವೇ ಬೆಳೆಸಿರಿ" (ಪು. ೧೭೫) ಎಂದು ನಗುತ್ತ ಹೇಳಿದರೂ ಕೂಡ ಮಾತಿನ ಹಿಂದೆ ಏನೋ ಒಂದು ಸತ್ಯ ಅಡಗಿದೆ ಎಂದು ವಿಕ್ರಮನಿಗೆ ಅನಿಸುತ್ತದೆ.

ವಿಕ್ರಮನು ವ್ಯವಹಾರದ ಕಾರಣವಾಗಿ ಹುಬ್ಬಳ್ಳಿಗೆ ಹೋಗುತ್ತಿರುತ್ತಾನೆ. ಆದರೆ ಅವನು ಹುಬ್ಬಳ್ಳಿಗೆ ಹೆಚ್ಚಾಗಿ ಹೋಗುವುದಕ್ಕೆ ಡಿಸೋಜಾನ ತಂಗಿ ಅಗ್ನಿಸ್‌ಳ ಜೊತೆ ವಿಕ್ರಮನ ಸಂಬಂಧ ಸುರುವಾಗಿರುವುದೇ ಕಾರಣ ಎಂಬುದು ಯಶೋದೆಯ ಅಭಿಪ್ರಾಯವಾಗಿರುತ್ತದೆ. ಅಗ್ನಿಸ್‌ಳ ಹತ್ತಿರ ತಾನು ಹೋಗುತ್ತಿದ್ದರೂ ಯಶೋದೆಗೆ ಅನಿಸಿದಂಥ ಸಂಬಂಧವಿದ್ದಿಲ್ಲವಾದರೂ ಹೆಂಡತಿಯ ತಲೆಯಲ್ಲಿ ಒಂದು ಭೂತ ಸೇರಿತೆಂದರೆ ಅದನ್ನು ಹೊರಗೆ ತೆಗೆಯುವುದು ತೀರ ಕಠಿಣ ಎಂಬುದು ವಿಕ್ರಮನ ಅಭಿಪ್ರಾಯವಾಗಿತ್ತು.

ವಿಕ್ರಮ್ ಅಗ್ನಿಸ್‌ಳ ಮನೆಗೆ ಹೋಗುವುದರಲ್ಲಿ 'ತೀರ್ಥಯಾತ್ರೆ' ಯ ಜೊತೆಗೆ ಅವಳ ಗಂಡ ಜಾರ್ಜ್ ಟೇಲರ್ ಜೊತೆಗೂಡಿ ಸ್ವತಂತ್ರವಾಗಿ ತಾವೇ ಕೈಯಿಂದ ನಿರ್ಮಿಸುವಂಥ ಒಂದು ಯಂತ್ರದ ಉದ್ದಿಮೆಯನ್ನು ಪ್ರಾರಂಭಿಸಬೇಕೆಂಬ ಇಚ್ಛೆಯಿರುತ್ತದೆ. ಅಲ್ಲದೇ ಯಾವುದೇ ರಾಜಕೀಯದಲ್ಲಿ ಬೀಳದೇ, ಯಾವುದೇ ಸಾಮಾಜಿಕ ತೊಡಕಿನಲ್ಲಿ ಸಿಕ್ಕಿಕೊಳ್ಳದೇ, ಒಂದು ಸ್ವಯಂಪೂರ್ಣ ಉದ್ಯೋಗ ಸುರುಮಾಡಿ, ಆ ಉದ್ಯೋಗದಲ್ಲಿ ಕೆಲಸ ಮಾಡುವ ಎಲ್ಲರೂ ಬಂದ ಲಾಭವನ್ನು ಹಂಚಿಕೊಂಡು, ಒಂದು ಚಿಕ್ಕ ಸಮಾಜವಾದೀ ಸಂಸಾರ ಹೂಡಬೇಕೆಂದು ಚಿಂತಿಸುತ್ತಿರುತ್ತಾನೆ. ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ವಿಕ್ರಮನು ಜಾನೀ–ಜಾರ್ಜರ ಜೊತೆ ಚರ್ಚೆಯನ್ನು ಮಾಡುತ್ತಿರುತ್ತಾನೆ. ಆದರೆ ಇವೆಲ್ಲವುಗಳು ಯಶೋದೆಯಲ್ಲಿ ಬದಲಾವಣೆಗೆ ಕಾರಣವಾಗುತ್ತವೆ. ಅವಳು ವಿಕ್ರಮನನ್ನು ವೈಯಕ್ತಿಕವಾಗಿ ಪ್ರಶ್ನಿಸುವುದನ್ನು ಬಿಡುತ್ತಾಳೆ. ಅವಳ ಮಾತುಕತೆ ಮನೆಯ ಬಗ್ಗೆ, ಹುಡುಗರ ಬಗ್ಗೆ, ನೆರೆಮನೆಯವರ ಬಗ್ಗೆ ಇಷ್ಟಕ್ಕೇ ಸೀಮಿತವಾಗತೊಡಗುತ್ತದೆ.

ವಿಕ್ರಮನು ಹುಬ್ಬಳ್ಳಿಗೆ ಹೋಗಿ ಅಗ್ನಿಸಳ ಮನೆಯಲ್ಲಿ ಕುಡಿದು ಊಟ ಮಾಡಿ ರಾತ್ರಿ ೧೨ ಗಂಟೆಗೆ ಬಂದರೂ ಯಶೋದೆ ಯಾವ ಪ್ರಶ್ನೆಯನ್ನೂ ಕೇಳುತ್ತಿರಲಿಲ್ಲ. ಸೆಕ್ಸಿಗೆ ಎಳೆದರೆ 'ನೀವು ಬಾಳ ಕುಡಿದಿದ್ದೀರಿ – ಸುಮ್ಮನೆ ಮಲಕೊಳ್ಳಿ. ನನಗೆ ವಾಸನೆ ಸಹಿಸಲಿಕ್ಕೆ ಆಗೋದಿಲ್ಲ' ಎಂದು ಹೇಳಿ ಮುಖ ತಿರುವಿ ಮಲಗಿಕೊಂಡು ಬಿಡುತ್ತಿದ್ದಳು. ಇಲ್ಲಿ ಅವರಿಬ್ಬರ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ. ಅಲ್ಲದೇ ವಿಕ್ರಮನು ಹೇಳುವಂತಹ ಗಂಡ–ಹೆಂಡಿರ ನಡುವಿನ ಕರ್ಷಣೆಗಳ ವಿವರ ಕೊಡುವುದು ಕಠಿಣ. ಈ ಕರ್ಷಣೆಗಳ ಅಭಿವ್ಯಕ್ತಿ ಕಣ್ಣಿನ ಹೊರಳುವಿಕೆಯಲ್ಲಿರಬಹುದು, ಕುತ್ತಿಗೆಯ ಮುರುಕಿನಲ್ಲಿರಬಹುದು, ಮಾತಿನಲ್ಲಿರಬಹುದು, ಮೌನದಲ್ಲಿರಬಹುದು, ಪ್ರತ್ಯಕ್ಷ ಸಂಭೋಗದಲ್ಲಿರಬಹುದು, ಕೈ ಬೆರಳುಗಳ ಒತ್ತಡದಲ್ಲಿರಬಹುದು, ನಾಟಕೀಯತೆಯಲ್ಲಿರಬಹುದು, ಡ್ರೆಸಿಂಗ್ ಟೇಬಲ್ ಮೇಲೆ ಕೂತು ಎಂದಿನಂತೆ ಊಟ ಮಾಡುವುದರಲ್ಲಿರಬಹುದು – ವಕ್ರತೆಗೆ ಮೇರೆ ಇಲ್ಲ, ಅಳತೆಯಿಲ್ಲ, ಅದನ್ನು ಅನುಭವಿಸುವವನೇ ಬಲ್ಲ ಅದರ ಒಳಗಿನ ಮುಳ್ಳುಗಳನ್ನು! ಸಹಜೀವನ ಸಮಾಂತರ ಜೀವನವಾಗುತ್ತ ಛೇದಿಸುವ ರೇಷೆಗಳೇ ಹೆಚ್ಚಾಗುತ್ತ ನಡೆದವು (ಪು. ೧೮೦) ಎಂಬ ಮಾತುಗಳು ಅವರ ನಡುವಿನ ಸಂಘರ್ಷ ಅತ್ಯಂತ ತೀಕ್ಷ್ಣವಾದುದಾಗಿತ್ತು ಎಂದು ಗುರುತಿಸಬಹುದಾಗಿದೆ.

ಹೀಗೆ ಇವರಿಬ್ಬರ ನಡುವೆ ಒಂದು ರೀತಿಯ ಅಂತರ ಬೆಳೆಯುತ್ತಾ ಹೋದಂತೆ ವಿಕ್ರಮನ ಬಾಳಿನಲ್ಲಿ ಅಶ್ವಿನಿಯ ಪ್ರವೇಶವಾಗುತ್ತದೆ. ಜಾರ್ಜ್‌ನ ಮುಖಾಂತರ ಜಾನಿಯ ಕ್ಲಾಸ್‌ಮೇಟಾದ ವಸಂತ ಮಹಾಬಲೇಶ್ವರ ಹಾಗೂ ಅಶ್ವಿನಿ– ಆರ್ಕಿಟೆಕ್ಟ್ ದಂಪತಿಯ ಪರಿಚಯವಾಗುತ್ತದೆ. ಆದರೆ ಅಶ್ವಿನಿ ವಸಂತನ ಗೆಳತಿ– ಹೆಂಡತಿಯಾಗಿರಲಿಲ್ಲ. ಅವರಿಬ್ಬರೂ 'ಲಿವಿಂಗ್ ಟುಗೆದರ್' ಜೀವನವನ್ನು ನಡೆಸುತ್ತಿರುತ್ತಾರೆ.

ವಿಕ್ರಮನು ಲೋಕಾಸ್ಟ್ ಹೌಸಿಂಗ್ ಪ್ರಾಜೆಕ್ಟ್ ಮಾಡುತ್ತಿದ್ದುದರಿಂದ ಅವರುಗಳು ಬೇಗ ಪರಿಚಿತರಾಗುತ್ತಾರೆ. ವಸಂತನಿಗೆ ವಿಕ್ರಮನ ಈ ಪ್ರಾಜೆಕ್ಟ್ ಹಿಡಿಸಿದ್ದರಿಂದ ಅವನು ವಿಕ್ರಮನೊಂದಿಗೆ ಕೆಲಸ ಮಾಡಲು ಒಪ್ಪಿಕೊಳ್ಳುತ್ತಾನೆ. ವಸಂತ ಎಷ್ಟು ಸಂಥ–ಶಾಂತ ಮನುಷ್ಯನೋ ಅಷ್ಟೇ ಉದ್ವೇಗ–ಉದ್ವಿಗ್ನತೆ ಹೆಣ್ಣು–ಅಶ್ವಿನಿ! ಅವಳಲ್ಲಿ ಸದೈವ ಒಂದು ಯಾವುದೋ ರಹಸ್ಯಮಯವಾದ ಜ್ವಾಲೆ ಉರಿಯುತ್ತಿದೆ ಎಂದು ವಿಕ್ರಮನಿಗೆ ಭಾಸವಾಗುವುದರ ಜೊತೆಗೆ ಕೆಂಪು–ಕರೀ ಬಣ್ಣದ ಮಣಿಪುರೀ ಶಾಲು ತೆಗೆದು ಹೊದ್ದುಕೊಂಡು ಕುಳಿತ ಅಶ್ವಿನಿ ವಿಕ್ರಮನಿಗೆ ಒಂದು ಹೊಸ ರೀತಿಯ ಹೆಣ್ಣು ಹುಲಿಯಂತೆ ಕಾಣುತ್ತಾಳೆ.

ಯಶೋದೆಗೆ ಮಾತ್ರ ಅಶ್ವಿನಿಯಲ್ಲಿಯ ಜ್ವಾಲೆಗಳ ಅರಿವು, ಅವರ ಮೊದಲ ಭೆಟ್ಟಿಯಲ್ಲಿಯೇ ಆಗುತ್ತದೆ. ವಿಕ್ರಮ್ ಯಶೋದೆಯನ್ನು ಕೇಳಿಯೇ ಅವರಿಬ್ಬರನ್ನು ತನ್ನ ಮನೆಗೆ ಊಟಕ್ಕೆ ಕರೆದಿರುತ್ತಾನೆ. ಊಟಕ್ಕೆಂದು ಮನೆಗೆ ಬಂದ ವಸಂತ್ ವಿಕ್ರಮನ ಕೋರಿಕೆಯ ಮೇರೆಗೆ ಅವನ ಮನೆಯ ಪ್ಲಾನಿಂಗ್ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಆದರೆ ಅಶ್ವಿನಿ ಆಧಾರ ಸಹಿತವಾಗಿ ಅವರ ಮನೆಯ ಕಲ್ಪನೆಗಳು ತುಂಬಾ ಹಳೆಯವು ಎಂದು ಹೇಳುತ್ತಾಳೆ. ಅಶ್ವಿನಿ ಹೇಳಿದಷ್ಟು ಯಶೋದೆ ಅದಕ್ಕೆ ವಿರುದ್ಧವಾಗಿ ತಮ್ಮ ಮನೆ ಎಷ್ಟು ಛಂದಿದೆ ಎಂದು ಸಾಧಿಸುತ್ತಾಳೆ. ಅವರಿಬ್ಬರೂ ಊಟ

ಮುಗಿಸಿ ಹೊರಟ ನಂತರ ಯಶೋದೆ ವಿಕ್ರಮನ ಜತೆ ಜಗಳವಾಡುತ್ತಾಳೆ. ತಮ್ಮ ಈ ಜಗಳ ವಿಕ್ರಮನ ವಿರುದ್ಧದ ಬಂಡಾಯ ಎಂಬುದಾಗಿ ಹೇಳುತ್ತಾಳೆ. ಅಶ್ವಿನಿಯ ವಿಚಾರವಾಗಿ ವಿಕ್ರಮ್ ತನ್ನನ್ನು ದ್ವೇಷಿಸದಂತೆ ಯಶೋದೆಯನ್ನು ಬೇಡಿಕೊಂಡಾಗ, ಯಶೋದೆಯು 'ನಾನು ನಿನ್ನ ತಾಯಿಯಾಗಲಾರೆ – ನಾನು ಏನಿದ್ದರೂ ಯಾವಾಗಲೂ ನಿನ್ನ ಹೆಂಡತಿ–ಧರ್ಮಪತ್ನಿ, ಗೊತ್ತಾಯಿತಲ್ಲಾ?' ಎಂದು ಸ್ವಲ್ಪ ಕಹಿಯಾಗಿಯೇ ಉತ್ತರಿಸುವಲ್ಲಿ ಅವಳಿಗೆ ವಿಕ್ರಮ್‌ನ ಸ್ವಭಾವದ ಬಗ್ಗೆ ಇದ್ದ ವಿರೋಧ, ಭಾವನೆಯನ್ನು ಗುರುತಿಸಬಹುದಾಗಿದೆ. ಹೀಗೆ ಮಾತಿನ ಮೂಲಕ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಿದ್ದ ಯಶೋದೆಯು ಕೊನೆ ಕೊನೆಗೆ ಮೌನವಾಗಿದ್ದುಕೊಂಡೇ ತಟಸ್ಥವಾಗಿರತೊಡಗುತ್ತಾಳೆ. ಅವಳು ಸಿಟ್ಟನ್ನಾಗಲಿ, ಅಸೂಯೆಯನ್ನಾಗಲಿ ಹೊರಗೆ ತೋರಿಸಲಿಲ್ಲ. ಅವಳ ತಟಸ್ಥತೆ ವಿಕ್ರಮನಿಗೆ ಸಿಟ್ಟು ತರಿಸುತ್ತಿತ್ತು. ಅಲ್ಲದೇ ಯಶೋದೆ ತನ್ನನ್ನು ಅವಮಾನಿಸುತ್ತಿದ್ದಾಳೆ ಎಂದೆನಿಸಿದರೂ ಕೂಡ ವಿಕ್ರಮ್ ಏನೂ ಮಾಡಲಾರದವನಾಗುತ್ತಾನೆ. ಈ ಅಸಹಾಯಕತೆಯೇ ಅವನನ್ನು ಖಿನ್ನತೆಯೆಡೆಗೆ ನೂಕುತ್ತದೆ. ಇದರಿಂದ ಪಾರಾಗಿ ಹೊರಬರಲು ಆತ ಒಬ್ಬ ಸಕಾಯಟ್ರಿಸ್ಟ್‌ನನ್ನು ಭೆಟ್ಟಿಯಾಗಿ ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ.

ಅಂತರಾಳ ಕಾದಂಬರಿಯಲ್ಲಿ ನಾವು ರಾಜಕೀಯ ಸಂಘರ್ಷವನ್ನು ಗುರುತಿಸಬಹುದಾಗಿದೆ. ಕಾದಂಬರಿಯಲ್ಲಿ ಬರುವ ಪೂಜಾರ ಮಾಸ್ತರರು ಒಬ್ಬ ಅಪ್ಪಟ ಗಾಂಧಿವಾದಿ. ವಿಕ್ರಮನ ಶಾಲಾ ಮಾಸ್ತರರಾದ ಇವರು ಆತನ ನಿಜವಾದ ಆತ್ಮಗುರುಗಳಾಗಿದ್ದರು. ಪೂಜಾರ ಮಾಸ್ತರರು ಗಾಂಧೀಜಿಯವರ ಬಗ್ಗೆ ಕತೆ ಮಾಡಿ ಹೇಳುವುದರ ಜೊತೆಗೆ ಗಾಂಧೀಜಿಯ ತತ್ವಗಳನ್ನು ಆತ್ಮಸಾತ್ ಮಾಡಿದ್ದರು. ಪ್ರತಿ ದಿನವೂ ತಪ್ಪದೇ ಚರಕಾ ತಿರುವುತ್ತಿದ್ದವರು. ಗಾಂಧೀಜಿಯವರ ಸಂಪೂರ್ಣ ಶಿಷ್ಯರಾಗಿದ್ದ ಅವರಿಗೆ ಗಾಂಧೀಜಿಯವರಲ್ಲಿ ಒಂದು ರೀತಿಯ 'ಅಂಧಶ್ರದ್ಧೆ'! ನೆಹರೂಗಾಗಲಿ ಪಟೇಲರಿಗಾಗಲಿ, ಗಾಂಧೀಜಿಯವರಲ್ಲಿ ತಮಗಿದ್ದಂತೆ ಸಂಪೂರ್ಣ ಶ್ರದ್ಧೆಯಿಲ್ಲ ಎಂದು ಕೊಂಡಿದ್ದವರು. ಎಪ್ಪತ್ತೈದು–ಎಪ್ಪತ್ತಾರು ವರ್ಷ ವಯಸ್ಸಿನವರಾದ ಮಾಸ್ತರರು ಸ್ವಾವಲಂಬಿ ಜೀವನವನ್ನು ನಡೆಸುತ್ತಿದ್ದರು. ಮಗ 'ಮೋಹನರಾವ' ಆಯ್ ಏ.ಎಸ್. ಅಧಿಕಾರಿಯಾಗಿ ಮಹಾರಾಷ್ಟ್ರ ರಾಜ್ಯದಲ್ಲಿದ್ದರೂ ಕೂಡ ಮಾಸ್ತರರು ಮಗನ ಬೆನ್ನು ಹತ್ತಿ ಹೋಗುತ್ತಿರಲಿಲ್ಲ. 'ಸಾಬರಮತಿ' ಆಶ್ರಮದಾಗ ನಾವು ಸ್ವಾವಲಂಬನಾ ಕಲಿತಂಥ ಮಂದಿ, ಗಾಂಧೀ ಮಂದಿ ಎಂದು ಧಿಮಾಕಿನಿಂದ ಹೇಳುತ್ತಿದ್ದವರು (ಪು. ೨೦). ಸರ್ಕಾರದಿಂದ ಕೊಡ ಮಾಡುತ್ತಿದ್ದ ಸ್ವಾತಂತ್ರ್ಯ ಸೈನಿಕರ ಪೆನ್ಶನ್ನಿಗಾಗಿ ಅರ್ಜಿ ಹಾಕಲು ಅವರು ಸರ್ವಥಾ ಸಿದ್ಧರಿರಲಿಲ್ಲ. "ಈ ಪೆನ್ಶನ್ ಕೊಟ್ಟು ನಾವು ನಮ್ಮ ಸ್ವಾಂತಸ್ಸುಖಾಯ ಮಾಡಿದ ತ್ಯಾಗಕ್ಕೆ ಮನೆನೇ ಬಳಿತಾ ಇದ್ದಾರೆ. ಈಗ ನಮ್ಮ ಆ ತ್ಯಾಗ ಮಾರ್ಕೆಟ್ಟಿನಲ್ಲಿ ಮಾರುವ ವಸ್ತುವಾಗಿದೆ. ಅತ ಬರೇ ಆರು ತಿಂಗಳು ಜೈಲಿನಲ್ಲಿದ್ದ, ನಾನು ಎರಡು ವರ್ಷ ಜೈಲಿನಲ್ಲಿದ್ದೆ, ನನಗೆ ಹೆಚ್ಚಿನ ಪೆನ್‌ಶನ್ ಸಿಗಬೇಕು ಎಂದು ಅವರಲ್ಲಿ ಪೈಪೋಟಿ ಶುರುವಾಗಿದೆ ಎಂಬ ಮಾಸ್ತರರ ಮಾತುಗಳಲ್ಲಿ ಸ್ವಾತಂತ್ರ್ಯ ನಂತರದ ಮೌಲ್ಯಗಳಲ್ಲಿನ ಬದಲಾವಣೆಗಳನ್ನು ಗುರುತಿಸಬಹುದಾಗಿದೆ.

ಗಾಂಧೀಯುಗದಲ್ಲಿನ ಪೂಜಾರ ಮಾಸ್ತರರ ಸಿಟ್ಟಿನಲ್ಲಿ ಸಾತ್ವಿಕತೆ, ಸೃಜನಶಕ್ತಿ ಇದ್ದರೆ ಈಗಿನ ಅವರ ಸಿಟ್ಟಿನಲ್ಲಿ ಅಸಹಾಯಕತೆ, ನಿರಾಶಾವಾದ, ಮೃತ್ಯುವಿನ ಕರಿಛಾಯೆ ಇದೆ. ಗಾಂಧೀವಧೆಯ

ನಂತರ ನಿಶ್ಯಕ್ತರಾದವರಲ್ಲಿ, ಉತ್ಸಾಹ ಕಳಕೊಂಡು ದಿಙ್ಮೂಢರಾದವರಲ್ಲಿ ಪೂಜಾರ ಮಾಸ್ತರರೂ ಒಬ್ಬರು. "ಗಾಂಧೀಜಿ ಎಂದರೆ ಒಂದು ಕ್ರಾಂತಿ-ಒಂದು ಮಹಾಪರಿವರ್ತನೆ-ಒಂದು ಅತ್ಯಂತ ಮಹತ್ವದ ಪ್ರಪಂಚದ ತಿರುವು... ಗಾಂಧೀನ್ನ ತಿಳಿಕೊಳ್ಳಲಿಕ್ಕೆ ನಾಲ್ಕು ಜನ್ಮ ಬೇಕು, ನಾಲ್ಕು..." (ಪು.೩೫) ಎಂಬ ಮಾಸ್ತರರ ಮಾತುಗಳಲ್ಲಿ ಮಾಸ್ತರರು ಗಾಂಧೀಜಿಯವರ ಬಗ್ಗೆ ಹೊಂದಿದ ಗೌರವದ ಭಾವನೆಯ ಜೊತೆಗೆ ಗಾಂಧೀಜಿಯ ವ್ಯಕ್ತಿತ್ವದ ಮಹತ್ವವನ್ನು ಗುರುತಿಸಬಹುದಾಗಿದೆ. ಜನವರಿ ೩೦, ೧೯೪೮- ಢಿಶ್ಯೂಂ, ಢಿಶ್ಯೂಂ, ಢಿಶ್ಯೂಂ ! ಒಂದು ಯುಗದ ಕೊನೆಯಾಯಿತು! ನಮ್ಮ ಸ್ವಾತಂತ್ರ್ಯದ ಉದಯ ರಕ್ತರಂಜಿತವಾಯಿತು. ಪೂಜಾರ ಮಾಸ್ತರರ ಎದೆಯೊಡೆಯಿತು. ಇಲ್ಲಿ ಅಹಿಂಸಾ ಮಾರ್ಗದಿಂದ ಗಳಿಸಿದ ಸ್ವಾತಂತ್ರ್ಯ ಹಿಂಸಾ ಮಾರ್ಗಕ್ಕೆ ಪರಿವರ್ತನೆಯಾಗಿದ್ದನ್ನು, ರಾಜಕೀಯ ಮತ್ತು ಸಾಮಾಜಿಕ ಸಂಘರ್ಷಗಳ ಪ್ರಾರಂಭವನ್ನು ಗುರುತಿಸಬಹುದಾಗಿದೆ. ಅಲ್ಲದೇ ಗಾಂಧೀ ಯುಗದ ಅಂತ್ಯದೊಂದಿಗೆ ಪ್ರಾರಂಭವಾದ ನೆಹರೂ ಯುಗ ಅತ್ಯಂತ ಜೋರಿಂದ ಸುರುವಾಗಿತ್ತು. ವಿಜ್ಞಾನಕ್ಕೆ, ಯಾಂತ್ರಿಕರಣಕ್ಕೆ, ಉದ್ಯೋಗಕೆ ಮಹತ್ವ ಬರತೊಡಗಿತ್ತು. ಚರಕ ಗಾಂಧೀ ಜಯಂತಿಯ ದಿನಕ್ಕೆ ಮಾತ್ರ ಮೀಸಲಾದ ವಸ್ತುವಾಯಿತು. ಗಾಂಧೀ ಬರಬರುತ್ತಾ ಕತೆಯಾಗತೊಡಗಿದ್ದ, ದೇವರಾಗತೊಡಗಿದ್ದ, ಮೂರ್ತಿಯಾಗತೊಡಗಿದ್ದ. ಗಾಂಧೀಜಿಯನ್ನು ನೆನೆಸುತ್ತಲೇ ನೆಹರೂ ಭಾರತದ ಯಾಂತ್ರೀಕರಣದ ಬಗ್ಗೆ ದೊಡ್ಡ ದೊಡ್ಡ ಉದ್ಯೋಗಗಳ ಸ್ಥಾಪನೆಯ ಬಗ್ಗೆ ಸ್ಫೂರ್ತಿಯಿಂದ ಮಾತನಾಡತೊಡಗಿದ. ಇಲ್ಲಿ ನಾವು ಭಾರತದ ರಾಜಕೀಯ ವ್ಯವಸ್ಥೆಯ ಸ್ಥಿತ್ಯಂತರವನ್ನು ಕಾಣಬಹುದಾಗಿದೆ.

ನೆಹರೂ ಯುಗದ ನಂತರ ಪ್ರಾರಂಭವಾದ ಇಂದಿರಾಗಾಂಧಿಯವರ ಕಾಲದಲ್ಲಿ ಪೂಜಾರ ಮಾಸ್ತರರಂತಹ ಅಪ್ಪಟ ಗಾಂಧೀವಾದಿಗಳ ಮನಸ್ಥಿತಿಯನ್ನು ಇಲ್ಲಿ ಗುರುತಿಸಬಹುದಾಗಿದೆ. 'ಸಾಕಾತು, ಈ ಇಂದಿರಮ್ಮನ ರಾಜ್ಯದಲ್ಲಿ ನಡೀದಿರುವ ಮಂಗತನ... ಏನಾದರೂ ಸ್ವಲ್ಪಾದರೂ ಔಷಧಕ್ಕಾದರೂ ಮೌಲ್ಯಗಳಂತೇವಲ್ಲ, ಅವು ಎಲ್ಲಿಯಾದರೂ ಉಳಿದಿವೆಯೇನು? ನಮ್ಮಂಥವರು ಹಾರಾಕಿರಿ ಮಾಡಿಕೊಳ್ಳಬೇಕು- ಪಬ್ಲಿಕ್ ಸುಯಿಸೈಡ್!' 'ನನಗನಸ್ತದ ಇವಳಿಗೆ ಇಷ್ಟು ಜನ ದ್ವೇಷಿಸುತ್ತಿರಬೇಕಲ್ಲ, ಇಷ್ಟು ಜನ ವೈರಿಗಳಿರಬೇಕಲ್ಲ- ಇವಳನ್ನು ಗುಂಡು ಹಾಕಿಯೋ ಮತ್ತೇನು ಮಾಡಿಯೋ ಮುಗಿಸಬೇಕು ಎಂದು ಕೆಲವರಾದರು ಅಂತಿರಬೇಕು... (ಪು. ೮೨) 'ಲೋಕಶಾಹಿಗೆ ನಾವು ಅನರ್ಹರು, ವಿಕ್ರಮ್. ನಮಗೆ ಪಾರತಂತ್ರ್ಯದಲ್ಲಿರೋದೇ ಸೇರ್ತದ. ಅದಕ್ಕೇ ಮೊದಲು ಎಷ್ಟು ಮೃದುವಾಗಿದ್ದಂಥಾ ಇಂದಿರಾ ಈಗ ಕಾಳಿಯಾಗಿ ನಿಂತಾಳು ಡಿಕ್ಟೇಟರ್ ಆಗ್ಯಾಳ, ಅದರರ್ಥ ಸಹಾನುಭೂತಿ ತೋರಿಸಬೇಕೆಂದಿಲ್ಲ... ದುಷ್ಟ ವ್ಯವಸ್ಥೆಗಳನ್ನು ಕರಕರ ಕತ್ತರಿಸಿ ಒಗೀಬೇಕು... ಆ ಸಂಜಯ ಹ್ಯಾಂಗ ದಿಲ್ಲೀಯೊಳಗೆ ಬುಲೆಡೋಜರ್ ಹಚ್ಚಿ ಝೋಪಡಪಟ್ಟೀನ್ನ ಕರಕರ ಅಂತ ನಾಶಮಾಡಿಬಿಟ್ಟನಲ್ಲ ಹಾಂಗ... ಆವನಲ್ಲಿಯೂ ಈ ಅಸಹನೆಯ ಶಕ್ತಿ ಅದ. ಅಂಥಾ ಅಸಹನೆಯ ಶಕ್ತಿ ಜನತೆಯಲ್ಲಿ ಬರಬೇಕು. ಸಿಕ್ಕಲ್ಲಿ ಕರಕರ ಎಂದು ನಾಶಮಾಡೋ ಬುಲ್‌ಡೋಜರ್ ಆಗಬೇಕು ನಾವು... (ಪು. ೮೩) ಎಂಬ ಮಾಸ್ತರರ ಮಾತುಗಳಲ್ಲಿ ಬದಲಾದ ವ್ಯವಸ್ಥೆಯು ಹೇಗೆ ಬದಲಾಗುತ್ತಾ, ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಮನೋಭಾವವನ್ನು ಅವರಲ್ಲಿ ಮೂಡಿಸತೊಡಗಿತು.

ಅಲ್ಲದೆ ಸ್ವಾತಂತ್ರ್ಯ ನಂತರದ ಭಾರತದ ವ್ಯವಸ್ಥೆ ಅವರಲ್ಲಿ ಆಕ್ರೋಶದ ಜೊತೆಗೆ ಹಿಂಸಾ ಭಾವವನ್ನು ಮೂಡಿಸತೊಡಗಿತು ಎಂದು ಹೇಳಬಹುದಾಗಿದೆ.

ಸ್ವಾತಂತ್ರ್ಯ ನಂತರದ ಸಾಮಾಜಿಕ ಬದಲಾವಣೆಗಳು, ಬೆಲೆ ಏರಿಕೆ, ಬಡವ–ಶ್ರೀಮಂತರ ನಡುವೆ ಹೆಚ್ಚಿದ ಅಂತರ, ಮನುಷ್ಯನ ಸ್ವಾರ್ಥತನ, ಕೇಡಿನ ಭಾವನೆ, ಈವ್ಹಿಲ್.. ಎಲ್ಲವೂ ಕೂಡ ಒಮ್ಮೊಮ್ಮೆ ಮಾಸ್ತರರಲ್ಲಿ ಗಾಂಧೀ ನಮ್ಮ ನಡುವೆ ಅವತರಿಸದೇ ಇದ್ದಿದ್ದರೆ ಚೆನ್ನಾಗಿತ್ತೋ ಏನೋ ಎಂಬ ನಿರಾಶಾ ಭಾವನೆಯನ್ನು ಮೂಡಿಸಿರುವುದನ್ನು ಗುರುತಿಸಬಹುದು.ಅಲ್ಲದೇ ಹಿಂದೂಸ್ತಾನ ಈ ಶತಮಾನದ ಮೊದಲೇ ದಶಕದ ರಾಜಕೀಯದ ದಾರಿಯಲ್ಲಿ ತೀರ ಪ್ರಾಕ್ಟಿಕಲ್ಲಾಗಿ ಕಾನ್‌ಸ್ಟಿಟ್ಯೂಶನಲ್ ರೀತಿಯಲ್ಲಿ ಮೊದಲಿಗೆ ಡೊಮಿನಿಯನ್ ಸ್ಟೇಟಸ್ ದೊರಕಿಸಿ, ನಡನಡುವೆ ಉಗ್ರವಾದಿಗಳು ಬ್ರಿಟೀಷರನ್ನು ಬೆದರಿಸುತ್ತ, ಹಾಗೇ ಸಾವಕಾಶವಾಗಿ ಬೀಳುತ್ತಾ, ಏಳುತ್ತಾ ಹೋಗಿದ್ದರೂ ಒಂದಿಲ್ಲೊಂದು ದಿನ ಸ್ವಾತಂತ್ರ್ಯ ಬರುತ್ತಿತ್ತು ಎಂಬ ಮಾತುಗಳಲ್ಲಿ ಬದಲಾವಣೆ ನಿರಂತರವಾದದ್ದು ಎಂಬುದನ್ನು ಗುರುತಿಸಬಹುದು. ಅಲ್ಲದೇ ಗಾಂಧೀಜಿ ತನ್ನ ಸ್ವಂತ ಅದ್ಭುತ ವ್ಯಕ್ತಿಮತ್ವದ ಶಕ್ತಿಯ ಮೇಲೆ ತಮ್ಮ ರಾಜಕೀಯ ತತ್ವ ನಿರ್ಮಿಸಿದರು. ಅದು ಅವರಿಗೆ ಮಾತ್ರ ಮೀಸಲಾದದ್ದು ಎಂಬ ಮಾತುಗಳು ಗಾಂಧೀಜಿಯ ವ್ಯಕ್ತಿತ್ವದ ಬಗ್ಗೆ ಬೆಳಕು ಬೀರುತ್ತವೆ. ಮಾಸ್ತರರ ಈ ಮಾತುಗಳು, ಅವರ ವಿಚಾರ ಸರಣಿ ಎಲ್ಲವೂ ಅವರ ವ್ಯಕ್ತಿತ್ವಕ್ಕೆ ಶೋಭಿಸುತ್ತಿಲ್ಲ. ಅವರೆಲ್ಲೋ ದುರ್ಬಲರಾಗಿದ್ದಾರೆ, ಅಸಹಾಯಕರಾಗಿದ್ದಾರೆ, ಗಾಂಧೀ ಹತ್ಯೆಯ ನಂತರ ಅವರು ಪಲಾಯನವಾದಿಗಳಾಗುತ್ತಿದ್ದಾರೆ ಎಂದು ವಿಕ್ರಮನಿಗೆ ಭಾಸವಾಗುತ್ತಿತ್ತು ಲಾಲಬಹದ್ದೂರ ಶಾಸ್ತ್ರಿ ತೀರಿಕೊಂಡಾಗ ಮಾಸ್ತರರು ತೀವ್ರವಾದ ದುಃಖಕ್ಕೆ ಒಳಗಾಗುತ್ತಾರೆ.

ಇಂದಿರಾಗಾಂಧಿ ಬಂದ ನಂತರವಂತೂ ಅವರ ತಲೆಯೇ ಕೆಟ್ಟಿತು. ೨೬ ಜೂನ್ ೧೯೭೫; ತುರ್ತು ಪರಿಸ್ಥಿತಿಯ ಘೋಷಣೆ ಅವರ ಸಿಟ್ಟನ್ನು ನೆತ್ತಿಗೇರಿಸಿತು. ದೇಶದಲ್ಲಿಯ ಶುದ್ಧ ಕ್ರೌರ್ಯ ಅವರ ಆತ್ಮವನ್ನೇ ನಡುಗಿಸಿಬಿಟ್ಟಿತು. ದೇವರೇ, ಆ ಗಾಂಧಿಯಿಂದ ಈ ಗಾಂಧಿಗೆ– ಎಲ್ಲಿಂದೆಲ್ಲಿಗೆ ಬಂದೆವಪ್ಪಾ–ದೇಶ ರಸಾತಳಕ್ಕೆ ಹೊರಟರೆ, ದೇವರೇ ಏನಾದರೂ ಮಾಡು... ಜನತಾ ಪಾರ್ಟಿ ಅಧಿಕಾರಕ್ಕೆ ಬಂದಾಗ ಸ್ವಲ್ಪ ಹಾಯೆನಿಸಿದರೂ ಅದು ಬಹಳ ದಿನ ತಡೆಯುವ ಗುಂಪಲ್ಲ – ಎಂದು ಸ್ಪಷ್ಟ ಹೇಳುತ್ತಿದ್ದರು. ಇಂದಿರಾ–ದ್ವೇಷದಿಂದ, ಇಂದಿರಾ–ಭಯದಿಂದ ಒಂದು ಗೂಡಿದ ಪಾರ್ಟಿಗೆ ಸ್ವಂತ ಅಸ್ತಿತ್ವ ಎಲ್ಲಿಯದು–ಅದು ಇಂದಿಲ್ಲ ನಾಳೆ ಮುರಿದು ಮೂರಾ ಬಟ್ಟೆಯಾಗುವುದೇ... ಮಾಸ್ತರರಿಗೆ ಜೀವನದಲ್ಲಿಯ ಉತ್ಸಾಹವೇ ಮಾಯವಾಯಿತು. ಸತ್ತರೆ ಸಾಕಪ್ಪ ಎಂದು ಉಸಿರುಗರೆಯತೊಡಗಿದರು... ಭಗವದ್ಗೀತೆಯನ್ನು ಓದುವುದನ್ನು ಬಂದು ಮಾಡಿದರು. ಓದಿದರೆ ಬಸವಣ್ಣನವರ ವಚನಗಳನ್ನು ಮಾತ್ರ.. ಬಸವಣ್ಣ, ಗಾಂಧೀ–ಕೊನೆಗೆ ರಾಜಕೀಯ ಗೊಂದಲದಲ್ಲಿ ದಿಙ್ಮೂಢರಾಗಿ ಶೂನ್ಯಕ್ಕೆ ಆಹ್ವಾನ ಕೊಟ್ಟರೇ! ಕೊನೆ ಕೊನೆಗೆ ಮಾಸ್ತರರಿಗೆ ಮರೆವು ಹೆಚ್ಚಾಗತೊಡಗಿತು. ಯದ್ವಾ–ತದ್ವಾ ಏನಾದರೂ ಮಾತಾಡತೊಡಗಿದರು. ಅನೇಕರು ಮಾಸ್ತರರಿಗೆ ಹುಚ್ಚು ಹಿಡಿದಿದೆಯೆಂದರು. ಮೋಹನನೂ ಅವರನ್ನು ಹುಚ್ಚಾಸ್ಪತ್ರೆಯಲ್ಲಿಡುವ ವ್ಯವಸ್ಥೆ ಮಾಡಬೇಕೆಂದ.. ಆದರೆ ಅದಕ್ಕೆ ವಿಕ್ರಮ ಸೇರಿದಂತೆ ಕೆಲವರು ಒಪ್ಪಲಿಲ್ಲ.. ಒಂದು ಸಲ ಬರೇ ಧೋತರದ ಮೇಲೆ

ಅಂಗಿ ಹಾಕಿಕೊಳ್ಳುವುದನ್ನು ಮರೆತು ಊರೆಲ್ಲಾ ಅಡ್ಡಾಡಿ ಬರುತ್ತಾರೆ... ಯಾರಾದರೂ ತಡುವಿದರೆ ಅವರ ಮೇಲೆ ಕೆಟ್ಟ ಬೈಗುಳಗಳ ಸುರಿಮಳೆ ಸುರಿಸಿ, ಸರಕಾರಕ್ಕೆ ಬಯ್ದು ಇಂದಿರಾಗಾಂಧೀಗೆ ಬಯ್ದು, ಗಾಂಧೀಜೀಕಿ ಜೈ ಅನ್ನುತ್ತಿದ್ದರು... ಮನೆಯಲ್ಲಿ ತಮ್ಮ ಮಗಳಿಗೆ ಯಾಕೋ ಬಹಳ ಹೆದರುತ್ತಿದ್ದರು. ಅವಳು ಹೇಳಿದ್ದನ್ನೆಲ್ಲ ಚಾಚೂ ತಪ್ಪದೇ ಮಾಡುತ್ತಿದ್ದರು. ಉಣ್ಣುವುದು, ಮಲಗು ಅಂದರೆ ಮಲಗುವುದು... ವಿಕ್ರಮ್‌ನ ಜೊತೆ ಮಾತ್ರ ಮಾಸ್ತರರು ಚೆನ್ನಾಗಿ ಮಾತಾಡುತ್ತಿದ್ದರು. ವಿಕ್ರಮನು ಅವರನ್ನು ಆಗಾಗ್ಗೆ ಅವರ ಮನೆಗೊಯ್ದು ಅವರಿಗೆ ಊಟ ಮಾಡಿಸುತ್ತಿದ್ದನು. ಆದರೆ ಯಶೋದೆ ಮಾತ್ರ ಈಗ ಮಾಸ್ತರರೆಂದರೆ ಬಹಳ ಬೇಸರ ಪಟ್ಟುಕೊಳ್ಳುತ್ತಿದ್ದಳು.

ಕೊನೆಗೆ ಮಾಸ್ತರರು ಮನೆಯಲ್ಲಿ ಹೇಗೆ ಸತ್ತರೋ ಗೊತ್ತಾಗುವುದಿಲ್ಲ. ವಿಕ್ರಮನಿಗೆ ಮಾಸ್ತರರ ಮಗಳು ಯಾರ ಕಡೆಯಿಂದಲೋ ಫೋನ್ ಮಾಡಿಸಿದ್ದರಿಂದ ಅವನು ಕೂಡಲೇ ಅವರ ಮನೆಗೆ ಹೋಗುತ್ತಾನೆ. ವಿಕ್ರಮನಿಗೆ ಯಾಕೋ ಮಾಸ್ತರರ ಮುಖ ಸರಿ ಕಾಣುವುದಿಲ್ಲ.. ಏನೋ ತೊಂದರೆಯಾಗಿ ಬಹಳ ವೇದನೆಯನ್ನು ಸಹಿಸುತ್ತ ಮೃತ್ಯುವನ್ನಪ್ಪಿದ್ದಾರೆ ಎಂದೆನಿಸುತ್ತದೆ... ಏನಾದರೂ ವಿಷ ವಗೈರೆ ಸೇವಿಸಿದ್ದರೇ ಎಂಬ ಸಂಶಯ ಬರುವಂತಿರುತ್ತದೆ... ಆದ್ದರಿಂದ ವಿಕ್ರಮ್ ಬೇಗನೆ ಅವರು ಹಾರ್ಟ್ ಆಟ್ಯಾಕಿನಿಂದ.. ತೀರಿಕೊಂಡರು ಎಂದು ಜನರಿಗೆ ಹೇಳಿ ಮುಂದಿನ ಸಿದ್ಧತೆಯನ್ನು ನಡೆಸುತ್ತಾನೆ. ಕೂಡಲೇ ಮೋಹನ್‌ರಾವ್‌ಗೆ ಫೋನ್ ಮಾಡಿ ಕಾರು ಮಾಡಿಕೊಂಡು ಬರಲು ಹೇಳುತ್ತಾನೆ. ಆತ ರಾತ್ರಿ ೧೧ ಗಂಟೆಗೆ ಬಂದು ಮುಟ್ಟುತ್ತಾನೆ. ರಾತ್ರಿ ೧೨ ಕ್ಕೆ ಸರ್ ಅವರನ್ನು ಸ್ಮಶಾನಕ್ಕೆ ಒಯ್ಯುತ್ತಾರೆ.. ಅಷ್ಟು ರಾತ್ರಿಯಲ್ಲಿಯೂ ಕೂಡ ಎರಡು ಸಾವಿರ ಜನರಿರುತ್ತಾರೆ... "ಪೂಜಾರ ಮಾಸ್ತರರಿಗೆ ಜಯವಾಗಲಿ" 'ಗಾಂಧಿಜೀಕಿ ಜೈ' ಎಂಬ ಘೋಷಣೆಗಳ ಮಧ್ಯೆ ಮೋಹನ್‌ರಾವ್ ನೇತೃತ್ವದಲ್ಲಿ ಮಾಸ್ತರರ ಸುಶೋಭಿತ ಶವವು ನೆಲವನ್ನು ಸೇರುತ್ತದೆ. ವಿಕ್ರಮನೂ ಕೂಡ ಎಲ್ಲರೊಡನೆ ಮಣ್ಣು ಹಾಕುತ್ತಾನೆ. ಕಣ್ಣೀರು ಸುರಿಸುತ್ತಾ...

ಕೊನೆಗೆ ಇದೊಂದು ಸತ್ಯ ಮಾತ್ರ ನಿರ್ವಿವಾದ; ಜಾತಸ್ಯ ಮರಣಂ ಧ್ರುವಂ, ಹುಟ್ಟಿದ ಮೇಲೆ ಸಾಯಲೇಬೇಕು! ಪೂಜಾರ ಮಾಸ್ತರರ ಮರಣದೊಂದಿಗೆ ಅಪ್ಪಟ ಗಾಂಧೀವಾದವೂ ಕೂಡ ಮಣ್ಣು ಸೇರಿತೆಂದೇ ಭಾಸವಾಗುತ್ತದೆ. ತಮ್ಮ ಅಂತಿಮ ಸಮಯದಲ್ಲಿ ಮಾಸ್ತರರು ಅನುಭವಿಸಿದ ಮನೋವೇದನೆ, ಬೇಸರಗಳು, ಮಾನಸಿಕ ತುಮುಲಗಳು ಎಲ್ಲಾ ಅಪ್ಪಟ ಗಾಂಧೀವಾದಿಗಳು ಅನುಭವಿಸುವಂತಹ ಮಾನಸಿಕ ಸಂಘರ್ಷಗಳೇ ಆಗಿವೆ. ವೈರುಧ್ಯಗಳನ್ನು, ಬದಲಾವಣೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸದೇ, ತಮ್ಮದೇ ಧೋರಣೆಗಳ ಹಿನ್ನೆಲೆಯಲ್ಲಿ ಜೀವನವನ್ನು ನೋಡುವ ಜೀವಗಳು ಇಂತಹ ಸಂಘರ್ಷಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಇಲ್ಲಿ ಸೂಕ್ಷ್ಮವಾಗಿ ಗುರುತಿಸಬಹುದಾಗಿದೆ. ಮಾನಸಿಕ ಆಘಾತಗಳು ವ್ಯಕ್ತಿಯನ್ನು ಹೇಗೆ ಕುಗ್ಗಿಸುತ್ತವೆ ಎಂಬುದನ್ನು ನಾವು ಮಾಸ್ತರರ ಮೂಲಕ ಕಂಡುಕೊಳ್ಳಬಹುದಾಗಿದೆ. ರಾಜಕೀಯ, ಸಾಮಾಜಿಕ ಬದಲಾವಣೆಗಳು ಸಮಾಜದಲ್ಲಿ ಕೆಲವರಿಗೆ ಮಾತ್ರ ಒಳಿತನ್ನುಂಟು ಮಾಡಿದರೆ ಕೆಲವರಲ್ಲಿ ಆಘಾತಗಳನ್ನು ಉಂಟು ಮಾಡಿ ಬದುಕನ್ನು ಘಾಸಿಗೊಳಿಸುತ್ತವೆ ಎಂಬುದನ್ನು ನಾವು ಇಲ್ಲಿ ಕಾಣುತ್ತೇವೆ.

ನೆಹರೂ ಯುಗ ವಿಕ್ರಮನ ವೈಯಕ್ತಿಕ ಜೀವನದ ಮೇಲೂ ತನ್ನ ಪ್ರಭಾವಗಳನ್ನು ಬೀರುತ್ತದೆ. ನೆಹರೂ ಯುಗದ ದೊಡ್ಡ ಯೋಜನೆಗಳಲ್ಲಿ ಕೊಯನಾ ಜಲಾಶಯ ಹಾಗೂ ಹೈಡ್ರೊಲಿಕ್

ಪವರ್ ಯೋಜನೆ ಮಹಾರಾಷ್ಟ್ರದಲ್ಲಿ ಅತ್ಯಂತ ಮಹತ್ವ ಪಡೆದಿತ್ತು. ವಿಕ್ರಮ್ ಪುಣೆಯಲ್ಲಿನ ತನ್ನ ಇಂಜಿನಿಯರಿಂಗ್ ಪದವಿ ಮುಗಿಸಿ ಕೊಯನಾದಲ್ಲಿ ಜ್ಯೂನಿಯರ್ ಇಂಜಿನಿಯರ್ ಆಗಿ ಕೆಲಸ ಪ್ರಾರಂಭಿಸುತ್ತಾನೆ. ಯಶೋದೆ ಹಾಗೂ ಮಾಧವರೊಂದಿಗೆ ಅಲ್ಲಿ ನೆಲೆಸುತ್ತಾನೆ. ವಿಕ್ರಮ್ ಅಲ್ಲಿ ಕೆಲಸಕ್ಕೆ ಸೇರಿದಾಗ ಯೋಜನೆ ಕೆಲಸ ಜೋರಿನಲ್ಲಿರುತ್ತದೆ. ಡ್ಯಾಮಿನ ಕೆಲಸ ಅರ್ಧಕ್ಕೆ ಬಂದಿರುತ್ತದೆ. ವಿಕ್ರಮನು ಈ ದೊಡ್ಡ ಯೋಜನೆಯ ಕೆಲಸದಲ್ಲಿ ತನ್ನ ಅಳಿಲು ಸೇವೆಯನ್ನು ಸ್ವಲ್ಪ ಉತ್ಸಾಹದಿಂದಲೇ ಕೈಗೊಳ್ಳುತ್ತಾನೆ. ಹೊಸದಾಗಿ ನಿರ್ಮಿತವಾಗಿದ್ದ ನಗರದಲ್ಲಿ ಬೇರೆ ಬೇರೆ ತರಗತಿಗೆ ಅನುಗುಣವಾಗಿ ಮನೆಗಳು, ಆಫೀಸುಗಳು, ಕ್ಲಬ್ಬುಗಳು, ಸಿನೇಮಾಗಳು, ಅಂಗಡಿಗಳು... ಎಲ್ಲಿ ನೋಡಿದರೂ ಜೀಪುಗಳು – ಸರ್ಕಾರದ, ಕಂಟ್ರಾಕ್ಟರರ ಜೀಪುಗಳು, ಟ್ರಕ್ಕುಗಳು, ಟ್ರ್ಯಾಕ್ಟರುಗಳು, ಡಂಪರುಗಳು, ಕ್ರೇನುಗಳು... ಭಾರತವನ್ನು ಹೊಸದಾಗಿ ಕಟ್ಟುವ ಕೈಗಳು ಅತ್ಯಂತ ಹುಮ್ಮಸ್ಸಿನಿಂದಲೇ ಕೆಲಸ ಮಾಡುತ್ತಿದ್ದವು... ಅಲ್ಲಿ ಹೋಗಿ ನೋಡಿದವರಿಗೆ ಅಭಿಮಾನದಿಂದ ಎದೆಯುಕ್ಕಿ ಬರುವಂಥ ಮಹಾತ್ಕಾರ್ಯ ನಡೆಯುತ್ತಿತ್ತು...

ಆದರೆ ಒಂದು ವರ್ಷದಲ್ಲಿಯೇ ವಿಕ್ರಮನ ಉತ್ಸಾಹ ಕಡಿಮೆಯಾಗತೊಡಗುತ್ತದೆ. ಒಂದೇ ರೀತಿಯ ಕೆಲಸ, ವರ್ಷಾನುಗಟ್ಟಲೆ ನಡೆಯುವ ಕೆಲಸ ಆತನಿಗೆ ಬೋರಿಂಗ್ ಆಗತೊಡಗುತ್ತದೆ. ಅದು ಹೊಸ ನಗರವಾದರೂ ಭಾರತೀಯ ಸಮಾಜದ ಎಲ್ಲ ಅಂಶಗಳು ಅಲ್ಲಿ ನೆಲೆಸಿರುತ್ತವೆ. ಬೇರೆ ಬೇರೆ ಜಾತಿಯ ಗುಡಿಗಳು; ಸಾವಿರಾರು ಗುಡಿಸಲುಗಳು ; ನೂರಾರು ಸೂಳೆಯರು ; ಹಲವಾರು ಕಳ್ಳರು, ಪುಂಡರು; ಸೆರೆಸಿಂದಿಯ ಗುಪ್ತ ಅಂಗಡಿಗಳು, ಆಂಧ್ರದಿಂದ ಕರ್ನಾಟಕದಿಂದ ಬಂದ ಕೆಲಸಗಾರರ ಗುಂಪುಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ಅವರನ್ನು ಶೋಷಿಸುವ ಮೇಸ್ತ್ರಿಗಳು... ಹೊರ ಜಗತ್ತಿನಲ್ಲಿಯ ಶೋಷಣೆ ವ್ಯವಸ್ಥೆ ಈ ಹೊಸನಗರದಲ್ಲಿಯೂ ತನ್ನ ಬೀಡು ಬಿಟ್ಟಿತು. ಈ ಮೂಲಕ ಆಧುನಿಕ ಜಗತ್ತಿನ ಪ್ರಮುಖ ಅಂಶವಾದ ಶೋಷಣೆಯು ಅಭಿವೃದ್ಧಿಯ ಜೊತೆ ಜೊತೆಯಲ್ಲಿಯೇ ಹುಟ್ಟುತ್ತಾ ವ್ಯವಸ್ಥೆಯೊಂದಿಗೇ ತಳಕು ಹಾಕಿಕೊಂಡಿದೆ ಎಂಬುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಕೊಯನಾಕ್ಕೆ ಹೋದ ಒಂದೂವರೆ ವರ್ಷದಲ್ಲೇ ವಿಕ್ರಮ್ ಅಸಿಸ್ಟೆಂಟ್ ಎಂಜಿನಿಯರಾಗುತ್ತಾನೆ. ಆತನ 'ಟೆಂಪರರಿ' ಮಿತ್ರ ಮಂಡಳಿ ಅತ್ಯಂತ ವಿಶಾಲವಾಗುತ್ತದೆ . ಕೆಲಸದ ನೆಪ ಮಾಡಿಕೊಂಡು ಕೆಲ ಸ್ನೇಹಿತರು ಕೊಲ್ಲಾಪುರಕ್ಕೋ,ಪುಣೆಗೋ, ಮುಂಬೈಗೋ ಹೋಗಿ ಮಜಾ ಮಾಡಿಕೊಂಡು ತಮ್ಮ ಬೇಸರವನ್ನು ಕಳೆದುಕೊಂಡು ಬರುತ್ತಿದ್ದರು. ಸಮಯವನ್ನು ತುಂಬಲು ಸ್ನೇಹದ ವಾತಾವರಣ ನಿರ್ಮಿಸಿದರೂ ಕೂಡ ಒಂದು ಸಡಿಲಾದ 'ನೈತಿಕ' ಇಳಿಜಾರಿನಲ್ಲಿ ಜರಿಯತೊಡಗಿದಂತೆ ವಿಕ್ರಮನಿಗೆ ಭಾಸವಾಗತೊಡಗುತ್ತದೆ. ಮುಂದೆ ೩-೪ ವರ್ಷಗಳಲ್ಲಿ ಅಂದರೆ ೧೯೬೦ರ ಸುಮಾರಿಗೆ ವಿಕ್ರಮ್ ಎಕ್ಸಿಕ್ಯೂಟಿವ್ ಎಂಜಿನಿಯರನಾಗುತ್ತಾನೆ. ಸಾತಾರಕ್ಕೆ ಅವನ ಪೋಸ್ಟಿಂಗ್ ಆಗುತ್ತದೆ. ಸಾತಾರ ಮಹಾರಾಷ್ಟ್ರದ ರಾಜಕೀಯ ಕೇಂದ್ರವಾಗಿರುತ್ತದೆ. ಅಲ್ಲಿಯ ಒತ್ತಡಗಳು ಬಹು ಬೇಗ ಆತನಲ್ಲಿ ಬೇಸರವನ್ನುಂಟು ಮಾಡುತ್ತವೆ. ಸ್ನೇಹದಲ್ಲಿಯೇ, ಸ್ನೇಹದ ಡಿನರ್ ಪಾರ್ಟಿಗಳಲ್ಲಿಯೆ ಏನೇನೋ ಆಗಿ ಬಿಡುತ್ತಿತ್ತು. ಸ್ನೇಹಿತರ ಆಗ್ರಹಕ್ಕೆ ಮಣಿದು ಕೆಲವೊಮ್ಮೆ ವಿಕ್ರಮ್ ಮಾಡಬಾರದಲ್ಲಿ ಸಹಿ

ಮಾಡಿಬಿಡುತ್ತಿದ್ದ... ಇವೆಲ್ಲದರ ಪರಿಣಾಮವಾಗಿ ಯಾವ ಯಾವುದೋ ಕಂಟ್ರಾಕ್ಟರರು ಆತನ ಒಳ್ಳೆತನದ ಲಾಭವನ್ನು ತೆಗೆದುಕೊಂಡು ಧಾರವಾಡದಲ್ಲಿ ವಿಶ್ವವಿದ್ಯಾಲಯದ ಹತ್ತಿರ ಒಂದು ದೊಡ್ಡ ಫ್ಲಾಟ್ ತೆಗೆದುಕೊಂಡು ಆತನ ಹೆಸರಿಗೆ ಮಾಡುತ್ತಾರೆ. ಅಲ್ಲಿ ಮನೆ ಕಟ್ಟಲು ಬೇಕಾದ ಎಲ್ಲಾ ಮೆಟೀರಿಯಲ್ ಅವನಿಗೆ ಗೊತ್ತು ಗೊತ್ತಿಲ್ಲದಂತೆ ಅಲ್ಲಿ ಹೋಗಿ ಬೀಳುತ್ತವೆ. ಅಲ್ಲದೆ ಸಾತಾರೆಯ ಅವರ ಮನೆಯಲ್ಲಿ ಸೋಫಾಸೆಟ್ಟುಗಳು, ಡಾಯನಿಂಗ್ ಟೇಬಲ್, ಫ್ರಿಜ್ಜು ಇತ್ಯಾದಿ ಜಾದೂ ಪೆಟ್ಟಿಗೆಯ ನಿರ್ಮಿಸಿದಂತೆ ಬಂದು ಬಿಡುತ್ತವೆ. ವಿಕ್ರಮನ ಸ್ವಭಾವವನ್ನು ಕಂಡವರು ಆತನಿಂದ ಕೆಲಸ ಮಾಡಿಸಿಕೊಂಡು ಪ್ರತ್ಯಕ್ಷ ಹಣ ಮಾತ್ರ ಮುಂದಿನ ಬಾಗಿಲಿನಿಂದಾಗಲಿ, ಹಿಂದಿನ ಬಾಗಿಲಿನಿಂದಾಗಲಿ ಕೊಡಲಿಲ್ಲ... ಆದರೆ ಜಗತ್ತಿನಲ್ಲಿ ಲಗ್‌ಝುರಿ ಅಂತ ಏನಂತಾರೋ ಅದನ್ನೆಲ್ಲಾ ವಿಕ್ರಮ್ ಎರಡು ವರ್ಷಗಳ ಅವಧಿಯಲ್ಲಿ ಭೋಗಿಸುತ್ತಾನೆ. ಮುಂಬಯಿಯ ಒಬೇರೋಯ್ ಶೆರಟನದಲ್ಲಿ ಎಂಟ್ಹತ್ತು ಸಲ ಆರಾಮವಾಗಿ ವಾಸ್ತವ್ಯ ಮಾಡುತ್ತಾನೆ. ಎರಡು ಮೂರು ಸಲ ಆತನ ಸ್ನೇಹಿತರು ಕಾಲ್ ಗರ್ಲ್‌ಕರಕೊಂಡು ಬರುತ್ತಾರೆ. ಕುಡಿತದ ಅಮಲಿನಲ್ಲಿ ಏನೇನೆಲ್ಲವೂ ಆಗಿ ಹೋಗುತ್ತವೆ...

ಕೊನೆಯ ಬಾರಿ ವಿಕ್ರಮ್ ಆ ಹೋಟೆಲ್‌ನಲ್ಲಿದಾಗ ಅವನಿಗೆ ಅತ್ಯಂತ ತೀವ್ರ ಜ್ವರ ಬರುತ್ತವೆ. ಆತನ ಸ್ನೇಹಿತರು ಡಾಕ್ಟರ್‌ರನ್ನು ಕರೆದುಕೊಂಡು ಬರುತ್ತಾರೆ. ಇಂಜೆಕ್ಷನ್ ಕೊಡಿಸುತ್ತಾರೆ... ಆದರೆ ವಿಕ್ರಮ್ ಹಾಸ್ಪಿಟಲ್‌ಗೆ ಹೋಗಲು ಒಪ್ಪಿಕೊಳ್ಳುವುದಿಲ್ಲ. ಹೋದರೆ ಅದೊಂದು ಹಗರಣವಾಗುತ್ತದೆ ಎಂಬ ಭಯ ಆತನಲ್ಲಿರುತ್ತದೆ. ಮೂರು-ನಾಲ್ಕು ದಿನಗಳಲ್ಲಿ ಆತನ ಜ್ವರ ಇಳಿಯುತ್ತದೆ. ಆದರೆ ಈ ಎಲ್ಲಾ ಘಟನೆಗಳು ಆತನಲ್ಲಿ ಮಾನಸಿಕ ಸಂಘರ್ಷವನ್ನು ಉಂಟು ಮಾಡುತ್ತವೆ. ಪೂಜಾರ ಮಾಸ್ತರರ ಶಿಷ್ಯನಾದ, ರಾಣೇ ಮನೆತನದ ಕುಲಭೂಷಣವಾದ ವಿಕ್ರಮ್ ಇದೆಲ್ಲವೂ ತನ್ನಂಥವನಿಗೆ ಹೇಳಿ ಮಾಡಿಸಿದ್ದಲ್ಲವೆಂದೂ, ಇದರಿಂದ ಎಲ್ಲಿಯಾದರೂ ತನ್ನ ತಲೆ ಕೆಟ್ಟು ಹುಚ್ಚು ಹಿಡಿದೀತು ಎಂಬ ಆಲೋಚನೆ ಆತನಲ್ಲಿ ಮೂಡುತ್ತದೆ. ಈ ಕಾರಣದಿಂದಾಗಿಯೇ ಸಿಡಿದೆದ್ದ ವಿಕ್ರಮ್ ತಾನು ತನ್ನ ಕೌಟುಂಬಿಕ ಕಾರಣಕ್ಕಾಗಿ ತನ್ನ ರಾಜೀನಾಮೆಯನ್ನು ಕೊಡುತ್ತಿದ್ದು, ಸ್ವೀಕರಿಸಬೇಕು ಎಂದು ಬರೆದುಬಿಡುತ್ತಾನೆ. ಈ ಮೂಲಕ ತನ್ನ ಭ್ರಷ್ಟಾಚಾರದ ಜೀವನಕ್ಕೆ ಬೇಸತ್ತು ತನ್ನ ಉದ್ಯೋಗಕ್ಕೆ ರಾಜೀನಾಮೆಯನ್ನು ಸಲ್ಲಿಸುತ್ತಾನೆ. ಆತನ ಈ ರಾಜೀನಾಮೆಯ ಮೂಲಕ ನಾವು ವಿಕ್ರಮ್‌ನ ಮನಸ್ಸಿನಲ್ಲಿ ನಡೆದ ಸಂಘರ್ಷವನ್ನು ಗುರುತಿಸಬಹುದಾಗಿದೆ. ಎಲ್ಲರ ವಿರೋಧದ ನಡುವೆಯೇ ರಾಜೀನಾಮೆಯನ್ನು ನೀಡಿದ ವಿಕ್ರಮ್ ತನ್ನದೇ ಆದ ಒಂದು ಸ್ವಂತ ಉದ್ದಿಮೆಯನ್ನು ನಡೆಸುವ ಅಲೊಚನೆಯನ್ನು ಹೊಂದುತ್ತಾನೆ.

೫.೬.೧ ತಂದೆ-ಮಕ್ಕಳ ನಡುವಿನ ಸಂಘರ್ಷ :

ದೇಸಾಯಿಯವರ ಉಳಿದ ಕಾದಂಬರಿಗಳಂತೆ ನಾವು 'ಅಂತರಾಳ' ಕಾದಂಬರಿಯಲ್ಲಿಯೂ ಕೂಡ ತಂದೆ-ಮಕ್ಕಳ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ. ವಿಕ್ರಮ-ಮಾಧವ, ಪೂಜಾರ ಮಾಸ್ತರ- ಮೋಹನ್‌ರಾವ್, ಡಾ॥ ಜೋಶಿ-ಗೋವಿಂದ ಜೋಶಿ ಇವರುಗಳ ನಡುವಿನ ಸಂಘರ್ಷಗಳನ್ನು ನಾವು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ವಿಕ್ರಮನ ಮಗನಾದ ಮಾಧವ ವಿಕ್ರಮ್‌ನ 'ಸಂಕ್ರಮಣ' ಕಾಲದಲ್ಲಿ ಬೆಳೆಯುತ್ತಿದ್ದುದರಿಂದ, ಆತ ವಿಕ್ರಮನು ತನ್ನ ತಂದೆಯೇ ಅಲ್ಲವೆಂಬಂತೆ ಅವನನ್ನು ಸಂಪೂರ್ಣವಾಗಿ ದೂರವಿಟ್ಟುಬಿಟ್ಟಿದ್ದನು. ಇವರಿಬ್ಬರ ನಡುವಿನ ಸಂಬಂಧ ನಾರ್ಮಲ್ಲಾಗಿ ಬೆಳೆಯಲೇ ಇಲ್ಲ. ಅಲ್ಲದೇ ಯಶೋದೆಯು ಅವನನ್ನು ತನ್ನ ಮಗವನ್ನಾಗಿ ಮಾಡಿಕೊಂಡಿದ್ದರಿಂದ, ವಿಕ್ರಮ್ ಮತ್ತು ಯಶೋದೆಯರ ನಡುವಿನ ಘರ್ಷಣೆ – ಕರ್ಷಣೆಗಳು ಅವನ ವ್ಯಕ್ತಿತ್ವದ ಮೇಲೆ ತಮ್ಮ ಪ್ರಭಾವವನ್ನು ಬೀರಿರಬೇಕು ಎಂದು ವಿಕ್ರಮನು ಅಭಿಪ್ರಾಯ ಪಡುತ್ತಾನೆ.

ವಿಕ್ರಮನು ತನ್ನ ಕುಟುಂಬದೊಂದಿಗೆ ತಿರುಪತಿ, ಮದ್ರಾಸ್, ಪಾಂಡಿಚೇರಿ, ಕೊಡೈಕೆನಾಲ್, ಬೆಂಗಳೂರು, ಮೈಸೂರು, ಇತ್ಯಾದಿಗಳೆಡೆಗೆ ಪ್ರವಾಸ ಹೋದಾಗ ತನ್ನ ಮತ್ತು ಮಾಧವನ ನಡುವಿನ ಸಂಬಂಧದ ಬಗ್ಗೆ ಸಂಪೂರ್ಣ ಅರಿವಾಗುತ್ತದೆ. ಕಾಲೇಜು–ಕುಮಾರ ಮಾಧವ ಯಾವ ಊರಿಗೆ ಹೋದರೂ ಆತ ತನ್ನ ಮನಸ್ಸಿಗೆ ಬಂದಂತೆ ತಿರುಗಾಡಿ ಬರುತ್ತಿರುತ್ತಾನೆ. ವಿಕ್ರಮನು ಆತನ ಎಲ್ಲ ಕಿರುಕುಳಗಳನ್ನು ಅತ್ಯಂತ ಸಹಿಷ್ಣುತೆಯಿಂದ ಸಹಿಸಿಕೊಳ್ಳುತ್ತಾನೆ. ಆದರೆ ತನ್ನ ಬಗ್ಗೆ ಮಾಧವನ ಮನಸ್ಸಿನಲ್ಲಿದ್ದ ದ್ವೇಷ ಆತನಲ್ಲಿ ಅತೀವ ದುಃಖದ ಅನುಭವವನ್ನು ಉಂಟುಮಾಡುತ್ತದೆ. ತಾಯಿಯನ್ನು ಅತೀವವಾಗಿ ಪ್ರೀತಿಸುತ್ತಿದ್ದ ಮಾಧವನಿಗೆ ವಿಕ್ರಮನೆಂದರೆ ವಿಷದ ಬಟ್ಟಲು (ಪು. ೨೦೫). ಆದರೆ ಆತ ತನ್ನ ಅಜ್ಜನೊಡನೆ ಮಾತ್ರ ಅತ್ಯಂತ ಪ್ರೀತಿಯಿಂದ ಸಲುಗೆಯಿಂದ ನಡೆದುಕೊಳ್ಳುತ್ತಿರುತ್ತಾನೆ. ಪಾಂಡಿಚೇರಿಯಲ್ಲಿ ವಿಕ್ರಮನು ಮಾಧವನ ಮತ್ತೊಂದು ವಿಶೇಷ ಪ್ರವೃತ್ತಿಯನ್ನು ಗುರುತಿಸುತ್ತಾನೆ. ಅದೆಂದರೆ ಮಾಧವನು ಆತ್ಮಜ್ಞಾನ, ಗೂಢವಾದ ಇತ್ಯಾದಿ ಧಾರ್ಮಿಕ ವಿಷಯಗಳ ಬಗ್ಗೆ ಆಸಕ್ತಿ ಹೊಂದಿರುವುದನ್ನು ಗುರುತಿಸುತ್ತಾನೆ. ಮಾಧವನು ಅರವಿಂದರ ಹತ್ತಾರು ಪುಸ್ತಕಗಳನ್ನು ಕೊಂಡುಕೊಂಡಿದ್ದಷ್ಟೇ ಅಲ್ಲದೆ, ದಿನದಲ್ಲಿ ನಾಲ್ಕು ಸಲ ಅರವಿಂದ–ಮದರ್ ಇಬ್ಬರ ಜೋಡು ಸಮಾಧಿಗೆ ತಲೆ ಹಚ್ಚಿ ತಾಸುಗಟ್ಟಲೆ ಕೂಡುತ್ತಿದ್ದುದನ್ನು ಹಾಗೂ ಪ್ರಾರ್ಥನಾ ಮಂದಿರದಲ್ಲಿಯೂ ಹಾಗೆ ಕಣ್ಣು ಮುಚ್ಚಿ ಧ್ಯಾನಮಗ್ನನಾಗಿ ಕುಳಿತುಕೊಳ್ಳುತ್ತಿರುವುದನ್ನು ಗಮನಿಸುತ್ತಾನೆ.

ಇದು ವಿಕ್ರಮನಲ್ಲಿ ಸ್ವಲ್ಪ ಕಸಿವಿಸಿಯನ್ನುಂಟು ಮಾಡಿದರೆ ಯಶೋದೆ ಮಾಧವನ ಈ ನಡತೆಯನ್ನು ಮೆಚ್ಚಿಕೊಳ್ಳುತ್ತಾಳೆ. ಪ್ರಾರಂಭದಿಂದಲೂ ವಿಕ್ರಮ್‌ನನ್ನು ದ್ವೇಷಿಸುತ್ತಿದ್ದ ಮಾಧವನು, ತನ್ನ ವಿದ್ಯಾಭ್ಯಾಸದ ಸಂದರ್ಭದಲ್ಲಿಯೂ ಕೂಡ ವಿಕ್ರಮನು ಸಾಯನ್ಸ್ ತೆಗೆದುಕೊಳ್ಳಲು ಹೇಳಿದರೆ ಆರ್ಟ್ಸ್ ತೆಗೆದುಕೊಳ್ಳುತ್ತಾನೆ. ಇದರಿಂದ ಆತ ಮುಂದೆ ಏನು ಮಾಡುತ್ತಾನೋ? ಮಾಸ್ತರ? ಪ್ರೊಫೆಸರ್? ಕವಿ? ಕಾದಂಬರಿಕಾರ? ಜರ್ನಾಲಿಸ್ಟ್? ಎಂಬ ಆತಂಕ ವಿಕ್ರಮನಲ್ಲಿರುತ್ತದೆ. ಆತ ಏನಾದರೂ ಆಗಲಿ ಎಂದು ಆತನ ಜವಾಬ್ದಾರಿಯನ್ನು ವಿಕ್ರಮನು ಯಶೋದೆಗೆ ವಹಿಸುತ್ತಾನೆ. ಮುಂದೆ ವಿಕ್ರಮನು ವಸಂತ–ಅಶ್ವಿನಿಯರೊಡನೆ ಸ್ನೇಹ ಸಂಬಂಧ ಬೆಳೆಸಿದಾಗ, ಮಾಧವನು ಅದನ್ನು ಅತ್ಯಂತ ತಿರಸ್ಕಾರದಿಂದ ನೋಡುತ್ತಿರುತ್ತಾನೆ. ಅವರ ಆಧುನಿಕತೆ, ಅವರ ಮಾಡರ್ನಿಜಮ್ಮು ತನ್ನ ಅಪ್ಪನಿಗೆ ಶೋಭಿಸುವುದಿಲ್ಲ... ಇನ್ನ ಅಪ್ಪನೂ ಜೀನ್ಸ್–ಜುಬ್ಬ ಹಾಕಿ, ಗಡ್ಡ–ಮೀಸೆ ಬಿಟ್ಟು ತಿರುಗಾಡಲು ಶುರುಮಾಡಿದ್ರೆ – ತಾನು ಹರಕು ಅಂಗೀ ಹಾಕೀ ಹಿಪ್ಪಿಯಾಗಬೇಕಾಗುತ್ತದೆ

ಎಂದು ತನ್ನ ತಾಯಿಯ ಬಳಿಯಲ್ಲಿ ಹೇಳಿರುತ್ತಾನೆ (ಪು. ೨೦೫). ಅಲ್ಲದೇ ವಿಕ್ರಮನು ಅಶ್ವಿನಿಯ ಜೊತೆ ಮಾತಾಡುವ ರೀತಿ ಅವನಿಗೆ ಎಳ್ಳಷ್ಟು ಸೇರುತ್ತಿರುವುದಿಲ್ಲ. ವಿಕ್ರನು 'ತನ್ನ ಗಾಂಭೀರ್ಯವನ್ನು ಕಳಕೊಂಡು ಹುಡುಗರಂತೆ ನಡಕೊಳ್ಳುತ್ತಾರೆ' ಎಂದು ತನ್ನ ತಾಯಿ ಬಳಿಯಲ್ಲಿ ತನ್ನ ಆಕ್ಷೇಪವನ್ನು ವ್ಯಕ್ತಪಡಿಸಿರುತ್ತಾನೆ. ಅಲ್ಲದೇ ಇನ್ನಾರು ತಿಂಗಳಲ್ಲಿ ತನ್ನ ಸ್ನೇಹಿತರ ಸಹಾಯದಿಂದ ವಸಂತ ಮತ್ತು ಅಶ್ವಿನಿಯವರನ್ನು ಓಡಿಸುವುದಾಗಿ ತನ್ನ ತಾಯಿಯ ಹತ್ತಿರ ಹೇಳಿರುತ್ತಾನೆ.

ಇವೆಲ್ಲವುಗಳಿಂದ ತನ್ನ ಮತ್ತು ಮಾಧವನ ನಡುವಿನ ಈ ರೀತಿಯ ಅಸಹಜ ಸಂಬಂಧಕ್ಕೆ ವಿಕ್ರಮನು ದೇಶದ ಅನಿಶ್ಚಿತ ರೀತಿಯಲ್ಲಿ ನಡೆದ ರಾಜಕಾರಣ, ಸಾಮಾಜಿಕ 'ಸುಧಾರಣೆ', ಔದ್ಯೋಗೀಕರಣ, ತಮ್ಮೆಲ್ಲ ದುಷ್ಟ ಪ್ರವೃತ್ತಿಗಳನ್ನೇ ಮೊದಲಿಗೆ ಹೊರಗೆಡುವಿದ್ದರಿಂದ ಈ ಹೊಸ ಭ್ರಷ್ಟ ಅನೈತಿಕ ವಾತಾವರಣ ಬೆಳೆಯುವ ಮಕ್ಕಳ ಮೇಲೆ ಅನಿಷ್ಠ ಪರಿಣಾಮ ಮಾಡುತ್ತಿದ್ದುದೂ ಒಂದು ಪ್ರಬಲ ಕಾರಣವಾಗಿರಬೇಕು. ಗಾಂಧೀಯುಗದಿಂದ ನೆಹರೂ ಯುಗಕ್ಕೆ ಪರಿಕ್ರಮಿಸಿದ ಈ ದಾರಿಯಲ್ಲಿ ಹುಡುಗ–ಹುಡುಗಿಯರಿಗೆ ಎಲ್ಲೆಡೆಗೂ ನಿರಾಶೆ, ವಿಕ್ಷೇಪ, ಅಸಂಗತಿ, ಗೊಂದಲ, ಅಸಹ್ಯ, ಪೈಪೋಟಿ, ಜಾತೀಯತೆ, ವಶೀಲಿ, ಹಿಂಸಾಚಾರ, ಕ್ರೌರ್ಯ ಇತ್ಯಾದಿ–ಇತ್ಯಾದಿ ಕಂಡುಬರುತ್ತವೆಯೇ ಹೊರತು ಒಳ್ಳೆಯ, ಆದರ್ಶವಾದೀ, ಆಶಾವಾದೀ ಸಂಗತಿಗಳೇ ಕಾಣುವುದಿಲ್ಲ– ಎಂದು ಪೂಜಾರ ಮಾಸ್ತರರು ಹೇಳುವ ಮಾತುಗಳು ಕಾರಣವಾಗಿರಬಹುದು ಎಂದು ಅಭಿಪ್ರಾಯಪಡುತ್ತಾನೆ. ಒಟ್ಟಾರೆಯಾಗಿ ವಿಕ್ರಮನ ಪ್ರಕಾರ ಮಾಧವ ಆತನಿಗೆ ಒಡೆಯಲಾರದ ಒಗಟೆ ಆಗಿರುತ್ತಾನೆ.

ಅಲ್ಲದೇ ಮಾಧವನು ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿರುತ್ತಾನೆ. ಪತ್ರಿಕೆಗಳಲ್ಲಿಯೂ ಅವನ ಕವನ–ಕತೆ ಬರುತ್ತಿದ್ದರೂ ಕೂಡ ಅವನು ಅವುಗಳನ್ನು ವಿಕ್ರಮನಿಗೆ ತೋರಿಸಿರುವುದಿಲ್ಲ. ಏಕೆಂದರೆ ಮಾಧವನ ಪ್ರಕಾರ ವಿಕ್ರಮನು ಅಶಿಕ್ಷಿತ ಗುಗ್ಗೂ ಬರೆಹಣ ಗಳಿಸುವ ಒಂದು ಯಂತ್ರ; ಅಸಂಸ್ಕೃತ ಬೂರ್! (ಪು. ೩೦) ಅಲ್ಲದೆ ಮಾಧವನು ವಿಕ್ರಮನನ್ನು ಹಲವಾರು ರೀತಿಯಲ್ಲಿ ಅವಮಾನಗೊಳಿಸುತ್ತಿರುತ್ತಾನೆ. ವಿಕ್ರಮ ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನೇ ನೀಡದಿರುವುದು, ಬೇಗ ಮನೆಗೆ ಬಾ ಎಂದು ಹೇಳಿದರೆ ಆ ದಿನ ಮುದ್ದಾಮ ತಡ ಮಾಡಿ ಬರುವ ಅಥವಾ ಆ ದಿನ ಮನೆಗೆ ಬರದೇ ಇರುವುದು, ಪೇಟೆಗೆ ಹೋಗಿ ಏನಾದರೂ ತೆಗೆದುಕೊಂಡು ಬಾ ಅಂದರೆ 'ನನಗೆ ಕೆಲಸವಿದೆ' ಎಂದು ಹೇಳಿ ಜಾರಿಕೊಳ್ಳುವುದು ಇತ್ಯಾದಿ. ಮಾಧವನ ಈ ವರ್ತನೆಗಳಿಗೆ ಬಹುಶಃ ಆತ ತನ್ನ ಆಯ್‌ಡೆಂಟಿಟಿಯನ್ನು ಶೋಧಿಸುತ್ತಿರಬೇಕು ಎಂದು ವಿಕ್ರಮ ಅಭಿಪ್ರಾಯ ಪಡುತ್ತಾನೆ. ಏಕೆಂದರೆ ತಂದೆ ಮರಾಠ, ತಾಯಿ ಬ್ರಾಹ್ಮಣ. ಈ ಸಂಯೋಗದ ಮೂಲಕ ಜಾತಿಯ ದೃಷ್ಟಿಯಿಂದಲೂ ಆತನಿಗೆ ಗೊಂದಲವಾಗಿರಬೇಕು. ಈ ಗೊಂದಲ ಬಹುಶಃ ಆತ ಸ್ಕೂಲಿನಲ್ಲಿದ್ದಾಗಲೇ ಪ್ರಾರಂಭವಾಗಿರಬೇಕು ಎಂಬುದು ವಿಕ್ರಮನ ಅಭಿಮತ.

ಅಲ್ಲದೇ ವಿಕ್ರಮ – ಯಶೋದೆ ಎಷ್ಟೇ ಫ್ರೀಯಾಗಿದ್ದರೂ, ಯಶೋದೆಯು ತಮ್ಮ ಲಗ್ನವನ್ನು ವೈಭವೀಕರಿಸಿ ವರ್ಣಿಸಿದರೂ ಕೂಡ ಮಾಧವನಿಗೆ ತನ್ನ ವಿಚಿತ್ರ ಪರಿಸ್ಥಿತಿಯನ್ನು ಅರಗಿಸಿಕೊಳ್ಳುವುದು ಸಾಧ್ಯವಾಗದೇ ತನ್ನ ಗೊಂದಲಗಳನ್ನು ತನ್ನಲ್ಲಿಯೇ ಜೋಪಾನವಾಗಿ ಇಟ್ಟುಕೊಂಡಿರಬಹುದೇನೊ?

ಅಥವಾ ಅವನಿಗೆ ಯಾವುದಾದರೂ ಪ್ರೇಮಭಂಗದ ದುಃಖ ಅವರಿಸಿರಬಹುದೇ? ಅವನಿಗೇನಾದರೂ ಹೆರೋಯಿನ್, ಮಾರಿಜ್ಜನಾದಂಥ ಡ್ರಗ್ ತೆಗೆದುಕೊಳ್ಳುವ ವ್ಯಸನ ಹತ್ತಿದೆಯೇ? ಅವನ ಸ್ನೇಹಿತರು ಯಾರ್‍ಯಾರು, ಅವರೇನು ಮಾಡುತ್ತಿದ್ದಾರೆ ಎಂಬುದನ್ನು ಪತ್ತೆ ಹಚ್ಚಬೇಕು ಎಂದೆಲ್ಲ ವಿಕ್ರಮನ ಮನದಲ್ಲಿ ಮಾಧವನ ಬಗ್ಗೆ ಮೂಡಿದ ಪ್ರಶ್ನೆಗಳ ಮೂಲಕ ನಾವು ಅವರಿಬ್ಬರ ಮನೋ ಸಂಬಂಧವನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿಯೂ ಕೂಡ ನೋಡಬಹುದಾಗಿದೆ. ಅಲ್ಲದೇ ಈ ಎಲ್ಲಾ ಅಂಶಗಳು ತಂದೆ ಮತ್ತು ಮಗನ ನಡುವೆ ಸಾಮರಸ್ಯದ ಸಹಜ ಬಾಂಧವ್ಯವಿರಲಿಲ್ಲ ಎಂಬುದನ್ನು ತಿಳಿಸುತ್ತವೆ. ಬಹುಶಃ ಮಾಧವನ ಮನದಲ್ಲಿ ತನ್ನ ತಂದೆಯ ಬಗ್ಗೆ ನಡೆಯುತ್ತಿದ್ದ ಸಂಘರ್ಷವೇ ಇದಕ್ಕೆಲ್ಲಾ ಕಾರಣವಾಗಿದೆ ಎಂದು ಹೇಳಬಹುದಾಗಿದೆ.

ಅಂತರಾಳ ಕಾದಂಬರಿಯ ಮತ್ತೊಂದು ಪ್ರಮುಖ ಪಾತ್ರವಾದ ಗೋವಿಂದ ಜೋಶಿ ಮತ್ತು ಅವನ ತಂದೆಯಾದ ಡಾ॥ ಜೋಶಿ ನಡುವಿನ ಸಂಘರ್ಷವನ್ನು ನಾವು ಇಲ್ಲಿ ಗುರುತಿಸಬಹುದಾಗಿದೆ. ಡಾ॥ ಜೋಶಿಯವರು ಧಾರವಾಡದಲ್ಲಿ ಆಯುರ್ವೇದ ಔಷಧಿ ಕೊಡುವ ಪ್ರಸಿದ್ಧ ವೈದ್ಯರಾಗಿರುತ್ತಾರೆ. ಅವರ ಒಬ್ಬನೇ ಮಗ ಗೋವಿಂದ ಜೋಶಿ. ಡಾ॥ ಜೋಶಿಯವರಿಗೆ ತಮ್ಮ ಮಗ ವೈದ್ಯನಾಗಬೇಕೆಂದು ಆಸೆಯಿರುತ್ತದೆ. ಗೋವಿಂದನು ಚುರುಕು ಬುದ್ಧಿಯನ್ನು ಹೊಂದಿದ್ದು, ಕ್ಲಾಸಿನಲ್ಲಿ ಯಾವಾಗಲೂ ಮೊದಲನೇ ನಂಬರ್ ಗಿಟ್ಟಿಸುತ್ತಿರುತ್ತಾನೆ. ಅವನಿಗೆ 'ಫಸ್ಟ್ ಕ್ಲಾಸಿನಲ್ಲಿ ಬರಬೇಕು, ಡಿಸ್ಟಿಂಕ್ಷನ್‌ದಲ್ಲಿ ಬರಬೇಕು, ಸ್ಕಾಲರ್‌ಶಿಪ್ ದೊರಕಿಸಬೇಕು, ಮೆರಿಟ್ ಮೇಲೆ ಅಡ್ಮಿಶನ್ ದೊರಕಿಸಬೇಕು' ಎಂಬ ತಂದೆ–ತಾಯಂದಿರ ಆದೇಶಗಳು ಸದಾ ಬೆನ್ನು ಹತ್ತುತ್ತಿದ್ದವು. ಅಲ್ಲದೇ 'ನೀ ಮನೀಗೆ ಲಗೂ ಯಾಕೆ ಬರಲಿಲ್ಲ? ಆ ವಿಕ್ರಮನ ಬೆನ್ನು ಹತ್ತಿ ಹೋದರೆ ಮುಗೀತು, ಸ್ವಾತಂತ್ರ್ಯ ಗಳಿಸುವವರಿದ್ದಾರ ಅಲ್ಲ ಮ್ಯಾಲ ದಿಲ್ಲಿಯೊಳಗ, ಮುಂಬೈದೊಳಗ, ನೀ ನಿನ್ನ ಕೆಲಸಾ ಮಾಡು. ಮುಂದ ನಿನಗ ಹೊಟ್ಟೆಗೆ ಹಾಕಲಿಕ್ಕೆ ಗಾಂಧಿ – ನೆಹರೂ ಯಾರೂ ಬರೋದಿಲ್ಲ. ರಾನಡೆ, ಗೋಖಲೆ ಮುಂತಾದವರು ಮೊದಲು ಛಲೋತಂಗ ಕಲಿತರು, ಒಳ್ಳೆಯ ಪ್ರತಿಷ್ಠೆಯ ಸ್ಥಾನ ದೊರಕಿಸಿದರು. ಅ ಮೇಲೆ ಸ್ವರಾಜ್ಯ, ಸ್ವಾತಂತ್ರ್ಯ ಅಂತ ಬಡದಾಡಿದರು. ಮೊದಲು ನೀನು ನಿನ್ನ ಸ್ವಂತ ಆರ್ಥಿಕ ಪಾಯಾ ಗಟ್ಟಿ ಮಾಡಿಕೋ ನಾವೇನಪ್ಪಾ ವಿಕ್ರಮ ರಾಣೆ ಹಾಂಗ ಜಹಾಗೀರದಾರರಲ್ಲ. ಸ್ವಂತ ಬುದ್ಧೀಮ್ಯೇಲೆ ಜೀವನಾ ಮಾಡುವಂತ ಜನಾ ನಾವು' (ಪು. ೩೩) ಎಂಬ ಉಪನ್ಯಾಸಗಳು ಅವರಿಂದ ವಾರದಲ್ಲಿ ನಾಲ್ಕು ಸಾರಿ ಬರುತ್ತಿದ್ದದರಿಂದ ಅವುಗಳನ್ನು ಕೇಳಿ ಕೇಳಿ ಗೋವಿಂದನ ಕಿವಿ ದಡ್ಡು ಬಿದ್ದಿದವು. ಇದರ ಪರಿಣಾಮವಾಗಿ ಆತ ಗೆಳೆಯರ ಗುಂಪಿನಲ್ಲಿ, ಮುಖ್ಯವಾಗಿ ವಿಕ್ರಮನ ಸಹವಾಸದಲ್ಲಿ, ಭಯಂಕರ ಮಾತಾಡುತ್ತಿದ್ದ, ವಾದ ಹಾಕುತ್ತಿದ್ದ, ಮೈಚಳಿ ಬಿಟ್ಟು ನಗೆಯಾಡುತ್ತಿದ್ದ. ಮನೆಗೆ ಹೋದನೋ ಗೋಣು ಹಾಕಿ ನಿಲ್ಲುವ ಸಾಧು ಪ್ರಾಣಿ.

ಗೋವಿಂದನು ಮ್ಯಾಟ್ರಿಕ್ ಪಾಸಾದ ನಂತರ ಆತ ಆರ್ಟ್ಸ್ ತೆಗೆದುಕೊಳ್ಳುವ ಹಟ ಹಿಡಿದಿದ್ದಕ್ಕೆ ಅವರ ಮನೆಯಲ್ಲಿ ಚರ್ಚೆಯೇ ನಡೆಯುತ್ತದೆ. ಡಾ॥ ಜೋಶಿಯವರು ಮಗ ಡಾಕ್ಟರನಾಗಲೇಬೇಕು ಎಂದು ಹಟ ಮಾಡಿದ್ದಕ್ಕೆ ಸಾಯನ್ಸ್ ತೆಗೆದುಕೊಂಡರೂ ಕೂಡ, ಅವನ ಬೌದ್ಧಿಕ ಒತ್ತಡಗಳು ಅವನನ್ನು ಸಾಯನ್ಸ್‌ಗೆ ಬಹಳ ದಿನ ಕಟ್ಟಿ ಹಾಕುವುದಿಲ್ಲ. ಅವನು ತನ್ನ ಫರ್ಸ್ಟ್ ಇಯರ್

ಮುಗಿದೊಡನೆ ಹಟದಿಂದ ಆರ್ಟ್ಸ್‌ಗೆ ಬದಲಾಯಿಸಿಕೊಳ್ಳುತ್ತಾನೆ. ನಂತರ ಇಂಟರ್ ಆರ್ಟ್ಸ್ ಮಾಡುತ್ತಾನೆ. ಬಿ.ಎ.ದಲ್ಲಿ ತತ್ವಜ್ಞಾನವನ್ನು ತೆಗೆದುಕೊಳ್ಳುತ್ತಾನೆ. ಡಾಕ್ಟರ್ ಜೋಶಿಯವರು ಅವನ ಈ ಕೃತಿಯನ್ನು ಆಯುರ್ವೇದ ಅತ್ಯಂತ ಕಹಿ ಔಷಧವನ್ನು ಕುಡಿದಂತೆ ಹೊಟ್ಟೆಯೊಳಗೆ ಹಾಕಿಕೊಂಡು. "ಅವರವರ ಕರ್ಮ, ಏನ್ ಮಾಡ್ತಾನೋ ಮಾಡ್ಲಿ" ಎಂದು ಹೇಳುತ್ತಾರೆ (ಪು. ೪೮). ವಿದ್ಯಾಭ್ಯಾಸದ ವಿಚಾರವಾಗಿ ತಂದೆ-ಮಕ್ಕಳ ನಡುವಿನ ಸಂಘರ್ಷವನ್ನು ಗುರುತಿಸಬಹುದಾಗಿದೆ. ಅಲ್ಲದೆ ಗೋವಿಂದ ಕಾಲಕ್ರಮೇಣ ಮಾರ್ಕಿಸ್ಟ್‌ನಾಗುತ್ತಾ ನಡೆಯುತ್ತಾನೆ. ಇದಕ್ಕೆ ಕಾರಣ ಆತ ತನ್ನ ತಂದೆ-ತಾಯಿಯಂದಿರನ್ನು ಕೆಟ್ಟ ಹಾಳು ಪರಂಪರೆಯ ಪ್ರತೀಕಗಳನ್ನಾಗಿ ಮಾಡಿ ಅವರನ್ನು , ಪರಂಪರೆಯನ್ನು ಕೂಡಿಯೇ ದ್ವೇಷಿಸುತ್ತಿರುತ್ತಾನೆ. ಈ ಕಾರಣದಿಂದಾಗಿಯೇ, ಬಿ.ಎ. ಮುಗಿಸಿದ ನಂತರ ಮನೆಯಲ್ಲಿ ಜಗಳವಾಡಿ ತನ್ನ ಸಾಮಾನು, ಪುಸ್ತಕ ಇತ್ಯಾದಿಗಳನ್ನು ತೆಗೆದುಕೊಂಡು ಮುಂಬೈಗೆ ಹೊರಟುಬಿಡುತ್ತಾನೆ ಅಲ್ಲದೆ ಆತ ತನ್ನ ಬ್ರಾಹ್ಮಣ್ಯವನ್ನು ಬಿಟ್ಟು ಬಿಟ್ಟಿರುತ್ತಾನೆ. ಮುಂಬೈಗೆ ಹೋದಂತಹ ಗೋವಿಂದ ಕಮ್ಯೂನಿಸ್ಟ್‌ನಾಗುತ್ತಾನೆ.

ಅಂತರಾಳ ಕಾದಂಬರಿಯಲ್ಲಿನ ಪೂಜಾರ ಮಾಸ್ತರ ಹಾಗೂ ಮೋಹನ್‌ರಾವ್ ನಡುವೆಯೂ ಸಂಘರ್ಷವೇರ್ಪಡುವುದನ್ನು ನಾವು ಕಾಣಬಹುದಾಗಿದೆ. ಮೋಹನ್‌ರಾವ್ ಮಾಸ್ತರರ ಇಳಿ ವಯಸ್ಸಿನಲ್ಲಿ ಜನಿಸಿರುತ್ತಾನೆ. ಅವನು ಅವರ ನಿರುತ್ಸಾಹದ ಕೂಸಾಗಿರುತ್ತಾನೆ.(ಪು.ಸಂ.೨೪) ಮೋಹನ್‌ರಾವ್ ಐದಾರು ವರ್ಷದವನಾಗಿದ್ದಾಗ ಮಾಸ್ತರರ ಹೆಂಡತಿ ಪದ್ಮಕ್ಕ ಕ್ಯಾನ್ಸರಿನಿಂದ ತೀರಿಕೊಳ್ಳುತ್ತಾರೆ. ಮಾಸ್ತರರು ತನ್ನ ಮಗನಿಗೆ ತಾವು ಮಾಡುವ ಕರ್ತವ್ಯವನ್ನೆಲ್ಲ ಮಾಡುತ್ತಾರೆ. ಮಗನ ಮೇಲೆ ತಮ್ಮ ಎಲ್ಲಾ ಸಿಟ್ಟು ವ್ಯಕ್ತ ಮಾಡಿ ಆತನನ್ನು ಶಿಸ್ತಿನಿಂದ ಬೆಳೆಸುತ್ತಾರೆ. ಅವನ ದೈನಂದಿನ ಅಭ್ಯಾಸವನ್ನು ಮಾಡಿಸುವುದರ ಜೊತೆಗೆ ಜಗತ್ತಿನ ಒಳ್ಳೊಳ್ಳೆಯ ಪುಸ್ತಕಗಳನ್ನು ಸಾಧ್ಯವಿದಷ್ಟು ಓದಿ ತೋರಿಸುತ್ತಾರೆ. ಅವನಿಗೆ ಎಳ್ಳಷ್ಟೂ ಸ್ವಾತಂತ್ರ್ಯ ಕೊಡದೆ ಸಂಪೂರ್ಣವಾಗಿ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುತ್ತಾರೆ. ಅಂತೆಯೇ ಮೋಹನ್‌ರಾವ್ ತಾನು ದೊಡ್ಡವನಾದ ಮೇಲೆ ತಂದೆಯನ್ನು ದ್ವೇಷಿಸತೊಡಗುತ್ತಾನೆ.ಅವರ ಬಗ್ಗೆ ತನ್ನ ಹೃದಯವನ್ನು ಕಲ್ಲು ಮಾಡಿಕೊಂಡು ಬಿಡುತ್ತಾನೆ (ಪು. ೨೪). ಈ ಕಾರಣದಿಂದಾಗಿಯೇ ಅವರನ್ನು ಕೇಳದೆಯೇ ಮುಂಬಯಿಯ ನವ ಶ್ರೀಮಂತರ ಮಗಳನ್ನು ಲಗ್ನವಾಗುತ್ತಾನೆ. ಇದರಿಂದ ಮಾಸ್ತರರಿಗೆ ದುಃಖವೇನೂ ಅನ್ನಿಸುವುದಿಲ್ಲ. ಬದಲಾಗಿ "ತನ್ನಷ್ಟಕ್ಕೆ ತಾನು ಸುಖದಿಂದಿದ್ದಾನಲ್ಲ, ಸಾಕು. ಅವನ ಮಾರ್ಗ ಅವನಿಗೆ, ನನ್ನದು ನನಗೆ, ನನ್ನ ನಿಜವಾದ ಜೀವನ ಎಂದೋ ಮುಗಿದಿದೆ" ಎಂದು ಹೇಳಿದರೂ ಸಹ ಅವರ ಆ ಮಾತುಗಳಲ್ಲಿ ಮಗನ ವಿರುದ್ಧದ ಭಾವನೆಯನ್ನು ಗುರುತಿಸಬಹುದು. ಅಲ್ಲದೆ ತಮ್ಮ ಇಳಿವಯಸ್ಸಿನಲ್ಲಿಯೂ ಕೂಡ ಆಯ್.ಎ.ಎಸ್. ಅಧಿಕಾರಿಯಾಗಿದ್ದ ತನ್ನ ಮಗ ಮೋಹನನ ಮನೆಗೆ ಹೋಗದೇ ತಾವೊಬ್ಬರೇ ತಮ್ಮ ವಿಧವೆ ಮಗಳೊಂದಿಗೆ ಉಳಿಯುತ್ತಾರೆ. ಮಾಸ್ತರರಾದರೂ ತಾವೇ ಅಡಿಗೆ ಮಾಡಿಕೊಂಡು ಜೀವಿಸುತ್ತಿದ್ದರೇ ಹೊರತು ಮಗನ ಬೆನ್ನು ಹತ್ತಿ ಹೋಗುತ್ತಿರಲಿಲ್ಲ. ಸಾಬರಮತಿ ಆಶ್ರಮದಾಗ ನಾವು ಸ್ವಾವಲಂಬನಾ ಕಲಿತಂಥ ಮಂದಿ, ಗಾಂಧೀ ಮಂದಿ ಎಂದು ಹೇಳಿದರೂ ಸಹ ಮಾಸ್ತರರಿಗೆ ಮಗನ ಬಗೆಗಿದ್ದ ಸಂಘರ್ಷದ ಭಾವವನ್ನು ಇಲ್ಲಿ ಗುರುತಿಸಬಹುದಾಗಿದೆ.

೫.೬.೨ ಪುರುಷ ಪಾತ್ರಗಳು :

ಕಾದಂಬರಿಯ ನಾಯಕನಾದ ವಿಕ್ರಮ ಮತ್ತು ಗೋವಿಂದ ಜೋಶಿ ಇಬ್ಬರೂ ಸ್ನೇಹಿತರು. ಓದಿನಲ್ಲಿ ಅಷ್ಟೇನೂ ಬುದ್ಧಿವಂತನಿರದ ವಿಕ್ರಮನನ್ನು ಅವನ ತಂದೆ ಗೋವಿಂದನ ಗೆಳೆತನವನ್ನು ಬೆಳೆಸುವಂತೆ ಮಾಡುತ್ತಾರೆ. "ಬ್ರಾಹ್ಮಣ ಹುಡುಗರ ಕೂಡ ಗೆಳೆತನ ಮಾಡಿದರೇನೇ ಸ್ವಲ್ಪ ವಿದ್ಯಾಗಿದ್ಯಾ ಬಂದೀತು, ಶಿಸ್ತು – ಸಂಸ್ಕೃತ ಬಂದಾವು, ಇಲ್ಲದಿದ್ದರೆ ದನ ಕಾಯೋ, ಹೊಲ ಮಾಡೋ ಕೆಲ್ಸಾನೇ ನಿಂಗೆ ಕಟ್ಟಿಟ್ಟದ್ದು" ಎಂದು ಆಗಾಗ ಹೇಳುವುದರೊಂದಿಗೆ ಡಾ॥ ಜೋಶಿಯವರ ಬೆನ್ನು ಹತ್ತಿ, ವಿಕ್ರಮನು ಗೋವಿಂದನೊಡನೆ ಅಭ್ಯಾಸ ಮಾಡಲು ಪರವಾನಿಗೆ ದೊರಕಿಸಿಕೊಡುತ್ತಾರೆ. ಮ್ಯಾಟ್ರಿಕ್ ಮುಗಿಯುವವರೆಗೂ ಇಬ್ಬರು ಜೊತೆಯಲ್ಲಿಯೇ ಅಭ್ಯಾಸ ಮಾಡುತ್ತಾರೆ. ಮ್ಯಾಟ್ರಿಕ್ ನಂತರ ವಿಕ್ರಮನು ಇಷ್ಟಪಟ್ಟು ಸಹಜವಾಗಿ ಸಾಯನ್ಸ್ ತೆಗೆದುಕೊಂಡರೆ ಗೋವಿಂದನು ತನಗೆ ಇಷ್ಟವಿಲ್ಲದಿದ್ದರೂ ಮನೆಯವರ ಬಲವಂತಕ್ಕೆ ಸಾಯನ್ಸ್ ತೆಗೆದುಕೊಳ್ಳುತಾನೆ. ಆದರೆ ಅದರಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೇ ಆರ್ಟ್ಸ್ ತೆಗೆದುಕೊಳ್ಳುತ್ತಾನೆ. ಮುಂದೆ ವಿಕ್ರಮ ಇಂಜಿನಿಯರಿಂಗ್ ಪದವಿ ಪೂರೈಸಿದರೆ ಗೋವಿಂದ ಮಾತ್ರ ಇಂಟರ್ ಆರ್ಟ್ಸಿ ಮಾಡಿ ಬಿ.ಎ. ನಲ್ಲಿ ತತ್ವಜ್ಞಾನವನ್ನು ತೆಗೆದುಕೊಳ್ಳುತ್ತಾನೆ.

ಪದವಿ ಹಂತದಲ್ಲಿದ್ದಾಗ ಗೋವಿಂದ ತನ್ನ ಪರಂಪರೆಯ ದ್ವೇಷದ ಪ್ರತೀಕವಾಗಿ ಮಾರ್ಕ್ಸ್‌ವಾದದ ಕಡೆಗೆ ಹೊರಳುತ್ತಾನೆ. ಆದರೆ ವಿಕ್ರಮನಿಗೆ ಅದರ ಅವಶ್ಯಕತೆ ಇರುವುದಿಲ್ಲ. ರಾಜಕಾರಣದ ಬಗ್ಗೆ ವಿಕ್ರಮ 'ರಿಲ್ಯಾಕ್ಸ್‌ಡ್' ಮನುಷ್ಯನಾಗಿದ್ದರೆ ಗೋವಿಂದ ಕಟ್ಟಾ ನೆಹರೂ ದ್ವೇಷಿಯಾಗಿರುತ್ತಾನೆ. ವಿಕ್ರಮ ಪುಣೆಗೆ ಹೋದಾಗಲೂ ಕೂಡ ನೆಹರೂ ಭಕ್ತನೆಂದೇ, ಒಳ್ಳೆಯ ಎಂಜಿನಿಯರನಾಗಿ ದೇಶವನ್ನು ಕಟ್ಟುವ ಕೆಲಸದಲ್ಲಿ ತನ್ನ ಅಳಿಲು ಶಕ್ತಿಯನ್ನು ಅರ್ಪಿಸಬೇಕು ಎಂಬ ವಿಚಾರವನ್ನೇ ಹೊಂದಿರುತ್ತಾನೆ. ವಿಕ್ರಮನು ಪುಣೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವೇಳೆಯಲ್ಲಿಯೇ ಗೋವಿಂದನು ತನ್ನ ತಂದೆ–ತಾಯಿಯರೊಡನೆ ಜಗಳವಾಡಿಕೊಂಡು ಮನೆ ಬಿಟ್ಟು ಮುಂಬೈಗೆ ಹೋಗಲು ತೀರ್ಮಾನಿಸಿ ಮಾರ್ಗ ಮಧ್ಯೆ ಪುಣೆಯಲ್ಲಿ, ವಿಕ್ರಮನನ್ನು ಭೇಟಿಯಾಗಲು ಬರುತ್ತಾನೆ. ಇಷ್ಟರಲ್ಲಾಗಲೇ ವಿಕ್ರಮನು ಗೋವಿಂದನ ತಂಗಿಯಾದ ಯಶೋದೆಯನ್ನು ಪ್ರೀತಿಸುತ್ತಿರುತ್ತಾನೆ. ಆದರೆ ಗೋವಿಂದನ ಪ್ರಕಾರ "ಪ್ರೀತಿ ಎಂದರೆ ಬೂರ್ಜ್ವಾ ಜನರ ಆಟ– ವ್ಯಾಳ್ಯೆ ಕಳೀಲಿಕ್ಕೆ ಆಡೋವಂಥ ಆಟ – ಒಂದು ಪಾಸ್‌ಟೈಮ್!" (ಪು. ೭೭) ಇಲ್ಲಿ ವಿಕ್ರಮ ಮತ್ತು ಗೋವಿಂದರ ನಡುವಿನ ಭಿನ್ನಾಭಿಪ್ರಾಯಗಳನ್ನು ಗಮನಿಸಬಹುದಾಗಿದೆ.

ಪುಣೆಗೆ ಬಂದ ಗೋವಿಂದ ವಿಕ್ರಮನನ್ನು ಕುರಿತು ನಿಮ್ಮ ಕಾಲೇಜಿನಲ್ಲಿ ಮಾರ್ಕ್ಸ್‌ವಾದದಲ್ಲಿ ಇಂಟರೆಸ್ಟ್ ಇದ್ದವರು ಯಾರೂ ಇಲ್ಲವೇ ಎಂದು ಕೇಳಿದಾಗ ವಿಕ್ರಮನು ತಾನು ಯಾರನ್ನೂ ಭೆಟ್ಟಿಯಾಗಿಲ್ಲವೆಂದು ಹೇಳುತ್ತಾನೆ.ಗೋವಿಂದನು ಪ್ರೊಫೆಸರ್ ಗಾಡಗೀಳರ ಬಗ್ಗೆ ವಿಚಾರಿಸಿದಾಗಲೂ ಕೂಡ ವಿಕ್ರಮ ಬೇಕೆಂತಲೇ ಅವರ ಬಗ್ಗೆ ಸರಿಯಾದ ಮಾಹಿತಿ ನೀಡದೇ ತಪ್ಪಿಸಿಕೊಳ್ಳುತ್ತಾನೆ. ಏಕೆಂದರೆ ವಿಕ್ರಮನಿಗೆ ಗೋವಿಂದನ ಈ ಕೆಲಸದಲ್ಲಿ ಭಾಗಿಯಾಗುವುದು ಬೇಕಾಗಿರುವುದಿಲ್ಲ. ಮೊದಲಿನಿಂದಲೂ ಅವನ ಮಾರ್ಕ್ಸ್‌ವಾದದಿಂದ ದೂರವಿರುವುದೇ ಒಳ್ಳೆಯದೆಂದು ನಿರ್ಧರಿಸುತ್ತಾನೆ. ವಿಕ್ರಮನು ನೆಹರೂರವರ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಆಶಾವಾದವನ್ನು ಹೊಂದಿದ್ದರೆ,

ಗೋವಿಂದನ ಪ್ರಕಾರ ಅದು ಜನರ ಕಣ್ಣಲ್ಲಿ ಮಣ್ಣು ಹಾಕುವ ಕೆಲಸ. ಈ ಎಲ್ಲಾ ಅಂಶಗಳಲ್ಲಿಯೂ ನಾವು ವಿಕ್ರಮ ಹಾಗೂ ಗೋವಿಂದರ ನಡುವೆ ವಿಚಾರಗಳ ಬೌದ್ಧಿಕ ಸಂಘರ್ಷವೇರ್ಪಡುವುದನ್ನು ಕಾಣುತ್ತೇವೆ.

ವಿಕ್ರಮನ ಮತ್ತೊಬ್ಬ ಸ್ನೇಹಿತ ನಂದಕುಮಾರ / ನಂದೂ / ನಂದಾಪಾಟೀಲ. ಈತ ವಿಕ್ರಮನ ಇಂಜಿನಿಯರಿಂಗ್ ಸಹಪಾಠಿಯಾಗಿರುತ್ತಾನೆ. ಈತ ಸ್ನೇಹಿತರ ಗುಂಪಿನ ಪ್ರಿನ್, ವಿವಾಹವಾಗಿ ಇಂಜಿನಿಯರಿಂಗ್ ಅಭ್ಯಾಸಕ್ಕೆ ಬಂದಿರುತ್ತಾನೆ. ದೇಹದ ಹಸಿವುಗಳನ್ನು ಹಿಂಗಿಸಿಕೊಳ್ಳುವುದರಲ್ಲಿ ತಪ್ಪಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿರುತ್ತಾನೆ. ಹಸಿವಾದ ಕೂಡಲೇ ಮನೆಯಿರದಿದ್ದರೆ ಹೋಟೆಲಿಗೆ ಹೋಗಿ ಊಟ ಮಾಡುವುದಿಲ್ಲವೇ? ಅದೇ ರೀತಿ ನಮ್ಮ ಹಸಿವುಗಳನ್ನು ಆಯಾಕಾಲಕ್ಕೆ ಸಮಧಾನ ಪಡಿಸಿದರೆ ತಪ್ಪೇನು? ಅದಕ್ಕೂ ಪ್ರೀತಿಗೂ ಏನೂ ಸಂಬಂಧವಿಲ್ಲ. ಅದಕ್ಕೂ ಮುಂದೆ ಹೋಗಿ, ಪ್ರೀತಿಗೂ ಲಗ್ನಕ್ಕೂ ಯಾವ ಅನಿವಾರ್ಯ ಸಂಬಂಧವಿಲ್ಲ.ಲಗ್ನದಿಂದ ಪ್ರೀತಿ ಹುಟ್ಟಬಹುದು; ಪ್ರೀತಿಯ ಮೂಲಕ ಲಗ್ನವಾಗಬಹುದು. ಆದರೂ ಲಗ್ನದ ಸಂಬಂಧ ಬೇರೆ, ಪ್ರೀತಿಯ ಸಂಬಂಧ ಬೇರೆ ಎಂಬ ಅಭಿಪ್ರಾಯವನ್ನು ಹೊಂದಿರುತ್ತಾನೆ (ಪು. ೬೯). ಆತನ ಪ್ರಕಾರ ವಿಕ್ರಮ ಬ್ರಾಹ್ಮಣ ಹುಡುಗಿಯನ್ನು ಲಗ್ನವಾಗುವ ಬದಲು ಹಾಂಗೇ ಪ್ರೀತಿಸಬೇಕಿತ್ತು ಎಂಬ ಧೋರಣೆಯನ್ನು ಹೊಂದಿರುತ್ತಾನೆ. ಆದರೆ ವಿಕ್ರಮ ರೋಮ್ಯಾಂಟಿಕ್ ಪ್ರೀತಿಯ ದಾರಿಯಲ್ಲಿರುತ್ತಾನೆ. ಅದರಲ್ಲೇ ಅವನ ಜೀವನದ ಸಾಫಲ್ಯವಿತ್ತು, ಆತನ ಆದರ್ಶವಾದೀ ಒಳಮನಸ್ಸಿನ ಸಮಾಧಾನವಿತ್ತು ಅಥವಾ ಸುತ್ತ ನ್ಯೂನಗಂಡದ ಒಂದು ಒತ್ತಡವಿತ್ತು. ಆದರೂ ವಿಕ್ರಮನಿಗೆ ಆಗ ಅದೇ ಭಯಂಕರ ಮಹತ್ವದ್ದು, ಅಪೂರ್ಣವಾದದ್ದು ಎಂದೆನಿಸುತ್ತಿತ್ತು. ಆದ್ದರಿಂದ ವಿಕ್ರಮನು ನಂದೂನ ಫಿಲೋಸಫಿಗೆ ಬಲಿ ಬೀಳಲಿಲ್ಲ. ವಿಕ್ರಮ ತನ್ನ ಇಂಜಿನಿಯರಿಂಗ್ ಅಭ್ಯಾಸದ ನಡುವಿನ ರಜೆಯ ಅವಧಿಯಲ್ಲಿ ಕೊಲ್ಹಾಪುರದಲ್ಲಿನ ನಂದು ಪಾಟೀಲನ ಮನೆಗೆ ಹೋಗುತ್ತಾನೆ. ವಿಕ್ರಮನನ್ನು ನೋಡಿದ ನಂದೂ ಪಾಟೀಲನ ಕಕ್ಕಂದಿರು, ಮಾವಂದಿರು, ಅವನ ಗೆಳೆಯರ ಅಪ್ಪಂದಿರು ಎಲ್ಲರೂ 'ವಿಕ್ರಮ ಚಲೋ ಹುಡುಗ' ದಾಂಡೇಲಿಯಲ್ಲಿ ಆಸ್ತಿ–ಪಾಸ್ತಿ ಚಲೋ ಇರಬೇಕು. ತಮ್ಮಲ್ಲೇ ಒಂದು ಹುಡುಗೀನ್ನ ಗಂಟು ಹಾಕಿ ಇಟಗೊಳ್ಳಬೇಕು. ನಮ್ಮ ನಂದೂನಿಗೆ ಒಳ್ಳೆ ಪಾರ್ಟ್ನರ್ ಆದಾನು! ಎಂಬ ಮಾತುಗಳು ಪ್ರಾರಂಭವಾಗುತ್ತವೆ.

ಆದರೆ ನಂದು ಪಾಟೀಲ ವಿಕ್ರಮನದ್ದು ಒಂದು ಭಾನಗಡಿ ಇದೆಯೆಂದು ಹೇಳಿದಾಗ ಅವನ ಚಿಕ್ಕಪ್ಪ ಅದನ್ನು ಬಹಳ ಸಾಮಾನ್ಯ ಸಂಗತಿ ಎಂಬಂತೆ ಸ್ವೀಕರಿಸಿ ಪ್ರತಿಕ್ರಿಯಿಸುತ್ತಾರೆ. ಆದರೆ ಆತ ಒಬ ಬ್ರಾಹ್ಮಣ ಹುಡುಗಿಯನ್ನು ಪ್ರೀತಿಸುತ್ತಿದ್ದಾನೆಂದು ತಿಳಿದಾಗ "ಅವರ‍್ಯಾಕ ಕೊಟ್ಟಾರ ನಮ್ಮ ಮರಾಠಾ ಕ್ಷತ್ರಿಯರಿಗೆ ತಮ್ಮ ಹುಡುಗೀನ್ನ? ವಿಕ್ರಮಾ ಆ ಬ್ರಾಹ್ಮಣರ ಹುಡುಗಿ ಕನಸಿನ ಗಂಟು ಅಂತ ತಿಳಕೋ. ಮಾತ್ತ ನಾವಾದರೂ ನಿನ್ನಂಥ ಛಲೋ ಹುದ್ದರಿಯನ್ನ ಬ್ರಾಹ್ಮಣರಿಗೆ ಕೊಡೋದು" (ಪು. ೮೮) ಎಂಬ ಮಾತುಗಳು ಅಂತರ್ಜಾತಿಯ ಸಂಘರ್ಷವನ್ನು ಸೂಚಿಸುತ್ತವೆ. ಅಲ್ಲದೇ "ಸದ್ಯ ನಮ್ಮ ಸರಂಜಾಮಿಶಾಹೀ ಅಂತೂ ಟೆನನ್ಸಿ, ಸೀಲಿಂಗ್ ಅಂತ ಹೋಗ್ತಾನೆ ಇದೆ. ಸದ್ಯ ಈ ಬದಲಾಗುತ್ತಿರುವ ವ್ಯವಸ್ಥೆಯ ಘಟಕರೆಂದು ನಾವು ಇರುವವರು.

ಇದ್ದಷ್ಟು ದಿನ ಗಮ್ಮತ್ತು-ಹಣ, ಬಂಗಲೆ, ಕಾರು, ಕುಡಿತ, ಹುಡುಗಿಯರು ಫಾರೇನು ಟ್ರಿಪ್ಪುಗಳು" ಎಂಬ ನಂದುವಿನ ಮಾತುಗಳು ಅವನ ವಾಸ್ತವ ದೃಷ್ಟಿಯ ಜೊತೆ ಜೊತೆಗೆ ಅವರು ಎದುರಿಸುತ್ತಿದ್ದ ಬದಲಾವಣೆಯ ಸಂಘರ್ಷವನ್ನು ತಿಳಿಸುತ್ತವೆ.

೫.೬.೨ ಸ್ತ್ರೀಪಾತ್ರಗಳು :

ದೇಸಾಯಿಯವರ ಕಾದಂಬರಿಗಳಲ್ಲಿ ಸ್ತ್ರೀ ಕೇಂದ್ರ ವ್ಯಕ್ತಿಯಾಗಿ, ಆಧುನಿಕ ಮನೋಭಾವದವಳಾಗಿ, ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಬಲ್ಲವಳಾಗಿರುತ್ತಾಳೆ. ಜೀವನದ ಸಮಸ್ಯೆಗಳನ್ನು, ಸನ್ನಿವೇಶಗಳನ್ನು ವಾಸ್ತವವಾದಿ ನೆಲೆಯಲ್ಲಿ ನೋಡುವ ದೃಷ್ಟಿಕೋನವನ್ನು ಹೊಂದಿದವಳಾಗಿರುತ್ತಾಳೆ. ಅಂತೆಯೇ ಅಂತರಾಳ ಕಾದಂಬರಿಯಲ್ಲಿಯ ಯಶೋದೆ, ಅಶ್ವಿನಿ, ಸೀತೆ, ವಿಕ್ರಮನ ಅಜ್ಜಿ ಎಲ್ಲರೂ ಸಹ ತಮ್ಮ ತಮ್ಮ ಜೀವನದ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ ನಿಲ್ಲುವವರೇ ಆಗಿದ್ದಾರೆ.

ಯಶೋದೆ ಬ್ರಾಹ್ಮಣ ಹುಡುಗಿಯಾದರೂ ಕೂಡ ಮರಾಠ ಹುಡುಗ ವಿಕ್ರಮನನ್ನು ಪ್ರೀತಿಸುತ್ತಾಳೆ. ತನ್ನ ಪ್ರೀತಿಗೆ ತನ್ನ ತಂದೆ ತಾಯಿಯರಿಂದ ವಿರೋಧ ವ್ಯಕ್ತವಾದಾಗ ಮನೆಯಿಂದ ಹೊರಬಂದು ವಿಕ್ರಮನನ್ನು ವಿವಾಹವಾಗುತ್ತಾಳೆ. ವಿವಾಹ ನಂತರ ಕಡಿದು ಹೋಗಿದ್ದ ತನ್ನ ತಂದೆಯ ಮನೆಯ ಸಂಬಂಧವನ್ನು ಮತ್ತೆ ಗಟ್ಟಿಗೊಳಿಸಿಕೊಳ್ಳುವಲ್ಲಿ ಸಫಲಳಾಗುತ್ತಾಳೆ. ವಿಕ್ರಮ ಮತ್ತು ಅಶ್ವಿನಿಯರ ನಡುವಿನ ಸಂಬಂಧದ ಬಗ್ಗೆ ತಿಳಿದಾಗಲೂ ಕೂಡ ಅವಳು ವಿಕ್ರಮನನ್ನು ಮೌನವಾಗಿಯೇ ಪ್ರತಿಭಟಿಸುತ್ತಾಳೆ. ವಿಕ್ರಮ ಮತ್ತು ಅಶ್ವಿನಿಯರ ನಡುವಿನ ಸಂಬಂಧದ ವಿಚಾರದಲ್ಲಿ "ನಾನು ನಿನ್ನ ತಾಯಿಯಂತೆ ವರ್ತಿಸಬೇಕು ಅಂತಾ ಅಂತಿಯಾ! ಆದರೆ ನಾನು ನಿನ್ನ ತಾಯಿಯಾಗಲಾರೆ- ನಾನು ಏನಿದ್ದರೂ ಯಾವಾಗಲೂ ನಿನ್ನ ಹೆಂಡತಿ_ಧರ್ಮಪತ್ನಿ, ಗೊತ್ತಾಯಿತಲ್ಲಾ?" ಎಂದು ಹೇಳುವ ಮಾತುಗಳು ವಿಕ್ರಮನನ್ನು ಪ್ರತಿಭಟಿಸುವುದರ ಜೊತೆಗೆ ವಿಕ್ರಮ ತಪ್ಪು ಮಾಡಿದರೆ ತಾನು ಕ್ಷಮಿಸಲಾರೆ ಎಂಬುದನ್ನು ಅವನಿಗೆ ಪರೋಕ್ಷವಾಗಿ ಮನವರಿಕೆ ಮಾಡಿಕೊಡುತ್ತಾಳೆ. ಅಲ್ಲದೆ ಮನೆಯಲ್ಲಿ ಆದಷ್ಟು ಮೌನವಾಗಿರತೊಡಗುತ್ತಾಳೆ. ತನ್ನ ಬಿ.ಎ., ತದನಂತರ ಎಂ.ಎ. ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿಕೊಂಡ ನಂತರ ಯಶೋದೆ ಒಂದು ಕಾಲೇಜಿನಲ್ಲಿ ಪಾರ್ಟ್ ಟೈಮ್ ಲೆಕ್ಚರರ್ ಕೆಲಸ ಮಾಡತೊಡಗುತ್ತಾಳೆ. ತನ್ನ ಕೆಲಸ, ಮಕ್ಕಳು, ಮನೆ, ಅಜ್ಜಿ, ಅಪ್ಪ, ಗಂಡ-ತನ್ನ ವ್ಯಕ್ತಿತ್ವಕ್ಕೆ ಏನೋ ಒಂದು ಗಂಟು ಹಾಕಿ ತನ್ನ ಕರ್ತವ್ಯಗಳಲ್ಲಿ ಮಗ್ನಳಾಗುತ್ತಾಳೆ. ಬೇಕಂತಲೇ ಒಂದು ರೀತಿಯ ನಿದ್ರಾವಸ್ಥೆಯಲ್ಲಿ, ಅರ್ಧಮರ್ಧ ಸ್ಥಿತಿಯಲ್ಲಿ ತನ್ನನ್ನು, ತನ್ನ ಅಂತರಾಳವನ್ನು ಕಾಪಾಡಿಕೊಳ್ಳುತ್ತಿರುತ್ತಾಳೆ (ಪು. ೨೨೨).

ಆರ್ಕಿಟೆಕ್ಟ್ ವಿದ್ಯಾಭ್ಯಾಸವನ್ನು ಮಾಡಿದ್ದ ಅಶ್ವಿನಿಯು ಒರಿಸ್ಸಾದ ಒಬ್ಬ ಪ್ರಸಿದ್ಧ ನವ್ಯ ಕಾದಂಬರಿಕಾರನ ಮಗಳು. ಅಪ್ಪನಿಗಿಂತ ಆಧುನಿಕ ಮನೋಭಾವದವಳಾಗಿರುತ್ತಾಳೆ. ಮುಂಬೈನಲ್ಲಿ ತನ್ನ ಕಕ್ಕನ ಮನೆಯಲ್ಲಿದ್ದು ಆರ್ಕಿಟೆಕ್ಚರ್ ಕೋರ್ಸ್ ಮಾಡಿದ ಅವಳು ಮುಂಬೈನ ತರುಣ ಕಲಾವಂತರ ಮಧ್ಯೆ ಬೆಳೆದಿರುತ್ತಾಳೆ. ತನ್ನ ಕಕ್ಕ-ಕಕ್ಕಿಯರ ಟೀಕೆಗೆ ಗುರಿಯಾದಾಗ ಅವರಿಂದ ಸಿಡಿದು ಹೋಗಿ ತನ್ನ ಬೆಂಗಾಲಿ ಗೆಳತಿಯೊಡನೆ ಖಾರದಲ್ಲಿ ಒಂದು ಚಿಕ್ಕ ಫ್ಲಾಟನ್ನು ತೆಗೆದುಕೊಂಡು

ಸ್ವತಂತ್ರವಾಗಿ ಜೀವಿಸಿರುತ್ತಾಳೆ. ಇಲ್ಲಿ ನಾವು ಅಶ್ವಿನಿಯ ಸ್ವತಂತ್ರ ಮನೋಭಾವವನ್ನು ಗುರುತಿಸಬಹುದಾಗಿದೆ. ಇಂತಹ ಅಶ್ವಿನಿ ವಸಂತ ಮಹಾಬಲೇಶ್ವರನೊಡನೆ 'ಲಿವ್ವಿಂಗ್ ಟುಗೆದರ್' ನಡೆಸುತ್ತಿರುತ್ತಾಳೆ. 'ಹಳ್ಳಿಗಳನ್ನು ಬದಲಿಸಲು ಕೆಲವು ಮಂದಿಯಾದರು ನಿರ್ಧಾರ ಮಾಡಬೇಕು" ಎಂಬ ಮನೋಭಾವವನ್ನು ಹೊಂದಿದ್ದ ಅಶ್ವಿನಿಯು ಬುದ್ಧಿವಾದಿಗಳು ಕೈಲಾಗದವರಂತೆ ಅಸಹಾಯಕತೆಯಿಂದ ಜೀವಿಸುವುದನ್ನು ಮನಸಾರೆ ದ್ವೇಷಿಸುತ್ತಿದ್ದಳು. ರಾಮನಂಥ ಹಲವಾರು ಮಂದಿಗಳನ್ನು ಸಿದ್ಧಮಾಡಬೇಕು– ಅವರು ರಾಕ್ಷಸರೊಡನೆ, ಈವಿಲ್‌ದೊಡನೆ ಸಣ್ಣ ಸಣ್ಣ ಯುದ್ಧ ಮಾಡುತ್ತಲೇ ಇರಬೇಕು, ಇಂಥ ಸಣ್ಣ ಸಣ್ಣ ಯುದ್ಧಗಳಿಂದಲೇ ಮುಂದೆ ದೊಡ್ಡಕ್ರಾಂತಿಯಾಗುತ್ತದೆ ಎಂಬ ಕ್ರಾಂತಿಕಾರಕ ಮನೋಭಾವನೆಯನ್ನು ಹೊಂದಿರುತ್ತಾಳೆ.

ಜಾರ್ಜ್ ಮನೆಯಲ್ಲಿ ಪರಿಚಿತರಾದ ಅಶ್ವಿನಿ ಹಾಗೂ ವಿಕ್ರಮ ಕೆಲ ತಿಂಗಳುಗಳಲ್ಲಿಯೇ ಅತ್ಯಂತ ಆಪ್ತರಾಗಿ ಬಿಡುತ್ತಾರೆ. ಈ ಆಪ್ತತೆಯಲ್ಲಿಯೇ ಅವರಿಬ್ಬರ ನಡುವೆ ದೈಹಿಕ ಸಂಪರ್ಕವೂ ಏರ್ಪಡುತ್ತದೆ. ಈ ಸಂಬಂಧದ ಬಗ್ಗೆ ವಿಕ್ರಮನಲ್ಲಿ ತಾನು ಯಶೋದೆಗೆ, ವಸಂತನಿಗೆ ದ್ರೋಹ ಬಗೆಯುತ್ತಿರುವಂತೆ ಭಾಸವಾಗುತ್ತದೆ. ಆದರೆ ಅಶ್ವಿನಿಯ ಪ್ರಕಾರ ಇದು ಅವರಿಬ್ಬರ ನಡುವಿನ ಸ್ನೇಹ ಸಂಬಂಧ. ಒಂದು ರೀತಿಯ ಪ್ಲೆಟೋನಿಕ್ ಸಂಬಂಧ. ಯಾಕೆಂದರೆ ಹಾಗೆ ಇಬ್ಬರಿಗೂ ಸಂಭೋಗದ ಅವಶ್ಯಕತೆ ಇರುವುದಿಲ್ಲ. ಅವರ ಸಂಬಂಧಕ್ಕೆ ಬಂಧವಿರಬಾರದು. ಅದರಲ್ಲಿ ಸ್ವಚ್ಛಂದತೆ ಇರಬೇಕು. – ಒಂದು ರೀತಿಯ ಆಟ ಇರಬೇಕು– ಆರೋಗ್ಯ ಇರಬೇಕು– ಅವರಿಬ್ಬರ ಸಂಬಂಧಕ್ಕೆ ಅದರದೇ ಆದ ಪೂರ್ಣತೆಯನ್ನು ಕೊಡಬೇಕಿತ್ತು. ಅಲ್ಲದೇ "ಯಾವುದೇ ಸಂಬಂಧ ಬಂಧನವಾಗದಿದ್ದರೆ ಆ ಸಂಬಂಧಕ್ಕೆ ಬಂಧ ಬರೋದಿಲ್ಲ – ಅದಕ್ಕೆ ಫಾರ್ಮ್ ಮೂಡೋದಿಲ್ಲ. ಫಾರ್ಮ್ ಇಲ್ಲದೆ ಅರ್ಥವಿಲ್ಲ" ಎಂಬ ಮನೋಧರ್ಮವನ್ನು ಹೊಂದಿರುತ್ತಾಳೆ (ಪು. ೨೨೩). ಅಶ್ವಿನಿಯ ಈ ಮನೋಧರ್ಮಕ್ಕೆ ಅವಳು ಮಹಾ ನಗರದಲ್ಲಿ ಬೆಳೆದು ಬಂದ ರೀತಿಯೂ ಕೂಡ ಕಾರಣವಾಗುವುದನ್ನು ನಾವು ಗುರುತಿಸಬಹುದು.

ಸೀತೆ ದಾಂಡೆಲಿಯ ವಿಕ್ರಮನ ಮನೆಯಲ್ಲಿ ಕೆಲಸದಾಕೆಯಾಗಿರುತ್ತಾಳೆ. ವಿಕ್ರಮ ಮತ್ತು ಸೀತೆಯರ ನಡುವಿನ ಸಂಬಂಧದಿಂದಾಗಿ ಅವಳಲ್ಲಿ ಗಡಿಬಿಡಿಯುಂಟಾಗಿರುತ್ತದೆ. ಅದನ್ನು ತಿಳಿದ ಆಕೆಯ ತಂದೆ ಅವಳನ್ನು ಒಬ್ಬ ಟ್ರಕ್ ಡ್ರಾಯವ್ಹರ್ ಜೊತೆಯಲ್ಲಿ ಮದುವೆ ಮಾಡಿಬಿಡುತ್ತಾನೆ. ಒಮ್ಮೆ ಸೀತೆ ಇದ್ದಕ್ಕಿದ್ದಂತೆ ತನ್ನ ನಾಲ್ಕು ವರ್ಷದ ಮಗನೊಂದಿಗೆ ವಿಕ್ರಮನನ್ನು ನೋಡಲು ಬರುತ್ತಾಳೆ. ತನ್ನ ಮಗನನ್ನು ತೋರಿಸಿ "ಇವನ್ನ ನೋಡಿರಿ, ಹ್ಯಾಂಗೆ ಕಾಣಿಸ್ತಾನ್ರಿ? ನಿಮ್ಹಾಂಗೆ ಕಾಣಿಸ್ತಾನೆ ಹೌದಲ್ಲರಿ?" ಎಂದು ಹೇಳುತ್ತಾಳೆ. ಆದರೆ ಇದಾವುದರ ಅರಿವಿಲ್ಲದ ವಿಕ್ರಮ ಅವಳ ಮಾತುಗಳಿಂದ ಹೌಹಾರುತ್ತಾನೆ. ಆದರೂ ಸಾವರಿಸಿಕೊಂಡು ಸ್ವಲ್ಪ ಹಗೂರ ಕಾಳಜಿಯಲ್ಲಿ ಮಾತನಾಡುವಂತೆ ಹೇಳುತ್ತಾನೆ. ಸೀತೆಯು ತನ್ನ ಮಗನಾದ ಪ್ರತಾಪನ ಮೇಲೆ ಆಣೆ ಮಾಡಿ ಆತನ ವಿಕ್ರಮನ ಮಗನೆಂದು ಹೇಳುತ್ತಾಳೆ. ವಿಕ್ರಮನು ಪ್ರತಾಪನ ಶಿಕ್ಷಣ ಇತ್ಯಾದಿಗಳ ವ್ಯವಸ್ಥೆಯನ್ನು ಮಾಡುವುದಾಗಿ ಹೇಳಿದಾಗ "ಸಾಹೇಬರೇ ಮರೆತರೂ ಅಡ್ಡಿಯಿಲ್ಲ. ಪ್ರತಾಪ ದೊಡ್ಡಾಂವಾದ ಮ್ಯಾಲೆ ನೋಡೋಣಂತೆ ಹಾಂಗೇನಾದರೂ ಪ್ರಸಂಗ ಬಂದರ" ಎಂದು ಹೇಳುತ್ತಾಳೆ (ಪು.

೧೦೫). ಅವಳ ಈ ವಾಸ್ತವಿಕ ದೃಷ್ಟಿಯ ಮುಂದೆ ತನ್ನ ಮಾನವತಾವಾದೀ ಆದರ್ಶವಾದೀ ಭಾವನೆಗಳು ನಿಜವಾದಂಥವು ಎಂದು ವಿಕ್ರಮನಿಗೆ ಅನ್ನಿಸುವುದಿಲ್ಲ.

ಮುಂದೆ ಸೀತೆಯ ಗಂಡ ಟ್ರಕ್ ಆಕ್ಸಿಡೆಂಟ್‌ನಲ್ಲಿ ಮರಣ ಹೊಂದಿದಾಗ ಸೀತೆಯು ಪ್ರತಾಪನನ್ನು ವಿಕ್ರಮನ ಹತ್ತಿರಕ್ಕೆ ಕಳುಹಿಸುತ್ತಾಳೆ. ಪ್ರತಾಪನ ಮುಂದಿನ ವ್ಯಾಸಂಗಕ್ಕೆ ಬೇಕಾದ ಹಣದ ವ್ಯವಸ್ಥೆಯನ್ನು ಮಾಡಿದ ವಿಕ್ರಮನು ದಾಂಡೇಲಿಗೆ ಹೋಗುವ ನೆಪದಲ್ಲಿ ಮಾವಿನ ತೋಪಿಗೆ ಹೋಗಿ ಸೀತೆಯನ್ನು ಭೇಟಿಯಾಗುತ್ತಾನೆ. ಪ್ರತಾಪ ಬೆಳಗಾಂವಿಗೆ ಹೋದ ನಂತರ ಮತ್ತೊಮ್ಮೆ ಅವಳನ್ನು ಭೇಟಿಯಾಗುತ್ತಾನೆ. ಆದರೆ ವಿಕ್ರಮನ ಅನುಕಂಪದಲ್ಲಿ ಲೈಂಗಿಕತೆ ಎಳ್ಳಷ್ಟೂ ಇರದೇ ಇರುವುದನ್ನು ಗಮನಿಸಿದ ಅವಳು ವಿಕ್ರಮನ ಬಗ್ಗೆ ಸ್ವಲ್ಪ ಕಹಿಯಾಗುತ್ತಾಳೆ. ಸೀತೆಯು ವಿಕ್ರಮನನ್ನು ತನ್ನ ಮನೆಯಲ್ಲಿ ಉಳಿದುಕೊಳ್ಳುವಂತೆ ಹೇಳಿದಾಗ ವಿಕ್ರಮ ಅದಕ್ಕೆ ಒಪ್ಪಿಕೊಳ್ಳುವುದಿಲ್ಲ. ಆದರಿಂದ ಹೃದಯ ಒಡೆದಂತಾದ ಸೀತೆ ಅಳಲು ಪ್ರಾರಂಭಿಸುತ್ತಾಳೆ. ಸ್ವಲ್ಪ ಸಮಯದಲ್ಲಿಯೇ ತನ್ನನ್ನು ತಾನು ಸಾವರಿಸಿಕೊಂಡ ಸೀತೆಯು ವಿಕ್ರಮನಿಗೆ ಮಹಾಕಾಳಿಯತೆ ಭಾಸವಾಗುತ್ತಾಳೆ.

ವಿಕ್ರಮನ ಅಜ್ಜಿಯು ಅವನ ಭಾವನಾತ್ಮಕ ಜೀವನಕ್ಕೆ ಹಾಗೂ ನೈತಿಕ ಅಸ್ಪಷ್ಟತೆಗೆ ಸಮಸ್ಯೆಗಳಿಗೆ ಒಂದು ದೊಡ್ಡ ಆಧಾರವಾಗಿದ್ದುದಲ್ಲದೆ ಅವನಿಗೆ ಜೀವ ಶಕ್ತಿಯ ಪ್ರತೀಕವಾಗಿರುತ್ತಾಳೆ. ತನ್ನ ಜೀವನದ ಎಷ್ಟೋ ಅನುಭವಗಳನ್ನು ಅರಗಿಸಿಕೊಂಡು ಚೈತನ್ಯಶಾಲಿಯಾಗಿ ಜೀವಿಸಿರುತ್ತಾಳೆ. ಮನೆ ಭಾಗವಾಗಿ ಎಲ್ಲರೂ ಒಂದುಗೂಡಿ ವಿಕ್ರಮ ಮತ್ತು ಅವನ ತಂದೆಯನ್ನೇ ಒಂದು ಪ್ರತ್ಯೇಕ ಗುಂಪನ್ನಾಗಿ ಮಾಡಿದಾಗ ಅಜ್ಜಿಯು ಇವರೊಂದಿಗೆ ನಿಲ್ಲುತ್ತಾಳೆ. ಮನೆಯ ಎಲ್ಲಾ ಸದಸ್ಯರು ವಿಕ್ರಮ ಮತ್ತು ಆತನ ತಂದೆಗೆ ಬೈಯುತ್ತಿದ್ದಾಗ ಅಜ್ಜಿಯು ಇವರಿಬ್ಬರ ಬೆಂಬಲಕ್ಕೆ ನಿಂತು ಮನೆಯ ಎಲ್ಲಾ ಸದಸ್ಯರಿಗೂ ಬೈದು ಸುಮ್ಮನಿರಿಸುತ್ತಾಳೆ. ವಾಟಣಿ ಎಲ್ಲಾ ಮುಗಿದ ನಂತರ ಅಜ್ಜಿಯು ವಿಕ್ರಮ ಮತ್ತು ಅವನ ತಂದೆಯೊಂದಿಗೆ ಧಾರವಾಡಕ್ಕೆ ಬರುತ್ತಾಳೆ. ಇದಕ್ಕೆ ಮುಖ್ಯ ಕಾರಣ ಅಜ್ಜಿಗೆ ಡಾಕ್ಟರರು ಬೇಗನೆ ಸಿಗುತ್ತಾರೆ ಎಂಬುದರ ಜೊತೆಗೆ ವಿಧುರನಾದ ವಿಕ್ರಮನ ತಂದೆಗೂ ಮನೆಯಲ್ಲಿ ಸ್ವಲ್ಪ ಆಸರೆ ಆಗುತ್ತಾಳೆ ಎಂಬುದು ಮುಖ್ಯ ಕಾರಣವಾಗುತ್ತದೆ. ವಿಕ್ರಮನ ಮದುವೆಗೆ ಅವನ ತಂದೆಯೇ ಬರುವುದಿಲ್ಲವೆಂದು ಹೇಳಿದಾಗ ಅಜ್ಜಿಯು ಅದನ್ನು ವಿರೋಧಿಸಿ ತಾನು ಮದುವೆಗೆ ಬರುವುದಾಗಿ ಹೇಳುತ್ತಾಳೆ. ತದ ನಂತರ ವಿಕ್ರಮನ ತಂದೆಯೂ ವಿಕ್ರಮನ ವಿವಾಹಕ್ಕೆ ಬರಲು ಒಪ್ಪಿಕೊಳ್ಳುತ್ತಾನೆ.

ಈ ರೀತಿಯಾಗಿ ವಿಕ್ರಮನಿಗೆ ಎಲ್ಲಾ ರೀತಿಯಲ್ಲೂ ಸಹಾಯದಿಂದಿದ್ದ ಅಜ್ಜಿಯು ಅವನು ತಪ್ಪು ಮಾಡಿದಾಗ ಅದನ್ನು ಖಡಾಖಂಡಿತವಾಗಿ ಖಂಡಿಸುತ್ತಾಳೆ. ಅಶ್ವಿನಿ ಮತ್ತು ವಿಕ್ರಮರ ನಡುವಿನ ಸಂಬಂಧದ ಗುಸುಗುಸು ಸುದ್ಧಿ ಅವಳ ಕಿವಿಗೆ ಬಿದ್ದಿರುತ್ತದೆ. ಯಶೋದೆಯು ಅಟ್ಟದ ಮೇಲೆ ಮಲಗಲಿಕ್ಕೆ ಹೋದ ನಂತರ ವಿಕ್ರಮನನ್ನು ಕರೆದ ಅಜ್ಜಿ, ತಾನು ಕೇಳಿದ ಸಂಗತಿ ಸತ್ಯವೇ ಎಂದು ವಿಚಾರಿಸುತ್ತಾಳೆ. ಅದಕ್ಕೆ ವಿಕ್ರಮನು ಅಲ್ಪ ಸ್ವಲ್ಪ ಖರೆ – ಆದರೆ, ಎಂದು ಹೇಳಿದಾಗ ಅಜ್ಜಿಯು "ಆದರೆ – ಪಾದರೆ ನನಗೆ ಬ್ಯಾಡಾ. ಅಲ್ಪ ಸ್ವಲ ಅಂತ ! ಸ್ವಲ್ಪ ಅಂದರೆ ಇಷ್ಟೇ ಶೆಗಣಿ ತಿಂದರೂ ಒಂದೇ ಭಾಳ ತಿಂದರೂ ಒಂದೇ ಒಟ್ಟಿನಲ್ಲಿ ಶೆಗಣಿ ತಿನ್ನಾಕ ಹತ್ತಿದ್ದೀ ಹೌದಲ್ಲೋ"

ಎಂದು ಕೇಳುತ್ತಾಳೆ (ಪು. ೨೨೫). ಆಗ ವಿಕ್ರಮನು ಅದು ನನಗೆ ಶೆಗಣಿ ಅಲ್ಲ ಅಮೃತ ಎಂದು ಹೇಳುತ್ತಾನೆ. ಆಗ ಅಜ್ಜಿಯು ವಿಕ್ರನನನ್ನು ಕುರಿತು "ಯಶೋದೆಯ ಕೂಡ ಸರಿ ಮಲಗತೀ ಇಲ್ಲೋ" ಎಂದು ಕೇಳುತ್ತಾಳೆ. ಆಗ ವಿಕ್ರಮನು ಅದು ಹ್ಯಾಂಗ ಶಕ್ಯ ಆದ ಎಂದು ಕೇಳುತ್ತಾನೆ. ಆಗ ಅಜ್ಜಿಯು 'ಅದೆಲ್ಲಾ ಶಕ್ಯ ಇರ್ತದ. ಯಶೋದೆಯ ಕೂಡ ಮೊದಲು ಸರಿಯಾಗಿ ಬಾಳ್ವೆ ಮಾಡು. ಹೋಗಿ ಗಂಡಸಂತೆ ಮಲಗಿಕೋ' ಎಂದು ಹೇಳುತ್ತಾಳೆ. ನಾವು ಇಲ್ಲಿ ಅಜ್ಜಿಯ ನೇರ ಸ್ವಭಾವವನ್ನು ಗುರುತಿಸಬಹುದಾಗಿದೆ. ಈ ರೀತಿಯಾಗಿ ದೇಸಾಯಿಯವರ ಸಾಹಿತ್ಯದಲ್ಲಿ ಪ್ರತಿಯೊಬ್ಬ ಸ್ತ್ರೀ ಕೂಡ ಎಲ್ಲಾ ಸಮಸ್ಯೆಗಳಿಗೆ ತಮ್ಮದೇ ಆದ ರೀತಿಯಿಂದ ಪರಿಹಾರ ಕಂಡುಕೊಳ್ಳುತ್ತಾರೆ.

ಸ್ತ್ರೀಯರನ್ನು ಕೇಂದ್ರ ಸ್ಥಾನದಲ್ಲಿ ನೋಡುವ ದೇಸಾಯಿಯವರು ಅವಳನ್ನು ವಾಸ್ತವವಾದಿಯಂತೆ ಚಿತ್ರಿಸಿದ್ದಾರೆ. "ಬಹುಶಃ ಸ್ತ್ರೀಗೆ ವರ್ತಮಾನ ಯಾವಾಗಲೂ ಬಹಳ ಮುಖ್ಯವಿರಬೇಕು. ಅವಳ ಮೈಯ ಲಯಗಳೂ ಕಾಲದ ಲಯಗಳಿಗೆ ಹೊಂದಿಕೊಂಡಿವೆ. ತಿಂಗಳಿಗೊಮ್ಮೆ ಅವಳ ದೇಹದಲ್ಲಿ ತೆರೆಯ ಏರಿಳಿತವಾಗುತ್ತದೆ. ಮುಖ್ಯವಾಗಿ ರಕ್ತದ ತೆರೆ. ಮನುಷ್ಯ ಜೀವನದ ಒಂದು ಮುಖ್ಯ ಘಟಕವಾದ ರಕ್ತ ಅವಳ ದೈನಂದಿನ ಜೀವನದ ಅಂಗವಾಗಿದ್ದು, ಅದರ ಸಹವಾಸವೇ ಅವಳನ್ನು ಈ ಭೂಮಿಗೆ, ಈ ಅಸ್ತಿತ್ವಕ್ಕೆ ಕಟ್ಟಿ ಹಾಕಿದೆ. ವಾಸ್ತವಿಕತೆಯ ಪ್ರಜ್ಞೆ, ವರ್ತಮಾನದ ಪ್ರಜ್ಞೆ, ಪರಿಸರದ ಪ್ರಜ್ಞೆ, ಸ್ತ್ರೀಗೆ ಇದ್ದಷ್ಟು ಪುರುಷನಿಗಿರುವುದಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ, ಅವಳ ಈ ಪ್ರಜ್ಞೆಯಲ್ಲಿಯೇ ನಿಜವಾದ ಕ್ರಾಂತಿಶಕ್ತಿಯಿದೆ. ಆದ್ದರಿಂದ ಯಾವುದೇ ಸಾಮಾಜಿಕ ಪರಿವರ್ತನೆಯಲ್ಲಿ ಸ್ತ್ರೀಶಕ್ತಿಗೇ ಹೆಚ್ಚು ಮಹತ್ವವಿದೆ. ಬರ್ನಾರ್ಡ್ ಶಾನಂತೂ ಸ್ತ್ರೀಯೇ ಜೀವಶಕ್ತಿಯ ಆದ್ಯ ಸಾಧನ ಎನ್ನುತ್ತಾನೆ. ಪುರುಷ ಸ್ತ್ರೀಯ ಸಾಧನ ಎನ್ನುತ್ತಾನೆ. ಉದಾಹರಣೆಗೆ ಯಶೋದೆಯ 'ಹುಂ'ನಲ್ಲಿಯೇ ಮುಂದಿನ "ಓಂ" ಇತ್ತು... ಅಂತೂ, ಪ್ರಕೃತಿಯಿಂದಲೇ ಪುರುಷನಿಗೆ ಅರ್ಥ ಬರುತ್ತದೆ (ಪು. ೫೫) ಎಂಬ ವಿಕ್ರಮನ ಸ್ವಗತದ ಈ ಮಾತುಗಳು ದೇಸಾಯಿಯವರು ಸ್ತ್ರೀಯರ ಬಗ್ಗೆ ಹೊಂದಿದ ಮನೋಭಾವವನ್ನು ಸಮರ್ಥಿಸುತ್ತವೆ ಎಂದು ಹೇಳಬಹುದಾಗಿದೆ.

೫.೬.೪ ಸಾಮಾಜಿಕ ಸ್ಥಿತ್ಯಂತರಗಳು :

ದೇಸಾಯಿಯವರ 'ಬೀಜ' ಕಾದಂಬರಿಯಂತೆ ಇಲ್ಲಿಯೂ ಕೂಡ ಔದ್ಯೋಗೀಕರಣ ಹೇಗೆಲ್ಲ ತನ್ನ ಪ್ರಭಾವವನ್ನು ಬೀರಿತು ಎಂಬುದನ್ನು ಗಮನಿಸಬಹುದಾಗಿದೆ. ವಿಕ್ರಮ ಮತ್ತು ಯಶೋದೆಯ ಮದುವೆಯ ನೆಪದಿಂದ ರಾಣೇ ಮನೆತನದ ವಾಟಣಿಯಾಗುತ್ತದೆ. ಇದರಿಂದಾಗಿ ಊರಿನಲ್ಲಿ ಗೌರವಿಸಲ್ಪಡುತ್ತಿದ್ದ ವಿಕ್ರಮನ ದೊಡ್ಡಪ್ಪನ ವಜನೂ ಕಡಿಮೆಯಾಗುತ್ತದೆ. ಇನ್– ಕಮ್ ಟ್ಯಾಕ್ಸಿನ ಭಾರ ಹೆಚ್ಚಾಗಿದ್ದರಿಂದ ಅವರು ಫಾರೆಸ್ಟ್ ಕಾಂಟ್ರಾಕ್ಟ್ ದಂಧೆಯನ್ನೇ ಬಿಡಬೇಕಾಗುತ್ತದೆ. ಅವರ ಮಗ ಭಾವೂ ಸಾಹೇಬ ಸ್ವತಃ ಹೊಲ ಮಾಡತೊಡಗುತ್ತಾನೆ. ದೊಡ್ಡಪ್ಪ ಹೊಸದಾಗಿ ಶುರುವಾದ ಪೇಪರ್ ಫ್ಯಾಕ್ಟರಿಯಲ್ಲಿ ಒಂದು ಸೂಪರ್‌ವೈಜರ್ ಕೆಲಸ ದೊರಕಿಸಿಕೊಳ್ಳುತ್ತಾನೆ. ಮುಂಬಯಿಯ ಗೋಪಾಲ ಕಾಕಾ ಮಾತ್ರ ತನ್ನ ಕಟ್ಟಿಗೆಯ ದಂಧೆಯಲ್ಲಿ ಅತ್ಯಂತ ವೃದ್ಧಿಂಗತನಾಗುತ್ತಾನೆ. ಅವನ ಮಕ್ಕಳು ಮುಂದೆ ಬಿ.ಕಾಮ್, ಎಂ.ಎಸ್ಸಿ, ಇತ್ಯಾದಿ ಏನೇನೋ ಆಗಿ, ಒಬ್ಬ ಮಗ ಅಮೆರಿಕಾಕ್ಕೂ ಹೋಗುತ್ತಾನೆ. ಏನೇ ಆದರೂ ದಾಂಡೇಲಿಯ ರಾಣೆಯವರ ಮನೆಯ ಕಳೆನೇ ಹೊರಟುಹೋಗುತ್ತದೆ.

ಅಲ್ಲದೇ ಆಸ್ತಿಯ ವಾಟಣಿಯಾದ ನಂತರ ವಿಕ್ರಮನ ದೊಡ್ಡಪ್ಪ ನಾಮದೇವ ಮಾಮಾನ ಕೈಯಲ್ಲಿ ಪೂರ್ತಿಯಾಗಿ ಸಿಕ್ಕಿ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಾನೆ. ಕುಡಿಯುವುದು ಹೆಚ್ಚಾಗಿ ರಂಡಿ ತುಳಸೀಬಾಯಿಯ ಮನೆಯಲ್ಲಿಯೇ ಹೆಚ್ಚಾಗಿ ಇರತೊಡಗುತ್ತಾನೆ. ಸಾಮಿಲ್ಲು ನಾಮದೇವ ಮಾಮಾನ ವಶವಾಗುತ್ತದೆ. ಮಗ ಭಾವೂ ಸಾಹೇಬ ಫಾರೆಸ್ಟ್ ಕಂಟ್ರಾಕ್ಟ್ ಮಾಡಲಿಕ್ಕೆ ಹೋಗಿ ಕೈ ಸುಟ್ಟಕೊಳ್ಳುತ್ತಾನೆ. ಆತನ ಹೆಂಡತಿ ನಾಲ್ಕಾರು ವರ್ಷ ಅರ್ಧಮರ್ಧ ಸಂಸಾರ ಮಾಡಿ ಊರಿಗೆ ಹೋದವಳು ತಿರುಗಿ ಬರುವುದೇ ಇಲ್ಲ... ಹೀಗೆ ಒಮ್ಮೆ ದಾಂಡೇಲಿಯಲ್ಲಿ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯಾದ ಶಿವಾಜಿರಾವ್-ತನ್ನ ಇಳಿವಯಸ್ಸಿನಲ್ಲಿ, ಇಳಿದೇ ಬಿಡುತ್ತಾನೆ. ಔದ್ಯೋಗಿಕವಾಗಿ ಭರದಿಂದ ಬೆಳೆಯುತ್ತಿದ್ದ ದಾಂಡೇಲಿಯಲ್ಲಿ ಹೊರಗಿನ ಜನ ಬಂದು ತುಂಬಿ ಬಿಟ್ಟಿದ್ದರಿಂದ ಹಳಬರಿಗೆ ಕಿಮ್ಮತ್ತಿಲ್ಲದಾಗುತ್ತದೆ. ಅದರಲ್ಲೂ ಹಳಬರು, ಮುದುಕರಿದ್ದರಂತೂ ತೀರಿತು. ಪೇಟೆಯಲ್ಲಿ "ಏ ರುಮಾಲಿನ ಮುದುಕಾ, ಸ್ವಲ್ಪ ಸರಿ, ಕಣ್ಣು ಕಾಣೋದಿಲ್ಲೇನು?" ಎಂದು ಯಾವದೋ ಕಾರಿನ ಡ್ರಾಯ್‌ವರ್ ಬೆದರಿಸುವವನೇ.. ಶಿವಾಜಿರಾವ್ ಕೊನೆಕೊನೆಗೆ ತಮ್ಮ ರಂಡೀ ಮನೆಯಲ್ಲಿಯೇ ಇರತೊಡಗಿದ್ದರಿಂದ ಮನೆಯಲ್ಲಿನ ಎಲ್ಲಾ ಬಂಗಾರ ಅವಳ ಮನೆ ಸೇರುತ್ತದೆ. ದಿನಾಲೂ ಸಂಜೆ ಹೊತ್ತು ನಾಲ್ಕೈದು ಚಂಡಾಳ ಚಾಕಡೀ ಜೊತೆ ಇಸ್ಪೀಟು ಆಟ, ಕುಡಿತ, ಊಟ... ಹೀಗೆ ಅಲ್ಲಿಯೇ ಅವರ ವಾಸ್ತವ್ಯ. ಇವೆಲ್ಲ ಹಾರಿಕೆಯ ಮಾತುಗಳಾದರೂ ಕೂಡಾ ಶಿವಾಜಿರಾವ್ ತುಳಸೀ ಮನೆಯಲ್ಲಿಯೇ ಹಾರ್ಟ್ ಆಟ್ಯಾಕ್‌ನಿಂದಾಗಿ ಮರಣ ಹೊಂದುತ್ತಾರೆ. ಮುಂದೆ ಮೂರು ನಾಲ್ಕು ತಿಂಗಳಲ್ಲಿಯೇ ನಾಮದೇವ ಮಾಮಾ ಕೂಡ ತೀರಿಕೊಳ್ಳುತ್ತಾನೆ. ಹೀಗೆ ಒಂದು ಕಾಲದಲ್ಲಿ ವೈಭವಯುತ ಜೀವನವನ್ನು ನಡೆಸುತ್ತಿದ್ದ ರಾಣೇ ಮನೆತನ ದಾಂಡೇಲಿಯಲ್ಲಿ ಸಂಪೂರ್ಣವಾಗಿ ದುರಂತ ಅಂತ್ಯ ಕಾಣುತ್ತದೆ.

ಒಟ್ಟಾರೆಯಾಗಿ 'ಅಂತರಾಳ' ಕಾದಂಬರಿಯು ಅಂತರ್ಮುಖತೆಯ ಜೊತೆಗೆ ಐತಿಹಾಸಿಕ ಬದಲಾವಣೆಗಳು, ಸಾಮಾಜಿಕ ಏರು-ಪೇರುಗಳು, ಆರ್ಥಿಕ ಪುನರ್‌ರಚನೆ, ತಂತ್ರಜ್ಞಾನದಿಂದ ಬಂದ ನಗರೀಕರಣ, ರಾಜಕೀಯದಲ್ಲಿ ಆದರ್ಶವಾದಗಳ ಮೂಲೆಗುಂಪು, ಅಸಹಿಷ್ಣುತೆ ಒಳಗೊಳ್ಳುವುದರ ಜೊತೆ ಜೊತೆಗೆ ನಿರಂತರ ಪರಿವರ್ತನೆ, ಆತ್ಮ ವೈಖರಿಗಳನ್ನು ಒಳಗೊಂಡಿದೆ.

ಈ ಕಾದಂಬರಿಯ ಭವಿಷ್ಯದರ್ಶಿ ಮಾತುಗಳಿಗೆ ಮಾರ್ಕ್ಸ್, ರಾಯ, ಗಾಂಧಿ, ನೆಹರೂಗಳ ಸ್ವಪ್ನದರ್ಶಿತ್ವವಿದೆ. ಅವರು ಕಲ್ಪಿಸಿದ ಸಾಮಾಜಿಕ ಸ್ಥಿತ್ಯಂತರಗಳು ಈ ಶತಕದಲ್ಲಿ ಹೇಗೆ ಭಯಾವಹವಾದ ದುಃಸ್ವಪ್ನಗಳಾದವುಗಳು ಎನ್ನುವುದು ಲೇಖಕರ ಸಮಾಜ ವಿಚಾರಗಳ ಹಿನ್ನೆಲೆಯಾಗಿದೆ. ಹೀಗೆ ಸ್ವಪ್ನ ರಂಜನ ಮತ್ತು ಸ್ವಪ್ನ ಭಂಗಗಳ ನಡುವೆ ಸಿಲುಕಿದ ವರ್ತಮಾನ ಲೇಖಕರನ್ನು ಬೆದರಿಸುತ್ತದೆ. ವ್ಯಕ್ತಿ ಇಂತಹ ವ್ಯವಸ್ಥೆಯಲ್ಲಿ ಮಾದಕತೆಯನ್ನು, ಉಪಭೋಗವನ್ನು ಗ್ರಾಹಕಶಕ್ತಿಯ ವರ್ಧನೆಯನ್ನು ಇವುಗಳನ್ನೇ ಪ್ರಗತಿಯ ಲಕ್ಷಣಗಳನ್ನಾಗಿ ತಿಳಿಯುವುದು ಸಾಮಾನ್ಯವಾಗುತ್ತದೆ. ಇಂತಹ ವ್ಯಕ್ತಿ ಮೂಲ್ಯ ಭ್ರಷ್ಟ, ಛಿದ್ರಿತ ವ್ಯಕ್ತಿತ್ವ, ವಿಭಂಗಿತ ವ್ಯಕ್ತಿತ್ವ ಈ ಕಾದಂಬರಿಯ ನವ್ಯ ವಿಚಾರಗಳ ಪುಷ್ಟಿಗೆ ಸಾಕ್ಷಿಯಾಗುತ್ತವೆ. ಉದಾರ ಮತವಾದಿ, ಮಾರ್ಕ್ಸ್‌ನ ಸಿದ್ಧಾಂತ ಜನಿತ ಸಮಾಜವಾದಿ, ಗಾಂಧೀಜಿಯವರ ನೈತಿಕ ಆದರ್ಶವಾದಿ ಮತಗಳದು ಒಂದು ದಂಡೆಯಾದರೆ ನವ್ಯರ ಆತ್ಮಪರ,

ವಿಘಟಿತ, ಹತಬಲ, ಸಂದಿಗ್ಧದ ವ್ಯಕ್ತಿವಾದಿ ಮತಗಳದು ಇನ್ನೊಂದು ದಂಡೆ. ಈ ಎರಡು ಧ್ರುವಗಳ ನಡುವೆ ಜೋಲಿ ಹೊಡೆಯುವ ವರ್ತಮಾನದ ದುರ್ಧರತೆಯನ್ನು ಬಿಂಬಿಸುವುದನ್ನು ಕಾದಂಬರಿ ಸಾರ್ಥವಾಗಿ ನಿರ್ವಹಿಸಿದೆ (ಪು. ೨೪೨) ಎಂಬ ಮಾರುತಿ ಶಾನುಭಾಗರ 'ಹಿನ್ನುಡಿ' ಅಭಿಪ್ರಾಯ ಸೂಕ್ತವಾದುದಾಗಿದೆ ಎಂದು ಹೇಳಬಹುದಾಗಿದೆ.

೫.೭ ಓಂ ಣಮೋ : ಧಾರ್ಮಿಕ ಸ್ಥಿತ್ಯಂತರಗಳ ಸಂಘರ್ಷ

ನವ್ಯ ಲೇಖಕರಲ್ಲಿಯೇ ಭಿನ್ನವಾದ ಮನೋಧರ್ಮವನ್ನು, ನಿಲುವನ್ನು ಹೊಂದಿದ್ದ ದೇಸಾಯಿಯವರು ತಮ್ಮ ಕೃತಿಗಳಲ್ಲಿ ಆಧುನಿಕತೆ ಮತ್ತು ವೈಚಾರಿಕತೆಯನ್ನು ಅತಿ ಎತ್ತರಕ್ಕೆ ಏರಿಸಿದ್ದಾರೆ. 'ಓಂ ಣಮೋ' ದೇಸಾಯಿ ಅವರ ೭ನೇ ಹಾಗೂ ಕೊನೆಯ ಕಾದಂಬರಿಯಾಗಿದ್ದು, ೧೯೯೮ರಲ್ಲಿ ಪ್ರಕಟಗೊಂಡಿತು. ಇಲ್ಲಿನ ಅಧ್ಯಯನಕ್ಕಾಗಿ ನಾನು ನವೆಂಬರ್ ೨೦೧೧ರ ೨ನೇ ಮರು ಮುದ್ರಣದ ಪ್ರತಿಯನ್ನು ಬಳಸಿಕೊಂಡಿದ್ದೇನೆ.

ನಾನು ಈ ಕಾದಂಬರಿಯಲ್ಲಿ ಮುಖ್ಯವಾಗಿ ಧಾರ್ಮಿಕ ಸಂಘರ್ಷ, ಮನುಷ್ಯ ಸಂಬಂಧಗಳ ನಡುವಿನ ಸಂಘರ್ಷ, ಗಂಡು–ಹೆಣ್ಣುಗಳ ನಡುವಿನ ಸಂಘರ್ಷ, ಸಮಾಜದ ವಾತಾವರಣ ಮತ್ತು ಅಸ್ತಿತ್ವದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅದರ ವಿನ್ಯಾಸವನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ.

'ಓಂ ಣಮೋ' ಕಾದಂಬರಿಯು ದೇಸಾಯಿಯವರ ಏಳನೇ ಹಾಗೂ ಕೊನೆಯ ಕಾದಂಬರಿಯಾಗಿದೆ. ಈ ಕಾದಂಬರಿಯಲ್ಲಿ ದೇಸಾಯಿಯವರು ಪ್ರಮುಖವಾಗಿ ಜೈನಧರ್ಮದ ಆಚಾರಗಳ ಹಾಗೂ ತಮ್ಮ 'ಜೈನ ಅನುಭವ'ವನ್ನು ಓದುಗರಿಗೆ ಒದಗಿಸುವ ಉದ್ದೇಶವನ್ನು ಹೊಂದಿದ್ದಾರೆ. ದೇಸಾಯಿಯವರು ಹುಟ್ಟಿನಿಂದ ಜೈನರಾದರೂ ಕೂಡ ಈ ಕಾದಂಬರಿಯನ್ನು ರಚಿಸುವ ಹೊತ್ತಿಗೆ ಅವರು ಜೈನಸಿದ್ಧಾಂತವನ್ನು ಕುರಿತಂತೆ ಹೆಚ್ಚು ಅಧ್ಯಯನವನ್ನು ನಡೆಸಿದರು (ಶಂಕರ.ಮ.ಪಾಟೀಲ, ಓಂ ಣಮೊ).

'ಓಂ ಣಮೋ' ಕಾದಂಬರಿಯು ಜೈನಸಿದ್ಧಾಂತವನ್ನು ಕುರಿತು ಪ್ರಮುಖವಾಗಿ ರಚಿತವಾಗಿದ್ದರೂ ಕೂಡ ನಾವು ಇಲ್ಲಿ ನವ್ಯ ಸಾಹಿತ್ಯದ ಅಂಶಗಳನ್ನು ಗುರುತಿಸಬಹುದಾಗಿದೆ. ನವ್ಯ ಸಾಹಿತ್ಯದ ಪ್ರಮುಖ ಧೋರಣೆಗಳಾದ ಪರಕೀಯತೆ, ವಿಕ್ಷಿಪ್ತತೆ, ಜೀವನದ ಬಗೆಗಿನ ನೇತ್ಯಾತ್ಮಕ ನಿಲುವು, ವ್ಯಕ್ತಿಯ ಅಂತರಂಗದ ತಾಕಲಾಟಗಳನ್ನು ಗುರುತಿಸಬಹುದಾಗಿದೆ.

'ಓಂ ಣಮೋ'ದಲ್ಲಿ ದೇಸಾಯಿಯವರು 'ಕೃಷ್ಣಾಪುರ' ಎಂಬಲ್ಲಿನ ಮೂರು ತಲೆಮಾರುಗಳ ಕನ್ನಡ ದಿಗಂಬರ ಜೈನ ಕುಟುಂಬವೊಂದರ ಕಥಾನಕವನ್ನು ನೀಡುತ್ತಾರೆ. ಅಪ್ಪಾ ಸಾಹೇಬ ಆದಪ್ಪ ದೇಸಾಯಿ ಒಬ್ಬ ಶ್ರೀಮಂತ ಜೈನ ವ್ಯಕ್ತಿ. ಈತನ ಪತ್ನಿ ಪದ್ಮಾವತಿ, ಧಾರ್ಮಿಕ ನಿಷ್ಠೆಯುಳ್ಳ ಹೆಣ್ಣು ಮಗಳು. ಅಪ್ಪಾ ಸಾಹೇಬರ ಅಣ್ಣ ದೇವೇಂದ್ರಪ್ಪ, ಈತನ ಒಬ್ಬನೇ ಮಗ ನೇಮಿನಾಥ . ಕರ್ನಾಟಕ ಕಾಲೇಜಿನಲ್ಲಿ ಎಂ.ಎ. ಮಾಡಿ ಚಿಕ್ಕಪ್ಪನ ಆಗ್ರಹದ ಮೇರೆಗೆ ಇಂಗ್ಲೆಂಡಿಗೆ ಡರಹಮ್ ಯುನಿವರ್ಸಿಟಿಗೆ ಹೋಗುತ್ತಾನೆ. ಹೋಗುವ ಮುನ್ನ ಅವನಿಗೆ ಬೆಳಗಾವಿಯ ಶ್ರೀಮಂತ ಮನೆತನದ ಹೆಣ್ಣು ಮಗಳೊಡನೆ ವಿವಾಹವಾಗಿರುತ್ತದೆ. ಆದರೆ ನೇಮಿನಾಥ ಇಂಗ್ಲೆಂಡಿಗೆ ಹೋಗಿ ಅಲ್ಲಿಯೇ ಒಬ್ಬ ಕ್ರಿಶ್ಚಿಯನ್ ಇಂಗ್ಲೀಷ್ ಹುಡುಗಿ ಎಮಿಲಿಯಾ ಜೊತೆ ಲಗ್ನವಾಗುತ್ತಾನೆ.

ಸದರಿ ನೇಮಿನಾಥ ಹಾಗೂ ಎಮಿಲಿಯಾ ದಂಪತಿಯ ಮಗನೇ ಆ್ಯಡಂ ದೇಸಾಯಿ. ಇಡೀ ಕಾದಂಬರಿಯ ಕೇಂದ್ರ ಬಿಂದುವಾದ ಆ್ಯಡಂ ದೇಸಾಯಿ ತನ್ನ ಗೆಳತಿಯಾದ ಆ್ಯನ್ ಈಗಲ್ಟನ್ ಜೊತೆ ಜೈನರ ಬಗ್ಗೆ ರಿಸರ್ಚ್ ಮಾಡುವ ಸಲುವಾಗಿ ಮೆಟೀರಿಯಲ್ ಕಲೆಕ್ಟ್ ಮಾಡುವ ಉದ್ದೇಶದಿಂದ ಭಾರತಕ್ಕೆ ಬರುತ್ತಾರೆ.

ಆ್ಯನ್ ಈಗಲ್ಟನ್ ಸಂಪೂರ್ಣ ಕ್ರಿಶ್ಚಿಯನ್. ಆದರೆ ಆ್ಯಡಂ ಆತನೇ ಹೇಳುವಂತೆ ಅರ್ಧ ಕ್ರಿಶ್ಚಿಯನ್, ಅರ್ಧ ಜೈನ್ ಇದ್ದರೂ ಹಾಗೇ ಕ್ರಿಶ್ಚಿಯನ್‌ನೇ (ಪು. ೧೫). ಇಬ್ಬರೂ ಕೂಡ ಲೀಡ್ಸ್ ಯುನಿವರ್ಸಿಟಿಯಲ್ಲಿ ಸೋಶಿಯಲ್ ಅಂಥ್ರಾಪಾಲಜಿ ವಿಷಯದಲ್ಲಿ ಡಿಗ್ರಿ ಮುಗಿಸಿ ಪಿಎಚ್.ಡಿ. ಅಧ್ಯಯನಕ್ಕಾಗಿ ವಿಷಯ ಹುಡುಕಾಡುತ್ತಿರುತ್ತಾರೆ. ಆ್ಯಡಂನ ತಂದೆ ನೇಮಿನಾಥ ಆ್ಯನ್‌ಗೆ ಭಾರತದ ಜೈನರ ಬಗ್ಗೆ ರಿಸರ್ಚ್ ಮಾಡುವಂತೆ ಸೂಚಿಸುತ್ತಾರೆ. ಆದರೆ ಸ್ವತಃ ಜೈನನಾದ ಆ್ಯಡಂಗೆ ಆ ವಿಷಯ ಸೇರುವುದಿಲ್ಲ. ಆತ ಯಾವುದಾದರೂ ಒಂದು ಚಿಕ್ಕ ಗ್ರೂಪ್ ಅಂದರೆ ಸಿದ್ಧಿ ಜನಾಂಗ ಅಥವಾ ಲಂಬಾಣಿ ಜನಾಂಗ ಕುರಿತು ಏನಾದರೂ ರಿಸರ್ಚ್ ಮಾಡಬೇಕೆಂದಿದ್ದ. ಏಕೆಂದರೆ ಆತನ ಪ್ರಕಾರ "ಜೈನರದು ದೊಡ್ಡ ಸಮಾಜ. ಹಾಗೂ ಅದರ ಬಗ್ಗೆ ಆತನಿಗೆ ವಸ್ತುನಿಷ್ಠತೆ ಇರುವುದಿಲ್ಲ. ಏಕೆಂದರೆ ಸಂಬಂಧಗಳ ಪ್ರಶ್ನೆ ಬಂದಾಗ ವಸ್ತುನಿಷ್ಠತೆ ಅಸಾಧ್ಯ ಎಂಬುದು ಆತನ ಕಲ್ಪನೆಯಾಗಿರುತ್ತದೆ" (ಪು. ೧೫). ಈ ಮೂಲಕ ಆತನ ಒಳಗೇ ನಡೆಯುವ ಸಂಘರ್ಷವನ್ನು ಇಲ್ಲಿ ಕಾಣುತ್ತೇವೆ.

ಆ್ಯನ್ ಈಗಲ್ಟನ್ ಜೈನ ಧರ್ಮದ ಬಗ್ಗೆ ಅಭ್ಯಾಸ ಮಾಡುವ ಸಲುವಾಗಿ ಅವಳ ಆಹಾರ ಪದ್ಧತಿಯನ್ನೂ ಕೂಡ ಸಂಪೂರ್ಣವಾಗಿ ಬದಲಾಯಿಸಿಕೊಂಡಿರುತ್ತಾಳೆ. ಅಲ್ಲದೆ ಬಸ್ತಿಗೆ ಹೋಗಿ ಅಲ್ಲಿಯ ಆಚಾರ, ವಿಚಾರಗಳೆಲ್ಲವನ್ನು ಕೂಡ ತಿಳಿದುಕೊಳ್ಳುತ್ತಾಳೆ. ಅವಳ ಗುರುಗಳಾದ ಪ್ರೊಫೆಸರ್ ವಿಲಿಯಮ್ಸ್‌ರವರ ಸೂಚನೆಯಂತೆ ಕೇವಲ ಗ್ರೌಂಡ್ ವರ್ಕ್‌ಗೆಂದು ಬರುವ ಆಕೆ ಜೈನಿಸಂನ ಕೆಲವು ವಿಶಿಷ್ಟ ಸಂಗತಿಗಳನ್ನು ಪ್ರೊ. ನೇಮಿನಾಥರಿಂದ ಕೂಡ ಸಂಗ್ರಹಿಸಿಕೊಂಡಿರುತ್ತಾಳೆ.

ಆ್ಯನ್‌ಳಿಗೆ ನಿಜವಾಗಿಯೂ ತತ್ವಜ್ಞಾನ ಬೇಕಿರಲಿಲ್ಲ. ಆದರೆ ಜೈನ ಸಮಾಜದ ವೈಶಿಷ್ಟ್ಯಗಳು, ಅದರ ವಿಶಿಷ್ಟ ಜೀವನ ವೃತ್ತಿ, ಮಾನಸಿಕ ವೃತ್ತಿ, ಅಹಿಂಸೆಗೂ, ಅವರ ಶ್ರೀಮಂತಿಕೆಗೂ ಏನಾದರೂ ಸಂಬಂಧವಿದೆಯೇ? ಎಂದು ತಿಳಿಯುವ ಕುತೂಹಲ ಹೆಚ್ಚೆಚ್ಚು ಮೂಡುತ್ತದೆ. ಆಗ ಆ್ಯಡಂ ಅವಳಿಗೆ "ಆನ್, ಈ ವಿಷಯದಲ್ಲಿ ಹುಚ್ಚಳಂತೆ ಸಿಕ್ಕಿಕೊಳ್ಳಬೇಡ. ಇಂಗ್ಲೇಂಡ್‌ನಲ್ಲೇ ಸಾಕಷ್ಟು ಕೆಲಸ ಮಾಡಲಿಕ್ಕೆ ಬರ್ತದೆ. ಸ್ವಲ್ಪ ಜೀವನ ಎಂಜಾಯ್ ಮಾಡು" ಎಂಬ ಸಲಹೆಯನ್ನು ನೀಡುತ್ತಾನೆ. ಇದು ಆತನ ಮನೋಧರ್ಮವನ್ನು ಸೂಚಿಸುತ್ತದೆ.

ಆ್ಯನ್ ತನ್ನ ಸಂಶೋಧನಾ ವಿಷಯದ ಸಲುವಾಗಿ ಜೈನರ ಪ್ರತಿಯೊಂದು ಆಚಾರವನ್ನೂ ಅನುಸರಿಸುತ್ತಾ ಹೋಗುತ್ತಾಳೆ. ಅಲ್ಲದೇ ಶ್ರದ್ಧಾಪೂರ್ವಕವಾಗಿ ಆಚರಿಸತೊಡಗುತ್ತಾಳೆ. ಇದಕ್ಕೆ ಅವಳು ನೀಡುವ ಕಾರಣ "ಜೈನ ಆಚಾರ ವಿಚಾರಗಳ ಒಂದು ಒಳಗಿನ Feel ಬೇಕಾಗಿರುವುದರಿಂದ ಕೆಲವು ನಡತೆಗಳನ್ನು ಬರೇ ನೋಡಿ ತಿಳಿದುಕೊಳ್ಳಬೇಕು. ಕೆಲವನ್ನು ಆಚರಿಸಿ ತಿಳಿದುಕೊಳ್ಳಬೇಕು, ಕೆಲವನ್ನು ಕಣ್ಣು ಮುಚ್ಚಿ ಕಲ್ಪಿಸಿ ನೋಡಬೇಕು. ಕೆಲವನ್ನು ಧ್ಯಾನ ಮಾಡಿ ನೋಡಬೇಕು. ಕೆಲವನ್ನು ಯೋಗದಿಂದ ನೋಡಬೇಕು. ಕೆಲವನ್ನು ತಿಳಿದವರ ಕಣ್ಣಿನಿಂದ ನೋಡಬೇಕು." ಹೀಗೆ ಆಕೆ ತಾನೇ ಜೈನಧರ್ಮ ತತ್ವಗಳನ್ನು Practice ಮಾಡುವುದಕ್ಕೆ ಶುರುಮಾಡಿಬಿಡುತ್ತಾಳೆ.

ಜೈನ ಧರ್ಮದ ಅಭ್ಯಾಸಕ್ಕೆಂದು ಬಂದ ಆ್ಯನ್ ಅಂತಿಮವಾಗಿ ಜೈನ ದೀಕ್ಷೆಯನ್ನು ತೆಗೆದುಕೊಳ್ಳುತ್ತಾಳೆ. ಪ್ರಾರಂಭದಲ್ಲಿ ಜೈನ ಶ್ರಾವಿಕೆಯಾದ ಆಕೆ ಒಂದೆರಡು ವರ್ಷಗಳ ನಂತರ

ಜೈನ ಆರ್ಯಿಕೆಯಾಗುವ ನಿರೀಕ್ಷೆಯನ್ನು ಹೊಂದಿರುತ್ತಾಳೆ. ಜೈನ ದೀಕ್ಷೆಯ ನಂತರ ಆಕೆ ಮಹಾಮಸ್ತಕಾಭಿಷೇಕದ ಕೆಲಸಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಾಳೆ. "ಒಂದು ಅರ್ಥದಲ್ಲಿ ಇದು ಪಲಾಯನವೂ ಹೌದು" (ಪು. ೨೧೪) ಎಂಬುದನ್ನು ಆಕೆ ಒಪ್ಪಿಕೊಳ್ಳುತ್ತಾ ತೊಳಲಾಟದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾಳೆ.

ಈ ರೀತಿಯಾಗಿ ದೀಕ್ಷೆ ತೆಗೆದುಕೊಂಡ ಆ್ಯನ್‌ಳಿಗೆ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಇಂಗ್ಲೀಷ್ ಪುಸ್ತಕಗಳನ್ನು ಬರೆಯುವ ಕೆಲಸವನ್ನು ವಹಿಸಲಾಗುತ್ತದೆ. ಆ್ಯನ್ ತನಗೆ ವಹಿಸಿದ ಕೆಲಸವನ್ನು ನಿಷ್ಠೆಯಿಂದ ಮಾಡಿದ್ದರೂ ಕೂಡ ಕಮಿಟಿಯವರು ಮಠಾಧಿಪತಿಗಳಿಗೆ "ಅವಳ ಇಂಗ್ಲೀಷ್ ತುಂಬಾ ಸಾದಾ ಸರಳವಿದ್ದು ವರ್ಣರಂಜಿತವಾಗಿಲ್ಲ, ಪ್ರಶಂಸಾತ್ಮಕ ವಿಶೇಷಣಗಳಿಲ್ಲ: ಅವಳ ಶೈಲಿಯಲ್ಲಿ ವೈಭವೀಕರಣವಿಲ್ಲ. ಅವಳ ಪುಸ್ತಿಕೆಗಳೆಂದರೆ ಬರೆ ಒಣ ಮಾಹಿತಿ ಪತ್ರಗಳಾಗಿವೆ" ಎಂದು ದೂರು ಹೇಳಿ ಅವಳನ್ನು ಆ ಕೆಲಸದಿಂದ ತೆಗೆದು ಹಾಕಿಸಿ, ಆ ಕೆಲಸವನ್ನು ಬೆಂಗಳೂರು ಕಾಲೇಜಿನ ಒಬ್ಬ ಇಂಗ್ಲೀಷ್ ಕಲಿಸುವ 'ಹುಟ್ಟು ಜೈನ'ನಿಗೆ ವಹಿಸುತ್ತಾರೆ. ಇದಕ್ಕೆ ಕಾರಣ ಬಹುಶಃ ತಾನು ಆ್ಯಡಂನೊಂದಿಗೆ ಮೈಸೂರಿಗೆ ಹೋಗಿದ್ದರ ಪ್ರಭಾವವಿರಬಹುದೆಂದು ಭಾವಿಸುತ್ತಾಳೆ. ಇದರಿಂದ ನೊಂದುಕೊಂಡ ಆಕೆ ತನ್ನ ಕೆಲಸಕ್ಕೆ ರಾಜೀನಾಮೆಯನ್ನು ನೀಡುತ್ತಾಳೆ. ಮಠದ ವ್ಯವಸ್ಥೆಯಲ್ಲಿ ತಾನು ಸೇರಿಕೊಂಡ ಬಗ್ಗೆ ಪಶ್ಚಾತ್ತಾಪವನ್ನು ಪಡುತ್ತಾಳೆ. "ಸಾಂಘಿಕ ಜೀವನಕ್ಕೆ ತನ್ನಂಥ ಸ್ವಾತಂತ್ರ್ಯಪ್ರಿಯ, ವ್ಯಕ್ತಿ ನಿಷ್ಠೆ ಜನರು ನಿರುಪಯೋಗಿ" ಎಂಬುದನ್ನು ಗ್ರಹಿಸುತ್ತಾಳೆ (ಪು. ೨೩೩). ಈ ಕಾರಣದಿಂದಾಗಿ ಅವಳು ಒಳಗೊಳಗೇ ಬಂಡೆದ್ದು ತನ್ನ ಮೂಲ ಧರ್ಮಕ್ಕೆ, ಆಚಾರ ವಿಚಾರಗಳಿಗೆ ಮರಳುತ್ತಾಳೆ.

ದೇಸಾಯಿಯವರ ಕಥನ ಸಾಹಿತ್ಯದ ಒಂದು ಪ್ರಮುಖ ಅಂಶವಾದ ಸ್ತ್ರೀ ಸ್ವಾತಂತ್ರ್ಯವನ್ನು ನಾವು ಇಲ್ಲಿ ಗುರುತಿಸಬಹುದಾಗಿದೆ. ಆ್ಯನ್ ಜೈನ ಧರ್ಮದ ಬಗ್ಗೆ ಅಭ್ಯಾಸ ಮಾಡುವ ಸಲುವಾಗಿ ಆ್ಯಡಂನೊಂದಿಗೆ ಭಾರತಕ್ಕೆ ಬಂದರೂ ಕೂಡ ಅವಳು ಅವಳಿಗಿಷ್ಟ ಬಂದ ರೀತಿಯಲ್ಲಿ ಕೆಲಸ ಮಾಡಲು ಸ್ವತಂತ್ರಳಿರುತ್ತಾಳೆ. ಯಾವುದೇ ತೀರ್ಮಾನ ತೆಗೆದುಕೊಳ್ಳಲೂ ಕೂಡ ಅವಳು ಸಮರ್ಥಳಿರುತ್ತಾಳೆ. ಅಲ್ಲದೇ ಅವಳು ಇಂಗ್ಲೀಷ್ ಹುಡುಗಿ. ತನ್ನನ್ನು ತಾನೇ ಸಂರಕ್ಷಿಸಿಕೊಳ್ಳುವ ಶಕ್ತಿ ಇದ್ದವಳು. ಹೀಗಾಗಿಯೇ ಅವಳು ತನ್ನ ವ್ಯಕ್ತಿತ್ವಕ್ಕೆ ಧಕ್ಕೆ ಬಂದ ಕಡೆಯಲ್ಲೆಲ್ಲಾ ತನ್ನ ಸ್ವಂತ ತೀರ್ಮಾನಗಳನ್ನು ಕೈಗೊಳ್ಳುವುದನ್ನು ನೋಡುತ್ತೇವೆ.

ಆ್ಯಡಂ ತಾನು ತನ್ನ ಚಿಕ್ಕಪ್ಪನೊಂದಿಗೆ ಬೆಂಗಳೂರಿನಲ್ಲಿ ಒಂದು ಹುಡುಗಿಯ ಸಹವಾಸವನ್ನು ಮಾಡಿದ್ದಾಗಿ ಹೇಳುತ್ತಾನೆ. ಆಗ ಆ್ಯನ್ ಆ್ಯಡಂನಿಂದ ದೂರವಾಗಲು ನಿರ್ಧರಿಸುತ್ತಾಳೆ. ಅಲ್ಲದೆ ಈ ನಿರ್ಧಾರಕ್ಕೆ ಪ್ರೊ.ನಿರ್ಮಲಕುಮಾರರ ಮಗಳಾದ (ರಾಜಮತಿ) ರೋಜಾ ವಿಚಾರವೂ ಕೂಡ ಕಾರಣವಾಗಿರುತ್ತದೆ. ಬಹುಶಃ ತಾನು ಆ್ಯಡಂನಿಂದ ದೂರವಾದರೆ ಆ್ಯಡಂ ರೋಜಾಳನ್ನು ಮದುವೆ ಮಾಡಿಕೊಳ್ಳಬಹುದು ಎಂಬುದು ಆ್ಯನಳ ಊಹೆಯಾಗಿರುತ್ತದೆ. ಹೀಗಾಗಿ ಅವಳು ಜೈನ ಧರ್ಮವನ್ನು ಸ್ವೀಕರಿಸುವ ನೆಪದಲ್ಲಿ ಆ್ಯಡಂನಿಂದ ದೂರವಾಗುತ್ತಾಳೆ. ಆದರೆ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಪ್ರಚಾರ ಸಮಿತಿಯಿಂದ ಅವಳನ್ನು ತೆಗೆದುಹಾಕಿದ ಘಟನೆ ಅವಳ ಮನಸ್ಸನ್ನು ತೀವ್ರವಾಗಿ

ಘಾಸಿಗೊಳಿಸುತ್ತವೆ. ಇದರಿಂದ ಆಕೆ ಬಂಡೆದ್ದು ತನ್ನ ಮೂಲ ಧರ್ಮಕ್ಕೆ, ಆಚಾರ-ವಿಚಾರಗಳಿಗೆ ಮರಳುತ್ತಾಳೆ.

ಇನ್ನು ಈ ಕಾದಂಬರಿಯಲ್ಲಿ ಬರುವ ಪ್ರೊ. ನಿರ್ಮಲಕುಮಾರರ ಮಗಳಾದ ರಾಜಮತಿ (ರೋಜಾ) ಹುಟ್ಟಿನಿಂದ ಜೈನಳಾದರೂ ಕೂಡ ಅದರ ಆಚಾರ-ವಿಚಾರಗಳ ಬಗ್ಗೆ ನಂಬಿಕೆಯನ್ನು ಹೊಂದಿರುವುದಿಲ್ಲ. ಪ್ರತಿಯೊಂದನ್ನೂ ಕೂಡ ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ನೋಡುವಂತಹ ಮನೋಭಾವನೆಯನ್ನು ಹೊಂದಿರುತ್ತಾಳೆ. ಅವಳ ಪ್ರಕಾರ "ಮಾರ್ಕ್ಸ್ ವಾದ ಎಂದರೆ ವೈಜ್ಞಾನಿಕ ದೃಷ್ಟಿಯ ತತ್ವ" (ಪು. ೩೦). ಎಂ.ಎ. ಪೊಲಿಟಿಕಲ್ ಸಾಯನ್ಸ್ ಮಾಡುತ್ತಿದ್ದ ಆಕೆಯ ವಿಚಾರ ಧಾರೆಗೂ, ಆಕೆಯ ತಂದೆಯ ವಿಚಾರಧಾರೆಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಆ್ಯಡಂನನ್ನು ಭೇಟಿಯಾದ ನಂತರ ನಿರ್ಮಲಕುಮಾರರಿಗೆ ರೋಜಾಳನ್ನು ಆ್ಯಡಂನೊಂದಿಗೆ ವಿವಾಹ ಮಾಡಿಕೊಡಬೇಕೆಂಬ ಆಸೆಯಿರುತ್ತದೆ. ಆದರೆ ರೋಜಾ ತನ್ನ ಬದುಕಿನ ಸಂಗಾತಿಯಾಗಿ ಡಾ॥ ಮಾಧವನ್‌ರವರನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಆ್ಯಡಂಗೆ ಬರೆದ ಪತ್ರದಲ್ಲಿ "ನನ್ನ ಕಮಿಟ್‌ಮೆಂಟ್ ಮೂಲಕ ಮಾಧವನ್ ನನ್ನ ಗುರು-ಮಿತ್ರ, ಏನಿದ್ದರೂ ಗುರುವಿನ ಒಂದು ವಿಚಿತ್ರ ಒತ್ತಡವಿದ್ದೆ ಇರುತ್ತದೆ. ಆದರೆ ಅದೆಲ್ಲ ಈಗ ನನಗೆ ಬೇಕೇ ಬೇಕು. ನನ್ನ ಜೀವನಕ್ಕೆ ಒಂದು ಕೃತಿಶೀಲ ದಿಶೆ ಕೊಡಲು ಅದು ಬೇಕೇ ಬೇಕು... ಆದರೆ ಮುಂದೆ ನಾನೆಲ್ಲೋ ಬಂಡೇಳಬಹುದೆಂಬ ಭೀತಿಯೂ ಇದೆ...

ಏನಾದ್ರೂ ಆಗಿ ನಾ ತತ್ತರಿಸಿ ಹೋದರೆ – ನಿನ್ನ ಕೈ – ಪ್ರೀತಿಯ, ತಿಳುವಳಿಕೆಯ ಕೈ-ಚಾಚಿ ನನ್ನನ್ನು ಸಾವರಿಸಿ ಹಿಡಿಯುವಿಯಾ? ನೀನು ಇಲ್ಲಿಗೆ ಬಂದಾಗ, ನಾ ಅಪ್ಪಿ ತಪ್ಪಿ ಇಂಗ್ಲೆಂಡಿಗೆ ಬಂದಾಗ, ನೀನು ನಿನ್ನ ಆಧಾರದ ಕೈಯನ್ನು ನನ್ನ ಬೆನ್ನ ಮೇಲೆ ಆಡಿಸುವಿಯಾ? ಛೇ, ನಾ ದುರ್ಬಲಳಲ್ಲ ಬಿಡು , ಹಾಗೆ ಏನೋ ಒಂದು ಅನಿಸಿಕೆ ಬರೆಯಬೇಕೆಂತನಿಸ್ತು ಬರೆದೆ, ತಪ್ಪು ತಿಳಿಯಬೇಡ, ನಿನ್ನ ಮುಂದಿನ ಜೀವನ ಆನ್ ಜೊತೆಗಿದ್ದರೂ ಕೂಡ ಸುಖಮಯವಾಗಲಿ ಎಂದು ಹಾರೈಸುವೆ" ಎಂದು ಹೇಳುವಲ್ಲಿ ಆಕೆಯ ಸ್ವತಂತ್ರ ಮನೋಭಾವವನ್ನು ಗುರುತಿಸಬಹುದಾಗಿದೆ (ಪು. ೨೬೪).

ಇನ್ನುಳಿದಂತೆ ದೇಸಾಯಿಯವರ ಮನೆತನದಲ್ಲಿ ಬರುವಂತಹ ಅಪ್ಪಾ ಸಾಹೇಬರ ಮಗಳು ನಿರ್ಮಲೆ, ಸೋನೂಬಾಯಿಯ ಮಗಳು ಗೌರಿ ಇವರೂ ಕೂಡ ತಮ್ಮದೆ ಆದ ಒಂದು ಸ್ವತಂತ್ರ ಜೀವನವನ್ನು ರೂಪಿಸಿಕೊಳ್ಳುತ್ತಾರೆ. ದೇಸಾಯಿಯವರ ಮಗಳಾದ ನಿರ್ಮಲೆಯನ್ನು ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಗದುಗಿನ ಶ್ರೀಮಂತ ವ್ಯಾಪಾರಿ ಸೋಮಪ್ಪ ಬೆಟಗೇರಿಯವರ ಮಗ ಬಾಹುಬಲಿಗೆ ಲಗ್ನ ಮಾಡಿಕೊಡಲಾಗಿರುತ್ತದೆ. ಬಿ.ಕಾಂ., ಮಾಡಿದ್ದ ಬಾಹುಬಲಿ ಅಪ್ಪನ ವ್ಯಾಪಾರದಲ್ಲಿ ತುಂಬಾ ಆಸ್ಥೆಯಿಂದ ಸಹಾಯ ಮಾಡುತ್ತಿರುತ್ತಾನೆ. ರೋಟರಿಯಲ್ಲಿ ಪ್ರೆಸಿಡೆಂಟಾಗಿದ್ದ ಆತನಿಗೆ ಆಗಾಗ್ಗೆ ಗೆಳೆಯರನ್ನು ಹುಬ್ಬಳ್ಳಿಗೆ ಕರೆದುಕೊಂಡು ಹೋಗಿ ಪಾರ್ಟಿ ಮಾಡುವ ಹವ್ಯಾಸವಿರುತ್ತದೆ. ಒಮ್ಮೆ ಹೀಗೆ ಪಾರ್ಟಿ ಮುಗಿಸಿ ಹಿಂತಿರುಗಿ ಬರುವಾಗ ನಡೆದ ಅಪಘಾತದಲ್ಲಿ ದುರ್ಮರಣ ಹೊಂದುತ್ತಾನೆ. ತದ ನಂತರ ನಿರ್ಮಲೆ ತಂದೆ ಮನೆಗೆ ಹಿಂದಿರುಗಿರುತ್ತಾಳೆ.

ನಿರ್ಮಲೆಯ ಮಾವನ ಮನೆಯವರು ದೇಶಭಕ್ತರಾಗಿದ್ದು ಗಾಂಧಿ ಅನುಯಾಯಿಗಳಾಗಿರುತ್ತಾರೆ. ಹೀಗಾಗಿ ನಿರ್ಮಲೆಯನ್ನು ವರ್ಧಾದ ಆಶ್ರಮದಲ್ಲಿ ವಿನೋಬಾರ ಬಳಿಗೆ ಬಿಡಬೇಕೆಂದು ನಿರ್ಧರಿಸಿರುತ್ತಾರೆ. ಆದರೆ ಅಪ್ಪಾ ಸಾಹೇಬ ದೇಸಾಯಿಯವರು ತಮ್ಮ ಜೈನರೊಳಗೆ ಇದು ಅಸಾಧ್ಯವೆಂದು ತಿಳಿಸುತ್ತಾರೆ. ಅಪ್ಪಾ ಸಾಹೇಬರು ಬದುಕಿರುವವರೆಗೆ ನಿರ್ಮಲೆಯ ಜೀವನದಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ. ಆದರೆ ಅಪ್ಪಾ ಸಾಹೇಬರ ಮರಣದ ನಂತರ ನಿರ್ಮಲೆ ಆ್ಯಡಂನ ಸಹಾಯದಿಂದ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಾಳೆ. ಅಲ್ಲದೆ "ಇಡೀ ಜನ್ಮ ಸನ್ಯಾಸಿನಿಯಂತೆ ಇರಲು ನನ್ನ ಒಪ್ಪಿಗೆಯಿಲ್ಲ" (ಪು. ೨೫೭) ಎಂದು ಸ್ಪಷ್ಟವಾಗಿ ಹೇಳುವಲ್ಲಿ ಅವಳ ಮುಂದಿನ ಭವಿಷ್ಯ ನಿರ್ಧಾರವಾಗಿರುವುದನ್ನು ಗುರುತಿಸಬಹುದು.

ಇನ್ನುಳಿದಂತೆ ದೇಸಾಯಿಯವರ ಒಟ್ಟು ಕುಟುಂಬಕ್ಕೆ ಬಂದರೆ ದೇಸಾಯರ ಕುಟುಂಬ ಹಲವು ಪ್ರಭಾವಕ್ಕೆ ಒಳಗಾಗುವುದನ್ನು ಗುರುತಿಸಬಹುದು. ಸ್ವಾತಂತ್ರ್ಯ ಪೂರ್ವದಿಂದಲೂ ಕೃಷ್ಣಾಪುರದ ಒಂದು ಪ್ರತಿಷ್ಠಿತ ಮನೆತನ ದೇಸಾಯರ ಮನೆತನ. ಶ್ರೀಮಂತ ಜೈನ ಮನೆತನವಾದ ಇದು ಜೈನಧರ್ಮದ ಬಗ್ಗೆ ಅತ್ಯಂತ ನಿಷ್ಠೆಯನ್ನು ಹೊಂದಿರುತ್ತದೆ.

ಆದಪ್ಪ ಚಂದ್ರಪ್ಪ ದೇಸಾಯಿಯವವರ ಮಕ್ಕಳೇ ದೇವೇಂದ್ರಪ್ಪ, ಅಪ್ಪಾ ಸಾಹೇಬ ಮತ್ತು ಶ್ರೇಣಿಕ. ಶ್ರೇಣಿಕ ಪ್ರಾರಂಭದಲ್ಲಿಯೇ ತನ್ನ ತಂದೆಯಿಂದ ದೂರವಾಗಿರುತ್ತಾನೆ. ದೇವೇಂದ್ರಪ್ಪ ಕರ್ನಾಟಕ ಕಾಲೇಜಿನಲ್ಲಿ ಬಿ.ಎ.ವರೆಗೆ ಓದುತ್ತಾನೆ. ತದ ನಂತರ 'ಲಾ' ಮಾಡಲೆಂದು ಕೊಲ್ಹಾಪುರಕ್ಕೆ ಹೋದ ದೇವೇಂದ್ರಪ್ಪ ಮತ್ತು ಉಡಾಳತನ ಮಾಡುವ ಅಪ್ಪಾ ಸಾಹೇಬರಿಬ್ಬರೂ ಕೃಷ್ಣಾಪುರಕ್ಕೆ ಮರಳುತ್ತಾರೆ.

ಅಪ್ಪಾ ಸಾಹೇಬ ಮತ್ತು ದೇವೇಂದ್ರಪ್ಪ ಇವರಿಬ್ಬರದ್ದೂ ಭಿನ್ನವಾದ ವ್ಯಕ್ತಿತ್ವ. ತಂದೆ ತೀರಿಕೊಂಡ ಮೇಲೆ ಬರೇ ಹೊಲ ಮಾಡಿಸುತ್ತಾ ಆರಾಮವಾಗಿ ಕಾಲಕಳೆಯುವುದು ಅಪ್ಪಾ ಸಾಹೇಬನಿಗೆ ಸಾಧ್ಯವಿರಲಿಲ್ಲ. ಹೀಗಾಗಿ ತನ್ನ ಅಣ್ಣನಿಗೆ ಹೇಳಿ, ಆತನನ್ನು ಒಪ್ಪಿಸಿ, ಇಬ್ಬರೂ ಫಾರೆಸ್ಟ್ ಕಂಟ್ರಾಕ್ಟ್ ಕೆಲಸ ಪ್ರಾರಂಭಿಸುತ್ತಾರೆ. ಈ ಕೆಲಸದಲ್ಲಿ ಬಹಳ ಕೆಲಸವಿರುತ್ತಿತ್ತು. ಬಹಳಷ್ಟು ಊರುಗಳನ್ನು, ಅರಣ್ಯಗಳನ್ನು ಸುತ್ತಾಡಬೇಕಿತ್ತು. ಅಪ್ಪಾ ಸಾಹೇಬನೇ ಈ ಎಲ್ಲಾ ಕೆಲಸವನ್ನು ಮಾಡತೊಡಗುತ್ತಾನೆ. ಎರಡೇ ವರ್ಷಗಳಲ್ಲಿ ಅಣ್ಣನೊಂದಿಗೆ ಮತ್ತೆ ತಂಟೆ ತೆಗೆದು ಪಾಲು ಕೇಳಿದನು. ಅಲ್ಲದೆ ಕಂಟ್ರಾಕ್ಟ್ ದಂಧೆಯೆಲ್ಲವೂ ತನ್ನದೇ ಎಂದು ವಾದಿಸತೊಡಗಿದ. ಆದರೆ ದೇವೇಂದ್ರಪ್ಪ ಏನೂ ತಕರಾರು ಮಾಡದೇ ಇದ್ದುದರಿಂದ ಎಲ್ಲವೂ ಅಪ್ಪಾ ಸಾಹೇಬನ ಇಷ್ಟದಂತೆಯೇ ನಡೆಯುತ್ತದೆ. ಅಪ್ಪಾ ಸಾಹೇಬನು ತನ್ನ ಹೊಲಗಳನ್ನು ಮಾರಿ ಕಂಟ್ರಾಕ್ಟ್ ಫಾಯಿದೆಯಲ್ಲಿ ಅರ್ಧ ಹಣವನ್ನು ಹಾಕುತ್ತಾನೆ. ಹೊಸದಾಗಿ ಮನೆಯನ್ನು ಕಟ್ಟಿಸುತ್ತಾನೆ. ಫೋರ್ಡ್ ಕಾರನ್ನು ಕೊಂಡುಕೊಂಡು ಜೀವನದಲ್ಲಿ ಮೇಲೆ ಮೇಲೆ ಹಾರತೊಡಗಿದನು.

ಇತ್ತ ದೇವೇಂದ್ರಪ್ಪ ಧರ್ಮದ ಆಶ್ರಯದಲ್ಲಿ ತನ್ನನ್ನು ಸಾವರಿಸಿಕೊಳ್ಳಲು ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಯತ್ನಿಸುತ್ತಾನೆ. ಊರಿನಲ್ಲಿ ಚಿಕ್ಕ ಬಸ್ತಿಯನ್ನು ಕಟ್ಟಿಸಿ ಭಟ್ಟಾರಕ, ನಾಲ್ಕಾರು

ನಿಗ್ರಂಥ ಸ್ವಾಮಿಗಳನ್ನು ಕರೆಸಿ, ಅತ್ಯಂತ ವೈಭವದಿಂದ ದೇವಾಲಯದ ಕಟ್ಟಡವನ್ನು ಉದ್ಘಾಟಿಸಿದರು. ಇಲ್ಲಿ ಈ ಕುಟುಂಬದಲ್ಲಿನ ಸಂಘರ್ಷವನ್ನು ಕಾಣುತ್ತೇವೆ.

ನಾವಿಲ್ಲಿ ಅಪ್ಪಾ ಸಾಹೇಬರ ವ್ಯಕ್ತಿತ್ವದ ಹಲವು ಮುಖಗಳನ್ನು ಕಾಣುತ್ತೇವೆ. ಅಪ್ಪಾ ಸಾಹೇಬರು ಬ್ರಿಟೀಷರ ಬಗ್ಗೆ ಗೌರವದ ಭಾವನೆಯನ್ನು ಹೊಂದಿದ್ದರೂ ಕೂಡ, ಅದರಿಂದ ತಾವು ಹೇಗೆ ಲಾಭ ಪಡೆಯಬೇಕೆಂಬ ಬಗ್ಗೆಯೆ ಲಕ್ಷ್ಯವನ್ನು ಹೊಂದಿರುತ್ತಾರೆ. ಹೀಗಾಗಿ ಬ್ರಿಟೀಷ್ ಸಾಹೇಬರು ಕೃಷ್ಣಾಪುರಕ್ಕೆ ಬಂದಿದ್ದಾಗ ಅವರ ಸೇವೆಯನ್ನು ಮಾಡಿ 'ರಾವಸಾಹೇಬ' ಪದವಿಯನ್ನು ಪಡೆದುಕೊಳ್ಳುತ್ತಾರೆ.

ಆದರೆ ದೇಶದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಯು ಇವರ ಮೇಲೂ ಕೂಡ ತನ್ನ ಪ್ರಭಾವವನ್ನು ಬೀರಿತು. ಕಾಂಗ್ರೆಸ್‌ನ ಹಾಗೂ ಗಾಂಧೀಜಿಯ ತತ್ವಗಳು ಇವರ ಮನಸ್ಸಿನಲ್ಲೂ ಪ್ರಭಾವ ಬೀರಿದವು. ಬ್ರಿಟೀಷರು ತಮಗೆ ನೀಡಿದ್ದ 'ರಾವಸಾಹೇಬ' ಪದವಿಯನ್ನು ಹಿಂದಿರುಗಿಸಿ ಚಳುವಳಿಯಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸುತ್ತಾರೆ. ಜೈಲಿನಿಂದ ಹಿಂದಿರುಗಿ ಬಂದ ನಂತರ ದೇಶಭಕ್ತರಾಗುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಚುನಾವಣೆಗೆ ಸ್ಪರ್ಧಿಸಿ ಎಂ.ಎಲ್.ಎ.ಯಾಗಿ ಆಯ್ಕೆಯಾಗಿರುತ್ತಾರೆ. ಆದರೆ ಕರ್ನಾಟಕ ಏಕೀಕರಣದ ನಂತರ ಅವರ ರಾಜಕೀಯ ಪ್ರಾಬಲ್ಯ ಕಡಿಮೆಯಾಗತೊಡಗುತ್ತದೆ. ಆದರೂ ಜೈನ ಸಮಾಜದಲ್ಲಿ ಅವರ ಸ್ಥಾನ, ಪ್ರತಿಷ್ಠೆ ಭದ್ರವಾಗಿಯೇ ಇರುತ್ತದೆ (ಪು. ೩೭). ಇಲ್ಲಿ ರಾಜಕೀಯ ಸಂಘರ್ಷ ಎದ್ದು ಕಾಣುತ್ತದೆ.

ಇದು ಅಪ್ಪಾ ಸಾಹೇಬರ ಒಂದು ಮುಖವಾದರೆ, ಅವರ ಮತ್ತೊಂದು ಮುಖ ಅಪ್ಪಾ ಸಾಹೇಬರು ಬಹಳ ಸ್ವಾರ್ಥಿ. ಪರಿಗ್ರಹದ ಹಸಿವೆ ಹಿಂಗದ ವ್ಯಕ್ತಿ. ಹುಟ್ಟು ಜೈನರೇ ಆಗಿದ್ದರೂ ಕೂಡ ಜೈನರ ಮಹಾವ್ರತವಾಗಲಿ, ಅಣುವ್ರತವಾಗಲಿ ಅವರಿಗೆ ಗೊತ್ತಿರಲಿಲ್ಲ. ತಮಗೆ ಬೇಕಾದುದನ್ನು ಹೇಗಾದರೂ ಮಾಡಿ ಪಡೆಯುತ್ತಿದ್ದರು. ಅಲ್ಲದೆ ಎಲ್ಲಾ ಅಭ್ಯಾಸಗಳನ್ನೂ ಹೊಂದಿದ್ದ ಇವರಿಗೆ ಸೋನೂಬಾಯಿ ಎಂಬ ಒಬ್ಬ ಉಪಪತ್ನಿಯೂ ಇರುತ್ತಾಳೆ.

ಇವರಿಗೆ ವಿರುದ್ಧವಾಗಿ ದೇವೇಂದ್ರಪ್ಪ ಅತ್ಯಂತ ಧರ್ಮನಿಷ್ಠ. ಆತನ ಪತ್ನಿ ಲಕ್ಷ್ಮಂಬಾಯಿಯೂ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಜೈನ ತತ್ವಗಳಲ್ಲಿ, ಜೈನ ಗುರುಗಳಲ್ಲಿ ಅಪರಿಮಿತವಾದ, ಅಚಲವಾದ ಶ್ರದ್ಧೆಯನ್ನು ಹೊಂದಿರುತ್ತಾರೆ. ಮಹಾಮಸ್ತಕಾಭಿಷೇಕದ ಸಂದರ್ಭವನ್ನು ಹೊಗಳುವಲ್ಲಿ, ಸಮ್ಮೇದಯಾತ್ರೆಯನ್ನು ಕೈಗೊಳ್ಳುವ ಸಮಯದಲ್ಲಿ ನಾವು ಇದನ್ನು ಗುರುತಿಸಬಹುದು. ಕ್ಯಾನ್ಸರ್ ಪೀಡಿತೆಯಾದ ಲಕ್ಷ್ಮಂಬಾಯಿ ಚಿಕಿತ್ಸೆಗೆ ಒಪ್ಪದೇ ಸಮ್ಮೇದಶಿಖರ ಯಾತ್ರೆಗೆ ಹೊರಡುತ್ತಾಳೆ. ಯಾತ್ರೆ ಮುಗಿಸಿ ಹಿಂತಿರುಗಬೇಕೆಂದಿದ್ದ ಸಂದರ್ಭದಲ್ಲೇ ಅಲ್ಲೇ ಮರಣ ಹೊಂದುತ್ತಾಳೆ. ಪತ್ನಿಯನ್ನು ಕಳೆದುಕೊಂಡ ದೇವೇಂದ್ರಪ್ಪ ಹಿಂತಿರುಗಿ ಬರಲೊಪ್ಪದೆ ಅಲ್ಲಿಯೇ ಉಳಿದು ದೀಕ್ಷೆ ತೆಗೆದುಕೊಳ್ಳಲು ನಿರ್ಧರಿಸುತ್ತಾರೆ. ಹೆಂಡತಿಯನ್ನು ಕಳೆದುಕೊಂಡ ಅವರು ಸಂಪೂರ್ಣ ನಿರ್ವಿಕಾರ ಸ್ಥಿತಿಯನ್ನು ತಲುಪುತ್ತಾರೆ.

ದೇವೇಂದ್ರಪ್ಪನವರ ಮಗನಾದ ನೇಮಿನಾಥ ದೇಸಾಯಿ ಇಂಗ್ಲೆಂಡ್‌ನಲ್ಲಿ ಪ್ರೊಫೆಸರ್ ಆಗಿ ಅಲ್ಲಿಯೇ ಎಮಿಲಿಯಾ ಎಂಬಾಕೆಯನ್ನು ಮದುವೆಯಾಗಿರುತ್ತಾರೆ. ಆದರೆ ತಾನು ಭಾರತದಲ್ಲಿದ್ದಾಗ

ಮದುವೆಯಾಗಿದ್ದ ಹುಡುಗಿಯನ್ನು ಬಿಟ್ಟಿದ್ದರ ಬಗ್ಗೆ ಘೋರ ಅಪರಾಧ ಹಾಗೂ ತಪ್ಪು ಎಂಬ ಭಾವನೆ ಹೊಂದಿರುತ್ತಾರೆ. ಆ ಅಪರಾಧ ಭಾವ ಅವರ ಹೃದಯದಲ್ಲಿ ಮುಳ್ಳಾಗಿ ಉಳಿದಿರುತ್ತದೆ. ಎಮಿಲಿಯಾಳೊಂದಿಗೆ ಸುಖ ಸಂಸಾರದ ಜೀವನವನ್ನು ನಡೆಸುತ್ತಿದ್ದರೂ ಕೂಡ ಅವರು ತಮ್ಮ ಅಪರಾಧಿ ಪ್ರಜ್ಞೆಯಿಂದ ಹೊರ ಬಂದಿರುವುದಿಲ್ಲ. ಆದರೆ ನೇಮಿನಾಥರಿಂದ ಪರಿತ್ಯಕ್ತಳಾದ ಭಾರತೀಯ ಮಹಿಳೆ ಜೈನ ಸನ್ಯಾಸಿನಿಯಾಗಿ ದಿಟ್ಟ ಜೀವನವನ್ನು ನಡೆಸುತ್ತಿರುತ್ತಾಳೆ.

ಇನ್ನು ಅಪ್ಪಾ ಸಾಹೇಬರ ಮಗನಾದ ಭರತಕುಮಾರ ತನ್ನ ತಂದೆಯನ್ನು ಬಹಳ ಹತ್ತಿರದಿಂದ ಬಲ್ಲವನಾಗಿದ್ದನು. ಆದ್ದರಿಂದ ಈತನೂ ಕೂಡ ಜೈನ ಧರ್ಮದ ಬಗ್ಗೆ ಹೆಚ್ಚೇನು ತಿಳಿದುಕೊಂಡಿರುವುದಿಲ್ಲ. ಸದಾ ಸುಖಲೋಲುಪತೆಯನ್ನು ಬಯಸುವಂತಹ ವ್ಯಕ್ತಿಯಾಗಿರುತ್ತಾನೆ. ಹುಟ್ಟಿನಿಂದ ಜೈನನಾದರೂ ಜೈನ ಸಿದ್ಧಂತದ ಬಗ್ಗೆ ಹೆಚ್ಚೇನು ತಿಳಿದುಕೊಂಡಿರುವುದಿಲ್ಲ. ಈತನು ಲಿಲಿಗೆ ಹೇಳುವ "ನನಗೆ ಗೊತ್ತಿದ್ದರಲ್ಲವೇ ಹೇಳೋದು, ಆ್ಯನ್‌ಳಿಂದಲೇ ನಾ ಕಲೀಬೇಕಂತೀನಿ," "ಜೈನಿಜಂ ಎಂದರೆ ದಿಗಂಬರತ್ವ ಅನ್ನೋದಷ್ಟೇ ನನಗೆ ಗೊತ್ತು" ಎಂದು ಹೇಳುವಲ್ಲಿ ಆತನ ಮನೋಭಾವ ಗೊತ್ತಾಗುತ್ತದೆ. ಅಲ್ಲದೇ ಭರತ ಆಧುನಿಕ ಜೀವನದ ಬಗ್ಗೆ ಹೆಚ್ಚು ತೆರೆದುಕೊಳ್ಳುವ ವ್ಯಕ್ತಿಯಾಗಿದ್ದಾನೆ. ತೋರಿಕೆಗೆ ಮಾತ್ರ ಜೈನ ಧರ್ಮವನ್ನು ಅನುಸರಿಸುವ ಆತ ತಾನು "ನಾನ್‌ವೆಜ್ ತಿನ್ನುವುದನ್ನು ಮನೆಯಲ್ಲಿ ಹೇಳಬೇಡಿ" (ಪು. ೧೬) ಎಂದು ಆ್ಯಡಂ ಮತ್ತು ಆ್ಯನ್‌ಗೆ ಹೇಳುವಲ್ಲಿ ಇದು ಗೋಚರಿಸುತ್ತದೆ. ಅಲ್ಲದೇ ಆತನ ಪ್ರಕಾರ ಸಂಪೂರ್ಣ ಜೈನ ಧರ್ಮವನ್ನು ಅನುಸರಿಸುವುದು ಸಾಧ್ಯವಾಗುವುದಿಲ್ಲ. ತನ್ನ ಸ್ವಾತಂತ್ರ್ಯದ ಬಗ್ಗೆ ಆತ ಹೇಳುವ "ಇಲ್ಲಿ, ಎಲ್ಲಾ ಇದ್ದು ಮನೆಯಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ–ನಾವು ಮನೀ ಹೊರಗೇನೇ ಸ್ವಾತಂತ್ರ್ಯ ದೊರಕಿಸಿಕೊಳ್ಳಬೇಕಾಗ್ತದೆ... ಎಲ್ಲಾ ಕಡೆ ಡಬಲ್ ಲೈಫ್ ನಮ್ಮದು–ಒಳಗೊಂದು ಹೊರಗೊಂದು, ಒಳ ಲೆಖ್ಖ – ಹೊರ ಲೆಖ್ಖ, ಒಳ ಹೆಣ್ಣು – ಹೊರಹೆಣ್ಣು ಇತ್ಯಾದಿ–ಡಬಲ್ ಸ್ಟಾಂಡರ್ಡ್ಸ್. ನನಗೆ ಬಾಳ ಬ್ಯಾಸರ ಬಂದದಪ್ಪಾ ..ಕೆಲವು ದಿನ ಪರದೇಶಕ್ಕೆ ಹೋಗಬೇಕಂತನಿಸ್ತದ." "ಇವರ ಐಶ್ವರ್ಯ ಪ್ರತಿಷ್ಠೆ ಎಲ್ಲಾ ಪೊಳ್ಳದ ಪೊಳ್ಳು. ನನಗಂತೂ ದೂರ ಓಡಿ ಹೋಗಬೇಕಂತನಿಸ್ತದ.." ಎಂದು ಹೇಳುವಲ್ಲಿ ಆತನ ಅಸಹನೆಯನ್ನು, ಮನಸ್ಸಿನ ತಾಕಲಾಟವನ್ನು ಗುರುತಿಸಬಹುದಾಗಿದೆ.

ಅಲ್ಲದೇ ಆತ ನೇಮಿನಾಥನ ಜೊತೆಯಲ್ಲಿ "ದಾದಾ ನನಗೆ ಈ ಜೈನ ಘೋಳ ಸೇರೋದಿಲ್ಲ. ಪ್ರವಾಸವೆಂದರೆ ಇಂಗ್ಲೆಂಡ್, ಯೂರೋಪ್‌ಗಳಿಗೆ ಹೋಗಬೇಕು" ಎಂಬ ಮಾತುಗಳು ಮತ್ತು "ನನ್ನ ಅಪ್ಪಾಜಿ ಅಂಥ ಧಾರ್ಮಿಕತೆಯ ಸೋಗು ಹಾಕುವುದರಲ್ಲಿ ನಿಷ್ಣಾತ. ಅದಕ್ಕೆ ನನಗೆ ಅಂಥ ಸೋಗಿನ ಬಗ್ಗೆ ದ್ವೇಷ. ಅವನಷ್ಟು ಧರ್ಮ ಲಂಪಟ ಇನ್ನೊಬ್ಬರಿಲ್ಲ" (ಪು. ೧೭೩) ಎಂದು ಹೇಳುವಲ್ಲಿ ಆತನ ಆಧುನಿಕ ಪ್ರಜ್ಞೆ ಎದ್ದು ಕಾಣುತ್ತದೆ.

ಆ್ಯನ್ ಜೈನ ಧರ್ಮವನ್ನು ಸ್ವೀಕರಿಸಿದಾಗ ಭರತ ಹೇಳುವ ಮಾತುಗಳು "ಜೈನಳಾಗಿ ಅವಳಿಗೇನು ಸಿಗೋದಿದೆ. ಜೈನ ಸಮಾಜಕ್ಕೆ ಅವಳೊಂದು ಅಲಂಕಾರವಾದಳು. ಅವಳನ್ನು ತಲೆಯ ಮೇಲಿಟ್ಟುಕೊಂಡು ಸಮಾಜ ಕುಣಿಯಲು ಸುರು ಮಾಡೀತು. ತಮ್ಮ ಧರ್ಮದ ಬಗ್ಗೆ ಏನೂ ಗೊತ್ತಿಲ್ಲದ ಈ ಜನರ ಕುರುಡು ಅಭಿಮಾನ ಅವಳ ಮೂಲಕ ಈಗ ಉಕ್ಕಿ ಬಂದೀತು.

ಮೊದಲೇ ಅವಳು ನಾರ್ಮಲ್ ಕಾಣಿಸ್ತಿದ್ದಿಲ್ಲ" (ಪು. ೨೧೫) ಎಂದು ಹೇಳುವ ಮೂಲಕ ಅವಳ ತೀರ್ಮಾನ ಹುಚ್ಚುತನದ್ದು ಎಂದು ಭರತನಿಗೆ ಅನ್ನಿಸತೊಡಗುತ್ತದೆ.

ಈ ಕಥೆಯ ಕೇಂದ್ರ ಬಿಂದುವಾದ ಆ್ಯಡಂ ದೇಸಾಯಿ, ಸಂಶೋಧನೆ ವಿಷಯ ಸಂಗ್ರಹ ನಿಮಿತ್ತ ಭಾರತಕ್ಕೆ ಬರುತ್ತಾನೆ. ಈತ ದೇಸಾಯಿ ಮನೆತನಕ್ಕೆ ಸೇರಿದವನಾದರೂ ಕೂಡ ಹುಟ್ಟಿ ಬೆಳೆದಿದ್ದು ಇಂಗ್ಲೆಂಡಿನಲ್ಲಿ. ಈತನ ತಂದೆ ಡಾ. ನೇಮಿನಾಥ ಡರ್ಹಮ್ ವಿಶ್ವವಿದ್ಯಾನಿಲಯದಲ್ಲಿ ಕಾಮನ್‌ವೆಲ್ತ್ ಲಿಟರೇಚರ್‌ದ ಪ್ರಾಧ್ಯಾಪಕನಾಗಿರುತ್ತಾನೆ. ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಹೋದ ಈತ ತನ್ನ ಮೊದಲ ಹೆಂಡತಿಯನ್ನು ತ್ಯಜಿಸಿ ಬ್ರಿಟಿಷ್ ಮಹಿಳೆ ಎಮಿಲಿಯಳನ್ನು ಮದುವೆ ಆಗಿರುತ್ತಾನೆ. ಆ್ಯಡಂ ಅರ್ಧ ಜೈನನಾದರೂ ತನ್ನನ್ನು ಕ್ರಿಶ್ಚಿಯನ್ ಎಂದೇ ಗುರುತಿಸಿಕೊಳ್ಳುತ್ತಾನೆ.

ವಿದ್ಯಾಭ್ಯಾಸಕ್ಕೆಂದು ಭಾರತಕ್ಕೆ ಬರುವ ಆ್ಯಡಂ ದೇಸಾಯರ ಮನೆಗೆ ಸಹಜವಾಗಿ ಹೊಂದಿಕೊಳ್ಳುತ್ತಾನೆ. ತನ್ನ ತಾತನ ಮನೆಯಾದ್ದರಿಂದ ಅವನಿಗೆ ಈ ಹೊಂದಾಣಿಕೆ ಸಹಜವಾಗಿಯೇ ಆಗುತ್ತದೆ. ಅಲ್ಲದೆ ಅತ ಇಲ್ಲಿ ಸೃಷ್ಟಿಯಾಗುವ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ರೀತಿ ದೇಸಾಯಿಯವರ ಎರಡನೇ ಕಾದಂಬರಿಯಾದ 'ಬೀಜ'ದ ಕಥೆಯನ್ನು ನೆನಪಿಗೆ ತರುತ್ತದೆ.

ದೇಸಾಯರ ಮನೆತನದ ಕಥೆ ೨೦ ನೇ ಶತಮಾನದ ಪ್ರಾರಂಭದ ದಶಕಗಳಲ್ಲಿ ಹುಟ್ಟಿಕೊಳ್ಳುವ ಕತೆಯಾಗಿದೆ. ಇದು ಎಪ್ಪತ್ತು-ಎಂಬತ್ತರ ದಶಕದವರೆವಿಗೂ ಹರಿದು ಬರುತ್ತದೆ. ಈ ಮನೆತನವು ತನ್ನ ಜಮೀನುದಾರಿ ಹಾಗೂ ಸಂಪ್ರದಾಯನಿಷ್ಠ ಸ್ವರೂಪವನ್ನು ಕಳೆದುಕೊಂಡು ಕ್ರಮೇಣ ಆಧುನಿಕತೆಯತ್ತ ಮುಂದುವರೆಯುವುದನ್ನು ನೋಡಬಹುದಾಗಿದೆ. ಈ ಸಂದಭದಲ್ಲಿಯೇ ಹಲವು ಸಂಘರ್ಷಗಳನ್ನು ಎದುರಿಸುವುದನ್ನು ನೋಡಬಹುದಾಗಿದೆ.

ಆ್ಯಡಂನ ಮೂಲಕ ಗಂಡು-ಹೆಣ್ಣುಗಳ ನಡುವಿನ ಸಂಬಂಧಗಳ ಅನ್ವೇಷಣೆಯ ಜೊತೆ ಜೊತೆಗೆ ದೇಸಾಯಿ ಮನೆತನದ ಆಧುನೀಕರಣದ ಪ್ರಕ್ರಿಯೆಯ ಶೋಧವೂ ಇಲ್ಲಿ ಮುಖ್ಯವಾಗುತ್ತದೆ. ಆ್ಯಡಂ ತನ್ನ ತಾತನ ಮನೆಗೆ ಬಂದ ಸಂದರ್ಭದಲ್ಲಿ ಆತನ ಚಿಕ್ಕ ತಾತನಾದ ಅಪ್ಪಾ ಸಾಹೇಬರು ಹೃದಯಾಘಾತಕ್ಕೆ ಒಳಗಾಗಿರುತ್ತಾರೆ. ಅಭ್ಯಾಸಕ್ಕೆಂದು ತನ್ನ ಗೆಳತಿ ಆ್ಯನ್‌ಳೊಂದಿಗೆ ಬಂದ ಆ್ಯಡಂ ಅಪ್ಪಾ ಸಾಹೇಬರು ತಮ್ಮ ಅಟ್ಟದ ಮೇಲೆ ಸ್ಪೆಷಲ್ಲಾಗಿ ಕಟ್ಟಿಸಿದ್ದ ಗೆಸ್ಟ್ ರೂಮಿನಲ್ಲಿ ಉಳಿದುಕೊಂಡಿರುತ್ತಾನೆ.

ಇಲ್ಲಿಯೇ ಉಳಿದುಕೊಂಡ ಆ್ಯಡಂ ತನ್ನ ಆಹಾರ ಪದ್ಧತಿಯಲ್ಲಿಯೂ ಕೂಡ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳುತ್ತಾನೆ. ಹೊರಗಡೆ ಊಟಕ್ಕೆ ಕರೆದುಕೊಂಡು ಹೋದ ಭರತನು ಆ್ಯಡಂಗೆ, ನೀನು ಕ್ರಿಶ್ಚಿಯನ್. ಆದ್ದರಿಂದ 'ಪ್ರಾನ್ಸ್' ತಿನ್ನಲಿಕ್ಕೆ ಅಡ್ಡಿಯಿಲ್ಲ ತಾನೆ? ಎಂದು ಕೇಳಿದಾಗ "ಇಲ್ಲ ನಾನು ಗ್ರ್ಯಾಂಡ್ ಪಾನ ಮನೆಯಲ್ಲಿ ಇರೋತನಕ ತಿನ್ನೋದಿಲ್ಲ." (ಪು. ೧೬) ಎಂದು ನೀಡಿದ ಉತ್ತರ ಆತನ ದೃಢ ನಿರ್ಧಾರವನ್ನು ತಿಳಿಸುತ್ತದೆ. ಆದರೆ ಅದೇ ಭರತ ಹೊರಗೆ ಎಲ್ಲಾ ಅಭ್ಯಾಸಗಳಿದ್ದರೂ ಕೂಡ ಮನೆಯಲ್ಲಿ ಬಹಳ ಸಂಭಾವಿತನಂತೆ ಇರುವುದನ್ನು ಅಭ್ಯಾಸ ಮಾಡಿಕೊಂಡಿರುತ್ತಾನೆ.

ಹೃದಯಾಘಾತಕ್ಕೆ ಒಳಗಾಗಿದ್ದ ಅಪ್ಪಾಸಾಹೇಬರು ಆಸ್ಪತ್ರೆಯಿಂದ ಮನೆಗೆ ಬಂದ ನಂತರ ಆ್ಯಡಂ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಾನೆ. ಆದಷ್ಟು ರೆಸ್ಟ್ ತೆಗೆದುಕೊಳ್ಳುವಂತೆ ಸೂಚಿಸುತ್ತಾನೆ. ಅಲ್ಲದೆ ಅಪ್ಪಾ ಸಾಹೇಬನ ದಾಂಡೇಲಿಯ ಲಗ್ನದ ವಿಚಾರವನ್ನು ತಿಳಿದ ಆತ ತನ್ನ ಅಭಿಮಾನವನ್ನು ಸೂಚಿಸುತ್ತಾನೆ. "ಯುಆರ್ ಗ್ರೇಟ್ ಗ್ರ್ಯಾಂಡ್ ಪಾ, ಐ ಲೈಕ್ ಯು, ನೀವೆಂದರೆ ನನಗೆ ತುಂಬ ಅಭಿಮಾನ" ಎಂದು ಹೇಳುವ ಆತ, ತನ್ನ ತಂದೆಯ ಬಗ್ಗೆ ಅಸಮಾಧಾನವನ್ನು ವ್ಯಕ್ತ ಪಡಿಸುತ್ತಾನೆ. "ನನ್ನ ಡ್ಯಾಡಿಗೆ ಇಬ್ಬರು ಹೆಂಡಿರನ್ನು ಇಟ್ಟುಕೊಳ್ಳುವುದು ಸಾಧಿಸಲಿಲ್ಲ. ಒಬ್ಬಳನ್ನು ಒಂದು ರೀತಿ ಸಾಯಿಸಬೇಕಾಯ್ತುವರಿಗೆ, ಇಂಗ್ಲೆಂಡಿಗೆ ತಿರುಗಿ ಹೋದ ಮೇಲೆ ನನ್ನ ಮಮ್ಮಿಗೆ ಕೇಳ್ತೀನಿ, ಯಾಕೆ ಇಂಡಿಯನ್ ಹೆಂಡತಿಯನ್ನು ಇರಲಿಕ್ಕೆ ಕೊಡಲಿಲ್ಲ ಅಂತ" (ಪು. ೪೦) ಎಂದು ಹೇಳುವ ಮಾತುಗಳಲ್ಲಿ ಇದನ್ನು ಗುರುತಿಸಬಹುದು.

ಅಪ್ಪಾ ಸಾಹೇಬನು ತನ್ನ ಎಲ್ಲಾ ಸಮಸ್ಯೆಗಳನ್ನು ಆ್ಯಡಂನೊಂದಿಗೆ ಚರ್ಚೆ ಮಾಡುತ್ತಿರುತ್ತಾನೆ. ಅಂತೆಯೇ ಅಪ್ಪಾ ಸಾಹೇಬ ಚರ್ಚಿಸಿದ್ದ ನಿರ್ಮಲೆ ಮತ್ತು ಜಿನಸೇನನ ಸಮಸ್ಯೆ ತಾನೇ ತಾನಾಗಿ ಬಗೆ ಹರಿಯುತ್ತದೆ. ಇದು ಹೇಗೆ ಸಾಧ್ಯ ಎಂದು ಆ್ಯಡಂ ತಿಳಿಯುವ ಕುತೂಹಲ ತೋರಿಸಿದರೂ ಕೂಡ ಆತನಿಗೆ ಜಿನಸೇನನ ಪಲಾಯನದ ವಿಚಾರ ತಿಳಿಯುವುದಿಲ್ಲ.

ಆ್ಯಡಂ ಭಾರತಕ್ಕೆ ಬಂದ ನಂತರ 'ಜೀವನ' ಎಂದರೇನು? ಜೀವನದ ಸಂಕೀರ್ಣತೆ, ತೊಡಕುಗಳನ್ನು ತಿಳಿಯುವ ಪ್ರಯತ್ನವನ್ನು ನಡೆಸುತ್ತಾನೆ. 'ಇಲ್ಲಿ ಸಂಘರ್ಷಗಳು ಎಲ್ಲಿ ಹುಟ್ಟುತ್ತವೆ ಎಂದು ಮೊದಲೇ ಹೇಳುವುದಕ್ಕೆ ಆಗುವುದಿಲ್ಲ. ಇಲ್ಲಿಯ ಸಂಘರ್ಷಗಳು ಪರಿಹಾರವಿಲ್ಲದೆ ಹಾಗೆ ಕರಗಿ ಹೋಗುತ್ತವೆ' ಎಂದು ಭಾಸವಾಗುತ್ತದೆ. ಏಕೆಂದರೆ ಅಪ್ಪಾ ಸಾಹೇಬ ಮತ್ತು ಭರತಕುಮಾರರ ನಡುವೆ ನಡೆಯುವ ಸಂಘರ್ಷ ಇದಕ್ಕೆ ಕಾರಣವಾಗುತ್ತದೆ. ಆಧುನಿಕತೆಗೆ ಹೆಚ್ಚೆಚ್ಚು ತೆರೆದುಕೊಳ್ಳಲು ಬಯಸುವ ಭರತ ತನ್ನ ತಂದೆಯಿಂದ ಎಲ್ಲಾ ವಿಚಾರವನ್ನು ಮುಚ್ಚಿಡಲು ಹವಣಿಸುತ್ತಾನೆ. ಅಲ್ಲದೆ ತನ್ನ ತಂದೆಯ ಬಗ್ಗೆ, ಆತನ ವಿಚಾರಗಳ ಬಗ್ಗೆ ವಿರೋಧವಿದ್ದರೂ ಕೂಡ ಅದನ್ನು ಬಹಿರಂಗವಾಗಿ ವಿರೋಧಿಸುವುದಿಲ್ಲ. ಅಂತೆಯೇ ಅಪ್ಪಾ ಸಾಹೇಬನೂ ಕೂಡ ತನ್ನ ಮಗ ತಾನು ಪ್ರಾರಂಭಿಸಿದ ಬಿಸಿನೆಸ್ಸನ್ನು ಹಾಳು ಮಾಡುತ್ತಿದ್ದಾನೆ ಎಂದೆನಿಸಿದರೂ ಕೂಡ ಅದನ್ನು ನೇರವಾಗಿ ವ್ಯಕ್ತ ಪಡಿಸುವುದಿಲ್ಲ. ಇಲ್ಲಿ ತಂದೆ ಮಕ್ಕಳ ಸಂಘರ್ಷ ಕಂಡುಬರುತ್ತದೆ.

ಇನ್ನು ತನ್ನ ಖಾಸಾ ಅಜ್ಜನಾದ ದೇವೇಂದ್ರಪ್ಪ ಮತ್ತು ಲಕ್ಷ್ಮಂಬಾಯಿ ಸಮ್ಮೇದ ಶಿಖರಕ್ಕೆ ಹೊರಟಾಗ ಅವರೊಂದಿಗೆ ಹೊರಟ ಆ್ಯಡಂ ದಾರಿಯುದ್ದಕ್ಕೂ ತನ್ನ ಅಜ್ಜಿಯ ಕಾಳಜಿಯನ್ನು ಮಾಡುತ್ತಾನೆ. ಕ್ಯಾನ್ಸರ್ ಪೀಡಿತೆಯಾದ ಆಕೆಯನ್ನು ಮುಂಬಯಿಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಬೇಕೆಂದು ಆ್ಯಡಂ ಅಂದುಕೊಳ್ಳುತ್ತಾನೆ. ಆದರೆ ಅದಕ್ಕೆ ಒಪ್ಪದ ಲಕ್ಷ್ಮಂಬಾಯಿ ಸಮೇದ ಶಿಖರ ಯಾತ್ರೆ ಕೈಗೊಳ್ಳುವ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಅಜ್ಜಿಯೊಂದಿಗೆ ಯಾತ್ರೆ ಹೊರಟ ಆ್ಯಡಂ ಅಜ್ಜಿಗೆ ಎಲ್ಲವೂ ಸಕಾಲಕ್ಕೆ ಸಿಗುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ಗಮನ ಹರಿಸುತ್ತಿದ್ದನು.

ಲಕ್ಷ್ಮಿಂಬಾಯಿ ತನ್ನ ನೆನಪಿನ ಬುತ್ತಿಯನ್ನು ತನ್ನ ಮೊಮ್ಮಗನೊಂದಿಗೆ ಬಹಳ ಖುಷಿಯಿಂದ ಹಂಚಿಕೊಳ್ಳುತ್ತಿದ್ದಳು. ಆ್ಯಡಂ ತನಗೆ ಅರ್ಧಮರ್ಧ ತಿಳಿಯದಿದ್ದರೂ ಕೂಡ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದ. ತನ್ನ ಅಜ್ಜಿಯ ಮನಸ್ಸಿಗೆ ಯಾವುದೇ ರೀತಿಯಿಂದಲೂ ನೋವಾಗದಂತೆ ನೋಡಿಕೊಳ್ಳುತ್ತಾನೆ. ಪಾರ್ಶ್ವನಾಥನ ಗುಹೆಗೆ ಆ್ಯಡಂ ತನ್ನ ಅಜ್ಜಿಯನ್ನು ಹೆಚ್ಚು ಕಡಿಮೆ ಎತ್ತಿಕೊಂಡೇ ಹೋಗುತ್ತಾನೆ. ಆದರೆ ಅಲ್ಲಿ ಆತ ನಿರಾಸಕ್ತಿಗೆ ಒಳಗಾಗುತ್ತಾನೆ. ಆ್ಯನ್‌ಳ "ಆ್ಯಡಂ ನಿನಗೆ ಯಾವುದರಲ್ಲಿಯೂ ಆಸ್ಥೆ ಇಲ್ಲ. ಕುತೂಹಲವಿಲ್ಲ. ಯಾಕೆ ಇಷ್ಟು ವ್ಯಗ್ರನಾಗಿದ್ದಿ?" ಎಂಬ ಪ್ರಶ್ನೆಗೆ " ಆ ಅಜ್ಜಿಯ ಬಗ್ಗೆ ನನಗೆ ಕಾಳಜಿ. ನಾವೆಲ್ಲ ಸುಖವಾಗಿ ಊರಿಗೆ ಮರಳಿದರೆ ಸಾಕಾಗಿದೆ" (ಪು. ೧೫೫) ಎಂದು ಆ್ಯಡಂ ನೀಡುವ ಉತ್ತರ ಆತನ ಕಾಳಜಿಗೆ ಮತ್ತು ಅಜ್ಜಿಯ ಆರೋಗ್ಯದ ಬಗ್ಗೆ ಅವನೊಳಗೆ ನಡೆಯುತ್ತಿದ್ದ ಮಾನಸಿಕ ಸಂಘರ್ಷಕ್ಕೆ ಸಾಕ್ಷಿಯಾಗಿದೆ.

ಆ್ಯಡಂನ ಮನಃಸ್ಥಿತಿಯಂತೆ ಆತನ ಅಜ್ಜಿ ರಾತ್ರಿ ನಿದ್ದೆಯಲ್ಲಿಯೇ ಪ್ರಾಣ ಬಿಟ್ಟಿರುತ್ತಾಳೆ. ಅಂತಿಮವಾಗಿ ಆ್ಯಡಂನೇ ಅಗ್ನಿ ಸಂಸ್ಕಾರದ ಅಂತಿಮ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಅಲ್ಲದೇ ಮೂರು ದಿನಗಳ ಕಾಲ ಅಲ್ಲಿಯೇ ತಂಗಿದ್ದು, ತನ್ನ ಉಳಿದ ಎಲ್ಲಾ ಕರ್ತವ್ಯಗಳನ್ನು ಮುಗಿಸಿ ಕೃಷ್ಣಾಪುರಕ್ಕೆ ಹಿಂದಿರುಗುತ್ತಾನೆ. ಆದರೆ ದೇವೇಂದ್ರಪ್ಪನವರು ಎಷ್ಟು ಹೇಳಿದರೂ ಹಿಂದಿರುಗಿ ಬರಲು ಒಪ್ಪಿಕೊಳ್ಳದೆ ಅಲ್ಲಿಯೇ ಉಳಿದುಕೊಂಡು ಬಿಡುತ್ತಾರೆ.

ಊರಿಗೆ ಹಿಂತಿರುಗಿದ ಆ್ಯಡಂ ತನ್ನ ತಂದೆಯನ್ನು ಕರೆಸಿಕೊಳ್ಳುತ್ತಾನೆ. ಆಸ್ತಿ ಪಾಲು ಮಾಡುವ ವಿಚಾರ ಬಂದಾಗ ಟೆನ್ನಿಸ್ ಕಾಯಿದೆಯ ವಿಚಾರವೂ ಬರುತ್ತದೆ. ಕೊನೆಗೆ ಎಲ್ಲವೂ ಸುಸೂತ್ರವಾಗಿ ಬಗೆ ಹರಿದು ಒಂದು ಟ್ರಸ್ಟ್‌ನ್ನು ಸ್ಥಾಪಿಸಲಾಗುತ್ತದೆ. ಆದರೆ ನೇಮಿನಾಥ ಮಾಡಬೇಕಾಗಿದ್ದ ತನ್ನ ಎಲ್ಲಾ ಕೆಲಸಗಳನ್ನು ಆತ ತನ್ನ ಮಗನಿಗೇ ವಹಿಸುವ ಮೂಲಕ ಅಲ್ಲಿಯೂ ಕೂಡ ತನ್ನ ಪಲಾಯನವಾದಿತನವನ್ನು ತೋರಿಸುತ್ತಾನೆ.

ಆದರೆ ಆ್ಯಡಂ ತಾನು ವಹಿಸಿಕೊಂಡ ಜವಾಬ್ದಾರಿಗಳೆಲ್ಲವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಎಲ್ಲರಿಗೂ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತಾನೆ. ಅಪ್ಪಾಸಾಹೇಬರ ಮರಣದ ನಂತರ ಭರತನಿಗೆ ತಿಳಿಯದಂತೆ ಸೋನೂಬಾಯಿ ಮಗಳು ಗೌರಿಯ ವಿದ್ಯಾಭ್ಯಾಸಕ್ಕೂ ವ್ಯವಸ್ಥೆಯನ್ನು ಮಾಡುತ್ತಾನೆ. ಟ್ರಸ್ಟ್‌ನ ಮೂಲಕ ನಿರ್ಮಲೆಯ ವಿದ್ಯಾಭ್ಯಾಸಕ್ಕೂ ಸಹಾಯ ಮಾಡುತ್ತಾನೆ. ಕೃಷ್ಣಾಪುರದಲ್ಲಿಯೇ ತನ್ನ ಅಸ್ತಿತ್ವವನ್ನು ಗುರುತಿಸುವ, ಉಳಿಸಿಕೊಳ್ಳುವ ಸೂಚನೆಯನ್ನು ಆತ ನೀಡುತ್ತಾನೆ.

ಭಾರತಕ್ಕೆ ಬಂದ ನಂತರ ಆ್ಯಡಂ ಮತ್ತು ಆ್ಯನ್‌ಳ ನಡುವಿನ ಸಂಬಂಧವೂ ಪರಿವರ್ತಿತವಾಗುತ್ತದೆ. ಕಾದಂಬರಿಯ ಪ್ರಾರಂಭದಲ್ಲಿ ಅವರಿಬ್ಬರ ಲೈಂಗಿಕ ಸಂಬಂಧವೂ ಒಂದು ಪ್ರಮುಖ ಅಂಶವಾಗಿರುತ್ತದೆ. ಪ್ರಾರಂಭದಲ್ಲಿ ಗೆಳೆಯರಾಗಿದ್ದ ಅವರು ಭಾರತಕ್ಕೆ ಬರುವ ಮೊದಲು ಇಬ್ಬರೂ ಕೂಡಿ ಬೇಕಾದಷ್ಟು ಸಲ ಮಲಗಿರುತ್ತಾರೆ. ಆದರೆ ಅನಂತರ ಯಾಕೋ ಸೆಕ್ಸ್ ಬಗ್ಗೆ ಇಬ್ಬರಿಗೂ ಬೇಸರ ಬಂದಿರುತ್ತದೆ. "ಸೆಕ್ಸ್ ಬರೇ ತಿಕ್ಕಾಟದ ಸುಖ... ನನಗೆ ಯಾಕೋ ಬಹಳ ಬೇಸರ. ನಾನು ವಿಕ್ಷಿಪ್ತ ಅಲ್ಲಾ ತಾನೆ? ಪ್ರೀತಿ, ಲಗ್ನ, ಸೆಕ್ಸ್ ಅಥವಾ ಪ್ರೀತಿ, ಸೆಕ್ಸ್, ಲಗ್ನ ಈ

ಯಾವ ಅನುಕ್ರಮ ಇರದಿದ್ದರೆ ಅದು ಬೇಡ. ಆತನಿಗೂ ಮೊದಲು ಸೆಕ್ಸ್ ಅಂದರೆ ಕುತೂಹಲದ ವಿಷಯ. ನಂತರ ಅವನಿಗೂ ಸ್ವಲ್ಪ ಬೇಸರ ಬಂತೇನೋ ಅಥವಾ ನನ್ನ ಅನಾಸ್ಥೆ ಅವನಲ್ಲಿಯ ಬೆಂಕಿಯನ್ನು ಆರಿಸಿರಬೇಕು" (ಪು. ೧೯). "ಸೆಕ್ಸ್ ಅಂದರೆ ನೋಡೋಣ. ಆದರೆ ಇಂದಲ್ಲ, ಡಿಯರ್...ನನಗೆ ಅಂಥ ಮೂಡಿಲ್ಲ. ಹಾಗೂ ಅಂಥ ಮೂಡು ನಾನು ಇಂಡಿಯಾದಲ್ಲಿರೋತನಕ ಬರ್‍ತದೋ ಇಲ್ಲೋ ಸಂಶಯ" (ಪು. ೪೩) ಎಂದು ಆ್ಯನ್ ಹೇಳುವ ಪ್ರಬುದ್ಧ ಮಾತುಗಳಲ್ಲಿ ಅವಳಲ್ಲಿನ ಬದಲಾವಣೆಯನ್ನು ಗುರುತಿಸಬಹುದು.

ಆ್ಯನ್ ಜೈನ ಶ್ರಾವಿಕೆಯಾಗಿದ್ದು, ತದ ನಂತರ ಆರ್ಯಿಕೆಯಾಗಬೇಕೆಂದು ನಿರ್ಧರಿಸಿರುತ್ತಾಳೆ. ಆ ಸಮಯದಲ್ಲಿ ಮೈಸೂರಿನ ಹೋಟೆಲೊಂದರಲ್ಲಿ ಉಳಿದುಕೊಳ್ಳಬೇಕಾಗಿ ಬಂದಾಗ ಇಬ್ಬರೂ ಸಂಯಮದಿಂದ ವರ್ತಿಸುವುದು, ಮತ್ತು ಆ್ಯಡಂ ಹೇಳುವಂತಹ "ಈಗ ನಾನು ನಿನ್ನನ್ನು ಸಂಪೂರ್ಣವಾಗಿ ಪ್ರೀತಿಸುತ್ತಿರುವೆ..." "ನನಗೆ ಗೊತ್ತಿಲ್ಲ. ಆದರೆ ನನ್ನ ಹೃದಯಕ್ಕೆ ಗೊತ್ತಿದೆ..." (ಪು. ೨೩೧) ಎಂಬ ಮಾತುಗಳಿಂದ ಅವರ ನಡುವಿನ ಸಂಬಂಧ ಪ್ರೀತಿಯಲ್ಲಿ ಪರಿಪಕ್ವವಾಗುವುದು ವ್ಯಕ್ತವಾಗುತ್ತದೆ.

ಈ ಕಾದಂಬರಿಯಲ್ಲಿ ಕಾದಂಬರಿಕಾರ ಓದುಗರೊಂದಿಗೆ ನಡೆಸುವ ನೇರ ಸಂವಾದವು ಕೃತಿಯನ್ನು ಅರ್ಥ ಮಾಡಿಸುವಲ್ಲಿ ಹೆಚ್ಚು ಸಹಕಾರಿಯಾಗಿದೆ. ಇದು ದೇಸಾಯರ ಕಥನದ ಮತ್ತೊಂದು ತಂತ್ರವಾಗಿದೆ. ಒಟ್ಟಾರೆಯಾಗಿ "ಓಂ ಣಮೋ'ದಲ್ಲಿ ದೇಸಾಯಿಯವರು ಜೈನ ಧರ್ಮದ ಬಗ್ಗೆ ತಮ್ಮ ಜೈನ–ಅನುಭವ (ಅದು ಎಷ್ಟೇ ಸೀಮಿತವಿದ್ದರೂ) ಅದರ ಬಗ್ಗೆ ತಿಳಿಸುವ ಪ್ರಯತ್ನ ನಡೆಸಿದ್ದಾರೆ. ಈ ಅಂಶಗಳ ಜೊತೆಗೆ ಕಾದಂಬರಿಯಲ್ಲಿ ಬರುವ ಆಧುನೀಕರಣದ ಪರಿಣಾಮ, ಮನುಷ್ಯರ ನಡುವಿನ ಸಂಬಂಧಗಳು, ಅವರ ದೃಷ್ಟಿಕೋನಗಳು, ಧಾರ್ಮಿಕ ಸ್ಥಿತ್ಯಂತರ ಹಾಗೂ ಸಂಘರ್ಷಗಳನ್ನು ಗುರುತಿಸುವ ಪ್ರಯತ್ನವನ್ನು ನಡೆಸಿದ್ದೇನೆ.

ಪ್ರಸ್ತುತದಲ್ಲಿ ಈ ಕಾದಂಬರಿಯಿಂದ ಹೊರಹೊಮ್ಮುವ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ವಿಚಾರಗಳನ್ನು ಹೀಗೆ ಸಂಗ್ರಹಿಸಬಹುದು ಮತ್ತು ಈ ಕಾದಂಬರಿಯು ೨೦ನೇ ಶತಮಾನದ ಚಾರಿತ್ರಿಕ ಅಂಶಗಳನ್ನು ಕೂಡ ಒಳಗೊಂಡಿದ್ದು, ಕಾದಂಬರಿಯಲ್ಲಿ ಹೊರಹೊಮ್ಮುವ ಐತಿಹಾಸಿಕ ಅಂಶಗಳು ಹೀಗಿವೆ :

೧. ಜೈನರ ಮೂಲವೃತ್ತಿಯಾದ ವ್ಯಾಪಾರವನ್ನು ದೇಸಾಯರ ಮನೆತನವು ಅನುಸರಿಸುತ್ತಿರುತ್ತದೆ. ತದ ನಂತರ ಆಧುನೀಕರಣದ ಪ್ರಭಾವಕ್ಕೆ ಒಳಗಾಗಿ ಮರಗಳ ವ್ಯಾಪಾರದಲ್ಲಿ ತೊಡಗಿಕೊಳ್ಳುತ್ತದೆ.

೨. ಅಪ್ಪಾಸಾಹೇಬರು ತಮ್ಮ ವೃತ್ತಿಯ ಮೂಲಕ ಬ್ರಿಟೀಷ್ ಸಾಹೇಬರಿಗೆ ಬೇಕಾದ ಪೀಠೋಪಕರಣಗಳು, ಸಿಂಹಸನಗಳನ್ನು ಮಾಡಿಸಿಕೊಟ್ಟಿದ್ದಲ್ಲದೇ, ಅವರಿಗೋಸ್ಕರ ಗಾರ್ಡನ್ ಪಾರ್ಟಿಯನ್ನು ಏರ್ಪಡಿಸಿ ಉಡುಗೊರೆಗಳನ್ನು ನೀಡಿ, ಶ್ರೀಮಂತ ಜನರಿಂದ ಡೊನೇಷನ್ಸ್ ಸಂಗ್ರಹಿಸಿ 'ರಾವಸಾಹೇಬ' ಪದವಿ ಪಡೆದರು. ಇದು ಅಂದಿನ ಕೆಲವು ಅಧಿಕಾರಶಾಹಿ ರಾಜರುಗಳ ಗುಲಾಮಗಿರಿಯ ಸಂಕೇತವಾಗಿದೆ.

೩. ಈ ಕಾದಂಬರಿಯು ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯ ಹೋರಾಟವನ್ನು ಒಳಗೊಂಡಿದೆ. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಗಾಂಧೀವಾದಿಗಳು ದೇಸಾಯರ ಮನೆತನಕ್ಕೆ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡುತ್ತಾರೆ.

೪. ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಅಪ್ಪಾಸಾಹೇಬ ಬ್ರಿಟೀಷರು ತನಗೆ ನೀಡಿದ್ದ 'ರಾವಸಾಹೇಬ' ಪದವಿಯನ್ನು ಹಿಂದಿರುಗಿಸಿ ಚಳುವಳಿಯಲ್ಲಿ ಪಾಲ್ಗೊಂಡು ದೇಶಭಕ್ತರೆನಿಸಿಕೊಳ್ಳುತ್ತಾರೆ. ಹೀಗೆ ಈ ಮನೆತನವು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವುದನ್ನು ಕಾಣುತ್ತೇವೆ.

೫. ಸ್ವತಂತ್ರ ಭಾರತದಲ್ಲಿ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ ಅಪ್ಪಾಸಾಹೇಬರು ಚುನಾವಣೆಯಲ್ಲಿ ಗೆದ್ದು ಶಾಸಕರಾಗುತ್ತಾರೆ. ಆದರೆ ಏಕೀಕರಣದ ನಂತರವೂ ತಮ್ಮ ರಾಜಕೀಯ ಪ್ರಭಾವವನ್ನು ಉಳಿಸಿಕೊಳ್ಳಲಾಗದೆ ಚುನಾವಣೆಯಲ್ಲಿ ಸೋಲುತ್ತಾರೆ.

೬. ೧೯೭೩ ರಲ್ಲಿ ಬಂದಂತಹ 'ಭೂಕಾಯಿದೆ' ಇವರ ಮನೆತನದ ಮೇಲೂ ತನ್ನ ಪ್ರಭಾವವನ್ನು ಬೀರುತ್ತದೆ. 'ಉಳುವವನೇ ಒಡೆಯ' ಎಂಬ ನೀತಿಗೆ ಅನುಗುಣವಾಗಿ ದೇಸಾಯರ ಮನೆತನವು ತನ್ನ ಜಮೀನನ್ನು ಕಳೆದುಕೊಳ್ಳಬೇಕಾಗಿ ಬರುತ್ತದೆ.

೭. ವಿದ್ಯಾಭ್ಯಾಸದ ವಿಷಯ ಸಂಗ್ರಹಕ್ಕೆಂದು ಬಂದ ಆ್ಯಡಂ ದೇಸಾಯರ ಮನೆತನದೊಂದಿಗೆ ಹೊಂದಿಕೊಂಡು ಸಮಸ್ಯೆಗಳನ್ನು ಪರಿಹರಿಸುವ ಮೂಲಕ ತನ್ನ ಮೂಲ ಬೇರುಗಳ ಜೊತೆಗಿನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುತ್ತಾನೆ.

೮. ಅಭ್ಯಾಸದ ಸಲುವಾಗಿ ಜೈನಳಾದ ಆ್ಯನ್ ಮತ್ತೆ ತನ್ನ ಮೂಲಧರ್ಮದ ಕಡೆಗೆ ವಾಲುತ್ತಾಳೆ. ಇಲ್ಲಿ ಈ ಅಂಶವನ್ನು ಎಸ್.ಎಲ್.ಭೈರಪ್ಪನವರ 'ಆವರಣ',ಯು.ಆರ್. ಅನಂತಮೂರ್ತಿಯವರ 'ದಿವ್ಯ' ಮತ್ತು 'ಭವ' ಗಳೊಂದಿಗೆ ಸಹ ಹೋಲಿಸಿ ತೌಲನಿಕವಾಗಿ ಅಭ್ಯಾಸ ಮಾಡಲು ಇನ್ನೂ ಅವಕಾಶವಿದೆ.

ಆಕರ ಕಾದಂಬರಿಗಳು :

೧. ಮುಕ್ತಿ, ೧೯೬೧
೨. ವಿಕ್ಷೇಪ, ೧೯೭೧
೩. ಸೃಷ್ಟಿ, ೧೯೭೯
೪. ಸಂಬಂಧ, ೧೯೮೨
೫. ಬೀಜ, ೧೯೮೩
೬. ಅಂತರಾಳ, ೧೯೯೩
೭. ಓಂ ಣಮೋ, ೧೯೯೮

ಅಧ್ಯಾಯ : ಆರು

ಪುರುಷ ವ್ಯಕ್ತಿತ್ವಗಳ ಮೌಲ್ಯ ಸಂಘರ್ಷಗಳು

೬.೧. ಮುಕ್ತಿ : ಗೌರೀಶ

೬.೨. ವಿಕ್ಷೇಪ : ರಾಹುಲ

ಅಧ್ಯಾಯ : ಆರು

ಪುರುಷ ವ್ಯಕ್ತಿತ್ವಗಳ ಮೌಲ್ಯ ಸಂಘರ್ಷಗಳು

'ಮುಕ್ತಿ'ಯ ಗೌರೀಶ ಮತ್ತು 'ವಿಕ್ಷೇಪ'ದ ರಾಹುಲನ ಪಾತ್ರಗಳ ಹಿನ್ನೆಲೆಯಲ್ಲಿ

೬.೧ ಮುಕ್ತಿ : ಗೌರೀಶ

ಶಾಂತಿನಾಥ ದೇಸಾಯಿ ಅವರ ಕಾದಂಬರಿಗಳು ಹಾಗೂ ಕಥೆಗಳಲ್ಲಿನ ನಾಯಕರು ಬಹುತೇಕ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿರುವ, ಮಾನಸಿಕ ಅಭದ್ರತೆಯ, ವಿಕ್ಷಿಪ್ತ ಮನಃಸ್ಥಿತಿಯನ್ನು ಹೊಂದಿದ, ಬಿಡುಗಡೆಯನ್ನು ಬಯಸುವಂತಹ ನಾಯಕರಾಗಿದ್ದಾರೆ. ಅಲ್ಲದೆ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ, ಅದನ್ನು ಸಮರ್ಥವಾಗಿ ಎದುರಿಸಲಾರದೇ ಅತ್ಮಹತ್ಯೆಯನ್ನು ಮಾಡಿಕೊಳ್ಳುವಂತಹ ದುರ್ಬಲ ವ್ಯಕ್ತಿತ್ವವನ್ನು ಹೊಂದಿದವರಲ್ಲಿ ಪುರುಷರೇ ಹೆಚ್ಚು. ಪರಿಸ್ಥಿತಿಯನ್ನು ವಾಸ್ತವದೊಂದಿಗೆ ಎದುರಿಸಲಾರದೆ ಪಲಾಯನ ಮಾಡುವ ಪ್ರವೃತ್ತಿಯೂ ಕೂಡ ಹೆಚ್ಚಾಗಿ ಇವರ ಪುರುಷ ಪಾತ್ರಗಳಲ್ಲಿ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ತನ್ನ ಬದುಕಿನ ಭೂತದಿಂದ ಬಿಡುಗಡೆ ಹೊಂದಲು ಬಯಸುವ ಗೌರೀಶ ಮತ್ತು ಜವಾಬ್ದಾರಿಯಿಂದ ವಿಮುಖನಾಗ ಬಯಸುವ 'ವಿಕ್ಷೇಪ'ದ ರಾಹುಲನ ಪಾತ್ರಗಳ ಮೂಲಕ ದೇಸಾಯಿ ಅವರ ಕಥನ ಸಾಹಿತ್ಯದ ಪುರುಷ ವ್ಯಕ್ತಿತ್ವಗಳ ಮೌಲ್ಯ ಸಂಘರ್ಷಗಳ ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ದೇಸಾಯಿ ಅವರು ರಚಿಸಿದ 'ಮುಕ್ತಿ' (೧೯೬೧) ಕಾದಂಬರಿಯು ಕನ್ನಡದ ಪ್ರಥಮ ನವ್ಯ ಕಾದಂಬರಿ ಎಂದು ಪರಿಗಣಿತವಾಗಿದೆ. ಇಲ್ಲಿನ ಅಧ್ಯಯನಕ್ಕಾಗಿ ನಾಲ್ಕನೇ ಮುದ್ರಣ ೨೦೧೨ ಜೂನ್‌ದ ಪ್ರತಿಯನ್ನು ನಾನು ಬಳಸಿಕೊಂಡಿದ್ದೇನೆ. ಈ ಕಾದಂಬರಿಯಲ್ಲಿ ಭೂತವು ವರ್ತಮಾನದೊಂದಿಗೆ ಸಾಗುತ್ತಿರುತ್ತದೆ. ದಿನಚರಿಯ ರೂಪದಲ್ಲಿ ಸಾಗುವ ಈ ಇತಿಹಾಸದಲ್ಲಿ ಭೂತ ಮತ್ತು ವರ್ತಮಾನ ಕಾಲಗಳು, ಸಮುದ್ರದ ತೆರೆಗಳಂತೆ, ಒಂದರೊಳಗೊಂದು ಬೆರೆಯುತ್ತಾ ಸಾಗುತ್ತವೆ.

'ಮುಕ್ತಿ' ಕಾದಂಬರಿಯು ನಾಯಕ ಗೌರೀಶನ ದಿನಚರಿಯ ರೂಪದಲ್ಲಿನ ಆತ್ಮಕಥೆ.ಗೌರೀಶ ತನ್ನ ಭೂತದಿಂದ ಬಿಡುಗಡೆ ಹೊಂದಿ ತನಗೆ ಯಾರೂ ಗುರುತು ಪರಿಚಯವಿಲ್ಲದ ದೂರದ ಕತ್ತಲ ಖಂಡ ಆಫ್ರಿಕಾದ ನೈರೋಬಿಗೆ ತೆರಳಬೇಕೆಂದು ಆಲೋಚಿಸಿರುತ್ತಾನೆ. ದೂರ ಪರದೇಶದಲ್ಲಿ ಯಾರ ಬಂಧನಕ್ಕೂ ಒಳಗಾಗದೇ ಶುದ್ಧ ಅಪರಿಚಿತನಂತೆ ನಿರ್ವಿಕಾರವಾಗಿ ಬದುಕಲು ಓಡಿ ಹೋಗುತ್ತಿರುತ್ತಾನೆ. ಆದರೆ ಗೌರೀಶನ ಸ್ನೇಹಿತನಾದ ಸತ್ಯೇಂದ್ರನ ಪ್ರಕಾರ ನಾವು ನಮ್ಮ ಆತ್ಮದಿಂದ ದೂರ ಹೋಗುವುದು ಸಾಧ್ಯವಿಲ್ಲ. ಜೀವನ ಎಂದ ಮೇಲೆ ಎಲ್ಲಾ ತರಹದ ಅನುಭವಗಳು

ಬರುತ್ತವೆ. ಸ್ಮರಣ ಶಕ್ತಿ ಇರುವವರೆಗೆ ಜೀವನದಲ್ಲಿ ಆದುದನ್ನು ಮರೆಯುವುದು ಸಾಧ್ಯವಿಲ್ಲ. ಆದ್ದರಿಂದ ಬಂದ ಅನುಭವಗಳನ್ನು ಧೈರ್ಯದಿಂದ ಅಂಗೀಕರಿಸಿ, ನಗುತ್ತಾ ಜೀವನ ಸಾಗಿಸಬೇಕು. ಆದರೆ ಇಂತಹ ಧೈರ್ಯದ ಮನೋಭಾವ, ಬಂದುದನ್ನು ಬಂದಂತೆ ಸ್ವೀಕರಿಸುವ ಮನೋಧೈರ್ಯ ಗೌರೀಶನಲ್ಲಿ ಕಡಿಮೆಯೇ. ಹೀಗಾಗಿಯೇ ಆತ ತನ್ನ ಭೂತದಿಂದ ಬಿಡುಗಡೆ ಹೊಂದಬಯಸಿದರೂ ಕೂಡ ಸಂಪೂರ್ಣ ಬಿಡುಗಡೆಯನ್ನು ಹೊಂದುವುದು ಸಾಧ್ಯವಾಗುವುದಿಲ್ಲ . ಏಕೆಂದರೆ ಗೌರೀಶನ ಭೂತವನ್ನು ಪ್ರಭಾವಿಸಿದವರಲ್ಲಿ ಶ್ರೀಕಾಂತ ಮತ್ತು ಕಾಮಿನಿ ಪ್ರಮುಖರಾಗಿದ್ದು, ಇವರು ಗೌರೀಶನ ಗತ ಜೀವನದ ಮಧ್ಯವರ್ತಿ ಬಿಂದುಗಳಾಗಿರುತ್ತಾರೆ., ಅವನ ಗತ ಜೀವನದ ಪ್ರಮುಖ ಭಾಗವನ್ನು ರೂಪಿಸಿದ ಕರ್ತಾರರಾಗಿರುತ್ತಾರೆ. ಹೀಗಾಗಿಯೇ ತನ್ನ ಭವಿಷ್ಯತ್ತು ಕೂಡ ಇವರ ಪ್ರಭಾವದಿಂದ ಸ್ವತಂತ್ರವಾಗಲಾರದೇನೋ ಎಂಬ ಸಹಜ ಆತಂಕ ಗೌರೀಶನದ್ದು (ಪು. ೭).

ಗೌರೀಶ ಕಾಲೇಜು ವಿದ್ಯಾಭ್ಯಾಸಕ್ಕೆ ಸಿರ್ಸಿಯಿಂದ ಧಾರವಾಡಕ್ಕೆ ಬಂದಾಗ ತನ್ನದೇ ಊರಿನವನಾದ ಸತ್ಯೇಂದ್ರನ ಮೂಲಕ ಶ್ರೀಕಾಂತನ ಪರಿಚಯ ಆಗುತ್ತದೆ. ಬಿ.ಎ. ಅಭ್ಯಾಸ ಮಾಡುತ್ತಿದ್ದ ಶ್ರೀಕಾಂತನ ನೇರ ಮಾತುಗಳು, ಆತನ ವ್ಯಕ್ತಿತ್ವ ಗೌರೀಶನನ್ನು ಪ್ರಭಾವಿತಗೊಳಿಸುತ್ತದೆ. ಶ್ರೀಕಾಂತನ ವ್ಯಕ್ತಿತ್ವದ ಮುಂದೆ ಸತ್ಯೇಂದ್ರನ ವ್ಯಕ್ತಿತ್ವ ಬಾಡುತ್ತದೆ. ನಿರ್ವಣವಾಗುತ್ತದೆ. ಸಂಕೋಚದ ಸ್ವಭಾವವನ್ನು ಹೊಂದಿದ್ದ ಗೌರೀಶನಿಗೆ ಶ್ರೀಕಾಂತನ ವ್ಯಕ್ತಿತ್ವ ವಿದ್ಯುಚ್ಛಕ್ತಿಯಂತೆ ಭಾಸವಾಗುತ್ತದೆ. ಸತ್ಯೇಂದ್ರನ ಮೂಲಕ ಪ್ರಾರಂಭವಾದ ಶ್ರೀಕಾಂತ ಮತ್ತು ಗೌರೀಶನ ಪರಿಚಯ ಗೆಳೆತನವಾಗಿ, ಮುಂದೆ ಅವರಿಬ್ಬರ ನಡುವಿನ ಪ್ರೀತಿಯಾಗಿ ಪರಿಣಮಿಸುತ್ತದೆ.ಶ್ರೀಕಾಂತ ಹೇಳುವಂತೆ ಅವರಿಬ್ಬರ ಗೆಳೆತನ 'ಅಂಟಿದ ನಂಟು'. (ಪು. ೨೪)

ದುರ್ಬಲ ವ್ಯಕಿತ್ವದ ಗೌರೀಶ ಸದಾ ತನ್ನನ್ನು ಇತರರೊಂದಿಗೆ ಹೋಲಿಕೆ ಮಾಡಿಕೊಳ್ಳುವ ಮನೋಭಾವವನ್ನು ಹೊಂದಿರುತ್ತಾನೆ. ಆದರೆ ಶ್ರೀಕಾಂತನ ಪರಿಚಯವಾದ ನಂತರ ಶ್ರೀಕಾಂತನೇ ಅವನ ಆದರ್ಶವಾಗುತ್ತಾನೆ. ಶ್ರೀಕಾಂತನ ಸಹವಾಸದಿಂದಾಗಿ ಗೌರೀಶನೂ ಕೂಡ ತನ್ನ ವಿಚಾರಧಾರೆಗಳನ್ನು ಬದಲಾಯಿಸಿಕೊಂಡು ಸೋಶಿಯಲಿಸ್ಟನಾಗುತ್ತಾನೆ. ಕಾಲೇಜು ಚುನಾವಣಾ ಕೆಲಸ ಕಾರ್ಯಗಳಲ್ಲಿ ತನ್ನನ್ನು ತಾನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾನೆ. ಇದರಿಂದ ಅವನು ತನ್ನ ತಂದೆಯ ವಿರೋಧವನ್ನು ಎದುರಿಸಬೇಕಾಗಿ ಬರುತ್ತದೆ. ಶ್ರೀಕಾಂತನ ವಿಧೇಯ ಶಿಷ್ಯನಾದ ಗೌರೀಶ ಎಲ್ಲಾ ವಿಚಾರಗಳಲ್ಲೂ ಶ್ರೀಕಾಂತನನ್ನೇ ಅನುಸರಿಸುತ್ತಿರುತ್ತಾನೆ. ಮುಂದೆ ಕಾಲಕ್ರಮೇಣ ಶ್ರೀಕಾಂತ ಮತ್ತು ಗೌರೀಶರ ನಡುವೆ ಅಸಹಜ ಸ್ನೇಹ ಏರ್ಪಡುತ್ತದೆ. ಇದರ ಬಗ್ಗೆ ಸತ್ಯೇಂದ್ರನಿಗೆ ಅನುಮಾನವಿದ್ದರೂ ಕೂಡ ಗೌರೀಶ ಅದನ್ನು ನಿರಾಕರಿಸುತ್ತಾನೆ. ಶ್ರೀಕಾಂತನ ವಿದ್ಯಾಭ್ಯಾಸವೂ ಕೂಡ ಸುಸೂತ್ರವಾಗಿ ಸಾಗುತ್ತದೆ.ಶ್ರೀಕಾಂತನ ಬಿ.ಎ. ಅಭ್ಯಾಸವನ್ನು ಮಾಡಿಸುವ ಜವಾಬ್ದಾರಿಯನ್ನು ಹೊತ್ತ ಗೌರೀಶ ಅದರಲ್ಲಿ ಯಶಸ್ವಿಯಾಗುತ್ತಾನೆ. ಶ್ರೀಕಾಂತನಿಗೆ ಬಿ.ಎ. ಪರಿಕ್ಷೆಯಲ್ಲಿ ಫರ್ಸ್ಟ್ ಕ್ಲಾಸು ದೊರೆತು ಯುನಿವ್ಹರ್ಸಿಟಿಯ ಒಂದೆರಡು ಬಹುಮಾನಗಳೂ ದೊರೆಯುತ್ತವೆ.

ತನ್ನೆಲ್ಲ ಶ್ರೇಯಸ್ಸನ್ನೂ ಗೌರೀಶನಿಗೆ ಸಮರ್ಪಿಸಿದ ಶ್ರೀಕಾಂತನ ಪ್ರಕಾರ ಗೌರೀಶನ ಸಹಾಯ, ಸ್ಪೂರ್ತಿಗಳಿಲ್ಲದೆ ಇದ್ದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಆದರೆ ಗೌರೀಶನಿಗೆ ಇಂಟರ್ ಸಾಯನ್ಸ್‌ದಲ್ಲಿ

೫೦% ಅಂಕಗಳೊಂದಿಗೆ ಸೆಕೆಂಡ್ ಕ್ಲಾಸ್ ಬರುತ್ತದೆ. ಇದರಿಂದಾಗಿ ಗೌರೀಶನಿಗೆ ಎಂಜಿನಿಯರಿಂಗ್‌ಗೆ ಪ್ರವೇಶ ದೊರೆಯುವುದಿಲ್ಲ. ಆದರೆ ಗೌರೀಶನಿಗೆ ಇದರಿಂದಾಗಿ ಏನೂ ಹಾನಿಯಾಗಲಿಲ್ಲ. ಏಕೆಂದರೆ ಅವನಿಗೆ ಶ್ರೀಕಾಂತನನ್ನು ಬಿಟ್ಟು ಹೋಗುವುದೆಂದರೆ ಅದು ಅಸಾಧ್ಯದ ಮಾತಾಗಿರುತ್ತದೆ. ಶ್ರೀಕಾಂತನಿಂದ ದೂರವಾಗುವುದು ಗೌರೀಶನಿಗೆ ಶಕ್ಯವಿರಲಿಲ್ಲ. ಹೀಗಾಗಿ ಆತ ಕೇವಲ ತೋರಿಕೆಗಾಗಿ ಮಾತ್ರ ತಾನು ತನ್ನ ಫಲಿತಾಂಶದಿಂದ ನಿರಾಶನಾದಂತೆ ತೋರ್ಪಡಿಸಿಕೊಳ್ಳುತ್ತಾನೆ. ಎಂಜಿನಿಯರಿಂಗ್‌ಗೆ ಪ್ರವೇಶ ದೊರೆಯದ ಕಾರಣ ಗೌರೀಶ ಧಾರವಾಡದಲ್ಲಿಯೇ ಬಿ.ಎಸ್ಸಿಗೆ ಸೇರಿಕೊಳ್ಳುತ್ತಾನೆ. ಶ್ರೀಕಾಂತನೂ ಕೂಡ ಎಂ.ಎ. ಅಭ್ಯಾಸ ಮಾಡುತ್ತಿರುತ್ತಾನೆ.

ಇಷ್ಟರಲ್ಲಿ ಗೌರೀಶನಿಗೆ ಶ್ರೀಕಾಂತನ ತಂಗಿ ಕಾಮಿನಿ ಹೊಸ ರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಅವಳನ್ನು ಪ್ರೀತಿಸತೊಡಗಿದ ಗೌರೀಶ ತನ್ನಲ್ಲೇ ವಿಷಯವನ್ನು ಬಚ್ಚಿಟ್ಟುಕೊಳ್ಳುತ್ತಾನೆ. ಎಲ್ಲಾ ವಿಷಯಗಳನ್ನು ಶ್ರೀಕಾಂತನೊಂದಿಗೆ ಹಂಚಿಕೊಳ್ಳುವ ಗೌರೀಶ, ಅವನ ತಂಗಿ ಕಾಮಿನಿಯನ್ನು ತಾನು ಪ್ರೀತಿಸುತ್ತಿರುವ ವಿಚಾರವನ್ನು ಶ್ರೀಕಾಂತನಿಗೆ ಹೇಳುವುದಿಲ್ಲ. ಏಕೆಂದರೆ ಈ ವಿಚಾರ ತಿಳಿದರೆ ಶ್ರೀಕಾಂತನೆಲ್ಲಿ ತನ್ನಿಂದ ದೂರವಾಗುತ್ತಾನೋ ಎಂಬ ಆತಂಕ ಗೌರೀಶನದ್ದಾಗಿರುತ್ತದೆ. ಜೊತೆಗೆ ಶ್ರೀಕಾಂತನಿಗೆ ತನ್ನ ಇಂಥ ಭಾವನೆಗಳು ಸೇರದಿದ್ದರೆ, ತಂಗಿಯ ಬಗ್ಗೆ ಅವನ ಅಪೇಕ್ಷೆಗಳು ಬೇರೆ ಏನಾದರೂ ಇದ್ದರೆ ಅಥವಾ ಅವನಲ್ಲಿ ಅಸೂಯೆ ಉತ್ಪನ್ನವಾದರೆ– ಎಂಬ ಭಯ ಗೌರೀಶನದ್ದಾಗಿರುತ್ತದೆ. ಹೀಗಾಗಿ ಗೌರೀಶ ತನ್ನ ಪ್ರೀತಿಯ ವಿಚಾರವನ್ನು ಮುಚ್ಚಿಟ್ಟು ಶ್ರೀಕಾಂತನೊಡನೆ ಸಹಜವಾಗಿಯೇ ಇರುತ್ತಾನೆ. ಶ್ರೀಕಾಂತ ಸೀನಿಯರ್ ಎಂ.ಎ.ದಲ್ಲಿ ಇರುವಾಗಲೇ ಅವನ ಆರೋಗ್ಯ ಪ್ರವೃತ್ತಿ ಕೆಡುತ್ತಿರುತ್ತದೆ. ಬಹಳ ಮಾತನಾಡಿದರೆ, ಸ್ವಲ್ಪ ಜಾಸ್ತಿ ತಿರುಗಾಡಿದರೆ, ಬಹಳ ಹೊತ್ತು ಅಭ್ಯಾಸ ಮಾಡಿದರೆ ಅವನಿಗೆ ತುಂಬಾ ದಣಿವಾಗತೊಡಗುತ್ತದೆ. ಅಲ್ಲದೆ ಆಗೀಗ ಜ್ವರ ಬರುತ್ತಿರುತ್ತದೆ.

ಗೌರೀಶ ತನ್ನ ಬಿ.ಎಸ್ಸಿ. ಪರೀಕ್ಷೆ ಮುಗಿದಾದ ಮೇಲೆ ಊರಿಗೆ ತನ್ನ ಊರಿಗೆ ಹೋಗಿರುತ್ತಾನೆ. ಜೂನ್‌ನಲ್ಲಿ ಮಧ್ಯಾಹ್ನದ ರಣ ರಣ ಬಿಸಿಲಿನಲ್ಲಿ ಇಳೆ ಮಳೆಗಾಗಿ ಕಾತರಿಸಿ ಕುಳಿತಿರುವಂತೆ ಗೌರೀಶ ವರ್ತಮಾನ ಪತ್ರಿಕೆಯನ್ನು ಓದುವ ನಟನೆ ಮಾಡುತ್ತಾ ಶ್ರೀಕಾಂತನ ಪತ್ರಕ್ಕಾಗಿ ಕಾತರದಿಂದ ಕಾಯುತ್ತಿರುತ್ತಾನೆ. ನಿರೀಕ್ಷೆಯಂತೆಯೇ ಬಂದ ಶ್ರೀಕಾಂತನ ಪತ್ರ ಗೌರೀಶನಿಗೆ ಆತಂಕಕಾರಿ ಸುದ್ದಿಯೊಂದನ್ನು ಹೊತ್ತು ತರುತ್ತದೆ. ಅದೆಂದರೆ ಆ ಪತ್ರದಲ್ಲಿ ಶ್ರೀಕಾಂತ ತನಗೆ ಟಿ.ಬಿ. ಇರುವುದಾಗಿ ಬರೆದಿರುತ್ತಾನೆ. "ನನಗೆ ಟೀ.ಬಿಯಂತೇ! ಅಯ್ಯೋ, ನಾನು ಸತ್ತೆ .. ಗೌರೀ, ಗೌರೀ, ಬೇಗ ಬಾ.. ನಿನ್ನ ಸಾನಿಧ್ಯವೆಂದರೆ ನನಗೆ ಅಮೃತ..." (ಪು. ೭೫) "ಗೌರೀ, ನಿನ್ನ ಪ್ರೀತಿಯ ಆಸರೆ ಬೇಕು. ಸ್ಫೂರ್ತಿ ಬೇಕು" (ಪು. ೭೬). ಪತ್ರವನ್ನು ಓದಿದ ಗೌರೀಶನ ಮನದಲ್ಲಿ ಅಂದು ಮೂಡಿದ ನೋವು ನಿರಂತರ ಮುಳ್ಳು, ಅವನ ಆತ್ಮದಲ್ಲಿ ಅಂದು ಒಂದು ಭಯಂಕರವಾದ ಭೀತಿ ಸೇರಿಕೊಳ್ಳುತ್ತದೆ. ಶ್ರೀಕಾಂತನ ಪತ್ರ ಬಂದ ಮಾರನೇ ದಿನವೇ ಗೌರೀಶ ಗಡಬಡಿಸಿ ಧಾರವಾಡಕ್ಕೆ ಓಡುತ್ತಾನೆ. ನಾವು ಇಲ್ಲಿ ಗೌರೀಶನ ಆತಂಕವನ್ನು, ತಲ್ಲಣವನ್ನು ಗುರುತಿಸಬಹುದಾಗಿದೆ.

ಧಾರವಾಡದಲ್ಲಿ ಭಾರವಾದ ಹೃದಯದಿಂದಲೇ ಶ್ರೀಕಾಂತನನ್ನು ಭೇಟಿ ಮಾಡಿದ ಗೌರೀಶ ಆತನ ಆರೈಕೆಗಾಗಿ ತಾನು ಧಾರವಾಡದಲ್ಲೇ ಉಳಿಯುವ ನಿರ್ಧಾರ ಮಾಡುತ್ತಾನೆ. ಆದರೆ ತನ್ನ

ತಂದೆಗೆ ಮಿತವ್ಯಯದ ಕಾರಣ ಹಾಗೂ ಮುಂಬಯಿಯ ಒಬ್ಬ ಒಳ್ಳೆ ಪ್ರೊಫೆಸರರು ಇಲ್ಲಿಗೆ ವರ್ಗವಾಗಿ ಬಂದಿರುವುದರಿಂದ ತಾನು ಧಾರವಾಡದಲ್ಲೇ ಎಂ.ಎಸ್ಸಿ.ಗೆ ಸೇರಿಕೊಳ್ಳುತ್ತಿರುವುದಾಗಿ ತಿಳಿಸುತ್ತಾನೆ. ಗೌರೀಶ ಮುಂಬಯಿಗೆ ಹೋಗಬೇಕೆಂದು ಮಾಡಿದ್ದ ತೀರ್ಮಾನದ ಬಗ್ಗೆ ಏನೂ ತಿಳಿಯದ ಶ್ರೀಕಾಂತನಿಗೆ ಗೌರೀಶನ ನಿರ್ಧಾರ ಸಹಜವಾದದ್ದು ಎಂದೆನಿಸುತ್ತದೆ. ಈ ರೀತಿಯಾಗಿ ತನ್ನ ಭವಿಷ್ಯತ್ತಿಗೆ ಮುಂಬಯಿಯಲ್ಲಿ ಉಜ್ವಲ ಅವಕಾಶಗಳಿದ್ದರೂ ಕೂಡ ಗೌರೀಶ ಅವೆಲ್ಲವುಗಳನ್ನು ತಿರಸ್ಕರಿಸಿ ಶ್ರೀಕಾಂತನಿಗಾಗಿ ಧಾರವಾಡದಲೇ ಉಳಿಯುತ್ತಾನೆ. ಜೊತೆಗೆ ಅವನು ಕಾಮಿನಿಯನ್ನು ಪ್ರೀತಿಸುತ್ತಿದ್ದ ಕಾರಣವೂ ಒಂದಾಗಿರುತ್ತದೆ.

ಶ್ರೀಕಾಂತನು ತನ್ನ ಕಾಯಿಲೆಯ ನೆಪದಿಂದ ಗೌರೀಶನನ್ನು ತನ್ನ ಕೋಣೆಯಲ್ಲಿ ಮಲಗಿಸಿಕೊಳ್ಳಲು ಒಪ್ಪುವುದಿಲ್ಲ 'ನಾನು ಸಂಪೂರ್ಣ ನೆಟ್ಟಗಾಗುವವರೆಗೆ ನೀನು ನನ್ನ ರೂಮಿನಲ್ಲಿ ಬಹಳ ಹೊತ್ತು ಕೂಡ್ರಬೇಡ.. ನೀನು ಜೀವಿಸಬೇಕು.. ಗೌರೀ ಈ ಟೀ.ಬಿ.ಯ ಬ್ಯಾಸಿಲಸ್ಸುಗಳೆಂದರೆ ಮಹಾ ದ್ರೋಹಿಗಳು.. ಮೊದಲಿನಿಂದಲೇ ನಾವು ಜೋಕೆಯಿಂದಿದ್ದರೆ ನೆಟ್ಟಗೆ ಅಲ್ಲವೇ..." (ಪು. ೯೧) ಎಂಬುದು ಶ್ರೀಕಾಂತ ಅಭಿಪ್ರಾಯವಾಗಿರುತ್ತದೆ. ತನ್ನಿಂದಾಗಿ ಎಲ್ಲಿ ಗೌರೀಶನಿಗೆ ಟಿ.ಬಿ ಕಾಯಿಲೆ ಬಂದು ಬಿಡುವುದೋ ಎಂಬುದು ಶ್ರೀಕಾಂತನ ಕಾಳಜಿಯಾಗಿರುತ್ತದೆ. ಆದರೆ ಇದು ಗೌರೀಶನಲ್ಲಿ ಅಭದ್ರತೆಯ ಭಾವನೆಯನ್ನು ಬಿತ್ತುತ್ತದೆ. ತನ್ನ ಕಾಯಿಲೆಯಿಂದಾಗಿ ದಿನೇ ದಿನೇ ಕೃಶನಾಗುತ್ತಾ ಸಾಗಿದ ಶ್ರೀಕಾಂತನಿಗೆ ಗೌರೀಶ ತನ್ನ ಮತ್ತು ಕಾಮಿನಿಯ ಪ್ರೇಮ ವಿಚಾರವನ್ನು ತಿಳಿಸುತ್ತಾನೆ.ಆದರೆ ಈ ಬಗ್ಗೆ ಶ್ರೀಕಾಂತನಿಗೆ ಬಹಳ ದಿನಗಳಿಂದಲೂ ಸಂಶಯ ಇರುತ್ತದೆ. ಆದರೂ ಒಂದು ವೇಳೆ ಹಾಗೇನಾದರೂ ಇದ್ದರೆ ಗೌರೀಶನೇ ತನ್ನೊಂದಿಗೆ ಹೇಳುತ್ತಿದ್ದನೆಂಬುದು ಶ್ರೀಕಾಂತನ ನಂಬಿಕೆಯಾಗಿರುತ್ತದೆ. ಗೌರೀಶನೇ ವಿಚಾರವನ್ನು ಪ್ರಸ್ತಾಪಿಸಿದಾಗ ಶ್ರೀಕಾಂತನು "ಕಾಮಿನಿಗೆ ಗೌರೀಶನಂತ ಭಾವನಾ ಪ್ರಧಾನ ಸರಳ- ಮಳ್ಳ ಹುಡುಗ ಆಗುವುದಿಲ್ಲ. ಕಾಮಿನಿಯನ್ನು ಲಗ್ನವಾಗುವಂಥವನು ಅಂಥಿಂಥ ಹುಡುಗನಾಗಿದ್ದರೆ ಆಗದು. ಅವಳನ್ನು ಸುಧಾರಿಸಲು, ಅವಳನ್ನು Normal, ಒಳ್ಳೆಯವಳನ್ನಾಗಿ ಮಾಡಲು ಅವಳನ್ನು ಪ್ರೀತಿಸುವ ಮನುಷ್ಯನೇ ಬೇಕು". ಎಂದು ಹೇಳುತ್ತಾನೆ (ಪು. ೧೧೯). ಗೌರೀಶ ತಮ್ಮಿಬ್ಬರ ಪ್ರೀತಿ ಬಲವಾಗಿದೆ ಎಂಬುದನ್ನು ಮನದಟ್ಟು ಮಾಡಿಸುತ್ತಾನೆ. ಆದರೆ ಶ್ರೀಕಾಂತ ಗೌರೀಶನು ತಾನಾಗಿಯೇ ತಮ್ಮ ಪ್ರೇಮವನ್ನು ದೃಢಪಡಿಸಬೇಕೆಂದು ಹೇಳುತ್ತಾನೆ. ಅವರಿಬ್ಬರ ಮಧ್ಯೆ ಎಲ್ಲವೂ ನಿಶ್ಚಿತವಾದ ಮೇಲೆ ತಾನು ಸಹಾಯ ಮಾಡುವುದಾಗಿ ಹೇಳುತ್ತಾನೆ.

ಶ್ರೀಕಾಂತ ತನ್ನ ಕಾಯಿಲೆಯ ದೆಸೆಯಿಂದಾಗಿ ಗೌರೀಶನಿಂದ ಕೊಂಚ ಕೊಂಚ ವಿಮುಖನಾಗತೊಡಗುತ್ತಾನೆ. ಸಾವಕಾಶವಾಗಿ ಅವನ ಆಸರೆ ಸಡಿಲವಾಗಲು ಶುರುವಾಗುತ್ತದೆ. ಆದರೆ ವಾನ್‌ಲೆಸ್ ವಾಡಿಯಲ್ಲಿ ತಿಂಗಳ ಮಟ್ಟಿಗೆ ಗೌರೀಶನೇ ಶ್ರೀಕಾಂತನ ನರ್ಸಾಗುತ್ತಾನೆ. ಆ ಮೂಲಕ ತನ್ನಲ್ಲಿ ಇಲ್ಲದ ಒಂದು ಬಗೆಯ ಶಕ್ತಿ ಅಭಿಮಾನವನ್ನು ಗೌರೀಶ ಮೈಗೂಡಿಸಿಕೊಳ್ಳತೊಡಗುತ್ತಾನೆ. ಆದರೆ ಶ್ರೀಕಾಂತ ಹೆಚ್ಚೆಚ್ಚು ಮರಣದ ಬಗ್ಗೆಯೇ ಚಿಂತಿಸತೊಡಗುತ್ತಾನೆ. 'ಮೃತ್ಯುಪ್ರಜ್ಞೆ' ಆತನನ್ನು ಹೆಚ್ಚು ಕಾಡತೊಡಗುತ್ತದೆ. ಮರಣದ ಬಗ್ಗೆಯೇ

ಹೆಚ್ಚೆಚ್ಚು ಆಲೋಚನೆ ಮಾಡುತ್ತಿದ್ದ ಅವನಿಗೆ ಮರಣದ ಭಯವೇ ಇಲ್ಲದಂತಾಗುತ್ತದೆ. ತನ್ನ ಅಭ್ಯಾಸದ ಕಾರಣದಿಂದ ಗೌರೀಶ ಧಾರವಾಡಕ್ಕೆ ಮರಳಿದ ನಂತರ ಬರ ಬರುತ್ತಾ ಶ್ರೀಕಾಂತನ ಪತ್ರಗಳು ಬಹಳ ಸಂಕ್ಷಿಪ್ತವಾಗತೊಡಗುತ್ತವೆ. ಟೀ.ಬಿ.ಕಾಯಿಲೆಯಿಂದಾಗಿ ಶ್ರೀಕಾಂತ ತನ್ನ ಒಂದು ಪುಪ್ಪುಸವನ್ನೇ ಕಳೆದುಕೊಳ್ಳಬೇಕಾಗಿ ಬರುತ್ತದೆ. ಇದರಿಂದಾಗಿ ಶ್ರೀಕಾಂತನಲ್ಲಿ ಔದಾಸೀನ್ಯವಿರುತ್ತದೆ. ಇದನ್ನು ಗುರುತಿಸಿದ ಗೌರೀಶ ಅವನಲ್ಲಿ ಉತ್ಸಾಹ ಮೂಡಿಸುವ ಮಾತುಗಳನ್ನಾಡತೊಡಗುತ್ತಾನೆ.

ಶ್ರೀಕಾಂತ ಮೇರಿ ಸಿಸ್ಟರನ ಬಗ್ಗೆ ತನಗುಂಟಾದ ಶುದ್ಧ ಲೈಂಗಿಕತೆಯ ಕಲ್ಪನೆಯನ್ನು ತಿಳಿಸುತ್ತಾನೆ. ಇದನ್ನು ಕೇಳಿದ ಗೌರೀಶನಿಗೆ ಶ್ರೀಕಾಂತನ ಅವನತಿಯಾದಂತೆ, ಅವನ ಆತ್ಮ ಅಧೋಗತಿಗೆ ಇಳಿದಂತೆ ಭಾಸವಾಗುತ್ತದೆ. ಲೈಂಗಿಕ ವಿಷಯಗಳ ಬಗ್ಗೆ ಎಂದೂ ಮಾತನಾಡದ ಶ್ರೀಕಾಂತ ಒಮ್ಮೆಲೆ ಇಂಥ ಆತ್ಮ ನಿವೇದನೆ ಮಾಡಿದ್ದು, ಗೌರೀಶನನ್ನು ವಿಸ್ಮಯಗೊಳಿಸುತ್ತದೆ. ತನ್ನ ಬದುಕಿನ 'ಆದರ್ಶ ವ್ಯಕ್ತಿ, ನಕ್ಷತ್ರ'ದ ಈ ನೈತಿಕ ಅವನತಿಯಿಂದ ಗೌರೀಶನ ಪ್ರತೀಕಕ್ಕೆ ಭಂಗ ಬಂದಂತಾಗುತ್ತದೆ. ಅವನ ಮೌಲ್ಯಗಳ ಶ್ರದ್ಧೆಗೆ ಆಘಾತವುಂಟಾಗುತ್ತದೆ. ಶ್ರೀಕಾಂತನು ತನ್ನ ಬಗ್ಗೆ ವಿಶೇಷ ಆಸ್ಥೆ ತೋರಿಸದೆ ಇರುವುದನ್ನು, ಕಾಮಿನಿಯ ಬಗ್ಗೆ ಏನನ್ನೂ ಕೇಳದೇ ಇರುವುದನ್ನು ಗಮನಿಸಿದ ಗೌರೀಶನಿಗೆ ವ್ಯಥೆಯುಂಟಾಗುತ್ತದೆ. ಆತನ ಹೃದಯ ಒಳಗೊಳಗೇ ಬಾಡುತ್ತದೆ, ಮುದುಡುತ್ತದೆ. ಅಲ್ಲದೇ ಶ್ರೀಕಾಂತನ ಪ್ರೇಮ–ಸಹಾನುಭೂತಿಗಳಲ್ಲಿಯೂ ಕೂಡ ಏನೋ ಕೊರತೆಯುಂಟಾಗಿದೆ ಎಂದು ಅನ್ನಿಸತೊಡಗುತ್ತದೆ. ನಿಮಗೆ ಅನಿಸಿದ್ದನ್ನು ಮಾಡಲು ನೀವಿಬ್ಬರೂ ಸ್ವತಂತ್ರರು ಎಂಬ ಶ್ರೀಕಾಂತನ ಮಾತು ಗೌರೀಶನಿಗೆ ಆಘಾತವುಂಟು ಮಾಡುತ್ತದೆ. ಶ್ರೀಕಾಂತನ ನಿರ್ಲಿಪ್ತತೆ ಅವನನ್ನು ತುಂಬಾ ಕಾಡುತ್ತದೆ. ಶ್ರೀಕಾಂತನ ಮೌನ ಗೌರೀಶನನ್ನು ದುಸ್ಸಾಹವಾದ, ಭಾರವಾದ, ಸ್ವಯಂಪ್ರಜ್ಞಾ ಪೀಡಿತ ನೋವಿಗೆ ದೂಡುತ್ತಿರುತ್ತಿತ್ತು. ಅಲ್ಲದೆ ಶ್ರೀಕಾಂತ ತನ್ನನ್ನು ತಾನು ತಲೆಯನ್ನು ತಿಪ್ಪಿ ಮಾಡುವ ತಲೆತಿರುಕನಂತೆ ಭಾವಿಸುತ್ತಾನೆ. ತನ್ನಿಂದ ಗೌರೀಶನಿಗೆ ಯಾವುದೇ ಉಪಯೋಗವಿಲ್ಲವೆಂಬುದು ಆತನ ಅಭಿಮತವಾಗಿರುತ್ತದೆ.

ಆದರೆ ಶ್ರೀಕಾಂತನನ್ನು ಬಿಟ್ಟು ಹೋಗುವುದೆಂದರೆ ಗೌರೀಶನಿಗೆ 'ಭಯಂಕರ ಏಕಾಕಿತನ'. ಶ್ರೀಕಾಂತನ ಪ್ರಕಾರ ಗೌರೀಶನ ಮುಂದಿನ ಬೆಳವಣಿಗೆಗೆ ಈ ಏಕಾಕಿತನದ ಅವಶ್ಯಕತೆ ಇರುತ್ತದೆ. ಗೌರೀಶ ಶ್ರೀಕಾಂತನ ಮಾತಿನಂತೆ, ಸತ್ಯೇಂದ್ರನ ಸಲಹೆಯಂತೆ ಮುಂಬಯಿಗೆ ಬರುತ್ತಾನೆ. ಶ್ರೀಕಾಂತನು ಕೂಡ ತನ್ನ ಖಾಯಿಲೆಯಿಂದಾಗಿ ತನ್ನದೇ ಆದ ತ್ರಿಶಂಕು ಲೋಕವನ್ನು ಸೇರಿಕೊಂಡಿರುತ್ತಾನೆ. ಅಲ್ಲಿಂದಲೇ ಗೌರೀಶನಿಗೆ ಬರೆದ ಪತ್ರವೂ ಸುಳ್ಳಾಗಿರುತ್ತದೆ. ಏಕೆಂದರೆ ಅವನ ಇದ್ದ ಒಂದು ಪುಪ್ಪುಸಕ್ಕೂ ರೋಗ ಅಂಟಿಕೊಂಡಿರುತ್ತದೆ. ಆದ್ದರಿಂದ ತನ್ನ ದುಃಖದ ಝಳ ಅವರ ಮೇಲಾಗಬಾರದು ಎಂಬುದು ಶ್ರೀಕಾಂತನ ಆಲೋಚನೆ ಆಗಿರುತ್ತದೆ. ಗೌರೀಶನಿಗೆ ಮಾತ್ರ ಶ್ರೀಕಾಂತನ ಕಾಯಿಲೆ ಗಂಭೀರ ಸ್ವರೂಪ ತಳೆದಿರಬಹುದೆಂಬ ಕಲ್ಪನೆ ಕನಸು ಮನಸಿನಲ್ಲಿಯೂ ಸುಳಿದಿರುವುದಿಲ್ಲ. ಮುಂಬಯಿಯ ಒಂದು ವರ್ಷದ ಜೀವನದ ಪ್ರಭಾವದಿಂದಾಗಿ ಗೌರೀಶನಲ್ಲಿ ಒಂದು ಬಗೆಯ ವಸ್ತುನಿಷ್ಠತೆ ಬಂದಿರುತ್ತದೆ. ಶ್ರೀಕಾಂತನ ವೇದನೆಯ ಕಲ್ಪನೆಯೇ ಗೌರೀಶನಿಗೆ ಇರುವುದಿಲ್ಲ. ಬರಬರುತ್ತಾ ಶ್ರೀಕಾಂತನ ಪತ್ರಗಳು ಮತ್ತಷ್ಟು ಸಂಕ್ಷಿಪ್ತಗೊಳ್ಳತೊಡಗುತ್ತವೆ. ಕೊನೆಗೆ ಗೋಪಾಲನಿಂದ

'ಶ್ರೀಕಾಂತ ಆತ್ಮಹತ್ಯೆ ಮಾಡಿಕೊಂಡ. ಬಾ ಬೇಕಾದರೆ' ಎಂಬ ತಾರು ಗೌರೀಶನ ಕೈ ಸೇರುತ್ತದೆ. ಶ್ರೀಕಾಂತನ ಆತ್ಮಹತ್ಯೆ ಗೌರೀಶನಿಗೆ ಸಹಿಸಿಕೊಳ್ಳಲಾಗದ ಆಘಾತವನ್ನು ನೀಡುತ್ತದೆ "ಅಯ್ಯೋ, ಶ್ರೀಕಾಂತ... ನಾನೂ ಸತ್ತೆ ..." (ಪು. ೨೧೧) ಎಂದು ಗೌರೀಶ ನೀಡುವ ಪ್ರತಿಕ್ರಿಯೆ ಶ್ರೀಕಾಂತನ ಸಾವಿನೊಂದಿಗೆ ಗೌರೀಶನೂ ಕೂಡ ತನ್ನ ಅಸ್ತಿತ್ವವನ್ನು ಕಳೆದುಕೊಂಡದ್ದನ್ನು ತಿಳಿಸುತ್ತದೆ. ಶ್ರೀಕಾಂತನ ವ್ಯಕ್ತಿತ್ವದ ನೆರಳಿನಲ್ಲೇ ಬೆಳೆದ ಗೌರೀಶ ಶ್ರೀಕಾಂತನ ಆತ್ಮಹತ್ಯೆಯೊಂದಿಗೆ ತನ್ನ ಅಸ್ತಿತ್ವವನ್ನೂ, ವ್ಯಕ್ತಿತ್ವವನ್ನೂ ಕಳೆದುಕೊಂಡು' ಸೂರ್ಯನ ಬೆಳಕಿಲ್ಲದ ಚಂದ್ರನಂತೆ ಆಗುತ್ತಾನೆ.

ಗೌರೀಶನ ಭೂತಕಾಲವನ್ನು ಪ್ರಭಾವಿಸಿದ ಪ್ರಮುಖರಲ್ಲಿ ಶ್ರೀಕಾಂತನ ತಂಗಿ ಕಾಮಿನಿಯೂ ಒಬ್ಬಳು. ಗೌರೀಶನು ಶ್ರೀಕಾಂತನ ಮನೆಗೆ ಹೋಗಿ ಬರುತ್ತಿದ್ದರೂ ಕೂಡ ಕಾಮಿನಿಯ ಬಗ್ಗೆ ವಿಶೇಷವಾದ ಆಸ್ಥೆಯನ್ನು ಪ್ರಾರಂಭದಲ್ಲಿ ಹೊಂದಿರುವುದಿಲ್ಲ. ತನಗೂ ಇಂಥ ಒಬ್ಬ ತಂಗಿಯಿದ್ದಿದ್ದರೆ – ಎಂಬ ಆಲೋಚನೆ ಗೌರೀಶನ ಮನದಲ್ಲಿ ಮೂಡುತ್ತಿರುತ್ತದೆ. ಆದರೆ ಗೌರೀಶ ಜ್ಯೂನಿಯರ ಬಿ.ಎಸ್ಸಿ.ಯಲ್ಲಿದ್ದಾಗ ಕಾಮಿನಿ ಆತನ ಕ್ಷಿತಿಜದಲ್ಲಿ ಸ್ಪಷ್ಟವಾಗಿ ಮೂಡುತ್ತಾಳೆ. ಬಹುಶಃ ಆಗಲೇ ಗೌರೀಶನ ಮನದಲ್ಲಿ ಬಿತ್ತಲ್ಪಟ್ಟ ಪ್ರೇಮದ ಬೀಜ ಶ್ರೀಕಾಂತನ ಪ್ರಭಾವದ ಮೂಲಕ ಅಂತರ್ಮನದಲ್ಲಿಯೇ ಉಳಿದು ಎರಡು ವರ್ಷಗಳ ನಂತರ ವರೆಯಿಂದ ಹೊರ ಬಿದ್ದ ಖಡ್ಗದಂತೆ ಬೆಳೆದಿರಬೇಕು. ಜೋಗಕ್ಕೆ ಎಲ್ಲರೊಂದಿಗೂ ಹೋದಾಗ ಕಾಮಿನಿಯ ಶಕ್ತಿಶಾಲಿ ವ್ಯಕ್ತಿತ್ವದ ಪರಿಚಯ ಗೌರೀಶನಿಗೆ ಆಗುತ್ತದೆ. ಕಾಮಿನಿಗೆ ಅನಿರೀಕ್ಷಿತವಾಗಿ ಜೋಗದಲ್ಲಿ ಚುಂಬನವನ್ನು ನೀಡಿದ ಗೌರೀಶನಿಗೆ 'ಜೀವನದಲ್ಲಿಯೇ ಮೊದಲ ಸಲ ಅವನ ಸ್ವಂತ ಶಕ್ತಿಯ ಮೇಲೆ ಒಂದು ಕಾರ್ಯ ಮಾಡಿದ ಭಾವನೆ ಉಂಟಾಗುತ್ತದೆ' (ಪು. ೪೯). ಆದರೂ ಎಷ್ಟೋ ದಿನಗಳವರೆವಿಗೂ ತಾನು ತಪ್ಪು ಮಾಡಿದೆ ಎಂಬ ಭಾವನೆ ಅವನ ಮನದಲ್ಲಿರುತ್ತದೆ. ಕಾಮಿನಿ ಮ್ಯಾಟ್ರಿಕ್‌ನಲ್ಲಿದ್ದಾಗ ಅವಳು ಗೌರೀಶನ ಕೇಂದ್ರವಾಗುತ್ತಾಳೆ. ಗೌರೀಶನ ಜೀವನದಲ್ಲಿ ಶ್ರೀಕಾಂತನಷ್ಟೇ ಮಹತ್ವವನ್ನು ಕಾಮಿನಿ ಪಡೆದುಕೊಳ್ಳುತ್ತಾಳೆ. ಕಾಮಿನಿಯನ್ನು ಪ್ರೀತಿಸತೊಡಗಿದ ಗೌರೀಶ ಅವಳನ್ನು ಸಂಪೂರ್ಣವಾಗಿ ತನ್ನವಳು ಎಂದೇ ಭಾವಿಸತೊಡಗುತ್ತಾನೆ. ಹೀಗಾಗಿಯೇ ಕಾಮಿನಿ ತನ್ನ ಶಾಲೆಯ ಡ್ರಾಯಿಂಗ್ ಮಾಸ್ತರರ ಜೊತೆ ಇದ್ದುದನ್ನು ಕೂಡ ಸಹಿಸಲಾರದಷ್ಟು ಅಸಹನೆ ಅವನಲ್ಲಿ ಎದ್ದು ಕಾಣುತ್ತಿರುತ್ತದೆ. ಕಾಮಿನಿ ಕುಂದಾ ಕುಮಠೇಕರಳ ಮನೆಗೆ ಅಭ್ಯಾಸಕ್ಕೆ ಹೋಗುತ್ತಿರುವುದನ್ನು ತಿಳಿದಾಗ ಗೌರೀಶನಿಗೆ ತುಂಬಾ ನೋವಾಗುತ್ತದೆ. ಅವನ ಈ ನೋವಿಗೆ ಕಾರಣ ಕುಂದಾ ಕುಮಠೇಕರಳ ಮನೆಯಲ್ಲಿ ಪಾಠ ಮಾಡುತ್ತಿದ್ದುದು ಕಾಮಿನಿಯ ಡ್ರಾಯಿಂಗ್ ಮಾಸ್ತರರು! ಕಾಮಿನಿಯ ವರ್ತನೆಗಳು ಸಹಜವಾಗಿಯೇ ಇರುತ್ತವೆ. ಜೋಗದ ಘಟನೆಯ ನಂತರ ಗೌರೀಶ ಕಾಮಿನಿಯನ್ನು ಒಂದು ಸಲವೂ ಆಲಂಗಿಸದಿದ್ದರೂ, ಮುದ್ದಿಸದಿದ್ದರೂ ಅವಳ ಮೇಲೆ ತನಗೆ ಹೆಚ್ಚು ಅಧಿಕಾರವಿದೆಯೆಂಬಂತೆ ವರ್ತಿಸತೊಡಗುತ್ತಾನೆ. ತನ್ನನ್ನು ತಾನು ನಿಗ್ರಹಿಸಿಕೊಂಡು 'ಆದರ್ಶ ಪ್ರೇಮ'ದ ಕಲ್ಪನೆಯಲ್ಲಿ ತೊಡಗುತ್ತಾನೆ. ತನ್ನ ಮೊದಲ ಚುಂಬನವನ್ನು ತನ್ನ 'ಮೂರ್ಖತನ' ಎಂದು ಪರಿಭಾವಿಸುತ್ತಾನೆ. ಆದರೆ ಕಾಮಿನಿಯ ಪ್ರಕಾರ ಅದು 'ಹುಚ್ಚುತನ'. ಗೌರೀಶ ತನ್ನನ್ನು ಅನುಮಾನದಿಂದ ಗಮನಿಸುತ್ತಿರುವ ವಿಚಾರ ಕಾಮಿನಿಯ ಗಮನಕ್ಕೂ ಬಂದಿರುತ್ತದೆ. ಹೀಗಾಗಿಯೇ ಗೌರೀಶ ಎಂಟು ತಿಂಗಳಲ್ಲಿಯೇ ಇಷ್ಟೊಂದು ಅನುಭವ ಬಂತೇ ಎಂದು ಕೇಳಿದಾಗ, ಕಾಮಿನಿ ಹೂ– ಎಂಥ ಅನುಭವ, ಎಲ್ಲಿ,

ಯಾವಾಗ, ಯಾರು, ಯಾಕೆ ಎಂತು ಕೇಳುವ ಕುತೂಹಲವಿಲ್ಲವೇನು? ಎಂದು ನುಡಿಯುತ್ತಾಳೆ. ಇಲ್ಲಿ ಕಾಮಿನಿಯ ವ್ಯಂಗ್ಯವನ್ನು ಗುರುತಿಸಬಹುದಾಗಿದೆ.

ಕಾಮಿನಿಯನ್ನು ಪ್ರೀತಿಸುತ್ತಿದ್ದರೂ ಅವಳ ಸ್ವೈರ ಪ್ರವೃತ್ತಿ ಗೌರೀಶನಲ್ಲಿ ತಳಮಳವನ್ನು ಉಂಟು ಮಾಡುತ್ತದೆ. ಕಾಮಿನಿಯು ಕಾಲೇಜಿನ ಶಿವರಾಮ ಕುಲಕರ್ಣಿ, ಡ್ರಾಮಾ ಸೆಕ್ರೆಟರಿ ಮದಾರ, ನಾಡಕರ್ಣಿ, ಲವಂಡೆ ಮುಂತಾದವರೊಂದಿಗೆ ಹೊಂದಿದ್ದ ಸ್ನೇಹ ಗೌರೀಶನಿಗೆ ಎಲ್ಲೆ ಮೀರಿದ ವರ್ತನೆಯಂತೆ ತೋರತೊಡಗುತ್ತದೆ. ಕಾಮಿನಿಯ ಬಗೆಗಿನ ಅನಿಶ್ಚಿತತೆ ಭೂತದಂತೆ ಅವನನ್ನು ಕಾಡಲಾರಂಭಿಸುತ್ತದೆ. ಅದಕ್ಕೊಂದು ಅಂತಿಮ ರೂಪು ಕೊಡಲು ತೀರ್ಮಾನಿಸಿದ ಗೌರೀಶ ಕಾಮಿನಿಯನ್ನು ಏಕಾಂತದಲ್ಲಿ ಭೇಟಿಯಾಗಲು ಬಯಸುತ್ತಾನೆ. ನಾಳಿನ ಭೇಟಿಯ ಬಗ್ಗೆ ಹೇಳಲು ಬಂದ ಕಾಮಿನಿಯನ್ನು ಆಲಂಗಿಸುತ್ತಾನೆ. ಆದರೆ ಕಾಮಿನಿ ಗೌರೀಶನ ಸುಪ್ತ ಬಯಕೆಗಳನ್ನು ಕಠೋರವಾಗಿ ನಿರಾಕರಿಸುತ್ತಾಳೆ. ಗೌರೀಶನ ಹೃದಯದಲ್ಲಿ ಸುಂದರವಾದ ಅನಂತವಾದ 'ದಿವ್ಯಪ್ರೇಮದ ಆದರ್ಶ' ನಕ್ಷತ್ರದಂತೆ ಯಾವಾಗಲೂ ಮಿಣುಕುತ್ತಿರುತ್ತದೆ. ಗೌರೀಶನು ಕಾಮಿನಿಯನ್ನು ಆ ನಕ್ಷತ್ರದ ಬೆಳಕಿನಲ್ಲಿಯೇ ನೋಡಲು ಹಂಬಲಿಸುತ್ತಿದ್ದನು. ಕಾಮಿನಿಯ ಹಗಲಿನ ಬೆಳಕು ಅವನಿಗೆ ಸಹಿಸಲು ಆಗುತ್ತಿರಲಿಲ್ಲ. ಕಾಮಿನಿಯ ವಾಸ್ತವ ರೂಪು ಅವನಿಗೆ ನೋವನ್ನು ಉಂಟು ಮಾಡುತ್ತಿತ್ತು. ಕಾಮಿನಿಗೆ ಮುಖಸ್ತುತಿ ಇಷ್ಟವಾಗುತ್ತಿರುವುದಿಲ್ಲ. ಅವೆಲ್ಲ ಕೇವಲ ತರುಣರ ತಂತ್ರ ಎಂಬುದು ಅವಳ ಅನುಭವಕ್ಕೆ ಬಂದಿರುತ್ತದೆ. ಹೀಗಾಗಿಯೇ ಗೌರೀಶ ತನ್ನನ್ನು ಹೊಗಳಿದ್ದು ಅವಳಿಗೆ ಸೇರುವುದಿಲ್ಲ.

ಗೌರೀಶ ಶ್ರೀಕಾಂತನ ಮೇಲೆ ಹೆಚ್ಚು ಅವಲಂಬಿಸಿರುವುದು, ಶ್ರೀಕಾಂತನ ಮುಂದೆ ದುರ್ಬಲನಂತೆ ವರ್ತಿಸುವುದು ಅವಳ ಗಮನಕ್ಕೂ ಬಂದಿರುತ್ತದೆ. ಹೀಗಾಗಿಯೇ ಗೌರೀಶ ತಾನು ಅವಳಿಗೆ ಯೋಗ್ಯನೇ ಎಂದು ಕೇಳಿದಾಗ "ಗೌರೀಶ, ನೀನು ಸ್ವಲ್ಪ ಹೆಚ್ಚು ಗಟ್ಟಿಯಿದ್ದಿದ್ದರೆ –ನಿನ್ನಲ್ಲಿ ಸ್ವಲ್ಪ ಹೆಚ್ಚು ಸಾಮರ್ಥ್ಯ..." (ಪು. ೧೧೨) ಎಂದು ಹೇಳಿ ಅವನ ಸಾಮರ್ಥ್ಯ ಏನು ಎಂಬುದನ್ನು ಅವನಿಗೆ ಮನದಟ್ಟು ಮಾಡಿಸುತ್ತಾಳೆ. ಅಲ್ಲದೆ ಅವಳಿಗೆ ಯಾವಾಗಲೂ ತನ್ನನ್ನು ಪ್ರಶಂಸಿಸುವ, ತನ್ನ ಆಸೆ–ಆಕಾಂಕ್ಷೆಗಳನ್ನು ಪೂರೈಸಬಲ್ಲ ದೊಡ್ಡ ಪಗಾರದ ಗಂಡ ಬೇಕಾಗಿರುತ್ತದೆ. ಅವಳನ್ನು, ಅವಳ ಸ್ವೈರ ಪ್ರವೃತ್ತಿಯನ್ನು ನಿಯಂತ್ರಿಸುವ ಸ್ವ ಸಾಮರ್ಥ್ಯದ ಗಂಡ ಬೇಕಾಗಿರುತ್ತದೆ. ಹೀಗಾಗಿ ಕಾಮಿನಿ ಶರ್ಮಾ, ಕಾಮ್ರೆಡ್ ಆಚಾರ್ಯ ಮುಂತಾದವರೊಂದಿಗೆ ಸಹಜ ಸ್ನೇಹ ಸಂಬಂಧ ಬೆಳಸುತ್ತಾಳೆ. ಅವಳ ಈ ಸಂಬಂಧಗಳ ಬಗ್ಗೆ ಗೌರೀಶನಿಗೆ ತಿಳಿಯುತ್ತದೆ. ಆತ ತನ್ನ ಸಂಶಯದ ಬುದ್ಧಿಯಿಂದಾಗಿ ಅವಳನ್ನು ಒಳ್ಳೆಯ ದಾರಿಗೆ ಹಚ್ಚಬೇಕೆಂದು ಆಲೋಚಿಸುತ್ತಾನೆ. ಆದರೆ "ತನ್ನಲ್ಲಿ ಅಷ್ಟು ಶಕ್ತಿ ಇಲ್ಲ, ಹೇಡಿ, ಕೈಲಾಗದವ" ಎಂಬ ದುರ್ಭರ ಭಾವನೆಗಳು ಗೌರೀಶನಲ್ಲಿ ಮೂಡುತ್ತವೆ. ಹೀಗಾಗಿಯೇ ಆತ ಕಾಮಿನಿಯನ್ನು ನೇರವಾಗಿ ಎದುರಿಸಲಾರದೇ ಹೋಗುತ್ತಾನೆ. ಕಾಮಿನಿಯ ವಿಚಾರದಲ್ಲಿ ಗೌರೀಶನ ಹೃದಯದ ಒಂದು 'ಪುಪ್ಪುಸ'ವು ತೂತು ಬಿದ್ದ ಬಲೂನಿನಂತೆ ಚಪ್ಪಟೆಯಾಗಿತ್ತು! ಕಾಮಿನಿ ಡ್ರಾಯಿಂಗ್ ಮಾಸ್ತರ, ಶಿವರಾಮ ಕುಲಕರ್ಣಿ, ಪ್ರೊಫೆಸರ್ ಶರ್ಮಾ, ಕಾಮ್ರೆಡ್ ಆಚಾರ್ಯರಿಂದ ಅನುಭವವನ್ನು ಪಡೆದಿದ್ದಾಳೆಂಬ ಗೌರೀಶನ ಮಾತು ಕಾಮಿನಿಯನ್ನು

ರೊಚ್ಚಿಗೇಳಿಸುತ್ತದೆ. "ನಿನ್ನಂಥ ಹುಚ್ಚನೊಡನೆ ಮಾತನಾಡುವುದೂ ಕಠಿಣ. ನೀನಿಷ್ಟು ಮೂರ್ಖ, ಸಂಶಯ ಪಿಶಾಚಿಯಿರುವಿಯೆಂದು ನನಗನಿಸಿರಲಿಲ್ಲ. ನಿನ್ನಂಥ ಗಂಡನಿದ್ದರಂತೂ ತೀರಿತು, ಎಂಟೇ ದಿನಗಳಲ್ಲಿ ಉರುಲು ಹಾಕಿಕೊಳ್ಳಬೇಕು" (ಪು. ೧೫೫) ಎಂದು ರೋಷದಿಂದ ನುಡಿಯುವ ಮಾತುಗಳಲ್ಲಿ ಗೌರೀಶನ ಬಗ್ಗೆ ಕಾಮಿನಿಯ ತಿರಸ್ಕಾರವನ್ನು ಗುರುತಿಸಬಹುದು.

ಅದೇ ರೋಷದಲ್ಲಿಯೇ ಗೌರೀಶ ಕಾಮಿನಿಯನ್ನು ವಶಪಡಿಸಿಕೊಳ್ಳಬೇಕೆಂಬ ಹುಚ್ಚು ಹಂಬಲದಿಂದ ಅವಳ ಮೇಲೆ ಬಿದ್ದರೂ ಕೂಡ ಕಾಮಿನಿಯು ನಿಶ್ಚಲತೆಯಿಂದ ತಟಸ್ಥತೆಯಿಂದ ವಿಚಾರ ಮಗ್ನಳಾಗಿರುತ್ತಾಳೆ. ಇದನ್ನು ಗಮನಿಸಿ ಗೌರೀಶನ ಎಲ್ಲ ಶಕ್ತಿ- ಹುಚ್ಚು ಮದ-ಎಲ್ಲ ಒಮ್ಮೆಲೆ ತೂತು ಬಿದ್ದ ಬಲೂನಿನಲ್ಲಿಯ ಗಾಳಿಯಂತೆ ಇಲ್ಲದಂತಾಗುತ್ತದೆ. "ಗೌರೀಶ ಚಪ್ಪಟೆಯಾಗುತ್ತಾನೆ- ನಿರ್ವೀರ್ಯನಾಗುತ್ತಾನೆ..." ಆದರೆ ಮುಂದೊಮ್ಮೆ ಕಾಮಿನಿಯೇ ಗೌರೀಶನಿಗೆ ಅವನನ್ನು ಲಗ್ನವಾಗಲು ಒಪ್ಪಿರುವುದಾಗಿ ಹೇಳಿ ಅವಳನ್ನು ಅರ್ಪಿಸಲು ಯತ್ನಿಸುತ್ತಾಳೆ. ಆದರೆ ಗೌರೀಶನಿಗೆ ಕಾಮಿನಿಯ ಬಗೆಗೆ ಅವನಲ್ಲಾದ ದೈಹಿಕ ಹಂಬಲದ ಬಗ್ಗೆ ಒಂದು ಬಗೆಯ ಹೇಸಿಕೆ- ಭೀತಿಯುಕ್ತ ಹೇಸಿಕೆ ಮನೆ ಮಾಡಿರುತ್ತದೆ. ಅದರ ಮೂಲಕ ಗೌರೀಶನ ದೇಹ ನಿರ್ಬಲವಾಗಿ ಕಂಪಿಸಿ ಅಸಹಾಯಕತೆಯಿಂದ ಮುರುಟಿ ಹೋಗುತ್ತದೆ. ಆ ನಂತರ ಕಾಮಿನಿ ಗೌರೀಶನನ್ನು ಕೆಲಸಕ್ಕೆ ಬಾರದ, ಮುರಿದ, ಆಟಿಗೆಯಂತೆ ದೂರ ಚಲ್ಲುತ್ತಾಳೆ. ಆದರೂ ಕೂಡ ಗೌರೀಶನಿಗೆ ಕಾಮಿನಿಯ ಮೇಲೆ ಉತ್ಕಟ ಪ್ರೇಮವಿರುತ್ತದೆ. ಹುಚ್ಚು ಪ್ರೇಮ, ಹೀಗಾಗಿಯೇ ಕಾಮಿನಿಯನ್ನು ಸಂಪೂರ್ಣವಾಗಿ ಕ್ಷಮಿಸಬೇಕು, ತನ್ನ ನಿಜ ಹೃದಯದ ಪರಿಚಯ ಮಾಡಿಕೊಡಬೇಕೆಂಬ ಭಾವನೆಯು ಗೌರೀಶನಲ್ಲಿ ಮೂಡುತ್ತದೆ. ಹೀಗಾಗಿಯೇ ಆತ ಮತ್ತೊಂದು ಬಾರಿ ಧಾರವಾಡದಲ್ಲಿ ಉಳಿದುಕೊಳ್ಳುತ್ತಾನೆ. ಆದರೆ ಅವನೆಣಿಸಿದಂತೆ ಕಾಮಿನಿಯನ್ನು ಪಡೆಯುವುದು ಅವನಿಗೆ ಸಾಧ್ಯವಾಗುವುದಿಲ್ಲ.

ಗೌರೀಶ ತಾನು ಮುಂಬಯಿಗೆ ಹೋಗುತ್ತಿರುವುದಾಗಿ ಹೇಳಿದಾಗ ಕಾಮಿನಿ ತಾನೂ ಗೌರೀಶನೊಂದಿಗೆ ಬರುವುದಾಗಿ ಹೇಳುತ್ತಾಳೆ. ಏಕೆಂದರೆ ಗೌರೀಶನಿಗೆ ತನ್ನನ್ನು ಒಯ್ಯುವ ಸಾಮರ್ಥ್ಯ ಬಂದಿದೆ. ಇದರಿಂದ ಮುಂದೆ ತನಗೇನೂ ತೊಂದರೆ ಆಗುವುದಿಲ್ಲ ಎಂಬ ಭಾವನೆ ಕಾಮಿನಿಯದ್ದಾಗಿರುತ್ತದೆ. ಆದರೆ ಗೌರೀಶ ಕಾಮಿನಿಯನ್ನು ಪರೀಕ್ಷಿಸುವುದನ್ನು ಬಿಡುವುದಿಲ್ಲ. ಹೀಗಾಗಿ ಗೌರೀಶ ನಿಜವಾಗಿಯೂ ತನ್ನನ್ನು ಲಗ್ನವಾಗಲು ಬಯಸಿದ್ದಾನಾ? ಎಂಬುದು ಕಾಮಿನಿಯ ಅನುಮಾನ, ಗೊಂದಲ ಆಗಿರುತ್ತದೆ. ಹೀಗಾಗಿಯೇ ಆತ ಕಾಮಿನಿಗೆ 'ಕಾಮಿನಿ-ನೀನು – ನಿನ್ನ ದಾರಿ ಬೇರೆ-ನನ್ನ ದಾರಿ ಬೇರೆ ಅಥವಾ ನಿನಗೆ ದಾರಿಯೇ ಇಲ್ಲ' ಎಂಬಂತೆ ಅವಳನ್ನು ನಂಬಿಸುತ್ತಾನೆ. ತಾವಿಬ್ಬರೂ ಕೇವಲ ಗೆಳತಿ ಗೆಳೆಯರಂತೆ ಇರುವುದು ಅತ್ಯಂತ ಅವಶ್ಯ ಎಂಬುದು ಗೌರೀಶನ ಅಭಿಪ್ರಾಯವಾಗಿರುತ್ತದೆ. ಹೀಗಾಗಿ ಕಾಮಿನಿ ಗೌರೀಶನನ್ನು ಕುರಿತು "ನೀನೂ ಮೋಸಗಾರ- ನಿನ್ನನ್ನೆಂದೂ ಕ್ಷಮಿಸಲಾರೆ. ನಾನು ಬಂದದ್ದೇ ತಪ್ಪಾಯಿತು ಕ್ಷಮಿಸು" ಎಂದು ಹೇಳಿ ಅಲ್ಲಿಂದ ಹೊರಟು ಬರುತ್ತಾಳೆ. (ಪು. ೧೭೮) ಕಾಮಿನಿ ತನ್ನಿಂದ ಜಾರಿ ಹೋದಂತೆ ಗೌರೀಶನಿಗೆ ಭಾಸವಾಗುತ್ತದೆ. ಗೌರೀಶನಿಂದ ತಿರಸ್ಕರಿಸಲ್ಪಟ್ಟ ಕಾಮಿನಿ ಗಂಗಾಲರ ಸಹವಾಸದಿಂದ

ಬಸಿರಾಗಿ ಯಾವುದೋ ಔಷಧ ತಿಂದು ಅದನ್ನು ಹೊರಗೆ ಹಾಕುತ್ತಾಳೆ. ತನ್ನ ಇಂದಿನ ಈ ಪರಿಸ್ಥಿತಿಗೆ ಗೌರೀಶನೇ ಕಾರಣ ಎಂಬುದು ಕಾಮಿನಿಯ ಅಭಿಮತ.

ಹೀಗಾಗಿಯೇ "ಗೌರೀಶ, ನಿನ್ನ ಪ್ರೇಮದಿಂದಲೇ ಎಲ್ಲ ಸುರುವಾಯಿತು... ನಡುವೆಯೇ ನಡು ನೀರಿನಲ್ಲಿಯೇ ನೀನು ನನ್ನನ್ನು ಬಿಟ್ಟುಬಿಟ್ಟೆ, ನಾನು ನಿನ್ನನ್ನು ಲಗ್ನವಾಗಲು ಸಿದ್ಧಳಾದಾಗ ಕೂಡ ನೀನು ಆಶೆ ತೋರಿಸಿ ಹಿಂಜರಿದೆ, ಕಾಲ್ತೆಗೆದೆ. ನಾನು ಮಾತ್ರ ನಡು ನೀರಿನಲ್ಲಿಯೇ. ನನ್ನೆಡೆಗೆ ಚಾಚಿದ ಕೈಗಳೆಲ್ಲ ಹೊಲಸು ಕೈಗಳಾದವು... ಸ್ವಾರ್ಥಿ, ಪಿಶಾಚಿ, ಘಾತಕಿ.. ತಿರುಗಣಿ.. ತಿರುಗಣಿ ಮಡುವು ಯಾಕೆ ಸಾಯಲಿಲ್ಲವೋ ನಾನು? ಗೌರೀಶ, ನನ್ನನ್ನು ಉಳಿಸು , ಗೌರೀಶ..." (ಪು. ೨೩೭) ಎಂದು ಕಾಮಿನಿ ಗೌರೀಶನಿಗೆ ಹೇಳುವಲ್ಲಿ ಅವಳ ನಿಷ್ಕಲ್ಮಶ ಮನದ ಭಾವನೆಗಳನ್ನು ಗುರುತಿಸಬಹುದಾಗಿದೆ. "ಗೌರೀಶ, ಈಗ ನಿನ್ನಲ್ಲಿ ಸಾಮರ್ಥ್ಯ ಬಂದಿದೆ. ನೀನು ಹೋದಲ್ಲಿ ಬರುವೆ, ನೀನು ಹೇಳಿದ್ದು ಮಾಡುವೆ.. ನಿನ್ನ ದಾಸಿಯಾಗಿ ನನ್ನನ್ನು ಉಳಿಸು – ಶ್ರೀಕಾಂತನ ಸಲುವಾಗಿಯಾದರೂ..." ಎಂದು ಕಾಮಿನಿ ಗೌರೀಶನಿಗೆ ಹೇಳುವಲ್ಲಿ ಕಾಮಿನಿಯು ಗೌರೀಶನನ್ನು ಮದುವೆ ಆಗಲು ಒಪ್ಪಿರುವುದನ್ನು ಹಾಗೂ ಅವಳ ಪಶ್ಚಾತ್ತಾಪದ ಬೇಗುದಿಯನ್ನು ಗುರುತಿಸಬಹುದು. ಆದರೆ ಗೌರೀಶನ ಪ್ರಕಾರ ಕಾಮಿನಿ ಅವನಿಗೋಸ್ಕರ ಅಲ್ಲ. ಅವನು ಕಾಮಿನಿಗೋಸ್ಕರ ಅಲ್ಲ. ಅವಳ ದಾರಿ ಬೇರೆ, ಅವನ ದಾರಿ ಬೇರೆ.

ಗೌರೀಶನಿಗೆ ಕಾಮಿನಿಯ ದಾರಿಯೇ ಬೇರೆ, ಅವನ ದಾರಿಯೇ ಎಂಬ ತಿಳುವಳಿಕೆ ಬರಲು ಮೂಲ ಕಾರಣ ಡಾಲಿ. ಅವಳು ಕೊಟ್ಟ ಹೃದಯ ಸ್ಥಿರತೆಯ ಮೂಲಕವೇ. ಡಾಲಿ 'ಮಹೇಂದ್ರ ಮತ್ತು ಕಂಪನಿ'ಯ ಆಫೀಸಿನ ಟೈಪಿಸ್ಟ್ ಮತ್ತು ರಿಸೆಪ್ಷನಿಸ್ಟಾಗಿರುತ್ತಾಳೆ. ಎಂ.ಎಸ್ಸಿ.ಯಲ್ಲಿ ಥರ್ಡ್ ಕ್ಲಾಸು ಗಳಿಸಿದ ಗೌರೀಶ ಅನಿವಾರ್ಯವಾಗಿ ಕ್ಲಾರ್ಕನ ನೌಕರಿಯನ್ನಾದರೂ ಹಿಡಿಯಲೇಬೇಕಾಗಿರುತ್ತದೆ. ಹೀಗಾಗಿ ಸತ್ಯೇಂದ್ರನ ಸಹಾಯದಿಂದ ಗೌರೀಶನಿಗೆ 'ಮಹೇಂದ್ರ ಮತ್ತು ಕಂಪನಿ'ಯಲ್ಲಿ ಸೇಲ್ಸ್ ಆರ್ಗನೈಜರನ ನೌಕರಿ ದೊರೆಯುತ್ತದೆ. ಹೀಗಾಗಿ ಗೌರೀಶನಿಗೆ ಡಾಲಿಯ ಸಹವಾಸ ಅನಾಯಾಸವಾಗಿಯೇ ದೊರೆಯುತ್ತದೆ. ಸಹವಾಸದಿಂದ ಸಂಬಂಧ ಬೆಳೆಯುತ್ತದೆ. ಗೌರೀಶ ಮುಂಬಯಿಯನ್ನು ಬಿಟ್ಟು ಮತ್ತೆಲ್ಲಿಯೂ ಕೂಡ ಡಾಲಿಯನ್ನು ಇಷ್ಟು ಸರಾಗವಾಗಿಯೂ, ನಿರಾಗಸವಾಗಿಯೂ ಸಂಧಿಸುವುದು ಶಕ್ಯವಿರಲಿಲ್ಲ. ಅವರಿಬ್ಬರ ಸಂಬಂಧ ಮುಂಬಯಿಯಲ್ಲಿ ಅಲ್ಲದೇ ಬೇರೆಲ್ಲೂ ಇಷ್ಟು ತಿಳಿಯಾಗಿ ಸಾಗುವುದು ಶಕ್ಯವಿರಲಿಲ್ಲ. ಏಕೆಂದರೆ ಸಣ್ಣ ಊರುಗಳಲ್ಲಿ ಅವರ ಸಂಬಂಧದ ವಿಷಯ ಜನರ ಹರಕು ಬಾಯಲ್ಲಿ ಸಿಕ್ಕು ಹೊಲಸಾಗಬಹುದಿತ್ತು. ಅವರಿಬ್ಬರು ಗುಬ್ಬಿಗಳಂತೆ ಭೂತಕಾಲದ ಭಾರವಿಲ್ಲದೆ, ಭವಿಷ್ಯದ ಚಿಂತೆಯಿಲ್ಲದೆ, ವರ್ತಮಾನದ ಸ್ವಚ್ಛಂದ ವಿಹಾರವನ್ನು ಮಾತ್ರ ಕೈಗೊಂಡಿದ್ದರು. ಅವರಿಬ್ಬರ ಸಂಬಂಧದಲ್ಲಿ ಯಾವುದೇ ತರದ ಉದ್ದೇಶವಾಗಲೀ, ಉದ್ವೇಗವಾಗಲೀ, ಬಂಧನವಾಗಲೀ, ತೊಡಕಾಗಲೀ ಇರಲಿಲ್ಲ. ವರ್ತಮಾನದ ಸಹವಾಸವನ್ನು ಮೀರಿದ ಯಾವುದೇ ಆಸೆಯನ್ನು ಹೊಂದದೆ ಇಬ್ಬರೂ ಸ್ವತಂತ್ರರಾಗಿದ್ದರು.

ಆದರೆ ಗೌರೀಶ ಮುಂಬಯಿಗೆ ಬಂದ ಪ್ರಾರಂಭದಲ್ಲಿ ಅವನು ಈ ರೀತಿ ಇರಲಿಲ್ಲ. ಪ್ರೇಮಭಂಗದ, ಪ್ರೇಮದ ಅಸಾಫಲ್ಯತೆಯ ದುಃಖದ ಭಾರವನ್ನು ಹೊತ್ತು ಮುಂಬಯಿಗೆ ಬಂದಿದ್ದ.

ಅವನಿಗೆ ಅವನ ದುಃಖವೆಂದರೆ ಅಗಾಧವಾದದ್ದು, ಅದ್ವೀಯವಾದದ್ದು ಎಂಬ ಕಲ್ಪನೆ ಇರುತ್ತದೆ. ಆದರೆ ಮುಂಬಯಿಯ ಜನಸಮುದ್ರ ಅವನಿಗೆ ಪರಿಸ್ಥಿತಿಯನ್ನು ವಸ್ತುನಿಷ್ಠವಾಗಿ ನೋಡುವುದನ್ನು ಕಲಿಸುತ್ತದೆ. ಜನಜಂಗುಳಿಯಿಂದ ತುಂಬಿ ತುಳುಕುತ್ತಿದ್ದ ಮುಂಬಯಿ ಅವನು ಕಲ್ಪಿಸಿಕೊಂಡಿದ್ದ ದುಃಖಕ್ಕೆ ಧಕ್ಕೆಯನ್ನು ನೀಡುತ್ತದೆ. "ವ್ಯಕ್ತಿಗೆ ಕಿಮ್ಮತ್ತಿಲ್ಲ. ಅವನ ಭಾವನೆ-ವಿಚಾರಣೆಗಳಿಗೆ ಮಹತ್ವವಿಲ್ಲ. ಈ ಜನ ಸಮುದ್ರದಲ್ಲಿ ಬಿಂದು ಮಾತ್ರನಾದ ಒಬ್ಬ ಯಃಕಶ್ಚಿತ ವ್ಯಕ್ತಿಯ ಆಗು-ಹೋಗುಗಳಿಗೆ ಎಳ್ಳಷ್ಟು ಬೆಲೆಯಿಲ್ಲ" ಎಂಬ ಪಾಠವನ್ನು ಕಲಿಸುತ್ತದೆ (ಪು. ೫). ಹೀಗಾಗಿಯೇ ಗೌರೀಶನಿಗೆ ಆತನ ಯಃಕಶ್ಚಿತತೆಯ, ಅಲ್ಪತನದ ಅರಿವು ಆಗುತ್ತದೆ.

ಇಂತಹ ಅನಿಶ್ಚತತೆಯ ಸಮಯದಲ್ಲಿಯೇ ಗೌರೀಶನಿಗೆ ಡಾಲಿಯ ಸ್ನೇಹ ಏರ್ಪಡುತ್ತದೆ. ಡಾಲಿ ಮತ್ತು ಗೌರೀಶರ ನಡುವಿನ ಲೈಂಗಿಕ ಸಂಬಂಧದಲ್ಲಿ ಕಾಮೋತ್ಕಟತೆ ಇರುವುದಿಲ್ಲ. ಭಾವೋದ್ವೇಗ ಇರುವುದಿಲ್ಲ. ಆದು ಕೇವಲ ಅವರ ಸಹವಾಸದ ವಿಕಾಸ-ವಿಸ್ತಾರ ಮಾತ್ರವಾಗಿರುತ್ತದೆ. ಹೀಗಾಗಿಯೇ ಡಾಲಿ ತನಗೆ ಕೊಡುತ್ತಿದ್ದ ಆನಂದದಲ್ಲಿ ಗೌರೀಶ ಶಾಂತ ತಟಸ್ಥತೆಯನ್ನು, ವಿಲಕ್ಷಣವಾದ ಮಾತೃತ್ವವನ್ನು ಅನುಭವಿಸುತ್ತಿರುತ್ತಾನೆ. ಜೊತೆಗೆ ಅವಳ ಸಹವಾಸದಲ್ಲಿ ಒಂದು ಬಗೆಯ ಅಸಾಧಾರಣ ನಾವೀನ್ಯದ ಅನುಭವವನ್ನು ಹೊಂದುತ್ತಾನೆ. ಅವನ ಬೆಂದ ಹೃದಯಕ್ಕೆ ಬೇಕಾದ ಶುಶ್ರೂಷೆ ಅವಳಲ್ಲಿ ದೊರೆಯುತ್ತದೆ. ಆದರೆ ಡಾಲಿಯನ್ನು ಮುದ್ದಿಸುವಾಗಲೂ ಕೂಡ ಕಾಮಿನಿಯ ತುಟಿಗಳು ಅವನ ಸ್ಮೃತಿ ಪಟಲದ ಮೇಲೆ ಮೂಡಿ, ಅವನನ್ನು ಅಣಕಿಸಿ ನಕ್ಕು ಹೋಗುತ್ತವೆ. ಡಾಲಿಯ ಸಹವಾಸವು ಗೌರೀಶನಿಗೆ ಅವನ ಜೀವನದ ಒಂದು ಅಗಾಧ ರಹಸ್ಯದ ಮೇಲೆ ಮಧುರವಾದ ಪ್ರಕಾಶವನ್ನು ಬೀರುತ್ತದೆ. ಇಷ್ಟು ದಿನಗಳು ಕೇವಲ ಕನಸುಗಳಲ್ಲಿ ಅಸ್ಪಷ್ಟವಾಗಿ ರೂಪುಗೊಂಡಿದ್ದ, ಅನಂತ ಕಾಲದಿಂದ ಮುಚ್ಚಿದ್ದ ಯಾವುದೋ ಬಾಗಿಲು ಒಮ್ಮೆಲೆ ತೆರೆದು ಹೊರಗಿನ ಚಿತ್ರ ವಿಚಿತ್ರವಾದ ಉದ್ಯಾನದ ಸಮ್ಯಗ್ದರ್ಶನವನ್ನು ಮಾಡಿಸುತ್ತದೆ.

ಡಾಲಿಯ ಪ್ರಕಾರ ಗೌರೀಶನಲ್ಲಿ ಒಂದು ಬೆಳವಣಿಗೆಯಾಗುತ್ತಿರುತ್ತದೆ. ಆದರೆ ಗೌರೀಶನಿಗೆ ಮಾತ್ರ ತನ್ನಲ್ಲಿನ ಬದಲಾವಣೆ ಕಂಡು ಬರುವುದಿಲ್ಲ. ಡಾಲಿಯು ತಾನು ತಾಯಿಯಾಗಬೇಕೆಂದೂ, ತನ್ನದೇ ಒಂದು ಮಗು ಬೇಕೆಂಬ ಅಪೇಕ್ಷೆಯನ್ನು ಗೌರೀಶನೊಂದಿಗೆ ವ್ಯಕ್ತಪಡಿಸುತ್ತಾಳೆ. ಇದನ್ನು ಕೇಳಿ ಗೌರೀಶನಿಗೆ ಡಾಲಿಯು ತನ್ನನ್ನು ಅವಳ ಸಾಧನವನ್ನಾಗಿ ಉಪಯೋಗಿಸುತ್ತಿರುವಳೇ? ಅಥವಾ ತನ್ನ ಒಳ್ಳೆಯತನದ ಉಪಯೋಗ ಪಡೆದುಕೊಂಡು ನನ್ನನ್ನು ವಂಚಿಸಿ ಬಲೆಯಲ್ಲಿ ಹಾಕುತ್ತಿರುವಳೇ? ಎಂಬ ಅನುಮಾನ ಕಾಡಿ ತಾನು ಆದಷ್ಟು ಬೇಗ ಆಫ್ರಿಕಾಗೆ ಓಡಿ ಹೋಗಬೇಕೆಂಬ ವಿಚಾರ ಮತ್ತಷ್ಟು ಗಟ್ಟಿಯಾಗುತ್ತದೆ. (ಪು. ೮೦) ಆದರೆ ಡಾಲಿಯೊಡನೆ ಹೊಂದಿದ್ದ ಸಂಬಂಧವನ್ನು ನಿಗ್ರಹಿಸುವ ಮನೋಭಾವವೂ ಅವನಲ್ಲಿರುವುದಿಲ್ಲ. ಡಾಲಿಯೊಡನೆ ಇದ್ದಾಗ ಅವನ ವ್ಯಕ್ತಿತ್ವದ ಯಾವುದೋ ಒಂದು ಭಾಗ ಸಂಪೂರ್ಣ ತೃಪ್ತವಾದಂತೆ ಗೌರೀಶನಿಗೆ ಭಾಸವಾಗುತ್ತಿದ್ದರೂ ಕೂಡ ಅವನ ಮೂಲಭೂತ ಕೇಂದ್ರವನ್ನು ಡಾಲಿ ಮುಟ್ಟಲಾರಳು ಎಂಬ ಭಾವನೆ ಅವನಲ್ಲಿರುತ್ತದೆ. ಕಾಮಿನಿ ಅವನನ್ನು ತುಳಿದು, ಹರಿದು ಚಿಂದಿ ಮಾಡಿ ಒಗೆದರೂ ಕೂಡ ಅವಳಿಗೆ 'ನೀನೇ ಬೇಕು, ನೀನೇ ಬೇಕು' ಎಂದು ಹೇಳುವಂತೆ ಡಾಲಿಗೆ 'ನೀನೇ ಬೇಕು ನೀನೇ ಬೇಕು' ಎಂದು

ಹೇಳುವುದು ಅವನಿಂದ ಶಕ್ಯವಿರಲಿಲ್ಲ. ಆದರೂ ಕೂಡ ಡಾಲಿಯ ಸಾಮಿಪ್ಯ ಗೌರೀಶನಲ್ಲಿ ಒಂದು ರೀತಿಯಲ್ಲಿ ಮುಕ್ತಿಯ ಭಾವವನ್ನು ನೀಡುತ್ತಿರುತ್ತದೆ. ಡಾಲಿಯು ತಮ್ಮಿಬ್ಬರ ಸಂಬಂಧವನ್ನು ಸಹಜವಾಗಿ ಮುಕ್ತ ಮನಸ್ಸಿನಿಂದ ಸಂಭಾಳಿಸಿದ್ದನ್ನು ಕಂಡು ಗೌರೀಶನಲ್ಲಿ ವಿಶೇಷವಾದ ಆತ್ಮವಿಶ್ವಾಸ, ಶಕ್ತಿ ಮೂಡುತ್ತವೆ. ಗೌರೀಶ ಮುಂಬಯಿಯ ವಸ್ತುನಿಷ್ಠ ಜೀವನದಿಂದಾಗಿ ಡಾಲಿಯ ಮುಂದೆ ತನ್ನ ಹೃದಯವನ್ನೇ ತೆರೆದಿಡಬಲ್ಲವನಾಗುತ್ತಾನೆ. "ಸಹಜವಾಗಿ, ಸಲೀಲವಾಗಿ – ಯಾವುದೇ ಬಗೆಯ ಉತ್ಕಂಠೆಯಿಲ್ಲದೆ, ಸಂಶಯವಿಲ್ಲದೆ ಸಂದಿಗ್ಧತೆಯಿಲ್ಲದೆ, ತಿಳಿಯಾಗಿ, ನಿರರ್ಗಳವಾಗಿ ಅವಳ ಎದುರಿಗೆ ಹರಿಯುವುದರಲ್ಲಿಯೇ ತನ್ನ ಮುಕ್ತಿಯಿದೆ" ಎಂದು ಗೌರೀಶನಿಗೆ ಭಾಸವಾಗುತ್ತದೆ. (ಪು. ೨೪೫) ಹೀಗಾಗಿಯೇ ಗೌರೀಶ ಡಾಲಿಯನ್ನು ತನ್ನ ಹೆಂಡತಿಯಾಗಿ. ಸಹ ಸಂಚಾರಿಯಾಗಿ ತನ್ನ ಜೊತೆಗೆ ಬರುವಂತೆ ಕೋರಿಕೊಳ್ಳುತ್ತಾನೆ. ಗೌರೀಶ ಡಾಲಿಯಲ್ಲಿ ವ್ಹರ್ಜಿನ್ ಮೇರಿಯ ದಿವ್ಯ ಹಾಸ್ಯವನ್ನು ಕಂಡುಕೊಳ್ಳುತ್ತಾನೆ.

೬.೨ ವಿಕ್ಷೇಪ : ರಾಹುಲ

'ವಿಕ್ಷೇಪ' (೧೯೭೧) ಕಾದಂಬರಿಯು ಆಧುನಿಕ ಯುವ ಜನತೆಯ ವಿಕ್ಷಿಪ್ತ ಮನಃಸ್ಥಿತಿಯನ್ನು ಕುರಿತು ಚಿತ್ರಿಸಿದೆ 'ವಿಕ್ಷೇಪ'ದ ರಾಹುಲ ಆಧುನಿಕ ಯುವ ಜನತೆಯ ಪ್ರತೀಕವಾಗಿದ್ದಾನೆ. ಅಸ್ತಿತ್ವವಾದಿಯಾದ ರಾಹುಲನಿಗೆ ಗೌರೀಶನಂತೆ ಗತಜೀವನ ಎಂಬುದಾಗಲೀ, ಅದರಿಂದ ಬಿಡುಗಡೆ ಹೊಂದಿ ಮುಕ್ತಿಯನ್ನು ಹೊಂದಬೇಕೆಂಬ ಅಭಿಲಾಷೆಯಾಗಲೀ ಇರುವುದಿಲ್ಲ. ಗೌರೀಶ ತನ್ನ ಗತ ಜೀವನದಿಂದ, ಶ್ರೀಕಾಂತ, ಕಾಮಿನಿಯರಿಂದ ಬಿಡುಗಡೆ ಹೊಂದಬೇಕೆಂದು ಬಯಸಿದರೂ ಕೂಡ ಅವನ ಜೀವನ ಪರ್ಯಂತ ಅವರಿಂದ ಅವನಿಗೆ ಬಿಡುಗಡೆಯೇ ದೊರೆಯುವುದಿಲ್ಲ. ಡಾಲಿಯ ಮೂಲಕ ತನ್ನ ಮುಕ್ತಿ ಸಾಧ್ಯವಾಗಬಹುದೆಂಬ ಭಾವನೆ ಗೌರೀಶನಲ್ಲಿ ಮೂಡುತ್ತದೆ. ಆದರೆ ರಾಹುಲ ವರ್ತಮಾನದಲ್ಲಿ ಬದುಕುವ ತರುಣ. ಮಾಧವಿಯನ್ನು ಪ್ರೀತಿಸುವ ಅರವಿಂದನಿಗೆ ತನ್ನ ಕರ್ತೃತ್ವ ಶಕ್ತಿಯ ಬಗ್ಗೆ ಹೆಮ್ಮೆ ಇರುತ್ತದೆ. ತನ್ನ ಸೌಂದರ್ಯದ ಬಗ್ಗೆ, ತನ್ನ ಬುದ್ಧಿಮತ್ತೆಯ ಬಗ್ಗೆ, ತನ್ನ ವ್ಯಕ್ತಿತ್ವದ ಬಗ್ಗೆ ವಿಶೇಷ ಅಭಿಮಾನವನ್ನು ಹೊಂದಿದ್ದ ರಾಹುಲ ಅವುಗಳ ಮೂಲಕವೇ ಮಾಧವಿ ಎಂಬ ಅಮೂಲ್ಯ ವ್ಯಕ್ತಿಯನ್ನು ತನ್ನ ಸ್ನೇಹಿತೆಯನ್ನಾಗಿ ಪಡೆಯುತ್ತಾನೆ. (ಪು. ೮) ಅವಳನ್ನು ಮದುವೆ ಮಾಡಿಕೊಳ್ಳಬೇಕೆಂಬ ಆಲೋಚನೆಯೂ ಇರುತ್ತದೆ.

ಆದರೆ ಅವಳ ಮನೆಗೆ ಭೇಟಿ ಕೊಟ್ಟ ರಾಹುಲನಿಗೆ ಅವಳ ಮನೆಯ ಶ್ರೀಮಂತಿಕೆ, ಅವಳ ತಾಯಿಯ ಅಸಂಸ್ಕೃತ ಗ್ರಾಮ್ಯತೆ ಅವನ ಮನಸ್ಸನ್ನು ಅಸ್ವಸ್ಥಗೊಳಿಸುತ್ತವೆ (ಪು. ೨೨). ಮಾಧವಿಯನ್ನು ತಾನು ಮದುವೆಯಾದರೆ ತನ್ನ ಉದ್ಧಾರವಾಗುವುದೇ ಎಂಬ ಅಸಂಬದ್ಧ ಪ್ರಶ್ನೆ ಅವನನ್ನು ಕಾಡತೊಡಗುತ್ತದೆ. ಮಾಧವಿಯ ಮನೆಯಿಂದ ಬಂದ ನಂತರ ರಾಹುಲನಿಗೆ ಇದ್ದಕ್ಕಿದ್ದಂತೆಯೇ ಅವಳ ಮೇಲಿನ ಆಕರ್ಷಣೆ ಕಡಿಮೆ ಆದಂತೆ ಭಾಸವಾಗತೊಡಗುತ್ತದೆ. ವೈಪರೀತ್ಯದ ಭೂತ ಅವರ ಮನೆಯಲ್ಲಿದ್ದಂತೆ ರಾಹುಲನಿಗೆ ಅನಿಸುತ್ತದೆ. ಮಾಧವಿಯನ್ನು ಪ್ರೀತಿಸುವ ಮೊದಲು ರಾಹುಲ ರೋಜಿಯನ್ನು ಪ್ರೀತಿಸಿರುತ್ತಾನೆ. ಆದರೆ ಅವಳ ಮೇಲೆ ಸುಳ್ಳು ಆರೋಪವನ್ನು ಹೊರಿಸಿದ್ದರಿಂದ ಅವಳು ಅವನಿಂದ ದೂರವಾಗಿರುತ್ತಾಳೆ. ಆದರೆ ಮಾಧವಿ ಮಾತ್ರ ರಾಹುಲನ ಕಲಾತ್ಮಕವಾದ ಆತ್ಮ ವಿಶ್ಲೇಷಣೆಯನ್ನು ಅರ್ಥೈಸಿಕೊಳ್ಳುವಲ್ಲಿ ವಿಫಲಳಾಗುತ್ತಾಳೆ.

ಮಡ್‌ದ್ವೀಪದಲ್ಲಿ ಪಿಕ್ನಿಕ್ ಪಾರ್ಟಿಯನ್ನು ಏರ್ಪಡಿಸಿದ ರಾಹುಲ, ತಾನು ತೀರ ಆಧುನಿಕ ಮೌಲ್ಯಗಳುಳ್ಳವ, ತೀರ ಮಾರ್ಡನ್, ತೀರ ಸ್ವತಂತ್ರ ಪ್ರವೃತ್ತಿಯವ ಎಂಬುದನ್ನು ತೋರ್ಪಡಿಸಿಕೊಳ್ಳುವ ತನ್ನ ನಿರಾಯಾಸ ಮನೋಭಾವದಿಂದ ಅಲ್ಲಿಯೂ ಕೂಡ ಒಂದು ಯೋಜನೆ ಹೂಡುತ್ತಾನೆ. ಅಂತೆಯೇ ಎಲ್ಲರೂ ಕೂಡ ತಂತಮ್ಮ ಜೋಡಿಯನ್ನು ಬದಲಾಯಿಸಿಕೊಂಡು ಒಂದು ತಾಸು ತಿರುಗಾಡಿ ಬರಬೇಕು ಎಂಬುದು. ಅಂತೆಯೇ ವೈದೇಹಿ ಕಡೆಗೆ ಆಕರ್ಷಿತನಾಗಿದ್ದ ರಾಹುಲ ವೈದೇಹಿಯನ್ನು ತನಗಾಗಿ ಆಯ್ಕೆ ಮಾಡಿಕೊಳ್ಳುತ್ತಾನೆ. ಅವಳ ಮುಂದೆ ತಾನು ಮಾಧವಿಯನ್ನು ಮದುವೆಯಾಗಲು ನಿರಾಕರಿಸಿರುವ ಸಂಗತಿಯನ್ನು ಹೇಳುತ್ತಾನೆ ಒಂದು ವೇಳೆ ಅರವಿಂದ ಏನಾದರೂ ವೈದೇಹಿಯನ್ನು ವಿವಾಹವಾಗದೇ ಇದ್ದರೆ, ತಾನು ಅವಳನ್ನು ಮದುವೆ ಮಾಡಿಕೊಳ್ಳಲು ಸಿದ್ಧನಿರುವುದಾಗಿ ಹೇಳುತ್ತಾನೆ (ಪು. ೬೪). ಅಲ್ಲದೇ ಅವನಿಗೆ ಶಿರೀನಳ ಸ್ವಚ್ಛಂದ ಪ್ರವೃತ್ತಿಯೂ ಸೇರುತ್ತಿರುತ್ತದೆ. ಅವಳ ಸ್ವಚ್ಛಂದ ಪ್ರವೃತ್ತಿಯಿಂದಾಗಿ ಅವಳ ಮೇಲೆ ಮತ್ಸರವೂ ಇರುತ್ತದೆ. ಮಾಧವಿಯನ್ನು ನೇರವಾಗಿ ನಿರಾಕರಿಸಲು ಸಾಧ್ಯವಾಗದ ಕಾರಣ ರಾಹುಲ ಒಂದು ಯೋಜನೆಯನ್ನು ಹೂಡುತ್ತಾನೆ. ಮಾಧವಿಗೆ ತಾನು ನಿಜವಾಗಲೂ ಒಪ್ಪಿಗೆ ಇದ್ದರೆ ಅವಳು ತಮ್ಮ ಮದುವೆಗೂ ಮೊದಲೇ ಒಂದು ರಾತ್ರಿ ಅವನೊಂದಿಗೆ ಕಳೆಯಬೇಕು ಎಂಬುದಾಗಿರುತ್ತದೆ. ಇದು ಆಧುನಿಕ ಯುವಕರ ವಿಕ್ಷಿಪ್ತ ಮನಃಸ್ಥಿತಿಯೂ ಆಗಿದೆ. ಆದರೆ ಮಾಧವಿ ಅದನ್ನು ನಯವಾಗಿಯೇ ನಿರಾಕರಿಸುತ್ತಾಳೆ. ಇದನ್ನೇ ನೆಪವಾಗಿಸಿಕೊಂಡ ರಾಹುಲ ಮಾಧವಿಯನ್ನು ಮದುವೆ ಆಗಲು ನಿರಾಕರಿಸುತ್ತಾನೆ. ಸ್ವಲ್ಪ ದಿನಗಳು ಕಾಯ್ದ ಮಾಧವಿ ಕೊನೆಗೆ ತನ್ನ ಸಂಬಂಧಿಯೇ ಆದ ಶಂಕರ ಅಜ್ಞಾನಿಯೊಡನೆ ಮದುವೆ ಆಗುತ್ತಾಳೆ.

ರಾಹುಲನಿಗೆ ಯಾರೊಂದಿಗೂ ಕೂಡ ಸಹಜ ಸಂಬಂಧವನ್ನು ಹೊಂದುವುದು ಶಕ್ಯವಿರಲಿಲ್ಲ. ಏಕೆಂದರೆ ರಾಹುಲನ ತಾಯಿ ಬೇಗ ಸತ್ತಿದ್ದರಿಂದ ತಂದೆ ಮತ್ತೊಂದು ಲಗ್ನ ಮಾಡಿಕೊಳ್ಳುತ್ತಾರೆ. ಇದು ಚಿಕ್ಕ ಹುಡುಗನಾದ ರಾಹುಲನ ಮನದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟು ಮಾಡಿರುತ್ತದೆ. ತದ ನಂತರ ಅವನು ತನ್ನ ಮಾಂಶಿಯ ಮನೆಗೆ ತೆರಳಿ ಅಲ್ಲಿಯೇ ಬೆಳೆಯುತ್ತಾನೆ. ಹೀಗಾಗಿಯೇ ಆತನ ಮೌಲ್ಯಗಳು ಸಹಜವಾಗಿಯೇ ಬೇರೆಯಾಗುತ್ತವೆ. ಅವನ ಸಂವೇದನೆ, ಅನುಭವದ ಸ್ವರೂಪ ಇವುಗಳಿಂದಾಗಿ ರಾಹುಲ ಭಿನ್ನವಾಗುತ್ತಾನೆ. ಅಂತೆಯೇ ಆತ ಮಾಧವಿಯೊಡನೆಯೂ ಸಹ ತನ್ನ ಸಹಜ ಸಂಬಂಧವನ್ನು ಮುಂದುವರಿಸಲಾರದೇ ಹೋಗುತ್ತಾನೆ.

ತನ್ನ ಸ್ನೇಹಿತರಾದ ಅರವಿಂದ ಮತ್ತು ರಣಜಿತರ ಸ್ನೇಹಿತೆಯರನ್ನು ಕಂಡಾಗ ಮಾಧವಿಗಿಂತ ಅವರೇ ಉತ್ಕೃಷ್ಟ ಎಂಬ ಆಲೋಚನೆ ಬರುತ್ತದೆ. ರಣಜಿತನ ಸ್ನೇಹಿತೆಯಾದ ಶಿರೀನ್‌ಳ ಮುಕ್ತ ವ್ಯಕ್ತಿತ್ವವನ್ನು ಕಂಡು ಅವನಿಗೆ ಅಸೂಯೆಯಾಗುತ್ತದೆ. ಅರವಿಂದನ ಸ್ನೇಹಿತೆಯಾದ ವೈದೇಹಿ ತನಗೆ ಸೂಕ್ತವಾಗುತ್ತಾಳೆ ಎಂದು ಭ್ರಮಿಸುತ್ತಾನೆ. ಅಲ್ಲದೆ ಕುಂದಾ ಶಿರೋಡಕರಳ ಜೊತೆ ಸಂಬಂಧ ಹೊಂದಿದಾಗಲೂ ಕೂಡ, ಆತನಿಗೆ ಅವಳನ್ನು ವಿವಾಹವಾಗಬೇಕೆಂಬ ಕಲ್ಪನೆ ಕೂಡ ಇರುವುದಿಲ್ಲ. ಬೆಳಗಾಂವಿಗೆ ಬಂದಾಗ ಒಂದು ಇಂಟರೆಸ್ಟು ಇರಲಿ ಎಂದು (ಪು. ೧೩೦) ಅವನ ಈ ಯೋಜನೆ ಅವನ ಪ್ರಕಾರ ತೀರ ಆತ್ಮನಿಷ್ಠವಾಗಿರುತ್ತದೆ, ಆತ್ಮಕೇಂದ್ರಿತವಾಗಿರುತ್ತದೆ. ಬೇರೆ ಯಾವ ತೊಡರು,

ಸಂಬಂಧ, ಜವಾಬ್ದಾರಿಗಳಿಂದ ಸ್ವತಂತ್ರವಾಗಿರುತ್ತದೆ. ಅಂತೇ ಸರಳವಾಗಿರುತ್ತದೆ. ಆದ್ದರಿಂದ ರಾಹುಲ ಕುಂದಾ ಶಿರೋಡ್ಕರಳನ್ನು ಪ್ರೀತಿಸುವಂತೆ ನಾಟಕವಾಡುತ್ತಿರುತ್ತಾನೆ. ಇದನ್ನು ತಿಳಿದ ಅವನ ಮಾಂಶಿ ಕೊನೆಗೆ ಅವರಿಬ್ಬರಿಗೂ ಮದುವೆ ಮಾಡಿಸುತ್ತಾಳೆ. ಕುಂದಾಳೊಂದಿಗೆ ವಿವಾಹವಾದ ನಂತರ ಅವನಿಗೆ ತಾನು ಕೆಲಸ ಮಾಡುತ್ತಿದ್ದ ಕಂಪನಿಯ ಕಡೆಯಿಂದ ಇಂಗ್ಲೇಂಡಿಗೆ ಹೋಗುವ ಅವಕಾಶ ದೊರೆಯುತ್ತದೆ. ಆದರೆ ಹೀಗೆ ಹೊರಟಾಗ ರಾಹುಲ ಕುಂದಾಳನ್ನು ತನ್ನೊಂದಿಗೆ ಕರೆದೊಯ್ಯಲು ನಿರಾಕರಿಸುತ್ತಾನೆ. ಅಲ್ಲದೆ ತಾನು ಇಂಗ್ಲೆಂಡಿಗೆ ಹೊರಟಿರುವುದರಿಂದ ಅಲ್ಲಿಯೇ ನೆಲೆ ನಿಂತರೆ ಕುಂದಾಳ ಜೊತೆಗಿನ ಸಂಬಂಧವನ್ನು ಕಡಿದುಕೊಳ್ಳುವುದು ಸುಲಭವಾಗುತ್ತದೆ ಎಂಬುದು ಅವನ ಅಭಿಪ್ರಾಯವಾಗಿರುತ್ತದೆ. ಏಕೆಂದರೆ ರಾಹುಲನ ಪ್ರಕಾರ ಅವನೊಬ್ಬ ಜಿಪ್ಸಿ. ಊರಿಂದ ಊರಿಗೆ, ದೇಶದಿಂದ ದೇಶಕ್ಕೆ ಸಂಸ್ಕೃತಿಯಿಂದ ಸಂಸ್ಕೃತಿಗೆ ಹೆಣ್ಣಿನಿಂದ ಹೆಣ್ಣಿಗೆ ತಿರುಗುವ ಜಿಪ್ಸಿ" (ಪು. ೨೫೮). ಹೀಗಾಗಿಯೇ ಅವನ ಆತ್ಮಕ್ಕೆ 'ಬೇರು' ಎಂಬುದೂ ಇಲ್ಲ. ಹೀಗಾಗಿಯೇ ಅದಕ್ಕೆ ಹೃದಯವೂ ಇಲ್ಲ. ತಳವೂ ಇಲ್ಲ ಬುಡವೂ ಇಲ್ಲ. ಚಕ್ರದಂತೆ ದಿಕ್ಕು ಕಂಡ ಕಡೆಗೆ ಉರುಳುವುದೇ ಆತನ ಆತ್ಮೀಯ ನಿಯಮವಿದ್ದಂತೆ ತೋರುತ್ತಿತ್ತು.

ಹೀಗಾಗಿಯೇ ಅವನಿಗೆ ಕುಂದಾ ಮತ್ತು ಅವನು ಇಬ್ಬರೂ ಸಂಬಂಧದ ವರ್ತುಲದಲ್ಲಿಯೇ ಕೂಡಿ ಹಾಳಾಗುತ್ತಿದ್ದೇವೆ ಎಂಬ ಅಭಿಪ್ರಾಯವಿರುತ್ತದೆ. ತನ್ನ ವ್ಯಕ್ತಿತ್ವದ ನಿಯಮದ ಪ್ರಕಾರ ಆತ ತನ್ನ – ತನವನ್ನು ಶೋಧಿಸಬೇಕಾಗಿರುತ್ತದೆ. ಅದಕ್ಕೆ ತಾನು ಇಂಗ್ಲೇಂಡಿಗೆ ಹೋಗಬೇಕಾಗಿದೆ ಎಂಬುದು ರಾಹುಲನ ಅಭಿಪ್ರಾಯವಾಗಿರುತ್ತದೆ. ಆತನಿಗೆ ಆತನ ಪ್ರಸ್ತುತ ಜೀವನ ಮಾತ್ರ ಮುಖ್ಯವಾಗಿರುತ್ತದೆ. ಹೀಗಾಗಿ ಆತ ತನ್ನ ಬಗ್ಗೆ ತನ್ನ ಭವಿಷ್ಯದ ಬಗ್ಗೆ ಮಾತ್ರ ಆಲೋಚಿಸುತ್ತಾನೆ. ಕುಂದಾಳನ್ನು ಬಿಟ್ಟು ಬಿಡಲು ನಿರ್ಧರಿಸಿದಾಗಲೂ ಕೂಡ ಆತನಲ್ಲಿ ಯಾವುದೇ ವಿಷಾದವಾಗಲೀ, ಪಶ್ಚಾತ್ತಾಪವಾಗಲೀ ಕಂಡು ಬರುವುದಿಲ್ಲ. ಅವನು ಇದನ್ನು ಒಂದು ಸಹಜ ಪ್ರಕ್ರಿಯೆ ಎಂದೇ ಭಾವಿಸಿರುತ್ತಾನೆ. ಹೀಗಾಗಿ ಆತನಿಗೆ ಯಾವುದೇ ನೋವು ಕೂಡ ಇರುವುದಿಲ್ಲ. ತಾನು ಕುಂದಾಳೊಂದಿಗೆ ವಿವಾಹವಾದರೂ ಕೂಡ ರಾಹುಲನು ಎಂದೂ ತನ್ನ ಗತಜೀವನವನ್ನು ಕುರಿತು ಚಿಂತಿಸುವುದಿಲ್ಲ. ಹೀಗೆ ರಾಹುಲ ಒಂದು ರೀತಿಯ ನಿರ್ಲಿಪ್ತತೆಯನ್ನು ಮೈಗೂಡಿಸಿಕೊಂಡಿರುತ್ತಾನೆ. ಆಧುನಿಕ ಜೀವನ ಪರಿಣಾಮ ಎಂಬಂತೆ ಎಲ್ಲದರಲ್ಲಿಯೂ ಒಂದು ರೀತಿಯ ಅನಾಸಕ್ತಿ ಎದ್ದು ಕಾಣುತ್ತದೆ. ಆತ್ಮೀಯ ಸ್ನೇಹಿತನಾದ ರಣಜಿತನ ಸಾವಿನ ಸುದ್ದಿಯೂ ಕೂಡ ಅವನಿಗೆ ತಡವಾಗಿ ತಿಳಿಯುತ್ತದೆ. ರಣಜಿತನ ಸಾವಿನ ಬಗ್ಗೆ ತನ್ನನ್ನು ವಿಚಾರಿಸಲು ಪೋಲೀಸರು ಬಂದಾಗ ರಾಹುಲನು ಕುಂದಾಳಿಗೆ ತಾನು 'ಒಂದಾನೊಂದು ಕಾಲದಲ್ಲಿ ರಣಜಿತನ ಗೆಳೆಯನಿದ್ದೆ–ನಿಜ' ಎಂದು ಹೇಳುವಲ್ಲಿ ನಾವು ರಾಹುಲನ ವಿಕ್ಷಿಪ್ತ ಮನಃಸ್ಥಿತಿಯನ್ನು ಅರಿಯಬಹುದಾಗಿದೆ.

ಜೀವನದಲ್ಲಿ ಬಂದುದನ್ನು ಬಂದ ಹಾಗೆ ಎದುರಿಸಬೇಕು ಎಂಬ ಮನೋಭಾವನೆ ರಾಹುಲನದ್ದು. ಹೀಗಾಗಿಯೇ ಅವನು ಮಾಧವಿಯನ್ನು ಬಿಟ್ಟಂತೆ ಕುಂದಾಳನ್ನೂ ಬಿಟ್ಟು ವೈಯಕ್ತಿಕವಾಗಿ ತಾನು ತಾನಾಗಿಯೇ ಜೀವಿಸಬೇಕೆಂಬ ಹಂಬಲ ಹೊಂದುತ್ತಾನೆ. ತನ್ನದು

'ಶಾಪಗ್ರಸ್ತ ಆತ್ಮ' (ಪು. ೨೫೭) ಎಂಬುದು ಅವನ ಭಾವನೆಯಾಗಿರುತ್ತದೆ. ಹೀಗಾಗಿ ತನ್ನ ಶಾಪಗ್ರಸ್ತ ಆತ್ಮಕ್ಕೆ ತಕ್ಕಂಥ ಪರಿಸರ ಸಿಕ್ಕರೆ ಮಾತ್ರ ಅದು ವಿಕ್ಷೇಪದಿಂದ ಮುಕ್ತವಾಗಿ, ಸುಖವಾಗಿ, ಸಮಾಧಾನದಿಂದ ಸಾಯಲಿ. ಒಂದು ವೇಳೆ ಹೀಗಾದಾಗ ಮಾತ್ರ ತಾನು ಕನಿಷ್ಠ ಒಂದು ರೀತಿಯ ಶಾಂತಿಯನ್ನಾದರೂ ಅನುಭವಿಸಬಹುದು. ಕುಂದಾಳ ಬಗ್ಗೆ ಸಹಾನುಭೂತಿ ಇದ್ದರೂ ಕೂಡ ಅವನ ಆತ್ಮ ಆ ಸಹಾನುಭೂತಿಯ ಆಳಾಗಿ ಇರುವುದನ್ನು ಒಪ್ಪಿಕೊಳ್ಳುವುದಿಲ್ಲ. ತಾನು ಸ್ವಂತಂತ್ರನಾಗಿಯೇ ಇರಬೇಕು ಎಂಬುದು ಅವನ ಆಲೋಚನೆ ಆಗಿರುತ್ತದೆ. ಯಾರೊಂದಿಗೂ ಕೂಡ ಸ್ಥಿರ ಸಂಬಂಧವನ್ನು ಹೊಂದುವುದು ರಾಹುಲನಿಗೆ ಸಾಧ್ಯವಾಗುವುದೇ ಇಲ್ಲ.

ಒಟ್ಟಾರೆಯಾಗಿ ದೇಸಾಯಿ ಅವರು ಮುಕ್ತಿಯ ಗೌರೀಶ ಹಾಗೂ ವಿಕ್ಷೇಪದ ರಾಹುಲನ ಪಾತ್ರಗಳ ಮೂಲಕ ಯುವ ಜನತೆಯ ಮಾನಸಿಕ ತಲ್ಲಣ, ತುಮುಲಗಳನ್ನು, ಆಧುನಿಕ ಯುವ ಪೀಳಿಗೆಯ ಮನೋಭಾವವನ್ನು ಸಮರ್ಥವಾಗಿ, ಕಲಾತ್ಮಕವಾಗಿ, ಸಂಜ್ಞಾಪ್ರವಾಹದಲ್ಲಿ ಚಿತ್ರಿಸಿದ್ದಾರೆ. ಆಧುನಿಕ ಮನೋಭಾವದ ಪ್ರಭಾವದಿಂದಾಗಿ ಯುವಪೀಳಿಗೆ ತಮ್ಮ ಜವಾಬ್ದಾರಿಗಳಿಂದ, ಹೊಣೆಗಾರಿಕೆಯಿಂದ ಹಿಂದೆ ಸರಿಯುವುದನ್ನು ದೇಸಾಯಿ ಅವರು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ಆಕರ ಕಾದಂಬರಿಗಳು :

೧. ಶಾಂತಿನಾಥದೇಸಾಯಿ, ೨೦೧೨, ಮುಕ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು.
೨. ಶಾಂತಿನಾಥ ದೇಸಾಯಿ, ೧೯೭೧, ವಿಕ್ಷೇಪ, ಪಾಪ್ಯುಲರ್ ಪ್ರಕಾಶನ, ಮುಂಬಯಿ

ಅಧ್ಯಾಯ : ಏಳು

ಧಾರ್ಮಿಕ ಸಂಘರ್ಷಗಳು

ಅಧ್ಯಾಯ : ಏಳು

ಧಾರ್ಮಿಕ ಸಂಘರ್ಷಗಳು

'ಓಂ ಣಮೋ' ಮತ್ತು 'ಸಂಸ್ಕಾರ' ಕಾದಂಬರಿಗಳ ಹಿನ್ನೆಲೆಯಲ್ಲಿ

೭.೧ ಓಂ ಣಮೋ (೧೯೯೮) :

'ಓಂ ಣಮೋ' ದೇಸಾಯಿ ಅವರ ಏಳನೆಯ ಹಾಗೂ ಕೊನೆಯ ಕಾದಂಬರಿ. ದೇಸಾಯಿ ಅವರು ೧೯೯೫ ರಲ್ಲಿಯೇ ಈ ಕಾದಂಬರಿಯನ್ನು ಬರೆಯಲು ಪ್ರಾರಂಭಿಸಿದರೂ ಕೂಡ ಹಲವಾರು ಕಾರಣಗಳಿಂದಾಗಿ ೧೯೯೬ ರಲ್ಲಿ ಮತ್ತೆ ಹೊಸದಾಗಿ ಬರೆಯಲು ಪ್ರಾರಂಭಿಸುತ್ತಾರೆ. ಆದರೆ ೧೯೯೮ ರಲ್ಲಿ ಕಾದಂಬರಿಯ ಮುದ್ರಣ ಪ್ರತಿಯ ಕಾರ್ಯ ಮುಗಿಯುವಷ್ಟರಲ್ಲಿ ದೇಸಾಯಿ ಅವರು ತಮ್ಮ ಅನಾರೋಗ್ಯದಿಂದಾಗಿ ಮರಣ ಹೊಂದುತ್ತಾರೆ. ಹೀಗಾಗಿ ಈ ಕೃತಿಯು ಅವರ ಮರಣಾ ನಂತರ ಪ್ರಕಟಗೊಳ್ಳುತ್ತದೆ.

ಮಾನವತಾ ಅಸ್ತಿತ್ವವಾದ ಮತ್ತು ನವ್ಯ ಪ್ರಕಾರದಲ್ಲಿ ತಮ್ಮ ಸಾಹಿತ್ಯ ರಚನೆಯನ್ನು ಮಾಡಿದ ದೇಸಾಯಿ ಅವರು ಕೊನೆಯವರೆವಿಗೂ ಕೂಡ ನವ್ಯ ಸಾಹಿತಿಯಾಗಿಯೆ ಉಳಿದವರು. ದೇಸಾಯಿ ಅವರ ಎಲ್ಲಾ ಕಾದಂಬರಿಗಳು ಮತ್ತು ಬಹುತೇಕ ಕಥೆಗಳಲ್ಲಿ ಪ್ರಮುಖ ಪಾತ್ರಗಳು ಅಸ್ತಿತ್ವದ ಹುಡುಕಾಟದಲ್ಲಿರುವುದನ್ನು ಗುರುತಿಸಬಹುದು 'ಓಂ ಣಮೋ' ಕಾದಂಬರಿಯನ್ನು ಕುರಿತಂತೆ ಕಾದಂಬರಿಯ ಮಧ್ಯದಲ್ಲಿಯೇ ಲೇಖಕರು ತಮ್ಮ ಈ ಕೃತಿ ರಚನೆಯ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ. "... ಈ ಲೇಖಕ ನಿಧರ್ಮಿಕ ಮಾನವತಾವಾದೀ ಅಸ್ತಿತ್ವವಾದಿ ಮನುಷ್ಯನೆಂದು ತಿಳಿದಿದ್ದೀವಿ. ಆದರೆ ಈತನಲ್ಲಿ ನಮ್ಮಲ್ಲಿಯ ಕೆಲವು ಕವಿಗಳಲ್ಲಿ–ಲೇಖಕರಲ್ಲಿ ವಯಸ್ಸಾದಂತೆ ತಮ್ಮ ಧರ್ಮದಲ್ಲಿ ಪ್ರತಿಗಾಮಿ ಆಸ್ಥೆಯುಂಟಾದಂತೆ– ತನ್ನ ಧರ್ಮದ ಬಗ್ಗೆ ಪ್ರತಿಗಾಮೀ ಪ್ರೀತಿ ಉಂಟಾಗಿವೆಯೇ' ಎಂದು ಸಂಭ್ರಮ ಪಡಬಹುದು. ನನಗೆ ನನ್ನ ಕಥೆಯನ್ನು ಒಂದು ರೀತಿಯಲ್ಲಿ ಹೇಳಬೇಕಾಗಿದೆ, ಹಾಗೂ ಆ ರೀತಿಯಲ್ಲಿ ಓದುಗರೊಡನೆ ಅಲ್ಲಲ್ಲಿ ಮಾತಾಡುವ ತಂತ್ರವೂ ಇದೆ– ಎಂದಿಷ್ಟೇ ಸದ್ಯ ಹೇಳಬಲ್ಲೆ. ಒಂದು ಸರ್ವಸಾಧಾರಣ ಉದ್ದೇಶವೆಂದರೆ ನನ್ನ ಜೈನ– ಅನುಭವ (ಅದು ಎಷ್ಟೇ ಸೀಮಿತವಿದರೂ) ಅದರ ಬಗ್ಗೆ ಒಂದು ಕಾದಂಬರಿಯನ್ನು ಬರೆಯುವುದು."

ಹೀಗೆ ದೇಸಾಯಿ ಅವರು ತಮ್ಮ ಜೈನ ಅನುಭವವನ್ನು ಕುರಿತು 'ಓಂ ಣಮೋ' ಕಾದಂಬರಿಯನ್ನು ರಚಿಸಿದ್ದರೂ ಕೂಡ ನಾವು ಇಲ್ಲಿ ಧಾರ್ಮಿಕ ಸಂಘರ್ಷಗಳನ್ನು ಗುರುತಿಸಬಹುದಾಗಿದೆ. 'ಓಂ ಣಮೋ' ಕೃಷ್ಣಾಪುರ ಎಂಬಲ್ಲಿನ ಮೂರು ತಲೆಮಾರುಗಳ ಜೈನ ದಿಗಂಬರ ಕುಟುಂಬವೊಂದರ ಕತೆಯನ್ನು ಒಳಗೊಂಡಿದೆ. ರಾವಸಾಹೇಬ ಅಪ್ಪಾಸಾಹೇಬ ಆದಪ್ಪ

ದೇಸಾಯಿ ಕೃಷ್ಣಾಪುರದ ಒಬ್ಬ ಶ್ರೀಮಂತ ಜೈನ ವ್ಯಕ್ತಿ. ಈತನ ಅಣ್ಣ ದೇವೇಂದ್ರಪ್ಪನ ಒಬ್ಬನೇ ಮಗ ನೇಮಿನಾಥ. ಅವನು ಇಂಗ್ಲೆಂಡಿನಲ್ಲಿದ್ದಾನೆ. ನೇಮಿನಾಥನು ಇಂಗ್ಲೆಂಡಿಗೆ ಉನ್ನತ ವ್ಯಾಸಂಗಕ್ಕೆ ತೆರಳುವ ಮೊದಲೇ ಬೆಳಗಾಂವಿಯ ಶ್ರೀಮಂತ ಸರಾಫಿ ವ್ಯಾಪಾರಿ ಕಲ್ಲಪ್ಪ ಶೆಟ್ಟಿಯವರ ಮಗಳ ಜೊತೆ ಲಗ್ನವಾಗಿರುತ್ತದೆ. ಆದರೆ ಲಗ್ನವಾದ ಒಂದು ತಿಂಗಳಿನಲ್ಲಿಯೇ ಇಂಗ್ಲೆಂಡಿನ ಡರ್‌ಹಮ್ ಯುನಿವ್ಹರ್ಸಿಟಿಗೆ ಹೋದ ನೇಮಿನಾಥನು ಅಲ್ಲೇ ಇಂಗ್ಲೀಷ್ ಹುಡುಗಿಯಾದ ಎಮಿಲಿಯಾಳ ಜೊತೆ ವಿವಾಹವಾಗುತ್ತಾನೆ. ಇದರಿಂದ ನೊಂದ ನೇಮಿನಾಥನ ಹೆಂಡತಿ ಧಾರ್ಮಿಕಾಚರಣೆಯಲ್ಲಿ ನಿರತಳಾಗಿ ಕೊನೆಗೆ ಆರ್ಯಿಕೆಯಾಗಿ ಯಾವುದೋ ನಿಗ್ರಂಥ ಸ್ವಾಮಿಯ ಸಂಘಕ್ಕೆ ಸೇರುತ್ತಾಳೆ. ನೇಮಿನಾಥ ಹಾಗೂ ಎಮಿಲಿಯಾಳ ಮಗನೇ ಈ ಕಥೆಯ ಕೇಂದ್ರವಾದ ಆ್ಯಡಂ. ನೇಮಿನಾಥ ತನ್ನ ಅಜ್ಜನ ಹೆಸರಾದ 'ಆದಪ್ಪ' ಎಂಬುದನ್ನೇ ತನ್ನ ಇಂಗ್ಲೀಷ್ ಹೆಂಡತಿಗೆ ಒಪ್ಪಿಗೆಯಾಗುವಂತೆ, ತನ್ನ ಮಗನಿಗೆ 'ಆ್ಯಡಂ ದೇಸಾಯಿ' ಎಂದು ಹೆಸರನ್ನಿಟ್ಟಿರುತ್ತಾನೆ.

ಆ್ಯಡಂ ತನ್ನ ಗೆಳತಿಯಾದ ಆ್ಯನ್ ಈಗಲ್ಟನ್ ಜೊತೆ ಭಾರತಕ್ಕೆ ಬಂದಿರುತಾನೆ. ಆ್ಯನ್ ಇಂಡಿಯಾದ ಜೈನ ಧರ್ಮದ ಬಗ್ಗೆ ರೀಸರ್ಚ್ ಮಾಡುವ ಉದ್ದೇಶವನ್ನು ಹೊಂದಿರುತ್ತಾಳೆ. ಆ್ಯಡಂ ಅರ್ಧ ಕ್ರಿಶ್ಚಿಯನ್, ಅರ್ಧ ಜೈನ್ ಇದ್ದರೂ ಕೂಡ ಕ್ರಿಶ್ಚಿಯನ್ನನೇ ಆಗಿರುತ್ತಾನೆ. ಅಲ್ಲದೇ ಜೈನರದು ದೊಡ್ಡ ಸಮಾಜ ಮತ್ತು ಆತನ ಗ್ರ್ಯಾಂಡ್ ಪೇರೆಂಟ್ಸು, ಅಂಕಲ್ಸ್, ಆಂಟೀಜ, ಕಜಿನ್ಸ್... ಇವರುಗಳ ಬಗ್ಗೆ ವಸ್ತುನಿಷ್ಠತೆ ಸಾಧ್ಯವಾಗುವುದಿಲ್ಲ ಎಂಬುದು ಅವನ ಸ್ಪಷ್ಟ ಅಭಿಪ್ರಾಯ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಯಾವುದೇ ವ್ಯಕ್ತಿ ತನ್ನ ಧರ್ಮದ ಹಿನ್ನೆಲೆಗೆ ಬಂದಾಗ ಆ ವಿಷಯದಲ್ಲಿ ವಸ್ತುನಿಷ್ಠತೆ ಸಾಧಿಸುವುದು ಕಷ್ಟವಾಗುತ್ತದೆ. ಹಾಗಂತಲೇ 'ಓಂ ಣಮೋ' ದಲ್ಲಿ ದೇಸಾಯಿ ಅವರು ಜೈನ ಧರ್ಮದ ಜೊತೆಗೆ ಆ್ಯನ್ ಈಗಲ್ಟನ್ನಳ ಮೂಲಕ ಕ್ರಿಶ್ಚಿಯನ್ ಧರ್ಮವನ್ನು ಒಳಗೊಳ್ಳುವುದು ಅವರ ಆಧುನಿಕ – ಆಧುನಿಕೋತ್ತರ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಭಾರತಕ್ಕೆ ಬಂದ ಆ್ಯಡಂ ಮತ್ತು ಆ್ಯನ್, ಆ್ಯಡಂನ ಖಾಸಾ ಅಜ್ಜನಾದ ದೇವೇಂದ್ರಪ್ಪನ ಮನೆಯಲ್ಲಿರುತ್ತಾರೆ. ಆ್ಯಡಂನ ರೂಮು ದೇವೇಂದ್ರಪ್ಪನ ಮನೆಯಲ್ಲಿ ಹಾಗೂ ಆ್ಯನ್ ಅಪ್ಪಾ ಸಾಹೇಬರು ತಮ್ಮ ಅಟ್ಟದ ಮೇಲೆ ಸ್ಪೆಷಲ್ಲಾಗಿ ಕಟ್ಟಿಸಿದ ಗೆಸ್ಟ್ ರೂಮಿನಲ್ಲಿರುತ್ತಾಳೆ. ಈ ಮೂಲಕ ದೇವೇಂದ್ರಪ್ಪನ ಮುಖ್ಯ ಸಮಾಧಾನ ಏನೆಂದರೆ ಆ್ಯಡಂ – ಆ್ಯನ್ ಇವರ ನಡುವೆ ಏನೇ ಇದ್ದರೂ, ಅದೆಲ್ಲ ಆ ಪಾಪದ ಬಂಗಲೆಯಲ್ಲಿ ನಡೆಯಲಿ, ನನ್ನ ಮನೆಯಲ್ಲಿ ಬೇಡ ಎಂಬುದು. ಇಲ್ಲಿ ನಾವು ದೇವೇಂದ್ರಪ್ಪನ ಧಾರ್ಮಿಕ ಮನೋಭಾವನೆಯನ್ನು ಗುರುತಿಸಬಹುದು. ಆ್ಯನ್ ಮತ್ತು ಆ್ಯಡಂ ಇಂಗ್ಲೆಂಡಿನವರಾಗಿದ್ದರಿಂದ ಸ್ವಚ್ಛಂದ ವರ್ತನೆಯನ್ನು ಹೊಂದಿರುತ್ತಾರೆ ಎಂಬುದು ಅವನ ಆಲೋಚನೆಯಾಗಿರುತ್ತದೆ.

ಅಪ್ಪಾಸಾಹೇಬ ಮೊದಲಿನಿಂದಲೂ ಕೂಡ ಉಡಾಳತನದ ಮನೋಭಾವ ಹೊಂದಿರುತ್ತಾನೆ. ತಾನು ಲೀಡರನಾಗಬೇಕು, ಜನಪ್ರಿಯನಾಗಬೇಕು, ಎಲ್ಲರನ್ನು ಮೆಚ್ಚಿಸಬೇಕು, ಎಲ್ಲರಿಂದಲೂ ಹೊಗಳಿಸಿಕೊಳ್ಳಬೇಕು ಎಂಬ ಮನೋಭಾವವನ್ನು ಹೊಂದಿರುತ್ತಾನೆ. ಆದರೆ ದೇವೇಂದ್ರಪ್ಪ ಮಾತೃಮುಖಿ, ಸೂಕ್ಷ್ಮ ಮನಃಸ್ಥಿತಿಯನ್ನು ಹೊಂದಿರುತ್ತಾನೆ. ಹೀಗಾಗಿ ಜೀವನದಲ್ಲಿ ಅಪ್ಪಾ –

ಸಾಹೇಬ ಮೇಲೆ ಮೇಲೆ ಏರುತ್ತಾ ಹೋದಂತೆ, ದೇವೇಂದ್ರಪ್ಪ ಧರ್ಮದ ಆಶ್ರಯದಲ್ಲಿ ತನ್ನನ್ನು ತಾನು ಸಾವರಿಸಿಕೊಳ್ಳಲು, ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಯತ್ನಿಸುತ್ತಿರುತ್ತಾನೆ. ಊರಿನಲ್ಲಿ ತಾನೊಂದು ಚಿಕ್ಕ ಬಸ್ತಿಯನ್ನು ಕಟ್ಟಿಸಲು ಕೊಲ್ಹಾಪುರದ ಭಟ್ಟಾರಕರನ್ನು ಭೆಟ್ಟಿಯಾಗಿ, ಅವರ ಅಪ್ಪಣೆ ಮೇರೆಗೆ ಕೆಲಸ ಪ್ರಾರಂಭಿಸಬೇಕೆನ್ನುವಷ್ಟರಲ್ಲಿ, ಅಪ್ಪಾ ಸಾಹೇಬ ಅಣ್ಣನನ್ನು ಭೇಟಿಯಾಗಿ ಇಬ್ಬರೂ ಸೇರಿ ಬಸ್ತಿಯನ್ನು ಕಟ್ಟೋಣ ಎಂದು ಹೇಳುತ್ತಾನೆ. ಆದರೆ ಕೊನೆಗೆ ಅಪ್ಪಾ ಸಾಹೇಬನೇ ಒಂದು ದೊಡ್ಡ ಬಸ್ತಿಯನ್ನು ನಿರ್ಮಿಸಿ, ವೈಭವದಿಂದ ಅದರ ಉದ್ಘಾಟನೆಯನ್ನು ನೆರವೇರಿಸುತ್ತಾನೆ. ಮುಂದೆ ಶ್ರವಣ ಬೆಳಗೊಳದಿಂದಲೇ ಒಬ್ಬ ಒಳ್ಳೆಯ ಪಂಡಿತನನ್ನು ಆರಿಸಿ ಬಸ್ತಿಯ ಪೂಜೆಗಾಗಿ ಕರೆತಂದು ಅವನಿಗೆ ಒಂದು ಮನೆಯನ್ನು ಮಾಡಿಕೊಡುತ್ತಾನೆ. ದೇವೇಂದ್ರಪ್ಪ ತನ್ನ ಹತ್ತು ಎಕರೆ ಹೊಲವನ್ನು ಬಸ್ತಿಗೆ ಬಿಟ್ಟುಕೊಡುತ್ತಾನೆ. ಇಲ್ಲಿ ದೇವೇಂದ್ರಪ್ಪನ ಧಾರ್ಮಿಕ ನಿಷ್ಠೆ ಗಮನ ಸೆಳೆಯುತ್ತದೆ.

ಅಪ್ಪಾಸಾಹೇಬರ ಮಗನಾದ ಭರತ ಆಧುನಿಕ ಮನೋಭಾವದ ತರುಣನ ಪ್ರತೀಕವಾಗಿದ್ದಾನೆ. ಮನೆಯಲ್ಲಿ ತೀರಾ ಸಂಭಾವಿತನಂತೆ ಇರುತ್ತಿದ್ದ ಭರತ, ಮನೆಯಿಂದ ಹೊರ ಬಿದ್ದಂತೆಯೇ ಸ್ವಚ್ಛಂದವಾಗಿರುತ್ತಿದ್ದ. ಭರತನಿಗೆ ಅವನ ತಂದೆಯ ಧಾರ್ಮಿಕ ಸೋಗಿನ ಬಗ್ಗೆ ದ್ವೇಷ ಇತ್ತು. ಅವನ ಪ್ರಕಾರ ಅವನ ತಂದೆಯಷ್ಟು ಧರ್ಮ ಲಂಪಟ ಮತ್ತೊಬ್ಬರಿರಲು ಸಾಧ್ಯವಿರಲಿಲ್ಲ. 'ಜೈನಿಜಂ ಅಂದರೆ ದಿಗಂಬರತ್ವ ಅಷ್ಟೇ' ಎಂಬುದು ಅವನ ಅನಿಸಿಕೆ ಆಗಿರುತ್ತದೆ. ಹೀಗಾಗಿ ಆತ ಮನೆಯಿಂದ ಹೊರಗೆ ತನ್ನ ಹಳೇ ಗೆಳತಿಯರ ಜೊತೆ ತಿರುಗಾಡುವುದು, ಪ್ರಾನ್ಸ್, ಫಿಶ್ ತಿನ್ನುವುದು, ಚಿಕನ್ ಸೂಪ್ ಸೇವಿಸುವುದು ಎಲ್ಲವನ್ನೂ ಮಾಡುತ್ತಿರುತ್ತಾನೆ. ಆ್ಯನ್‌ಳನ್ನು ಮೊದಲ ಬಾರಿಗೆ ನೋಡಿದಾಗ ಆ್ಯಡಂ ನಿಜಕ್ಕೂ ಇವಳನ್ನು ಪ್ರೀತಿಸದಿದ್ದರೆ, ಮದುವೆ ಆಗೋದಿಲ್ಲ ಅಂದರೆ ಇವಳ ಜೊತೆ ಏನೇನೋ ಮಾಡಬಹುದು ಎಂದು ಆಲೋಚಿಸುತ್ತಾ, ತಾನಿನ್ನೂ ಬಿಳಿ ಹುಡುಗಿಯ ಜೊತೆ ಮಲಗಿಲ್ಲವಲ್ಲ; ಇಲ್ಲಿ ಏನಾದರೂ ಒಂದು ಅವಕಾಶವಿದೆಯೇ ಎಂದು ಪ್ರಶ್ನಿಸಿಕೊಳ್ಳುವಲ್ಲಿ ಭರತನು ತನ್ನ ಧರ್ಮದ ವಿರುದ್ಧ ಸಂಘರ್ಷಕ್ಕಿಳಿದಿರುವುದನ್ನು ಗುರುತಿಸಬಹುದು. ಆತನ ಪ್ರಕಾರ ಸ್ವಾತಂತ್ರ್ಯ ಏನೆಂದು ಇಂಗ್ಲೆಂಡ್ ಜನರಿಂದಲೇ ಕಲಿಯಬೇಕು. ಏಕೆಂದರೆ ಅವನಿಗೆ ಮನೆಯಲ್ಲಿ ಎಲ್ಲಾ ಇದ್ದೂ ಸ್ವಾತಂತ್ರ್ಯವಿರಲಿಲ್ಲ. ಮನೆ ಹೊರಗೇನೇ ಸ್ವಾತಂತ್ರ್ಯ ದೊರಕಿಸಿಕೊಳ್ಳಬೇಕಾಗಿತ್ತು. ಎಲ್ಲಾ ಕಡೆ ಡಬಲ್ ಲೈಫ್, ಒಳಗೊಂದು, ಹೊರಗೊಂದು, ಒಳಹೆಣ್ಣು, ಹೊರಹೆಣ್ಣು ಇತ್ಯಾದಿ ಅನಿವಾರ್ಯ ಎಂಬಂತೆ ಆಗಿರುತ್ತದೆ.

ಆತನ ಪ್ರಕಾರ ಅಧುನಿಕ ಜಗತ್ತಿನಲ್ಲಿ ಜೈನ ಧರ್ಮದ ತತ್ವಗಳೆಲ್ಲಾ ಹಾಸ್ಯಾಸ್ಪದವಾಗಿವೆ. ಅದರ ಪ್ರಕಾರ ಜೀವನ ನಡೆಸುವುದೆಂದರೆ ಎಲ್ಲರೂ ಉಪವಾಸ ಸಾಯಬೇಕು. ಜೀವಂತ ಇರೋದೇ ಶಕ್ಯವಿಲ್ಲ. ದೇವೇಂದ್ರಪ್ಪ ತಾನು ಸಮ್ಮೇದಶಿಖರದಲ್ಲಿಯೇ ಉಳಿದುಕೊಳ್ಳುವುದು ಅರ್ಥವಿಲ್ಲದ್ದು. ಸ್ವಾಮಿಯಾಗೋದಾದರೆ ರಿಡ್ಯುಕ್ಯುಲಸ್ ಎಂಬುದು ಅವನ ಅಭಿಪ್ರಾಯ. ಆ್ಯನ್ ಜೈನ ಧರ್ಮವನ್ನು ಸ್ವೀಕರಿಸಿದ್ದಕ್ಕೆ ಭರತ, "ಜೈನಳಾಗಿ ಅವಳಿಗೆ ಏನೂ ಸಿಗುವುದಿಲ್ಲ. ಜೈನ ಸಮಾಜ ಅವಳನ್ನು ಅಲಂಕಾರದಂತೆ ಬಳಸುತ್ತದೆ" ಎಂದು ಪ್ರತಿಕ್ರಿಯಿಸುತ್ತಾನೆ. ಜೈನ ಧರ್ಮ ತೀರಾ ನೆಗೆಟೀವ್ ಧರ್ಮ. ಅದರಲ್ಲಿ ಪಾಸಿಟೀವ್ ಅನ್ನೋದು ಏನೂ ಇಲ್ಲ. ಅದು ಮೃತ್ಯುವಿನ

ಕಡೆಗೆ ಒಯ್ಯುವ ಧರ್ಮ; ಎಲ್ಲಾ ತ್ಯಾಗ ಮಾಡ್ತ ಕೊನೆಗೆ ಸಲ್ಲೇಖನವೆಂಬ ಆತ್ಮಹತ್ಯೆ ಮಾಡಿಕೊಳ್ಳುವ ಧರ್ಮ. ಅವಳು ತನ್ನ ಕ್ರಿಶಿಯನ್ ಧರ್ಮ ಬಿಟ್ಟು ಈ ಕೆಟ್ಟ ಧರ್ಮವನ್ನು ಹೇಗೆ ಸ್ವೀಕರಿಸಿದಳೋ?" "ಚರಿತ್ರೆ ಕೆಲವರಿಗಷ್ಟೆ ಸೀಮಿತವಾದದ್ದು, ದಿಗಂಬರತ್ವ ಸ್ವಾಮಿಗಳನ್ನು ಜನರಿಂದ ದೂರ ಇಟ್ಟಿರುವುದರಿಂದ ಜೈನ ಧರ್ಮದಲ್ಲಿನ ಅರ್ಥವಿಲ್ಲದ ಬಂಧನಗಳನ್ನು ತೆಗೆದು ಹಾಕಿ ಅದನ್ನು ಮಾರ್ಡನ್ ಮಾಡಬೇಕಾಗಿದೆ" ಎಂದು ಭರತ ಹೇಳುವಲ್ಲಿ ಅವನ ಧಾರ್ಮಿಕ ಸಂಘರ್ಷವನ್ನು, ಜೈನ ವಿರೋಧಿ ಭಾವನೆಯನ್ನೂ ಗುರುತಿಸಬಹುದಾಗಿದೆ.

ಆ್ಯಡಂ ಅರ್ಧ ಕ್ರಿಶ್ಚಿಯನ್, ಅರ್ಧ ಜೈನ್ ಇದ್ದರೂ ಹಾಗೆ ಕ್ರಿಶ್ಚಿಯನ್‌ನೇ. ಆ್ಯನ್ ತನ್ನ ಅಧ್ಯಯನಕ್ಕೆ ವಿಷಯ ಹುಡುಕುತ್ತಿರುವಾಗ ಆ್ಯಡಂನೇ ಅವಳಿಗೆ 'ನಮ್ಮ ಗ್ರ್ಯಾಂಡ್ ಪಾ, ಅವನ ತಮ್ಮ, ಅವನ ಸಂಬಂಧಿಕರು ಎಲ್ಲ ಜಿನರು. ಈ ಜೈನ್ ಟ್ರ್ಯಾಬ್ ಮೇಲೆ ಯಾಕೆ ರಿಸರ್ಚ್ ಮಾಡಬಾರದು ನೀನು' ಎಂದು ಹೇಳುವ ಮೂಲಕ ವಿಷಯದ ಆಯ್ಕೆಯನ್ನು ಕೊಡುತ್ತಾನೆ. ಅದಕ್ಕೆ ಅವರ ಪ್ರೊಫೆಸರ ವಿಲಿಯಮ್ಸ್ ಕೂಡಾ ಒಪ್ಪಿಕೊಂಡು, ಗ್ರೌಂಡ್ ವರ್ಕ್ ಮಾಡಿಕೊಂಡು ಬರುವಂತೆ ಸಲಹೆ ನೀಡುತ್ತಾರೆ. ಈ ಸಲಹೆಯ ಮೇರೆಗೆ ಇಬ್ಬರೂ ಭಾರತಕ್ಕೆ ಬರುತ್ತಾರೆ. ಆ್ಯಡಂ ಅರ್ಧ ಜೈನನಾದರೂ ಕೂಡ ಆತನಿಗೆ ಜೈನ ಧರ್ಮದ ಬಗ್ಗೆ ಹೆಚ್ಚು ತಿಳುವಳಿಕೆ ಇರುವುದಿಲ್ಲ. ಜೊತೆಗೆ ಆತ ತನ್ನ ಮಮ್ಮಿಯ ಮಗನಾದ್ದರಿಂದ ಜೈನ ಧರ್ಮಕ್ಕಿಂತ ಕ್ರಿಶ್ಚಿಯನ್ ಧರ್ಮವನ್ನೇ ಅನುಸರಿಸುತ್ತಿರುತ್ತಾನೆ. ಆ್ಯಡಂನ ತಾಯಿ ಎಮಿಲಿಯಾಳಿಗೆ ಮಗ ಭಾರತದಲ್ಲಿ ಶುದ್ಧ ಶಾಖಾಹಾರ ಸೇವಿಸುತ್ತಿರುವುದು ತಿಳಿದು ಆಶ್ಚರ್ಯವಾಗುತ್ತದೆ. ಮಗ ಎಲ್ಲಿ ತನ್ನ ತಂದೆಯಂತೆ ಜೈನನಾಗಿ ಬಿಡುವನೋ ಎಂಬ ಆತಂಕವಿರುತ್ತದೆ. ಆ್ಯನಳ ವಿಚಾರ ತಿಳಿದು ಅವಳಿಗೆ ಶಾಕ್ ಆಗಿರುತ್ತದೆ. ಹೀಗಾಗಿ ಮಗನು ದಿನಾಲು ಸ್ವಲ್ಪವಾದರೂ ಬೈಬಲ್ ಓದುತ್ತಿದ್ದಾನೋ ಇಲ್ಲವೋ ಎಂಬ ಅನುಮಾನವಿರುತ್ತದೆ. ಮಗನು ದೇವರಲ್ಲಿ ವಿಶ್ವಾಸವಿಡಬೇಕು. ಕ್ರಿಸ್ತನಲ್ಲಿ ಶ್ರದ್ಧೆ ಇರಬೇಕು.ಆದರೆ ಗ್ರ್ಯಾಂಡ್‌ಪಾನ ಮನೆಯ ದೇವರ ಬಗ್ಗೆ ಆದರವಿರಬೇಕು ಎಂದು ಆಲೋಚಿಸುತ್ತಿರುತ್ತಾಳೆ. ಇಲ್ಲಿ ನಾವು ಎಮಿಲಿಯಾಳ ಮನದಲ್ಲಿನ ಆತಂಕ ಹಾಗೂ ಸಂಘರ್ಷವನ್ನು ಗುರುತಿಸಬಹುದು. ಮಗ ಕ್ರೈಸ್ತ ಧರ್ಮದಲ್ಲೇ ಇರಲಿ ಎಂಬುದು ಅವಳ ಅಭಿಲಾಷೆಯಾಗಿದೆ.

ನೇಮಿನಾಥನ ಪ್ರಕಾರ ಭಾರತೀಯ ಪದ್ಧತಿಯಲ್ಲಿ ವೈಯಕ್ತಿಕ ವಿಶಿಷ್ಟತೆಗೆ ಸ್ಥಾನವಿಲ್ಲ. ಹೀಗಾಗಿ ಅವನ ಒಂದು ಕ್ಷಣದ ಅಸಹಾಯಕತೆ ಮತ್ತೊಂದು ಜೀವದ ದುಃಖಕ್ಕೆ, ಸನ್ಯಾಸಕ್ಕೆ ಕಾರಣವಾದ ಅಪರಾಧೀ ಪ್ರಜ್ಞೆ ಅವನನ್ನು ಕಾಡುತ್ತಿರುತ್ತದೆ. ಅಲ್ಲದೆ ಆ್ಯಡಂ ಕ್ರಿಶ್ಚಿಯನ್ ಸಂಸ್ಕಾರದಲ್ಲಿ ಬೆಳೆದ ಹುಡುಗನಾದ್ದರಿಂದ ಅವನಿಗೆ ಜೈನ ಮಾಡೋ ಅವಶ್ಯಕತೆ ಇರುವುದಿಲ್ಲ. ಆದರೆ ಅದೂ ಒಂದು ದೊಡ್ಡ ಧರ್ಮ ಅದ ಅಥವಾ ಇತ್ತು ಎಂಬುದು ತಿಳಿದರೆ ಮಾತ್ರ ಸಾಕು ಎಂಬ ಅಭಿಪ್ರಾಯವನ್ನು ಹೊಂದಿರುತ್ತಾನೆ. ಏಕೆಂದರೆ ನೇಮಿನಾಥನಿಗೆ ಅವನ ಧರ್ಮ ಗೊತ್ತಿರುವುದಿಲ್ಲ. ಆದರೆ ಕೇವಲ ಅವನ ತಾಯಿ ಅನುಸರಿಸುತ್ತಿದ್ದ ಮಡಿ, ಶಾಖಾಹಾರ, ಹೋಸ, ನೋಂಪಿ, ಪಂಚ ನಮಸ್ಕಾರಗಳಷ್ಟೇ ಗೊತ್ತಿರುತ್ತದೆ. ತಾನು ಮಾಡಿದ ತಪ್ಪಿಗೆ ಭಾರತಕ್ಕೆ ಒಮ್ಮೆ ಬಂದು ಇಲ್ಲಿಯವರನ್ನೆಲ್ಲಾ ಒಂದು ಸಲ ನೋಡಿ ಹೋಗಬೇಕೆಂಬ ಹಂಬಲವಿರುತ್ತದೆ. ಏಕೆಂದರೆ ಅವನ

'ಕ್ರಾಸ್' ಅವನೇ ಹೊರಬೇಕು. ಇಲ್ಲಿ ನೇಮಿನಾಥನ ಮನದ ಸಂಘರ್ಷವನ್ನು ಗುರುತಿಸಬಹುದು. ಮಾನಸಿಕ ಗೊಂದಲಗಳು, ಇಂಗ್ಲೇಂಡ್ ನಲ್ಲಿದ್ದರೂ ಕೂಡ ತನ್ನ ಮೂಲ ಧರ್ಮವನ್ನು ಬಿಡಲಾಗದ ಅಸಹಾಯಕ ಸ್ಥಿತಿ ಹಾಗೂ ಧಾರ್ಮಿಕ ಸಂಘರ್ಷ ಅವನ ಮನಸ್ಸಿನಲ್ಲಿದೆ.

ಭಾರತಕ್ಕೆ ಬಂದ ಆ್ಯನ್ ಬಹಳ ಶ್ರದ್ಧೆಯಿಂದ ಜೈನ ಧರ್ಮದ ಬಗ್ಗೆ ಅಧ್ಯಯನದಲ್ಲಿ ತೊಡಗುತ್ತಾಳೆ. ಜೈನ ಧರ್ಮದ ಪ್ರತಿಯೊಂದು ವಿಧಿವಿಧಾನವನ್ನೂ ಬರೆದುಕೊಂಡು ಅವುಗಳನ್ನು ಅಂತೆಯೇ ಅನುಸರಿಸತೊಡಗುತ್ತಾಳೆ. ಹೀಗಾಗಿಯೇ ಒಮ್ಮೆ ಆ್ಯಡಂ ಬಸ್ತಿಯಲ್ಲಿ ಪೂಜೆಯ ವೇಳೆಯಲ್ಲಿ ಕೆಟ್ಟದಾಗಿ ತಾಳ ತಪ್ಪಿ ಜಾಗಟೆ ಬಡಿಯುತ್ತಿರುವುದೂ ಅವಳ ಗಮನಕ್ಕೆ ಬರುತ್ತದೆ. ಆ್ಯನ್‌ಳಿಗೆ ಪ್ರಾರಂಭದಲ್ಲಿ ನಿಜವಾಗಿ ತತ್ವಜ್ಞಾನ ಬೇಕಾಗಿರುವುದಿಲ್ಲ. ಜೈನ ಸಮಾಜದ ವೈಶಿಷ್ಟ್ಯಗಳು, ಅದರ ವಿಶಿಷ್ಟ ಜೀವನ ವೃತ್ತಿ, ಮಾನಸಿಕ ವೃತ್ತಿ....... ಅಹಿಂಸೆಗೂ ಅವರ ಶ್ರೀಮಂತಿಕೆಗೂ ಏನಾದರೂ ಸಂಬಂಧವಿದೆಯೇ ! ಎಂಬುದರ ಬಗ್ಗೆ ವಿಷಯ ಸಂಗ್ರಹ ಮಾಡಬೇಕಿರುತ್ತದೆ. ಅವಳ ಪ್ರಕಾರ ಕೇವಲ ಆರು ತಿಂಗಳಲ್ಲಿ ವಿಷಯ ಸಂಗ್ರಹ ಸಾಧ್ಯವಿಲ್ಲ. ೮-೧೦ ವರ್ಷಗಳಾದರೂ ಬೇಕಿರುತ್ತದೆ. ಆ್ಯಡಂ ಅವಳಿಗೆ ಈ ವಿಷಯದಲ್ಲಿ 'ಹುಚ್ಚ'ಳಂತೆ ಸಿಕ್ಕಿ ಹಾಕಿಕೊಳ್ಳದಂತೆ ಸಲಹೆ ನೀಡುತ್ತಾನೆ.

ಕ್ರಿಶ್ಚಿಯನ್ ಧರ್ಮದಲ್ಲಿ ಬೆಳೆದ ಆ್ಯನ್‌ಳಿಗೆ 'ನಿರ್ಮಲೆ ವಿಧವೆಯಾಗಿ ಮೂರು ವರ್ಷಗಳಾಗಿದ್ದರೂ ಮರು ಮದುವೆಯಾಗುವುದು ಯಾಕೆ ಶಕ್ಯವಿಲ್ಲ? ಹಿಂದೂ-ಜೈನ ಸಮಾಜದಲ್ಲಿ ಬಹಳ ಮಾನಸಿಕ ಹಿಂಸೆ ಇರ್ತದೆ, ಭರತನ ಹೆಂಡತಿಯ ಪರಿಸ್ಥಿತಿ ದಾಸ್ಯದಿಂದ ಕೂಡಿದೆ' ಎಂಬ ಆಲೋಚನೆಗಳು ಮೂಡುತ್ತವೆ. 'ಜೈನ ಸಮಾಜದಲ್ಲಿ ಸ್ತ್ರೀ' ಎಂಬ ವಿಷಯದ ಬಗ್ಗೆಯೇ ರಿಸರ್ಚ್ ಮಾಡಬಹುದೇನೋ ಎಂಬ ಆಲೋಚನೆ ಕೂಡ ಹೊಳೆಯುತ್ತದೆ. ಆದರೆ ಕಾಲಕ್ರಮೇಣ ಆ್ಯನ್ ಜೈನ ಧರ್ಮದ ಬಗ್ಗೆ ವಿಶೇಷ ಶ್ರದ್ಧೆ, ಆಸಕ್ತಿ ಬೆಳೆಸಿಕೊಳ್ಳುತ್ತಾಳೆ. ಆದರೆ ಆ್ಯಡಂನಿಗೆ ಆತನ ತಾತ ದೇವೇಂದ್ರಪ್ಪ ಜೈನ ಧರ್ಮದ ಬಗ್ಗೆ ಅವನಿಗೆ ಹೇಳುವ ಕಥೆಗಳು, ಅರ್ಥವಿಲ್ಲದ ತತ್ವಜ್ಞಾನದ ಅವಶ್ಯಕತೆ ಇರುವುದಿಲ್ಲ. ಅವನ ಪ್ರಕಾರ 'ದೇವರೆಂದರೆ ಕ್ರೈಸ್ತ, ಮುಗೀತು. ಬ್ಯಾರೆ ಚರ್ಚಾನೆ ಇಲ್ಲ.' ಅಪ್ಪಾಸಾಹೇಬರು ತಮ್ಮ ಮನೆಯಲ್ಲಿ ನಡೆಸಿದ ಶಾಂತಿ ಹೋಮದ ಸಮಯದಲ್ಲಿ ಮೊಟ್ಟ ಮೊದಲ ಬಾರಿಗೆ ಆ್ಯನ್ ಮತ್ತು ಆ್ಯಡಂ ಇಬ್ಬರೂ ನಿಗ್ರಂಥ ಸ್ವಾಮಿಗಳನ್ನು ನೋಡುತ್ತಾರೆ. ಪೂಜೆ-ಪುನಸ್ಕಾರಗಳನ್ನೆಲ್ಲಾ ಅವರಿಬ್ಬರೂ ನಿಗ್ರಂಥಸ್ವಾಮಿಗಳಿಗೆ ಮೊಣಕಾಲೂರಿ ನಮಸ್ಕಾರ ಮಾಡುತ್ತಾರೆ. ಆ್ಯನ್‌ಳಿಗೆ ಅವೆಲ್ಲವೂ ಅಗಾದ ಗಮ್ಮತ್ತನ್ನು ಉಂಟು ಮಾಡಿದರೆ, 'ಆ್ಯಡಂ' ಇವರು ಒಂದು ಅರಿವೆ ಹಾಕಿಕೊಂಡರೆ ಏನು ಗಂಟು ಹೋಗುತ್ತದೆ. ಛೇ ಈ ಸಂಘದವರು ಕ್ರಿಶ್ಚಿಯನ್ ಮಂಕ್ಸರಂತೆ ಅಥವಾ ನನ್ಸ್ ರಂತೆ ಅವರ ಅಡಿಗೆ ಊಟ ಅವರೇ ಮಾಡಿ ತಮ್ಮಷ್ಟಕ್ಕೆ ಇರಬೇಕು' ಎಂದು ಅಭಿಪ್ರಾಯಪಡುತ್ತಾನೆ. ಇಲ್ಲಿ ಆ್ಯಡಂನ ಮನದ ಸಂಘರ್ಷವನ್ನು ಗುರುತಿಸಬಹುದು. ಆ್ಯಡಂನ ಪ್ರಕಾರ ಜೈನಧರ್ಮ ಜೀವನ ವಿಮುಖವಾದ ಧರ್ಮ. ಆ್ಯನ್‌ಳ ಪ್ರಕಾರ ಜೀವನದಲ್ಲಿ ಸಂಯಮ ಬೇಕು. ಸಂಯಮದಿಂದ ಆತ್ಮ ಶುದ್ಧಿಯಾಗುತ್ತದೆ ಹಾಗೂ ಅಪರಿಗ್ರಹದಿಂದ ಹಾಗೂ ಬ್ರಹ್ಮಚರ್ಯೆಯಿಂದ. ಆದರೆ ಇವುಗಳ ಚಾಲನೆಗೆ ಸಂಕಲ್ಪ ಬೇಕಾಗುತ್ತದೆ. ಆ್ಯಡಂನಿಗೆ ಸಂಯಮ ಕಠಿಣವಾದ ಕೆಲಸ. ಆ್ಯನ್ ಜೈನ ಧರ್ಮದ ತತ್ವಗಳ ಆಚರಣೆಯಲ್ಲಿ

ತನ್ನನ್ನು ತಾನು ತೊಡಗಿಸಿಕೊಂಡಿದ್ದನ್ನು ಕಂಡು ಆ್ಯಡಂಗೆ ಶಾಕ್ ಆಗುತ್ತದೆ. ಅವನ ಪ್ರಕಾರ ಅಂಥದ್ದೆಲ್ಲಾ ಕಲಿಯುವುದರ ಅವಶ್ಯಕತೆ ಇರುವುದಿಲ್ಲ ಆದರೆ ಆ್ಯನ್‌ಳಿಗೆ ಜೈನ ಆಚಾರ-ವಿಚಾರಗಳ ಒಳಗಿನ ಫೀಲ್ ಬೇಕಾಗಿರುತ್ತದೆ. ಆದರೆ ಆ್ಯಡಂನ ಪ್ರಕಾರ ಬುದ್ಧಿಯಿಂದ ಪ್ರಾಪ್ತವಾಗುವುದಷ್ಟೇ ಜ್ಞಾನವಾಗಿರುತ್ತದೆ.

ಆ್ಯನ್‌ಳ ಪ್ರಕಾರ ಜೈನಧರ್ಮದಲ್ಲಿ ಏಕೇಂದ್ರಿಯ ಜೀವಗಳನ್ನು ಕೊಂದರೆ ಪಾಪವಲ್ಲದಿದ್ದರೂ ಗಿಡಗಳನ್ನು ಕಡಿಯುವುದು ಪಾಪವೇ. ಅರಣ್ಯನಾಶ ಮಾಡಿದರೆ, ಅಲ್ಲಿ ವಾಸವಾಗಿದ್ದ ಪ್ರಾಣಿ ಪಕ್ಷಿಗಳೂ ನಾಶವಾಗುವುದರಿಂದ ಜೈನರು ಫಾರೆಸ್ಟ್ ಕಂಟ್ರಾಕ್ಟ್ ದಂಧೆ ಮಾಡಬಾರದು. ಹುಂಚದಿಂದ ಹಿಂತಿರುಗಿ ಬರುವಾಗ ಶ್ರವಣಬೆಳಗೊಳಕ್ಕೆ ಬಂದಾಗ ಆ್ಯನ್ ಗೈಡ್ ಬುಕ್‌ನ ಸಹಾಯದಿಂದ ಸ್ಥಳಗಳ ವರ್ಣನೆಯನ್ನು ಸಹಜವಾಗಿ ಮಾಡುತ್ತಿರುತ್ತಾಳೆ. ಇದನ್ನು ಕಂಡ ಆ್ಯಡಂ ಅವಳು ಅದನ್ನು ತನ್ನದೇ ಊರೆಂಬಂತೆ ವರ್ಣಿಸುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಅಲ್ಲದೆ ಅವಳು ಜೈನ ಧರ್ಮದಲ್ಲಿ ತನ್ನನ್ನು ತೊಡಗಿಸಿಕೊಂಡ ರೀತಿಯಿಂದ ಅವನಿಗೆ ಹೆದರಿಕೆಯಾಗತೊಡಗುತ್ತದೆ. ಆ್ಯನ್ ಇಂಗ್ಲೆಂಡಿಗೆ ಹಿಂತಿರುಗಿ ಹೋಗುವವರೆಗೂ ಬ್ರಹ್ಮಚರ್ಯವನ್ನು ಪಾಲಿಸಲು ನಿರ್ಧರಿಸುತ್ತಾಳೆ. ಹೀಗಾಗಿ ತನ್ನ ಬಳಿ ಬಂದ ಆ್ಯಡಂನನ್ನು ನಯವಾಗಿಯೇ ತಿರಸ್ಕರಿಸುತ್ತಾಳೆ. ಒಮ್ಮೆ ಆ್ಯನ್ ಆ್ಯಡಂಗೆ ವಿಷಯ ತಿಳಿಸದೇ ೮-೧೦ ದಿನಗಳು ಎಲ್ಲಿಗೋ ಹೊರಟು ಹೋಗಿರುತ್ತಾಳೆ. ಆಗ ಆ್ಯಡಂ ಬಹುಶಃ ತನ್ನಿಂದ ತಪ್ಪಾಗಿದೆ ಎಂದು ಭಾವಿಸಿ ಒಬ್ಬ ಪ್ರೀಸ್ಟ್‌ನ ಹತ್ತಿರ ಹೋಗಿ ಕನ್ಫೆಸ್ ಮಾಡಬೇಕು. ಸದ್ಯ ತನ್ನ ಅಂತಃಕರಣಕ್ಕೆ ಹೇಳಿಕೊಂಡರೆ ಸಾಕು! ದೇವಾ, ನಾ ನಿಜಕ್ಕೂ ಪಾಪ ಮಾಡಿದೆ. ಆ್ಯನ್‌ಳಿಗೆ ದ್ರೋಹ ಬಗೆದೆ. ಅವಳಿಗೆ ತುಂಬ ಹಿಂಸೆ ಕೊಟ್ಟೆ. ಕ್ಷಮಿಸು, ಪ್ಲೀಜ್ ಕ್ಷಮಿಸು ಎಂದು ಹೇಳುವಲ್ಲಿ ಆತನ ಕ್ರಿಶ್ಚಿಯನ್ ಧಾರ್ಮಿಕ ಮನೋಭಾವನೆಯನ್ನು ಗುರುತಿಸಬಹುದಾಗಿದೆ.

ಆ್ಯಡಂನಲ್ಲಿ ನೀತಿ ಪ್ರಜ್ಞೆ ಕಡಿಮೆಯಾಗತೊಡಗಿದೆ ಎಂಬ ಭಾವನೆ ಆ್ಯನ್‌ಗೆ ಬಂದರೆ ಆ್ಯನ್ ಜೈನಿಜಂ ಅಭ್ಯಾಸ ಮಾಡುತ್ತಿರುವುದರಿಂದ ಅವಳ ನೀತಿಪ್ರಜ್ಞೆ ಪ್ರಖರವಾಗತೊಡಗಿದೆ ಎಂಬ ಭಾವನೆ ಆ್ಯಡಂಗೆ ಶುರುವಾಗುತ್ತದೆ. ಬರ ಬರುತ್ತಾ ಆ್ಯನ್ ಆತ್ಮ ಕೇಂದ್ರಿತವಾಗತೊಡಗುತ್ತಾಳೆ. ವ್ಯಕ್ತಿ ನಿಷ್ಠತೆಯೇ ಬೇರೆ, ಅನೈಸರ್ಗಿಕ ಆತ್ಮ ಕೇಂದ್ರೀತ್ವ ಬೇರೆ ಎಂಬುದು ಅವನ ಸ್ಪಷ್ಟ ಅಭಿಪ್ರಾಯವಾಗಿರುತ್ತದೆ. ಆದರೆ ಆ್ಯನ್‌ಗೆ ತಾನು ಜೈನಧರ್ಮದ ಅಭ್ಯಾಸ ಮಾಡ್ತಾ ಮಾಡ್ತಾ ತನ್ನ ಐಡೆಂಟಿಟಿ ಸಿಕ್ಕಂತೆ ಭಾಸವಾಗುತ್ತಿರುತ್ತದೆ. 'ಅಪರಿಗ್ರಹ' ತ್ಯಾಗ ಅವಳ ಜೀವನದ ಕೇಂದ್ರ ಬಿಂದುವಾಗುತ್ತದೆ. ಅಪರಿಗ್ರಹದಲ್ಲಿ ಎಷ್ಟೊಂದು ಆನಂದವಿದೆ. ಅಪರಿಗ್ರಹದಲ್ಲಿ ಸ್ವಾತಂತ್ರ್ಯವಂತೂ ಇದ್ದೇ ಇದೆ. ಬ್ರಹ್ಮಚರ್ಯದಲ್ಲೂ ಸ್ವಾತಂತ್ರ್ಯವಿದೆ. ಅಹಿಂಸೆಯಲ್ಲಿಯೂ ಸ್ವಾತಂತ್ರ್ಯವಿದೆ. ಪ್ರತಿ ಜೀವ, ಪ್ರತಿ ವ್ಯಕ್ತಿ ಸ್ವತಂತ್ರ, ಆತ ಯಾವಾಗಲೂ ಏಕಾಕಿ. ಈ ಏಕಾಕಿತನದಲ್ಲೇ ಸ್ವಾತಂತ್ರ್ಯವಿದೆ. ಒಂದು ರೀತಿಯ ಆನಂದವಿದೆ. ಆದ್ದರಿಂದ ಆ್ಯಡಂ ತನ್ನ ಬಗ್ಗೆ ಚಿಂತೆ ಮಾಡುವ ಅವಶ್ಯಕತೆ ಇರುವುದಿಲ್ಲವೆಂದು ಭಾವಿಸುತ್ತಾಳೆ.

ಸಮ್ಮೇದಶಿಖರದಲ್ಲಿ ಲಕ್ಷುಂಬಾಯಿ ಮರಣ ಹೊಂದಿದ ವಿಚಾರವನ್ನು ಆ್ಯನ್‌ಳಿಗೆ ತಿಳಿಸಿ ಅವಳನ್ನು ಕರೆದುಕೊಂಡು ಬರುವುದಾಗಿ ಆ್ಯಡಂ ಹೇಳಿದಾಗ, ದೇವೇಂದ್ರಪ್ಪ ಅವಳಿಗೇಕೆ ತೊಂದರೆ,

ಜೊತೆಗೆ ಅವಳಿಗೂ ನಮಗೂ ಅಂಥ ಸಂಬಂಧವೆಲ್ಲಿದೆ? ಎಂದು ಹೇಳುವಲ್ಲಿ ದೇವೇಂದ್ರಪ್ಪನವರ ಕಟ್ಟಾ ಧಾರ್ಮಿಕ ಭಾವನೆಯನ್ನು ಗುರುತಿಸಬಹುದಾಗಿದೆ. ಅಲ್ಲಿ ದೇವೇಂದ್ರಪ್ಪನವರ ಸ್ಥಿತ ಪ್ರಜ್ಞತೆಯನ್ನು ಕಂಡ ಆ್ಯನ್ ಗೆ ತುಂಬಾ ಅಚ್ಚರಿಯಾಗುತ್ತದೆ. ಸಮ್ಮೇದಶಿಖರದಿಂದ ಹಿಂತಿರುಗಿ ಬರುವಷ್ಟರಲ್ಲಿ ಆ್ಯನ್‌ಳಲ್ಲಿ ಮಹಾವೀರ ಮತ್ತು ಬುದ್ಧರ ತತ್ವಜ್ಞಾನಗಳಲ್ಲಿಯ ಸಾಮ್ಯ ಹಾಗೂ ಭಿನ್ನತೆಗಳ ಅಭ್ಯಾಸ ಮಾಡಬೇಕೆಂಬ ಆಲೋಚನೆ ಬರುತ್ತದೆ.

ಶ್ರವಣಬೆಳಗೊಳಕ್ಕೆ ತನ್ನ ಅಭ್ಯಾಸಕ್ಕೆಂದು ಹೋದ ಆ್ಯನ್ ಅಲ್ಲಿಯೇ ಗೆಸ್ಟ್ ಹೌಸಿನ ಒಂದು ರೂಮಿನಲ್ಲಿ ಉಳಿದುಕೊಳ್ಳುತ್ತಾಳೆ. ಅವಳು ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ತನ್ನ ಅಭ್ಯಾಸ ಮುಂದುವರಿಸಿದ್ದು ಆ್ಯಡಂನಲ್ಲಿ ಆತಂಕವನ್ನು ಉಂಟು ಮಾಡುತ್ತದೆ. ತಾನೆಲ್ಲಿ ಅವಳನ್ನು ಕಳೆದುಕೊಳ್ಳುತ್ತೇನೋ ಎಂಬ ಭಯ ಅವನಲ್ಲಿ ಮೂಡುತ್ತದೆ. ಶ್ರವಣಬೆಳಗೊಳದಲ್ಲಿ ಅಧ್ಯಯನಕ್ಕೆಂದು ನಿಂತ ಆ್ಯನ್ ಅಲ್ಲಿಯೇ ಜೈನದೀಕ್ಷೆಯನ್ನು ತೆಗೆದುಕೊಂಡು ಜೈನ ಶ್ರಾವಿಕೆಯಾಗುತ್ತಾಳೆ. ಹೀಗಾಗಿ ಅವಳನ್ನು ಮಹಾಮಸ್ತಕಾಭಿಷೇಕದ ಒಂದು ಚಿಕ್ಕ ಕಮಿಟಿಗೆ ಮಠಾಧಿಪತಿಗಳು ಸೇರಿಸಿರುತ್ತಾರೆ. ಜೈನ ಧರ್ಮದ ಪರಿಚಯ, ಗೈಡ್ ಪುಸ್ತಕಗಳು ಹಾಗೂ ಪ್ರಸಿದ್ಧಿ ಪುಸ್ತಕಗಳೂ ಸೇರಿದಂತೆ ಇಂಗ್ಲೀಷ್ ಪುಸ್ತಕಗಳನ್ನು ಬರೆಯುವ ಕೆಲಸವನ್ನು ಆ್ಯನ್‌ಗೆ ವಹಿಸಲಾಗಿರುತ್ತದೆ. ಅವಳ ಪ್ರಕಾರ ಇದು ಒಂದು ರೀತಿ ಪಲಾಯನವೂ ಹೌದು, ಕಮಿಟ್‌ಮೆಂಟೂ ಹೌದು. ಅವಳನ್ನು ನೋಡಲೆಂದು ಶ್ರವಣಬೆಳಗೊಳಕ್ಕೆ ಬಂದ ಆ್ಯಡಂಗೆ ಅಲ್ಲಿನ ವಾತಾವರಣದಲ್ಲಿ ಏನೋ ಒಂದು ಪ್ರೆಶರ್ ಇದೆ ಎಂಬ ಅನುಭವವಾಗುತ್ತದೆ. ಹೀಗಾಗಿ ಆತ ಆಕೆಯೊಂದಿಗೆ ಮೈಸೂರಿಗೆ ಹೋಗಲು ನಿರ್ಧರಿಸುತ್ತಾನೆ. ಜೊತೆಗೆ ಶ್ರವಣಬೆಳಗೊಳದಲ್ಲಿ ಆ್ಯನ್ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿರುವಂತೆ ಅವನಿಗೆ ಭಾಸವಾಗುತ್ತದೆ. ತನ್ನ ಅಧ್ಯಯನ ಮುಂದುವರಿಸಲು ಮಠಾಧಿಪತಿಗಳು ಹಣ ಕೊಡುತ್ತಾರೆ ಎಂದು ಆ್ಯನ್ ಹೇಳಿದಾಗ 'ಅವರ ಹಣ ವ್ಯಯಿಸುವುದೆಂದರೆ ನಿನ್ನ ಸ್ವಾತಂತ್ರ್ಯ ಪೂರ್ಣ ಕಳಕೊಂಡಂತೆ ಜೋಕೆ' ಎಂದು ಅವಳನ್ನು ಎಚ್ಚರಿಸುತ್ತಾನೆ.

ಆ್ಯಡಂಗೆ ಜೈನ ಧರ್ಮದ ಬಗ್ಗೆ ಅಷ್ಟಾಗಿ ಒಲವು ಇಲ್ಲದಿದ್ದರೂ ಕೂಡ, ಆ್ಯನ್‌ಗೆ ಜೈನ ಶ್ರಾವಿಕೆಯಾಗಿದ್ದು, ಮುಂದೆ ಆರ್ಯಿಕೆಯಾಗುವವಳಿದ್ದದರಿಂದ ಅವಳನ್ನು ಶುದ್ಧವಿಡುವುದು ತನ್ನ ಕರ್ತವ್ಯ ಎಂದು ಆ್ಯಡಂ ಹೇಳುವಲ್ಲಿ ಅವನ ಮೂಲ ಧರ್ಮದ ತತ್ವ ಅವನಲ್ಲಿರುವುದನ್ನು ಗುರುತಿಸಬಹುದಾಗಿದೆ. ಜೊತೆಗೆ ಆ್ಯನ್‌ಳ ಭಾವನೆಗಳನ್ನು ಗೌರವಿಸುವಲ್ಲಿ ವ್ಯಕ್ತಿ ನಿಷ್ಠತೆಯನ್ನು ಕಾಣಬಹುದು. ಆದರೂ ಕೂಡ ಆ್ಯಡಂಗೆ ಆ್ಯನ್ ಬಹಳ ದಿನ ಜೈನಧರ್ಮಕ್ಕೆ ಅಂಟಿಕೊಂಡಿರುವುದಿಲ್ಲ ಎಂಬ ನಂಬಿಕೆ ಇರುತ್ತದೆ. ಆ್ಯನ್‌ಳ ಪ್ರಕಾರ ಒಂದು ಧರ್ಮಕ್ಕೆ ಕಮಿಟ್‌ಮೆಂಟ್ ಮಾಡಿದ ಮೇಲೇ ಅದರ ಒಳಗಿನ ಸತ್ಯ ತಿಳಿಯುವುದು. ಒಂದು ಕಾಲದಲ್ಲಿ ಊರ್ಜಿತಾವಸ್ಥೆಯಲ್ಲಿದ್ದ ಧರ್ಮದಲ್ಲಿ ಏನಾದರೂ ಪಾಜಿಟಿವ್ಹ್ ಇದ್ದಿರಲೇಬೇಕು... ಅವುಗಳನ್ನು ಶೋಧಿಸಲು ವಸ್ತುನಿಷ್ಠತೆ ಬೇಕಾಗಿರುವುದರಿಂದಲೇ ತಾನು ಹುಟ್ಟಿ ಬೆಳೆದ ಕ್ರಿಶ್ಚಿಯನ್ ಧರ್ಮದಿಂದ ಬೇರೆಯಾಗಿದ್ದೀನಿ ಎಂಬ ಆ್ಯನ್‌ಳ ಮಾತಿಗೆ ಆ್ಯಡಂ 'ಅಂದರೆ ನೀನು ಮುಂದೆ ಜೈನ ಧರ್ಮವನ್ನೂ ಬಿಡಲಿದ್ದೀಯೇನು– ವಸ್ತು ನಿಷ್ಠತೆಯ ಸಲುವಾಗಿ' ಎಂದು ಕೇಳುತ್ತಾನೆ. ಆ್ಯನ್‌ಳ ನಿಲುವಿನ ಬಗ್ಗೆ ಆ್ಯಡಂನ ಸಂದಿಗ್ಧತೆಯನ್ನು ಇಲ್ಲಿ ಗುರುತಿಸಬಹುದು.

ಆ್ಯನ್ ಇಲ್ಲಿನ ಜೈನ ಸಮಾಜದವರೊಡನೆ ಇರಲು ಸಾಧ್ಯವೇ ಎಂಬ ಆ್ಯಡಂನ ಪ್ರಶ್ನೆಗೆ ಆ್ಯನ್ ಸದ್ಯದ ಜೈನರು ತಾಂತ್ರಿಕವಾಗಿ ಅಜ್ಞಾನಿಗಳಾಗಿದ್ದು, ಎಲ್ಲಾ ತೀರ್ಥಂಕರರನ್ನು ದೈವತ್ವಕ್ಕೆ ಏರಿಸಿದ್ದಾರೆ. ಅಂಧಶ್ರದ್ಧೆ, ಅಂಧಭಕ್ತಿಯೇ ಹೆಚ್ಚಾಗಿರುವುದೂ ಕೂಡ ಒಂದು ಅವನತಿ ಎಂದು ವಿವರಿಸುತ್ತಾಳೆ. ಆದ್ದರಿಂದ ಅವಳ ಪ್ರಕಾರ ಅವಳು ಈ ಸಮಾಜದ ಘಟಕವಾಗಿ ಇಲ್ಲಿರುವುದು ಒಂದು ರೀತಿಯಲ್ಲಿ ಅಸಾಧ್ಯ. ಜೈನಧರ್ಮ ಅವಳ ವೈಯಕ್ತಿಕ ಧರ್ಮ–ಸಾಮಾಜಿಕ ಧರ್ಮವಲ್ಲ. ಸಾಮಾಜಿಕವಾಗಿ ಅವಳು ಇಂಗ್ಲೀಷ್ ಸಮಾಜದವಳೇ. ಅಲ್ಲಿನ ಬುದ್ಧಿಜೀವಿಗಳ ಒಂದು ಅತ್ಯಂತ ಚೈತನ್ಯಶೀಲ ಸಮಾಜದ ಘಟಕ. ಹೀಗಾಗಿಯೇ ಅವಳು ಅವಳ ಮನೆಯ ಒಳಗೆ ದೇವರ ಕೋಣೆಯಲ್ಲಿ ಮಹಾರಾಜರು ಕೊಟ್ಟಂತಹ ಮಹಾವೀರನ ಮೂರ್ತಿಯ ಹತ್ತಿರ ಕ್ರೈಸ್ತನ ಶಿಲುಬೆಯನ್ನು ಇಟ್ಟಿರುತ್ತಾಳೆ. ಹೀಗೆ ಆ್ಯನ್ ಜೈನ ದೀಕ್ಷೆ ತೆಗೆದುಕೊಂಡರೂ ಕೂಡ ಸಂಪೂರ್ಣವಾಗಿ ಮತಾಂತರ ಹೊಂದುವುದು ಸಾಧ್ಯವಾಗುವುದಿಲ್ಲ.

ಅಪ್ಪಾಸಾಹೇಬರ ಮರಣದ ನಂತರ ಆ್ಯನ್ ಒಂದೆರಡು ದಿನ ಕೃಷ್ಣಾಪುರದಲ್ಲಿದ್ದು, ಶ್ರವಣಬೆಳಗೊಳಕ್ಕೆ ಹಿಂದಿರುಗಿದಾಗ ಅಲ್ಲಿನ ವಾತಾವರಣವೇ ಬದಲಾಗಿರುತ್ತದೆ. ಕಾರಭಾರಿ ಅವಳು ಕೃಷ್ಣಾಪುರಕ್ಕೆ ಹೋಗಿದ್ದ ಕಾರಣವನ್ನು ಕೇಳಿದಾಗ ಆ್ಯನ್‌ಳಿಗೆ ಕೋಪ ಬರುತ್ತದೆ. 'ತನ್ನಪ್ಪನೇ ತನ್ನನ್ನು ಇಂಥ ಪ್ರಶ್ನೆಯನ್ನು, ಇಂಥ ಧ್ವನಿಯಲ್ಲಿ ಕೇಳಿರಲಿಕ್ಕಿಲ್ಲ' ಎಂದು ಅನಿಸುತ್ತದೆ. ಮಠಾಧಿಪತಿಗಳನ್ನು ಭೇಟಿಯಾಗಲು ಅವಳಿಗೆ ಸಾಧ್ಯವಾಗುವುದಿಲ್ಲ. ಕೃಷ್ಣಾಪುರದಿಂದ ಬಂದ ಮೇಲೆ ತನ್ನ ಆಫೀಸಿಗೆ ಹೋದಾಗ ಅವಳಿಗೆ ಮತ್ತೊಂದು ಆಘಾತದ ಸುದ್ದಿ ತಿಳಿಯುತ್ತದೆ. ಅದೆಂದರೆ ಆ್ಯನ್ ತನ್ನ ಕಮಿಟಿ ತನಗೆ ಒಪ್ಪಿಸಿದ್ದ ಎಲ್ಲಾ ಕೆಲಸಗಳನ್ನು ಮುಗಿಸಿರುತ್ತಾಳೆ. ಆದರೆ ಅವಳು ಬರೆದ ಇಂಗ್ಲೀಷ್ ಪುಸ್ತಕಗಳು ವರ್ಣರಂಜಿತವಾಗಿಲ್ಲದೇ, ಪ್ರಶಂಸಾತ್ಮಕ ವಿಶೇಷಣಗಳಿಲ್ಲದೇ, ಶೈಲಿಯಲ್ಲಿ ವೈಭವೀಕರಣವಿಲ್ಲದೇ, ಸಾದಾ ಸರಳ ಇಂಗ್ಲೀಷಿನಲ್ಲಿದ್ದು ಬರೆ ಒಣ ಮಾಹಿತಿ ಪತ್ರಗಳಾಗಿರುತ್ತವೆ. ಆದ್ದರಿಂದ ಪುಸ್ತಕಗಳನ್ನು ಬರೆಯಲು ಬೇರೆಯವರಿಗೆ ಹೇಳಿ, ಅದರ ಇಂಗ್ಲೀಷ್‌ನ್ನು ತಿದ್ದುವುದು ಮಾತ್ರ ಇವಳ ಕೆಲಸವಾಗಿರಬೇಕು ಎಂದು ಕಮಿಟಿಯವರೇ ಮಠಾಧಿಪತಿಗಳ ಬಳಿ ದೂರು ಹೇಳುತ್ತಾರೆ.ಮಠಾಧಿಪತಿಗಳು ಕೂಡ ಕಮಿಟಿಯವರ ಮಾತುಗಳನ್ನು ಒಪ್ಪಿಕೊಂಡು ಒಬ್ಬ 'ಹುಟ್ಟು ಜೈನ'ನಿಗೆ ಈ ಪುಸ್ತಕಗಳನ್ನು ಬರೆಯಲು ಹೇಳಿರುತ್ತಾರೆ. ಇದನ್ನು ತಿಳಿದ ಆ್ಯನ್ ಮಠಾಧಿಪತಿಗಳನ್ನು ಭೇಟಿ ಮಾಡಿ ಚರ್ಚಿಸಬೇಕು ಎಂದುಕೊಂಡರೂ ಮಠಾಧಿಪತಿಗಳ ಭೇಟಿಯೇ ಆಗುವುದಿಲ್ಲ.

ಇದರಿಂದ ತುಂಬಾ ನೋವನ್ನು ಅನುಭವಿಸಿದ ಆ್ಯನ್ ಮಠಾಧಿಪತಿಗಳಿಗೆ ಒಂದು ಪತ್ರ ಬರೆದು ತನ್ನ ಪ್ರಾಮಾಣಿಕ ಶ್ರಮಕ್ಕೆ ದೊರೆತ ಅವಮಾನದಿಂದ ತನಗೆ ನೋವಾಗಿದೆ. ಅಲ್ಲದೇ ತನಗೆ ಹೇಳದೇ ಕೇಳದೇ ಆ ಕೆಲಸವನ್ನು ಬೇರೆಯವರಿಗೆ ಕೊಟ್ಟಿದ್ದರಿಂದ ನೋವಿನ ಮೇಲೆ ಉಪ್ಪು ತಿಕ್ಕಿದಂತಾಗಿರುವುದರಿಂದ ತಾನು ತನ್ನ ಕೆಲಸಕ್ಕೆ ರಾಜೀನಾಮೆ ನೀಡುತ್ತಿರುವುದಾಗಿಯೂ, ತನ್ನ ಸ್ಥಾನಕ್ಕೆ ಬೇರೆಯವರನ್ನು ನಿಯಮಿಸಿ, ತನ್ನನ್ನು ಕೆಲಸದಿಂದ ಮುಕ್ತಳನ್ನಾಗಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತಾಳೆ. ಪತ್ರ ತಲುಪಿದಾಗ ಮಠಾಧಿಪತಿಗಳೇ ಅವಳನ್ನು ಕರೆಸಿ ಪುಸ್ತಕಗಳ ಕೆಲಸ

ಇಲ್ಲಿನ ಪರಂಪರೆಯ ರೀತಿಯಲ್ಲಿಯೇ ನಡೆಯಬೇಕಾಗಿರುವುದರಿಂದ ಆ್ಯನಳ ಸ್ಕಾಲರ್ ಪ್ರಜ್ಞೆಯ ಉಪಯೋಗವಿಲ್ಲ. ಜೊತೆಗೆ ನೆನ್ನೆ-ಮೊನ್ನೆ ಜೈನಳಾದ ಅವಳು ಜೈನ ಧರ್ಮಕ್ಕೆ ಹೊಸಬಳಾದ್ದರಿಂದ ಅವಳಿಗೆ ಪ್ರಚಾರ ಕೆಲಸ ಕೊಟ್ಟದ್ದೇ ತಮ್ಮ ತಪ್ಪಾಗಿದ್ದು, ಎಲ್ಲಾ ಗೊಂದಲಗಳಿಗೂ ತಾವೇ ಕಾರಣ ಎಂದು ಹೇಳಿ ಅವಳನ್ನು ಸಮಾಧಾನ ಪಡಿಸುತ್ತಾರೆ. ಇಲ್ಲಿ ಮೂಲ 'ಜೈನಿಗರು' 'ಆ್ಯನಳ' ಮೇಲೆ ಹೊಂದಿದ್ದ ಅಸಹನೆಯನ್ನು ತೋರಿಸುತ್ತದೆ.

ಆ್ಯನ್ ಮೂಲ ಜೈನಿಗರಿಗಿಂತ ಹೆಚ್ಚು ಚೆನ್ನಾಗಿಯೇ ಜೈನಧರ್ಮದ ಬಗ್ಗೆ ತಿಳಿದುಕೊಂಡಿದ್ದರೂ ಕೂಡ ಅದನ್ನು ಒಪ್ಪಿಕೊಳ್ಳಲು ಜಡ ಮನಸ್ಸುಗಳು ಒಪ್ಪದೇ ಇರುವುದನ್ನು, ಆ ಮೂಲಕ ಅವರು ಆ್ಯನ್‌ಳೊಂದಿಗೆ ಸಂಘರ್ಷಕ್ಕಿಳಿದಿರುವುದನ್ನೂ ಗಮನಿಸಬಹುದಾಗಿದೆ. ಈ ಎಲ್ಲಾ ಘಟನೆಗಳಿಂದ ಆ್ಯನ್ ತುಂಬಾ ನೊಂದುಕೊಳ್ಳುತ್ತಾಳೆ. ಸಾಂಘಿಕ ಜೀವನಕ್ಕೆ ತನ್ನಂತಹ ಸಾತಂತ್ರ್ಯಪ್ರಿಯ, ವ್ಯಕ್ತಿನಿಷ್ಠ ಜನರು ನಿರುಪಯೋಗಿಯಾಗಿದ್ದರಿಂದ, ತಾನು ಮಠದ ವ್ಯವಸ್ಥೆಯಲ್ಲಿ ಸೇರಿಕೊಂಡಿದ್ದರ ಬಗ್ಗೆ ಪಶ್ಚಾತ್ತಾಪ ಪಡುತ್ತಾಳೆ. ಅಲ್ಲದೆ ತನ್ನನ್ನು ಮಠದ ವ್ಯವಸ್ಥೆಯಿಂದ ಹೊರಗಿಡಲು ತಾನು ಆ್ಯಡಂ ನೊಂದಿಗೆ ಹೋಗಿದ್ದೂ ಕೂಡ ಒಂದು ಕಾರಣ ಇರಬಹುದು ಎಂಬ ಸಂಶಯ ಅವಳನ್ನು ಕಾಡುತ್ತದೆ. ಇದರಿಂದಾಗಿ ಅವಳು ಒಳಗೊಳಗೆ ಬಂಡೇಳುತ್ತಾಳೆ. ಧಾರ್ಮಿಕ ಹಾಗೂ ಮಾನಸಿಕ ಸಂಘರ್ಷಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಆ್ಯನ್ ಜೈನ ಧರ್ಮದ ಎಲ್ಲಾ ತತ್ವಗಳನ್ನೂ, ನಿಯಮಗಳನ್ನೂ ಸಂಪೂರ್ಣವಾಗಿ ತಿಳಿದುಕೊಂಡು ಮುಕ್ತ ಮನದಿಂದ ಜೈನ ಧರ್ಮವನ್ನು ಸ್ವೀಕರಿಸಿದ್ದರೂ ಕೂಡ ಜೈನ ಸಮುದಾಯದವರು ಅವಳನ್ನು ಮುಕ್ತ ಮನದಿಂದ ಒಪ್ಪಿಕೊಳ್ಳುವುದಿಲ್ಲ. ಕೇವಲ ಹುಟ್ಟಿನಿಂದ ಜೈನರಾದವರು ಮಾತ್ರ ಜೈನ ಧರ್ಮದ ಬಗ್ಗೆ ವರ್ಣರಂಜಿತವಾಗಿ ಕಥೆ ಬರೆಯುತ್ತಾರೆ ಎಂಬ ಮಠಾಧಿಪತಿಗಳ ಹಾಗೂ ಕಮಿಟಿ ಅವರ ಅಭಿಪ್ರಾಯಗಳು ಹಾಗೂ ಅವರ ವರ್ತನೆಗಳು ಆ್ಯನಳಲ್ಲಿ ತುಂಬಾ ಬೇಸರವನ್ನು ಉಂಟು ಮಾಡುತ್ತವೆ.

ಮಹಾಮಸ್ತಕಾಭಿಷೇಕ ಎಂದರೆ ಕೇವಲ ಧಾರ್ಮಿಕ ಉತ್ಸವ ಎಂದು ಭಾವಿಸಿಕೊಂಡಿದ್ದ ಆ್ಯನ್‌ಳಿಗೆ ಇದೊಂದು ಶ್ರೀಮಂತರ ಆಟ, ಪಂಡಿತರಿಗೆಲ್ಲ ಲಾಭದಾಯಕವಾದದ್ದು ಎಂದು ಜಿನಸೇನ ಪಂಡಿತನ ಮೂಲಕ ತಿಳಿದು ಮೋಜೆನಿಸುತ್ತದೆ. ಇದು ಒಂದು ಭಾರತೀಯ ಮಹಾಜಾತ್ರೆ ಎಂದು ಮನದಲ್ಲೇ ನಗುತ್ತಾಳೆ. ಇದರಲ್ಲಿ ಒಂದು ಸಮಾಜದ Identityಯ ಪ್ರದರ್ಶನ - ಧಾರ್ಮಿಕತೆ ಇದ್ದರೆ ಕೆಲವು ಭಾವಿಕರಿಗೆ ಮಾತ್ರ. ಆದರೆ ಭಾವಿಕರಿಗೇ ಮೊದಲನೇ ದಿನ ಪ್ರವೇಶವಿಲ್ಲ. ಕೇವಲ ಹಣದ ಸತ್ತೆಯ ಪ್ರಭಾವ ಇರುವವರಿಗೆ ಹಾಗೂ ಸಾವಿರಾರು ಪೊಲೀಸರಿಗೆ ಮಾತ್ರ ಎಂದು ಭಾವಿಸುತ್ತಾಳೆ.

ಆ್ಯಡಂನ ಪ್ರಕಾರ ಮಹಾಮಸ್ತಕಾಭಿಷೇಕ ಜೈನ ಧರ್ಮದವರ ವೈಭವೀಕರಣ. ಇದನ್ನು ಕೇವಲ ಟೂರಿಸ್ಟ್ ದೃಷ್ಟಿಯಲ್ಲಿ ನೋಡಿದರೆ ಮಾತ್ರ ಇವೆಲ್ಲವೂ ಭವ್ಯ-ದಿವ್ಯ ಎಂದು ಅನಿಸುತ್ತದೆ. ಆ್ಯನ್ ಕೂಡ ಹಾಗೇ ನೋಡಲು ಕಲಿತರೆ ಮಾತ್ರ ಎಲ್ಲವೂ ಗಮ್ಮತ್ತೆನಿಸುತ್ತದೆ, ಸಂತೋಷವೆನಿಸುತ್ತದೆ. ಅಲ್ಲದೇ ಆ್ಯನ್ ಜೈನ ಧರ್ಮಕ್ಕೆ ಸೇರಿಯೂ ಸಮಾಜಕ್ಕೆ ಸೇರಿದವಳಲ್ಲ. ಶ್ರವಣಬೆಳಗೊಳದಲ್ಲಿ

ನಡೆದಿರುವುದು ಮುಖ್ಯವಾಗಿ ಧರ್ಮದ ಹೆಸರಿನಲ್ಲಿ ಸಾಮಾಜಿಕ ಉತ್ಸವ ಎಂದು ಹೇಳುತ್ತಾನೆ. ಇಲ್ಲಿ ಇವರಿಬ್ಬರ ನಡುವಿನ ತಾತ್ವಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ. ಮಹಾಮಸ್ತಕಾಭಿಷೇಕಕ್ಕೆ ಎಷ್ಟು ಹಣ ಖರ್ಚಾಗಿರಬಹುದು ಎಂಬ ಊಹೆಯಲ್ಲಿ ಆ್ಯನ್ ತೊಡಗಿದ್ದರೆ ಆ್ಯಡಂನ ಪ್ರಕಾರ ಅದರಿಂದ ತಮಗೇನೂ ಉಪಯೋಗವಿಲ್ಲ. ಕೇವಲ ನೋಡುವುದೊಂದೇ ಕೆಲಸ. ಇಂಡಿಯಾದ ಸಾಮಾಜಿಕ, ಆರ್ಥಿಕ ಸಮಸ್ಯೆಗಳಲ್ಲಿ ಸಿಕ್ಕಿಕೊಂಡರೆ ತಲೆಯೇ ಕೆಡಬಹುದು. ಜೊತೆಗೆ ಇಲ್ಲಿಯ ಸಮಸ್ಯೆಗಳ ಜೊತೆ ಇರಲು ಇಲ್ಲಿಯೆ ಭಾರತೀಯಳಾಗಿ ಹುಟ್ಟಬೇಕು, ಇಲ್ಲಿಯೇ ಇರಬೇಕು.

ಆದರೆ ಆ್ಯನ್ ತಾನು ಜೈನ ಧರ್ಮವನ್ನು ಸ್ವೀಕರಿಸಿದ ಕೂಡಲೇ ಭಾರತೀಯ ಹೇಗಾಗುತ್ತೇನೆ ಎಂಬ ಅನುಮಾನ. ಅಲ್ಲದೇ ಬೌದ್ಧ ಜನರು ಎಷ್ಟೋ ದೇಶಗಳಿಲ್ಲಿದ್ದಾರೆ ಎಂಬುದು ಅವಳ ಸಮರ್ಥನೆ. ಆದರೆ ಆ್ಯಡಂ ಕೇಳಿದ ನೀನು ಬ್ರಿಟೀಷ್ ಜೈನಳೇ – ಕ್ರಿಶ್ಚಿಯನ್ ಜೈನಳೇ ಎಂಬ ಪ್ರಶ್ನೆಯು ಅವಳಿಗೆ ಅವಳ ಸ್ವಂತ ಐಡೆಂಟಿಟಿಯ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಜೈನ ಧರ್ಮದ, ಅದರ ತಾತ್ವಿಕ ಹಂದರದ ತಿಳುವಳಿಕೆಯನ್ನು ಇತರ ಎಷ್ಟೋ ಜೈನರಿಗಿಂತ ಹೆಚ್ಚು ತಿಳಿದುಕೊಂಡಿದ್ದರೂ ಕೂಡ ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕದಲ್ಲಿ ಕಂಡ ಪ್ರಸ್ತುತ ಜೈನ ಸಮಾಜದ ಸಾಮಾಜಿಕ–ಆರ್ಥಿಕ–ರಾಜಕೀಯ ಅಪೇಕ್ಷೆಗಳ ಭವ್ಯ ಪ್ರದರ್ಶನ ಅವಳನ್ನು ದೂರ ತಳ್ಳುತ್ತದೆ. ಹೀಗಾಗಿ ಜೈನ ತತ್ವದ ಒಳ್ಳೆಯ ಅಂಶಗಳನ್ನು ಅಂಗೀಕರಿಸಲು ಜೈನಳಾದ ಅವಳಿಗೆ ತನಗೂ ಜೈನ ಸಮಾಜಕ್ಕೂ ಏನೂ ಸಂಬಂಧವಿಲ್ಲ ಎಂದು ಅನಿಸತೊಡಗುತ್ತದೆ. ಈ ಜೈನ ಸಮಾಜದ ಅಭಿಲಾಷೆಗಳು, ಕನಸುಗಳು ಆ್ಯನಳ ಮನಃಸ್ಥಿತಿಗೆ ಒಗ್ಗುವುದಿಲ್ಲ.

ಹೀಗಾಗಿ ಈ ಜೈನ ಸಮಾಜ ತನ್ನನ್ನು ನುಂಗುವುದಕ್ಕಿಂತ ಮೊದಲು ತಾನು ಇಲ್ಲಿಂದ ಪಲಾಯನ ಮಾಡಬೇಕು ಎಂದುಕೊಳ್ಳುತ್ತಾಳೆ. ಇದಕ್ಕೆ ಮೂಲ ಕಾರಣ ಆ್ಯಡಂನ ವೈಚಾರಿಕ ದೃಷ್ಟಿಕೋನ. ಅವನ ಆ ವೈಚಾರಿಕ ದೃಷ್ಟಿಯ ಮೂಲಕ ಆ್ಯನ್‌ಗೆ ತನ್ನ ಪರಕೀಯತೆಯ ಬಗ್ಗೆ, ಜೈನ ಸಮಾಜದ ನಡುವಿನ ಕಂದಕದ ಬಗ್ಗೆ ತೀವ್ರ ಪ್ರಜ್ಞೆ ಮೂಡುತ್ತದೆ. ಹೀಗಾಗಿ ತಾನು ಸದ್ಯಕ್ಕೆ ಪಲಾಯನ ಮಾಡಿ, ಮುಂದೆ ಮತ್ತೊಮ್ಮೆ ಬಂದಾಗ, ಜೈನ ಸಮಾಜವನ್ನು ವಸ್ತುನಿಷ್ಠತೆಯಿಂದ ಅಭ್ಯಾಸ ಮಾಡಬೇಕೆಂದು ಆಲೋಚಿಸುತ್ತಾಳೆ. ಇಲ್ಲಿ ಆ್ಯನ್‌ಳು ಮಾನಸಿಕವಾಗಿ ಅನುಭವಿಸುತ್ತಿರುವ ಸಂಘರ್ಷವನ್ನು ಗುರುತಿಸಬಹುದಾಗಿದೆ. ತನ್ನ ನಿರೀಕ್ಷೆಗಳು, ತನ್ನ ಅನಿಸಿಕೆಗಳು, ತಾನು ಪಡೆದ ಅನುಭವಗಳಿಗೂ ಪ್ರಸ್ತುತ ಸನ್ನಿವೇಶಕ್ಕೂ ಅಜಗಜಾಂತರ ವ್ಯತ್ಯಾಸ ಇರುವುದು ಅವಳಲ್ಲಿ ಆಘಾತವನ್ನು ಉಂಟು ಮಾಡುತ್ತದೆ. ಹೀಗಾಗಿ ಅವಳು ಇಂಗ್ಲೆಂಡಿಗೆ ಮರಳಲು ನಿರ್ಧರಿಸುತ್ತಾಳೆ. ಏಕೆಂದರೆ ಅವಳನ್ನು ವಾಸ್ತವದಲ್ಲಿ ಕಟ್ಟಿ ಹಾಕಲು ಅವಳಿಗೆ ಆ್ಯಡಂನ ಅವಶ್ಯಕತೆ ಇದ್ದೇ ಇದೆ ಎಂಬ ಭಾವನೆ ಬರುತ್ತದೆ.

ಆ್ಯಡಂ ಮತ್ತು ಆ್ಯನ್ ಇಬ್ಬರೂ ಮದುವೆ ಮಾಡಿಕೊಳ್ಳಲಿರುವ ವಿಚಾರ ಪ್ರೊಫೆಸರ್ ನಿರ್ಮಲ ಕುಮಾರರ ಮೂಲಕ ತಿಳಿದಾಗ ಭಟ್ಟಾರಕರಿಗೆ ಆಶ್ಚರ್ಯ ಆಗುತ್ತದೆ. ಆ್ಯಡಂ ಭಟ್ಟಾಕರರಿಗೆ ಆ್ಯನ್ ಜೈನ ದೀಕ್ಷೆ ತೆಗೆದುಕೊಂಡರೂ ಮೊದಲು ಕ್ರಿಶ್ಚಿಯನ್ ಧರ್ಮದಲ್ಲಿಯೇ ಬೆಳೆದವಳು. ತನ್ನ ತಂದೆಯ ಮೂಲಕ ನೋಡಿದರೆ ತಾನೂ ಜೈನ. ತಾಯಿಯ ಮೂಲಕ ಕ್ರಿಶ್ಚಿಯನ್! ಅವರಿಬ್ಬರೂ

ಅರ್ಧ ಕ್ರಿಶ್ಚಿಯನ್, ಅರ್ಧ ಜೈನ್ ಆಗಿರುವುದರಿಂದ ತಮ್ಮಿಬ್ಬರ ಸಂಯೋಗ ಯೋಗ್ಯವಾದುದಾಗಿದೆ ಎಂದು ಹೇಳುತ್ತಾನೆ. ಭಟ್ಟಾರಕರು ತನಗೂ ಜೈನ ದೀಕ್ಷೆ ಕೊಡುವುದಾಗಿ ಹೇಳಿದಾಗ ಆ್ಯಡಂ ಹೇಳುವ 'ನನಗೆ ಎಲ್ಲ ಧರ್ಮಗಳೂ ಸಮ್ಮತ. ನಾನು ಮುಖ್ಯವಾಗಿ ಮಾನವತಾವಾದಿ. ಎಲ್ಲ ಧರ್ಮಗಳಲ್ಲಿಯು ಮಾನವತಾವಾದದ ಅಂಶ ಹೆಚ್ಚು ಕಡಿಮೆ ಇದ್ದೇ ಇರುತ್ತದೆ. ಜೈನ, ಬೌದ್ಧ ಹಾಗೂ ಕ್ರಿಶ್ಚಿಯನ್ ಧರ್ಮಗಳಲ್ಲಿ ಮಾನವತೆಯ ನಿಲುವು ತುಂಬ ಎದ್ದು ಕಾಣುತ್ತದೆ. ಆದ್ದರಿಂದ ತೌಲನಿಕ ಧಾರ್ಮಿಕ ಅಭ್ಯಾಸ ಈಗಿನ ಕಾಲದಲ್ಲಿ ಅವಶ್ಯ ಅಂತ ಅನಿಸ್ತದೆ' (ಪು.ಸಂ.೨೪೬) ಎಂಬ ಮಾತುಗಳು ಕಾದಂಬರಿಕಾರನ ಮಾತುಗಳಂತೆಯೇ ಭಾಸವಾಗುತ್ತವೆ.

ದೇಸಾಯಿ ಅವರು ರೋಜಾ ಪಾತ್ರದ ಮೂಲಕ ಮಾರ್ಕ್ಸ್ ಮಾನವತಾವಾದದ ಬಗ್ಗೆಯೂ ಚಿತ್ರಿಸಿದ್ದಾರೆ. ಪ್ರೊಫೆಸರ್ ನಿರ್ಮಲಕುಮಾರರ ಮಗಳು ರಾಜಮತಿ. ಆದರೆ ಅವಳಿಗೆ ಅದು ಇಷ್ಟವಾಗದ ಹೆಸರು. ಆದರೆ ಮನೆಯಲ್ಲಿ, ಸ್ನೇಹಿತರು ಎಲ್ಲರೂ ರೋಜಾ ಎಂದು ಕರೆಯುತ್ತಿದ್ದುದರಿಂದ ರೋಜಾ ಹೆಸರು ಅವಳಿಗೆ ಇಷ್ಟವಾಗುತ್ತದೆ. 'ರಾಜಮತಿ' ಎಂಬುದು ಪುರಾಣದೊಳಗಿನ ಹೆಸರಾಗಿದ್ದುದರಿಂದ ಅದು ಅವಳಿಗೆ ಇಷ್ಟವಾಗುತ್ತಿರಲಿಲ್ಲ (ಪು.ಸಂ. ೨೮). ನಿರ್ಮಲಕುಮಾರರ ಅಭಿಪ್ರಾಯದ ಪ್ರಕಾರ ರೋಜಾ ಮಾರ್ಕ್ಸಿಸ್ಟ್ ಆಗಿರುವುದರಿಂದ ಜೈನ ಧರ್ಮವನ್ನು ಅಣಕಿಸುತ್ತಿರುತ್ತಾಳೆ. ಆದರೆ ರೋಜಾಳಿಗೆ ಮಾರ್ಕ್ಸಿಜಂನಲ್ಲಿ ಆಸಕ್ತಿ ಇರುತ್ತದೆ. ರೋಜಾಳ ಪ್ರಕಾರ ಮೊದಲಿನ ಮಾರ್ಕ್ಸ್ ಮತ್ತು ಆ ನಂತರದ ಮಾರ್ಕ್ಸ್ ಇಬ್ಬರೂ ಒಂದೇ. ಎರಡನೇ ಮಾರ್ಕ್ಸ್ ಮೊದಲಿನ ಮಾರ್ಕ್ಸ್‌ನಲ್ಲಿ ಅಡಕಗೊಂಡಿದ್ದ. ಮೊದಲಿನ ಮಾರ್ಕ್ಸ್ ಕಮ್ಯೂನಿಸ್ಟ್ ಮ್ಯಾನಿಫೆಸ್ಟೋದಲ್ಲೇ ಹೊರಹೊಮ್ಮಿದ ಎಂದು ರೋಜಾ ಹೇಳುತ್ತಾಳೆ. ಆಗ ಆ್ಯನ್ ಜಗತ್ತನ್ನು ಬದಲಾಯಿಸಬೇಕು, ಕ್ರಾಂತಿ ಮಾಡಬೇಕು ಎಂತಲೇ ಆತ ಧಾರ್ಮಿಕ ಆವೇಶದಿಂದ ಎಲ್ಲ ಸರಳೀಕರಿಸಿ ಮ್ಯಾನಿಫೆಸ್ಟೋ ಬರೆದ ಎಂದು ಹೇಳುತ್ತಾಳೆ.

ಇದರಿಂದ ಕೋಪಗೊಂಡ ರೋಜಾ ಹಾಗಾದರೆ ಧರ್ಮ ಎಂದರೇನು ಎಂದು ಆ್ಯನ್‌ಳಿಗೆ ಕೇಳುತ್ತಾಳೆ. ಆ್ಯನ್‌ಳ ಪ್ರಕಾರ ಧರ್ಮ ಅಂದರೆ ನಂಬಿಕೆ, ಫೇಥ. ಆ ನಂಬಿಕೆಯಲ್ಲಿ ಒಂದು ಅಂಶ ಕುರುಡುತನವಿರುತ್ತದೆ. ಇದನ್ನು ಪ್ರತಿಭಟಿಸಿದ ರೋಜಾ ಕುರುಡುತನ, ಅದೇನು ನಿಮ್ಮ ಕ್ರಿಶ್ಚಿಯನ್ ಧರ್ಮದಂತೇನು? ಎಂದು ಕೇಳುತ್ತಾಳೆ. ಇಲ್ಲಿ ಇವರಿಬ್ಬರ ನಡುವಿನ ವೈಚಾರಿಕ ಸಂಘರ್ಷವನ್ನು ಗುರುತಿಸಬಹುದಾಗಿದೆ. ಆ್ಯನ್ ತಮ್ಮ ಮನೆಯಲ್ಲಿಯೇ ಉಳಿದುಕೊಳ್ಳಬಹುದಿತ್ತು ಎಂಬ ನಿರ್ಮಲಕುಮಾರರ ಮಾತಿಗೆ 'ರೋಜಾ ತಾಯಿಗೆ ಅರಾಮಿಲ್ಲ, ಅಲ್ಲೇ! ಗೆಸ್ಟ್ ಹೌಸಿನಲ್ಲಿಯೇ ಇದ್ದರೆ ಛಲೋ' ಎಂಬ ಸ್ಪಷ್ಟವಾಗಿ ಹೇಳುವ ಮೂಲಕ ಆ್ಯನ್ ದೂರವಿರುವುದೇ ಒಳ್ಳೆಯದು ಎಂಬುದನ್ನು ಸೂಚ್ಯವಾಗಿ ಹೇಳುತ್ತಾಳೆ. ರೋಜಾ ಜೈನ ಧರ್ಮದಲ್ಲಿಯೇ ಹುಟ್ಟಿದ್ದರೂ ಕೂಡ, ತನ್ನ ಆಧುನಿಕ ನಿಲುವಿನಿಂದಾಗಿ ಜೈನ ಧರ್ಮವನ್ನು ಕೇವಲ ಐತಿಹಾಸಿಕವಾಗಿ ನೋಡಬೇಕು. ವರ್ತಮಾನಕ್ಕೆ ಅದರ ರೆಲವೆನ್ಸ್ ಎಳ್ಳಷ್ಟೂ ಇಲ್ಲ ಎಂಬ ಮನೋಭಾವನೆ ಹೊಂದಿರುತ್ತಾಳೆ. ಅವಳ ಪ್ರಕಾರ ಜೈನರೆಂದ್ರೆ ಬ್ಲಡಿ ಕ್ಯಾಪಿಟಲಿಸ್ಟರು!

ರೋಜಾ ಯಾರ ಮೇಲೆಯೂ ಅವಲಂಬಿತವಾಗದೆ, ಸ್ವತಂತ್ರ ಮನೋಭಾವನೆಯನ್ನು ಹೊಂದಿದ್ದ ತರುಣಿ. ತಂದೆ ನಿರ್ಮಲ ಕುಮಾರರು ಜೈನ ಧರ್ಮದ ಬಗ್ಗೆ ಅತೀವ ಶ್ರದ್ಧೆಯನ್ನು ಹೊಂದಿರುತ್ತಾರೆ. ತಂದೆ ಮತ್ತು ಮಗಳ ನಡುವೆ ಅಭಿಪ್ರಾಯ ಭೇದವಿರುತ್ತದೆ. ನಿರ್ಮಲಕುಮಾರರು ಧರ್ಮದ ಬಗ್ಗೆ ಇತರರೊಂದಿಗೆ ಚರ್ಚೆ ನಡೆಸುತ್ತಿದ್ದರೂ ಕೂಡ ಮಗಳ ಜೊತೆ ಚರ್ಚೆಗೆ ಸಿದ್ಧವಿರುವುದಿಲ್ಲ. ರೋಜಾ ತನ್ನ ಬಗ್ಗೆ ಅಸಹನೆ ಹೊಂದಿದ್ದಾಳೆಂಬುದು ಅವರ ಅಭಿಮತ.

ಜೈನ ಧರ್ಮದಲ್ಲಿನ ಕಲ್ಪಿತ ವಿಶ್ವ ನಿರುಪಯೋಗಿ ಅದೆಲ್ಲ ಅರ್ಥವಿಲ್ಲದ ಗಾಳಿಮಾತು. ಇಂದ್ರಿಯಗಳಿಗೆ ಗೊತ್ತಾಗುವ ಈ ಜಗತ್ತೇ ಖರೇ – ಈ ಭೌತಿಕ ಜಗತ್ತಿನ ಆಚೆ ಏನೂ ಇಲ್ಲ. ಎಲ್ಲಾ ಧರ್ಮಗಳನ್ನೂ ಐತಿಹಾಸಿಕವಾಗಿ, ಸಮಾಜಶಾಸ್ತ್ರದ ದೃಷ್ಟಿಯಿಂದ ಅಭ್ಯಾಸ ಮಾಡಬೇಕು. ಜೈನ ಧರ್ಮ ಮತ್ತು ಬೌದ್ಧ ಧರ್ಮಗಳು ಬ್ರಾಹ್ಮಣರ ವರ್ಚಸ್ಸಿನ ವಿರುದ್ಧ ಕ್ಷತ್ರಿಯರು ಮಾಡಿದ ಬಂಡಾಯ. ಮುಂದೆ ವೈಶ್ಯರು ಜೈನ ಧರ್ಮವನ್ನು ಸಂಪೂರ್ಣ ತಮ್ಮದನ್ನಾಗಿ ಮಾಡಿಕೊಂಡರು ಎಂದು ರೋಜಾ ತನ್ನ ಮಾರ್ಕಿಸ್ಟ್ ದೃಷ್ಟಿಯಿಂದ ಚರ್ಚೆ ನಡೆಸುತ್ತಿರುತ್ತಾಳೆ. ಆ್ಯಡಂನ ಪ್ರಕಾರ ರೋಜಾಗೆ ತುಂಬಾ ಬ್ರೇನ್‌ವಾಶ್ ಆಗಿದೆ. ಅವಳಿಗೆ ಇಲ್ಲಿನ ಜೀವನ ಕಠಿಣ. ಏಕೆಂದರೆ ಭಾರತದಲ್ಲಿ ಧರ್ಮ, ಬೇಕಾದರೆ ತೋರಿಕೆಯ ಧರ್ಮ ಎನ್ನಲೂ ಅಡ್ಡಿಯಿಲ್ಲ. ಅದು ಇಡೀ ಜೀವನವನ್ನೇ ಕಬಳಿಸಿದೆ. ಕ್ರಾಂತಿ ಮಾಡುವುದಿದ್ದರೂ ಕೂಡ ಅದು ಧರ್ಮದ ಮುಖಾಂತರವೇ ಆಗಬೇಕು. ಭಾರತದಲ್ಲಿ ಏನೇ ಬದಲಾವಣೆ ತರಬೇಕಾದರೂ, ಅದು ಕೇವಲ ಕ್ರಾಂತಿಯ ಮೂಲಕವೇ ಎಂಬುದು ರೋಜಾಳ ಸ್ಪಷ್ಟ ನಿಲುವು. ಎಲ್ಲರ ಜೊತೆ ಶ್ರವಣಬೆಳಗೊಳಕ್ಕೆ ಹೋದ ರೋಜಾಗೆ ಗೊಮ್ಮಟನ ಮೂರ್ತಿಯನ್ನು ನೋಡುವಾಗ ಅವಳಲ್ಲಿ ವಿಶೇಷ ಭಕ್ತಿ ಭಾವಗಳೇನೂ ಇರುವುದಿಲ್ಲ. ಗೊಮ್ಮಟನ ಮೂರ್ತಿ 'ಫ್ಯೂಡಲ್‌ಕಾಲ'ದಲ್ಲಿ ನಿರ್ಮಾಣವಾಗಿದ್ದರಿಂದ ಅಲ್ಲಿ ಮೂರ್ತಿ ಮಾಡಿಸಿದ ವ್ಯಕ್ತಿ ಮುಖ್ಯವಾಗುತ್ತಾನೆ. ಶಿಲ್ಪದ ಕೆತ್ತನೆ ಕೆಲಸ ಮಾಡಿದ ಶಿಲ್ಪಿಗಳೆಲ್ಲ ದಾಸರು ಎಂದು ಮೂದಲಿಸುತ್ತಾಳೆ. ಮೂರ್ತಿಯಲ್ಲಿ ಪ್ರಮಾಣ ಬದ್ಧತೆ ಇಲ್ಲ ಅಂತ ಅನ್ನಿಸ್ತದ. ಎಷ್ಟು ಜನ ಕೂಡಿ ಈ ಮೂರ್ತಿ ನಿರ್ಮಿಸಿರಬಹುದು. ನಿರ್ಮಿಸುವಾಗ ಎಷ್ಟು ಜನ Scaffolding ನಿಂದ ಬಿದ್ದು ಸತ್ತಿರಬೇಕು. ಮುಖ್ಯ ಶಿಲ್ಪಿಯ ಸೃಜನಶಕ್ತಿ ಯಾವ ಮಟ್ಟದ್ದಿರಬೇಕು. ಎಷ್ಟು ವರ್ಷ ಹಿಡಿದಿರಬೇಕು ಈ ಬೃಹತ್ ಶಿಲ್ಪ ನಿರ್ಮಿಸಲು? ಒಬ್ಬ ಕಲಾವಿದ ಅಷ್ಟೊಂದು ಕಾಲ ತನ್ನ ಸ್ಫೂರ್ತಿ ಹೇಗೆ ಜ್ವಲಂತವಾಗಿಟ್ಟಿರಬೇಕು? ಎಂದು ಆ ಶಿಲ್ಪದ ನಿರ್ಮಾಣದ ಬಗ್ಗೆ ಮಾತನಾಡುತ್ತಿರುತ್ತಾಳೆ.

ಬೆಟ್ಟದಿಂದ ಹಿಂದಿರುಗಿ ಬರುವಾಗ ಮಾರ್ಗ ಮಧ್ಯೆ ಸಿಕ್ಕ ಜೀನಸೇನ ಪಂಡಿತ, ಅವರುಗಳಿಗೆ ಮಠಾಧಿಪತಿಗಳ ಜೊತೆ ಮೀಟಿಂಗ್‌ಗೆ ಯೋಜನೆ ಮಾಡಲೇ ಎಂದು ಕೇಳಿದಾಗ ರೋಜಾ ತನ್ನ ಮನದಲ್ಲೇ, 'ಮಠಾಧಿಪತಿಗಳು ಇಷ್ಟು ಕುತೂಹಲ ತೋರಿಸಲಿಕ್ಕೆ ಕಾರಣವೆಂದರೆ ಈ ಹುಡುಗಿ ಇಂಗ್ಲೆಂಡಿನವಳು ಅಂತ. ನಮ್ಮ ಕೊಲೋನಿಯಲ್ ಪ್ರಜ್ಞೆ ಯಾರನ್ನೂ ಬಿಟ್ಟಿದ್ದಲ್ಲ ಎಂದು ಆಲೋಚಿಚುತ್ತಾಳೆಯೇ ಹೊರತು, ಆ್ಯನ್‌ಳ ಜೈನ ಧರ್ಮದ ಬಗೆಗಿನ ಆಸಕ್ತಿ ಕುರಿತು ಯೋಚಿಸುವುದಿಲ್ಲ. 'ಜಿನಸೇನ ಇನ್ನೂ ತರುಣ, ಲಗ್ನ ಕೂಡ ಆಗಿರದ ವ್ಯಕ್ತಿ. ಇಷ್ಟು ಒಳ್ಳೇ ಹುಡುಗ ಈ ಕ್ಷೇತ್ರದ ಚಕ್ರದಲ್ಲಿ ಒಂದು cog ಆಗಿ ಕೊಳೆಯುತ್ತಿದ್ದಾನೆ. ಯುನಿವ್ವರ್ಸಿಟಿಯಲ್ಲಿ

ಸ್ಪಡಿ ಮಾಡುವಂಥ ವಯಸ್ಸು.. ಅರ್ಥವಿಲ್ಲದ ಪೂಜೆ, ಮಂತ್ರ-ತಂತ್ರಗಳಲ್ಲಿ ಆತನ ಜೀವನ ಹಾಳಾಗಿ ಹೋಗುತ್ತಿದೆ' ಎಂಬುದು ರೋಜಾಳ ಅಭಿಪ್ರಾಯ. ಆದರೆ ಆ್ಯನ್ 'ಹೋಗ್ತಿರಬಹುದು, ಹೋಗ್ತಿರಲಿಕ್ಕಿಲ್ಲ, ಯಾರಿಗೆ ಗೊತ್ತು?' ಎಂದು ಹೇಳುತ್ತಾಳೆ. ತಮ್ಮಿಬ್ಬರ ದೃಷ್ಟಿ ಬೇರೆ ಬೇರೆ ಎಂದು ರೋಜಾ ಹೇಳಿದಾಗ, 'ಅದಕ್ಕೆ 'ನಯ' ಅಂತಾರೆ, ನಿನ್ನ ಡ್ಯಾಡೀನ್ನ ಕೇಳು' ಎಂದು ಆ್ಯನ್ ಹೇಳುತ್ತಾಳೆ. ಅದಕ್ಕೆ ರೋಜಾ ಡ್ಯಾಡೀ ನಿನ್ನ ತಲೆ ಕೆಡಿಸಿಟ್ಟದ್ದಾರೆ – ಸುಮ್ಮನೆ ಮಾರ್ಕ್ಸ್ ಓದು, ಉಪಯೋಗವಾಗ್ತದೆ' ಎಂದು ಸಲಹೆ ನೀಡುತ್ತಾಳೆ. ಆ್ಯನ್ ಸ್ವಲ್ಪ ಬೇಸರದಿಂದಲೇ 'ತಾನು ಅಲ್ಪ ಸ್ವಲ್ಪ ಮಾರ್ಕ್ಸ್‌ನನ್ನು ಓದಿದ್ದು, ಆತ ಗ್ರೇಟ್ ತತ್ವಜ್ಞಾನಿ ಆದರೆ ಬುದ್ಧನೂ ಗ್ರೇಟ್ ತತ್ವಜ್ಞಾನಿ, ಮಹಾವೀರನೂ ಗ್ರೇಟ್ ತತ್ವಜ್ಞಾನಿ. ಅವರವರ ಕ್ಷೇತ್ರ ಬೇರೆ ಬೇರೆ ಎಂದು ಉತ್ತರಿಸುತ್ತಾಳೆ. ಈ ಚರ್ಚೆಯ ಮೂಲಕ ಅವರಿಬ್ಬರ 'ನಯ'ಗಳಲ್ಲಿ ಮೊದಲೇ ಇದ್ದ ಭೇದ ಇಮ್ಮಡಿಯಾಗುತ್ತದೆ.

ಆ್ಯಡಂ ರೋಜಾಳೊಡನೆ ಸ್ನೇಹದ ಸಲುಗೆಯಿಂದ ವರ್ತಿಸುತ್ತಿದ್ದುದನ್ನು ನಿರ್ಮಲ ಕುಮಾರರು ಗಮನಿಸಿರುತ್ತಾರೆ. ಅಲ್ಲದೆ ಯಾವುದೋ ಒಂದು ಉದ್ವೇಗದ ಕ್ಷಣದಲ್ಲಿ ಆ್ಯನ ಕೂಡ ನಿರ್ಮಲಕುಮಾರದೊಂದಿಗೆ ಅವರಿಬ್ಬರ ಮದುವೆ ಮಾಡುವಂತೆ ಹೇಳಿರುತ್ತಾಳೆ. ಆ್ಯಡಂ ರೋಜಾಳೊಂದಿಗೆ ಸಲುಗೆಯಿಂದ ವರ್ತಿಸಿದ ರೀತಿ ರೋಜಾಳಲ್ಲೂ ಕೂಡ ಗೊಂದಲ ಮೂಡಿಸಿರುತ್ತದೆ. ಆದರೆ ರೋಜಾಳಿಗೆ ಡಾ.ಮಾಧವನ್ ಕಡೆಗೆ ಒಲವಿರುತ್ತದೆ. ಹೀಗಾಗಿ ಅವಳು ಅವರನ್ನೇ ಸ್ವೀಕರಿಸುವಂತೆ ಆ್ಯಡಂ ಸಲಹೆ ನೀಡುತ್ತಾನೆ. ಅಲ್ಲದೇ ಈ ವಿಚಾರದಲ್ಲಿ ರೋಜಾ ಗೊಂದಲದಲ್ಲಿರುವುದನ್ನು ಗಮನಿಸಿದ ಆ್ಯಡಂ 'ಇದು ನಿನ್ನ ಪ್ರೊಬ್ಲೆಮ್. ನೀನೇ ಬಿಡಿಸಿಕೋ. ನಿನ್ನ ತಂದೆ-ತಾಯಿ ಒಪ್ಪಲಾರರು ಅನ್ನೋದೂ ನನಗೆ ಗೊತ್ತು. ನೀನು ಬಂಡಾಯಗಾರ್ತಿ- ನಿನಗೆ ತೊಂದರೆಯಾಗಲಾರದು' ಎಂದು ಹೇಳುತ್ತಾನೆ. ರೋಜಾ ತನ್ನ ತಂದೆ ತಾಯಿಗಳ ಇಚ್ಛೆಯನ್ನೇಕೆ ಪೂರೈಸಬಾರದು ಎಂದು ಕೇಳಿದ ಪ್ರಶ್ನೆಗೆ ಅದು ಅವಳ ವ್ಯಕ್ತಿತ್ವಕ್ಕೆ ವಿರುದ್ಧವಾದುದ್ದು ಎಂದು ಹೇಳುತ್ತಾನೆ. ಆದರೆ ನಿರ್ಮಲಕುಮಾರರ ಪ್ರಕಾರ ಡಾ.ಮಾಧವನ್ ಅಮೆರಿಕೆಯಲ್ಲಿ ಕಲಿತು ಬಂದವ ಹುಡುಗಿಯರ ಜೊತೆ ಡೇಟಿಂಗ್ ಮಾಡಿದವ. ಮೇಲಾಗಿ ಆತ ದಾಕ್ಷಿಣಾತ್ಯ ಬ್ರಾಹ್ಮಣ. ಹೀಗಾಗಿ ನಿರ್ಮಲಕುಮಾರರಿಗೆ ರೋಜಾ ಡಾ. ಮಾಧವನ್ ಜೊತೆ ಸೇರುವುದು ಇಷ್ಟವಿರಲಿಲ್ಲ. ಇಲ್ಲಿ ನಿರ್ಮಲಕುಮಾರರಿಗೆ ತಮ್ಮ ಮಗಳ ಬಗೆಗಿನ ಅಸಮಧಾನಕ್ಕೆ ಇರುವ ಕಾರಣವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ರೋಜಾ ಆ್ಯನ್‌ಳಿಗೆ ಬರೆದ ಪತ್ರದಲ್ಲಿ ರೋಜಾ ಆ್ಯನ್‌ಳನ್ನು ವಿಕ್ಷಿಪ್ತ ಮನಸ್ಸಿನ ಹುಡುಗಿ ಎಂದು ಕರೆದ ಕಾರಣವನ್ನು, ಜೊತೆಗೆ ಅವಳಿಗೆ ಆ್ಯನ್‌ಳ ಜೊತೆಗಿನ ಸಂಘಷಕ್ಕೆ ಕಾರಣ ಸಿಗುತ್ತದೆ. ರೋಜಾ ಆ್ಯನ್‌ಳಿಗೆ ಬರೆದ ಪತ್ರದಲ್ಲಿ ಆ್ಯನ್ ತನ್ನ ವೈಯಕ್ತಿಕ, ವ್ಯಕ್ತಿನಿಷ್ಠ ಕೃತ್ಯದಿಂದ ಜೈನ ದೀಕ್ಷೆ ತೆಗೆದುಕೊಂಡಿದ್ದರಿಂದ ಇಲ್ಲಿನ ಪ್ರತೀಗಾಮೀ ಜೈನರ ಈಗೋ ಬೂಸ್ಟ್ ಅಪ್ ಆಗಿದೆ. ಆ್ಯನ್‌ಳಂಥವರು ಇಂಡೊಲಾಜಿಸ್ಟ್, ಫೋಕಲೊರಿಸ್ಟ್, ಸೋಷಿಯಲ್ ಅಂಥ್ರಪೊಲೊಜಿಸ್ಟ್‌ಗಳೆಂದು ಬಂದು, ಮೂಲ ಧರ್ಮೀಯರಿಗೆ ಬೇಡವಾದ ಭೂತಕಾಲದಲ್ಲಿ ರಿಸರ್ಚ್ ಮಾಡಿ ಜಗದ ಮುಂದಿಟ್ಟು ಬೇಡವಾದ ಹಳೇ ಪರಂಪರೆಗಳ ಬಗ್ಗೆ ಒಣ ದುರಭಿಮಾನವನ್ನು ಹುಟ್ಟಿಸಿ ಪ್ರಗತಿಗೆ ಅಡ್ಡಗಾಲು ಹಾಕುತ್ತಾರೆ.

ಇಲ್ಲಿನ ಐತಿಹಾಸಿಕ ಪ್ರಕ್ರಿಯೆ ಬೇರೆ, ಅಲ್ಲಿನವರ ಪ್ರಕ್ರಿಯೆಯೇ ಬೇರೆ, ಆ್ಯನ್‌ನಂಥವರು ಏನೇ ಮಾಡಿದರೂ ಈ ಪ್ರಕ್ರಿಯೆಯನ್ನು ನಿಲ್ಲಿಸುವುದು ಸಾಧ್ಯವಿಲ್ಲ ಎಂದು ತನ್ನ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾಳೆ.

ಆ್ಯನ್ ಮತ್ತು ಆ್ಯಡಂನ ಸಂಬಂಧದ ಬಗ್ಗೆ ಆ್ಯಡಂ ಒಳ್ಳೇ ಹೃದಯವಂತ ಮನುಷ್ಯನೆಂದೂ ಅವನನ್ನು ಆ್ಯನ್ ತನ್ನ ತಿರುವು ಮುರುವಾದ ವ್ಯಕ್ತಿತ್ವದ ಪ್ರಭಾವದಿಂದ ಕರಪ್ಟ್ ಮಾಡಬಾರದೆಂದೂ, ಅವನನ್ನು ಅವನಾಗಲು ಬಿಡಬೇಕೆಂದೂ ಸಲಹೆ ನೀಡಿರುತ್ತಾಳೆ. ಜೊತೆಗೆ ಆ್ಯನ್ ತನ್ನ ಜೈನಿಜಂನ್ನು ಅಲ್ಲಿ ಮರೆಸಬಾರದೆಂಬ ಕೋರಿಕೆಯೂ ಇರುತ್ತದೆ. ಇದಕ್ಕೆ ಪ್ರತಿಯಾಗಿ ಆ್ಯನ್ ರೋಜಾಳನ್ನು ಕುರಿತು 'ಹುಚ್ಚೀ', ನಿನಗೇನು ಗೊತ್ತು ವ್ಯಕ್ತಿ-ಸಮಾಜ, ವಿಶ್ವ-ಜೀವನ ಇವುಗಳ ಸಂಬಂಧ? ವ್ಯಕ್ತಿಯೇ ಎಲ್ಲದರ ಕೇಂದ್ರ ಘಟಕ ಅನ್ನೋದನ್ನು ನೀವು ಮಾರ್ಕ್ಸಿಸ್ಟರು ಮರೆತಂತಿದೆ... ಈ ವಿಶ್ವ ಜೀವನದಲ್ಲಿಯ ಏನನ್ನೂ ನಾನು ನನ್ನದಾಗಿಸಿಕೊಳ್ಳಬಲ್ಲೆ, ನಾನೇನು ಮಾಡಬೇಕು ಬಿಡಬೇಕು ಅಂತ ಹೇಳೋ ಅಧಿಕಾರ ನಿನಗೆ ಹೇಗೆ ಬಂತು. ಐತಿಹಾಸಿಕ ಪ್ರಕ್ರಿಯೆ? ಇರಬಹುದು ನಿಮ್ಮ ಪ್ರಕ್ರಿಯೆಗೂ ನನಗೂ ಯಾವ ಸಂಬಂಧ? ಏನು ಇವಳ ಧಿಮಾಕು! ನನ್ನ ಆ್ಯಡಂನ ಸಂಬಂಧದ ಬಗ್ಗೆ ಇವಳು ಈ ರೀತಿ ಕಮೆಂಟ್ ಮಾಡಬೇಕೇ?' ಎಂದು ಆಲೋಚಿಸುತ್ತಾಳೆ. ಹೀಗೆ ಇವರಿಬ್ಬರ ನಡುವಿನ ಧಾರ್ಮಿಕ ವೈಚಾರಿಕತೆಗಳ ಸಂಘರ್ಷ ಕಾದಂಬರಿಯ ಪ್ರಾರಂಭದಿಂದ ಕೊನೆಯವರೆವಿಗೂ ಮುಂದುವರಿಯುವುದನ್ನು ಗಮನಿಸಬಹುದಾಗಿದೆ.

ಮೊದಲಿನಿಂದಲೂ ಅಸ್ತಿತ್ವವಾದಿ ಲೇಖಕರಾಗಿದ್ದ ದೇಸಾಯಿ ಅವರು 'ಓಂ ಣಮೋ' ಕಾದಂಬರಿಯ ಮೂಲಕ ತಮ್ಮ ಅಂತ್ಯದಲ್ಲಿ ಧಾರ್ಮಿಕ ಹಿನ್ನೆಲೆಗೆ ಮರಳುವುದನ್ನು ಗುರುತಿಸಬಹುದು. ಹೀಗೆ ಧಾರ್ಮಿಕ ಹಿನ್ನೆಲೆಗೆ ಮರಳಿದರೂ ಕೂಡ ಅಸ್ತಿತ್ವವಾದ, ಮಾರ್ಕ್ಸ್ ಮಾನವತಾವಾದದ ಬಗೆಗೂ ಇಲ್ಲಿ ಪಾತ್ರಗಳ ಮೂಲಕ ಚರ್ಚೆ, ಚಿಂತನೆಗಳನ್ನು ನಡೆಸುವುದನ್ನು ಗುರುತಿಸಬಹುದು. ಅಹಿಂಸಾ ಧರ್ಮ ಎಂದು ಹೇಳಲ್ಪಡುವ ಜೈನ ಧರ್ಮದಲ್ಲಿನ ಕೇಶಲೋಚನದಂತ ಕೆಲವು ಆಚರಣೆಗಳು ಹಿಂಸೆಯಿಂದಲೇ ಕೂಡಿರುವುದನ್ನು ಗಮನಿಸಬಹುದು. ಜೈನ ಧರ್ಮದ ಅನೇಕ ಪಾರಿಭಾಷಿಕ ಪದಗಳನ್ನು, ಕಲ್ಪನೆಗಳನ್ನು ಹೊಸ ಅರ್ಥಗಳೊಂದಿಗೆ ವಿಭಿನ್ನವಾಗಿ ಗ್ರಹಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಹೀಗೆ 'ಓಂ ಣಮೋ' ಕಾದಂಬರಿಯು ದೇಸಾಯಿ ಅವರೇ ಹೇಳುವಂತೆ ಅವರ ಜೈನ ಅನುಭವವನ್ನು ಕುರಿತದ್ದಾಗಿದ್ದರೂ ಕೂಡ ಇದು ಧಾರ್ಮಿಕ ಸಂಘರ್ಷಗಳನ್ನು ಒಳಗೊಂಡಿರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕಾಲಕ್ಕೆ ತಕ್ಕಂತೆ ನಂಬಿಕೆಗಳು, ಆಚರಣೆಗಳೂ ಕೂಡ ಬದಲಾಗುತ್ತವೆ ಎಂಬುದನ್ನು "ಓಂ ಣಮೋ'ದಲ್ಲಿ ಗಮನಿಸಬಹುದು.

೭.೨ ಸಂಸ್ಕಾರ (೧೯೬೫) :

ನವ್ಯ ಸಾಹಿತ್ಯದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಯು.ಆರ್.ಅನಂತಮೂರ್ತಿಯವರು ರಚಿಸಿದ 'ಸಂಸ್ಕಾರ' (೧೯೬೫) ಕಾದಂಬರಿಯಲ್ಲಿ ನವ್ಯ ಸಾಹಿತ್ಯದ ಕೆಲವು ಮೂಲಭೂತ ಪ್ರವೃತ್ತಿಗಳು ಕಲಾತ್ಮಕವಾಗಿ ಚಿತ್ರಿಸಲ್ಪಟ್ಟಿವೆ. 'ಸಂಸ್ಕಾರ' ಕಾದಂಬರಿಯು ವೈದಿಕ ಮನೋಧರ್ಮದ ಹಿನ್ನೆಲೆಯನ್ನು ಹೊಂದಿದ್ದು ಧಾರ್ಮಿಕ ಸಂಘರ್ಷವನ್ನು ಒಳಗೊಂಡಿದೆ.

ಪ್ರಾಣೇಶಾಚಾರ್ಯರು ತಮ್ಮ ಅನಾರೋಗ್ಯ ಪೀಡಿತ ಹೆಂಡತಿಯ ಆರೈಕೆ ಮಾಡುವ ಚಿತ್ರಣದೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಪ್ರಾಣೇಶಾಚಾರ್ಯರು ಕಾಶಿಗೆ ಹೋಗಿ ವೇದಾಂತವನ್ನು ಓದಿಕೊಂಡು 'ವೇದಾಂತ ಶಿರೋಮಣಿ' ಎಂಬ ಬಿರುದಿಗೆ ಪಾತ್ರರಾಗುವುದರ ಜೊತೆಗೆ ಸ್ಮಾರ್ತ ಹಾಗೂ ಮಾಧ್ವ ಮತದ ದಿಗ್ಗಜ ಪಂಡಿತರ ಜೊತೆ ವಾದಿಸಿ, ದಕ್ಷಿಣದ ಸಮಸ್ತ ಪೀಠಗಳಲ್ಲಿ ಪ್ರಶಸ್ತಿ ಗಳಿಸಿ ಹದಿನೈದು ಜರಿ ಶಾಲುಗಳನ್ನು, ಬೆಳ್ಳಿ ತಟ್ಟೆಗಳನ್ನು ಬಹುಮಾನವಾಗಿ ಪಡೆದಿರುತ್ತಾರೆ.

ಪ್ರಾಣೇಶಾಚಾರ್ಯರು ಅನಾರೋಗ್ಯ ಪೀಡಿತಳಾಗಿ ಒಣಗಿ ಮುರುಟಿದ ತಮ್ಮ ಹೆಂಡತಿ ಭಾಗೀರಥಿಯ ಕೀಚುಗಾಯಿ ದೇಹಕ್ಕೆ ಸ್ನಾನ ಮಾಡಿಸಿ, ಹೂ ಮುಡಿಸಿ, ತೀರ್ಥಕೊಟ್ಟು, ಅವಳಿಂದ ಕಾಲು ಮುಟ್ಟಿಸಿಕೊಂಡು ಆಶೀರ್ವದಿಸಿ ರವೆಗಂಜಿಯನ್ನು ಬಟ್ಟಲಲ್ಲಿ ತರುತ್ತಾರೆ. ಇಲ್ಲಿ ಒಣಗಿ ಮುರುಟಿ ಕೀಚುಗಾಯಿ ದೇಹವನ್ನು ಹೊಂದಿದ್ದ ಭಾಗೀರಥಿಯಿಂದ ಪ್ರಾಣೇಶಾಚಾರ್ಯರು ತಮ್ಮ ಕಾಲುಗಳನ್ನು ಮುಟ್ಟಿಸಿಕೊಳ್ಳುವುದು ವ್ಯಂಗ್ಯಾತ್ಮಕ ಪ್ರತೀಕದಂತೆ ಬಂದಿದೆ.

ತಮಗೆ ನೀಡಲು ಗಂಜಿಯನ್ನು ತಂದ ಪ್ರಾಣೇಶಾಚಾರ್ಯರಿಗೆ ಭಾಗೀರಥಿ ಮೊದಲು ನಿಮ್ಮ ಊಟವಾಗಲಿ ಎಂದು ಹೇಳಿದಾಗ ಅವರು 'ಇಲ್ಲ ಮೊದಲು ನಿನ್ನ ಗಂಜಿಯಾಗಲಿ' ಎಂದು ಹೇಳುವ ಮಾತುಗಳು ಕಳೆದ ಇಪ್ಪತ್ತು ವರ್ಷಗಳಿಂದಲೂ ಒಬ್ಬರಿಗೊಬ್ಬರು ಆಡಿಕೊಂಡು ಪರಿಪಾಠವಾದ ಮಾತಾಗಿತ್ತು. ಮುಕ್ತಿ ಮಾರ್ಗದಲ್ಲಿರುವ ತಮ್ಮನ್ನು ಪರೀಕ್ಷಿಸಲೆಂದೇ ತಮಗೆ ಈ ಪರಿಸ್ಥಿತಿ ಇದ್ದು, ರೋಗ ಪೀಡಿತ ಹೆಂಡತಿಯಿಂದಾಗಿ ತಾವು ಇನ್ನಷ್ಟು ಹದವಾದೆ ಎಂದು ಅವರು ಸಮಾಧಾನ ಹೊಂದುತ್ತಿರುತ್ತಾರೆ. ಆದರೆ ಹೆಂಡತಿ ಭಾಗೀರಥಿ ಪ್ರಾಣೇಶಾಚಾರ್ಯರು ಮತ್ತೊಂದು ಮದುವೆ ಮಾಡಿಕೊಂಡು ಮಕ್ಕಳನ್ನು ಪಡೆದು ಸುಖವಾಗಿರಲಿ ಎಂಬ ಅಭಿಲಾಷೆಯನ್ನು ಹೊಂದಿರುತ್ತಾರೆ. ಪ್ರಾಣೇಶಾಚಾರ್ಯರಿಗೆ ಇನ್ನೂ ನಲ್ವತ್ತು ವರ್ಷಗಳಾಗದೇ ಇದ್ದುದರಿಂದ, ಜೊತೆಗೆ ತಮ್ಮನ್ನು ಮದುವೆ ಮಾಡಿಕೊಂಡಾಗಲಿನಿಂದ ಅವರು 'ಸುಖ'ವನ್ನು ಹೊಂದದೇ ಇದ್ದುದರಿಂದ ಅವರು ಮತ್ತೊಂದು ಮದುವೆ ಮಾಡಿಕೊಳ್ಳಲಿ ಎಂಬುದು ಅವರ ಆಲೋಚನೆ ಆಗಿರುತ್ತದೆ. ಆದರೆ ಪ್ರಾಣೇಶಾಚಾರ್ಯರು ತಮ್ಮ ನಿತ್ಯದ ಕರ್ಮದಲ್ಲೇ ಸುಖವನ್ನು ಕಾಣುತ್ತಿರುತ್ತಾರೆ.

ಹೆಂಡತಿಗೆ ಗಂಜಿ, ಮದ್ದು ನೀಡಿ, ತಾವು ಇನ್ನೇನು ಊಟಕ್ಕೆ ಕೂರಬೇಕೆನ್ನುವಷ್ಟರಲ್ಲಿ ಹೊರಗೆ 'ಆಚಾರ್ಯರೇ, ಆಚಾರ್ಯರೇ' ಎಂದು ಹೆಂಗಸೊಬ್ಬಳು ಕರೆದ ದನಿ ಕೇಳುತ್ತದೆ. ಧ್ವನಿಯನ್ನು ಆಲಿಸಿದ ಪ್ರಾಣೇಶಾಚಾರ್ಯರಿಗೆ ಅದು 'ಚಂದ್ರಿ'ಯ ಧ್ವನಿ ಎಂದು ಅನಿಸುತ್ತದೆ. ಅವಳ ಹತ್ತಿರ ಮಾತನಾಡಿದರೆ ಮತ್ತೆ ಸ್ನಾನ ಮಾಡಿ ಊಟ ಮಾಡಬೇಕು. ಆದರೆ ಹೆಣ್ಣು ಹೆಂಗಸೊಬ್ಬಳನ್ನು ಅಂಗಳದಲ್ಲಿ ಕಾಯಿಸಿದರೆ ತುತ್ತು ಗಂಟಲಲ್ಲಿ ಇಳಿಯುವುದು ಶಕ್ಯವೇ? ಎಂದು ಆಲೋಚಿಸುತ್ತಾರೆ. ಇಲ್ಲಿ ಪ್ರಾಣೇಶಾಚಾರ್ಯರ ಮನದಲ್ಲಿನ ಸಂಘರ್ಷವನ್ನು ಗುರುತಿಸಬಹುದು. ಧಾರ್ಮಿಕ ನಿಷ್ಠರಾದ ಪ್ರಾಣೇಶಾಚಾರ್ಯರು ತಮ್ಮ ಧಾರ್ಮಿಕ ಮನಃಸ್ಥಿತಿಗೆ ಮಹತ್ವ ನೀಡದೇ ಮಾನವೀಯತೆಗೆ ಒತ್ತು ನೀಡುವುದನ್ನು ಅವರು ಜಗುಲಿಗೆ ಬರುವುದರಲ್ಲಿ ಗುರುತಿಸಬಹುದು.

'ಚಂದ್ರಿ'ಯು ನಾರಣಪ್ಪನ ಸೂಳೆಯಾಗಿರುತ್ತಾಳೆ. ನಾರಾಣಪ್ಪನು ತಾನು ತಾಳಿ ಕಟ್ಟಿದ್ದ ಹೆಂಡತಿಯನ್ನು ಬಿಟು ಬಿಟ್ಟಿದ್ದಲ್ಲದೇ ಅವಳು ಸತ್ತಾಗ ಅವಳ ಸಂಸ್ಕಾರವನ್ನೂ ನಡೆಸಿರುವುದಿಲ್ಲ. ಅಲ್ಲದೇ ತನ್ನ ಅಪ್ಪ ಅಮ್ಮನ ಶ್ರಾದ್ಧವನ್ನೂ ಮಾಡಿರುವುದಿಲ್ಲ. ಜೊತೆಗೆ ತಲತಲಾಂತರದಿಂದ ಮನೆಯಲ್ಲಿ ಪೂಜೆ ಮಾಡಿದ ಸಾಲಿಗ್ರಾಮವನ್ನು ನೀರಿಗೆ ಎಸೆದು ಅದಕ್ಕೆ ಉಗಿದಿರುತ್ತಾನೆ. ಜೊತೆಗೆ ಮದ್ಯಪಾನ, ಮಾಂಸಾಹಾರ ಸೇವನೆಯನ್ನೂ ಮಾಡುತ್ತಿದ್ದ. ಅವನು ಬೇಕೆಂದೇ ತುರುಕರನ್ನು ಕರೆದುಕೊಂಡು ಬಂದು ಅಂಗಳದಲ್ಲೇ ಅಪೇಯಪಾನ ಅಭಕ್ಷ್ಯಭೋಜನವನ್ನು ಮಾಡಿರುತ್ತಾನೆ. ಇವೆಲ್ಲಕ್ಕಿಂತ ಮುಖ್ಯವಾದದ್ದೆಂದರೆ ಅವನು ಶೂದ್ರ ಹೆಂಗಸಾದ ಚಂದ್ರಿಯನ್ನು ಕುಂದಾಪುರದಿಂದ ಮೆಚ್ಚಿ ಕರೆದುಕೊಂಡು ಬಂದು ತನ್ನ ಮನೆಯಲ್ಲೇ ಇಟ್ಟುಕೊಂಡು ಅವಳ ಸಹವಾಸವನ್ನು ಮಾಡಿರುತ್ತಾನೆ. ತನ್ನ ಆಸ್ತಿಯೆಲ್ಲವನ್ನೂ ಬೇರೆಯವರಿಗೆ ಪರಭಾರೆ ಮಾಡಿ, ಪಿತ್ರಾರ್ಜಿತವಾಗಿ ಬಂದಿದ್ದ ಬಂಗಾರವನ್ನೆಲ್ಲಾ ಚಂದ್ರಿಗೆ ಕೊಟ್ಟಿರುತ್ತಾನೆ.

ಚಂದ್ರಿಯ ಧ್ವನಿಯನ್ನು ಕೇಳಿ ಪ್ರಾಣೇಶಾಚಾರ್ಯರು ಜಗುಲಿಗೆ ಬಂದ ಕೂಡಲೇ ಚಂದ್ರಿ ಸರ್ರನೆ ತಲೆ ಮೇಲೆ ಸೆರಗೆಳೆದುಕೊಂಡು ಕಂಪಿಸುತ್ತಾ ನಾರಣಪ್ಪ 'ಹೋದ' ವಿಚಾರವನ್ನು ತಿಳಿಸುತ್ತಾಳೆ. ನೋವಿಗೆ ಬರುವ ಬಾವಿನ ಹಾಗೆ ಪಕ್ಕೆಯ ಹತ್ತಿರ ಗಡ್ಡೆ ಎದ್ದಿರುತ್ತದೆ. ಶಿವಮೊಗ್ಗದಿಂದ ಬಂದಾಗಲೇ ಜ್ವರ ಬಂದಿರುತ್ತದೆ.ನಾಲ್ಕು ದಿನಗಳು ಬಂದ ಜ್ವರದಿಂದ ಅವನು ಮರಣ ಹೊಂದಿರುತ್ತಾನೆ. ನಾರಾಣಪ್ಪನಿಗೆ ಪ್ಲೇಗ್ ಬಂದಿರುತ್ತದೆ. ನಾರಣಪ್ಪ ತೀರಿಕೊಂಡ ವಿಚಾರವನ್ನು ಕೇಳಿದ ಪ್ರಾಣೇಶಾಚಾರ್ಯರು ಉಟ್ಟ 'ಪಟ್ಟೇಮಡಿ'ಯಲ್ಲಿಯೇ ಗರುಡಾಚಾರ್ಯನ ಮನೆಗೆ ಓಡುತ್ತಾ ಹೋಗುತ್ತಾರೆ. ಗರುಡಾಚಾರ್ಯ ನಾರಣಪ್ಪನ ಐದು ತಲೆಯ ಸಂಬಂಧದವನಾಗಿರುತ್ತಾನೆ. ಹೀಗಾಗಿ ಕಲಸಿದ ಸಾರಿನ ತುತ್ತನ್ನು ಇನ್ನೇನು ಬಾಯಿಗೆ ಹಾಕಿಕೊಳ್ಳಬೇಕೆಂದಿದ್ದ ಗರುಡಾಚಾರ್ಯನಿಗೆ 'ನಾರಾಯಣ... ಗರುಡಾ, ಊಟ ಮಾಡಬೇಡ ನಾರಣಪ್ಪ ತೀರಿಕೊಂಡನಂತೆ' ಎಂದು ಹೇಳುತ್ತಾರೆ. ತನಗೂ ನಾರಣಪ್ಪನಿಗೂ ಆಣೆ ಭಾಷೆಯಾಗಿ ಎಲ್ಲ ಸಂಬಂಧವನ್ನು ಕಳಚಿಕೊಂಡಿದ್ದರೂ ಕೂಡ ಗರುದಾಚಾರ್ಯ ಈ ಸುದ್ದಿಯನ್ನು ಕೇಳಿ ದಂಗಾಗಿ, ಕಲಸಿದ ತುತ್ತನ್ನು ಎಲೆಯ ಮೇಲೆಯೇ ಬಿಟ್ಟು, ಅಪೋಶನ ತೆಗೆದುಕೊಂಡು ಮೇಲೇಳುತ್ತಾನೆ.

ಸುದ್ದಿ ತಿಳಿಯುವುದರಲ್ಲಿ ಅಕ್ಕ ಪಕ್ಕದವರೆಲ್ಲ 'ಎಲ್ಲಿ ಊಟ ಮಾಡಿ ಬಿಡುತ್ತಾರೋ' ಎಂಬ ಭಯದಿಂದ, ಪಾಣೇಶಾಚಾರ್ಯರು ಮತ್ತು ಗರುಡಾಚಾರ್ಯ ಓಡೋಡುತ್ತಾ ಹೋಗಿ ಮನೆ ಮನೆಗೆ ಸುದ್ದಿ ಮುಟ್ಟಿಸುತ್ತಾರೆ. ಸುದ್ದಿ ಕಿಚ್ಚಿನಂತೆ ಇಡೀ ಅಗ್ರಹಾರದ ಉಳಿದ ಹತ್ತು ಮನೆಗೂ ಹಬ್ಬುತ್ತದೆ. ಮಕ್ಕಳನ್ನು ಮನೆಯ ಒಳಗೇ ಕೂಡಿಸಿ ಕಿಟಕಿ ಬಾಗಿಲುಗಳನ್ನು ಹಾಕಿಕೊಳ್ಳುತ್ತಾರೆ. ಮಕ್ಕಳಿಗೆ ಅಡ್ಡಿಯಿಲ್ಲ. ಊಟ ಮಾಡಲಿ ಎಂದು ಹೇಳಿ ದೊಡ್ಡವರೆಲ್ಲಾ ಶವ ಸಂಸ್ಕಾರವಾಗುವ ತನಕ ಊಟ ಮಾಡುವಂತಿಲ್ಲವೆಂದು ಎಲ್ಲರೂ ಊಟ ಬಿಟ್ಟು ಮೇಲೇಳುತ್ತಾರೆ. "ಬದುಕಿನಲ್ಲಿ ವೈರಿ,ಸತ್ತು ಅನ್ನ ಕಂಟಕ, ಶವವಾಗಿ ಇನ್ನೂ ಸಮಸ್ಯೆ" (ಪು.ಸಂ.೯) ಎಂದು ಲಕ್ಷ್ಮಣಾಚಾರ್ಯನು ತನ್ನ ಷಡ್ಡುಕನನ್ನು ಶಪಿಸುತ್ತಾ, ಕೈ ತೊಳೆಯುತ್ತಾನೆ. ಇಲ್ಲಿ ವೈದಿಕ ಮನೋಧರ್ಮದ ಕಟ್ಟುಕಟ್ಟಳೆಗಳ ಚಿತ್ರಣವನ್ನು ಗಮನಿಸಬಹುದು.

ನಾರಣಪ್ಪನ ಸಾವು ದೂರ್ವಾಸಪುರದ ಅಗ್ರಹಾರದ ಹೆಂಗಸರು,ಮಕ್ಕಳಾದಿಯಾಗಿ ಒಂದು ನರಪಿಳ್ಳೆಗೂ ವ್ಯಥೆಯನ್ನು ಉಂಟು ಮಾಡದಿದ್ದರೂ ಕೂಡ ಎಲ್ಲರ ಹೃದಯದಲ್ಲೂ ಒಂದು ಅವ್ಯಕ್ತ, ಅಪರಿಚಿತ ಭೀತಿ, ಕಳವಳವನ್ನು ಹುಟ್ಟು ಹಾಕುತ್ತದೆ. ಆಚಾರ್ಯರ ಜಗುಲಿಯಲ್ಲಿ ಸೇರಲು ಹೊರಟ ಪ್ರತಿ ಗಂಡಸಿನ ಕಿವಿಯಲ್ಲೂ ಅವರವರ ಹೆಂಡತಿಯರು ಹೇಳುವ "ಪ್ರಾಣೇಶಾಚಾರ್ಯರು ಖುದ್ದು ತೀರ್ಮಾನಿಸದ ಹೊರತು ನೀವಾಗಿ ಅವನ ಶವಸಂಸ್ಕಾರ ಮಾಡಲು ಒಪ್ಪಬೇಡಿ.ನಾಳೆ ಗುರುಗಳು ಬಹಿಷ್ಕಾರ ಹಾಕಿದರೆ ಏನು ಗತಿ?" ಎಂಬ ಮಾತುಗಳು ಅಗ್ರಹಾರದವರ ಮಾನಸಿಕ ಸಂಘರ್ಷದ ಪ್ರತಿಕವಾಗಿವೆ.

ನಾರಣಪ್ಪನ ಸಾವಿನ ಸುದ್ಧಿ ಕೇಳಿ ಅಗ್ರಹಾರದ ಬ್ರಾಹ್ಮಣರೆಲ್ಲರೂ ಪಾಣೇಶಾಚಾರ್ಯರ ಜಗುಲಿಯಲ್ಲಿ ಅವ್ಯಕ್ತ ಶಂಕೆಯಲ್ಲಿ ಕಿಕ್ಕಿರಿದು ನೆರೆದಿರುತ್ತಾರೆ. ಕುತೂಹಲ ತಡೆಯಲಾರದ ಹೆಂಗಸರೂ ಸಹ ಪ್ರಾಣೇಶಾಚಾರ್ಯರ ಮನೆಯ ಹಿತ್ತಲ ಬಾಗಿಲಿನಿಂದ ಬಂದು ನಡು ಮನೆಯಲ್ಲಿ ಸೇರಿರುತ್ತಾರೆ. ಅಲ್ಲಿ ಸೇರಿದ್ದವರ ಮನದಲ್ಲಿ ಒಂದೇ ಪ್ರಶ್ನೆ ಇರುತ್ತದೆ. ಅದಕ್ಕೆ ತಕ್ಕ ಹಾಗೆ ಪ್ರಾಣೇಶಾಚಾರ್ಯರು 'ನಾರಾಣಪ್ಪನ ಶವ ಸಂಸ್ಕಾರವಾಗಬೇಕು: ಮೊದಲನೆಯ ಪ್ರಶ್ನೆ, ಅವನಿಗೆ ಮಕ್ಕಳಿಲ್ಲ. ಯಾರಾದರೂ ಅವನ ಬೊಜ್ಜ ಮಾಡಬೇಕು; ಎರಡನೆಯ ಪ್ರಶ್ನೆ, ಎಂದು ಹೇಳುವಲ್ಲಿ ಧಾರ್ಮಿಕ ಸಂಘರ್ಷವನ್ನು ಗುರುತಿಸಬಹುದು. ಏಕೆಂದರೆ ನಾರಣಪ್ಪನು ತನ್ನ ಸ್ವೇಚ್ಛಾಚಾರದ ಮನೋಭಾವದಿಂದಾಗಿ ಬ್ರಾಹ್ಮಣ್ಯತ್ವದ ತತ್ವಗಳನ್ನು ಧಿಕ್ಕರಿಸಿ ಜೀವನ ನಡೆಸಿರುತ್ತಾನೆ. ಮದ್ಯ, ಮಾಂಸಾಹಾರ ಸೇವನೆ, ಎಲ್ಲಕ್ಕಿಂತ ಹೆಚ್ಚಾಗಿ ಶೂದ್ರ ಹೆಂಗಸಾದ ಚಂದ್ರಿಯನ್ನು ಮನೆಯಲ್ಲಿಯೇ ಇಟ್ಟುಕೊಂಡು ಅವಳು ತಯಾರಿಸಿದ ಆಹಾರವನ್ನೇ ಸೇವಿಸುತ್ತಿದ್ದುದು ಉಳಿದ ಬ್ರಾಹ್ಮಣರಿಗೆ ನುಂಗಲಾರದ ತುತ್ತಾಗಿರುತ್ತದೆ.

ಹೀಗಾಗಿ ಅವನು ಬ್ರಾಹ್ಮಣನೋ ಅಲ್ಲವೋ ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡಿ ಆತಂಕಕ್ಕೆ ಕಾರಣವಾಗಿರುತ್ತದೆ. ಅಲ್ಲದೆ ನಾರಣಪ್ಪನು ಅಗ್ರಹಾರದಲ್ಲೇ ಇದ್ದುದರಿಂದ ಉಳಿದ ಬ್ರಾಹ್ಮಣರೂ ಕೂಡ ಎರಡು ವರ್ಷಗಳಿಂದ ಸಂತರ್ಪಣೆ, ಬ್ರಾಹ್ಮಣಾರ್ಥ ಅದು ಇದೂ ಅಂತ ಯಾವುದೇ ಬ್ರಾಹ್ಮಣಾರ್ಥವಿಲ್ಲದೇ ನೊಂದಿರುತ್ತಾರೆ. ಇದೆಲ್ಲದಕ್ಕೂ ಮುಖ್ಯ ಕಾರಣ ನಾರಾಣಪ್ಪ ಸತ್ಕುಲ ಪ್ರಸೂತನಾದ ಬ್ರಾಹ್ಮಣ ನಡೆದುಕೊಳ್ಳುವ ರೀತಿಯಲ್ಲಿ ನಡೆದುಕೊಳ್ಳದೆ ಅಗ್ರಹಾರಕ್ಕೆ ಅಪಖ್ಯಾತಿಯನ್ನು ತಂದಿರುವುದರಿಂದ ಅವನ ಶವ ಸಂಸ್ಕಾರವನ್ನು ಯಾರು ನಡೆಸಬೇಕು ಎಂಬುದು ಪ್ರಶ್ನೆಯಾಗಿರುತ್ತದೆ. ಪ್ರಾಣೇಶಾಚಾರ್ಯರ ಪ್ರಕಾರ ಅವನು ಬ್ರಾಹ್ಮಣ್ಯವನ್ನು ಬಿಟ್ಟರೂ ಬ್ರಾಹ್ಮಣ್ಯ ಅವನನ್ನು ಬಿಡಲಿಲ್ಲ. ಏಕೆಂದರೆ ಅವನಿಗೆ ಬಹಿಷ್ಕಾರ ಹಾಕಿರುವುದಿಲ್ಲ. ಶಾಸ್ತ್ರ ರೀತಿಯಲ್ಲಿ ಅವನು ಬಹಿಷ್ಕೃತನಾಗದೇ ಸತ್ತಿದ್ದರಿಂದ ಅವನು ಬ್ರಾಹ್ಮಣನಾಗಿಯೇ ಸತ್ತಂತೆ. ಹಾಗೆ ವಿಚಾರ ಮಾಡಿದಾಗ ಬ್ರಾಹ್ಮಣರಲ್ಲದವರಿಗೆ ಅವನ ಶವವನ್ನು ಮುಟ್ಟಲು ಅಧಿಕಾರವಿಲ್ಲ. ಮುಟ್ಟಲು ಬಿಟ್ಟರೆ ಆಗಲೂ ಕೂಡ ಇವರ ಬ್ರಾಹ್ಮಣ್ಯಕ್ಕೆ ವಂಚನೆ ಬಂದಂತೆ (ಪು. ೧೩). ಆದ್ದರಿಂದ ಇಷ್ಟೆಲ್ಲಾ ಇದ್ದೂ ಅವನು ಬದುಕಿದ್ದಾಗ ನಡೆದುಕೊಂಡ ರೀತಿಯನ್ನು ಕಂಡು ಕೇಳಿ ನೋಡಿದ್ದ ಅವರುಗಳಿಗೆ ಸಂಸ್ಕಾರ ಮಾಡಿ ಎಂದು ಹೇಳಲು ಪ್ರಾಣೇಶಾಚಾರ್ಯರು ಅಂಜುತ್ತಿರುತ್ತಾರೆ. ಏಕೆಂದರೆ ಗರುಡ ತನ್ನ ಆಣೆ ಭಾಷೆ ದೋಷ ಪರಿಹಾರ ಮಾಡಿಸಿಕೊಂಡು ನಾರಾಣಪ್ಪನ ಅಂತ್ಯ ಸಂಸ್ಕಾರ ನಡೆಸಲು ಧರ್ಮಶಾಸ್ತ್ರದಲ್ಲಿ ನಿವಾರಣೆಯಿರುತ್ತದೆ.

ಆದರೆ ಅದಕ್ಕೆ ಶಾಂತಿ ಮಾಡಿಸಿಕೊಳ್ಳಬೇಕು. ಗೋದಾನವಾಗಬೇಕು. ಪುಣ್ಯಕ್ಷೇತ್ರವೊಂದಕ್ಕೆ ಹೋಗಿ ಬರಬೇಕು. ಇದು ಖರ್ಚಿನ ಪ್ರಶ್ನೆಯಾದ್ದರಿಂದ ಅದನ್ನು ಸೂಚಿಸಲು ಪ್ರಾಣೇಶಾಚಾರ್ಯರಿಗೆ ಅಧಿಕಾರವಿರುವುದಿಲ್ಲ.

ಈ ಎಲ್ಲಾ ಕಾರಣಗಳಿಂದಾಗಿ ಧರ್ಮಶಾಸ್ತ್ರದಲ್ಲಿ ಮತ್ತೇನಾದರೂ ಪರಿಹಾರವಿಯೋ ಏನೋ ಎಂಬುದನ್ನು ನೋಡಬೇಕು ಎಂದು ಹೇಳುತ್ತಾರೆ. ಇವರೆಲ್ಲರಿಗೂ ನಾರಾಣಪ್ಪನ ಅಂತ್ಯ ಸಂಸ್ಕಾರಕ್ಕಿಂತ 'ಧರ್ಮ'ದ ಆಚರಣೆಯೇ ಮುಖ್ಯವಾಗಿರುವುದನ್ನು ಗಮನಿಸಬಹುದು. ಏಕೆಂದರೆ ಎಲ್ಲರಲ್ಲೂ ನಾರಾಣಪ್ಪನ ಅಂತ್ಯ ಸಂಸ್ಕಾರ ಮಾಡಲು ತಾನಾಗಿಯೇ ಒಪ್ಪಿಕೊಂಡರೆ ಎಲ್ಲಿ 'ಬಹಿಷ್ಕಾರ'ವನ್ನು ಎದುರಿಸಬೇಕಾಗುತ್ತದೋ ಎಂಬ ಆತಂಕವೇ ಮುಖ್ಯವಾಗಿರುತ್ತದೆ. ಹೀಗಾಗಿ ಎಲ್ಲರೂ ಅಂತಿಮ ತೀರ್ಮಾನದ ಜವಾಬ್ದಾರಿಯನ್ನು ಪ್ರಾಣೇಶಾಚಾರ್ಯರೇ ನಿರ್ಧರಿಸಲಿ ಎಂದು ಹೇಳುವಷ್ಟರಲ್ಲಿ ಒಂದು ಘಟನೆ ನಡೆಯುತ್ತದೆ.

ಪ್ರಾಣೇಶಾಚಾರ್ಯರು ಖರ್ಚು-ವೆಚ್ಚಗಳ ಬಗ್ಗೆ ಮಾತನಾಡುವುದನ್ನು ಕೇಳುತ್ತಾ, ಅಂಗಳದಲ್ಲಿ ಕಂಬಕ್ಕೆ ಆತು ನಿಂತಿದ್ದ ಚಂದ್ರಿ ತನ್ನ ನಾಲ್ಕೆಳೆ ಬಂಗಾರದ ಸರ, ಕಡಗ, ಬಳೆಗಳನ್ನು ಪ್ರಾಣೇಶಾಚಾರ್ಯರ ಎದುರಿಗಿಟ್ಟು, ಅವರ ಸಂಸ್ಕಾರದ ಖರ್ಚಿಗೆ ಎಂದು ತೊದಲುತ್ತಾ ಹೇಳಿ ತಾನು ಮೊದಲು ನಿಂತಲ್ಲಿಗೆ ಹೋಗಿ ನಿಲ್ಲುತ್ತಾಳೆ. ಚಾವಡಿಯಲ್ಲಿ ನಿಂತಿದ್ದ ಹೆಂಗಸರೆಲ್ಲರೂ ಬಂಗಾರದ ಆಸೆಯಿಂದ ತಂತಮ್ಮ ಗಂಡಂದಿರ ಮುಖವನ್ನೇ ನೋಡುತ್ತಾರೆ. ಆದರೆ ಬ್ರಾಹ್ಮಣರೆಲ್ಲರೂ ಬಂಗಾರದ ಆಸೆಯಿಂದ ಬ್ರಾಹ್ಮಣ್ಯ ನಾಶವಾದೀತು ಎಂಬ ದಿಗಿಲಿನಿಂದ ತಂತಮ್ಮ ಮುಖವನ್ನು ತಗ್ಗಿಸುತ್ತಾರೆ.ಆದರೆ ಮರುಕ್ಷಣದಲ್ಲೇ ಪ್ರತಿಯೊಬ್ಬರಲ್ಲೂ ಕೂಡ 'ನಾನಲ್ಲದೇ ಬೇರೆ ಬ್ರಾಹ್ಮಣ ನಾರಣಪ್ಪನ ಬೊಜ್ಜ ಮಾಡಿ, ಬ್ರಾಹ್ಮಣ್ಯವನ್ನೂ ಕಳೆದುಕೊಳ್ಳದೆ, ಬಂಗಾರವನ್ನೂ ತನ್ನ ಹೆಂಡತಿಯ ಕೊರಳಿಗೆ ಏರಿಸಿದರೆ? ಎಂಬ ಪ್ರಶ್ನೆ ಮೂಡುತ್ತದೆ. ಲಕ್ಷ್ಮಣಾಚಾರ್ಯ ಮತ್ತು ಗರುಡಾಚಾರ್ಯರ ನಡುವೆ ಈ ಮೊದಲೇ ಇದ್ದ ಪರಸ್ಪರ ದ್ವೇಷ ಅಸೂಯೆ ಈ ಹೊಸ ಕಾರಣದಿಂದ ಮತ್ತಷ್ಟು ಹೊತ್ತಿ ಉರಿಯುತ್ತದೆ. ಲಕ್ಷ್ಮಣಾಚಾರ್ಯ ಗರುಡಾಚಾರ್ಯನ ಬಗ್ಗೆ 'ಇವ ಮಾನಗೆಟ್ಟು ತನಗೆ ಸೇರಬೇಕಾದ ಬಂಗಾರವನ್ನು ದೋಚಿ, ಬ್ರಾಹ್ಮಣ್ಯವನ್ನೂ ಕಳೆದುಕೊಳ್ಳದೆ, ಬಡ ಗೋವೊಂದನ್ನು ನೆವಕ್ಕೆ ದಾನ ಮಾಡಿ, ಇಹಪರವೆರಡನ್ನೂ ಗಟ್ಟಿಮಾಡಿಕೊಂಡರೇ?' ಎಂದು ಆಲೋಚಿಸತೊಡಗುತ್ತಾನೆ.

ದುರ್ಗಾಭಟ್ಟರು ಈ ಮಾಧ್ವರೇನಾದರೂ ನಾರಣಪ್ಪನ ಶವ ಸಂಸ್ಕಾರ ಮಾಡಲಿ, ನಾನು ಊರೂರು ತಿರುಗಿ ಇವರು ಎಸಗಿದ ಕೃತ್ಯವೆಂಥಾದ್ದು ಎಂದು ಬೀದಿಗೆಳೆಯುತ್ತೇನೆ ಎಂದು ಆಲೋಚಿಸುತ್ತಿರುತ್ತಾರೆ. ಗರುಡ, ಲಕ್ಷ್ಮಣ ಎಲ್ಲಿ ನಮಗೆ ಕರ್ಮ ಮಾಡಲು ಬಿಟ್ಟಾರು? ಎಂದು ದಾಸಾಚಾರ್ಯನಾದಿಯಾಗಿ ಉಳಿದ ಬಡ ಬ್ರಾಹ್ಮಣರ ಬಾಯಲ್ಲಿ ನೀರೂರಿ ಕಣ್ಣುಗಳು ಒದ್ದೆಯಾಗುತ್ತವೆ. ಯಾರು ಎಲ್ಲಿ ಒಪ್ಪಿ ಬಿಡುತ್ತಾರೋ ಎಂಬ ಭಯದಿಂದ ಪ್ರತಿಯೊಬ್ಬ ಬ್ರಾಹ್ಮಣನೂ ಕೂಡ ನಾರಣಪ್ಪನಿಂದ ತಮಗಾದ ಅನ್ಯಾಯಕ್ಕಿಂತ ಇನ್ನೊಬ್ಬನಿಗಾದ ಅನ್ಯಾಯವನ್ನು ಕಣ್ಣಿಗೆ ಕಟ್ಟುವಂತೆ ಆತುರವಾಗಿ, ಸ್ಪರ್ಧೆಯಿಂದ ವಿವರಿಸತೊಡಗುತ್ತಾರೆ. ಆ ಮೂಲಕ ಒಬ್ಬರು ಇನ್ನೊಬ್ಬರ

ಬಗ್ಗೆ ಹೊಂದಿದ್ದ ದ್ವೇಷ, ಅಸೂಯೆಗಳು ಹೊರ ಹೊಮ್ಮುತ್ತವೆ. ಇದು ಕೃತಿಯಲ್ಲಿ ಸಹಜವೆಂಬಂತೆ ಬಂದಿದ್ದರೂ ಕೂಡ, ತಾವು ಶ್ರೇಷ್ಠರು ಎಂದು ಹೇಳಿಕೊಳ್ಳುವವರ ಸಂಕುಚಿತ ಮನೋಭಾವದ ಚಿತ್ರಣ ವ್ಯಂಗ್ಯಾತ್ಮಕವಾಗಿ ಸಮರ್ಥವಾಗಿ ಚಿತ್ರಿತವಾಗಿದೆ. ಜೊತೆಗೆ ಇದು ಅಗ್ರಹಾರದ ಹೆಂಗಸರ ನಿರಾಶೆಗೂ, ಗರುಡಾಚಾರ್ಯನ ಹೆಂಡತಿ ಸೀತಾದೇವಿ ಹಾಗೂ ಲಕ್ಷ್ಮಣಾಚಾರ್ಯನ ಹೆಂಡತಿ ಅನುಸೂಯಾಳ ಕೋಪಕ್ಕೂ ಕಾರಣವಾಗುತ್ತದೆ.

ಆದರೆ ಪ್ರಾಣೇಶಾಚಾರ್ಯರು ಏನೋ ಒಳ್ಳೆಯದು ಮಾಡಲು ಹೋಗಿ ಈ ಚಂದ್ರಿ ಎಲ್ಲವನ್ನೂ ಹದಗೆಡಿಸಿದಳಲ್ಲ ಎಂದು ಆಲೋಚಿಸುತ್ತಾರೆ. ಆದರೆ ಇದನ್ನು ತುಂಬಾ ಸಮಯ ಹೀಗೆ ಬಿಡುವಂತಿರಲಿಲ್ಲ. ಏಕೆಂದರೆ 'ಸನಾತನ ಧರ್ಮ'ದ ಪ್ರಕಾರ ಅಗ್ರಹಾರದಿಂದ ಹೆಣಾ ತೆಗೆದುಕೊಂಡು ಹೋಗೋವರೆಗೆ ದೇವರ ಪೂಜೆ, ಸ್ನಾನ, ಸಂಧ್ಯಾವಂದನೆ, ಊಟ, ಉಪಚಾರ ಏನೂ ನಡೆಯುವಂತಿಲ್ಲ.. ಬಹಿಷ್ಕೃತನಲ್ಲದ್ದರಿಂದ ಬ್ರಾಹ್ಮಣರಲ್ಲದೇ ಬೇರೆ ಯಾರೂ ಅವನ ಹೆಣಾ ಮುಟ್ಟುವಂತಿಲ್ಲ..... ಇಂತಹ ಸಂದಿಗ್ಧ, ಸಂಘರ್ಷದ ಪರಿಸ್ಥಿತಿಯಲ್ಲಿ ದಾಸಾಚಾರ್ಯನಿಗೆ ಪಾರಿಜಾತಪುರದ ಬ್ರಾಹ್ಮಣರ ಸಹಾಯವನ್ನು ಪಡೆಯುವ ಆಲೋಚನೆ ಮೂಡುತ್ತದೆ.

ಪಾರಿಜಾತಪುರದವರು ಅಡ್ಡ ಪಂಕ್ತಿ ಬ್ರಾಹ್ಮಣರು; ಸ್ಮಾರ್ತರು. ಹಿಂದೆ ಒಂದು ಕಾಲದಲ್ಲಿ ಒಬ್ಬ ವಿಧವೆ ಬಸುರಾದದ್ದನ್ನು ಅಗ್ರಹಾರದವರು ಮುಚ್ಚಿಟ್ಟುಕೊಂಡರೆಂದೂ, ಶೃಂಗೇರಿಯ ಗುರುಗಳಿಗೆ ಈ ಸುದ್ದಿ ತಲುಪಿ ಇಡೀ ಅಗ್ರಹಾರಕ್ಕೆ ಬಹಿಷ್ಕಾರ ಹಾಕಿದರೆಂದೂ ಪ್ರತೀತಿ. ಪಾರಿಜಾತಪುರದವರು ಒಟ್ಟಿನಲ್ಲಿ ಸುಖಿಗಳು; ನೇಮ ನಿಷ್ಠೆಯೆಂದು ಕುಣಿಯುವವರಲ್ಲ; ಅಡಿಕೆ ತೋಟ ಮಾಡುವುದರಲ್ಲಿ ನಿಸ್ಸೀಮರು, ಶ್ರೀಮಂತರು. ತನ್ನಂತೆ ಅವರೂ ಸ್ಮಾರ್ತರು ಎಂಬ ಕಾರಣಕ್ಕೆ ದುರ್ಗಾಭಟ್ಟನಿಗೆ ಅವರ ಮೇಲೆ ಪ್ರೀತಿಯಿರುತ್ತದೆ. ಹೀಗಾಗಿ ಅವನು ಗುಪ್ತವಾಗಿ ಅಲ್ಲಿ ಅವಲಕ್ಕಿ ಉಪ್ಪಿಟ್ಟು ಕಾಫಿಯನ್ನು ಸೇವಿಸಿದ್ದೂ ಉಂಟು. ಅವನಿಗೆ ಅಲ್ಲಿನ ಮತ್ತೊಂದು ಆಕರ್ಷಣೆ ಎಂದರೆ ಪಾರಿಜಾತಪುರದ ಎಲೆಯಡಿಕೆ ತಿನ್ನುವ ಸಕೇಶಿ ವಿಧವೆಯರು.

ದಾಸಾಚಾರ್ಯನು ಇಡೀ ದಿನ ಊಟವಿಲ್ಲದೇ ಇರುವುದರ ಸಂಕಟವನ್ನು ಕಲ್ಪಿಸಿಕೊಂಡು ಪಾರಿಜಾತಪುರದ ಬ್ರಾಹ್ಮಣರಿಗೂ ನಾರಣಪ್ಪನಿಗೂ ಸ್ನೇಹವಿದ್ದುದರಿಂದ, ಜೊತೆಗೆ ಪರಸ್ಪರ ಊಟ ಉಪಚಾರವೂ ನಡೆಯುತ್ತಿದ್ದುದರಿಂದ ಹಾಗೂ ಅವರ ಆಚಾರಗಳು ಇವರಷ್ಟು ಬಿಗಿಯಿಲ್ಲದೇ ಇರುವುದರಿಂದ ಅಂತ್ಯ ಸಂಸ್ಕಾರ ನಡೆಸುವಂತೆ ಅವರನ್ನು ಕೇಳಬಹುದು ಎಂದು ಸಲಹೆ ನೀಡುತ್ತಾನೆ. ಈ ಸಲಹೆ ಅಗ್ರಹಾರದ ಏಕೈಕ ಸ್ಮಾರ್ತ ಬ್ರಾಹ್ಮಣ ದುರ್ಗಾಭಟ್ಟನಿಗೆ ಕೋಪ ತರಿಸುತ್ತದೆ. 'ಈ ಮಾಧ್ವನ ಸೊಕ್ಕೆ – ಉಣ್ಣಲಿಕ್ಕೆ ಗತಿಯಿಲ್ಲದಿದ್ದರೂ' ಎಂದು ಕ್ರುದ್ಧನಾಗಿ "ನೀನು ಆಡಿದ್ದು ಪರಮ ಅನ್ಯಾಯದ ಮಾತು. ನೀನೇನೋ ಅವರು ಅಡ್ಡ ಪಂಕ್ತಿ ಬ್ರಾಹ್ಮಣರೆಂದು ತಿಳಿದರೂ ಕೂಡ ಅವರನ್ನವರು ತಾವು ಕೀಳೆಂದು ಭಾವಿಸಿಲ್ಲ. ನಿಮ್ಮ ಮತದವನ ಹೆಣಾನ ತೆಗೆಯೋದರಿಂದ ನಿಮ್ಮ ಜಾತಿ ಹೋಗೋದಾದರೆ ಅವರದ್ದೂ ಇನ್ನಷ್ಟು ಹೋದಂತೆ. ನೀವು ಹೋಗಿ ಕೇಳೋ ಸಾಹಸ ಮಾಡಿದರೆ ತಕ್ಕ ಪೂಜೆ ಮಾಡಿಸಿಕೊಂಡು ಬರುತ್ತೀರಿ. ಪಾರಿಜಾತಪುರದ ಮಂಜಯ್ಯನ ಹತ್ತಿರ ನಿಮ್ಮನ್ನೆಲ್ಲಾ ಕೊಂಡುಕೊಳ್ಳುವಷ್ಟು ಹಣ ಇದೆ ಗೊತ್ತುಂಟಾ ಎಂದು ಹೇಳುವಲ್ಲಿ

ಅವನು ಬ್ರಾಹ್ಮಣನಾದರೂ ಸ್ಮಾರ್ತನಾಗಿದ್ದರಿಂದ ಮಾಧ್ವರ ವಿರುದ್ಧ ಸಂಘರ್ಷಕ್ಕಿಳಿಯುವುದನ್ನು ಗುರುತಿಸಬಹುದು.

ಕೊನೆಗೆ ಪ್ರಾಣೇಶಾಚಾರ್ಯರೇ ಅವನನ್ನು ಸಮಾಧಾನಪಡಿಸಲು "ನಾವು ಮಾಡದ್ದನ್ನು ಇನ್ನೊಬ್ಬರ ಕೈಲಿ ಮಾಡಿಸುವುದು ಬ್ರಾಹ್ಮಣ್ಯ ಅಲ್ಲ. ಆದರೆ ರಕ್ತ ಸಂಬಂಧದಂತೆ ಸ್ನೇಹ ಸಂಬಂಧಾನೂ ದೊಡ್ಡದಾಗಿರುವುದರಿಂದ, ನಾರಾಣಪ್ಪನಿಗೂ ಅವರಿಗೂ ಸ್ನೆಹ ಇರುವುದು ನಿಜವಾದರೆ ಅವರಿಗೆ ತಮ್ಮ ಮಿತ್ರನೊಬ್ಬ ಸತ್ತ ವಾರ್ತೆ ತಿಳಿಯೋದು ಅವಶ್ಯ ಎಂದು ಹೇಳಿ ಅವನ ಕೋಪವನ್ನು ಶಾಂತಗೊಳಿಸುತ್ತಾರೆ. ಮತ್ತೆ ಬಂಗಾರದ ವಿಚಾರಕ್ಕೆ ಲಕ್ಷಣಾಚಾರ್ಯರ ಹೆಂಡತಿ ಅನುಸೂಯ ಮತ್ತು ಗರುಡಾಚಾರ್ಯರ ನಡುವೆ ಮಾತು ಬರುತ್ತದೆ. ಪ್ರಾಣೇಶಾಚಾರ್ಯರು ಬೇಸರದಿಂದಲೇ ಮೊದಲು ಶವ ಸಂಸ್ಕಾರದ ಬಗ್ಗೆ ಯೋಚಿಸಿ ಪಾರಿಜಾತಪುರದವರಿಗೆ ವಿಷಯ ಮುಟ್ಟಿಸುವಂತೆಯೂ, ಬಂಗಾರದ ವಿಷಯವನ್ನು ತಮಗೆ ಬಿಡುವಂತೆಯೂ ಸಲಹೆ ನೀಡುತ್ತಾರೆ. ಇನ್ನೂ ಸಂದಿಗ್ಧ ಪರಿಸ್ಥಿತಿಯೇ ಇದ್ದುದರಿಂದ ತಾವು 'ಮನುಸ್ಮೃತಿ' ಇತ್ಯಾದಿ ಶಾಸ್ತ್ರಗಳನ್ನು ಹುಡುಕಿ ನೋಡುವುದಾಗಿ ಹೇಳುತ್ತಾರೆ. ಪ್ರಾಣೇಶಾಚಾರ್ಯರು ಎಲ್ಲಾ ಗ್ರಂಥಗಳನ್ನು ಹುಡುಕಿ ನೋಡಿದರೂ ಏನೂ ಪ್ರಯೋಜನವಾಗವುದಿಲ್ಲ. ಹೀಗಾಗಿ ಅವರು ಮುಂದೇನೆಂದು ಚಿಂತನೆ ನಡೆಸುತ್ತಿರುತ್ತಾರೆ.

ಪಾರಿಜಾತಪುರದ ಬ್ರಾಹ್ಮಣರು ನಾರಣಪ್ಪನೊಂದಿಗಿನ ಸ್ನೇಹ ಸಂಬಂಧದಿಂದ ಅವನ ಅಂತ್ಯಸಂಸ್ಕಾರ ಮಾಡುತ್ತೇವೆಂದು ಹೇಳಿದರೂ ಕೂಡ ಜಾತಿ ಕೆಡುವುದಕ್ಕೆ ತಯಾರಿರುವುದಿಲ್ಲ. ಹೀಗಾಗಿ ಪ್ರಾಣೇಶಾಚಾರ್ಯರು ಅಪದ್ಧರ್ಮ ಮತ್ತು ಧರ್ಮ ಸೂಕ್ಷ್ಮದ ಬಗ್ಗೆ ತಿಳಿದು ಹೇಳಿದರೆ ತಾವು ನಾರಾಣಪ್ಪನ ಶವಸಂಸ್ಕಾರ, ವೈಕುಂಠ ಸಮಾರಾಧನೆಯನ್ನು ನಡೆಸಲು ಸಿದ್ಧರಿರುವುದಾಗಿ ತಿಳಿಸುತ್ತಾರೆ. ಪಾರಿಜಾತಪುರದ ಬ್ರಾಹ್ಮಣರು ಈ ಮೊದಲೇ ಬಹಿಷ್ಕಾರಕ್ಕೆ ಒಳಗಾಗಿದ್ದರೂ ಕೂಡ ನಾರಾಣಪ್ಪನ ವಿಚಾರವಾಗಿ ಮತ್ತಷ್ಟು ಅಪಖ್ಯಾತರಾಗುವುದನ್ನು ಒಪ್ಪದೆ ಇರುವುದಕ್ಕೆ ಅವರ ಧಾರ್ಮಿಕ ಅಂಶವೇ ಕಾರಣವಾಗಿರುವುದನ್ನು ಗುರುತಿಸಬಹುದು. ಹೀಗಾಗಿ ದೂರ್ವಾಸಪುರದ ಬ್ರಾಹ್ಮಣರು ತಮಗೆ ಯಾವುದೇ ಸಹಾಯ ದೊರೆಯದೇ ಬರಿಗೈಲಿ ಹಿಂದಿರುಗುತ್ತಾರೆ. ಹೀಗೆ ಹಿಂದಿರುಗಿ ಬಂದ ಗರುಡಾಚಾರ್ಯ ಮತ್ತು ಲಕ್ಷ್ಮಣಾಚಾರ್ಯರ ಹೆಂಡತಿಯರು ತಮ್ಮ ತಮ್ಮ ಗಂಡಂದಿರಿಗೆ ಹೇಳಿ ಶವ ಸಂಸ್ಕಾರಕ್ಕೆ ಅನುಮತಿಯನ್ನು ತಾವೇ ದೊರಕಿಸಿಕೊಳ್ಳುವಂತೆ ಹೇಳಿ ಕಳುಹಿಸಿರುತ್ತಾರೆ. ತಮ್ಮ ಮನೆಗೆ ಬಂದು ಅವರುಗಳು ಆಡಿದ ಮಾತುಗಳನ್ನು ಕೇಳಿ ಪ್ರಾಣೇಶಾಚಾರ್ಯರಿಗೆ ಅವರಿಬ್ಬರ ಬಗ್ಗೆಯೂ ಅಸಹ್ಯವೆನಿಸುತದೆ. ಅವರಿಬ್ಬರಿಗೂ ಯಾವುದೇ ಪ್ರತ್ಯುತ್ತರ ನೀಡದೇ ಪ್ರಾಣೇಶಾಚಾರ್ಯರು ಧರ್ಮಶಾಸ್ತ್ರವನ್ನೆಲ್ಲಾ ಬುಡಮೇಲು ಮಾಡಿಯಾದರೂ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದಾಗಿ ಹೇಳಿ ಅವರುಗಳನ್ನು ಕಳುಹಿಸುತ್ತಾರೆ.

ಪ್ರಾಣೇಶಾಚಾರ್ಯರಿಗೆ ನಾರಾಣಪ್ಪನು ಮೊದಲಿನಿಂದ ಕೊನೆಯವರೆಗೂ ಸಮಸ್ಯೆಯಾಗಿಯೇ ಉಳಿದವನು. ಆಚಾರ್ಯರು ನಾರಾಣಪ್ಪನ ತಾಯಿಗೆ ನಾರಾಣಪ್ಪನ ಹಿತ ಕಾಯ್ದು, ಅವನನ್ನು ಒಳ್ಳೆಯ ಮಾರ್ಗಕ್ಕೆ ತರುವುದಾಗಿ ಮಾತು ಕೊಟ್ಟಿದ್ದರಿಂದ ಅವನ ಬಗ್ಗೆ ಕಠಿಣ ತೀರ್ಮಾನ ಕೈಗೊಳ್ಳಲು ಆಗುತ್ತಿರಲಿಲ್ಲ. ನಾರಾಣಪ್ಪನು ಆಚಾರ್ಯರಿಗೆ ವೈಯಕ್ತಿಕವಾಗಿ ಗೌರವವನ್ನು

ಕೊಡುತ್ತಿರುತ್ತಾನೆ. ಬ್ರಾಹ್ಮಣರನ್ನು ಬಿಟ್ಟರೆ ಉಳಿದವರು ಯಾರೂ ಕೂಡ ಸುಖ ಕೊಡದ ಗೊಡ್ಡು ಹುಡುಗಿಯ ಕೂಡ ಸಂಸಾರ ನಡೆಸುವುದಿಲ್ಲ. ಭ್ರಾಂತಿ ಹಿಡಿದ ಹುಡುಗಿಯನ್ನು ಸಂಬಂಧದ ಹೆಸರಿನಲ್ಲಿ ತನಗೆ ಮದುವೆ ಮಾಡಿಸಿ ತನ್ನನ್ನು ಹಾಳು ಮಾಡಬೇಕೆಂದೇ ಪ್ರಯತ್ನಿಸಿದ್ದಾರೆ ಎಂದು ಭಾವಿಸಿರುತ್ತಾನೆ. ಗರುಡಾಚಾರ್ಯ ಮುಂಡೆಯರ ಆಸ್ತಿ ಮುಟ್ಟುಗೋಲು ಹಾಕಿಕೊಂಡು, ಮಾಟಮಂತ್ರ ಮಾಡಿಸಿ ಕೆಟ್ಟದ್ದು ಬಗೆಯುತ್ತಿದ್ದುದರಿಂದ ಅವನು ಬ್ರಾಹ್ಮಣನೇ ಅಲ್ಲ ಎಂಬುದು ನಾರಣಪ್ಪನ ಅಭಿಮತ. ಹೀಗಾಗಿಯೇ ಆತ ಪ್ರಾಣೇಶಾಚಾರ್ಯರನ್ನು ಕುರಿತು "ಕೊನೆಯಲ್ಲಿ ಗೆಲ್ಲೋದು ನಾನೋ, ನೀವೋ? ನೋಡುವ ಆಚಾರ್ಯರೇ, ಎಷ್ಟು ದಿನ ಈ ಬ್ರಾಹ್ಮಣ್ಯ ಉಳಿಯುತ್ತೆ ಅಂತ? ಈ ಬ್ರಾಹ್ಮಣ್ಯದ ಮರ್ಯಾದೇನೆಲ್ಲ ನಾನು ಬೇಕಾದರೆ ಒಂದು ಹೆಣ್ಣಿನ ಸುಖಕ್ಕೆ ತುಳಿದು ಹಾಕಿ ಬಿಡುತ್ತೇನೆ" ಎಂದು ಹೇಳುತ್ತಾನೆ. ಗಣಪತಿ ದೇವರ ಹೊಳೆಯ ಮೀನನ್ನು ಹಿಡಿದುಕೊಂಡು ಹೋಗುವುದು ಕೂಡ ನಾರಾಣಪ್ಪ ಅಗ್ರಹಾರದ ಬ್ರಾಹ್ಮಣರನ್ನು ಧಿಕ್ಕರಿಸುವುದರ ಪ್ರತಿರೂಪವೇ ಆಗಿದೆ.

ಮೀನು ಹಿಡಿದುಕೊಂಡು ಹೋದ ನಾರಣಪ್ಪನನ್ನು ಪ್ರಶ್ನಿಸಲು ಪ್ರಾಣೇಶಾಚಾರ್ಯರು ನಾರಣಪ್ಪನ ಮನೆಗೆ ಬರುತ್ತಾರೆ. ಆಚಾರ್ಯರನ್ನು ಕಂಡ ಕೂಡಲೇ ನಾರಣಪ್ಪ ಬಟ್ಟೆಯಿಂದ ಬಾಯಿ ಮುಚ್ಚಿಕೊಳ್ಳುತ್ತಾನೆ. ಆದರೆ ಅದು ಕ್ಷಣ ಕಾಲ ಮಾತ್ರ. ತನ್ನ ವಿರುದ್ಧ ಕೋಪಗೊಂಡ ಪ್ರಾಣೇಶಾಚಾರ್ಯರನ್ನು ನೋಡಿ "ಆಹಾ! ಆಚಾರ್ಯರಿಗೂ ಸಿಟ್ಟು ಬರುತ್ತದಲ್ಲವೇ? ಕಾಮ ಕ್ರೋಧಾದಿಗಳು ನಮ್ಮಂತಹವರಿಗೆ ಮಾತ್ರವೆಂದು ತಿಳಿದಿದ್ದೆ. ಕಾಮಾನ ತುಳಿದವನಿಗೆ ಕೋಪ ಮೂಗಿನ ತುದಿಲೇ ಇರುತ್ತಂತೆ.. ದೂರ್ವಾಸ, ಪರಾಶರ, ಭೃಗು, ಬೃಹಸ್ಪತಿ, ಕಾಶ್ಯಪ.. ಅಲ್ಲ ಆಚಾರ್ಯರೇ, ನಿಮ್ಮ ಋಷಿಗಳು ಸೈ. ಮೀನಿನ ವಾಸನೆಯುಳ್ಳವಳನ್ನು ದೋಣಿಯಲ್ಲೇ ಕೆಡಿಸಿ ಸುಗಂಧಿ ಮಾಡಿದವನ ಹೆಸರೇನು? ಅಂತಹ ಪರಂಪರೆಯಲ್ಲಿ ಬಂದ ಈ ಅಗ್ರಹಾರದ ಬಡ ಬ್ರಾಹಣರನ್ನು ನೋಡಿರಪ್ಪ...." (ಪು.ಸಂ.೨೨) ಎಂದು ಹೇಳುವಲ್ಲಿ ನಾರಾಣಪ್ಪನು ಪರಂಪರೆಯ ವಿರುದ್ಧವೇ ಸಂಘರ್ಷಕ್ಕಿಳಿದಿರುವುದು ಕಾಣಿಸುತ್ತದೆ.

ಪ್ರಾಣೇಶಾಚಾರ್ಯರ ಮುಂದೆಯೇ ಸಾರಾಯಿ ಕುಡಿದು "ಕೊನೆಗೆ ಗೆಲ್ಲೋದು ನಾನಾ ನೀವೋ– ನೋಡುವ. ನಾನು ಬ್ರಾಹ್ಮಣ್ಯದ ನಾಶ ಮಾಡ್ತೇನೆ. ಮಾಡಿಯೇ ತೀರ್ತೇನೆ. ನನ್ನ ದುಃಖವೆಂದರೆ ನಾಶ ಮಾಡೋಕ್ಕೆ ಈ ಅಗ್ರಹಾರದಲ್ಲಿ ಬ್ರಾಹ್ಮಣ್ಯನೇ ಉಳಿದಿಲ್ಲಲ್ಲಾಂತ –ನಿಮ್ಮೊಬ್ಬರನ್ನು ಬಿಟ್ಟರೆ, ಗರುಡ, ಲಕ್ಷ್ಮಣ, ದುರ್ಗಾಭಟ್ಟ– ಅಹಹಾ–ಎಂಥ ಬ್ರಾಹ್ಮಣರಯ್ಯ? ನಾನೇನಾದರೂ ಬ್ರಾಹ್ಮಣನಾಗಿ ಉಳಿದಿದ್ದರೆ ನಿಮ್ಮ ಗರುಡಾಚಾರ್ಯ ಆಪೋಶನಾ ತಗೊಂಡುಬಿಡ್ತಿದ್ದ ಅಥವಾ ಆಸ್ತಿ ಮೇಲಿನ ಆಸೆಗೆ–ಹೇಲಿನಲ್ಲಿ ಬಿದ್ದಿರೋ ಕಾಸನ್ನ ನಾಲಗೇಂದ ನೆಕ್ಕಿ ತೆಗಿಯೋ ಆ ಲಕ್ಷ್ಮಣ ತನ್ನ ಇನ್ನೊಬ್ಬ ನರಪೇತಲ ನಾದಿನಿಯನ್ನ ನನಗೆ ಕಟ್ಟಿರುತ್ತಿದ್ದ. ಒಟ್ಟಿನಲ್ಲಿ ಜುಟ್ಟು ಬಿಟ್ಟು, ಅಂಗಾರ ಹಾಕಿ ನಿಮ್ಮ ಕಟ್ಟೆ ಮೇಲೆ ಕೂತು, ನೀವು ಹೇಳೋ ಪುರಾಣಾನ್ನ ಕೇಳಿಸಿಕೊಂಡು ಇರಬೇಕಾಗಿತ್ತು" ಎಂದು ಹೇಳುವಲ್ಲಿ ಅಗ್ರಹಾರದ ಬ್ರಾಹ್ಮಣರ ಕೊಳಕು ಬುದ್ಧಿಯ ವಿರುದ್ಧದ ಆತನ ಸಂಘರ್ಷದ ಕಾರಣವನ್ನು ಗುರುತಿಸಬಹುದಾಗಿದೆ.

ತನ್ನ ಅಗ್ರಹಾರದ ಬ್ರಾಹ್ಮಣರನ್ನು, ಅವರ ವರ್ತನೆಗಳನ್ನು ಕುರಿತಂತೆ ಅವರ ಪಾಪ ಕೃತ್ಯಗಳಿಗೆ ಪ್ರಾಣೇಶಾಚಾರ್ಯರ ವ್ಯಕ್ತಿತ್ವವೇ ಕಾರಣ ಎಂಬುದು ನಾರಣಪ್ಪನ ಅಭಿಪ್ರಾಯ. ಪ್ರಾಣೇಶಾಚಾರ್ಯರ ಪುಣ್ಯದ ಫಲ ತಮ್ಮೆಲ್ಲ ಪಾಪಕೃತ್ಯಗಳನ್ನು ತಪ್ಪುಗಳನ್ನು ಮುಚ್ಚಿ ಹಾಕುತ್ತದೆಂಬ ಧೈರ್ಯದಲ್ಲಿ ಅವರು ಮತ್ತಷ್ಟು ಪಾಪಗಳನ್ನು ಮಾಡುತ್ತಿರುತ್ತಾರೆ. ಆಚಾರ್ಯರು ಓದುತ್ತಿದ್ದ ಪುರಾಣಗಳು, ವರ್ಣಿಸುತ್ತಿದ್ದ ಪ್ರಸಂಗಗಳಿಂದ ಯುವಕರಲ್ಲಿ ಭಾವನೆಗಳು ಮೂಡುತ್ತಿದ್ದವು. ಅಂತೆಯೇ ಒಮ್ಮೆ ಆಚಾರ್ಯರು ಮಾಡುತ್ತಿದ್ದ ಕಾಳಿದಾಸನ ಶಕುಂತಲೆಯ ವರ್ಣನೆಯನ್ನು ಕೇಳುತ್ತಿದ್ದ ಯುವಕ ತನ್ನನ್ನು ತಾನು ನಿಗ್ರಹಿಸಿಕೊಳ್ಳಲಾರದೇ, ಹೆಚ್ಚು ಕೇಳಿಸಿಕೊಳ್ಳಲೂ ಸಹನೆಯಿಲ್ಲದೆ, ತಣ್ಣೀರಿನಲ್ಲಿ ಮೀಯಲೆಂದು ಹೊಳೆಗೆ ಓಡುತ್ತಾನೆ. ಬೆಳದಿಂಗಳ ರಾತ್ರಿ ಪುಣ್ಯವಶಾತ್ ಅಲ್ಲೊಬ್ಬಳು ಹೊಲತಿ. ಮೈಮೇಲೆ ಅಷ್ಟೇನು ವಸ್ತ್ರವಿಲ್ಲದೆ ನೋಡಬೇಕೆಂದು ಅವನು ಬಯಸಿದ ಅಂಗಾಂಗಗಳೆಲ್ಲ ನಿರಾಯಾಸವಾಗಿ ಕಣ್ಣಿನ ಎದುರಿನಲ್ಲೇ ಋಷಿಗೆ ಒಲಿದ ಮತ್ಸ್ಯಗಂಧೀ ತರಹದವಳು. ಇವಳೇ ಶಕುಂತಲಾ ಎಂದು ಭ್ರಮಿಸಿ ಆ ಬ್ರಾಹ್ಮಣ ಯುವಕ ಅವಳನ್ನು ಚಂದ್ರಸಾಕ್ಷಿಯಾಗಿ ಅಲ್ಲೇ ಸಂಭೋಗಿಸಿಬಿಡುತ್ತಾನೆ.

ಹೀಗಾಗಿ ಆಚಾರ್ಯರೇ ಊರಿನ ಬ್ರಾಹ್ಮಣ್ಯನ ಹಾಳು ಮಾಡಿದಂತೆ. ಅದಕ್ಕೇ ಹಿರಿಯರು ಹೇಳುತ್ತಿದ್ದುದು; ವೇದ ಪುರಾಣ ಓದಿರೋ, ಆದರೆ ಅದಕ್ಕೆ ಅರ್ಥ ಮಾಡಲಿಕ್ಕೆ ಹೋಗಬೇಡಿರೋ– ಅಂತ. ಕಾಶಿಗೆ ಹೋಗಿ ಬಂದವರಲ್ಲವೆ ನೀವು? ನೀವೇ ಹೇಳಿ? ಬ್ರಾಹ್ಮಣ್ಯ ಯಾರಿಂದ ಕೆಟ್ಟಿತು? ಎಂದು ಕೇಳುವಲ್ಲಿ ಎಲ್ಲಾ ಪ್ರಮಾದಗಳಿಗೂ ಪ್ರಾಣೇಶಾಚಾರ್ಯರೇ ಕಾರಣ ಎನ್ನುವುದನ್ನು ಪರೋಕ್ಷವಾಗಿ ಹೇಳುತ್ತಾನೆ. "ನೀವು ರಸಭರಿತವಾದ ಪುರಾಣ ಓದುತ್ತೀರಿ: ಆದರೆ ಗೊಡ್ಡಾಗಿ ಬಾಳೂಂತ ಬೋಧಿಸ್ತೀರಿ. ಆದರೆ ನನ್ನ ಮಾತಿಗೆ ಒಂದೇ ಅರ್ಥ, ಹೆಣ್ಣಿನ ಜೊತೆ ಮಲಗು ಎಂದರೆ ಹೆಣ್ಣಿನ ಜೊತೆ ಮಲಗು; ಮೀನು ತಿನ್ನು ಎಂದರೆ ಮೀನು ತಿನ್ನು. ನಿಮಗೆಲ್ಲ ಒಂದು ಬುದ್ಧಿವಾದದ ಮಾತು ಹೇಳಲಾ, ಆಚಾರ್ಯರೇ? ಮೊದಲು ನಿಮ್ಮಗಳ ಆ ರೋಗಗ್ರಸ್ಥ ಹೆಂಡಿರನ್ನ ಹೊಳೆಗೆ ನೂಕಿ ಪುರಾಣದ ಋಷಿಗಳಂತೆ ಒಳ್ಳೆ ಮೀನುಸಾರು ಮಾಡಬಲ್ಲ ಒಬ್ಬ ಮತ್ಸ್ಯಗಂಧೀನ್ನ ತಬ್ಬಿಕೊಂಡು ಮಲಗಿ. ಕಣ್ಣು ಬಿಟ್ಟು ನೋಡಿದಾಗ ನಿಮಗೆ ಪರಮಾತ್ಮನ ಅನುಭವ ಆಗಿರದಿದ್ದರೆ ನನ್ನ ಹೆಸರು ನಾರಣಪ್ಪನಲ್ಲ" ಎಂದು ಹೇಳುವಲ್ಲಿ ಧರ್ಮ ಭೋಧನೆ ಮಾಡುವ ಪ್ರಾಣೇಶಾಚಾರ್ಯರಿಗೆ ನಾರಣಪ್ಪ ಜೀವನ ಧರ್ಮದ ಬೋಧನೆ ಮಾಡುವುದನ್ನು ಹಾಗೂ ನಾರಣಪ್ಪನ ವಾಸ್ತವಿಕ ಪ್ರಜ್ಞೆಯನ್ನು ಗುರುತಿಸಬಹುದು.

ನಾರಣಪ್ಪ ಸತ್ತು ಸಂಜೆಯಾದರೂ ಸಂಸ್ಕಾರ ನಡೆಸಲು ಯಾವುದೇ ಪರಿಹಾರ ದೊರೆಯಲಿಲ್ಲ. ಪ್ರಾಣೇಶಾಚಾರ್ಯರು ಮನದಲ್ಲಿ ಬಂದ ನಾರಣಪ್ಪನ ನೆನಪನ್ನು ತೆಗೆದುಹಾಕಿ 'ಧರ್ಮ ಶಾಸ್ತ್ರದಲ್ಲಿ ಇದಕ್ಕೆ ಉತ್ತರವಿಲ್ಲ ಅಂದರೆ ಏನು ಅರ್ಥ' ಎಂದು ಹಟ ತೊಟ್ಟು ಓದತೊಡಗುತ್ತಾರೆ. ಆದರೆ ರಾತ್ರಿಯಾಗುತ್ತಾ ಬಂದರೂ ಯಾವುದೇ ಪರಿಹಾರ ದೊರೆಯುವುದಿಲ್ಲ. ಈ ಸಂದಿಗ್ಧದಲ್ಲಿ ಆಪದ್ಧರ್ಮವೇನೆಂದು ತಿಳಿಯುವ ಶಕ್ತಿಯನ್ನು ದೇವರು ನನಗೆ ಕೊಟ್ಟರೆ ಎಂದು ಯೋಚಿಸುತ್ತಿದ್ದ ಪ್ರಾಣೇಶಾಚಾರ್ಯರಿಗೆ ಥಟ್ಟನೆ ಬೆಳಿಗ್ಗೆ ಎದ್ದು ಸ್ನಾನಾದಿಗಳನ್ನು ಮಾಡಿ ಮಾರುತಿಯಲ್ಲಿ ಕೇಳುವುದು

ಎಂದು ಹೊಳೆಯುತ್ತದೆ. ತಮ್ಮ ಆಲೋಚನೆಯಿಂದ ಗೆಲುವಾದ ಪ್ರಾಣೇಶಾಚಾರ್ಯರಿಗೆ ಚಾವಡಿಯಲ್ಲಿ ಮಲಗಿದ್ದ ಚಂದ್ರಿಯ ನೆನಪಾಗುತ್ತದೆ. ಮರುಕದಿಂದ ಅವಳಿಗೆ ಚಾಪೆ ಮತ್ತು ದಿಂಬು ಕೊಟ್ಟು, ಮಾರುತಿಯ ಅಪ್ಪಣೆ ಪಡೆಯುವ ತಮ್ಮ ನಿರ್ಧಾರವನ್ನು ತಿಳಿಸಿ ಒಳ ಹೋಗುತ್ತಾರೆ. ಮತ್ತೆ ಥಟ್ಟನೆ ಮತ್ತೊಂದು ಆಲೋಚನೆ ಹೊಳೆಯುತ್ತದೆ. ಚಂದ್ರಿ ಬಿಚ್ಚಿಕೊಟ್ಟಿದ್ದ ಆಭರಣಗಳ ಗಂಟನ್ನು ಮತ್ತೆ ಹೊರಗೆ ತಂದು 'ಚಂದ್ರೀ' ಎಂದು ಕರೆದು 'ಇಕೋ ಚಂದ್ರಿ ನಿನ್ನ ಔದಾರ್ಯದಿಂದ ಶವಸಂಸ್ಕಾರದ ಪ್ರಶ್ನೆ ಇನ್ನಷ್ಟು ಕಠಿಣವಾಗಿ ಬಿಟ್ಟಿತು. ಆಪದ್ಧರ್ಮದ ಪ್ರಕಾರ ನಡೆದುಕೊಳ್ಳೋದು ಬ್ರಾಹ್ಮಣರ ಕರ್ತವ್ಯ. ಈ ಬಂಗಾರ ನಿನ್ನಲ್ಲೇ ಇರಲಿ. ಅವನು ತೀರಿಹೋದ ಮೇಲೆ ಪಾಪ ನಿನ್ನ ಜೀವನವೂ ಸಾಗಬೇಕಲ್ಲ" ಎಂದು ಕರುಣೆಯಿಂದ ಅವಳ ಕಡೆಗೆ ನೋಡಿ ಬಂಗಾರವನ್ನು ಅವಳ ಕೈ ಮೇಲೆ ಇಟ್ಟು ಒಳಗೆ ಹೋಗುತ್ತಾರೆ.

ಚಂದ್ರಿಯು ಜನ್ಮೇಪಿ ಉಪವಾಸ ಮಾಡಿದ್ದವಳಲ್ಲ. ಒಂಟಿಯಾಗಿ ಜಗಲಿ ಮೇಲೆ ಮಲಗಿದ್ದವಳಲ್ಲ. ಕುಂದಾಪುರದ ಮನೆ ಬಿಟ್ಟು ನಾರಣಪ್ಪನನ್ನು ಕೂಡಿದ ಮೇಲೆ ಸದಾ ಊದುಬತ್ತಿಯಿಂದ ಗಮಗಮವಿರುವ ಕೋಣೆಯಲ್ಲಿ ಸುಪ್ಪತ್ತಿಗೆ ಮೇಲೆ ಸುಖಿಸಿದವಳು. ಹಸಿವೆ ತಾಳಲಾರದೆ ಜಗುಲಿಯಿಂದ ಎದ್ದು ಹಿತ್ತಲಿನ ದಾರಿಯಿಂದ ತಮ್ಮ ತೋಟಕ್ಕೆ ಹೋಗಿ ಹಣ್ಣಾಗಲೆಂದು ಅವಿತಿಟ್ಟಿದ್ದ ರಸಬಾಳೆ ಗೊನೆಯನ್ನು ತೆಗೆದು, ಹೊಟ್ಟೆ ತುಂಬುವಷ್ಟು ತಿಂದು, ನದಿಗೆ ಹೋಗಿ ನೀರು ಕುಡಿದು ಬರುತ್ತಾಳೆ. ಹುಟ್ಟಿದ ಮೇಲೆ ಒಂದು ದಿನವೂ ಶವದ ಮುಖ ನೋಡದೆ ಇದ್ದ ಅವಳಿಗೆ ತನ್ನ ಮನೆಗೆ ಹೋಗಲು ಭಯವಾಗುತ್ತದೆ. ಒಂದು ವೇಳೆ ನಾರಾಣಪ್ಪನ ಸಂಸ್ಕಾರವಾಗಿ ಬಿಟ್ಟಿದ್ದರೆ ಅತ್ತು ಸಮಾಧಾನವನ್ನಾದರೂ ಮಾಡಿಕೊಳ್ಳುತ್ತಿದ್ದಳು. ಆದ್ರೆ ನಾರಣಪ್ಪನಿಗೆ ಶವ ಸಂಸ್ಕಾರವಾಗದಿದ್ದರೆ ಅವನು ಪ್ರೇತವಾಗಿ ಬಿಟ್ಟರೆ ಎಂಬ ಭೀತಿ ಮತ್ತು ಕಳವಳ ಮನದಲ್ಲಿ ಮೂಡುತ್ತದೆ. ಅಲ್ಲದೆ ಹತ್ತು ವರ್ಷ ಅವನಿಂದ ಸುಖವುಂಡು ಈಗ ಅವನ ಶವಕ್ಕೆ ತಕ್ಕ ಸಂಸ್ಕಾರ ಮಾಡಿಸದಿದ್ದರೆ ಮನಸ್ಸು ಒಪ್ಪುವುದಿಲ್ಲ.

ನಾರಣಪ್ಪ ಬ್ರಾಹ್ಮಣ್ಯ ಬಿಟ್ಟರೂ ಬ್ರಾಹ್ಮಣ್ಯ ಅವನನ್ನು ಬಿಟ್ಟಿತೇ? ಚಂದ್ರಿ ಕಂಡಂತೆ ಅವನು ಪ್ರಾಣೇಶಾಚಾರ್ಯರೊಬ್ಬರನ್ನು ನೀಚ ಮಾತಿನಲ್ಲಿ ಹಳಿದಿರಲಿಲ್ಲ. ಪ್ರಾಣೇಶಾಚಾರ್ಯರಿಗೆ ದುಡುಕಿ ಮಾತನಾಡಿದ್ದಕ್ಕೆ ಒಳಗೊಳಗೇ ನಡುಗಿ ಹೋಗಿರುತ್ತಾನೆ. ಒಂದು ದಿನವೂ ಒಂದು ದೇವರಿಗೂ ಕೈ ಮುಗಿಯದ ನಾರಣಪ್ಪ ಜ್ವರ ನೆತ್ತಿಗೆ ಏರಿದ್ದೇ ಜ್ಞಾನ ತಪ್ಪುವ ತನಕ 'ಅಮ್ಮ ಭಗವಂತ, ರಾಮಚಂದ್ರ ನಾರಾಯಣ' ಎನ್ನುತ್ತಿದ್ದುದನ್ನೂ, 'ರಾಮಾ ರಾಮಾ' ಎಂದು ಕಿರುಚಿತ್ತಿದ್ದುದನ್ನೂ ಕೇಳಿದ್ದ ಚಂದ್ರಿ ನಾರಾಣಪ್ಪನಿಗೆ ಶಾಸ್ತ್ರೋಕ್ತ ವಿಧಿಯಾಗದಿದ್ದಲ್ಲಿ ಖಂಡಿತ ಅವನು ಪ್ರೇತವಾಗುತ್ತಾನೆ ಎಂಬ ಭಯ ಮೂಡುತ್ತದೆ. ಅವಳು ಎಲ್ಲವೂ ಪಾಣೇಶಾಚಾರ್ಯರ ಮೇಲೆ ನಿಂತಿದೆ ಎಂದುಕೊಳ್ಳುತ್ತಾಳೆ.

ಪ್ರಾಣೇಶಾಚಾರ್ಯರ ರೂಪ ಶ್ರೀಕೃಷ್ಣನಂತಹ ರೂಪ, ನಿಲುವು, ತೇಜಸ್ಸು. ಪಾಪ ಅವರಿಗೆ ಮೈ ಸುಖವೇನೆಂದು ಗೊತ್ತೇ ಇರಲಿಕ್ಕಿಲ್ಲ. ಒಣಗಿದ ಕಟ್ಟಿಗೆ ಹಾಗೆ ಬಿದ್ದಿರುತ್ತಾರೆ ಅವರ ಹೆಂಡತಿ. ಪುಣ್ಯಾತಗಿತ್ತಿ. ಆದರೂ ಏನು ತಾಳ್ಮೆ, ವರ್ಚಸ್ಸು, ಒಂದು ದಿನ ತನ್ನನ್ನು ಕಣ್ಣೆತ್ತಿ ನೋಡಿದವರಲ್ಲ.

ತನ್ನ ಅಮ್ಮ ಹೇಳುತ್ತಿದ್ದ–ಗರ್ಭದಾನಾನ ಸೂಳೆಯರು ಎಂಥವರಿಂದ ಮಾಡಿಸಿಕೋಬೇಕು ಅಂತ, ಅಂತಹ ರೂಪ, ಗುಣ, ವರ್ಚಸ್ಸು ಆಚಾರ್ಯರದ್ದು. ಪಡೆದುಕೊಂಡು ಬಂದಿರಬೇಕು ಅಷ್ಟೇ ಅಂಥಾದ್ದು ಒದಗಿ ಬರೋಕೆ ಎಂದುಕೊಳ್ಳುತ್ತ ಪ್ರಾಣೇಶಾಚಾರ್ಯರು ಎಚ್ಚರವಾಗಿದ್ದಾಗ ತಾನೇನು ನಿದ್ದೆ ಮಾಡುವುದೆಂದು ಆಲೋಚಿಸುತ್ತಿರುವಾಗಲೇ ಆಚಾರ್ಯರು ಅವಳ ಹೆಸರನ್ನು ಕೂಗುತ್ತಾರೆ. ತಾಯಿ ಹೇಳಿದ್ದ ಮಾತನ್ನು ನೆನೆಯುತ್ತಿದ್ದ ಚಂದ್ರಿ ಧಿಗ್ಗನೆ ಎದ್ದು ಕೂತು, ನಾಚಿಕೆಯಿಂದ ತಲೆಯ ಮೇಲೆ ಸೆರಗೆಳೆದುಕೊಳ್ಳುತ್ತಾಳೆ.

ಮಾರುತಿಯ ಒಪ್ಪಿಗೆ ಪಡೆಯಲು ತೀರ್ಮಾನಿಸಿದ್ದ ಪ್ರಾಣೇಶಾಚಾರ್ಯರು ಬೆಳಿಗ್ಗೆ ಎದ್ದು ಮಾರುತಿಯ ಅಪ್ಪಣೆ ಪಡೆಯಲು ಹೊಳೆ ದಾಟಿ ಕಾಡು ಹೊಕ್ಕು ನಡೆದು ಎರಡು ಮೈಲಿಗಳ ಆಚೆ ಅರಣ್ಯದ ಮೌನದಲ್ಲಿ ಪ್ರಶಾಂತವಾಗಿದ್ದ ಮಾರುತಿಯ ಗುಡಿಗೆ ಬಂದು ಪೂಜೆಗೆ ತೊಡಗಿಕೊಳ್ಳುತ್ತಾರೆ. ಬ್ರಾಹ್ಮಣರೆಲ್ಲಾ ಹಸಿವೆಯಿಂದ ನರಳಾಡತೊಡಗಿರುತ್ತಾರೆ. ಪ್ರಾಣೇಶಾಚಾರ್ಯರು ಮನೆಯಿಂದ ಹೊರಟ ಕೂಡಲೇ ಚಂದ್ರಿಯೂ ಕೂಡ ಉಳಿದ ಬ್ರಾಹ್ಮಣರ ಸಿಡುಕು ಮುಖಗಳನ್ನು ನೋಡಲು ಅಂಜಿಕೊಂಡು ತೋಟಕ್ಕೆ ಹೋಗಿ ರಸಬಾಳೆ ಹಣ್ಣುಗಳನ್ನು ಮಡಿಲಿನ ತುಂಬಾ ಕಟ್ಟಿಕೊಂಡು, ಹೊಳೆಯಲ್ಲಿ ಸ್ನಾನ ಮಾಡಿ, ಮಾರುತಿ ಗುಡಿಯಿಂದ ಸ್ವಲ್ಪ ದೂರದಲ್ಲೊಂದು ಮರಕ್ಕೊರಗಿ ಕುಳಿತುಕೊಳ್ಳುತ್ತಾಳೆ. ಗುಡಿಯಲ್ಲಿ ಪ್ರಾಣೇಶಾಚಾರ್ಯರು ಬಾರಿಸಿದ ಗಂಟೆಯ ಸದ್ದು ಕಿವಿಗೆ ಬೀಳುತ್ತದೆ. ಮಧ್ಯಾಹ್ನವಾದರೂ ಕೂಡ ಯಾವುದೇ ಸೂಚನೆಯೂ ಬಾರದೇ ಹೊಟ್ಟೆ ಹಸಿವೆ ತಾಳಲಾರದೆ, ಬಾಳೆಹಣ್ಣನ್ನು ಸುಲಿದು ಬಾಯಲ್ಲಿಟ್ಟುಕೊಂಡು 'ತನಗೇನೂ ದೋಷವಿಲ್ಲ' ಎಂದು ಹೇಳಿಕೊಳ್ಳುತ್ತಾಳೆ.

ಮಾರುತಿಯ ಪ್ರಸಾದಕ್ಕೆಂದು ಕಾದು ಕೂತ ಆಚಾರ್ಯರಿಗೆ ಕತ್ತಲಾದರೂ ಕೂಡ ಪ್ರಸಾದ ದೊರೆಯುವುದಿಲ್ಲ. ಥಟ್ಟನೆ ತಮ್ಮ ಹೆಂಡತಿಗೆ ಔಷಧ ಕೊಡಬೇಕೆಂಬುದು ನೆನಪಾಗಿ ನಿರಾಶೆಯಿಂದ ಎದ್ದು ಮೆಲ್ಲಮೆಲ್ಲನೇ ಹೊರಡುತ್ತಾರೆ. ಸ್ವಲ್ಪ ದೂರ ಹೋದ ಮೇಲೆ ಆಚಾರ್ಯರಿಗೆ ಹೆಜ್ಜೆ ಸಪ್ಪಳ, ಕೈ ಬಳೆಯ ಶಬ್ದ ಹಿಂದಿನಿಂದ ಕೇಳಿಸುತ್ತದೆ. 'ಯಾರು?' ಎಂದು ಕೇಳಿದಾಗ ಚಂದ್ರಿ 'ನಾನು' ಎಂದು ಹೇಳುತ್ತಾಳೆ. ಪ್ರಾಣೇಶಾಚಾರ್ಯರಿಗೆ ಏನು ಮಾತನಾಡಬೇಕೆಂದು ತಿಳಿಯದೇ ದುಃಖವಾಗಿ 'ಮಾರುತಿ, ಮಾರುತಿ' ಎನ್ನುತ್ತಾ ನಿಲ್ಲುತ್ತಾರೆ. ಚಂದ್ರಿಗೆ ಆಚಾರ್ಯರ ಸ್ಥಿತಿ ಕಂಡು ಮರುಕ ಬರುತ್ತದೆ. ತನಗಾಗಿ ಒದ್ದಾಡಿ, ಹಸಿದು, ಕಂಗೆಟ್ಟು ಬಡವಾಗಿರುವ ಅವರ ಕಾಲನ್ನು ಭದ್ರವಾಗಿ ಹಿಡಿದು ನಮಸ್ಕಾರ ಮಾಡಬೇಕೆನ್ನಿಸಿ ಅವರ ಮುಂದೆ ಬಂದು ಬೀಳುತ್ತಾಳೆ. ಕತ್ತಲೆಯಲ್ಲಿ ಕಾಣಿಸದೇ ಇದ್ದುದರಿಂದ ಆಚಾರ್ಯರ ಪಾದದ ಬದಲು ಮೊಣಕಾಲಿಗೆ ಅವಳ ಎದೆ ತಾಕುತ್ತದೆ. ಅವಳು ಮುಗ್ಗರಿಸಿದ ವೇಗಕ್ಕೆ ಕುಪ್ಪಸದ ಗುಂಡಿಗಳು ಹರಿಯುತ್ತವೆ. ಅವಳು ಅವರ ತೊಡೆಯ ಮೇಲೆ ತನ್ನ ತಲೆಯಿಟ್ಟು ಕಾಲುಗಳನ್ನು ತಬ್ಬಿ ಅಳುತ್ತಾಳೆ. ಪಶ್ಚಾತ್ತಾಪದ ಜೊತೆಗೆ ಅವಳ ಬಿಗಿಯಾದ ಸ್ಪರ್ಶದಿಂದ ತಬ್ಬಿಬ್ಬೆನಿಸಿ ಆಚಾರ್ಯರು ಅವಳನ್ನು ಆಶೀರ್ವದಿಸಲೆಂದು ಬಗ್ಗಿ ಕೈ ಚಾಚುತ್ತಾರೆ. ಚಾಚಿದ ಕೈಗೆ ಅವಳ ಬಿಸಿ ಉಸಿರು, ಕಣ್ಣೀರು ತಾಗಿ, ರೋಮಾಂಚನ ಮಾರ್ದವ ಉಕ್ಕಿ ಚೆಲ್ಲಿದ ಅವಳ ತಲೆಗೂದಲನ್ನು ಸವರುತ್ತಾರೆ. ಇದರಿಂದ ಆವೇಗಗೊಂಡ ಚಂದ್ರಿ ಅವರ ಕೈಗಳನ್ನು

ಭದ್ರವಾಗಿ ಹಿಡಿದುಕೊಂಡು ಎದ್ದು ನಿಂತು ತನ್ನ ಎದೆಗಳಿಗೆ ಒತ್ತಿಕೊಳ್ಳುತ್ತಾಳೆ. ತನ್ನ ಕೈಗಳೆಂದೂ ಸ್ಪರ್ಶಿಸದ ಪುಷ್ಟವಾದ ಮೊಲೆಗಳನ್ನು ಮುಟ್ಟಿದ ಕ್ಷಣ ಪ್ರಾಣೇಶಾಚಾರ್ಯರಿಗೆ ಬವಳಿ ಬಂದಂತಾಗಿ ಕನಸಿನಲ್ಲಿ ಎಂಬಂತೆ ಮೊಲೆಗಳನ್ನು ಒತ್ತುತ್ತಾರೆ. ಕೂಡಲೇ ಚಂದ್ರಿ ಬೀಳಲಿದ್ದ ಆಚಾರ್ಯರನ್ನು ಅವಚಿಕೊಂಡು ಮೆಲ್ಲಗೆ ಕೂರಿಸುತ್ತಾಳೆ. ಹಸಿವೆಯಿಂದ ಕಂಗೆಟ್ಟದ್ದ ಅವರಿಗೆ ತನ್ನ ಮಡಿಲಿನಿಂದ ರಸಬಾಳೆ ಹಣ್ಣುಗಳನ್ನು ಸುಲಿದು ತಿನ್ನಿಸುತ್ತಾಳೆ. ನಂತರ ತನ್ನ ಸೀರೆಯನ್ನು ಬಿಚ್ಚಿ ಹಾಸಿ ಪ್ರಾಣೇಶಾಚಾರ್ಯರನ್ನು ತಬ್ಬಿಕೊಂಡು ಮಲಗಿ ಗಳಗಳನೆ ಅತ್ತು ಬಿಡುತ್ತಾಳೆ.

ಆಚಾರ್ಯರಿಗೆ ಎಚ್ಚರವಾದಾಗ ನಡುರಾತ್ರಿಯಾಗಿರುತ್ತದೆ. ಅವರ ತಲೆ ಚಂದ್ರಿಯ ತೊಡೆಯ ಮೇಲಿರುತ್ತದೆ. ಕೆನ್ನೆ ಅವಳ ನಗ್ನ ಕಿಬ್ಬೊಟೆಗೆ ಒತ್ತಿಕೊಂಡಿರುತ್ತದೆ. ಚಂದ್ರಿ ತನ್ನ ಬೆರಳುಗಳಿಂದ ಅವರ ತಲೆ ಕಿವಿ ಕೆನ್ನೆಗಳನ್ನು ಸವರುತ್ತಿರುತ್ತಾಳೆ. ಗರಿ ಬಿಚ್ಚಿದ ನವಿಲಿನಂತಹ ಅಕ್ಷಯ ನಕ್ಷತ್ರದ ರಾತ್ರಿ: ಸಪ್ತ ಋಷಿಗಳ ಮಂಡಲ : ವಸಿಷ್ಠರ ಪಕ್ಕದಲ್ಲಿ ನಾಚಿ ಮಿನುಗುವ ಆರುಂಧತಿ, ಕೆಳಗೆ ಹುಲ್ಲಿನ, ಹಸಿ ಮಣ್ಣಿನ, ವಿಷ್ಣು ಕಾಂತಿಯ, ಸುಗಂಧಿಯ ಹೆಣ್ಣ ಬೆವರಿದ ತಲೆಯ ವಾಸನೆ. ಪ್ರಾಣೇಶಾಚಾರ್ಯರಿಗೆ ಹೊಚ್ಚ ಹೊಸ ಅನುಭವ. ಆದರೆ ಈ ಅನುಭವವನ್ನು ಪಡೆದು ತಾವು ಅಗ್ರಹಾರಕ್ಕೆ ನಿಶ್ಚಯ ಮಾಡಿ ಹೇಳುವ ಅಧಿಕಾರವನ್ನು ಕಳೆದುಕೊಂಡೆ ಎಂದು ಪರಿತಪಿಸುತ್ತಾರೆ. ಆಚಾರ್ಯರು ಮನುಷ್ಯನ ಮೂಲ ಪ್ರವೃತ್ತಿಗಳಲ್ಲಿ ಒಂದಾದ ಕಾಮವನ್ನು, ಇಷ್ಟು ವರ್ಷಗಳಿಂದ ನಿಗ್ರಹಿಸಿಕೊಂಡು ಬಂದಿದ್ದನ್ನು, ತಮ್ಮಿಂದ ಆ ಕ್ಷಣಕ್ಕೆ ನಿಗ್ರಹಿಸಲಾರದ್ದಕ್ಕೆ ವ್ಯಥೆ ಪಡುವುದನ್ನು ಗಮನಿಸಬಹುದು. ಆದರೆ ಚಂದ್ರಿಗೆ ಆ ಕತ್ತಲಿನ ಕಾಡಿನಲ್ಲಿ ನಿಂತದ್ದು, ಬಾಗಿದ್ದು, ಕೊಟ್ಟಿದ್ದು ಕೊಂಡದ್ದು, ಬಚ್ಚಿಟ್ಟುಕೊಂಡ ಪರಿಮಳದ ಹೂವಿನಂತೆ ಧನ್ಯಭಾವವನ್ನು ಮಾತ್ರ ತರುತ್ತದೆ. ಆದರೆ ಆಚಾರ್ಯರಿಗೆ ಏನೆನ್ನಿಸುವುದೋ ಏನೋ ಎಂದು ಆಲೋಚಿಸಿ ಆಚಾರ್ಯರ ಜಗುಲಿಗೆ ಹೋಗಿ ಅವರ ಮನಸ್ಸಿಗೆ ನೋವು ಕೊಡಬಾರದು ಎಂದು ತೀರ್ಮಾನಿಸುತ್ತಾಳೆ. ಹೀಗಾಗಿ ಆಚಾರ್ಯರಲ್ಲಿಗೆ ಹೋಗುವುದು ಸರಿಯಲ್ಲವೆಂದು ತೀರ್ಮಾನಿಸುತ್ತಾಳೆ.

ಶವವಾದ ತನ್ನ ಯಜಮಾನನ ಮನೆಗೆ ಹೋಗಲು ಭಯವಾದರೂ ಕೂಡ ಎಷ್ಟೆಂದರೂ ತನ್ನ ಕೂಡ ಸಹವಾಸ ಮಾಡಿದವರಲ್ಲವೇ ಎಂದು ಧೈರ್ಯ ತಂದುಕೊಂಡು ಅಲ್ಲಿ ಹೋಗಿ ನೋಡಿ, ಧೈರ್ಯವಾದರೆ ಚಾವಡಿಯಲ್ಲಿ ಮಲಗುವುದು. ಇಲ್ಲವಾದರೆ ಆಚಾರ್ಯರ ಜಗುಲಿಗೆ ಬರುವುದು, ಆಪತ್ತಿನಲ್ಲಿ ಏನು ಮಾಡುವುದಕ್ಕಾಗುತ್ತೆ ಎಂದು ತನಗೆ ತಾನೇ ವಾದಿಸಿಕೊಂಡು ಮನೆಯ ಹತ್ತಿರ ಬರುತ್ತಾಳೆ. ನಾಯಿ ಬೊಗಳಿದ ಶಬ್ದ ಕೇಳಿ ಎಲ್ಲ ರಾತ್ರಿಯ ಹಾಗೆ ಇಂದೂ ಒಂದು ರಾತ್ರಿ ಎನ್ನಿಸಿ ಚಾವಡಿಯ ಮೆಟ್ಟಿಲು ಹತ್ತುತ್ತಾಳೆ. ಚಾಚಿದ ಕೈಗೆ ಬಾಗಿಲು ತೆರೆದಿದ್ದು ತಿಳಿದು "ಅಯ್ಯೋ ಪರಮಾತ್ಮ ನರಿ ನಾಯಿಯೇನಾದರೂ ನುಗ್ಗಿ ಅವನ ಶವವನ್ನು..." ಎಂದು ತನಗಾದ ಭಯವನ್ನೆಲ್ಲಾ ಮರೆತು ಕ್ಷಣದಲ್ಲಿ ಒಳನುಗ್ಗಿ, ಅಭ್ಯಾಸ ಬಲದಿಂದ ಗೂಡಿನಿಂದ ಬೆಂಕಿಪೊಟ್ಟಣ ತೆಗೆದು ಲಾಟೀನು ಹತ್ತಿಸುತ್ತಾಳೆ.

ಮನೆಯ ತುಂಬಾ ದುರ್ವಾಸನೆ. ಸತ್ತು ಕೊಳೆಯುತ್ತಿದ್ದ ಇಲಿಗಳನ್ನು ನೋಡುತ್ತಾಳೆ. ತನಗಾಗಿ ಅಗ್ರಹಾರದಲ್ಲೆಲ್ಲಾ ನಿಷ್ಠುರ ಕಟ್ಟಿಕೊಂಡ ಅವನನ್ನು ಅನಾಥವಾಗಿ ಬಿಟ್ಟೆನಲ್ಲ ಎಂದು ದುಃಖಿಸುತ್ತಾ

ಮಹಡಿ ಹತ್ತಿ ಹೋಗಿ ಲೋಬಾನದ ಹೊಗೆ ಹಾಕಬೇಕೆಂದುಕೊಳ್ಳುತ್ತಾ ನೋಡುತ್ತಾಳೆ... ಹೆಣ ನಾರುತ್ತಿರುತ್ತದೆ. ಬಾತುಕೊಂಡು ವಿಕಾರವಾಗಿ ವಿರೂಪವಾದ ಶವದ ಮುಖ ಕಂಡು ಹೊಟ್ಟೆಯಲ್ಲಿ ಕಲಸಿದಂತಾಗಿ ಕಿಟಾರನೆ ಕಿರುಚಿಕೊಂಡು ಹೊರಕ್ಕೋಡಿ ಬರುತ್ತಾಳೆ. ಮೇಲಿರುವುದಕ್ಕೂ, ತನ್ನನ್ನೂ ಒಲಿದಿದ್ದವನಿಗೂ ಯಾವ ಸಂಬಂಧವೂ ಇಲ್ಲ, ಇಲ್ಲ ಎಂಬ ಅವಳ ಜೀವ ಕೂಗುತ್ತದೆ. ಲಾಟೀನು ಹಿಡಿದು ಆವೇಶದಿಂದ ಒಂದು ಮೈಲಿ ನಡೆದು ಗೌಡರ ಕೇರಿಗೆ ಹೋಗುತ್ತಾಳೆ. ತಮ್ಮ ಮನೆಗೆ ಕೋಳಿ ಮೊಟ್ಟೆ ತಂದು ಕೊಡುತ್ತಿದ್ದ ಗಾಡಿ ಶೇಷಪ್ಪನ ಮನೆಯನ್ನು ಮನೆಯ ಅಂಗಳದಲ್ಲಿ ಕಟ್ಟಿದ್ದ ಬಿಳಿಯ ಎತ್ತುಗಳಿಂದ ಗುರುತಿಸಿ ಒಳಕ್ಕೆ ಹೋಗುತ್ತಾಳೆ. ನಿದ್ರೆಯಿಂದ ಎದ್ದು ಬಂದ ಗಾಡಿ ಶೇಷಪ್ಪನಿಗೆ ಎಲ್ಲವನ್ನೂ ವಿವರಿಸಿ. ಗಾಡಿ ಕಟ್ಟಿಕೊಂಡು ಬಂದು ಹೆಣವನ್ನು ಸ್ಮಶಾನಕ್ಕೆ ಸಾಗಿಸಿ ಮನೆಯಲ್ಲೇ ಇರುವ ಕಟ್ಟಿಗೆಯಿಂದ ಸುಟ್ಟು ಬಿಡಬಹುದು ಎಂದು ಹೇಳುತ್ತಾಳೆ.

ಆದರೆ ಶೇಷಪ್ಪ ಗಾಬರಿಯಾಗಿ "ಚಂದ್ರಮ್ಮ, ಸಾಧ್ಯವಿಲ್ಲವ್ವ ಬ್ರಾಂಬ್ರ ಶವಾನ ನಾನು ಮುಟ್ಟಿ ನರಕಕ್ಕೆ ಹೋಗಲ? ಅಷ್ಟೈಶ್ವರ್ಯ ಕ್ವಟ್ಟರೂ ಬ್ಯಾಡಮ್ಮ.. ಭಯವಾದರೆ ಈ ಬಡವನ ಗುಡಿಸಲಲ್ಲಿ ಮಲಗಿದ್ದು ನಸುಕಿನಲ್ಲಿ ಎದ್ದು ಹೋಗಿರವ್ವ" ಎಂದು ಉಪಚರಿಸುವಲ್ಲಿ ಗಾಡಿ ಶೇಷಪ್ಪನು ಬ್ರಾಹ್ಮಣ ವರ್ಗದ ಬಗ್ಗೆ ಹೊಂದಿದ್ದ ಗೌರವವನ್ನು, ಮುಂದೆ ತನಗೇನಾದರೂ ತೊಂದರೆ ಸಂಭವಿಸಬಹುದೆಂಬ ಭೀತಿಯನ್ನು ಕಾಣಬಹುದು. ಆದರೆ ಚಂದ್ರಿಗೆ ಒಂದೇ ಒಂದು ಯೋಚನೆ ಸ್ಪಷ್ಟವಾಗುತ್ತದೆ. ಅಲ್ಲಿ ಅದು ಕೊಳೆಯುತ್ತಿದೆ, ನಾರುತ್ತಿದೆ, ಬಾತುಕೊಂಡಿದೆ. ಅದು ತಾನು ಒಲಿದ ನಾರಣಪ್ಪನಲ್ಲ. ಬ್ರಾಹ್ಮಣನೂ ಅಲ್ಲ, ಶೂದ್ರನೂ ಅಲ್ಲ, ಹೆಣ. ಕೊಳೆಯುವ ನಾರುವ ಹೆಣ. ಇಲ್ಲಿ ಚಂದ್ರಿಗೆ ವಾಸ್ತವಿಕ ಪ್ರಜ್ಞೆ ಮೂಡಿರುವುದನ್ನು ಗಮನಿಸಬಹುದು.

ಚಂದ್ರಿ ಸೀದ ಮುಸಲ್ಮಾನರ ಕೇರಿಗೆ ಹೋಗಿ ಸಂಸ್ಕಾರ ನಡೆಸಿದರೆ ಹಣ ಕೊಡುತ್ತೇನೆ ಎಂದು ಹೇಳುತ್ತಾಳೆ. ಬಂಗಡೇ ಮೀನಿನ ವ್ಯಾಪಾರ ಮಾಡುತ್ತಿದ್ದ ಅಹ್ಮದ್ ಬ್ಯಾರಿ ಒಮ್ಮೆ ತನ್ನ ಬಳಿ ಕಾಸಿಲ್ಲದಾಗ ಎತ್ತುಗಳನ್ನು ಕೊಳ್ಳಲು ನಾರಣಪ್ಪ ಸಾಲ ಕೊಟ್ಟಿದ್ದನ್ನು ನೆನಪಿಸಿಕೊಂಡು 'ಸಾಲ ಕೊಟ್ಟ ಒಡೇರು' ಎಂದು ನೆನೆದು ಎಗ್ಗಿಲ್ಲದೇ ಗುಟ್ಟಾಗಿ ಗಾಡಿ ಕಟ್ಟಿಕೊಂಡು ಬಂದು ಶವವನ್ನು ಕಟ್ಟಿಗೆಯನ್ನೂ ಒಟ್ಟಿಗೆ ತುಂಬಿ ಯಾರಿಗೂ ಗೊತ್ತಾಗದಂತೆ ಮಸಣಕ್ಕೆ ಒಯ್ದು, ಕತ್ತಲೆಯಲ್ಲಿ ಧಗಧಗ ಬೆಂಕಿಯೆಬ್ಬಿಸಿ ಬೂದಿ ಮಾಡಿ, ಹೈ ಹೈ ಎಂದು ಎತ್ತಿನ ಬಾಲ ತಿರುವಿ ಹೊರಟು ಹೋಗುತ್ತಾನೆ. ಎರಡು ತೊಟ್ಟು ಕಣ್ಣೀರು ಹಾಕಿದ ಚಂದ್ರಿ ಮನೆಗೆ ಹಿಂತಿರುಗಿ ಬಂದು ಚೀಲದಲ್ಲಿ ತನ್ನದೊಂದಿಷ್ಟು ರೇಷ್ಮೆ ಸೀರೆಗಳನ್ನು, ಪೆಟ್ಟಿಗೆಯಲ್ಲಿದ್ದ ನಗದು ಹಣವನ್ನು ಮತ್ತು ಆಚಾರ್ಯರು ಹಿಂದಕ್ಕೆ ಕೊಟ್ಟ ಬಂಗಾರವನ್ನು ಗಂಟು ಕಟ್ಟಿಕೊಂಡು ಮನೆಯಿಂದ ಹೊರ ಬರುತ್ತಾಳೆ. ಪ್ರಾಣೇಶಾಚಾರ್ಯರನ್ನು ಎಬ್ಬಿಸಿ, ಅವರ ಕಾಲಿಗೆ ನಮಸ್ಕರಿಸಿ ಹೋಗಬೇಕೆಂಬ ಆಸೆಯಾದರೂ ಕೂಡ, ಅದನ್ನು ತನ್ನಲ್ಲೆ ಅದುಮಿಟ್ಟುಕೊಂಡು ಕುಂದಾಪುರಕ್ಕೆ ಹೋಗಲು ಕಾಡುದಾರಿಯಲ್ಲಿ ಮೋಟಾರಿನ ದಾರಿಯ ಕಡೆಗೆ ಗಂಟು ಹಿಡಿದು ಹೊರಟು ಬಿಡುತ್ತಾಳೆ. ಉಳಿದ ಬ್ರಾಹ್ಮಣರೆಲ್ಲರೂ ನಾರಾಣಪ್ಪನ ಸಂಸ್ಕಾರ ನಡೆಸಲು ಧರ್ಮವೇ ಅಡ್ಡಿಯಾಗಿದೆ ಎಂದು ಆಲೋಚಿಸುತ್ತಿರುವಾಗ ಚಂದ್ರಿ ತನ್ನ ಮಾನವ ಧರ್ಮವನ್ನು ಹಿಡಿದು ತನ್ನನ್ನು ನಂಬಿದ್ದವನ ಶವಸಂಸ್ಕಾರವನ್ನು ನಡೆಸಿ ಶವಕ್ಕೆ ಮುಕ್ತಿಯನ್ನು ದೊರಕಿಸುತ್ತಾಳೆ.

ನಾರಾಣಪ್ಪನ ಶವವನ್ನು ನೋಡಿ ಹೆದರಿ ಪಾರಿಜಾತಪುರಕ್ಕೆ ಓಡಿ ಬಂದಿದ್ದ ಶ್ರೀಪತಿ ತನ್ನ ನಾಲ್ಕೈದು ಗೆಳೆಯರೊಂದಿಗೆ ಸೇರಿಕೊಂಡು ಅಗ್ರಹಾರದ ತಮ್ಮ ವಾಮನತ್ವವನ್ನು ಸಾರಾಯಿಯಿಂದ ಕಳೆದುಕೊಂಡು ತ್ರಿವಿಕ್ರಮರಾಗುತ್ತಾರೆ. ಅಂತ್ಯ ಸಂಸ್ಕಾರವಿಲ್ಲದೇ ಕೊಳೆಯುತ್ತಿರುವ ನಾರಾಣಪ್ಪನ ಶವದ ಸಂಸ್ಕಾರವನ್ನು ನೆರವೇರಿಸಬೇಕೆಂದುಕೊಂಡು ನಿರ್ಧರಿಸುತ್ತಾರೆ.ಕದ್ದಿಂಗಳಿನಲ್ಲಿ ಅಗ್ರಹಾರವನ್ನು ಹೊಕ್ಕು ನಾರಾಣಪ್ಪನ ಮನೆಗೆ ಹೋಗಿ ಬಾಗಿಲು ದೂಡಿ ಮಹಡಿ ಹತ್ತುತ್ತಾರೆ. ಶ್ರೀಪತಿ ತನ್ನ ಹತ್ತಿರವಿದ್ದ ಬ್ಯಾಟರಿಯನ್ನು ಬಿಡುತ್ತಾನೆ, ನಾರಾಣಪ್ಪನ ಶವವೇ ಪತ್ತೆಯಿರುವುದಿಲ್ಲ. ಇದರಿಂದ 'ಹಾ! ನಾರಾಣಪ್ಪ ಪ್ರೇತವಾಗಿ ನಡೆದುಬಿಟ್ಟ' ಎಂದು ನಾಗರಾಜ ಹೇಳುವುದೇ ತಡ, ಎಲ್ಲರೂ ಸರಾಯಿ ಸೀಸೆಯ ಚೀಲವನ್ನು ಅಲ್ಲೇ ಎಸೆದು, ಬಿದ್ದೆವೋ ಕೆಟ್ಟೆವೋ ಎನ್ನುತ್ತ ಐವರೂ ಹೊರಗೆ ಓಡಿ ಬಿಡುತ್ತಾರೆ. ನಿದ್ದೆ ಬಾರದೇ ಥರ್‍ರೆನ್ನುವ ಬಾಗಿಲು ತೆರೆದು ಶಪಿಸಲೆಂದು ಅಗ್ರಹಾರದ ಬೀದಿಗೆ ಬಂದಿದ್ದ ಅರೆಮರಳು ಲಕ್ಷ್ಮೀದೇವಮ್ಮ ಪ್ರೇತಗಳನ್ನು ನೋಡಿರೋ ನೋಡಿರೋ ಎಂದು ಕಿರುಚಿ 'ಹೇಯ್' ಎಂದು ತೇಗುತ್ತಾಳೆ.

ರಾತ್ರಿ ಬಹಳ ಹೊತ್ತಾದರೂ ಪ್ರಾಣೇಶಾಚಾರ್ಯರು ಬಾರದಿದ್ದುದನ್ನು ಕಂಡು ಕಂಗಾಲಾದ ಬ್ರಾಹ್ಮಣರೆಲ್ಲರೂ ತಮ್ಮ ತಮ್ಮ ಮನೆಯ ಬಾಗಿಲು ಕಿಟಕಿಗಳನ್ನೆಲ್ಲಾ ಭದ್ರವಾಗಿ ಮುಚ್ಚಿ, ಕರುಳನ್ನು ಕಿತ್ತು ಬಾಯಿಗೆ ತರುವ ನಾತದಲ್ಲಿ ಮೂಗು ಮುಚ್ಚಿಕೊಂಡು ಮಲಗಿರುತ್ತಾರೆ. ಹಸಿವೆ ಮತ್ತು ಭೀತಿಯಿಂದಾಗಿ ನಿದ್ರೆಬಾರದೇ ತಣ್ಣನೆಯ ನೆಲದಲ್ಲಿ ಹೊರಳಾಡುತ್ತಿರುತ್ತಾರೆ. ಇನ್ನೊಂದು ಲೋಕದಿಂದೆಂಬಂತೆ ರಾತ್ರೋ ರಾತ್ರಿ ಹೆಜ್ಜೆಗಳ ಸಪ್ಪಳ, ಗಾಡಿಯ ಗಾಲಿಯ ಶಬ್ದ, ಲಕ್ಷ್ಮೀದೇವಮ್ಮನ ಊಳಿಡುವ, ನಾಯಿಯ ಹಾಗಿನ ದಾರುಣವಾದ ಕೂಗು, ತೇಗು, ಪ್ರಾಣ ಕಂಪಿಸಿದಂತೆ, ಅಗ್ರಹಾರ ನಿರ್ಜನ ಅರಣ್ಯವಾದಂತೆ, ಕಾಯುವ ದೈವ ಕೈ ಬಿಟ್ಟಂತೆ ಅನ್ನಿಸಿ ಮನೆ ಮನೆಯಲ್ಲೂ ಮಕ್ಕಳು, ತಾಯಿ, ತಂದೆಯವರು ಒಂದೊಂದು ಮುದ್ದೆಯಾಗಿ ಒಬ್ಬರನ್ನೊಬ್ಬರು ತಬ್ಬಿಕೊಂಡು ಕತ್ತಲಲ್ಲಿ ಮಲಗಿರುತ್ತಾರೆ. ಇಲ್ಲಿ ಎಲ್ಲರಲ್ಲೂ ಮನೆ ಮಾಡಿದ್ದ ಭೀತಿಯನ್ನು ಕಾಣಬಹುದು. ಎಲ್ಲರೂ ಧೈರ್ಯ ಕಳೆದುಕೊಂಡು ದಾರಿ ಕಾಣದಂತಾಗುತ್ತಾರೆ. ಬೆಳಿಗ್ಗೆ ಎದ್ದು ನೋಡುವಷ್ಟರಲ್ಲಿ ಎಲ್ಲರ ಮನೆಗಳ ಮೇಲೂ ಹದ್ದುಗಳು, ರಣಹದ್ದುಗಳು, ಮನೆ ಮನೆಯ ಮೇಲೂ ಕಾಗೆಗಳನ್ನು ಅಟ್ಟುತ್ತಾ ಪಟ್ಟು ಹಿಡಿದು ಕೂತ ಹದ್ದುಗಳು. ಎಲ್ಲರೂ ಹದ್ದು ಕಾಗೆಗಳನ್ನು ಓಡಿಸಲು ಉಸ್ಸೆನ್ನುತ್ತಾರೆ, ಚಪ್ಪಾಳೆ ತಟ್ಟುತ್ತಾರೆ. ಏನು ಮಾಡಿದರೂ ಹದ್ದುಗಳು ಜಗ್ಗದೇ ಇದ್ದಾಗ ಹತಾಶರಾಗಿ ಶಂಖಗಳನ್ನೂದಿ ಕಂಚಿನ ಗಂಟೆ ಬಾರಿಸುತ್ತಾರೆ.

ದ್ವಾದಶಿಯ ಹಾಗೆ ಬೆಳಗಿನ ಜಾವ ಮಂಗಳ ಸ್ವರ ಕೇಳಿ ಬಂದ ಪ್ರಾಣೇಶಾಚಾರ್ಯರು, ಹೊರಗೆ ನೋಡಿ ವಿಹ್ವಲಿತರಾಗುತ್ತಾರೆ. ಸಮಸ್ಯೆಗೆ ಪರಿಹಾರ ದೊರೆಯದೇ ಇದ್ದುದಕ್ಕಾಗಿ ಪರಿತಪಿಸುತ್ತಾರೆ. ಯಥಾ ರೀತಿಯಲ್ಲಿ ಹೆಂಡತಿಗೆ ಔಷಧಿ ನೀಡುವಾಗ ಕೈ ನಡುಗಿ ಔಷಧಿ ಚೆಲ್ಲುತ್ತದೆ. ತನ್ನ ಕರ್ತವ್ಯದ, ಗೃಹಸ್ಥ ಧರ್ಮದ, ಆತ್ಮ ತ್ಯಾಗದ ಸಂಕೇತವಾಗಿದ್ದ ಜರ್ಜರಳಾದ ಹೆಂಡತಿಯ ಗುಳಿಬಿದ್ದ ಕಣ್ಣುಗಳ ದೃಷ್ಟಿ, ದಿಕ್ಕಿಲ್ಲದ ನೋಟವನ್ನು ಕಂಡು ಪಾತಾಳ ಕಂಡಂತಾಗಿ ಹೇಸಿಗೆಯಿಂದ ಕಂಪಿಸುತ್ತಾರೆ. ತಾವು ಇಲ್ಲಿಯವರೆಗೂ ಅವಚಿಕೊಂಡಿದ್ದ ಸಂಸ್ಕಾರ ಕರ್ಮಗಳಿಂದ

ಕಳಚಿ ಬಿದ್ದಂತೆ ಭಾಸವಾಗತೊಡಗುತ್ತದೆ. ಸನ್ಯಾಸಿಯಾಗಬೇಕು. ಇಲ್ಲವೇ ತ್ಯಾಗದ ಬಾಳನ್ನು ಬಾಳಬೇಕೆಂಬ ಉದ್ದೇಶದಿಂದ ಹುಟ್ಟಿನಿಂದಲೇ ರೋಗಿಯಾಗಿದ್ದ, ಭಾಗೀರಥಿಯನ್ನು ಮದುವೆ ಮಾಡಿಕೊಂಡಿರುತ್ತಾರೆ. ನಿಷ್ಕಾಮ ಕರ್ಮದ ಪರೀಕ್ಷೆಗಾಗಿಯೇ ತಮ್ಮ ಈ ಜೀವನ ಎಂದು ಭಾವಿಸಿ ಹರ್ಷದಿಂದಲೇ ತಮ್ಮ ಹೆಂಡತಿಯ ಸೇವೆಯನ್ನು ಮಾಡಿ ಜೀವನ ನಡೆಸುತ್ತಿದ್ದ ಆಚಾರ್ಯರು ನಿತ್ಯದಂತೆ ಹೆಂಡತಿಗೆ ಸ್ನಾನ ಮಾಡಿಸುವಾಗ ಅವಳ ಬತ್ತಿದ ಎದೆ, ಗುಜ್ಜು ಮೂಗು, ಮೋಟು ಜಡೆ ಕಂಡು ಅಸಹ್ಯಪಟ್ಟುಕೊಳ್ಳುತ್ತಾರೆ. ಪ್ರಪ್ರಥಮ ಬಾರಿಗೆ ಅವರ ಮನದಲ್ಲಿ ಸುಂದರ ಅಸುಂದರ ಕಲ್ಪನೆ ಮೂಡತೊಡಗುತ್ತದೆ. ಎಲ್ಲಾ ರೀತಿಯ ಸೌಂದರ್ಯದಲ್ಲೂ ಪಾಲು ಬೇಕು ಎಂದೆನಿಸತೊಡಗುತ್ತದೆ. ಇದ್ದಕ್ಕಿದ್ದಂತೆ ಅನಾಥ ಭಾವವೊಂದು ಅವರಲ್ಲಿ ಮೂಡುತ್ತದೆ. ಏಕೆಂದರೆ ಊಟ ಉಪಚಾರವಿಲ್ಲದೇ ಎಲ್ಲ ಬ್ರಾಹ್ಮಣರು ತಮ್ಮ ಸಮಸ್ಯೆಗೆ ಕೈಮರದ ಅಗ್ರಹಾರದಿಂದ ಪರಿಹಾರ ದೊರಕಿಸಿಕೊಂಡು ಬರುವ ಆಶಾಭಾವದಿಂದ ತೆರಳಿದ ಮೇಲೆ ಅಗ್ರಹಾರದಲ್ಲಿ ಪ್ರಾಣೇಶಾಚಾರ್ಯ ಹಾಗೂ ಅವರ ಹೆಂಡತಿ ಇಬ್ಬರೇ ಉಳಿಯುತ್ತಾರೆ. ಪೂಜೆ ಪುನಸ್ಕಾರಗಳೆಲ್ಲ ನಿಂತು ಹೋಗಿ ಅಗ್ರಹಾರ ಬಣಗುಡುತ್ತಿರುತ್ತದೆ. ಮೂಗಿಗೆ ಅಡರಿ ಪ್ರಾಣಸ್ಥವಾಗಿ ನಿಂತ ದುರ್ವಾಸನೆ, ಮನೆ ಮನೆಗೂ ಕೂತ ಹದ್ದುಗಳು ನಾರಣಪ್ಪನ ಶವವನ್ನು ಮರೆಯಲು ಬಿಡದಂತೆ ಕಾಡುತ್ತವೆ. ಸತ್ತ ಇಲಿಯನ್ನು ಬಾಲದಿಂದೆತ್ತಿ ಹದ್ದಿಗೆ ಹಾಕಿ ಬರುತ್ತಾರೆ. ಹೊಟ್ಟೆಯ ಸಂಕಟ ತಡೆಯಲಾರದೇ ಪೇಚಾಡಿ, ಧೋತ್ರದಲ್ಲಷ್ಟು ರಸಬಾಳೆ ಹಣ್ಣುಗಳನ್ನು ಕಟ್ಟಿಕೊಂಡು ಸ್ನಾನ ಮಾಡಿ ಹೊಳೆ ದಾಟಿ, ಮರದ ನೆರಳಿನಲ್ಲಿ ಕೂತು ತಿನ್ನುತ್ತಾರೆ. ನೆಮ್ಮದಿಯಾಗುತ್ತದೆ. ಚಂದ್ರಿ ಹಣ್ಣನ್ನು ತಿನ್ನಿಸಿದ ಕತ್ತಲಿನ ನೆನಪಾಗುತ್ತದೆ.

ಪ್ರಾಣೇಶಾಚಾರ್ಯರಿಗೆ ತಾನು ಚಂದ್ರಿಯನ್ನು ಮುಟ್ಟಿದ್ದು ಪಶ್ಚಾತ್ತಾಪದಿಂದಲೇ ಎಂಬ ಅನುಮಾನವಾಗುತ್ತದೆ. "ಪಳಗಿಸಿಟ್ಟ ಹುಲಿಯಂತಹ ಕಾಮ ಚಂದ್ರಿಯ ಮೊಲೆ ತಾಗಿದ ಕೂಡಲೇ ಚಂಗನೆ ಸ್ವಧರ್ಮಕ್ಕೆ ನೆಗೆದು ಹಲ್ಲು ತೋರಿಸಿ ಬಿಟ್ಟಿತ್ತು. ನಾರಣಪ್ಪ ಹೇಳಿದ್ದನ್ನೆಲ್ಲಾ ನೆನಪಿಸಿಕೊಳ್ಳುತ್ತಿದ್ದ ಪ್ರಾಣೇಶಾಚಾರ್ಯರ ಮನದ ಕಲ್ಪನೆ ಮೊದಲ ಬಾರಿಗೆ ತಾನೆಂದೂ ಗಮನಿಸದಿದ್ದ ಅಸ್ಪೃಶ್ಯ ಹುಡುಗಿಯರನ್ನೆಲ್ಲಾ ಎಳೆದು ತಂದು ವಿವಸ್ತ್ರಗೊಳಿಸಿ ನೋಡುತ್ತದೆ ಯಾರು? ಯಾರು? ಬೆಳ್ಳಿ? ಹೌದು ಬೆಳ್ಳಿ". ತಾನು ಹಿಂದೆಂದೂ ಲೆಖ್ಖಕ್ಕೆ ತಾರದ ಅವಳ ಮಣ್ಣಿನ ಬಣ್ಣದ ಮೊಲೆಗಳ ಕಲ್ಪನೆಯಾಗಿ ಮೈ ಜುಮ್ಮೆನ್ನುತ್ತದೆ. ತನ್ನ ಕಲ್ಪನೆಗೆ ತಾನೇ ಕಂಗಾಲಾಗುತ್ತಾರೆ. ನಾರಣಪ್ಪ ಗೇಲಿಗೆ ಹೇಳಿದ್ದ 'ಬ್ರಾಹ್ಮಣ್ಯ ಉಳಿಯಲು ವೇದ ಪುರಾಣಗಳನ್ನು ಅರ್ಥ ತಿಳಿಯದೆ ಓದಬೇಕು' ಎಂಬ ಮಾತು ತನ್ನಲ್ಲಿ ಹುದುಗಿದ್ದ ಒಂದು ಕಿಡಿ, ಚಂಗನೆ ಪಳಗಿಸಿಟ್ಟ ಹುಲಿ ನೆಗೆದು ಹಲ್ಲು ತೋರುತ್ತಿದೆ.

ಚಂದ್ರಿಯ ಸಹವಾಸ ಮಾಡಿದ ಪ್ರಾಣೇಶಾಚಾರ್ಯರಿಗೆ ಬೆಳ್ಳಿಯ ಮೊಲೆಗಳನ್ನು ಮೃದುವಾಗಿ ಅಮುಕಬೇಕೆನ್ನಿಸುತ್ತಿರುತ್ತದೆ. ಅನುಭವಕ್ಕಾಗಿ ದಾಹವಾಗತೊಡಗುತ್ತದೆ. ಇಷ್ಟು ದಿನ ತಾನು 'ಬದುಕಲೇ ಇಲ್ಲ' ಎಂಬ ಭಾವ ಮೂಡುತ್ತದೆ. ಕಾಡಿನ ಅನುಭವ ಆಘಾತವನ್ನುಂಟು ಮಾಡುತ್ತದೆ. ಅಗ್ರಹಾರಕ್ಕೆ ತೆರಳಲು ಮನಸ್ಸಾಗದೇ ಮಣ್ಣಿಗೆ ಮೂಗಿಟ್ಟು ನಡೆಯುವ ಮೃಗದಂತೆ ತಾನು ಚಂದ್ರಿಯನ್ನು ಕೂಡಿದ ಕಾಡನ್ನು ಹೊಕ್ಕುತ್ತಾರೆ. ತನ್ನ ಬಾಳು ಹೊರಳಿಕೊಂಡ ಜಾಗದಲ್ಲಿ –

ಅಂತಃಪ್ರೇರಣೆಯಿಂದೆಂಬಂತೆ ಬಂದು ನಿಲ್ಲುತ್ತಾರೆ. ಹಸಿರಾದ ಹುಲ್ಲಿನ ಮೇಲೆ ಒತ್ತಿದ ಮೈಯ ಆಕಾರ ಇನ್ನೂ ಉಳಿದಿರುತ್ತದೆ. ಮಂಕಾದವರಂತೆ ಕೂತು ಹುಲ್ಲಿನ ಗರಿಕೆಗಳನ್ನು ಕಿತ್ತು ಮೂಸುತ್ತಾರೆ. 'ಅಸಹ್ಯವಾಗಿ ನಾರುವ ಅಗ್ರಹಾರ'ದಿಂದ ಬಂದವರಿಗೆ ಹುಲ್ಲಿನ ಬೇರಿನ ವಾಸನೆ ಚಟದಂತೆ ಕಾಡುತ್ತದೆ. ಸುಗಂಧಿಯ ಬೇರನ್ನು ಕಿತ್ತು ಮೂಸುತ್ತಾರೆ. ಬಾಲಕನಂತೆ ನದಿಯಲ್ಲಿ ಈಸುತ್ತಾರೆ. ಇವೆಲ್ಲವೂ ಕೂಡ ಇದುವರೆಗೂ ಪ್ರಾಣೇಶಾಚಾರ್ಯರಲ್ಲಿ ಅಡಗಿದ್ದ ಜೀವನಧರ್ಮವೇ ಆಗಿವೆ. ಆತಂಕ ಪ್ರಭಾವದಿಂದ ಮರೆಯಾಗಿದ್ದ ಲೌಕಿಕ ಧರ್ಮ ಮುಂಬಾಲಿಗೆ ಬರುತ್ತದೆ. ಹೆಂಡತಿಗೆ ಔಷಧಿ ಕೊಡಬೇಕೆಂದು ನೆನಪಾಗಿ ಮನೆಗೆ ಹಿಂದಿರುಗುತ್ತಾರೆ. ಥಟ್ಟನೆ ಕಾಗೆ ರಣಹದ್ದುಗಳನ್ನು ಕಂಡು ಕಪಾಳಕ್ಕೆ ಫಟೀರನೆ ಏಟು ಬಿದ್ದಂತಾಗುತ್ತದೆ. ಮನೆಗೆ ಬಂದು ನೋಡಿದರೆ ಹೆಂಡತಿಯ ಮುಖ ಕೆಂಪಾಗಿ ಕುದಿಯುತ್ತಿರುತ್ತದೆ. ಅನುಮಾನ ಬಂದು ಹೆಂಡತಿಯ ಮೈಯನ್ನು ಪರೀಕ್ಷಿಸುತ್ತಾರೆ. ಪಕ್ಕದಲ್ಲಿ ಗಡ್ಡೆ. ನಾರಾಣಪ್ಪನನ್ನು ನುಂಗಿದ ಜ್ವರವೇ? ತಮಗೆ ಗೊತ್ತಿದ್ದ ಮೂಲಿಕೆಗಳನ್ನೆಲ್ಲಾ ತಂದು ಔಷಧಿ ಮಾಡಿ ಎರೆಯುತ್ತಾರೆ. ಯಾವ ಔಷಧವೂ ಗಂಟಲಲ್ಲಿ ಇಳಿಯುವುದಿಲ್ಲ. ಪ್ರಾಣೇಶಾಚಾರ್ಯರ ಪತ್ನಿಯೂ ಕೂಡ ತೀರಿಕೊಳ್ಳುತ್ತಾರೆ. ಕೈಮರದ ನಾಲ್ವರು ಬ್ರಾಹ್ಮಣರ ಸಹಾಯದಿಂದ ತಮ್ಮ ಹೆಂಡತಿಯ ಹೆಣ ಸಾಗಿಸಿ ನಸುಕಾಗುವುದರೊಳಗಾಗಿ ಬೆಂಕಿ ಕೊಡುತ್ತಾರೆ. ತನ್ನ ತಪೋ ಭೂಮಿಯಂತಿದ್ದ ಒಂದು ಹಿಡಿ ಜೀವದ ಹೆಂಡತಿ ಧಗಧಗನೆ ಉರಿಯುವುದನ್ನು ನೋಡುತ್ತ, ಬಂದ ಕಣ್ಣೀರನ್ನು ತಡೆದುಕೊಳ್ಳಲು ಪ್ರಯತ್ನಿಸದೆ, ಆಯಾಸವೆಲ್ಲ ಪರಿಹಾರವಾಗುವಷ್ಟು ಅತ್ತು ಬಿಡುತ್ತಾರೆ.

ಹೆಂಡತಿಯ ಶವ ಸಂಸ್ಕಾರದ ನಂತರ ಪ್ರಾಣೇಶಾಚಾರ್ಯರು ಅಗ್ರಹಾರವನ್ನೇ ಬಿಟ್ಟು ಹೊರಟುಬಿಡುತ್ತಾರೆ. ಎಲ್ಲಿಗೆ ಎಂಬುದೇ ಗೊತ್ತಿರುವುದಿಲ್ಲ. ದೇವರನ್ನು ಬಿಟ್ಟ ಮೇಲೆ ಗುರು ಋಣ, ಪಿತೃ ಋಣ, ದೇವ ಋಣದ ಬಗ್ಗೆ ಇರುವ ಆತಂಕವನ್ನು ಬಿಡಬೇಕು. ಅಂದರೆ ಸಮಾಜವನ್ನು ಬಿಟ್ಟು ನಿಲ್ಲಬೇಕು. ಈ ಕಾರಣಕ್ಕಾಗಿಯೇ ಕಾಲು ಕೊಂಡಲ್ಲಿಗೆ ನಡೆದು ಬಿಡುವುದೆಂದು ಮನಸ್ಸು ಮಾಡಿ ಹೊರಟು ಬಿಡುತ್ತಾರೆ. ಎಲ್ಲೇ ಹೋದರೂ ಕೂಡ ತಮ್ಮ ಪ್ರಾರಬ್ಧಗಳು ಬಿಡದೇ ತಮ್ಮ ಬೆನ್ನ ಹಿಂದೆ ಬಂದಂತೆ ಭಾಸವಾಗತೊಡಗುತ್ತದೆ. ಬದಲಾದ ತಮ್ಮ ವ್ಯಕ್ತಿತ್ವಕ್ಕೆ ಆ ಕ್ಷಣಕ್ಕೆ ಒದಗಿ ಬಂದ ಘಳಿಗೆಯಷ್ಟೇ ಕಾರಣ. ತಮ್ಮ ಸ್ಮೃತಿಯಲ್ಲಿ ಆ 'ಘಟನೆ'ಯನ್ನು ತಂದುಕೊಳ್ಳುತ್ತಿದ್ದಂತೆ ಪ್ರಾಣೇಶಾಚಾರ್ಯರಿಗೆ ಮತ್ತೊಮ್ಮೆ ಚಂದ್ರಿಯನ್ನು ಅವಚಿಕೊಳ್ಳಬೇಕೆನಿಸುತ್ತದೆ. ಅವಳನ್ನು ಹುಡುಕಿಕೊಂಡು ಕುಂದಾಪುರಕ್ಕೆ ಹೋಗಬೇಕೆನಿಸುತ್ತದೆ. ಆದರೆ ಈಗ ಅವಳನ್ನು ಹುಡುಕಿಕೊಂಡು ಹೋಗಿ ಅವಳ ಸಂಗ ಮಾಡಿದರೆ ನನ್ನ ಕ್ರಿಯೆಗೆ ನಾನೇ ಸಂಪೂರ್ಣ ಜವಾಬ್ದಾರನಾದಂತೆ ಎಂದು ಭಾಸವಾಗುತ್ತದೆ.

ಆಗಲಾದರೂ ಹೀಗೆ ಆಕಸ್ಮಾತ್ ಹೊರಳಿ ಬಿಟ್ಟಿದ್ದರ ಸ್ಮೃತಿಯ ಸಂಕಟದಿಂದ ಪಾರಾಗಬಹುದು. ಕಾಡಿನಲ್ಲಿನ ಆ ಘಳಿಗೆ ಅಕಸ್ಮಾತ್ತಾಗಿ ಒದಗಿ ಬಂತು ನಿಜ. ಸ್ವಾಧೀನ ತಪ್ಪಿದರೂ ನಿಶ್ಚಯ ಮಾಡುವ ಜವಾಬ್ದಾರಿ ಅವರ ಮೇಲೆಯೇ ಇತ್ತು. ಮನುಷ್ಯನ ನಿಶ್ಚಯಕ್ಕೆ ಬೆಲೆಯಿರುವುದು ಹೀಗೆ ಸ್ವಾಧೀನ ತಪ್ಪುವುದು ಸಾಧ್ಯವಿರುವುದರಿಂದಲೇ ಹೊರತು ನಿಶ್ಚಯ ನೀರು ಕುಡಿದಷ್ಟು

ಸರಾಗವಾದ್ದರಿಂದಲ್ಲ. ನಾರಣಪ್ಪ ಹೇಗಾಗಬೇಕೆಂದು ನಿಶ್ಚಯಿಸಿ ಬದುಕಿದನೋ ಅಂತಹ ವ್ಯಕ್ತಿ ಅವನಾದ. ನಾನೂ ಇನ್ನೊಂದಾಗಬೇಕೆಂದು ನಿಶ್ಚಯಿಸಿ ಬದುಕಿದೆ. ಥಟ್ಟನೊಂದು 'ತಿರುವಿನಲ್ಲಿ ತಿರುಗಿಬಿಟ್ಟೆ'. ತಿರುಗಿ ಬಿಟ್ಟಿದ್ದರ ಜವಾಬ್ದಾರಿಯೂ ನನ್ನದು ಎಂಬುದು ನನಗೆ ಸ್ಪಷ್ಟವಾಗುವತನಕ ಸ್ವಾತಂತ್ರ್ಯವಿಲ್ಲ. ದ್ವಂದ್ವ ಜೀವನಕ್ಕೆ ನುಗ್ಗಿಬಂದು ಎರಡು ಸತ್ಯಗಳ ನಡುವೆ ತ್ರಿಶಂಕುವಾದೆ. ಆತಂಕ ಸರ್ವಸ್ವದ ಮೂಲವಿರುವುದು ಪ್ರಾಯಶಃ ಕನಸಿನಲ್ಲಿ ಎಂಬಂತೆ ತಾನು ಚಂದ್ರಿಯ ಜೊತೆ ಸಂಭೋಗ ಮಾಡಿದ್ದರಲ್ಲಿ.

ಸ್ವೇಚ್ಛೆಯಿಂದ, ಖುದ್ದಾಗಿ, ಸಂಪೂರ್ಣ ಎಚ್ಚರದಲ್ಲಿ, ಪರಿಪೂರ್ಣ ನಿಶ್ಚಯದಲ್ಲಿ ಒಂದು ಕ್ರಿಯೆಯನ್ನು ಮಾಡುವುದರ ಮೂಲಕ ಮಾತ್ರ ಇದರಿಂದ ಬಿಡುಗಡೆ. ನಿಶ್ಚಿತ ಕ್ರಿಯೆಯ ಮೂಲಕ ಮನುಷ್ಯನಾಗುತ್ತೇನೆ. ನನ್ನ ಜೀವನಕ್ಕೆ ನಾನೇ ಜವಾಬ್ದಾರನಾಗುತ್ತೇನೆ. ಮೇಳಿಗೆಯಲ್ಲಿ ಕಂಡ ಕೋಳಿ ಅಂಕದಿಂದ ಪ್ರಾಣೇಶಾಚಾರ್ಯರಿಗೆ ದಿಗಿಲಾಗುತ್ತದೆ. ಒಂದು ರಾಕ್ಷಸ ಲೋಕ ಥಟ್ಟನೆ ಬಂದಂತೆನಿಸುತ್ತದೆ. ಚಂದ್ರಿಯೊಡನೆ ಬಾಳಲು ನಿಶ್ಚಯಿಸಿದ ಅಧೋಲೋಕದ ಆಳದ ಕತ್ತಲೆಯಲ್ಲೆಲ್ಲೋ, ಗುಹೆಯಲ್ಲೆಲ್ಲೋ ಈ ಪರವಶ ಪ್ರಾಣಿಗಳ ಕಣ್ಣಿನ ಕಠೋರ ತತ್ಪರತೆಯೂ ಒಂದಂಶವಾದರೆ ಅಲ್ಲಿ ಬ್ರಾಹ್ಮಣನಾದ ತಾನು ಬಾಡಿ ಬಳಲಿ ಹೋಗಬಿಡಬಹುದೆಂದು ಪರಮಭೀತರಾಗಿ ಕೂತುಬಿಡುತ್ತಾರೆ. ಈ ಎಲ್ಲಾ ಕ್ರೂರ ತೀಕ್ಷ್ಣ ಭಾವಗಳ ಲೋಕದಲ್ಲಿ ಬದುಕುವ ಸಾಮರ್ಥ್ಯ ತನಗೆ ಖಂಡಿತಾ ಇಲ್ಲವೆಂಬುದು ಪ್ರಾಣೇಶಾಚಾರ್ಯರಿಗೆ ಖಚಿತವಾಗುತ್ತದೆ. ಕಾಮದ ಒಂದು ಪಾರ್ಶ್ವ ಮಾರ್ದವವಾದರೆ, ಇನ್ನೊಂದರಲ್ಲಿ ಈ ರಾಕ್ಷಸ ಛಲವಿರಬೇಕು. ನಾರಣಪ್ಪ ತನ್ನನ್ನು ಧಿಕ್ಕರಿಸಿ ನಡೆದ ಆ ದಿನ ತನ್ನ ವ್ಯಕ್ತಿತ್ವವೆಲ್ಲ ಕಂತಿದಂತಾಗಿ ಅನುಭವಿಸಿದ್ದ ಪುಕ್ಕಲು ಅವರಿಗೆ ಮರುಕಳಿಸುತ್ತದೆ.

ಮುಂದೆ ಪದ್ಮಾವತಿಯ ಮನೆಯಲ್ಲಿ ಪುಟ್ಟನ ಮೂಲಕ ಆಚಾರ್ಯರ ಬಾಳಿನ ನಿರ್ಧಾರವಾಗುತ್ತದೆ. ಕೊನೆಗೂ ಪ್ರಾಣೇಶಾಚಾರ್ಯರು ತಮ್ಮ ಕರ್ತವ್ಯ ಪ್ರಜ್ಞೆಗೆ ಮಹತ್ವವನ್ನು ನೀಡುತ್ತಾರೆ. ನಾರಾಣಪ್ಪನ ಶವ ಸಂಸ್ಕಾರದ ಕ್ರಿಯೆಯನ್ನು ತಾವೇ ಮಾಡಲು ನಿರ್ಧರಿಸಿ ಕುಂದಾಪುರಕ್ಕೆ ಹೋಗುವ ಬದಲು ತಿರುಗಿ ದೂರ್ವಾಸಪುರಕ್ಕೆ ಹೊರಡುತ್ತಾರೆ. ಆಕಸ್ಮಿಕ ಅನುಭವದ ಮೂಲಕ ಜೀವನ ಧರ್ಮದ ಅನುಭವವನ್ನು ಪಡೆದ ಅವರು ಮುಂದೆ ತಮ್ಮ ಕರ್ತವ್ಯ ಪ್ರಜ್ಞೆ ನೆರವೇರಿಸಲು ಸಿದ್ಧರಾಗುತ್ತಾರೆ.

ದೇಸಾಯಿ ಅವರ 'ಓಂ ಣಮೋ'ದಲ್ಲಿ ಕ್ರಿಶ್ಚಿಯನ್ ಧರ್ಮವನ್ನು ಬಿಟ್ಟು ಜೈನ ಧರ್ಮ ದೀಕ್ಷೆ ಪಡೆದ ಆ್ಯನ್ ಅಲ್ಲಿನ ತತ್ವಗಳಿಗೆ, ಕೆಲವು ಆಚಾರಗಳಿಗೆ ಹೊಂದಿಕೊಳ್ಳಲಾಗದೇ ಮೂಲ ಧರ್ಮಕ್ಕೇ ಮರಳಿದರೆ, ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯಲ್ಲಿ ಬ್ರಾಹ್ಮಣ್ಯವನ್ನು ಬಿಟ್ಟರೂ ಬ್ರಾಹ್ಮಣನಾಗಿಯೇ ಮರಣ ಹೊಂದುವ ನಾರಣಪ್ಪ ತಾನು ಬದುಕಿದ್ದಾಗಲೂ, ಸತ್ತ ನಂತರವೂ ದೂರ್ವಾಸಪುರದ ಬ್ರಾಹ್ಮಣರಿಗೆ, ಅವರ ವೈದಿಕ ಧರ್ಮದ ಆಚರಣೆಗಳಿಗೆ ಒಂದು ಸಮಸ್ಯೆಯಾಗಿಯೇ ಉಳಿಯುತ್ತಾನೆ. ಆದರೂ ನಾರಣಪ್ಪನ ಸಂಸ್ಕಾರ ಅವನ ನೆಚ್ಚಿನ ಚಂದ್ರಿಯ ಮುಖಾಂತರವೇ ನಡೆದುದನ್ನು ಗಮನಿಸಿದಾಗ ಅವನ ಜೀವನ ಧರ್ಮವೇ ಅವನಿಗೆ ಒಂದು ಮುಕ್ತಿಯನ್ನು ದೊರಕಿಸಿತು ಎಂದು ಹೇಳಬಹುದು. ಹೀಗೆ ಈ ಎರಡೂ ಕಾದಂಬರಿಗಳಲ್ಲಿ ನಡೆಯುವ ಧಾರ್ಮಿಕ ಸಂಘರ್ಷಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

೭.೩. ಓಂ ಣಮೋ ಮತ್ತು ಸಂಸ್ಕಾರ : ತೌಲನಿಕ ವಿವೇಚನೆ

ದೇಸಾಯಿ ಅವರ ಎಲ್ಲಾ ಬರವಣಿಗೆಯ ಹಿಂದೆ ಅಸ್ತಿತ್ವವಾದಿ ಚಿಂತನೆ ಕೆಲಸ ಮಾಡುತ್ತದೆ. ಯು.ಆರ್. ಅನಂತಮೂರ್ತಿಯವರೂ ಯುರೋಪಿನ ಸಾರ್ತ್ರೆಯ ಅಸ್ತಿತ್ವವಾದದ ಪ್ರಭಾವಕ್ಕೆ ಒಳಗಾದವರು. ಅಸ್ತಿತ್ವವಾದ ಐವತ್ತು ಮತ್ತು ಅರವತ್ತರ ದಶಕಗಳ ನವ್ಯಸಾಹಿತ್ಯದ ಒಂದು ಪ್ರಧಾನ ಚಿಂತನಕ್ರಮವೇ ಆಗಿತ್ತು. ನವೋದಯ ಸಾಹಿತ್ಯದಲ್ಲಿ ಪ್ರಧಾನ ಚಿಂತನ ಕ್ರಮವಾಗಿದ್ದ ಮಾನವತಾವಾದವು ಮನುಷ್ಯನನ್ನೂ ಸಾಮಾಜಿಕ ಸಂಬಂಧಗಳನ್ನೂ ತನ್ನ ಹಿನ್ನೆಲೆಯಲ್ಲಿ ಇಟ್ಟು ನೋಡಿತು. ಆದರೆ ಅಸ್ತಿತ್ವವಾದ ಮನುಷ್ಯನನ್ನು ಸಾಮಾಜಿಕ ಆವರಣದಿಂದ ಹಾಗೂ ಧರ್ಮದ ನೆಲೆಯಿಂದ ಬೇರ್ಪಡಿಸಿ ಏಕಾಕಿಯಾಗಿ ನೋಡುತ್ತದೆ. ಹಾಗಾಗಿ ಏಕಾಕಿತನ, ಪರದೇಶಿತನ, ಅನಾಥ ಪ್ರಜ್ಞೆ, ಸಂವಹನ ಸಾಧ್ಯವಾಗದ ರೀತಿ, ಸಂಬಂಧಗಳು ಮುರಿದು ಬೀಳುವ ಸ್ಥಿತಿ – ಇಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಆದರೆ ಇಂತಹ ಸಂದರ್ಭದಲ್ಲೂ ಸಾಮಾಜಿಕ ಪರಿಸರ ಇದ್ದೇ ಇರುತ್ತದೆಂಬುದನ್ನು ಮರೆಯಬಾರದು. ಆದರೆ ಇಲ್ಲಿ ವ್ಯಕ್ತಿಯ ನಿರ್ಣಯ ಕೊನೆಯಲ್ಲಿ ವೈಯಕ್ತಿಕವಾಗಿಯೇ ಉಳಿಯುತ್ತದೆ. ಆದ್ದರಿಂದ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾಜದ ರಚನೆಯನ್ನು ಬದಲಿಸಬೇಕೆಂಬ ನಿಲುವು ಇರುವುದಿಲ್ಲ.

ಆದರೆ ದೇಸಾಯಿ ಅವರು ತಮ್ಮ ಕೃತಿಗಳಲ್ಲಿ ಸಾರ್ತ್ರೆಯ, ಕಿರ್ಕೆಗಾರ್ಡ್‌ನ ಅಸ್ತಿತ್ವವಾದದ ಜೊತೆಗೆ ಮಾರ್ಕ್ಸ್‌ವಾದವನ್ನೂ ಒಳಗು ಮಾಡಿಕೊಂಡವರು. ಆದರೆ ಮಾರ್ಕ್ಸ್‌ವಾದಿ ಅಸ್ತಿತ್ವವಾದ ಸಾರ್ತ್ರೆಯಲ್ಲಿ ವ್ಯಕ್ತವಾಗುವಂತೆ ದೇಸಾಯಿ ಅವರಲ್ಲಿ ಅಭಿವ್ಯಕ್ತವಾಗುವುದಿಲ್ಲ. ಈ ಮಾರ್ಕ್ಸ್‌ವಾದಕ್ಕಿಂತ ದೇಸಾಯಿ ಅವರು ಹೆಚ್ಚಾಗಿ ಪ್ರಭಾವಿತವಾದದ್ದು ಎಂ.ಎನ್. ರಾಯ್ ಅವರ ರ್‍ಯಾಡಿಕಲ್ ಹ್ಯೂಮನಿಸಂನಿಂದ; ದೇಸಾಯಿ ಅವರು ರಾಯ್ ಅವರ ಪ್ರಭಾವಕ್ಕೆ ಒಳಗಾದರೂ ಕೊನೆಕೊನೆಗೆ ಶುದ್ಧ ಅಸ್ತಿತ್ವವಾದಿ ಚಿಂತನೆಯೊಂದಿಗೆ ನಿಂತವರು. ದೇಸಾಯಿ ಅವರು ಜೈನ ದಿಗಂಬರ ಪಂಥಕ್ಕೆ ಸೇರಿದ್ದರೂ ಜೈನ ತತ್ತ್ವ ಮತ್ತು ಆಚರಣೆಗಳಲ್ಲಿ ಅಷ್ಟಾಗಿ ಆಸಕ್ತಿ, ಶ್ರದ್ಧೆ ಹೊಂದಿದವರಂತೆ ಕಾಣುವುದಿಲ್ಲ. ಅವರು ತಮ್ಮ 'ಓಂ ಣಮೋ' ಎಂಬ ಕೊನೆಯ ಕಾದಂಬರಿಯನ್ನು ಬರೆಯುವುದಕ್ಕಾಗಿ ಜೈನ ತತ್ತ್ವಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾಗಿ ಅವರ ಈ ಕಾದಂಬರಿಯ ವಿವರಗಳಿಂದ ತಿಳಿದುಬರುತ್ತದೆ. ಅದೂ ಕೂಡ ತಮ್ಮ ಅಸ್ತಿತ್ವವಾದಿ ಚಿಂತನೆಗಳ ಹಿನ್ನೆಲೆಯಲ್ಲಿಯೇ ಅಭ್ಯಾಸ ಮಾಡಿದ್ದಾಗಿದೆ. ಆದರೆ ಅವರು ಹುಟ್ಟಿ ಬೆಳೆದ ಸಂಸ್ಕೃತಿಯಿಂದ ಜೈನ ಧರ್ಮದ ಸಾಮಾನ್ಯ ತತ್ತ್ವಗಳ ಪರಿಚಯ ಅವರಿಗೆ ಇದ್ದಿರಲಿಲ್ಲ ಎಂದು ಹೇಳಲೂ ಆಗುವುದಿಲ್ಲ.

ಅವರಿಗೆ ಜೈನಧರ್ಮದ ತತ್ತ್ವಗಳಲ್ಲಿ 'ಅನೇಕಾಂತವಾದ' ಮತ್ತು ಅದರ ಭಾಗವಾದ 'ಸ್ಯಾದ್‌ವಾದ'ಗಳು ಪರಿಚಯವಿದ್ದಿರಲೇಬೇಕು. 'ಅನೇಕಾಂತವಾದ'ದ ತತ್ತ್ವವೇನೆಂದರೆ, ಲೋಕದ ಸಂಕೀರ್ಣ ವಾಸ್ತವವನ್ನು ಅನೇಕ ದೃಷ್ಟಿಕೋನಗಳಿಂದ ನೋಡಬಹುದು ಎನ್ನುವುದು ಮತ್ತು ಆ ದೃಷ್ಟಿಗಳೆಲ್ಲಾ ಸತ್ಯವೇ ಆಗಿರುತ್ತವೆ ಎಂದು ಹೇಳುವುದು. ಆದರೆ ಈ ತತ್ತ್ವದ ಪ್ರಕಾರ ಸತ್ಯ ಎನ್ನುವುದು ಒಂದೇ ಅಲ್ಲ, ಹಲವು ಎಂಬುದು. ಇದಕ್ಕೆ ಪೂರಕವಾಗಿ 'ಸ್ಯಾದ್‌ವಾದ' ಎಲ್ಲಾ ಸತ್ಯಗಳೂ ಆಂಶಿಕ ಸತ್ಯಗಳು ಎಂದೂ, ಪೂರ್ಣ ಸತ್ಯ ಎಂಬುದು ಇಲ್ಲ ಎಂದು; ಇದರ ಪ್ರಕಾರ

ಸತ್ಯ ಹಾಗೂ ಇರಬಹುದು, ಹೀಗೂ ಇರಬಹುದು. ಈ ತತ್ತ್ವಗಳು ದೇಸಾಯಿ ಅವರ ಅಸ್ತಿತ್ವವಾದಕ್ಕೆ ಪೂರಕವಾಗಿದ್ದು ಅದನ್ನು ಮತ್ತಷ್ಟು ಬಲಪಡಿಸುತ್ತವೆ. ಈ ಬಗೆಯ ವ್ಯಕ್ತಿಯ ಖಚಿತವಾದ ಉತ್ತರ ದೊರೆಯದ ತೊಳಲಾಟ ಅಸ್ತಿತ್ವವಾದದಲ್ಲೂ ಇದೆ.

ಈ ತೊಳಲಾಟ, ಆತಂಕ, ಅನುಮಾನಗಳು ದೇಸಾಯಿ ಅವರ 'ಓಂ ಣಮೋ' ಕಾದಂಬರಿಯ ಕೆಲವು ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಅಲ್ಲಿಯ ಪಾತ್ರಗಳ ಸಮಸ್ಯೆಗಳಿಗೆ ಖಚಿತವಾದ ಇದೇ ಪರಿಹಾರ ಎಂಬುದು ಇಲ್ಲ. ಇಲ್ಲಿ ಸತ್ಯದ ಬಹುಮುಖತ್ವವನ್ನು ಅನ್ವೇಷಿಸಲು ದೇಸಾಯಿ ಅವರು ಧಾರ್ಮಿಕ ಸಮಸ್ಯೆಯನ್ನು ಬೇರೆ ಬೇರೆ ರೀತಿಯಲ್ಲಿ ನಿರ್ವಹಿಸುವುದನ್ನು ಕಾಣುತ್ತೇವೆ. ಇಲ್ಲಿ ಪಾತ್ರಗಳು ತೆಗೆದುಕೊಳ್ಳುವ ನಿರ್ಣಯಗಳ ಬಗೆಗಾಗಲೀ, ಅವುಗಳ ಸ್ವಭಾವ ವರ್ತನೆಗಳ ಬಗೆಗಾಗಲೀ ದೇಸಾಯಿ ಅವರು ಯಾವುದೇ ಬಗೆಯ ನೈತಿಕ ನಿರ್ಣಯಗಳನ್ನು ಕೊಡಲು ಹೋಗುವುದಿಲ್ಲ. ಬದುಕನ್ನು ಅರ್ಥಪೂರ್ಣವಾಗಿ ಹಾಗೂ ಸಂಪೂರ್ಣವಾಗಿ ಅನುಭವಿಸಬೇಕು ಎನ್ನುವುದು ಅವರ ಮುಖ್ಯ ಕಾಳಜಿಯಾಗಿರುತ್ತದೆ. ಈ ಅನುಭವಕ್ಕಾಗಿ ಇಲ್ಲಿಯ ಕೆಲವು ಪಾತ್ರಗಳು, ಕೆಲವು ಸಂದರ್ಭಗಳಲ್ಲಿ ಉದ್ದೇಶಪೂರ್ವಕವಾಗಿಯೇ ತಮ್ಮ ಎಲ್ಲೆಗಳನ್ನು ಮೀರುತ್ತವೆ. ಈ ಮೀರುವಿಕೆ ಲೈಂಗಿಕ ಹೆಣ್ಣು ಗಂಡಿನ ಲೈಂಗಿಕ ಸಂಬಂಧಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದು ದೇಸಾಯಿ ಅವರ ಬರವಣಿಗೆಯ ವೈಶಿಷ್ಟ್ಯ ಕೂಡ ಆಗಿದೆ. ಇದಕ್ಕೆ ಅವರಿಗೆ ಡಿ.ಎಚ್. ಲಾರೆನ್ಸ್‌ನ ಕಾದಂಬರಿಗಳ ಪ್ರಭಾವ ಇರುವುದನ್ನೂ ತಳ್ಳಿಹಾಕುವಂತಿಲ್ಲ.

ಹಿಂದಿನ ಪುರಾಣ, ಇತಿಹಾಸ, ಧರ್ಮದ ವಿವರಣೆಗಳನ್ನು ಹೊಸ ಅರ್ಥದಲ್ಲಿ ಸಮಕಾಲೀನ ಬದುಕಿನ ಹಿನ್ನೆಲೆಯಲ್ಲಿ ಮರು ಅರ್ಥೈಸುವ ಪ್ರಕ್ರಿಯೆ ಹತ್ತನೆಯ ಶತಮಾನದ ಪಂಪನ ಕಾಲದಲ್ಲಿಯೇ ಶುರುವಾಯಿತು. ಅದು ಅಲ್ಲಿಂದ ಅವ್ಯಾಹತವಾಗಿ ಇಪ್ಪತ್ತನೆಯ ಶತಮಾನದವರೆಗೂ ಹರಿದು ಬಂದಿದೆ. ಕುವೆಂಪು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ವಾಲ್ಮೀಕಿ ರಾಮಾಯಣದ ಪುರಾಣದ ವಸ್ತುವನ್ನು ಆಕರವಾಗಿ ತೆಗೆದುಕೊಂಡರೂ ಇಪ್ಪತ್ತನೆಯ ಶತಮಾನದ ಮಲೆನಾಡು, ಪರಿಸರ, ವಿಜ್ಞಾನ, ಆಧ್ಯಾತ್ಮ, ಜನಜೀವನ, ಸ್ತ್ರೀಯರ ಪ್ರಾತಿನಿಧ್ಯ ಎಲ್ಲವನ್ನೂ ಹೊಸ ದೃಷ್ಟಿಕೋನದಿಂದ ನಿರ್ವಹಿಸಿದ್ದಾರೆ. ಹಾಗೆಯೇ ಗೋಪಾಲಕೃಷ್ಣ ಅಡಿಗರು ತಮ್ಮ ಹಲವಾರು ಕವಿತೆಗಳಲ್ಲಿ ಪುರಾಣ, ವೈದಿಕಧರ್ಮದ ಸಂಗತಿಗಳನ್ನು ಬಳಸಿದ್ದಾರೆ. ಅನಂತಮೂರ್ತಿಯವರು ತಮ್ಮ 'ಸಂಸ್ಕಾರ' ಕಾದಂಬರಿ, 'ಘಟಶ್ರಾದ್ಧ' ಮುಂತಾದ ಕಥೆಗಳಲ್ಲಿ ಹಳೆಯದನ್ನು ಹೊಸ ಅರ್ಥಗಳಲ್ಲಿ ಬಳಸಿ ಇಂದಿನ ಜೀವನಕ್ಕೆ ಅರ್ಥಪೂರ್ಣಗೊಳಿಸಲು ಯತ್ನಿಸಿದ್ದಾರೆ. ಹಾಗೆಯೇ ದೇಸಾಯಿ ಅವರು ಕೂಡ ತಮ್ಮ ಮೊದಲನೆಯ ಕಥೆಗಳಲ್ಲೊಂದಾದ 'ಶೋಭನೆಯ ಹಾದಿ'ಯಿಂದ ಆರಂಭಿಸಿ, ತಮ್ಮ ಈ ಕೊನೆಯ ಕಾದಂಬರಿಯಾದ 'ಓಂ ಣಮೋ'ವರೆಗೆ ತಮ್ಮ ಅನೇಕ ಕೃತಿಗಳಲ್ಲಿ ಹಳೆಯ ಧರ್ಮ, ಮಾತು, ತತ್ತ್ವ ಪರಿಕಲ್ಪನೆಗಳನ್ನು ಹೊಸ ಅರ್ಥದಲ್ಲಿ ಬಳಸಿರುವುದನ್ನು ಕಾಣಬಹುದಾಗಿದೆ.

ಶಾಂತಿನಾಥ ದೇಸಾಯಿ ಅವರು ಆರಂಭದಲ್ಲಿ ಅಸ್ತಿತ್ವವಾದಕ್ಕೆ ಪ್ರಭಾವಿತರಾದರೂ ಅದರಿಂದ ಬಹುಬೇಗ ಬಿಡುಗಡೆಯಾಗಿ ಆಧುನಿಕತೆಯ ಕಡೆ ಬದಲಾದ ಲೇಖಕ. ಅದರಲ್ಲೂ ಆಧುನಿಕತೆ ಎಂದರೆ ಮಧ್ಯಮ ವರ್ಗದ ವಿದ್ಯಾವಂತ ವರ್ಗದ ಶಿಕ್ಷಿತ ಪುರುಷ ಹಾಗೂ ಮಹಿಳೆಯರ

ಅಸ್ತಿತ್ವಗಳು, ಸಮಸ್ಯೆಗಳನ್ನು ಹಾಗೂ ಸಂಘರ್ಷಗಳನ್ನು ಪ್ರಧಾನವಾಗಿ ಅಭಿವ್ಯಕ್ತಿಸಿದವರು. ಹಾಗೆಯೇ ಮಾರ್ಕ್ಸ್‌ವಾದದ ಮೂಲ ಆಶಯಗಳಾದ ಬಡತನ ಹಾಗೂ ಅಸಮಾನತೆಯ ವಸ್ತುಗಳಿಂದ ಬಿಡುಗಡೆ ಪಡೆದು ಎಂ.ಎನ್. ರಾಯ್ ಅವರ ರ‍್ಯಾಡಿಕಲ್ ಹ್ಯೂಮನಿಸಂ ತತ್ತ್ವದ ಕಡೆ ಹೊರಟವರು. ಈ ತತ್ತ್ವದ ಮೂಲ ಪರಿಕಲ್ಪನೆಯಾದ ಸ್ತ್ರೀ-ಪುರುಷರ ಸಂಬಂಧಗಳನ್ನು ವಿವರಿಸುವ, ಅವರ ಸಮಸ್ಯೆಗಳನ್ನು ಬಿಡಿಸುವ ಉದಾರತಾ ಮಾನವತಾವಾದದ ಕಡೆ ತಮ್ಮ ಕೊನೆ ಕೊನೆಯ ಅನೇಕ ಕಥೆ ಮತ್ತು ಕಾದಂಬರಿಗಳಲ್ಲಿ ಬದಲಾದದು. ಜೈನಧರ್ಮದಲ್ಲಿ ಸ್ತ್ರೀಗೆ ಮೋಕ್ಷವಿದೆಯೇ? ಹಾಗಾದರೆ ಆನ್ ಯಾಕೆ ಜೈನಳಾದರೂ ಮತ್ತೆ ವಾಪಸ್ಸು ಕ್ರಿಶ್ಚಿಯನ್ ಧರ್ಮಕ್ಕೆ ಹಿಂತಿರುಗುತ್ತಾಳೆ?

ಹತ್ತನೆಯ ಶತಮಾನದ ಪಂಪ, ರನ್ನರ ನಂತರ ಕನ್ನಡ ಸಾಹಿತ್ಯದ ಆರಂಭಿಕ ದಿನಗಳ ಜೈನ ಲೇಖಕರನ್ನು ಬಿಟ್ಟರೆ, ನಂತರ ಮತ್ತೆ ಜೈನ ಹಿನ್ನೆಲೆಯುಳ್ಳ ಒಬ್ಬ ಮಹತ್ವದ ಲೇಖಕನನ್ನು ಕಾಣುವುದು ಇಪ್ಪತ್ತನೆಯ ಶತಮಾನದ ಶಾಂತಿನಾಥ ದೇಸಾಯಿ ಅವರಲ್ಲಿಯೇ; ಇದೇ ಕಾಲದಲ್ಲಿ ಮಿರ್ಜಿ ಅಣ್ಣಾರಾಯರು ಜೈನಧರ್ಮದ ಬಗ್ಗೆ ಅಧ್ಯಯನ, ಜೈನ ತತ್ತ್ವಗಳನ್ನು ಹೇಳುವ 'ನಿಸರ್ಗ'ದಂತಹ ಒಂದು ಉತ್ತಮ ಕಾದಂಬರಿಯನ್ನು ಬರೆದರೂ ಅವರೊಬ್ಬ ಇಪ್ಪತ್ತನೆಯ ಶತಮಾನದ ಒಬ್ಬ ಪ್ರಧಾನ ಲೇಖಕ ಎಂದು ಹೇಳುವುದು ಕಷ್ಟ. ಆದರೆ ಪಂಪ, ರನ್ನರ ನಂತರ ಇಂದಿನ ಸಮಕಾಲೀನ ದಿನಗಳ ಅನುಭವಗಳ ಹಿನ್ನೆಲೆಯಲ್ಲಿ ಜೈನ ಧರ್ಮದ ತಾತ್ತ್ವಿಕ ಪರಿಕಲ್ಪನೆಗಳಿಗೆ ತಮ್ಮ 'ಓಂ ಣಮೋ' ಕಾದಂಬರಿಯಲ್ಲಿ ಹೊಸ ಅರ್ಥವನ್ನು, ಹೊಸ ವ್ಯಾಖ್ಯೆಯನ್ನು ತಂದುಕೊಟ್ಟ ಶ್ರೇಯಸ್ಸು ಮಾತ್ರ ದೇಸಾಯಿ ಅವರಿಗೆ ಸಲ್ಲುತ್ತದೆ. ಜೈನ ಸಾಹಿತ್ಯ ಪರಂಪರೆ ಯನ್ನು ಮುಂದುವರಿಸಿ ವಿಸ್ಮೃತಿಗೆ ಸರಿದು ಹತ್ತು ಶತಮಾನಗಳು ಕಳೆದದ್ದನ್ನು ಮತ್ತೆ ಮುನ್ನೆಲೆಗೆ ತಂದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದಕ್ಕೆ ಒಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿದ್ದು ದೇಸಾಯಿ ಅವರು ಎಂಬುದನ್ನು ಮರೆಯಬಾರದು.

ಆದರೆ ಅನಂತಮೂರ್ತಿಯವರು ದೇಸಾಯಿ ಅವರಂತೆ ವೈದಿಕ ಪರಂಪರೆಯ ತಿಳುವಳಿಕೆಯನ್ನು ಮುಂದುವರಿಸಲಿಲ್ಲ. ತಮ್ಮ 'ಸಂಸ್ಕಾರ' ಕಾದಂಬರಿಯಲ್ಲಿ ಅನಂತಮೂರ್ತಿ ಅವರು ವೈದಿಕ ಧರ್ಮದ ಜಿಡ್ಡುಗಳಿಗೆ ಶಾಣೆ ಹಿಡಿಯಲು ಯತ್ನಿಸಿ ಅದರ ಶುದ್ಧೀಕರಣಕ್ಕೆ ಪ್ರಯತ್ನ ಮಾಡಿದ್ದು ನಿಜ. ಅದರಿಂದ ಅನಂತಮೂರ್ತಿಯವರು ಕಟ್ಟಾ ವೈದಿಕಧರ್ಮದ ಅನುಯಾಯಿಗಳಿಂದ ಪ್ರತಿಭಟನೆ, ಟೀಕೆಯನ್ನು ಅನುಭವಿಸಿದ್ದೂ ಉಂಟು. ಈ 'ಸಂಸ್ಕಾರ' ಕಾದಂಬರಿಯನ್ನು ಇಂಗ್ಲೀಷಿನಲ್ಲಿ ಓದಿದ ವಿ.ಎಸ್. ನೈಪಾಲ್ ಇದನ್ನು 'ಅನಾಗರೀಕ ಸಂಸ್ಕೃತಿಯ ಕಾದಂಬರಿ' (ಬಾರ್ಬರಿಕ್ ಕಲ್ಚರ್ ಆಫ್ ನಾವೆಲ್) ಎಂಬರ್ಥದಲ್ಲಿ ಕರೆದದ್ದೂ ಉಂಟು. ಒಟ್ಟಾರೆ 'ಸಂಸ್ಕಾರ' ಮತ್ತು 'ಓಂ ಣಮೋ' ಕಾದಂಬರಿಗಳು ಎರಡು ಸಾಂಪ್ರದಾಯಕ ಸಮಾಜಗಳನ್ನು ವಿಭಿನ್ನ ನೆಲೆಯಲ್ಲಿ ಚಿತ್ರಿಸುತ್ತವೆ. 'ಸಂಸ್ಕಾರ' ಕಾದಂಬರಿಯು ಬ್ರಾಹ್ಮಣ ಅಥವಾ ವೈದಿಕ ಸಮಾಜವನ್ನು ಚಿತ್ರಿಸಿದರೆ, 'ಓಂ ಣಮೋ' ಕಾದಂಬರಿಯು ಜೈನ ಸಮಾಜವನ್ನು ಚಿತ್ರಿಸುತ್ತದೆ. ಆದರೆ ಜೈನ ಸಮಾಜದ ಚಿತ್ರಣ 'ಓಂ ಣಮೋ' ಕಾದಂಬರಿಯಲ್ಲಿ ಹೆಚ್ಚು ಪ್ರಬುದ್ಧವಾಗಿ ಚಿತ್ರಿತವಾಗಿದೆ; ದೇಸಾಯಿ ಅವರು ಈ ಕಾದಂಬರಿಯ ಮೂಲಕ ಜೈನ ಸಮಾಜದಲ್ಲಿನ ಪೊಳ್ಳುತನಗಳು,

ಅರ್ಥಹೀನ ಆಚರಣೆಗಳು, ಕ್ರೌರ್ಯಗಳನ್ನು ಅನಾವರಣ ಮಾಡುವುದರ ಜೊತೆಗೆ, ಅದೇ ಜೈನ ಸಮಾಜದ ಜಿನತತ್ತ್ವಗಳಲ್ಲಿ ಇಂದಿನ ಸಮಾಜಕ್ಕೆ ಬೇಕಾಗಿರುವ ಅಂಶಗಳು ಇರುವುದನ್ನು ತೆರೆದಿಡುತ್ತಾರೆ. ಜೈನ ಸಮಾಜದ ನೀತಿಶಾಸ್ತ್ರ, ತತ್ತ್ವಜ್ಞಾನ, ಸಂಯಮ, ಸಹಿಷ್ಣುತೆ, ಬುದ್ಧ, ಗೊಮ್ಮಟ, ಮಾರ್ಕ್ಸ್, ಗಾಂಧೀಜಿಯ ವಿಚಾರಧಾರೆಗಳನ್ನೆಲ್ಲಾ ಚರ್ಚೆಗೆ ಹಲವು ಪಾತ್ರಗಳ ಮೂಲಕ ತಂದು ಹೊಸ ತಿಳುವಳಿಕೆಯನ್ನು ಮೂಡಿಸುತ್ತಾರೆ. ಈ ದೃಷ್ಟಿಯಿಂದ 'ಓಂ ಣಮೋ' ಕಾದಂಬರಿಯ ಆರನೆಯ ಅಧ್ಯಾಯವು ದೇಸಾಯಿ ಅವರ ಬೌದ್ಧಿಕ ಚಿಂತನೆಗಳ ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ.

ಆದರೆ ಅನಂತಮೂರ್ತಿ ಅವರು ತಮ್ಮ 'ಸಂಸ್ಕಾರ' ಕಾದಂಬರಿಯಲ್ಲಿ ಸಾಂಪ್ರದಾಯಿಕ ಸಮಾಜವನ್ನು ಲೇವಡಿ ಮಾಡುವಲ್ಲಿ ಹಾಗೂ ಟೀಕೆ ಮಾಡುವಲ್ಲಿಯೇ ಹೆಚ್ಚು ಗಮನ ನೀಡುತ್ತಾರೆ. ಇದರಲ್ಲಿರುವ ಯಾವ ವಿಚಾರಗಳು ಅರ್ಥಪೂರ್ಣ ಎಂಬ ಶೋಧನೆಗೆ ತೊಡಗುವುದಿಲ್ಲ. ಆದರೆ ಅಂತಹ ಒಂದು ಹುಡುಕಾಟಕ್ಕೆ ಪ್ರಾಣೇಶಚಾರ್ಯನ ಪಾತ್ರಕ್ಕೆ ಹೆಚ್ಚು ಅವಕಾಶವಿತ್ತು. ಆದರೆ ಆತನೂ ಕೊನೆಗೆ ನಾರಣಪ್ಪನ ದಾರಿಯಲ್ಲೇ ಹೊರಟು ಬಿಡುತ್ತಾನೆ. ಇದರಿಂದ ಕಾದಂಬರಿಯು ಯಾವುದೇ ಹೊಸ ಸಾಧ್ಯತೆಯನ್ನು ಸೂಚಿಸುವುದಿಲ್ಲ. ಆದರೆ ಬಹು ವರ್ಷಗಳ ನಂತರ ತಮ್ಮ ಕೊನೆಗಾಲದಲ್ಲಿ ಅನಂತಮೂರ್ತಿ ಅವರು ಬರೆದ ತಮ್ಮ 'ಭವ' ಕಾದಂಬರಿಯಲ್ಲೂ ಸಹ ಈ ಸೋಲನ್ನು ಅವರು ಗೆಲ್ಲುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ದೇಸಾಯಿ, ಆಮೂರ ಮುಂತಾದವರು ಸಹ ಗುರ್ತಿಸಿದ್ದಾರೆ.

ಪರಂಪರೆಯನ್ನು ಮರುಸೃಷ್ಟಿ ಮಾಡಿದ ನವ್ಯಲೇಖಕರಲ್ಲಿ ದೇಸಾಯಿ ಅವರು ಒಬ್ಬ ಅಗ್ರಮಾನ್ಯ ಲೇಖಕರಾಗಿದ್ದಾರೆ. ಈ ಇಬ್ಬರೂ ಒಂದೇ ಓರಿಗೆಯ ಲೇಖಕರಾಗಿ ನವ್ಯ ಸಾಹಿತ್ಯ ಸಂದರ್ಭದಲ್ಲಿ ಹೊರಹೊಮ್ಮಿದ ಲೇಖಕರು. ಇಬ್ಬರೂ ಇಂಗ್ಲೀಷ್ ಪ್ರಾಧ್ಯಾಪಕರು, ಇಬ್ಬರೂ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳಾಗಿ ಶೈಕ್ಷಣಿಕ ಕ್ಷೇತ್ರದಲ್ಲೂ ತಮ್ಮದೇ ಆದ ಛಾಪನ್ನು ಮೂಡಿಸಿದವರು. ಒಬ್ಬರು ಬ್ರಾಹ್ಮಣ ಸಮಾಜಕ್ಕೆ ಸೇರಿದವರಾದರೆ, ಮತ್ತೊಬ್ಬರು ಜೈನ ಸಮಾಜಕ್ಕೆ ಸೇರಿದವರು. ಅನಂತಮೂರ್ತಿಯವರ ಕೃತಿಗಳ ಪಾತ್ರಗಳು ಸಾಂಪ್ರದಾಯಿಕ ಬ್ರಾಹ್ಮಣ ಸಮಾಜಕ್ಕೆ ಸೇರಿದವರು. ತಮ್ಮ ಸಮಾಜದ ವಿರುದ್ಧ ಪ್ರತಿಭಟಿಸುವವರು. ನಾರಯಣಪ್ಪನ ಪ್ರತಿಭಟನೆಯೇ ಇದಕ್ಕೆ ಉದಾಹರಣೆಯಾಗಬಲ್ಲದು. ಆದರೆ ದೇಸಾಯಿ ಕೃತಿಗಳ ಪಾತ್ರಗಳು ಯುವಕರು ; ಕಾಲೇಜು ವಿಶ್ವವಿದ್ಯಾಲಯಗಳಲ್ಲಿರುವವರು; ನಗರವಾಸಿಗಳು, ಜೊತೆಗೆ ಅವರ ಜೀವನ ಆಧುನಿಕ ಬದುಕಿಗೆ ಹಂಬಲಿಸುವಂತಹದ್ದು ಮತ್ತು ಆಧುನಿಕತೆಯ ಬಗ್ಗೆ ವಿಮರ್ಶಾತ್ಮಕವಾಗಿ ಚಿಂತಿಸುವವರು. ಅನಂತಮೂರ್ತಿಯವರು ತಮ್ಮ ಬಾಲ್ಯದ ನೆನಪುಗಳಿಗೆ ಹೆಚ್ಚು ಒಲಿದವರಾದರೆ, ದೇಸಾಯಿ ಅವರು ತಮ್ಮ ಬಾಲ್ಯದ ಜೊತೆಗೆ ಪ್ರಬುದ್ಧವಾದ ವಿಚಾರಗಳಿಗೂ ಒತ್ತು ಕೊಟ್ಟವರು. ದೇಸಾಯಿ ಅವರ 'ವಿಕ್ಷೇಪ' ಕಾದಂಬರಿಯ ರಾಹುಲ 'ಆಧುನಿಕ ರಾಕ್ಷಸ' ಎಂದು ಕರೆಯಬಹುದಾದಂತಹ ಪಾತ್ರ. ಬದುಕಿನ ಕೇಡಿನ ಪರಿಕಲ್ಪನೆ ದೇಸಾಯಿ ಅವರ ಕೃತಿಗಳಲ್ಲಿ ಆಧುನಿಕ ವಿವರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಕೇಡಿನ ಅಂದರೆ ಈವಿಲ್‌ನ ಚಿತ್ರಣ ಅನಂತಮೂರ್ತಿಯವರ ಕೃತಿಗಳಲ್ಲಿ ಯಾಕೋ ಗೌಣ.

ಇಲ್ಲಿ ರಾಹುಲನನ್ನು 'ಸಂಸ್ಕಾರ'ದ ನಾರಣಪ್ಪನ ಪಾತ್ರದ ಜೊತೆ ಹೋಲಿಸಬಹುದಾಗಿದೆ; ಇಬ್ಬರೂ ಲಂಪಟರು. ಆದರೆ ರಾಹುಲನ ಲಂಪಟತೆ ಆಧುನಿಕವಾದದ್ದು. ನಗರದ ಜೀವನ ದೇಸಾಯಿ ಅವರ ಕೃತಿಗಳಲ್ಲಿ ಢಾಳಾಗಿ ಕಾಣಿಸಿಕೊಳ್ಳುತ್ತದೆ; 'ಓಂ ಣಮೋ' ಕಾದಂಬರಿಯ ಜೈನಧರ್ಮದ ವ್ಯಾಪ್ತಿ ಅಂತಾರಾಷ್ಟ್ರೀಯ ಮಟ್ಟದ್ದು; ಹಾಗೆಯೇ ವೈದಿಕ ಧರ್ಮದ ಸಂಪ್ರದಾಯ, ಪರಂಪರೆಯನ್ನು ಪ್ರತಿನಿಧಿಸುವ 'ಸಂಸ್ಕಾರ' ಕಾದಂಬರಿಯ ವಸ್ತು ಕೂಡ ಅಂತಾರಾಷ್ಟ್ರೀಯ ಮಟ್ಟದ್ದೇ ಆಗಿದೆ. 'ಓಂ ಣಮೋ' ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾಗಿದೆ. ಪಂಪ, ರನ್ನರ ಕೃತಿಗಳಲ್ಲಿ ಕಾಣಿಸಿದ್ದ ಜೈನ ಪರಿಕಲ್ಪನೆಗಳು ಪ್ರಸ್ತುತ ಕಾಲಕ್ಕೂ ಹೇಗೆ ಸಂಗತವಾಗಬಲ್ಲವು ಎಂಬುದನ್ನು ಇದರಲ್ಲಿ ಹುಡುಕುವಂತೆ ಮಾಡಿದೆ. ಪರಂಪರೆಯನ್ನು ಹೀಗೆ ಮರುಸೃಷ್ಟಿಸಿಕೊಟ್ಟವರ ಸಾಲಿಗೆ ದೇಸಾಯಿ ಅವರು ನಿಲ್ಲುತ್ತಾರೆ. ಇದು ಕನ್ನಡ ಸಾಹಿತ್ಯ ಸಂಸ್ಕೃತಿಯ ಹೆಗ್ಗಳಿಕೆ ಮಾತ್ರವಲ್ಲದೆ, ಭಾರತೀಯ ಇತರೆ ಭಾಷೆಗಳಲ್ಲಾದರೂ ಒಂದು ಮಹತ್ವದ ದಾಖಲೆಯಾಗಿದೆ.

ಆಕರ ಹಾಗೂ ಆಧಾರ

೧. ಓಂ ಣಮೋ (೧೯೯೮) : ಶಾಂತಿನಾಥ ದೇಸಾಯಿ, ಸ್ವಪ್ನ ಪ್ರಕಾಶನ, ಬೆಂಗಳೂರು, ೧೯೯೮.

೨. ಸಂಸ್ಕಾರ (೧೯೬೫) : ಯು.ಆರ್. ಅನಂತಮೂರ್ತಿ, ಅಕ್ಷರ ಪ್ರಕಾಶನ, ಸಾಗರ, ಹದಿಮೂರನೆಯ ಆವೃತ್ತಿ, ೨೦೦೮.

೩. ಶಾಂತಿನಾಥ ದೇಸಾಯಿ ವಾಚಿಕೆ : (ಸಂ.) ರಾಮಚಂದ್ರದೇವ, ನುಡಿ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೦.

೪. ಶಾಂತಿನಾಥ ದೇಸಾಯಿ ಸಮಗ್ರ ಕಥೆಗಳು : ಪ್ರಸ್ತಾವನೆ – ಗಿರಡ್ಡಿ ಗೋವಿಂದರಾಜ, ಸ್ವಪ್ನ ಪ್ರಕಾಶನ, ಬೆಂಗಳೂರು, ಪ್ರಥಮ ಮುದ್ರಣ ೨೦೦೧, ಎರಡನೆ ಮುದ್ರಣ ಆವೃತ್ತಿ ೨೦೧೩.

ಅಧ್ಯಾಯ : ಎಂಟು

ಅಧ್ಯಯನದ ಫಲಿತಗಳು

ಅಧ್ಯಾಯ : ಎಂಟು

ಅಧ್ಯಯನದ ಫಲಿತಗಳು

ಸಾಮಾಜಿಕ ವಾಸ್ತವತೆಯ ವೈರುಧ್ಯಗಳನ್ನು ಗುರುತಿಸುವಿಕೆ ಆಧುನಿಕತೆ ಮೊದಲು ಕಥೆ, ಕಾದಂಬರಿಯಂತಹ ಆಧುನಿಕ ಕಥನ ಸಾಹಿತ್ಯದಲ್ಲಿ ಕಾಣಿಸಿಕೊಂಡಿದ್ದು ಚಾರಿತ್ರಿಕವಾಗಿ ನಿಜ. ೧೮೭೫ ರಿಂದ ೧೯೩೦ರ ನಡುವಿನ ಕಾಲವನ್ನು ಕನ್ನಡ ಕಥೆ, ಕಾದಂಬರಿಯ ಉದಯದ ಕಾಲ ಎಂದು ಕನ್ನಡ ಸಾಹಿತ್ಯ ಚರಿತ್ರೆ ಗುರುತಿಸಿದೆ. ಇದಕ್ಕೆ ಮುಖ್ಯ ಪ್ರೇರಣೆ ಇಂಗ್ಲೀಷ್ ಶಿಕ್ಷಣ, ಹಳಗನ್ನಡ ಸಾಹಿತ್ಯದ ಕಥನಗಳು, ಬಂಗಾಲಿ ಹಾಗೂ ಮರಾಠಿ ಭಾಷೆಗಳಿಂದ ಅನುವಾದವಾಗಿ ಕನ್ನಡಕ್ಕೆ ಬಂದ ಭಾರತದ ದೇಸೀ ಕಥೆ, ಕಾದಂಬರಿಗಳು. ಈ ಪ್ರೇರಣೆ – ಪ್ರಭಾವಗಳ ಸಮಸ್ಯೆ ಬರೀ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೂ ಅನ್ವಯವಾಗುವಂತದ್ದಾಗಿದೆ. ಆದರೆ ಈ ಕಾಲದ ಬಹುಪಾಲು ಕನ್ನಡದ ಲೇಖಕರೆಲ್ಲಾ ವೈದಿಕ ಸಂಸ್ಕೃತಿಯಲ್ಲಿ ಗಾಢವಾದ ಶ್ರದ್ಧೆಯನ್ನುಳ್ಳವರಾಗಿದ್ದರು. ಅವರ ಕಥನಗಳಲ್ಲಿ ಕಾಲ್ಪನಿಕತೆ, ಧಾರ್ಮಿಕತೆ ಹಾಗೂ ವಾಸ್ತವ – ಕಾಲ್ಪನಿಕ ಅಂಶಗಳಲ್ಲಿ ಸಮನ್ವಯ ಸಾಧಿಸುವಲ್ಲಿ ಪ್ರಯತ್ನಿಸಿದವರು. ನೀತಿ, ಆದರ್ಶ, ಮೋಕ್ಷ, ಪುರಾಣ, ಕಥೆ, ನೈತಿಕತೆ, ಸುಶಿಕ್ಷಿತ ಮಧ್ಯಮವರ್ಗದಲ್ಲಿ ಉತ್ತಮ ಅಭಿರುಚಿ ಸೃಜಿಸುವುದು ಮುಂತಾದ ಸಾಮಾಜಿಕ ಸ್ವರೂಪದ ಅಂಶಗಳಿಗೆ ತಮ್ಮ ಕಥನಗಳಲ್ಲಿ ಹೆಚ್ಚು ಒತ್ತು ಕೊಟ್ಟವರು. ಆದರೆ ಈ ಅವಧಿಯಲ್ಲಿ ಶಿವರಾಮಕಾರಂತ, ಕುವೆಂಪು, ಶ್ರೀರಂಗ ಮುಂತಾದ ಲೇಖಕರು ಈ ಅಂಶಗಳಿಗಿಂತ ಭಿನ್ನವಾಗಿ ಬರೆಯಲು ಪ್ರಯತ್ನ ಮಾಡುತ್ತಲೇ ಇದ್ದರು. ೧೯೩೦ರಿಂದ ೧೯೫೦ರ ಅವಧಿಯಲ್ಲಿ ಬಂದ ಕನ್ನಡದ ಕಥೆ, ಕಾದಂಬರಿ ಸಾಹಿತ್ಯದಲ್ಲಿ ವಾಸ್ತವ ಮಾರ್ಗ ದಟ್ಟವಾಗಿ ಕಾಣಿಸಿಕೊಳ್ಳುತ್ತದೆ. ನವೋದಯ ಹಾಗೂ ಪ್ರಗತಿಶೀಲ ಕಥೆ, ಕಾದಂಬರಿಗಳ ಸುಗ್ಗಿ ಕಾಲ ಇದು. ಸುಶಿಕ್ಷಿತ ಮಧ್ಯಮವರ್ಗ, ದಲಿತ ಲೋಕ, ಊಳಿಗಮಾನ್ಯ ಪದ್ಧತಿ, ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯ, ಜೀತ, ಶೋಷಣೆ, ವೇಶ್ಯಾವೃತ್ತಿ, ದಣಿ–ಒಡೆಯರ ಸಂಬಂಧ ಮುಂತಾದ ಸಮಾಜದ ವಾಸ್ತವ ಸಂಗತಿಗಳು ಈ ಘಟ್ಟದ ಕಥಾಸಾಹಿತ್ಯದಲ್ಲಿ ಪ್ರಧಾನವಾಗಿ ಕಾಣಿಸಿಕೊಂಡವು. ಇಂತಹ ಸಾಮಾಜಿಕ ವಾಸ್ತವತೆಯ ವೈರುಧ್ಯಗಳನ್ನು ಈ ಅಧ್ಯಯನದ ಪೂರ್ವದಲ್ಲಿ ಗುರುತಿಸಲಾಗಿದೆ.

ದೇಸಾಯಿ ಅವರ ಪರಿವರ್ತನೆಯ ಧಾರೆಗಳನ್ನು ಗುರುತಿಸುವಿಕೆ

೧೯೫೦ರಿಂದ ೧೯೭೦ರ ನಡುವಿನ ನವ್ಯಕಥನ ಮತ್ತು ೧೯೭೦–೮೦ರ ದಶಕಗಳ ನಂತರ ಕಾಣಿಸಿಕೊಂಡ ದಲಿತ–ಬಂಡಾಯ ಕಥಾಸಾಹಿತ್ಯದ ಮುಖ್ಯ ಧಾರೆಗಳನ್ನು ಈ ಅಧ್ಯಯನದಲ್ಲಿ

ಗುರುತಿಸಲಾಗಿದೆ. ೧೯೫೦ ರಿಂದ ೨೦೦೦ ವರ್ಷದವರೆಗೂ ಕಾಣಿಸಿಕೊಂಡ ಕನ್ನಡ ನವ್ಯಸಾಹಿತ್ಯದಲ್ಲಿ ಹಲವು ಧಾರೆಗಳಿವೆ. ಐವತ್ತು – ಅರವತ್ತರ ದಶಕಗಳಲ್ಲಿ ನವ್ಯಕಾವ್ಯದ ಸಂದರ್ಭದಲ್ಲಿ ನವ್ಯಕಥೆ, ಕಾದಂಬರಿಗಳನ್ನು ಬರೆಯಲು ಶುರುಮಾಡಿದ ಶರ್ಮ, ಚಿತ್ತಾಲ, ದೇಸಾಯಿ, ಲಂಕೇಶ್, ತೇಜಸ್ವಿಯಂತಹ ಲೇಖಕರು ಎಪ್ಪತ್ತರ ದಶಕದ ನಂತರ ತಮ್ಮ ನವ್ಯದ ಬರವಣಿಗೆಯ ಧಾಟಿಗಳಲ್ಲಿ 'ಪರಿವರ್ತನೆ' ಮಾಡಿಕೊಂಡಿದ್ದನ್ನು ಕಂಡಿದ್ದೇವೆ. ಇದನ್ನು ವಿಮರ್ಶಕ ಡಿ.ಆರ್. ನಾಗರಾಜ್ ಅವರು 'ಪರಿವರ್ತನ ನವ್ಯ' ಎಂದು ಕರೆದಿದ್ದಾರೆ. ಈ ಘಟ್ಟದಲ್ಲಿ ಬರುವ ದೇಸಾಯಿ ಅವರ ಅನೇಕ ಕಥೆ, ಕಾದಂಬರಿಗಳಲ್ಲಿ ಆಗಿರುವ 'ಪರಿವರ್ತನೆ'ಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಅಸ್ತಿತ್ವವಾದದಿಂದ ಕ್ರಿಯಾಶೀಲತೆಯ ನೆಲೆಗಳನ್ನು ಗುರುತಿಸುವಿಕೆ

ಜಮೀನ್ದಾರಿ ಮನೆತನಕ್ಕೆ ಸೇರಿದ 'ಬೀಜ' ಕಾದಂಬರಿಯ ಶ್ರೇಯಾಂಸ ಅಸ್ತಿತ್ವವಾದದಿಂದ ಕ್ರಿಯಾಶೀಲತೆಯ ನೆಲೆಯ ಕಡೆಗೆ ಸರಿಯುವುದನ್ನು ಇಲ್ಲಿ ಗುರುತಿಸಲಾಗಿದೆ. ನಗರದಿಂದ ಮತ್ತೆ ತನ್ನ ಊರಿಗೆ ಮರಳಿದ ಈತ ಅಲ್ಲಿ ಹೇಗೆ ವೈಚಾರಿಕತೆಯನ್ನು ರೂಪಿಸಿಕೊಂಡ ಎಂಬುದನ್ನು ವಿಶ್ಲೇಷಿಸಲಾಗಿದೆ. ದೇಸಾಯಿ ಅವರು ತಮ್ಮ 'ಮಂಜುಗಡ್ಡೆ' ಕಥೆ ಹಾಗೂ ತಮ್ಮ 'ಮುಕ್ತಿ' ಕಾದಂಬರಿಯ ವಸ್ತು, ತಂತ್ರದಲ್ಲಿ ಕಂಡುಬರುವ ಸಾಮ್ಯತೆಗಳನ್ನು ಇಲ್ಲಿ ಗುರುತಿಸಲಾಗಿದೆ. 'ಮುಕ್ತಿ' ಗೌರೀಶನ ಆತ್ಮಕಥೆಯಾದರೂ ಅದು ಹೇಗೆ ಭೂತ ಮತ್ತು ವರ್ತಮಾನಗಳಿಗೆ ಸೀಮಿತವಾದ ಕಥೆ ಮಾತ್ರವಾಗಿಲ್ಲ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ಗೌರೀಶನ ಮನಸ್ಸಿನ ವ್ಯಾಪಾರಗಳ ಮಹತ್ವವನ್ನು ವಿಶ್ಲೇಷಿಸುವ ಕೆಲಸ ಮಾಡಲಾಗಿದೆ. ಗೌರೀಶ ಮತ್ತು ಶ್ರೀಕಾಂತರ ಸಂಬಂಧ ಸಂಕೀರ್ಣವಾದುದು. ಶ್ರೀಕಾಂತನ ಪ್ರಭಾವೀ ವ್ಯಕ್ತಿತ್ವ ತನ್ನ ಭಾವಮಯತೆಯನ್ನು, ಉದಾತ್ತತೆಯನ್ನು, ಆದರ್ಶವಾದಿತ್ವವನ್ನು ಗೌರೀಶನ ಮೇಲೆ ಹೇಗೆ ಹೇರುತ್ತದೆ. ಗೌರೀಶ ತಪ್ಪಿಸಿಕೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೇಗೆ ಹೋರಾಟ ಮಾಡುತ್ತಾನೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ಕಾಮಿನಿ ಅವನನ್ನು ಹುಡುಕಿಕೊಂಡು ಬಂದರೂ ಆತ ಆಕೆಯನ್ನು ತಿರಸ್ಕರಿಸುವಷ್ಟು ದುರ್ಬಲ. ಇದನ್ನೆಲ್ಲಾ ಈ ಅಧ್ಯಯನದಲ್ಲಿ ಗುರ್ತಿಸಿದೆ. ಕಾದಂಬರಿಯಲ್ಲಿ ಮಹಾನಗರವನ್ನು ಹಿನ್ನೆಲೆಯಾಗಿ ಬಳಸಿಕೊಳ್ಳುವ ವಿಧಾನವನ್ನೂ ಸಹ ಇಲ್ಲಿ ಗುರುತಿಸಲಾಗಿದೆ.

ಮಾನವೀಯ ಸಂಬಂಧಗಳ, ನೆಲೆಗಳ ಶೋಧನೆಗಳನ್ನು ಗುರುತಿಸುವಿಕೆ

'ವಿಕ್ಷೇಪ' ಕಾದಂಬರಿಯ ನಾಯಕ ರಾಹುಲನಿಗೆ ಗೌರೀಶನಿಗೆ ಇದ್ದ ಯಾತನೆ ಅಥವಾ ಬಿಡುಗಡೆ ಯಾವುದೂ ಇಲ್ಲ. ಕೇವಲ ಈತ ಅಸ್ತಿತ್ವವಾದಿ ನಾಯಕ. ನೆಲೆಯಿಲ್ಲದವನು, ಅವನ ಅವಸ್ಥೆಯೇ ವಿಕ್ಷೇಪ. 'ಮುಕ್ತಿ'ಯ ಕಥೆಗೆ ಕೊನೆಯಿದ್ದರೆ, 'ವಿಕ್ಷೇಪ'ದ ಕಥೆಗೆ ಕೊನೆಯೇ ಇಲ್ಲ. ಇಲ್ಲಿ ಕಾಲಕ್ಕಿಂತ ಮಾನವೀಯ ಸಂಬಂಧಗಳ ಶೋಧನೆ ಮುಖ್ಯವಾಗುತ್ತದೆ. ಇಲ್ಲಿ ಅವರ ಆತ್ಮವಿಶ್ಲೇಷಣೆ ಮುಖ್ಯ. ಈ ತಂತ್ರ ಎಲ್ಲವನ್ನು ಕುರಿತು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ರಾಹುಲನಿಗೆ ಅಸ್ತಿತ್ವವಾದ ಎಂಬ ಸಿದ್ಧಾಂತ ಹೇಗೆ ಒಂದು ಐಷಾರಾಮಿ ಜೀವನಕ್ಕೆ ದಾರಿಯಾಗುತ್ತದೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. "ಕಥನ ಅಸ್ತಿತ್ವವಾದಿ ಮನೋಭೂಮಿಕೆಗೆ ತಕ್ಕುದಾದ

ಸಾಹಿತ್ಯ ಪ್ರಕಾರ. ಅದು ಹೊರ ಜಗತ್ತಿನ ಒಳ ಅಭಿವ್ಯಕ್ತಿ" ಎಂದು ಹೇಳುವ ದೇಸಾಯಿ ಅವರ ಮನೋಧರ್ಮ ಇಲ್ಲಿನ ಅಸ್ತಿತ್ವವಾದಿ ಪಾತ್ರಗಳಲ್ಲಿ ಒಡೆದು ಕಾಣುತ್ತದೆ.

ಹೀಗೆಯೇ ಸೃಷ್ಟಿ, ಸಂಬಂಧ, ಅಂತರಾಳ ಕಾದಂಬರಿಗಳಲ್ಲಿನ ವಿಭಿನ್ನವಾದ ಮಾನವೀಯ ಸಂಘರ್ಷಗಳನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ದೇಸಾಯಿ ಅವರ ಕೊನೆಯ ಕಾದಂಬರಿ 'ಓಂ ಣಮೋ'ದಲ್ಲಿ ಜೈನಧರ್ಮದ ತಾತ್ವಿಕತೆಯನ್ನು ಅನ್ಯ ದೃಷ್ಟಿಕೋನದಿಂದ ಗ್ರಹಿಸುವ ವೈಭವೀಕರಣವನ್ನು ಇಲ್ಲಿ ವಿಶ್ಲೇಷಣೆಗೆ ಒಳಗು ಮಾಡಲಾಗಿದೆ. ಕೊನೆಗೆ ಆ್ಯಡಂ ಮತ್ತು ಅರ್ಧ ಜೈನ, ಅರ್ಧ ಕ್ರಿಶ್ಚಿಯನ್ ಆದ ಆಡ್ಯಂ ಮತ್ತು ಅರ್ಧ ಕ್ರಿಶ್ಚಿಯನ್, ಅರ್ಧ ಜೈನಿಗಳಾದ ಆ್ಯನ್‌ಳ ಸಂಬಂಧ ಕೊನೆಗೆ ಪ್ರೇಮಕಥೆಯಾಗಿ ಉಳಿಯುವುದರ ಅರ್ಥವಂತಿಕೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇದಕ್ಕಿಂತ ಮುಖ್ಯವಾಗಿ ಆಧುನಿಕತೆಯ ಪ್ರಕ್ರಿಯೆಯಲ್ಲಿ ಜೈನ ಕೂಡು ಕುಟುಂಬವೊಂದು ವಿಘಟನೆಯಾಗಿ ಬಿಡಿ ಕುಟುಂಬವಾಗಿ ಅವು ಅದರಿಂದ ಎದುರಿಸುವ ಸಂಬಂಧಗಳ ಸಂಘರ್ಷದ ವಿನ್ಯಾಸಗಳನ್ನು 'ಓಂ ಣಮೋ' ಕಾದಂಬರಿ ಹೇಗೆ ತನ್ನ ಪರಿಣಾಮದಲ್ಲಿ ಯಶಸ್ಸು ಸಾಧಿಸುತ್ತದೆ ಎಂಬುದನ್ನು ಇಲ್ಲಿ ಅರ್ಥೈಸಲಾಗಿದೆ.

ದ್ವಂದ್ವಗಳು ಮತ್ತು ಪರಕೀಯ ಪ್ರಜ್ಞೆ

ಎರಡನೇ ಮಹಾಯುದ್ಧ ಮತ್ತು ಸ್ವಾತಂತ್ರ್ಯದ ನಂತರ ಬದುಕಿನ ಅಸಂಖ್ಯ ದ್ವಂದ್ವಗಳು ನವ್ಯ ಸಾಹಿತ್ಯದ ಮುಖ್ಯ ನೆಲೆಗಳಾದವು. ಪರಕೀಯ ಪ್ರಜ್ಞೆ, ಗಂಡು–ಹೆಣ್ಣುಗಳ ನಡುವಿನ ಸಂಬಂಧ, ಮನುಷ್ಯನ ಅಸ್ತಿತ್ವ, ಕೌಟುಂಬಿಕ ಸಂಘರ್ಷಗಳು, ಸ್ವಾತಂತ್ರ್ಯ ನಂತರದ ಭ್ರಮನಿರಸನ, ಕನ್ನಡ ಸಾಹಿತ್ಯ ಪರಂಪರೆಯೊಂದಿಗೆ ಸಂಘರ್ಷ, ರಾಜಕೀಯ ಬದಲಾವಣೆಗಳು, ಪ್ರಭಾವಗಳು, ಕೈಗಾರಿಕೀಕರಣ, ಅಭಿವೃದ್ಧೀಕರಣ ಕನ್ನಡ ನವ್ಯ ಸಾಹಿತ್ಯದ ಮುಖ್ಯ ನೆಲೆಗಳಾಗಿ ಅಭಿವ್ಯಕ್ತಗೊಂಡವು.

ಕನ್ನಡ ಸಾಹಿತ್ಯದಲ್ಲಿ ನವೋದಯ ಸಾಹಿತ್ಯ ಚಳುವಳಿ ಹಿಂದೆ ಸರಿದು ಐವತ್ತು–ಅರವತ್ತರ ದಶಕಗಳು ನವ್ಯ ಚಳುವಳಿ ಸಾಹಿತ್ಯದ ಮುಖ್ಯ ಶೋಧವಾಗಿ ಬೆಳೆಯುತ್ತಿದ್ದ ಕಾಲಘಟ್ಟವಾಗಿದೆ. ಈ ಕಾಲಘಟ್ಟದಲ್ಲಿ ಮೇಲಿನ ಅಂಶಗಳ ಜೊತೆಗೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ, ಸ್ವಾತಂತ್ರ್ಯಾ ನಂತರದ ಭಾರತದ ಸ್ಥಿತಿಗತಿಗಳು ನವ್ಯ ಸಾಹಿತ್ಯಕ್ಕೆ ಮುಖ್ಯ ಪ್ರಭಾವ– ಪ್ರೇರಣೆಗಳಾಗಿ ಒದಗಿ ಬಂದವು. ಗೋಪಾಲ ಕೃಷ್ಣ ಅಡಿಗ, ವಿ.ಕೃ. ಗೋಕಾಕ್, ಎ.ಕೆ. ರಾಮಾನುಜನ್, ರಾಮಚಂದ್ರಶರ್ಮ ಮುಂತಾದ ಲೇಖಕರಿಂದ ನವ್ಯಕಾವ್ಯದ ಬೇರೆ ಬೇರೆ ಮಾದರಿಗಳು ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದ್ದ ಕಾಲವೂ ಅದಾಗಿತ್ತು. ಲಂಕೇಶ್, ದೇಸಾಯಿ, ಚಿತ್ತಾಲ, ತೇಜಸ್ವಿ, ಕೆ.ಸದಾಶಿವ, ಆಲನಹಳ್ಳಿ, ಗಿರಿ ಇವರೆಲ್ಲರ ಬರವಣಿಗೆಗಳೂ ಕೂಡ ಇದೇ ಕಾಲದಲ್ಲಿ ಆರಂಭಗೊಂಡವು. ನವ್ಯ ಸಾಹಿತ್ಯದ ಬಹುಪಾಲು ಲೇಖಕರು ಇಂಗ್ಲೀಷ್ ಅಧ್ಯಾಪಕರಾಗಿದ್ದುದರಿಂದ ಸಹಜವಾಗಿಯೇ ಅವರು ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೂ ಒಳಗಾಗಿದ್ದರು.

ಪ್ರಾರಂಭಿಕ ವಿದ್ಯಾಭ್ಯಾಸವನ್ನು ಹಳಿಯಾಳದಲ್ಲಿ ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆಂದು ಧಾರವಾಡಕ್ಕೆ ಬಂದ ದೇಸಾಯಿ ಅವರು ಧಾರವಾಡದ ವಾತಾವರಣದಲ್ಲಿ ತಮ್ಮ ಕನ್ನಡ ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. ಬೇಂದ್ರೆ, ಗೋಕಾಕ್, ಅನಕೃ, ಕಾರಂತ, ಮಾಸ್ತಿ, ಡಿ.ವಿ.ಜಿ., ವಿ.ಸೀ., ಬಿ.ಎಂ.ಶ್ರೀ

ಇತ್ಯಾದಿಯುವರನ್ನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿ ಅವರು ಕವಿಯಾಗುವ ಆದರ್ಶವನ್ನಿಟ್ಟುಕೊಳ್ಳುತ್ತಾರೆ. ಅಂತೆಯೇ ತಮ್ಮ ಕಾಲೇಜು ದಿನಗಳಲ್ಲಿ ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಕವಿತೆಗಳನ್ನು ಬರೆಯುತ್ತಾರೆ. ಆಗಲೇ ಡೈರಿ ಬರೆಯುವ ಅಭ್ಯಾಸ ಇಟ್ಟುಕೊಂಡಿದ್ದ ಅವರಿಗೆ ತಾನು ಕವಿಯಲ್ಲ ಕತೆಗಾರನಿರಬಹುದೆಂಬ ಸಂಶಯ ಬರತೊಡಗುತ್ತದೆ. ಅವರ ಬಾಲ್ಯದ ಅನುಭವವನ್ನೇ ತಾವು 'ಚಂದೂ' ಎಂಬ ಕಥೆಯನ್ನಾಗಿ ಬರೆದು ಮಿತ್ರರಿಗೆ ತೋರಿಸಿದಾಗ ಮುಂದೆ ಕಾದಂಬರಿಕಾರನಾಗಬಹುದೆಂಬ ಆಸೆ ಅವರಲ್ಲಿ ಅಂಕುರಿಸುತ್ತದೆ.

೧೯೪೫ ರಿಂದ ೧೯೫೫-೫೬ ರವರೆಗಿನ ಅವಧಿ ದೇಸಾಯಿ ಅವರ ಜೀವನದಲ್ಲಿ ಸಾಕಷ್ಟು ಬದಲಾವಣೆಯನ್ನು ಉಂಟು ಮಾಡುತ್ತದೆ. ಟಿ.ಎಸ್. ಎಲಿಯಟ್, ಕಾಮು, ಕಾಫ್ಕ, ಕೀರ್ಕೆಗಾರ್ಡ್, ದಾಸ್ತವಸ್ಕಿ, ಹಕ್ಸಲೀ, ಡಿ.ಹೆಚ್. ಲಾರೆನ್ಸ್, ಗ್ರಾಹಮ್ ಗ್ರೀನ್, ಎಂ.ಎನ್. ರಾಯ್ ಮುಂತಾದವರ ವಿಚಾರ ಸರಣಿಗಳು ಹಾಗೂ ಸಾರ್ತ್ರೆಯ ಅಸ್ತಿತ್ವವಾದ ದೇಸಾಯಿ ಅವರ ಮೇಲೆ ಪ್ರಭಾವವನ್ನು ಬೀರುತ್ತವೆ. ೧೯೫೨-೫೩ರಲ್ಲಿ ಮುಂಬಯಿನ ವಿಲ್ಸನ್ ಕಾಲೇಜಿನಲ್ಲಿ ಎಂ.ಎ. ಮಾಡುತ್ತಿರುವಾಗಲೇ ತಮ್ಮ ೨೧ನೇ ವಯಸ್ಸಿನ ನಂತರ ಕಥೆ ಬರೆಯತೊಡಗುತ್ತಾರೆ. ಮರಾಠಿಯ ಗಂಗಾಧರ ಗಾಡಗೀಳರ 'ಮಾನಸ ಚಿತ್ರೆ' ಎಂಬ ಕಥಾ ಸಂಗ್ರಹವನ್ನು ಓದಿದ ನಂತರ ಅವರಿಗೆ ತಾವೂ ಕಥೆ ಬರೆಯಲು ಸಾಧ್ಯವೇ ಎಂದೆನಿಸುತ್ತದೆ. ತಮ್ಮ ಬಾಲ್ಯದ ಅನುಭವವನ್ನು ಒಂದು ಕಥೆಯನ್ನಾಗಿಸುತ್ತಾರೆ. ಸಂಕೀರ್ಣ ಸಂಬಂಧಗಳ ಕುರಿತಾದ ಆ ಕಥೆ ಬಹಳ ಸಹಜ ಸರಳ ಸುಂದರವಾಗಿ ಮೂಡಿಬಂದದ್ದು ಅವರನ್ನು ಚಕಿತಗೊಳಿಸುತ್ತದೆ. ಹೀಗಾಗಿ ಅವರು 'ಮಳೆ' ಎಂಬ ಕಥೆಯನ್ನು ಬರೆಯುತ್ತಾರೆ. ಇದು ಜಯಂತಿಯಲ್ಲಿ 'ನವ್ಯಕಥೆ' ಎಂಬ ಉಪ ಶೀರ್ಷಿಕೆಯೊಂದಿಗೆ ಪ್ರಕಟಿತವಾದ ಮೊದಲ ಕಥೆಯಾಗಿದೆ. ಈ ಕಥೆ ಪ್ರಕಟವಾದ ೩-೪ ತಿಂಗಳಲ್ಲಿ ಏಳೆಂಟು ಕಥೆಗಳನ್ನು ಬರೆಯುತ್ತಾರೆ. ಅವೆಲ್ಲವೂ ಕೂಡ ನವ್ಯಕಥೆಗಳೆಂದು 'ಜಯಂತಿ'ಯಲ್ಲಿ ಪ್ರಕಟಗೊಳ್ಳುತ್ತವೆ.

ಗಳಗನಾಥರ ಕಾದಂಬರಿಗಳನ್ನು ಓದಿ ಅವುಗಳ ಅನುಕರಣೆಯಲ್ಲಿ ಒಂದರ್ಧ ಕಾದಂಬರಿಯನ್ನು ಬರೆಮ ಕೊನೆಗೆ ಹರಿದು ಹಾಕಿದ್ದಾಗಿ ದೇಸಾಯಿ ಅವರೇ ಹೇಳಿಕೊಂಡಿದ್ದಾರೆ. ಧಾರವಾಡ ಹಾಗೂ ಮುಂಬಯಿಯ ಬೌದ್ಧಿಕ ವಾತಾವರಣ ದೇಸಾಯಿ ಅವರ ಸೃಜನಶೀಲ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದವು. ಜೊತೆಗೆ ಅವರು ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದರಿಂದ ಇಂಗ್ಲೀಷ್ ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆಗೂ ಕೂಡ ಒಳಗಾಗಿದ್ದರು. ಹೀಗಾಗಿ ನವ್ಯ ಸಾಹಿತ್ಯ ಮನೋಧರ್ಮವನ್ನು ಸ್ವೀಕರಿಸಿದ ದೇಸಾಯಿ ಅವರು ಕೊನೆಯವರೆಗೂ ಕೂಡ ನವ್ಯ ಸಾಹಿತಿಯಾಗಿಯೇ ಉಳಿದವರು.

ಶಾಂತಿನಾಥ ದೇಸಾಯಿ ಅವರು ಕನ್ನಡದ ಮತ್ತು ಒಬ್ಬ ಪ್ರಮುಖ ಭಾರತೀಯ ಲೇಖಕ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಐದು ದಶಕಗಳ ಕಾಲ ನಿರಂತರವಾಗಿ ಕಥೆ ಕಾದಂಬರಿಗಳನ್ನು ನೀಡಿದ ಕಥನಕಾರ. ಈ ಐದು ದಶಕಗಳಲ್ಲಿ ಮುಖ್ಯವಾಗಿ ಘಟಿಸಿದ ಸಾಹಿತ್ಯಕ ಹಾಗೂ ಸಾಮಾಜಿಕ ಚಳುವಳಿಗಳಾದ ನವ್ಯ, ದಲಿತ-ಬಂಡಾಯ, ಸ್ತ್ರೀವಾದ, ರೈತ ಚಳುವಳಿ

ಹಾಗೂ ಹಲಬಗೆಯ ಸಾಮಾಜಿಕ, ಧಾರ್ಮಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಚಳುವಳಿಗಳ ಘಟನೆ–ವಿಘಟನೆ, ಪರಿಣಾಮ–ಪ್ರಭಾವಗಳನ್ನು ತುಂಬಾ ಸಮರ್ಥವಾಗಿ ನಿರ್ವಹಿಸಿದ ಲೇಖಕ.

ಸ್ತ್ರೀಯರ ಬಂಡಾಯ ಪ್ರವೃತ್ತಿಗಳು

ದೇಸಾಯಿ ಅವರ ಒಟ್ಟು ಕಥನ ಸಾಹಿತ್ಯದಲ್ಲಿ ಸ್ತ್ರೀ ಪುರುಷರ ನಡುವಿನ ಸಂಬಂಧಗಳು, ದ್ವಂದ್ವಗಳು, ಸಂಘರ್ಷಗಳು, ಪ್ರತಿಭಟನೆಗಳು, ಸ್ತ್ರೀಯರ ಬಂಡಾಯದ ಪ್ರವೃತ್ತಿಗಳು, ಪುರುಷರ ಇಬ್ಬಂದಿತನಗಳು ಸಮರ್ಥವಾಗಿ ಮಾತ್ರವಲ್ಲದೆ ಕಲಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ಮೂಡಿ ಬಂದಿರುವುದನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಗುರುತಿಸಲಾಗಿದೆ. ದೇಸಾಯಿ ಅವರ ಕಥೆಗಳು ಇಪ್ಪತ್ತನೆಯ ಶತಮಾನದ ಬದುಕಿನ ಸಾದೃಶ್ಯ ಮತ್ತು ವೈದೃಶ್ಯಗಳಿಗೆ ಎದುರಾಗಿ ಅವುಗಳನ್ನು ವಾಸ್ತವಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಹಿಡಿದು ಅವುಗಳ ಮೂಲಕ ಕಾಣಿಸಿರುವ ಮಾನವೀಯತೆಯ ದರ್ಶನವನ್ನು ಇಲ್ಲಿ ಗುರುತಿಸಲಾಗಿದೆ. ಭಾರತೀಯ ಹಾಗೂ ಪಾಶ್ಚಾತ್ಯ ವಿಚಾರಗಳ ಪ್ರಭಾವಗಳಿಗೆ ಅವರು ಒಳಗಾದರೂ ಕನ್ನಡದ ನೆಲೆಯಲ್ಲಿ ಅವುಗಳನ್ನು ಜೀರ್ಣಿಸಿಕೊಂಡಿರುವ ಬಗೆಯ ಧ್ವನಿಗಳನ್ನು ಇಲ್ಲಿ ಗುರುತಿಸಲಾಗಿದೆ. ಹಿಂದಿನವರು ಇವರ ಕಥಾ ಸಾಹಿತ್ಯವನ್ನು ಕುರಿತು ನಡೆಸಿದ ಅಧ್ಯಯನವನ್ನು ಮತ್ತಷ್ಟು ವಿಸ್ತರಿಸುವ ಹಾಗೂ ವಿಶ್ಲೇಷಿಸುವ ಕೆಲಸವನ್ನೂ ಇಲ್ಲಿ ಮಾಡಲಾಗಿದೆ.

ದೇಸಾಯಿ ಅವರ ಒಟ್ಟು ಕಥಾಸಾಹಿತ್ಯದ ಬಿಡಿ ನೆಲೆಗಳ ಅಧ್ಯಯನಕ್ಕಿಂತ ಇಡಿನೆಲೆಯ ಅಧ್ಯಯನದ ದೃಷ್ಟಿಕೋನವನ್ನು ಈ ಅಧ್ಯಯನದ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಅಸ್ತಿತ್ವವಾದ, ಮಾರ್ಕ್ಸ್‌ವಾದ, ನವಮಾನವತಾವಾದ, ಜೈನಧರ್ಮ, ಇಂಗ್ಲೀಷ್ ಸಾಹಿತ್ಯ ಹಾಗೂ ಪಾಶ್ಚಾತ್ಯ ಸಾಹಿತ್ಯ ಹೀಗೆ ವಿವಿಧ ವಿಚಾರಗಳ ಪ್ರಭಾವ–ಪ್ರೇರಣೆಗಳಿಗೆ ಅವರು ಒಳಗಾಗಿದ್ದರೂ ಕನ್ನಡತ್ವವನ್ನು, ಕನ್ನಡ ಸಂಸ್ಕೃತಿಯನ್ನು, ಕನ್ನಡದ ಬದುಕನ್ನು ಕಟ್ಟಿಕೊಡುವಲ್ಲಿ ದೇಸಾಯಿ ಅವರು ಎಂದೂ ಮುಂದಿರುವ ಲೇಖಕ.

ದೇಸಾಯಿ ಅವರ ನಲವತ್ತೊಂಬತ್ತು ಕಥೆಗಳಲ್ಲಿ ವಸ್ತು, ಭಾಷೆ, ವಿನ್ಯಾಸ, ತಂತ್ರ, ದರ್ಶನಗಳನ್ನು ವಿಭಿನ್ನವಾಗಿ ಕಾಣಿಸುವ ಪ್ರಾತಿನಿಧಿಕವಾದ ಕಥೆಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ಬಿಡಿಕಥೆಗಳ ಅಧ್ಯಯನ ಸಾಧ್ಯವಾದರೂ, ಆ ಬಗೆಯ ಯತ್ನಕ್ಕೆ ಹೋಗದಿದ್ದರೂ ಪ್ರಾತಿನಿಧಿಕವೆನಿಸಿದ ಕಥೆಯನ್ನು ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಪ್ರಾತಿನಿಧಿಕವೆಂದು ಪರಿಗಣಿಸಿದ ಕಥೆಗಳಿಂದ ಹೊರಗುಳಿದ ಕೆಲವು ಕಥೆಗಳ ಆಶಯ, ಅಭಿವ್ಯಕ್ತ ಕ್ರಮಗಳನ್ನು ಕೂಡ ಇಲ್ಲಿ ಆಂಶಿಕವಾಗಿ ಬಳಸಿಕೊಳ್ಳಲಾಗಿದೆ. ಆ ಕಥೆಗಳ ಅಧ್ಯಯನದ ಮೂಲಕ ಲೇಖಕನ ಮನೋಧರ್ಮ ಮತ್ತು ಬದುಕಿನ ವಿಭಿನ್ನ ವಿಶ್ವಾಸಗಳ ಫಲಿತಗಳನ್ನು ಇಲ್ಲಿ ಗುರುತಿಸಲಾಗಿದೆ.

ಮತ್ತೊಂದು ಪ್ರಮುಖವಾದ ಅಧ್ಯಯದಲ್ಲಿ ದೇಸಾಯಿ ಅವರ ಒಟ್ಟು ಎಲ್ಲಾ ಕಾದಂಬರಿಗಳನ್ನು ಬಿಡಿಯಾಗಿ ಮತ್ತು ಇಡಿಯಾಗಿ ಒಟ್ಟೊಟ್ಟಿಗೆ ಇಲ್ಲಿ ವಿಶ್ಲೇಷಣೆಗೆ ಒಳಗು ಮಾಡಲಾಗಿದೆ. ಆ ಮೂಲಕ ಕಾದಂಬರಿಗಳಲ್ಲಿ ಹೊರಡುವ ವಿವಿಧ ಬಗೆಯ ದರ್ಶನಗಳನ್ನು, ವಿಚಾರಗಳನ್ನು,

ವಾಗ್ವಾದಗಳನ್ನು ಮತ್ತು ಸೃಷ್ಟಿಕ್ರಿಯೆಯ ವಿವಿಧ ನೆಲೆಗಳನ್ನು ಅವರು ಹೇಗೆ ತಮ್ಮ ಅಭಿವ್ಯಕ್ತಿಯಲ್ಲಿ ನಿರ್ವಹಿಸಿದ್ದಾರೆಂಬುದನ್ನು ಅರ್ಥೈಸುವ, ವಿವರಿಸುವ, ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ದೇಸಾಯಿ ಅವರು ನವ್ಯ ಲೇಖಕರಾದರೂ ಮುಖ್ಯವಾಗಿ ಅಡಿಗ, ಅನಂತಮೂರ್ತಿ ಅಂತಹ ನವ್ಯ ಲೇಖಕರಿಂದ ತಮ್ಮ ಕಥನ ಸಾಹಿತ್ಯದ ವಸ್ತುವಿನ ಆಯ್ಕೆ ಮತ್ತು ಅಭಿವ್ಯಕ್ತ ನಿರೂಪಣೆ ಕ್ರಮದಲ್ಲಿ ಹೇಗೆ ಭಿನ್ನರಾಗಿ, ವಿಶಿಷ್ಠರಾಗಿ ನಿಲ್ಲುತ್ತಾರೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ನವ್ಯ ಸಾಹಿತ್ಯದ ಸೃಷ್ಟಿಯ ಸಂದರ್ಭದಲ್ಲಿ ದೇಸಾಯಿ ಅವರ ಕಥನ ಸಾಹಿತ್ಯದಲ್ಲಿ ಪ್ರಕಟವಾಗುವ ಪ್ರತಿಭಟನೆ, ಹುದುಗಿದ ಸಂಘರ್ಷದ ನೆಲೆಗಳು ಅವರ ಸಮಕಾಲೀನ ನವ್ಯಲೇಖಕರಲ್ಲಿ ಆ ಬಗೆಯ ಸ್ವರೂಪವನ್ನು ಕಾಣುವುದು ತುಂಬಾ ಅಪರೂಪ. ದೇಸಾಯಿ ಅವರ ಕಥನ ಸಾಹಿತ್ಯದ ಆಕೃತಿ ಮತ್ತು ಭಾಷಿಕ ಸ್ವರೂಪದ ಬಗ್ಗೆ ಅಧ್ಯಯನ ಮಾಡುವ ಭಾಷಾಶಾಸ್ತ್ರದ ಅಧ್ಯಯನಕಾರರಿಗೆ ಇಲ್ಲಿ ಇನ್ನೂ ಹೆಚ್ಚಿನ ಅವಕಾಶವಿದ್ದೇ ಇದೆ. ಆದರೆ ಪ್ರಸ್ತುತ ಮಹಾ ಪ್ರಬಂಧದಲ್ಲಿ ಅವರ ಒಟ್ಟು ಕಥನ ಸಾಹಿತ್ಯದ ಮೂಲಕ ಈ ಕೆಲವು ಫಲಿತಗಳನ್ನು ಹೊರ ತೆಗೆಯುವ ಮೊದಲ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ದೇಸಾಯಿ ಅವರ ಕಥಾಸಾಹಿತ್ಯದಲ್ಲಿನ ಸಂಘರ್ಷಗಳ ವಿನ್ಯಾಸಗಳ ಫಲಿತಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಿರುವುದನ್ನು ಸೂಕ್ಷ್ಮವಾಗಿ ಹೀಗೆ ನಿರೂಪಿಸಬಹುದಾಗಿದೆ.

೧. ದೇಸಾಯಿ ಅವರ ಬಹುತೇಕ ಕಥೆಗಳು, ಕಾದಂಬರಿಗಳು ಮುಂಬಯಿಯಂತಹ ಮಹಾ ನಗರಗಳಲ್ಲಿ ಚಿತ್ರಿತವಾಗಿದ್ದು, ಅಲ್ಲಿನ ಜನರು ಎದುರಿಸುವ ಮಾನಸಿಕ ಸಂಘರ್ಷಗಳು, ದ್ವಂದ್ವಗಳು, ಒಂಟಿತನಗಳನ್ನು, ಅವುಗಳು ಉಂಟು ಮಾಡುವ ಪರಿಣಾಮಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೨. ದೇಸಾಯಿ ಅವರ ಸಾಹಿತ್ಯದಲ್ಲಿ ಸ್ತ್ರೀ ಕೇಂದ್ರದಲ್ಲಿದ್ದು, ಜೀವನದಲ್ಲಿ ಬರುವ ಯಾವುದೇ ಸಮಸ್ಯೆಯನ್ನು ಕೂಡ ಸಮರ್ಥವಾಗಿ, ಸೂಕ್ಷ್ಮವಾಗಿ ನಿಭಾಯಿಸುವ ಛಾತಿಯನ್ನು ಹೊಂದಿದವಳಾಗಿದ್ದಾಳೆ. ಮಹಿಳೆಯರು ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರವನ್ನು ಕಂಡುಕೊಳ್ಳುವುದನ್ನು ಪ್ರಸ್ತುತ ಅವರ ಕಥಾಸಾಹಿತ್ಯದಲ್ಲಿ ಗುರುತಿಸಲಾಗಿದೆ.

೩. ದೇಸಾಯಿ ಅವರ ಸಾಹಿತ್ಯದ ಬಹುತೇಕ ಪುರುಷ ಪಾತ್ರಗಳು ದುರ್ಬಲ, ವಿಕ್ಷಿಪ್ತ ಮನಃಸ್ಥಿತಿಯನ್ನು ಹೊಂದಿದವರಾಗಿದ್ದಾರೆ. ಸಮಸ್ಯೆಗಳನ್ನು, ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುವ ಬದಲು ವಿಮುಖರಾಗುವ ಪುರುಷ ಪಾತ್ರಗಳೇ ಹೆಚ್ಚಾಗಿವೆ. ಆತ್ಮಹತ್ಯೆಯಂತಹ ಮನೋಭಾವಗಳೂ ಕೂಡ ಇವರ ಪುರುಷ ಪಾತ್ರಗಳಲ್ಲೇ ಹೆಚ್ಚು ಕಂಡು ಬರುತ್ತವೆ. ಈ ಪಾತ್ರಗಳು ತಮಗೆ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹೆಣಗಾಡುವುದನ್ನು ವಿವರಿಸಲಾಗಿದೆ.

೪. ದೇಸಾಯಿ ಅವರ ಸಾಹಿತ್ಯವು ಮನೋವೈಜ್ಞಾನಿಕ ಆಸ್ಥೆಯನ್ನು ಒಳಗೊಂಡಿದೆ. ಇವರು ಮನೋವಿಜ್ಞಾನದ ಒಳನೋಟಗಳನ್ನು ವ್ಯಕ್ತಿ ವ್ಯಕ್ತಿಗಳ ಸಂಬಂಧ ಹಾಗೂ ರಹಸ್ಯಗಳನ್ನು ಭೇದಿಸುವ ತಂತ್ರವನ್ನಾಗಿ ತಮ್ಮ ಕಥನ ಕ್ರಮದಲ್ಲಿ ಬಳಸಿಕೊಳ್ಳುವ ಕ್ರಮವನ್ನು ಗುರುತಿಸಲಾಗಿದೆ.

೫. ದೇಸಾಯಿ ಅವರ ನೈತಿಕ ಪ್ರಜ್ಞೆ ಅತ್ಯಂತ ವಿಶಾಲವಾದುದು ಮತ್ತು ಮುಕ್ತವಾದುದು. ಮನುಷ್ಯನ ಮೂಲ ಪ್ರವೃತ್ತಿಗಳಲ್ಲಿ ಒಂದಾದ ಕಾಮ ಇವರ ಸಾಹಿತ್ಯದಲ್ಲಿ ಪ್ರಮುಖ ಅಂಶವಾಗಿದ್ದರೂ ಕೂಡ ಜೀವನದ ಒಂದು ಸಹಜ ಹಾಗೂ ಅನಿವಾರ್ಯ ಅಂಶವೆಂಬಂತೆ ಚಿತ್ರಿತವಾಗಿರುವುದನ್ನು ಗುರುತಿಸಲಾಗಿದೆ. ಕಾಮ ಶೋಷಣೆಯ ಅಥವಾ ಲೋಲುಪತೆಯ ಸಂಕೇತವಾಗಿ ಇವರಲ್ಲಿ ಕಾಣಿಸಿಕೊಳ್ಳುವುದಿಲ್ಲ. ಬದಲಾಗಿ ಕಾಮದ ಅಭಿವ್ಯಕ್ತಿ ಮಾಧ್ಯಮದ ಮೂಲಕ ಬದುಕನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಇವರು ತಮ್ಮ ಕಥನಸಾಹಿತ್ಯದಲ್ಲಿ ಪ್ರಯೋಗಶೀಲರಾಗಿ ನಡೆಸಿರುವುದನ್ನು ಈ ಅಧ್ಯಯನದಲ್ಲಿ ಪರಾಮರ್ಶಿಸಲಾಗಿದೆ.

೬. ಲೈಂಗಿಕ ವಿಚಾರಗಳಲ್ಲಿ ದೇಸಾಯಿ ಅವರ ಸಾಹಿತ್ಯದಲ್ಲಿನ ಸ್ತ್ರೀ ಗಂಡಿನಷ್ಟೇ ಸರಿಸಮಾನಳು ಮತ್ತು ಮುಕ್ತ ಸ್ವಾತಂತ್ರ್ಯವನ್ನು ಹೊಂದಿದ್ದು, ತನ್ನ ಲೈಂಗಿಕ ಬಯಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಮುಕ್ತ ಮನೋಭಾವನೆಯನ್ನು ಹೊಂದಿದವಳಾಗಿದ್ದಾಳೆ. ಈ ಮೂಲಕ ದೇಸಾಯಿ ಅವರು ತಮ್ಮ ಕಥಾಸಾಹಿತ್ಯದಲ್ಲಿ ಸ್ತ್ರೀಯರನ್ನು ಅತ್ಯಂತ ಘನತೆಯಿಂದ ನಡೆಸಿಕೊಂಡಿರುವುದನ್ನು ಗುರುತಿಸಲಾಗಿದೆ.

೭. ದೇಸಾಯಿ ಅವರು ಅಸ್ತಿತ್ವವಾದ, ಮಾರ್ಕ್ಸ್‌ವಾದ, ಮಾನವತಾವಾದ ಮತ್ತು ನವ ಮಾನವತಾವಾದದ ಹಿನ್ನೆಲೆಯನ್ನು ಹೊಂದಿರುವುದನ್ನು ಮತ್ತು ಅವರ ಸಾಹಿತ್ಯದಲ್ಲಿ ಬರುವ ಎಲ್ಲಾ ಪಾತ್ರಗಳೂ ಕೂಡ ಬಹುತೇಕ ಸುಶಿಕ್ಷಿತ, ಮಧ್ಯಮ ಹಾಗೂ ಬುದ್ಧಿಜೀವಿಗಳಾಗಿರುವುದನ್ನು ಗುರುತಿಸಲಾಗಿದೆ.

೮. ದೇಸಾಯಿ ಅವರ ಸಾಹಿತ್ಯ ಬಹುತೇಕ ಅಂತರ್‌ಜಾತೀಯ ಹಾಗೂ ಅಂತರ್‌ಧರ್ಮೀಯ ವೈವಾಹಿಕ ಸಂಬಂಧಗಳನ್ನು ಒಳಗೊಂಡಿದೆ. ಇಂತಹ ಸಂದರ್ಭಗಳಲ್ಲಿ ಎರಡು ಧರ್ಮಗಳ ಅಥವಾ ಜಾತಿಗಳ ಮುಖಾಮುಖಿಯಲ್ಲಿ ಎದುರಾಗುವ ಪ್ರತಿರೋಧ, ವೈರುಧ್ಯ ಹಾಗೂ ಸಂಘರ್ಷಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

೯. ದೇಸಾಯಿ ಅವರ ಕಥನದಲ್ಲಿ ರಾಜಕೀಯ ಸ್ಥಿತ್ಯಂತರಗಳನ್ನು, ಅವುಗಳು ವ್ಯಕ್ತಿಯ ವೈಯಕ್ತಿಕ ಬದುಕಿನಲ್ಲಿ ಉಂಟು ಮಾಡಿದ ತಲ್ಲಣಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

೧೦. ಮನುಷ್ಯನ ವಿವಿಧ ಮಾನಸಿಕ ತಲ್ಲಣಗಳನ್ನು ದೇಸಾಯಿ ಅವರು ಸಂಜ್ಞಾಪ್ರವಾಹ ತಂತ್ರದ ಹಿನ್ನೆಲೆಯಲ್ಲಿ ಚಿತ್ರಿಸಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಅನುಬಂಧಗಳು

೧. ಶಾಂತಿನಾಥ ದೇಸಾಯಿ ಅವರ ಜೀವನ ವಿವರ

೨. ಶಾಂತಿನಾಥ ದೇಸಾಯಿ ಅವರ ಕೃತಿಗಳು

೩. ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಕುರಿತ ಅಧ್ಯಯನ ಗ್ರಂಥಗಳು

೪. ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಅಧ್ಯಯನ ಕುರಿತ ಲೇಖನಗಳು

೫. ಪರಾಮರ್ಶನ ಗ್ರಂಥಗಳು

ಅನುಬಂಧಗಳು

೧. ಶಾಂತಿನಾಥ ದೇಸಾಯಿ ಅವರ ಜೀವನ ವಿವರ

*	ಪೂರ್ಣ ಹೆಸರು	: ಡಾ. ಶಾಂತಿನಾಥ ಕುಬೇರಪ್ಪ ದೇಸಾಯಿ
*	ಜನನ	: ೨೨ ನೇ ಜುಲೈ ೧೯೨೭
*	ನಿಧನ	: ೨೬ ನೇ ಮಾರ್ಚ್ ೧೯೯೮
*	ತಂದೆ	: ಅಪ್ಪಾಜಿರಾವ್ ದೇಸಾಯಿ
*	ತಾಯಿ	: ಚಂಪಾಬಾಯಿ
*	ಹೆಂಡತಿ	: ಸುಮಿತ್ರಾದೇಸಾಯಿ
*	ಮಕ್ಕಳು	: ಸುಚೇತ, ರಶ್ಮಿ, ಮಾಧವಿ, ದೀಪ್ತಿ
*	ಹುಟ್ಟಿದ ಸ್ಥಳ	: ಹಾವಗಿ, ಹಳಿಯಾಳ, ಉತ್ತರಕನ್ನಡ ಜಿಲ್ಲೆ,ಕರ್ನಾಟಕ
*	ಎಂ.ಎ. (ಇಂಗ್ಲಿಷ್)	: ೧೯೫೩ ,ಮುಂಬೈ ವಿಶ್ವವಿದ್ಯಾಲಯ
*	ಪಿಎಚ್.ಡಿ	: ಇಂಗ್ಲೆಂಡಿನ ಲೀಡ್ಸ್ ವಿಶ್ವವಿದ್ಯಾಲಯ
*	ವೃತ್ತಿ	: ಪ್ರೊಫೆಸರ್ ಮತ್ತು ಇಂಗ್ಲೀಷ್ ಭಾಷಾ ವಿಭಾಗದ ಮುಖ್ಯಸ್ಥ, ಶಿವಾಜಿ ವಿಶ್ವವಿದ್ಯಾಲಯ, ಕೊಲ್ಹಾಪುರ, ಮಹಾರಾಷ್ಟ್ರ
*	೧೯೮೮–೧೯೯೧	: ಸಂಸ್ಥಾಪಕ ಕುಲಪತಿ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
*	೧೯೮೧–೮೨	: ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯತ್ವ
*	೧೯೮೮–೯೩	: ಕಾರ್ಯಕಾರಿ ಸಮಿತಿ ಸದಸ್ಯ, ಕೇಂದ್ರ ಸಾಹಿತ್ಯ ಅಕಾಡೆಮಿ, ದೆಹಲಿ
*	೧೯೯೧	: ಭಾರತೀಯ ಜ್ಞಾನಪೀಠ ಪ್ರಶಸ್ತಿ ಸಮಿತಿಯ ಸದಸ್ಯ

ಪುರಸ್ಕಾರಗಳು

*	೧೯೮೭	: ಕರ್ನಾಟಕ ಸಾಹಿತ್ಯ ಅಕಾಡೆಮಿ ವಿಶೇಷ ಗೌರವ ಪ್ರಶಸ್ತಿ ಪುರಸ್ಕಾರ
*	೧೯೯೩	: ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
*	೧೯೯೩	: ಶಿವರಾಮ ಕಾರಂತ ಪ್ರಶಸ್ತಿ
*	೨೦೦೦	: 'ಓಂ ಣಮೋ' ಕಾದಂಬರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ

೨. ಶಾಂತಿನಾಥ ದೇಸಾಯಿ ಅವರ ಕೃತಿಗಳು

ಕಥಾ ಸಂಗ್ರಹಗಳು

೧. ಮಂಜುಗಡ್ಡೆ–೧೯೫೮

೨. ಕ್ಷಿತಿಜ–೧೯೭೧

೩. ದಂಡೆ–೧೯೭೧

೪. ರಾಕ್ಷಸ–೧೯೭೭

೫. ಪರಿವರ್ತನೆ–೧೯೮೨

೬. ಕೂರ್ಮಾವತಾರ–೧೯೮೮

೭. ಈಚಿನ ಕಥೆಗಳು (ಸಮಗ್ರ ಕಥಾಸಂಕಲನದಲ್ಲಿ ಸೇರ್ಪಡೆ)

೮. ಶಾಂತಿನಾಥ ದೇಸಾಯಿ ಅವರ ಸಮಗ್ರ ಕಥೆಗಳು–೨೦೦೧

ಕಾದಂಬರಿಗಳು

೧. ಮುಕ್ತಿ–೧೯೬೧

೨. ವಿಕ್ಷೇಪ–೧೯೭೧

೩. ಸೃಷ್ಟಿ–೧೯೭೯

೪. ಸಂಬಂಧ–೧೯೮೧

೫. ಬೀಜ–೧೯೮೧

೬. ಅಂತರಾಳ –೧೯೯೩

೭. ಓಂ ಣಮೋ–೧೯೯೮

ವಿಮರ್ಶೆ ಮತ್ತು ವೈಚಾರಿಕ ಕೃತಿಗಳು

೧. ಸಾಹಿತ್ಯ ಮತ್ತು ಭಾಷೆ–೧೯೮೦

೨. ಕನ್ನಡ ಕಾದಂಬರಿ ನಡೆದು ಬಂದ ದಾರಿ–೧೯೮೯

೩. ನವ್ಯ ಸಾಹಿತ್ಯ ದರ್ಶನ–೧೯೮೯

೪. ಎಂ.ಎನ್.ರಾಯ್ (ವೈಚಾರಿಕ) –೧೯೯೪

ಸಂಪಾದನೆ

೧. ಗಂಗಾಧರ ಚಿತ್ತಾಲರ ಕಾವ್ಯಸೃಷ್ಟಿ–೧೯೮೭

ENGLISH

1. Experimentation with language in Indian writing in English(Fiction)1974
2. Shantha Ramrao,1975

3. Indian Poetry today (kannada) 1976
4. Bhahani Bhattacharya, 1974

Editted works

1. Critical Essays on Indian writing in English (with M.K. Naik and G.S. Amur) 1969
2. The image of Indian in Western Creative writing (with M.K. Naik and G.S. Amur) 1970
3. Indian Essays on American Fiction (with M.K. Naik and Shankar Mokashi Punekar) 1972
4. Colonial Consciousness in common wealth Literature (with G.S. Amur) 1984
5. Critical thought (with G.N. Devy) 1988
6. Creative Aspects of English, 1994
7. Contemporary Indian Short Stories, Series iv, Sahitya Academi, New Delhi, 1996

ಭಾಷಾಂತರಗಳು

೧. ಮೀ : ಹರಿನಾರಾಯಣ ಅಪ್ಟೆ (ಮರಾಠಿಯಿಂದ)
೨. ಪ್ರೇಮಚಂದ್ (ಹಿಂದಿಯಿಂದ)
೩. ರಥಚಕ್ರ : ಶ್ರೀ ನಾ.ಪೇಂಡ್ಸೆ (ಮರಾಠಿಯಿಂದ)
೪. ಅವಸ್ಥೆ (ಕಾದಂಬರಿ) : ಯು.ಆರ್. ಅನಂತಮೂರ್ತಿ (ಇಂಗ್ಲೀಷಿಗೆ)
೫. ಕ್ರಾಂತಿ ಬಂತು ಕ್ರಾಂತಿ (ನಾಟಕ) : ಪಿ. ಲಂಕೇಶ (ಇಂಗ್ಲೀಷಿಗೆ) (Here comes revolution)

೩. ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಕುರಿತ ಅಧ್ಯಯನ ಗ್ರಂಥಗಳು

೧. ಅಮೂರ ಜಿ.ಎಸ್., ೨೦೦೦, ಶಾಂತಿನಾಥ ದೇಸಾಯಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೨. ಗಂಗಾನಾಯಕ ಕೆ.ಎನ್., ೨೦೦೧, ಶಾಂತಿನಾಥ ದೇಸಾಯಿಯವರ ಸಾಹಿತ್ಯ ಒಂದು ಅಧ್ಯಯನ, ಬೂದಗುಪ್ಪೆ ಪ್ರಕಾಶನ, ಚಿಕ್ಕಮಗಳೂರು.

೩. ಪ್ರಹ್ಲಾದ ಡಿ.ವಿ. (ಸಂ) ೨೦೦೧, ಮುಕ್ತಚಂದ, ಸಂಚಯ ಪ್ರಕಾಶನ, ಬೆಂಗಳೂರು

೪. ಪ್ರೀತಿ ಶುಭಚಂದ್ರ, ೨೦೦೬, ಶಾಂತಿನಾಥ ದೇಸಾಯಿ, ಪ್ರಧಾನಗುರುದತ್ತ, (ಸಂ) ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫. ರಾಮಚಂದ್ರ ದೇವ, (ಸಂ) ೨೦೧೦, ಶಾಂತಿನಾಥ ದೇಸಾಯಿ ವಾಚಿಕೆ, ನುಡಿ ಪುಸ್ತಕ ಪ್ರಕಾಶನ, ಬೆಂಗಳೂರು.

೬ ರೇಖಾ ಈ.ಜಿ., ೨೦೧೨, ಶಾಂತಿನಾಥ ದೇಸಾಯಿ ಅವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ

೪. ಶಾಂತಿನಾಥ ದೇಸಾಯಿ ಅವರ ಸಾಹಿತ್ಯ ಅಧ್ಯಯನ ಕುರಿತ ಲೇಖನಗಳು

೧. ಅಶೋಕ. ಟಿ.ಪಿ, ೧೯೮೬, ಶಾಂತಿನಾಥ ದೇಸಾಯಿಯವರ ಬೀಜ, ಸಾಹಿತ್ಯ ಸಂಪರ್ಕ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೨. ಅಶೋಕ ಟಿ.ಪಿ, ೧೯೯೧, ಶಾಂತಿನಾಥ ದೇಸಾಯಿ ಅವರ ಕಥೆಗಳು: ಕೆಲವು ವಿಮರ್ಶಾತ್ಮಕ ಟಿಪ್ಪಣಿಗಳು, ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೩. ಅರವಿಂದ ನಾಡಕರ್ಣಿ, ೧೯೮೪, 'ಸೃಷ್ಟಿ' : ನಾನು ಕಂಡಂತೆ, ಆಹತ, ಅನನ್ಯ ಪ್ರಕಾಶನ, ಧಾರವಾಡ.

೪. ಅವಧಾನಿ ಜಿ.ಎಸ್., ೧೯೯೦, ದೇಸಾಯಿ–ಚಿತ್ತಾಲ : ಒಂದು ಅನುಸಂಧಾನ, ಪರಸ್ಪರ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ.

೫. ಆಮೂರ ಜಿ.ಎಸ್., ೧೯೭೧, ಶಾಂತಿನಾಥ ದೇಸಾಯಿ ಅವರ ಕಥೆಗಳು, ಸಮಕಾಲೀನ ಕಥೆ–ಕಾದಂಬರಿ: ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬ ಆಮೂರ ಜಿ.ಎಸ್., ೧೯೭೪, ಮುಕ್ತಿಯಲ್ಲಿ ವೈಯಕ್ತಿಕ ದರ್ಶನ, ಸಮಕಾಲೀನ ಕಥೆ–ಕಾದಂಬರಿ: ಹೊಸ ಪ್ರಯೋಗಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭ ಆಮೂರ ಜಿ.ಎಸ್., ೧೯೯೪, ಶಾಂತಿನಾಥ ದೇಸಾಯಿ ಅವರ ಕಾದಂಬರಿಗಳಲ್ಲಿ ಅಸ್ತಿತ್ವವಾದದ ಇತಿಮಿತಿಗಳು, ಕನ್ನಡ ಕಥನ ಸಾಹಿತ್ಯ: ಕಾದಂಬರಿ, ಶ್ರೀ ಹರಿ ಪ್ರಕಾಶನ, ಧಾರವಾಡ.

೮. ಆಮೂರ ಜಿ.ಎಸ್., ೨೦೦೩, ಶಾಂತಿನಾಥ ದೇಸಾಯಿ, ಕನ್ನಡ ಕಥನ ಸಾಹಿತ್ಯ: ಸಣ್ಣ ಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೯. ಆರ್ಕೆ ಮಣಿಪಾಲ, ಶಾಂತಿನಾಥ ದೇಸಾಯಿ ಅವರ ವಿಮರ್ಶೆ, ಸಂಕ್ರಮಣ, ಸಂ. ನೀಲಾಪಾಟೀಲ ಸಂಪುಟ ೨೭, ಸಂಚಿಕೆ ೮, ೧೯೯೨, ಸಂಕ್ರಮಣ ಪ್ರಕಾಶನ, ಧಾರವಾಡ.

೧೦. ನಾಗರಾಜ ಕ.ನಂ., 'ಮುಕ್ತಿ', ಅಲೋಕ, ಮೇ ೧೯೭೯.

೧೧. ಪ್ರಹ್ಲಾದ್ ಅಗಸನಕಟ್ಟೆ, ೨೦೦೪, ಶಾಂತಿನಾಥ ದೇಸಾಯಿಯವರ ಕಥೆ 'ಕ್ಷಿತಿಜ', ಅಭಿಮತ, ಸಿವಿಜಿ ಪ್ರಕಾಶನ, ಬೆಂಗಳೂರು.

೧೨. ಬಸವರಾಜ ಸಬರದ, ೧೯೯೪, ದೇಸಾಯಿಯವರ ನವ್ಯ ಸಾಹಿತ್ಯ ದರ್ಶನ, ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ, ಗುಲ್ಬರ್ಗ

೧೩. ಬಸವರಾಜ ಸಬರದ, ೧೯೯೪, ದೇಸಾಯಿಯವರ 'ಮುಕ್ತಿ' ಕಾದಂಬರಿಯಲ್ಲಿ ಬದುಕಿನ ಹೋರಾಟ, ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ.

೧೪. ಬಸವರಾಜ ಸಬರದ, ೧೯೯೪, ದೇಸಾಯಿಯವರ ಕೂರ್ಮಾವತಾರ, ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ.

೧೫. ಬಿ.ಕೆ.ಎಸ್., ಶಾಂತಿನಾಥ ದೇಸಾಯಿ ಅವರ 'ಸಂಬಂಧ' ಮತ್ತು 'ಬೀಜ', ಸಂಕ್ರಮಣ (ಸಂ) ಚಂಪಾ, ಸಂಪುಟ ೨೫, ಸಂಚಿಕೆ ೬, ೧೯೯೦, ಸಂಕ್ರಮಣ ಪ್ರಕಾಶನ, ಧಾರವಾಡ.

೧೬. ಮಾರುತಿ ಶಾನಭಾಗ, ಮುಕ್ತಿ–ಟಿಪ್ಪಣಿ–ಯಶವಂತ ಚಿತ್ತಾಲ, ಸಂಕ್ರಮಣ (ಸಂ) ಚಂಪಾ, ಸಂಪುಟ ೨, ಸಂಚಿಕೆ ೮, ೧೯೬೫, ಸಂಕ್ರಮಣ ಪ್ರಕಾಶನ, ಧಾರವಾಡ.

೧೭. ಮಾರುತಿ ಶಾನಭಾಗ, ಶಾಂತಿನಾಥ ದೇಸಾಯಿಯವರ 'ವಿಕ್ಷೇಪ' ಒಂದು ಸಮೀಕ್ಷೆ, ಸಂಕ್ರಮಣ (ಸಂ) ಚಂಪಾ, ಸಂಚಿಕೆ ೪೭, ೧೯೭೨, ಸಂಕ್ರಮಣ ಪ್ರಕಾಶನ, ಧಾರವಾಡ

೧೮. ರವಿ ಉಪಾಧ್ಯ, ೨೦೦೦, ಶಾಂತಿನಾಥ ದೇಸಾಯಿಯವರ ಓಂ ಣಮೋ, ಅಪೂರ್ವ ವಿನ್ಯಾಸ, ಸ್ನೇಹ ಪ್ರಕಾಶನ, ಬೆಳಗಾವಿ.

೧೯. ರಾಜೇಂದ್ರ ಚನ್ನಿ, ೨೦೦೪, ದೇಸಾಯಿಯವರ ಕಾದಂಬರಿಗಳ ಮುಖ್ಯ ಕಾಳಜಿಗಳು, ನಡುಹಗಲಿನಲ್ಲಿ ಕಂದೀಲುಗಳು, ಲೋಹಿಯಾ ಪ್ರಕಾಶನ, ಬಳ್ಳಾರಿ.

೨೦. ರಾಮಚಂದ್ರನ್ ಸಿ. ಎನ್., ೧೯೮೬, ಸ್ವಾಭಿಮುಖ ಸಾಹಿತ್ಯ: ಮುದ್ದಣನ ರಾಮಾಶ್ವಮೇಧ ಮತ್ತು ಶಾಂತಿನಾಥ ದೇಸಾಯರ 'ಸೃಷ್ಟಿ': ಒಂದು ವ್ಯಾಖ್ಯಾನ, ಶಿಲ್ಪ ವಿನ್ಯಾಸ, ಕನ್ನಡ ಸಂಘ, ಪುತ್ತೂರು, ದಕ್ಷಿಣ ಕನ್ನಡ.

೨೧. ವ್ಯಾಸ ದೇಶಪಾಂಡೆ, 'ಮುಕ್ತಿ', ಭಾವನಾ, ಸೆಪ್ಟೆಂಬರ್ ೨೦೦೦, ಗರಿ ಅಂಕಣ.

೨೨. ಸುಮತೀಂದ್ರ ನಾಡಿಗ, ವಿಕ್ಷಿಪ್ತ ಮನಸ್ಸಿನ ಅಶಾಂತ ಅಲೆಮಾರಿ (ಸಂದರ್ಶನ) ಕನ್ನಡ ಪ್ರಭ, ಏಪ್ರಿಲ್ ೫, ೧೯೯೮

೨೩. ಸುರೇಶ್ ನಾಗಲಮಡಿಕೆ ಎನ್., ಶಾಂತಿನಾಥರ ಪಾತ್ರಗಳ ಪಯಣ ಪ್ರಕ್ಷುಬ್ಧತೆಯಿಂದ ಮಾಗುವಿಕೆಯಡೆಗೆ, ಹೊಸತು, ಸಂಪಾದಕ ಜಿ. ರಾಮಕೃಷ್ಣ, ನವೆಂಬರ್ ೨೦೦೬, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫. ಪರಾಮರ್ಶನ ಗ್ರಂಥಗಳು

೧. ಅನಂತಮೂರ್ತಿ ಯು.ಆರ್., ೧೯೯೭, ನವ್ಯಾಲೋಕ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೨. ಅನಂತಮೂರ್ತಿ ಯು.ಆರ್., ೧೯೭೧, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೩. ಅನಂತಮೂರ್ತಿ ಯು.ಆರ್., ೧೯೮೦, ಸಮಕ್ಷಮ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೪. ಅಶೋಕ ಟಿ.ಪಿ., ೧೯೯೧, ಸಾಹಿತ್ಯ ಸಂದರ್ಭ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೫. ಆಮೂರ ಜಿ.ಎಸ್., ೨೦೦೩, ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೬. ಆಮೂರ ಜಿ.ಎಸ್., ೧೯೯೪, ಕನ್ನಡ ಕಥನ ಸಾಹಿತ್ಯ : ಕಾದಂಬರಿ, ಶ್ರೀ ಹರಿ ಪ್ರಕಾಶನ, ಧಾರವಾಡ.

೭. ಆಮೂರ ಜಿ.ಎಸ್., ೧೯೮೩, ಕನ್ನಡ ಕಾದಂಬರಿಯ ಬೆಳವಣಿಗೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೮. ಆಮೂರ ಜಿ.ಎಸ್., ೧೯೯೫, ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೯. ಆಮೂರ ಜಿ.ಎಸ್., ೧೯೯೮, ಅರ್ಥ ಲೋಕ, ಸ್ನೇಹ ಪ್ರಕಾಶನ, ಬೆಂಗಳೂರು.

೧೦. ಆಮೂರ ಜಿ.ಎಸ್ ೧೯೮೯, ಕನ್ನಡ ಕಾದಂಬರಿ ನಡೆದು ಬಂದ ರೀತಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧. ಕರೀಗೌಡ ಬೀಚನಹಳ್ಳಿ, ೧೯೯೯, ೨೦೦೭, ವ್ಯಷ್ಟಿ ಸಮಷ್ಟಿ, ಅಜಂತ ಪ್ರಕಾಶನ, ಬೆಂಗಳೂರು.

೧೨. ಕರೀಗೌಡ ಬೀಚನಹಳ್ಳಿ ೨೦೦೩, ೨೦೧೧, ಶತಮಾನದ ಸಣ್ಣ ಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೩. ಕರೀಗೌಡ ಬೀಚನಹಳ್ಳಿ, ೨೦೦೦, ೨೦೧೦, ಸಂಕಥನ, ಅಜಂತ ಪ್ರಕಾಶನ, ಬೆಂಗಳೂರು.

೧೪. ಕರೀಗೌಡ ಬೀಚನಹಳ್ಳಿ, ೨೦೧೧, ಪರಿಶ್ರಮ, ಅಜಂತ ಪ್ರಕಾಶನ, ಬೆಂಗಳೂರು.

೧೫. ಕುರ್ತಕೋಟಿ ಕೀರ್ತಿನಾಥ, ೧೯೮೩, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೬. ಕೃಷ್ಣಮೂರ್ತಿ ಎಂ.ಜಿ., ೧೯೯೪, ಕೃತಿ ಸಂಸ್ಕೃತಿ, ಋಜುವಾತು ಪ್ರಕಾಶನ, ಮೈಸೂರು.

೧೭. ಕೋದಂಡರಾಮ ಎನ್.ಕೆ., ೧೯೯೬, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯಿತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು.

೧೮. ಗಿರಡ್ಡಿ ಗೋವಿಂದರಾಜ, ೧೯೭೬, ಕನ್ನಡ ಕಾದಂಬರಿಯಲ್ಲಿ ನವ್ಯತೆ, ಸ್ನೇಹ ಪ್ರಕಾಶನ, ಬೆಂಗಳೂರು.

೧೯. ಗಿರಡ್ಡಿ ಗೋವಿಂದರಾಜ, ೧೯೭೮, ಸಣ್ಣಕಥೆಯ ಹೊಸ ಒಲವುಗಳು, ಸಾಹಿತ್ಯ ಭಂಡಾರ. ಹುಬ್ಬಳ್ಳಿ.

೨೦. ಗಿರಡ್ಡಿ ಗೋವಿಂದರಾಜ, ೧೯೯೨, ಸಾತತ್ಯ, ಸ್ನೇಹ ಪ್ರಕಾಶನ, ಬೆಂಗಳೂರು.

೨೧. ಗಿರಡ್ಡಿ ಗೋವಿಂದರಾಜ, ೨೦೦೭, ಪ್ರಮಾಣು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಗಿರಡ್ಡಿ ಗೋವಿಂದರಾಜ, ೧೯೭೫, ನವ್ಯ ವಿಮರ್ಶೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೨೩. ಗಿರಡ್ಡಿ ಗೋವಿಂದರಾಜ, ೧೯೮೭, ಕಾದಂಬರಿ: ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ಬೆಂಗಳೂರು.

೨೪. ಗಿರಡ್ಡಿ ಗೋವಿಂದರಾಜ, ೨೦೦೧, ಸಮಗ್ರ ವಿಮರ್ಶೆ, ಸಪ್ನ ಬುಕ್ ಹೌಸ್, ಬೆಂಗಳೂರು.

೨೫. ಗೋಕಾಕ್ ವಿ.ಕೃ., ೧೯೭೫, ನವ್ಯತೆ, ಸುರುಚಿ ಪ್ರಕಾಶನ, ಬೆಂಗಳೂರು.

೨೬. ತಾರಕೇಶ್ವರ ಬಿ.ವಿ., ೨೦೦೬, ವಸಾಹತುಶಾಹಿ ಮತ್ತು ಭಾಷಾಂತರ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
೨೭. ತಿರುಮಲೇಶ ಕೆ.ವಿ., ೧೯೮೯, ಅಸ್ತಿತ್ವವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
೨೮. ನಟರಾಜ್ ಹುಳಿಯಾರ್, ೨೦೦೪, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೯. ನರಹಳ್ಳಿ ಬಾಲಸುಬ್ರಹ್ಮಣ್ಯ, ೧೯೯೦, ನವ್ಯತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೩೦. ನಾಗಭೂಷಣ ಸ್ವಾಮಿ ಓ.ಎಲ್., ೧೯೯೮, ಪ್ರಜ್ಞಾ ಪ್ರವಾಹ ತಂತ್ರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
೩೧. ನಾಗರಾಜ ಡಿ.ಆರ್., ೧೯೯೦, ಅಮೃತ ಮತ್ತು ಗರುಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೩೨. ನಾಗರಾಜ ಡಿ.ಆರ್., ೧೯೮೭, ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
೩೩. ನಾಗರಾಜ ಡಿ.ಆರ್., ೧೯೯೬, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
೩೪. ನಾಗರಾಜ ಡಿ.ಆರ್., ೨೦೦೨, ಸಂಸ್ಕೃತಿ ಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೩೫. ನಾಯಕ ಜಿ.ಹೆಚ್., ೧೯೮೦, ಅನಿವಾರ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
೩೬. ನಾಯಕ ಜಿ.ಹೆಚ್., ೧೯೮೮, ನಿಜದನಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
೩೭ ನಾಯಕ ಜಿ.ಹೆಚ್., ೧೯೮೪, ನಿರಪೇಕ್ಷ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
೩೮. ಪ್ರಭುಶಂಕರ, ೧೯೭೫, ಸಾಹಿತ್ಯ ಮತ್ತು ಆಧುನಿಕತೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
೩೯. ಪ್ರೀತಿ ಶುಭಚಂದ್ರ, ೨೦೦೨, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೪೦. ಬರಗೂರು ರಾಮಚಂದ್ರಪ್ಪ, ೨೦೦೧, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು.
೪೧. ಬುದ್ದಣ್ಣ ಹಿಂಗಮಿರೆ, ೧೯೮೭, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೪೨. ಮೀರಾ ಎಲ್.ಜಿ., ೨೦೦೪, ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು.
೪೩. ರಹಮತ್ ತರೀಕೆರೆ, ೨೦೦೬, ಕತ್ತಿಯಂಚಿನ ದಾರಿ, ಅಭಿನವ ಪ್ರಕಾಶನ, ಬೆಂಗಳೂರು
೪೪. ರಾಘವೇಂದ್ರರಾವ್ .ಎಚ್. ಎಸ್., (ಸಂ), ೨೦೦೧, ಶತಮಾನದ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
೪೫. ರಾಘವೇಂದ್ರರಾವ್ ಎಚ್.ಎಸ್.,೧೯೯೫, ಹಾಡೆ ಹಾದಿಯ ತೋರಿತು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
೪೬. ರಾಮಚಂದ್ರನ್ ಸಿ.ಎನ್., ೨೦೦೨, ವಸಾಹತೋತ್ತರ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೪೭. ರಾಮಚಂದ್ರನ್ ಸಿ.ಎನ್., ೨೦೦೨, ಪರಂಪರೆ ಪ್ರತಿರೋಧ, ಸಂವಾದ, ಮಲ್ಲಾಡಿಹಳ್ಳಿ.
೪೮. ರಾಮಚಂದ್ರನ್ ಸಿ.ಎನ್., ೨೦೦೪, ಸಂಕಥನಗಳು, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು.
೪೯. ರಾಮಚಂದ್ರನ್ ಸಿ.ಎನ್., ೨೦೦೬, ಬಯಲು–ರೂಪ, ಸಂಪುಟ ೨, ಸಪ್ನ ಬುಕ್‌ಹೌಸ್, ಬೆಂಗಳೂರು.
೫೦. ವಿಜಯಶ್ರೀ ಕೆ., ೨೦೦೨, ಕನ್ನಡ ನವ್ಯ ಕಾದಂಬರಿಗಳು, ರಾಮಕೃಷ್ಣ ಪ್ರಕಾಶನ, ಬೆಂಗಳೂರು.
೫೧. ವಿವಿಧ ಲೇಖಕರು, ೨೦೦೬, ಕನ್ನಡ ಸಾಹಿತ್ಯ ಮತ್ತು ಸ್ತ್ರೀ ವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೫೨. ವಿವೇಕ ರೈ ಬಿ.ಎ., ೧೯೮೭, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೫೩. ಶಿವರಾಮ ಪಡಿಕ್ಕಲ್, ೨೦೦೧, ನಾಡು–ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೫೪. ಶಿವರುದ್ರಪ್ಪ ಜಿ.ಎಸ್., (ಸಂ), ೧೯೯೦, ಕನ್ನಡ ಸಾಹಿತ್ಯ ಸಂದರ್ಭ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೫. ಶ್ರೀನಿವಾಸ ಹಾವನೂರ, ೨೦೦೦, ಹೊಸಗನ್ನಡ ಅರುಣೋದಯ, ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫೬. ಶ್ರೀಮತಿ ಹೆಚ್.ಎಸ್, ೨೦೦೪, ಸ್ತ್ರೀವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭. ಶೇಷಗಿರಿರಾವ್ ಎಲ್.ಎಸ್., ೧೯೯೦, ಕನ್ನಡ ಸಾಹಿತ್ಯ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೮. ಶೇಷಗಿರಿರಾವ್ ಎಲ್.ಎಸ್., ೨೦೦೬, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೫೯. ಸಿಮೋನ್ ದ ಬೋವಾ, ೨೦೦೭, ದ ಸೆಕೆಂಡ್ ಸೆಕ್ಸ್, ಶ್ರೀಮತಿ ಹೆಚ್.ಎಸ್., (ಅನು), ಅಧ್ಯಯನ ಮಂಡಲ, ಬೆಂಗಳೂರು.

೬೦. ಸುಬ್ರಹ್ಮಣ್ಯಂ ಟಿ., ೨೦೧೧, ಅಸ್ತಿತ್ವವಾದ ಮತ್ತು ಕನ್ನಡ ನವ್ಯ ಸಾಹಿತ್ಯ, ಚೈತ್ರ ಪಲ್ಲವಿ ಪ್ರಕಾಶನ, ಮೈಸೂರು.

೬೧. ಸುಮಿತ್ರಾಬಾಯಿ ಬಿ.ಎನ್., ೨೦೦೦, ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ಹೆಗಡೆ ಜಿ.ಎಂ., ೨೦೧೦, ವಿಮರ್ಶಾ ವಿವೇಕ, ರಂಜನಾ ಪ್ರಕಾಶನ, ಧಾರವಾಡ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ

ವಿಸ್ತರಣಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ)

ಹಿರೇಕೊಡಿಗೆ ಅಂಚೆ – ೫೭೭ ೧೨೬

ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ